ವಿಜಯನಗರ ಅಧ್ಯಯನ

ಸಂಪುಟ - ೯



ವಿಜಯನಗರ ವಿಚಾರ ಸಂಕಿರಣ ೨೦೦೩ ರಲ್ಲಿ
ಮಂಡಿಸಿದ ಪ್ರಬಂಧಗಳು

ಸಂಪಾದಕರು
ಕೆ.ಆರ್. ರಾಮಕೃಷ್ಣ
ಡಾ. ಆರ್. ಗೋಪಾಲ್
ಟಿ.ಎಸ್. ಗಂಗಾಧರ

ವಿಜಯನಗರ ಅಧ್ಯಯನ

ಸಂಪುಟ - ೯

ಹಂಪಿ ಉತ್ಸವ ೨೦೦೩ರಲ್ಲಿ ಮಂಡಿಸಿದ ಪ್ರಬಂಧಗಳು

ವಿಜಯನಗರ ಅಧ್ಯಯನ

ಸಂಪುಟ - ೯

ಹಂಪಿ ಉತ್ಸವ ೨೦೦೩ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಕೆ.ಆರ್.ರಾಮಕೃಷ್ಣ

ಡಾ. ಆರ್.ಗೋಪಾಲ್

ಟಿ.ಎಸ್.ಗಂಗಾಧರ

ಸಹಾಯ

ಡಾ. ಟಿ.ಎಂ.ಮಂಜುನಾಥಯ್ಯ

ಕರ್ನಾಟಕ ಸರ್ಕಾರ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಹೊಸಪೇಟೆ

VIJAYANAGARA ADHYAYANA
Vol - 9

Publisher
Director
Directorate of Archaeology and Museums
Hospet - 583 201
Ph: 08394 - 230372

First Print : 2004
Pages : xx + 340

Price: Rs. 120-00

DTP
Rachana Graphics, Hospet
Cell: 9448217600, 9448580060

Printed at

Ramya Udyama, Mysore - 570 004

ವಿಜಯನಗರ ಅಧ್ಯಯನ
ಸಂಪುಟ - ೯

ಪ್ರಕಾಶಕರು
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಹೊಸಪೇಟೆ - ೫೮೩ ೨೦೧
ದೂರವಾಣಿ : ೦೮೩೯೪ - ೨೩೦೩೭೨

ಮೊದಲ ಮುದ್ರಣ : ೨೦೦೪
ಪುಟಗಳು : ೨೦ + ೩೪೦

ಬೆಲೆ : ರೂ. ೧೨೦-೦೦

ಅಕ್ಷರ ಜೋಡಣೆ
ರಚನಾ ಗ್ರಾಫಿಕ್ಸ್, ಹೊಸಪೇಟೆ
ಸೆಲ್ : ೯೪೪೮೨೧೭೬೦೦, ೯೪೪೮೫೮೦೦೬೦

ಮುದ್ರಣ
ರಮ್ಯ ಉದ್ಯಮ, ಮೈಸೂರು - 570 004

ಪ್ರಸ್ತಾವನೆ

ವಿಜಯನಗರ ಸಾಮ್ರಾಜ್ಯವು ಭಾರತೀಯ ಸಂಸ್ಕೃತಿಗೆ ನೀಡಿರುವ ಕೊಡುಗೆ ಅಮೂಲ್ಯವಾದುದು. ದಕ್ಷಿಣ ಭಾರತಾದ್ಯಂತ ಹಬ್ಬಿದ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪೆ-ವಿಜಯನಗರ ಪಟ್ಟಣವು 14ನೇ ಶತಮಾನದಿಂದ 16ನೇ ಶತಮಾನದವರೆಗೆ ಪ್ರಮುಖವಾದ ಸಾಂಸ್ಕೃತಿಕ ಕೇಂದ್ರವಾಗಿ ವಿಜೃಂಭಿಸಿತು. ಇಂತಹ ಸಾಮ್ರಾಜ್ಯವು ವಿಜಯನಗರ ಪಟ್ಟಣದ ಪತನಾನಂತರ ಹಾಳು ಹಂಪೆಯಾಗಿ ಉಳಿದಿದೆ. ವಿಜಯನಗರದ ಅವಶೇಷಗಳು ವಿಶ್ವದ ಪರಂಪರೆ ಪಟ್ಟಿಯಲ್ಲಿ ಸ್ಥಾನವನ್ನು ಪಡೆದಿವೆ. ಇಲ್ಲಿನ ಗತ ವೈಭವವನ್ನು ಪುನರುಜ್ಜೀವನಗೊಳಿಸಲು ಕರ್ನಾಟಕ ಸರ್ಕಾರವು ಸುಮಾರು 25 ವರ್ಷಗಳಿಂದ ಹಂಪೆ ಪುನರುತ್ಥಾನ ಯೋಜನೆಯಡಿಯಲ್ಲಿ ವ್ಯಾಪಕವಾದ ಸಂಶೋಧನೆ, ಉತ್ಖನನ ಮತ್ತು ಸ್ಮಾರಕಗಳ ಸಂರಕ್ಷಣಾ ಕಾರ್ಯವನ್ನು ನಡೆಸಿಕೊಂಡು ಬರುತ್ತಿದ್ದು, ಫಲಿತಾಂಶವನ್ನು ಸಂಶೋಧನಾ ಗ್ರಂಥಗಳ ರೂಪದಲ್ಲಿ ಪ್ರಕಟಿಸುತ್ತಿದೆ.

ವಿಜಯನಗರದ ನವರಾತ್ರಿ ಮಹೋತ್ಸವವು ದೇಶ ವಿದೇಶಿಯರನ್ನು ಆಕರ್ಷಿಸುತ್ತಿತ್ತು. ಈ ಉನ್ನತ ಪರಂಪರೆಯನ್ನು ನಾಡಿನ ಜನತೆಯ ನೆನಪಿಗೆ ತರಲು ಕರ್ನಾಟಕ ಸರ್ಕಾರವು ಪ್ರತಿ ವರ್ಷ ನವೆಂಬರ್ ಮಾಹೆಯಲ್ಲಿ ಹಂಪಿ ಉತ್ಸವವನ್ನು ಆಚರಿಸಿಕೊಂಡು ಬರುತ್ತಿದೆ. ಈ ಉತ್ಸವದ ಸಂದರ್ಭದಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯವು 'ವಿಜಯನಗರ ಇತಿಹಾಸ ಮತ್ತು ಸಂಸ್ಕೃತಿ' ಕುರಿತ ವಿಚಾರ ಸಂಕಿರಣವನ್ನು ಏರ್ಪಡಿಸುತ್ತಿದ್ದು, ಮಂಡಿಸಲಾದ ಪ್ರಬಂಧಗಳನ್ನು 'ವಿಜಯನಗರ ಅಧ್ಯಯನ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟವು ಇತಿಹಾಸಕಾರರಿಗೆ ಮತ್ತು ಸಂಶೋಧಕರಿಗೆ ಮಾತ್ರವಲ್ಲದೆ ಜನಸಾಮಾನ್ಯರಿಗೂ ಸಹ ಉಪಯುಕ್ತವಾಗುತ್ತಿದೆ.

2003 ರ ನವೆಂಬರ್ ಮಾಹೆಯ 4 ರಂದು ಹಂಪಿ ಉತ್ಸವದ ಸಂದರ್ಭದಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ದೇಶನಾಲಯವು ಏರ್ಪಡಿಸಿದ್ದ ವಿಚಾರ ಸಂಕಿರಣವನ್ನು ಗೌರವಾನ್ವಿತ ವಿಶ್ರಾಂತ ರಾಜ್ಯಪಾಲರಾದ ಶ್ರೀಮತಿ ವಿ. ಎಸ್. ರಮಾದೇವಿಯವರು ಉದ್ಘಾಟಿಸಿ, ಸಂಶೋಧನಾ ಗ್ರಂಥಗಳನ್ನು ಬಿಡುಗಡೆ ಮಾಡಿದರು. ಈ ಸಮಾರಂಭಕ್ಕೆ ಕರ್ನಾಟಕ ಸರ್ಕಾರದ ಅಂದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವೆಯವರಾದ ಶ್ರೀಮತಿ ರಾಣಿ ಸತೀಶ್‌ರವರು ಬಂದು ಪ್ರೋತ್ಸಾಹಿಸಿ ಅಗತ್ಯವಾದ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡಿದ್ದರು. ಅವರಿಗೆ ಇಲಾಖೆಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಷಾ ಗಣೇಶ, ಭಾ. ಆ. ಸೇ., ಇವರು ಇಲಾಖೆಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡಿರುತ್ತಾರೆ. ಇವರಿಗೂ ಸಹ ನನ್ನ ಹೃತ್ಪೂರ್ವಕ ಧನ್ಯವಾದಗಳು.

ವಿಚಾರ ಸಂಕಿರಣವನ್ನು ಏರ್ಪಡಿಸಲು ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಮನಸಾರೆ ಶ್ರಮಿಸಿ, ವಿಚಾರ ಸಂಕಿರಣವನ್ನು ಯಶಸ್ವಿಯಾಗಲು ನೆರವಾಗಿರುವರು. ಇವರೆಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಿಚ್ಛಿಸುತ್ತೇನೆ.

ಕೆ. ಆರ್. ರಾಮಕೃಷ್ಣ

ನಿರ್ದೇಶಕರು

ವಿಜಯನಗರ ಇತಿಹಾಸ - ಸಂಸ್ಕೃತಿ: ಕೆಳಸ್ತರದ ಚರಿತ್ರೆ ಬರವಣಿಗೆಯ ದೃಷ್ಟಿಯಿಂದ

(ಸಮ್ಮೇಳನಾಧ್ಯಕ್ಷ ಭಾಷಣ)

ಪ್ರೊ. ಲಕ್ಷ್ಮಣ್ ತೆಲಗಾವಿ

ಭಾರತೀಯ ಸಂಸ್ಕೃತಿಯ ಪ್ರತಿಷ್ಠಿತ ಪ್ರತೀಕವೆಂದು ಘೋಷಿಸಲ್ಪಟ್ಟಂಥಾದ್ದು ವಿಜಯನಗರ ಸಾಮ್ರಾಜ್ಯ. ದಕ್ಷಿಣಭಾರತದ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿದ ಈ ಸಾಮ್ರಾಜ್ಯ, ಮಧ್ಯಕಾಲೀನ ರಾಜಕೀಯ ಹಾಗೂ ಸಾಂಸ್ಕೃತಿಕ ಸನ್ನಿವೇಶಗಳ ಪ್ರತಿನಿಧಿಯೆನಿಸಿ ಪ್ರಖ್ಯಾತಿ ಪಡೆದುದು ಐತಿಹಾಸಿಕ ಸತ್ಯ. ಭಾರತದಲ್ಲಿ ಹಿಂದೂ ಚಕ್ರಾಧಿಪತ್ಯ ಸ್ಥಾಪನೆಯ ಕಲ್ಪನೆ ಹಾಗೂ ಸಾಧ್ಯತೆಗಳನ್ನು ತಾತ್ವಿಕವಾಗಿ ಪ್ರಶ್ನಿಸುವ ಐರೋಪ್ಯ ವಿದ್ವಾಂಸರ ಪ್ರಯತ್ನ ಅವ್ಯಾಹತವಾಗಿ ನಡೆಯತೊಡಗಿದುದು ಒಂದೆಡೆಯಾದರೆ, ದಕ್ಷಿಣದ ಮಟ್ಟಿಗೆ, ಚೋಳರು ಮತ್ತು ಆ ನಂತರದ ವಿಜಯನಗರದವರನ್ನು ಸಾಮ್ರಾಟರೆಂತಲೇ ಎತ್ತಿ ಹೇಳುವ ದೇಸೀ ವಿದ್ವಾಂಸರ ಹಠದ ನಿಲುವು ಇನ್ನೊಂದೆಡೆ. ಇಂಥಾ ಚರ್ಚೆಗಳೇನೇ ಇದ್ದರೂ ಸಾಮ್ರಾಜ್ಯದ ನೆಲೆಯಲ್ಲಿ ವಿಜಯನಗರವನ್ನು ಗುರುತಿಸುವ ಪ್ರವೃತ್ತಿ ಮುಂದುವರೆದಿರುವುದು ವಾಸ್ತವ. ಭಾರತೀಯ ಸಂಸ್ಕೃತಿಯ ನೇತಾರರಂತೆ ವಿಜಯನಗರ ಅರಸರನ್ನು ಚಿತ್ರಿಸುವ ಪರಿಪಾಟ ಮುಂದುವರೆದಿರುವುದು ಈ ಕಾರಣಕ್ಕಾಗಿಯೇ.

ಪ್ರಸ್ತುತ ಎದುರಾಗುವ ಪ್ರಶ್ನೆಯೆಂದರೆ, ಭಾರತೀಯ ಸಂಸ್ಕೃತಿಯಾಂತರ್ಗತ ವಿಜಯನಗರ ಸಂಸ್ಕೃತಿಯ ಸ್ವರೂಪ ಯಾವ ತರಹದ್ದು ಎಂಬುದು. ಹಾಗೆಯೇ, ಅದು ನೀಡುವ ಸಂದೇಶವೇನು ಎಂಬುದನ್ನೂ ಗ್ರಹಿಸಬೇಕು. ರಾಜಕೀಯದಷ್ಟೇ ಸಾಂಸ್ಕೃತಿಕವಾಗಿ ಔನ್ನತ್ಯವನ್ನು ಸಾಧಿಸಿತೆನ್ನಲಾಗುವ ವಿಜಯನಗರದ ಪರಿಸ್ಥಿತಿ ವಾಸ್ತವದಲ್ಲಿ ಇದ್ದುದಾದರೂ ಹೇಗೆ? ಅಂದಿನ ಸಾಮಾಜಿಕ ಸಂದರ್ಭದಲ್ಲಿ ಆಡಳಿತಗಾರರು, ಅಧಿಕಾರಿವರ್ಗದವರು, ಶಿಷ್ಟವರ್ಗದವರು, ವಣಿಕರು ಹಾಗೂ ಇನ್ನು ಕೆಲವು ವರ್ಗದವರನ್ನು ಹೊರತುಪಡಿಸಿದರೂ ಉಳಿದ ಜನಸಮುದಾಯಗಳು ಯಾವ ಸ್ಥಿತಿಯಲ್ಲಿದ್ದವು? ವಿಜಯನಗರ ಸಂಸ್ಕೃತಿಯೆಂಬುದು ಇವರಲ್ಲಿ ಯಾವ ವರ್ಗದವರನ್ನು ಪ್ರತಿನಿಧಿಸುತ್ತಿದ್ದಿತು? - ಇಂಥಾ ಪ್ರಶ್ನೆಗಳಿಗೆ ಸಮರ್ಪಕ ಉತ್ತರದ ಅಗತ್ಯವಿದೆ. ಒಟ್ಟಾರೆ, ವಿಜಯನಗರ ಯಾವುದರ ಪ್ರತೀಕ?

ಈ ಕುರಿತ ಚರ್ಚೆಯನ್ನು ಡಾ.ಕೆ.ವಿ. ರಮೇಶ್ ಅವರ ಮಾತುಗಳನ್ನು ಇಲ್ಲಿ ಉಲ್ಲೇಖಿಸುವುದರ ಮೂಲಕ ಆರಂಭಿಸಲು ಬಯಸುತ್ತೇನೆ. ಅವರು ತಮ್ಮ ಉಪನ್ಯಾಸವೊಂದರಲ್ಲಿ[1]

ಹೇಳಿರುವುದು ಹೀಗೆ: ಬಂದಿರುವ ಐತಿಹಾಸಿಕ ಸ್ಮಾರಕಗಳ, ಶಾಸನಗಳ ಆಧಾರದ ಮೇಲೆ ಹೇಳುವುದಾದರೆ, ವಿಜಯನಗರ ಯುಗವು ಕನ್ನಡಿಗನ ಇತಿಹಾಸದ ವೈಪರೀತ್ಯಗಳ, ವಿರೋಧಾಭಾಸದ ಯುಗವಿತ್ತೆನ್ನಬಹುದು. ಆ ಯುಗದ ಕನ್ನಡಿಗನ ಐತಿಹಾಸಿಕ ಸ್ಮಾರಕಗಳು ಮಹತ್ವದ, ಬೃಹತ್ವದ, ಆಡಂಬರದ ರಚನೆಗಳೇನೋ ಹೌದು. ಅವನ ಕಾಲದ ಶಾಸನಗಳ ಸಂಖ್ಯೆಯೂ ಅವುಗಳಿಂದ ತಿಳಿದುಬರುವ ವಿಷಯಗಳೂ ಹಿಂದೆಂದಿಗಿಂತಲೂ ಹೆಚ್ಚಿನ ವೇನೋ ಹೌದು. ಆದರೂ ಅವುಗಳಲ್ಲಿ ಕಾಣಲು ಸುಂದರವಾದ, ಒಪ್ಪವಾದ, ಓದಲು ಸ್ಪಷ್ಟವಾದ ವ್ಯಾಕರಣಬದ್ಧವಾದ ಶಾಸನಗಳ ಸಂಖ್ಯೆ ತೀರಾ ಕಡಿಮೆ. ಕರ್ನಾಟಕದಲ್ಲಿ ಶತಮಾನಗಳು ಉರುಳಿದಂತೆ ಬರೇ ಇಳಿಮುಖವಾಗಿ ಮಾತ್ರ ಬಂದಿದ್ದ ಕನ್ನಡ ಕಾವೇರಿಯು ವಿಜಯನಗರಕಾಲದ ಕನ್ನಡಿಗನೆದುರು ಹಠಾತ್ತನೆ ಬತ್ತಿಹೋದಂತೆ ನನಗೆ ಭಾಸವಾಗುತ್ತದೆ. ನಮಗಿಂದು ತಿಳಿದುಬಂದಿರುವ ಅವನ ನಡೆ-ನುಡಿಗಳಲ್ಲಿ, ಬರಹಗಳಲ್ಲಿ, ರಚನಾಕ್ರಮಗಳಲ್ಲಿ ಒಂದು ಬಗೆಯ ಅಸ್ತವ್ಯಸ್ತತೆ, ಕಲಬೆರಕೆ ಕಂಡುಬರುತ್ತದೆ. ವಿಜಯನಗರ ಯುಗವು ನಿಜಕ್ಕೂ ಇಂದಿನ ಕನ್ನಡಿಗನ ದಾರುಣ ಪರಿಸ್ಥಿತಿಯ ಉಪಕ್ರಮ ಕಾಲವಿದ್ದಿರಬಹುದು ಎಂಬುದು ನನ್ನ ಅನಿಸಿಕೆ."

ಕನ್ನಡಿಗ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳಲಾರಂಭಿಸಿದುದು ವಿಜಯನಗರ ಕಾಲದಿಂದಲೇ ಎಂಬುದು ಇಲ್ಲಿಯ ಆಶಯ. ಪ್ರಾಯಶಃ ನಮ್ಮ ಕರ್ನಾಟಕದ ವಿದ್ವಾಂಸರ ಪೈಕಿ ಡಾ.ರಮೇಶ್ ಅವರಂತೆ ವಿಶ್ಲೇಷಿಸಿರುವವರು ವಿರಳ. ಈಚೆಗೆ ಸಾಕಿ ಅವರು ಪ್ರಕಟಿಸಿದ 'ಮೇಕಿಂಗ್ ಹಿಸ್ಟರಿ' (ಸಂಪುಟ ೧:೧೯೯೮) ಗ್ರಂಥದಲ್ಲಿಯೂ ಇಂಥದೇ ವಿವೇಚನೆ ಕಂಡುಬರುತ್ತದೆ. ವಿಜಯನಗರ ಇತಿಹಾಸವನ್ನು ಭಿನ್ನ ನೆಲೆಯಲ್ಲಿ ವಿವರಿಸಬೇಕೆನ್ನುವುದು ಇಲ್ಲಿ ಪರಿಗಣಿಸಬೇಕಾದ ಅಂಶ. ಆದರೆ ಈವರೆಗೆ ಪ್ರಕಟಗೊಂಡಿರುವ ವಿಜಯನಗರ ಇತಿಹಾಸ-ಸಂಸ್ಕೃತಿ ಕುರಿತ ಗ್ರಂಥಗಳು-ಬರಹಗಳು-ಸಂಶೋಧನೆಗಳು ಅನುಸರಿಸಿದ ಜಾಡು ಯಾವುದು? ವಿಜಯನಗರದ ರಾಜಕೀಯ ಇತಿಹಾಸದೊಡನೆ ಕಲೆ, ಸಾಹಿತ್ಯ, ಧರ್ಮ, ವ್ಯಕ್ತಿಗಳು, ಸ್ಮಾರಕಗಳು ಇತ್ಯಾದಿ ಕುರಿತು ವಿಸ್ತಾರವಾಗಿ ಬರೆದಂಥವರು ದೇಶ - ವಿದೇಶಗಳ ಇತಿಹಾಸಕಾರರು, ಸಂಶೋಧಕರು, ಕಲಾತಜ್ಞರು, ಸಾಹಿತಿಗಳು ಮೊದಲಾದವರು. ಸಣ್ಣಪುಟ್ಟ ಲೇಖನಗಳನ್ನು ಪ್ರಕಟಿಸಿದವರ ಪಟ್ಟಿಯಂತೂ ತೀರಾ ದೊಡ್ಡದು. ಒಂದು ಮಾತಿನಲ್ಲಿ ಹೇಳುವುದಾದರೆ, ಎಲ್ಲ ದೇಶೀಯರು, ಎಲ್ಲ ಸಾಹಿತಿ -ಸಂಶೋಧಕರು ವಿಜಯನಗರ ಕುರಿತು ಬರೆದಿದ್ದರೆ, ಎಲ್ಲ ಭಾಷೆಯ ಪತ್ರಿಕೆ-ನಿಯತಕಾಲಿಕೆಗಳೂ ಇವರ ಬರಹಗಳನ್ನು ಪ್ರಕಟಿಸಿವೆ ಯೆಂದರೆ ಉತ್ಪ್ರೇಕ್ಷೆಯಲ್ಲ. ವಿಜಯನಗರ ಇತಿಹಾಸ-ಸಂಸ್ಕೃತಿ ಕುರಿತು ಹಲವಾರು ಶ್ರೀಮಂತ ಪ್ರಕಟಣೆಗಳು ಹೊರಬಿದ್ದಿದ್ದು, ಗಾಲಿಂಗ್ಸ್, ಫ್ರಿಟ್ಝ್ ಮತ್ತು ಮೈಕೆಲ್ ಅವರ 'ಸಿಟಿ ಆಫ್ ವಿಕ್ಟರಿ' (೧೯೯೧) ಅವುಗಳಲ್ಲೊಂದು. ಇಲ್ಲಿ ಮತ್ತೆ ಕೇಳಬೇಕಾದ ಪ್ರಶ್ನೆಯೆಂದರೆ, ಈ ಎಲ್ಲ ಪ್ರಕಟಣೆಗಳು ಒಳಗೊಂಡಿರುವ ಹುರುಳು (ಸ್ಟಫ್) ಎಂಥಾದ್ದು?

ಸಮಗ್ರವಾಗಿ ಅಲ್ಲದಿದ್ದರೂ ಎದುರಿಗಿರುವ ಪ್ರಮುಖ ಹಾಗೂ ಪ್ರತಿಷ್ಠಿತ ಅಸಂಖ್ಯ

ಪ್ರಕಟಿತ ಗ್ರಂಥಗಳನ್ನಷ್ಟೆ ತಿರುವಿಹಾಕಿದರೂ ಸಾಕು, ಮೇಲಿನ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು. ವಿಜಯನಗರ ಕಾಲೀನ ಸಮಾಜ - ಸಂಸ್ಕೃತಿ ಕುರಿತ ಗ್ರಂಥಗಳನ್ನೂ ಇಲ್ಲಿ ಪ್ರಧಾನವಾಗಿ ಲಕ್ಷಿಸಬಹುದು. ಸಮಕಾಲೀನ ಜನಸಾಮಾನ್ಯರನ್ನು ಹೊರತುಪಡಿಸಿ ಉಳಿದೆಲ್ಲರನ್ನೂ ಎಲ್ಲ ಅಂಶಗಳನ್ನೂ ಕುರಿತು ವಿವರವಾಗಿ ಹಾಗೂ ವಸ್ತುನಿಷ್ಠ(?)ವಾಗಿ ಅಧ್ಯಯನ ನಡೆಸಿರುವುದು ಗಮನಕ್ಕೆ ಬಾರದಿರದು. ಸಾಮ್ರಾಜ್ಯಶಾಹಿ ವ್ಯವಸ್ಥೆಯ ಹಾಗೂ ಅದು ನಿಯಂತ್ರಿಸಿದ ಸಾಮಾಜಿಕ-ಆರ್ಥಿಕ-ಧಾರ್ಮಿಕ ಚಟುವಟಿಕೆಗಳ ಚಿತ್ರಣ ವಿಜಯನಗರದ ಸಂದರ್ಭದಲ್ಲಿ ಸ್ಪಷ್ಟವಾಗಿ ಕಂಡುಬರುವಷ್ಟೆ ಅಸ್ಪಷ್ಟವಾಗಿ ಕಂಡುಬರುವಂಥಾದ್ದೆಂದರೆ ಜನಸಾಮಾನ್ಯರ ಚಿತ್ರಣ. ವಿಜಯನಗರದ ಸಾಂಸ್ಕೃತಿಕ ವೈಭವವನ್ನು ನಿರೂಪಿಸುವಲ್ಲಿ ನಮ್ಮ ಸಂಶೋಧಕರದು ದಣಿವಿಲ್ಲದ ದುಡಿಮೆ. ಆದರೆ ಜನಸಾಮಾನ್ಯರ ಚರಿತ್ರೆ ರಚನೆಗೆ ಸ್ವಲ್ಪವಾದರೂ ಶ್ರಮವನ್ನು ವಿನಿಯೋಗಿಸದಿರುವುದೊಂದು ಕೊರತೆ.

ಸ್ವಾತಂತ್ರ್ಯಪೂರ್ವ ಕಾಲದ ಪ್ರವೃತ್ತಿಯೆಂದರೆ, ಸಾಮ್ರಾಜ್ಯಶಾಹಿಪಂಥದ ಇತಿಹಾಸ ರಚನೆ. ಭಾರತೀಯರ ಸ್ವಾತಂತ್ರ್ಯದಾಹ ತೀವ್ರಗೊಳ್ಳುವ ಸನ್ನಿವೇಶದಲ್ಲಿ ರಾಷ್ಟ್ರೀಯವಾದಿ ಪಂಥ ರೂಪು ಪಡೆಯಿತು. ನಮ್ಮ ಇತಿಹಾಸ ಬರವಣಿಗೆಗಳಲ್ಲಿ ಇದರ ವಾಸನೆ ಇಂದಿಗೂ ಇರುವುದಾದರೂ ಈಗ ಇದು ದೇಸೀ ನೆಲೆಯ ಇತಿಹಾಸಕಾರರಿಗಷ್ಟೇ ಸೀಮಿತಗೊಂಡಂತೆ ತೋರುತ್ತದೆ. ಜಾಗತಿಕ ಮಟ್ಟದ ರಾಜಕೀಯ, ಆರ್ಥಿಕ ಹಾಗೂ ಜನಾಂಗಿಕ ಸಮಸ್ಯೆ-ಸಂಘರ್ಷಗಳ ನೇರ ಪರಿಚಯ ಉಳ್ಳ ಚಿಂತನಶೀಲ ಹಾಗೂ ಪರಿವರ್ತನಶೀಲ ಚರಿತ್ರಕಾರರ ಒಲವು ಆ ನಂತರ ಮಾರ್ಕ್ಸ್‌ವಾದಿಪಂಥದ ಕಡೆಗೆ ಹರಿದುದು ಸಹಜ. ಚಾರಿತ್ರಿಕ ನೆಲೆಯ ರಾಷ್ಟ್ರೀಯವಾದಿಪಂಥದ ಬರವಣಿಗೆಗಳು ವಿಜಯನಗರದಂಥಾ ಪ್ರಭಾವಶಾಲಿ ಸಂಕೇತವನ್ನು ತಮ್ಮ ಹಿನ್ನೆಲೆಯಲ್ಲಿ ಪ್ರತಿಫಲಿಸಲು ಪ್ರಯತ್ನಪಟ್ಟಂತೆಯೇ ಆ ಕಾಲಾವಧಿಯ ವಿವಿಧ ಸ್ಮಾರಕಗಳಲ್ಲಿ ಕಾಣಿಸಿಕೊಂಡ ಜನಸಾಮಾನ್ಯರ ಚಿತ್ರಣ ಕೊಡುವಲ್ಲಿ ಮಾರ್ಕ್ಸ್‌ವಾದಿಪಂಥದ ವಿದ್ವಾಂಸರು ಅಷ್ಟಾಗಿ ಪ್ರಯತ್ನಿಸಲಿಲ್ಲವೆಂದೇ ಹೇಳಬೇಕು. ಇದಕ್ಕೆ ಒಂದೆರಡು ಅಪವಾದಗಳಿರಬಹುದಷ್ಟೆ. ಮಾರ್ಕ್ಸ್‌ವಾದಿಪಂಥದ ಗರ್ಭದಲ್ಲುದಿಸಿದ ಸಬಾಲ್ಟರ್ನ್‌ಪಂಥದ ಬೆಳವಣಿಗೆಯ ತರುವಾಯವಾದರೂ ವಿದ್ವಾಂಸರ ದೃಷ್ಟಿ ಇತ್ತ ಹೊರಳಲಿಲ್ಲವೆಂಬುದೇ ವಿಪರ್ಯಾಸದ ಸಂಗತಿ. ಕೆಳಸ್ತರದ ಚರಿತ್ರೆ ಬರವಣಿಗೆಯ ಪ್ರವೃತ್ತಿ/ ಒಲವು ವಿಜಯನಗರದ ಮಟ್ಟಿಗೆ ಇನ್ನೂ ಕ್ರಿಯಾಶೀಲವಾಗಿಲ್ಲವೆನ್ನಬಹುದು. ಪ್ರಚಲಿತವಿರುವ ಸಬಾಲ್ಟರ್ನ್‌ಪಂಥದ ನೆಲೆಯಲ್ಲಾದರೂ ವಿಜಯನಗರದ ವೈಭವಯುತ ಇತಿಹಾಸದಲ್ಲಿ ಹುದುಗಿಹೋಗಿರುವ ಶ್ರೀಸಾಮಾನ್ಯನ ಬದುಕನ್ನು ಶೋಧಿಸುವ ಹಾಗೂ ನಿರೂಪಿಸುವ ಪ್ರಯತ್ನಕ್ಕೆ ಆದ್ಯತೆ ದೊರೆಯುವಂತಾಗಬೇಕು.

ವಿಜಯನಗರದ ಜನ ಇತಿಹಾಸ ರಚನೆಯ ಜರೂರು ಯಾತಕ್ಕಾಗಿ ಎಂದರೆ, ಇದೀಗ ಇತಿಹಾಸಚಕ್ರ ಕೆಳಮುಖವಾಗಿ ಚಲಿಸಲಾರಂಭಿಸಿರುವ ಕಾರಣಕ್ಕೆ. ಇದು ಕೆಳಸ್ತರದ ಅಥವಾ ಕೆಳ ಚಲನೆಯ ಇತಿಹಾಸದ (ಹಿಸ್ಟರಿ ಫ್ರಂ ಬಿಲೊ) ಅವಶ್ಯಕತೆಯನ್ನು ಮನಗಾಣಿಸಿ

ಕೊಡುತ್ತದೆ. ವಾಸ್ತವತೆಯೊಂದಿಗೆ ಮುಖಾಮುಖಿಯಾಗಿಸಬಲ್ಲ ಸ್ಥಳೀಯ ಚರಿತ್ರೆಯ ರಚನೆಯ ಅಗಾಧತೆಯನ್ನೂ ಸೂಕ್ಷ್ಮಾಧ್ಯಯನದ ಸಾಧ್ಯತೆಯನ್ನೂ ತೋರಿಸಿಕೊಡುತ್ತದೆ. ಲಿಖಿತ ಆಕರಗಳಾಚಿನ ಮೌಖಿಕ ಪರಂಪರೆಯಲ್ಲಿಯ ಸಾಮಾನ್ಯ ಜನರ ವಿಚಾರಗಳನ್ನು ಹೊರತೆಗೆಯುವ ಕಾರ್ಯವನ್ನು ನಿರ್ವಹಿಸಲು ತಕ್ಕಮಟ್ಟಿಗಾದರೂ ಪ್ರೇರೇಪಿಸುತ್ತದೆ. ಸ್ಥಳೀಯ ಚರಿತ್ರೆ ಒಳಗೊಳ್ಳುವ ಸ್ಥಳೀಯ ಮಾಹಿತಿಯ ಬೆನ್ನೆಲುಬಿನಂತಿರುವುದೇ ಮೌಖಿಕ ಆಕರ. ಈಗ ಕೈಗೆಟುಕಿರುವ ಇತಿಹಾಸಕ್ಕೆ ಪರ್ಯಾಯ ಇತಿಹಾಸವನ್ನು ಸೃಷ್ಟಿಸಿಕೊಡುವ, ಅಂದರೆ ಜನ ಇತಿಹಾಸವನ್ನು ಕಟ್ಟಿಕೊಡುವ ಅವಕಾಶ ಇರುವುದು ಇದಕ್ಕೇ. ಇಷ್ಟಾದರೂ ಜನರ ಇತಿಹಾಸ ಆಗುವುದೆಂದರೆ ಹೇಗೆ? ಈ ರಚನಾಕಾರ್ಯದಲ್ಲಿ ಜನರೇ ಭಾಗವಹಿಸಿದಾಗ ಎಂಬ ಸರಳ ಉತ್ತರ ನೀಡಬಹುದಾದರೂ ಇದು ಸುಲಭದ್ದಲ್ಲ. ಇಲ್ಲಿಯ ಆಶಯವೆಂದರೆ, ಜನರ - ಜನರಿಂದ - ಜನರಿಗಾಗಿ ಇತಿಹಾಸ ರಚಿಸುವುದು ಹೆಚ್ಚು ಅರ್ಥಪೂರ್ಣ; ಸದ್ಯದ ಅಗತ್ಯ ಕೂಡಾ. ವಿಜಯನಗರ ಇತಿಹಾಸದಲ್ಲಿ ಜನರನ್ನು ಹುಡುಕುವ ಕೆಲಸಕ್ಕೆ ಜನರೇ ಕೈ ಹಾಕುವ ಪ್ರಯತ್ನಕ್ಕೆ ಒತ್ತು ನೀಡಬೇಕಾಗಬಹುದು.

* * *

ಮೇಲ್ನೋಟಕ್ಕೆ ತೋರಿಬರುವ ವಿಜಯನಗರದ ವೈಭವವಾಗಲಿ, ಸಾಮರ್ಥ್ಯವಾಗಲಿ, ಮಹತ್ವವಾಗಲಿ ಆಂತರ್ಯದಲ್ಲಿ ಇರಲಿಲ್ಲವೆನ್ನುವುದು ವಾಸ್ತವ. ಅಲ್ಲದೆ, ಭಾರತೀಯ/ಹಿಂದೂ ಸಂಸ್ಕೃತಿಯ ಪೋಷಣೆ ಮತ್ತು ಪ್ರಸಾರಗಳ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಈ ಸಾಮ್ರಾಜ್ಯ ಯಜಮಾನನ ಪಾತ್ರ ನಿರ್ವಹಿಸಿತೆಂಬುದು ಸಹಾ ಪ್ರಶ್ನಾರ್ಹ. ವಿಜಯನಗರ ಸಾಮ್ರಾಜ್ಯಕ್ಕೆ ಇಂಥಾ ಆದ್ಯತೆ ನೀಡುವುದೆಂದರೆ 'ಭಾರತೀಯ ಸಂಸ್ಕೃತಿ'ಯನ್ನು ಅಪಮೌಲ್ಯಗೊಳಿಸಿದಂತೆ ಎಂತಲೂ ವ್ಯಾಖ್ಯಾನಿಸಬೇಕಾಗುತ್ತದೆ. ಇದಕ್ಕೆ ಕೆಲವು ಆಂತರಿಕ ನಿದರ್ಶನಗಳನ್ನು ನೀಡಬಹುದು. ವಿಜಯನಗರಕಾಲದ ಸಮಾಜದಲ್ಲಿ ಬೇರೂರಿದ್ದ ಕೆಲವು ಅನಿಷ್ಟ ಪದ್ಧತಿಗಳು ಇಂಥಾ ಪರಿಸ್ಥಿತಿಯನ್ನು ಸಮರ್ಥಿಸಲು ನೆರವಿಗೆ ಧಾವಿಸುತ್ತವೆ. ಇಂಥಾ ಉದಾಹರಣೆಗಳನ್ನು ಪರಿಗಣಿಸುವುದೆಂದರೆ, ವಿಜಯನಗರ ಸಾಮ್ರಾಜ್ಯದ ಗೌರವವನ್ನು ಬಯಲಿಗಿಟ್ಟಂತೆಯೇ.

ವಿಜಯನಗರ ಸಮಾಜದಲ್ಲಿ ಪ್ರಚಲಿತವಿದ್ದ ಐದು ಪ್ರಮುಖ ಅನಿಷ್ಟ ಪದ್ಧತಿಗಳನ್ನು ಇಲ್ಲಿ ಉದಾಹರಿಸುವುದರೊಡನೆ, ಪೂರಕವಾದ ಕೆಲವು ಸಂಗತಿಗಳನ್ನು ಚರ್ಚಿಸಬಹುದು. ಈ ಐದು ಪ್ರಮುಖ ಅನಿಷ್ಟ ಪದ್ಧತಿಗಳೆಂದರೆ, ೧. ಸತಿಪದ್ಧತಿ, ೨. ವೇಶ್ಯಾಪದ್ಧತಿ, ೩. ಗುಲಾಮಪದ್ಧತಿ, ೪.ಬಲಿಪದ್ಧತಿ, ೫. ಅಸಹ್ಯಕರವಾದ ಅಂತಃಪುರ ಜೀವನ.[೩] ಇಲ್ಲಿ 'ಅನಿಷ್ಟ'ವೆಂದರೆ, ಇಷ್ಟವಿಲ್ಲದ್ದು, ಸಮಾಜಕ್ಕೆ ಒಪ್ಪಿತವಲ್ಲದ್ದು, ಹಿಂಸಾತ್ಮಕವಾದುದು, ದಮನಕಾರಿಯಾದುದು, ಸಹಜ /ಸ್ವಸ್ಥ ಬದುಕಿಗೆ ಹಾನಿಯನ್ನುಂಟು ಮಾಡುವಂಥಾದ್ದು, ಬಹುಜನರ ಬದುಕಿಗೆ ಸಹ್ಯವಲ್ಲದ್ದು, ಸಾಂಸ್ಕೃತಿಕ ಮೌಲ್ಯವಲ್ಲದ್ದು ಇತ್ಯಾದಿ.

ಈ ಪದ್ಧತಿಗಳನ್ನು ಇಲ್ಲಿ ಸ್ಥೂಲವಾಗಿಯಾದರೂ ಪರಿಶೀಲಿಸುವ ಅಗತ್ಯವಿದೆ. ವಿಷಾದದ ಸಂಗತಿಯೆಂದರೆ, ನಿಸ್ಸಹಾಯಕ ಅಬಲೆ/ವಿಧವೆಯರನ್ನು ಬಲವಂತವಾಗಿ ದಹಿಸುವ ಪದ್ಧತಿ ಭಾರತೀಯ ಸಂಸ್ಕೃತಿಯ ರಕ್ಷಣೆ /ಪೋಷಣೆಗೆಂದು ಅಸ್ತಿತ್ವಕ್ಕೆ ಬಂದ ವಿಜಯನಗರ ಸಾಮ್ರಾಜ್ಯದಲ್ಲಿ ವ್ಯಾಪಕವಾಗಿದ್ದಿತು. ಇದೊಂದು ಅರಸರು/ಅಧಿಕಾರಸ್ಥರು/ಕುಲೀನರು/ ಕೆಲವು ಸಾಮಾನ್ಯವರ್ಗದವರು ಪಾಲಿಸುವ ಪ್ರತಿಷ್ಠೆಯ ಆಚರಣೆಯಾಗಿದ್ದಿತೆಂಬುದನ್ನು ದೇಸೀ ಅಧ್ಯಯನಗಳು ಅರಹುತ್ತವೆ. ವಿದೇಶಿ ಬರಹಗಾರರಂತೂ ಇಂಥಾ ಕ್ರೂರಪದ್ಧತಿಯನ್ನು ಅಧಿಕೃತವಾಗಿಯೇ ದಾಖಲಿಸಿಕೊಂಡಿದ್ದಾರೆ. ಎರಡು-ಮೂರು ಸಾವಿರ ಸ್ತ್ರೀಯರು ರಾಜನು ಸತ್ತಾಗ ಆತ್ಮಸಂತೋಷದಿಂದ ಚಿತೆಯೊಳಗೆ ಬಿದ್ದು ಪ್ರಾಣತ್ಯಾಗ ಮಾಡುತ್ತೇವೆಂದು ವಾಗ್ದಾನ ಮಾಡಿ ರಾಜನ ಕೈ ಹಿಡಿಯುತ್ತಿದ್ದರೆಂದು ನಿಕೊಲೊ-ದೆ-ಕೊಂತಿ ಹೇಳಿದರೆ; ರಾಜ ಸತ್ತರೆ ಅಂತಃಪುರದ ೪೦೦ -೫೦೦ ಸ್ತ್ರೀಯರು ಆತನೊಡನೆ ಚಿತೆಯಲ್ಲಿ ಬೀಳುತ್ತಿದ್ದರೆಂಬ ಸ್ವಯಂವೀಕ್ಷಣೆಯ ವರದಿಯನ್ನು ನೀಡುತ್ತಾನೆ ಬಾರ್ಬೋಸಾ. ಇವು ವಿಚಿತ್ರ ವಿವರಣೆ, ವ್ಯಾಖ್ಯಾನಗಳಿಂದ ಕೂಡಿದವು ಹಾಗೂ ಉತ್ಪ್ರೇಕ್ಷೆಭರಿತ ಸಂಗತಿಗಳೆಂದು ತಳ್ಳಿಹಾಕುವ ಪ್ರಯತ್ನ ನಡೆದರೂ ಸಾಮಾನ್ಯರಲ್ಲಿಯೂ ರೂಢಿಯಲ್ಲಿದ್ದ ಇಂಥಾ ಭಯಾನಕ ಪದ್ಧತಿಯನ್ನು ಮುಚ್ಚಿಡಲಾಗುವುದಿಲ್ಲ. ಇವರೆಲ್ಲರಿಗೂ ರಾಜನೇ ಆದರ್ಶ! ಗೌಡರು, ನಾಯಕರು, ಯೋಧರ ಕುಟುಂಬಗಳಲ್ಲೂ ಇದು ಪ್ರಚಲಿತವಿದ್ದಿತೆನ್ನುತ್ತಾರೆ ಟಿ.ವಿ.ಮಹಾಲಿಂಗಂ. ಕರ್ನಾಟಕದಲ್ಲಿ ಈ ಪದ್ಧತಿ ಕುರಿತು ಹೇರಳ ಶಿಲಾಶಾಸನಗಳಿರುವುದನ್ನು ಹಾಗೂ ಹಾಸನ ಜಿಲ್ಲೆಯಲ್ಲಿ ಇವುಗಳು ವಿಪುಲ ಸಂಖ್ಯೆಯಲ್ಲಿರುವುದನ್ನು ಅವರು ದಾಖಲಿಸಿದ್ದಾರೆ. ಅವರು ಗುರುತಿಸಿರುವಂತೆ, ಸತಿ ಆಚರಣೆಯು ವಿಜಯನಗರ ಸಮಾಜದ ಪ್ರಮುಖ ಲಕ್ಷಣವಾಗಿದ್ದಿತು.[9]

ಭೋಗಾಪೇಕ್ಷಿಗಳಾದ ವಿಜಯನಗರ ಅರಸರು ವೇಶ್ಯಾವಾಟಿಕೆಗೆ ರಹಸ್ಯವಾಗಿ/ ಅನಧಿಕೃತ ವಾಗಿ ಭೇಟಿ ಕೊಡುವುದರೊಡನೆ ವೇಶ್ಯಾಪದ್ಧತಿ 'ರಾಜಾಶ್ರಯ'ದಲ್ಲಿ ವ್ಯವಸ್ಥಿತವಾಗಿ ಬೆಳೆಯುವಂತೆ ಪ್ರೋತ್ಸಾಹಿಸಿದರು. ವಿಜಯನಗರದಲ್ಲಿ ಇಂಥಾ ವ್ಯವಸ್ಥೆ ಬಲಿಯಲು ಇದ್ದ ಕಾರಣಗಳೆಂದರೆ ಜನರ ಆರ್ಥಿಕ ದುಸ್ಥಿತಿ ಹಾಗೂ ಕೆಲವು ಅಮಾನವೀಯ ಸಾಮಾಜಿಕ ಕಟ್ಟುಪಾಡುಗಳು. ವಿಜಯನಗರದಲ್ಲಿ ಇದು ಸಾಂಸ್ಥಿಕ ಸ್ವರೂಪ ಪಡೆದುಕೊಂಡಿದ್ದಿತೆಂದರೆ ಇದರ ಭೀಕರತೆಯ ಪರಿಚಯವಾಗುತ್ತದೆ. ಇದು ಧಾರ್ಮಿಕನೆಲೆಯಲ್ಲಿ ದೇವರ ಹೆಸರಿನಲ್ಲಿ ಅಧಿಕೃತವಾಗಿ ಅಂಗೀಕರಿಸಲ್ಪಟ್ಟಿದ್ದಿತು. ಅಚ್ಯುತಪೇಟೆ / ಬಜಾರನ್ನು 'ಸೂಳೆಬಜಾರ್' ಎಂತಲೇ ಕರೆಯಲಾಗಿದ್ದಿತು. ಈ ಪದ್ಧತಿಯನ್ನು ಪ್ರೋತ್ಸಾಹಿಸಿದ ಎರಡು ಮಹಾ ಪಿಡುಗುಗಳೆಂದರೆ ಮದ್ಯಪಾನ ಮತ್ತು ಜೂಜುಗಾರಿಕೆ. ವಿಜಯನಗರಕಾಲೀನ ಕೆಲವು ಕನ್ನಡಕಾವ್ಯಗಳು ಇಂಥಾ ವ್ಯಸನಗಳನ್ನು ರಂಜನೀಯವಾಗಿ ವರ್ಣಿಸುತ್ತವೆ. ಪ್ರವಾಸಿ ಅಬ್ದುಲ್ ರಜಾಕನು, ಈ ನಗರದ ಏಳು(ಸುತ್ತು) ಕೋಟೆಗಳಲ್ಲಿ ಈ ತರಹದ ಅನೇಕ ವೇಶ್ಯಾಗೃಹಗಳಿವೆ; ಈ ವೇಶ್ಯಾಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ೧೨,೦೦೦ ಪಣಂ ಆದಾಯ ಬರುತ್ತದೆ;

ಈ ಹಣವನ್ನು ಪಹರೆಯವರಿಗೆ ಸಂಬಳವಾಗಿ ಕೊಡುತ್ತಿದ್ದರೆನ್ನುತ್ತಾನೆ. ವಿಜಯನಗರ ರಾಜಧಾನಿಯ ರಕ್ಷಣೆ ಸಂಪೂರ್ಣವಾಗಿ ವೇಶ್ಯೆಯರು ನೀಡುತ್ತಿದ್ದ ತೆರಿಗೆಯನ್ನು ಅವಲಂಬಿಸಿದ್ದಿತೆಂಬುದು ಸ್ಪಷ್ಟ.

ಮುತ್ತು-ರತ್ನಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಬಿಕರಿಗಿಡುವಂತೆಯೇ ಪ್ರಾಣಿಗಳೊಡನೆ ಮನುಷ್ಯರನ್ನು/ಗುಲಾಮರನ್ನು ವಿಜಯನಗರದಲ್ಲಿ ಬಿಕರಿಗಿಡಲಾಗುತ್ತಿದ್ದಿತು. ಇಮ್ಮಡಿ ಪ್ರೌಢರಾಯನಕಾಲದ ಮರಗಲ್ಲುಗ್ರಾಮದ ಶಾಸನ (ಕ್ರಿ.ಶ. ೧೪೩೦) ಹಾಗೂ ಕುಪ್ಪತ್ತೂರು ಶಾಸನ (ಕ್ರಿ.ಶ.೧೪೭೦) ಗಳಲ್ಲಿಯೂ ಈ ಕುರಿತು ಸೂಚನೆಯಿದೆ. ಹಾಗೆಯೇ, ನಿಕೊಲೊ-ದೆ-ಕೊಂತಿ, ಅಬ್ದುಲ್ ರಜಾಕ್ ಮತ್ತು ಬಾರ್ಬೋಸಾರ ಬರಹಗಳೂ ಇದನ್ನು ಸಮರ್ಥಿಸುತ್ತವೆ. ಹೃದಯ ವಿದ್ರಾವಕ ಸಂಗತಿಯೆಂದರೆ, ಸಹಸ್ರಸಂಖ್ಯೆಯಲ್ಲಿ ಖೋಜಾಗಳು ಅಥವಾ ಹಾಗೆ ಪರಿವರ್ತಿಸಲ್ಪಟ್ಟವರು ವಿಜಯನಗರದಲ್ಲಿ ಗುಲಾಮರಾಗಿದ್ದುಕೊಂಡು ವಿವಿಧ ವರ್ಗಗಳವರಿಗೆ ಸೇವೆ ಸಲ್ಲಿಸುತ್ತಿದ್ದರು.

ಮನುಷ್ಯರನ್ನು ಮತ್ತು ಪ್ರಾಣಿಗಳನ್ನು ಬಲಿ ನೀಡುವ ಇನ್ನೊಂದು ಭಯಾನಕ /ಅನಿಷ್ಟ ಪದ್ಧತಿ ವಿಜಯನಗರದಲ್ಲಿ ಬೇರೂರಿದ್ದಿತು. ಇದು ತೀರಾ ವ್ಯಾಪಕವಾದ ಆಚರಣೆಯಾಗಿದ್ದಿತೆನ್ನಲು ಸಾಕಷ್ಟು ಉದಾಹರಣೆಗಳಿವೆ. ಕೆರೆಗಳನ್ನು, ಕೋಟೆಗಳನ್ನು ಕಟ್ಟುವಾಗಲಂತೂ ಮನುಷ್ಯರನ್ನು ಜೀವಂತವಾಗಿ ಆಹುತಿ ಕೊಡಲಾಗುತ್ತಿತ್ತು. ಇಂಥಾ ಅಮಾನವೀಯ/ ಜೀವವಿರೋಧಿ ಪದ್ಧತಿಯು ವಿಜಯನಗರದಲ್ಲಿ 'ಧರ್ಮ-ಸಂಸ್ಕೃತಿ ಸಮ್ಮತ'ವಾದುದಾಗಿದ್ದಿತೆಂಬುದೇ ವಿಷಾದದ ಸಂಗತಿ. ಹಬ್ಬಾಚರಣೆ, ಮುಖ್ಯವಾಗಿ ವಿಜಯದಶಮಿ ಸಂದರ್ಭದಲ್ಲಿ ರಕ್ತದ ಕೋಡಿಯನ್ನೇ ನೋಡಬಹುದಿತ್ತು. ಲೆಕ್ಕವಿಲ್ಲದಷ್ಟು ಪ್ರಾಣಿಗಳನ್ನು ಬಲಿಕೊಡುತ್ತಿದ್ದ ವಿವರಣೆಯೇ ಅತ್ಯಂತ ಭೀಕರ. ಎರಡು ಗುಡ್ಡಗಳ ನಡುವೆ ಕಟ್ಟಲಾದ ಕೆರೆಯೊಂದಕ್ಕೆ, ಅಂದರೆ ಹೊಸಪೇಟೆ ಮತ್ತು ಮರಿಯಮ್ಮನಹಳ್ಳಿ ರಸ್ತೆಯಲ್ಲಿರುವ ರಾಯರಕೆರೆಗೆ, ೬೦ ಮಂದಿಯನ್ನು ಬಲಿ ನೀಡಲಾಯಿತೆಂಬ ಮಾಹಿತಿ ಒದಗಿಸುತ್ತಾನೆ ಡಾಮಿಂಗೊ ಪಾಯೆಸ್. ವಿರೂಪಾಕ್ಷ ದೇವಾಲಯದ ಮಹಾದ್ವಾರ ಬಿಷ್ಟಪ್ಪಯ್ಯನ ಗೋಪುರಕ್ಕೆ ರಂಗಾಪುರದ ಲಕ್ಷ್ಮಾಂಬೆ ಎಂಬುವವಳನ್ನು ಬಲಿ ನೀಡಲಾದ ಇನ್ನೊಂದು ವಿರಳ ಉದಾಹರಣೆಯೂ ಇದೆ. ಈ ಬಾಗಿಲ ಬಳಿ 'ಗೋಪುರಾಂಬ' ಹೆಸರಿನಲ್ಲಿ ಈಕೆಯ ಸ್ಮರಣಾರ್ಥ ವಿಗ್ರಹ ಸ್ಥಾಪಿಸಿದ ವಿಚಾರ ತಿಳಿಯುತ್ತದೆ. ಹೇಳಹೆಸರಿಲ್ಲದಂತೆ ನಿಗೂಢವಾಗಿ ಬಲಿಯಾದ ಅಮಾಯಕರ ಸಂಖ್ಯೆ ಅದೆಷ್ಟೋ.

ವಿಜಯನಗರವು ಪುರುಷ ಪ್ರಧಾನ ಸಾಮ್ರಾಜ್ಯವಾಗಿದ್ದಿತೆನ್ನಲು ಲಭ್ಯವಿರುವ ಆಳಿದ ಅರಸರ ಯಾದಿಯನ್ನು ನೋಡಿದರೇ ತಿಳಿಯುತ್ತದೆ. ಬಹಿರಂಗವಾಗಿಯೇ ರಾಜಧಾನಿಯಲ್ಲಿ ಸ್ತ್ರೀಯರ ಮಾನಾಪಹರಣದಂಥಾ, ಲೈಂಗಿಕ ಶೋಷಣೆಯಂಥಾ ವ್ಯವಸ್ಥಿತ ಪ್ರಯತ್ನಗಳಿಗೆ ತಡೆಹಾಕಲು ವಿಫಲವಾದ ವಿಜಯನಗರ ಸಾಮ್ರಾಟರು, ಮಹಿಳೆಯರ ಆತ್ಮಗೌರವವನ್ನು ರಕ್ಷಿಸುವಲ್ಲಿ ಸಂಪೂರ್ಣ ಸೋತಿದ್ದರೆಂತಲೇ ಭಾವಿಸಬೇಕಾಗುತ್ತದೆ. ರಾಜಸಂತತಿ,

ಶ್ರೀಮಂತವರ್ಗ, ಅಧಿಕಾರಿ ವರ್ಗ, ಕುಲೀನವರ್ಗ- ಇಂಥಾ ಕೆಲವು ಪ್ರತಿಷ್ಠಿತರ ಮಹಿಳೆಯರನ್ನು ಹೊರತುಇಡಿಸಿದರೆ, ಇತರ ಸಾಮಾನ್ಯವರ್ಗಗಳ ಮಹಿಳೆಯರ ಪಾಡು ಹೇಗಿದ್ದಿತೋ ಊಹಿಸಲಾಗದು. ಸಾಮ್ರಾಟರು ಹಾಗೂ ಇತರ ಧನಿಕವರ್ಗದವರು ಸಲಹುತ್ತಿದ್ದ ಅನಧಿಕೃತ ಮಹಿಳೆಯರ ಸಮೂಹವು ತೀರಾ ಹೀನಾಯವಾಗಿ ಬದುಕಬೇಕಿದ್ದ ಬಗೆಗೆ ಸೂಚನೆಗಳು ದೊರೆಯುತ್ತವೆ. ಉದಾಹರಣೆಗೆ, ತಮಗೆ ಇಷ್ಟವೆನಿಸಿದ ಹೆಣ್ಣನ್ನು ಶಯ್ಯಾಗಾರಕ್ಕೆ ಆಹ್ವಾನಿಸುವ ಮುನ್ನ ವಿಜಯನಗರದ ಅರಸರು ಅಂತಃಪುರದ ಎಲ್ಲ ಹೆಣ್ಣುಗಳನ್ನು ಪ್ರದರ್ಶನದಲ್ಲಿಟ್ಟ ಬೊಂಬೆಗಳನ್ನು ಪರೀಕ್ಷಿಸುವಂತೆ ನಡೆದುಕೊಳ್ಳುತ್ತಿದ್ದರು. ಹೆಣ್ಣಿನ ಎಲ್ಲ ಕೋಮಲ ಭಾವನೆಗಳನ್ನು ಮುರುಟಿಸುವ ಈ ಪ್ರಕ್ರಿಯೆ ಹೆಣ್ತನಕ್ಕೇ ಅಪಮಾನ ಮಾಡುವಷ್ಟು ಕ್ರೂರವಾಗಿದ್ದಿರಲು ಸಾಧ್ಯ. ಹೆಂಗಸರ ಎಲ್ಲ ಬಗೆಯ ಸ್ವಾತಂತ್ರ್ಯವನ್ನೂ ಹರಣ ಮಾಡಲಾಗಿದ್ದರಿಂದ, ಲೈಂಗಿಕತೃಷೆಯ ಪರಿಹಾರಕ್ಕಾಗಿ ಮಾತ್ರ ಅವರನ್ನು ಬಳಸಿಕೊಳ್ಳಲಾಗುತ್ತಿತ್ತು. ಇನ್ನು ಅಂತಃಪುರದಲ್ಲಿ ಪರಿಚಾರಿಕೆಯರಾಗಿದ್ದವರಾದರೂ ಸಾಮಂತರು, ಪಾಳೆಯಗಾರರು, ಉನ್ನತ ಅಧಿಕಾರಿಗಳು ಸಾಮ್ರಾಟರಿಗೆ ಸಲ್ಲಿಸುವ ಆಭರಣ, ಕುದುರೆಗಳ ಜತೆಯಲ್ಲಿ ಕಾಣಿಕೆಯಾಗಿ ಸಮರ್ಪಿಸಲ್ಪಟ್ಟವರು. ಅಬ್ದುಲ್ ರಜಾಕ್, ಪಾಯೇಸ್, ಬಾರ್ಬೋಸಾರ ಹೇಳಿಕೆಯಂತೆ, ಅರಮನೆಯ ರಾಣಿವಾಸದವರು ಪರಸ್ಪರ ಈರ್ಷ್ಯೆ, ಅಸೂಯೆ, ಸ್ಪರ್ಧೆ, ಕೌರ್ಯ, ಕೊಲೆ, ಹಿಂಸೆ, ನಿರಾಶೆ, ಅಪಮಾನ, ಆತ್ಮಹತ್ಯೆ ಪ್ರಯತ್ನಗಳಲ್ಲಿ ತೊಡಗಿದ್ದರು. ಅಶಾಂತಿಯ ಆಗರದಂತೆ ಅಂತಃಪುರವಿದ್ದಿತು.

* * *

ವಿಜಯನಗರ ಇತಿಹಾಸ-ಸಂಸ್ಕೃತಿ ಕುರಿತ ಸಾಂಪ್ರದಾಯಿಕ ವ್ಯಾಖ್ಯಾನ-ವಿವರಣೆಗಳನ್ನು ಇನ್ನೊಮ್ಮೆ ಪರಿಶೀಲಿಸಬೇಕೆಂಬುದೇ ಇಲ್ಲಿಯ ಆಶಯ. ಕೆಳಸ್ತರದ ಚರಿತ್ರೆ ರಚನೆಯ ನೆಲೆಯಲ್ಲಿ ಎದುರಾಗುವ ತಾತ್ವಿಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದೂ ಮುಖ್ಯವಾಗುತ್ತದೆ. ಊಳಿಗಮಾನ್ಯ ವ್ಯವಸ್ಥೆಯನ್ನು ಪೂರ್ಣಪ್ರಮಾಣದಲ್ಲಿ ಪೋಷಿಸಿ ಬೆಳೆಸಿದ ವಿಜಯನಗರ ಸಾಮ್ರಾಜ್ಯವು ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಯಥಾಸ್ಥಿತಿ ಧೋರಣೆಯನ್ನೆ ಮುಂದುವರೆಸಿತೆಂಬುದು ಸ್ಪಷ್ಟ. ಕಾಕತೀಯ ರಾಜ್ಯದ ಕೊನೆಯ ಈರ್ವರು ಆಡಳಿತಗಾರರಾದ ರುದ್ರಾಂಬಾ ಮತ್ತು ಕಾಪಯನಾಯಕರ ಕಾಲದಲ್ಲಿ ಜಾರಿಗೆ ಬಂದ ನಾಯಕತನ ವ್ಯವಸ್ಥೆಯು ವಿಜಯನಗರ ಕಾಲದಲ್ಲಿ ನಾಯಂಕರ ವ್ಯವಸ್ಥೆಯಾಗಿ ವಿಸ್ತಾರಗೊಂಡಿತು. ಇದನ್ನು ಪರಿಣಾಮಕಾರಿಯಾಗಿ ರೂಢಿಸಿಕೊಂಡ ಕೀರ್ತಿ ವಿಜಯನಗರದ್ದೇ. ಇಂಥಾ ವ್ಯವಸ್ಥೆ ಚಾಲುಕ್ಯ, ಹೊಯ್ಸಳ ಹಾಗೂ ಸೇವುಣರ ಕಾಲದಲ್ಲಿ ಇರಲಿಲ್ಲ.

ಇತಿಹಾಸ ತಿಳಿಸುವಂತೆ, ಕಾಕತೀಯರ ಅಧೀನದಲ್ಲಿದ್ದ ಪದ್ಮಕುಲದ ೭೭ ನಾಯಕರು ಆ ನಂತರ ವಿಜಯನಗರಕ್ಕೆ ತಮ್ಮ ನಿಷ್ಠೆ ತೋರಿದರು. ನ್ಯೂನಿಜ್ ಪ್ರಕಾರ, ವಿಜಯನಗರ ಅವಧಿಯಲ್ಲಿ ಸಾಮ್ರಾಜ್ಯವನ್ನು ೨೦೦ ಭಾಗಗಳಾಗಿ ವಿಭಾಗಿಸಲಾಗಿದ್ದಿತು. ೨೦೦ ನಾಯಕರು ...

ಮತ್ತು ಪಾಳೆಯಗಾರರು ಇವುಗಳ ಆಡಳಿತ ನೋಡಿಕೊಳ್ಳುತ್ತಿದ್ದರು. ಇದು ತುಂಡು ರಾಜ್ಯಗಳಿಂದ ಕೂಡಿದ ಆಡಳಿತ ವ್ಯವಸ್ಥೆಯಾಗಿದ್ದಿತೆಂದು ವ್ಯಾಖ್ಯಾನಿಸುವುದರೊಡನೆ ಕೇಂದ್ರೀಕೃತ ಆಡಳಿತದ ಪ್ರಶ್ನೆಯನ್ನು ಎತ್ತಿದ ವಿದೇಶಿ ಇತಿಹಾಸಕಾರರಿಗೆ ದೇಸೀ ಇತಿಹಾಸಕಾರರು ಸಮಾಧಾನಕರ ಉತ್ತರ ನೀಡಿದ್ದಾರೆ. ಇಲ್ಲಿಯ ಪ್ರಶ್ನೆಯೆಂದರೆ, ಊಳಿಗಮಾನ್ಯ ವ್ಯವಸ್ಥೆಯನ್ನು ಪೋಷಿಸಿದ ವಿಜಯನಗರವು ತನ್ನ ಆಳ್ವಿಕೆಯ ಗರ್ಭದಲ್ಲಿ ಪ್ರಜಾಪ್ರಭುತ್ವದ ಲಕ್ಷಣಗಳನ್ನು ಒಳಗೊಂಡಿದ್ದಿತೇ? ನಾಯಂಕರ ವ್ಯವಸ್ಥೆಯನ್ನು ಪೂರ್ಣಪ್ರಮಾಣದಲ್ಲಿ ಜಾರಿಗೆ ತರುವುದರೊಡನೆ ವಿಜಯನಗರವು ಇಂಥಾ ಪ್ರಯೋಗವನ್ನು ಪರೋಕ್ಷವಾಗಿ ನಡೆಸಿತೇ?

ವಿಜಯನಗರ ಸಾಮ್ರಾಜ್ಯದ ಅಳಿವಿನ ನಂತರ ಪಾಳೆಯಗಾರಶಾಹಿಯು ಕನಿಷ್ಠ ಎರಡೂವರೆ ಶತಮಾನಗಳ ಕಾಲ ಕರ್ನಾಟಕದ / ದಕ್ಷಿಣಭಾರತದ ರಾಜಕೀಯದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದುದು ಕಂಡಂತೆಯೇ ಇದೆ. ಹೈದರ್‌ಅಲಿ-ಟಿಪ್ಪುಸುಲ್ತಾನರು ಈ ವ್ಯವಸ್ಥೆಯನ್ನು ದುರ್ಬಲಗೊಳಿಸಿದರು. ಇಂಗ್ಲಿಷರು ಸಹಾ ಇಂಥಾ ಕಾರ್ಯದಲ್ಲಿ ಹಿಂದೆ ಬೀಳಲಿಲ್ಲ. ವಸಾಹತುಶಾಹಿ ಹುಟ್ಟುಹಾಕಿದ ನವಸಾಮ್ರಾಜ್ಯಶಾಹಿ ವ್ಯವಸ್ಥೆಯ ವಿರುದ್ಧ ಜನರು ತೋರಲೆತ್ನಿಸಿದ ಪ್ರತಿಭಟನೆಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ದಕ್ಷಿಣಭಾರತದಲ್ಲಿ ವಸಾಹತುಶಾಹಿಯ ದಬ್ಬಾಳಿಕೆಯ ವಿರುದ್ಧ ನಡೆದ ಜನಾಂದೋಲನದ ನಾಯಕತ್ವ ವಹಿಸಿದವರು ಸ್ಥಳೀಯ ಪಾಳೆಯಗಾರರೇ ಎಂಬುದು ಗಮನಾರ್ಹ. ಕರ್ನಾಟಕದ ಮಟ್ಟಿಗೆ, ಸಂತೇಬೆನ್ನೂರು ನಾಯಕರು, ಚಿತ್ರದುರ್ಗದ ನಾಯಕ ವಂಶಸ್ಥರು ಮೊದಲಾದವರು ಇಂಥಾ ಹೊಣೆಯನ್ನು ನಿಭಾಯಿಸಿದವರಲ್ಲಿ ಪ್ರಮುಖರು. ಈ ಕುರಿತು ನಡೆದಿರುವ ಅಧ್ಯಯನಗಳು ಇದನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಮಾಜಿ ಪಾಳೆಯಗಾರರು/ ನಾಯಕರು/ ಜಮೀನುದಾರರು ಆ ನಂತರದಲ್ಲಿ ಜನನಾಯಕರಾಗಿ ಅಥವಾ ಪ್ರಜೆಗಳನ್ನು ಪ್ರತಿನಿಧಿಸುವವರಾಗಿ ಹೊಸಕಾಲದ ಆಡಳಿತ ವ್ಯವಸ್ಥೆ ಜಾರಿಗೆ ಬರುವಲ್ಲಿ ನೆರವಾದರೆನ್ನಬಹುದು. ಈ ದೃಷ್ಟಿಯಿಂದಲೂ ವಿಜಯನಗರದ ಕೊಡುಗೆಯನ್ನು ಗಂಭೀರವಾಗಿಯೇ ಪರಿಗಣಿಸಬೇಕಾಗುತ್ತದೆ.

ರಾಜಕೀಯವಾಗಿ ಬಲಿಷ್ಠವಾಗಿದ್ದು, ಈ ಬಗೆಯ ಹೊಸ ಮನ್ವಂತರವನ್ನು ಸೃಷ್ಟಿಸಿದ ವಿಜಯನಗರವು, ಆಂತರ್ಯದಲ್ಲಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ದುರ್ಬಲಗೊಂಡಿದ್ದುದು ಹೇಗೆ? ಅತಿ ಶ್ರೀಮಂತಿಕೆ ಇದಕ್ಕೆ ಶಾಪವಾಗಿ ಪರಿಣಮಿಸಿತೇ? ರಾಜರ, ಪ್ರಜೆಗಳ ನೈತಿಕಮಟ್ಟ ಕುಸಿಯಲು ಇದ್ದಿರುವ ಅನ್ಯ ಕಾರಣಗಳೇನು? ಹೆಸರಾಂತ ಧರ್ಮದ್ರಷ್ಟಾರರು ನೆಲೆಗೊಂಡಿದ್ದ ರಾಜಧಾನಿಯಲ್ಲಿ ಜನವಿರೋಧಿ /ಜೀವವಿರೋಧಿ ಪ್ರವೃತ್ತಿಗಳು ವಿಜೃಂಭಿಸಿದುದು ಹೇಗೆ? ದಕ್ಷಿಣ ಭಾರತದಲ್ಲಿ ಸನಾತನ ಸಂಸ್ಕೃತಿಯ ರಕ್ಷಣೆಗೆಂದು ಹುಟ್ಟಿತೆಂದು ವಿಜಯನಗರವನ್ನು ಕೊಂಡಾಡುವ ಇತಿಹಾಸಕಾರರ ನಿಲುವುಗಳ ಔಚಿತ್ಯವೇನು? ವಿಜಯನಗರದ ವೈಭವಕ್ಕೆ ಬೆರಗಾದವರ ಬರವಣಿಗೆಗಳನ್ನು ಮೆಚ್ಚಿದವರ

ಸಂಖ್ಯೆ ಹೆಚ್ಚಾದುದೇ ಇದೇ ಜಾಡಿನ ಹೊಸ ಬರವಣಿಗೆಗಳು ಹುಟ್ಟಲು ಕಾರಣವಾಯಿತೆನ್ನ ಬಹುದು. ವಿಜಯನಗರದವರ ಸಾಧನೆಗೆ ಸರಿಗಟ್ಟಬಲ್ಲ ಬೇರೆ ಸಾಮ್ರಾಟರು ದಕ್ಷಿಣದಲ್ಲಿ ಮತ್ತೆ ತಲೆಯೆತ್ತಲಿಲ್ಲ. ದಕ್ಷಿಣಭಾರತದ ಕೊನೆಯ ಸಾಮ್ರಾಜ್ಯವಾಗಿ ಬಾಳಿ ದುರಂತಾಂತ್ಯ ವನ್ನು ಕಂಡ ವಿಜಯನಗರ ಕುರಿತು ಅನುಕಂಪದ ಧೋರಣೆಯ ಬರಹಗಳ ಸೃಷ್ಟಿಕಾರ್ಯ ಸದಾಕಾಲಕ್ಕೂ ಮುಂದುವರೆದುದನ್ನು ಕಾಣಬಹುದು. ಸೈದ್ಧಾಂತಿಕನೆಲೆಯ ಬರಹಗಳ ದುರ್ಭರತೆಯೂ ಇಂಥಾ ಪ್ರವೃತ್ತಿಗೆ ಕಾರಣವಿದ್ದಿರಬಹುದು.

ಏನೇ ಇದ್ದರೂ ಕೆಳಸ್ತರದ ಚರಿತ್ರೆ ಬರವಣಿಗೆಯ ದೃಷ್ಟಿಯಿಂದ ವಿಜಯನಗರವನ್ನು ಪರಿಭಾವಿಸಬಹುದಾದರೆ, ನೈತಿಕಬಲವಿಲ್ಲದ ಸಾಮ್ರಾಜ್ಯವೊಂದು ಕಣ್ಣೆದುರು ನಿಂತಂತಾಗು ತ್ತದೆ. ವಿಜಯನಗರ ಯುಗವು ಕನ್ನಡಿಗನ ಇತಿಹಾಸದ ವೈಪರೀತ್ಯಗಳ, ವಿರೋಧಾಭಾಸದ ಯುಗವಿತ್ತೆನ್ನುವ ಡಾ. ರಮೇಶ್ ಅವರ ಮಾತನ್ನು ಸಮರ್ಥಿಸಲೇಬೇಕಾಗುತ್ತದೆ. ಹಾಗೆಯೇ, ವಿಜಯನಗರ ಯುಗವು ನಿಜಕ್ಕೂ ಇಂದಿನ ಕನ್ನಡಿಗನ ದಾರುಣ ಪರಿಸ್ಥಿತಿಯ ಉಪಕ್ರಮ ಕಾಲವಿದ್ದಿರಬಹುದೆಂಬ ಅವರ ಅನಿಸಿಕೆಯನ್ನು ಖಂಡಿತ ನಿರಾಕರಿಸಲಾಗುವುದಿಲ್ಲ. ವಿಜಯನಗರವನ್ನು ವೈಭವಯುತವಾಗಿ ಚಿತ್ರಿಸುವ ಪರಿಪಾಟ ಮುಂದುವರೆದಿದ್ದರೂ ವಸ್ತುನಿಷ್ಠ ಇತಿಹಾಸ ಬರವಣಿಗೆಯತ್ತ ಹೊಸಚಿಂತನೆಯ ಯುವ ಇತಿಹಾಸಕಾರರ ಒಲವು ಮೂಡುವಂತಾಗಲು ಪ್ರಯತ್ನಿಸಬೇಕಿದೆ.

ಟಿಪ್ಪಣಿಗಳು

೧. **ಡಾ.ಕೆ.ವಿ.ರಮೇಶ್**, 'ಕನ್ನಡಿಗ : ಒಂದು ಐತಿಹಾಸಿಕ ವ್ಯಕ್ತಿಚಿತ್ರ', **ಇತಿಹಾಸದರ್ಶನ**, ಸಂಪುಟ ೩, ೧೯೮೮, ಪು. ೨೭೩

೨. ಗಮನದಲ್ಲಿರುವುದು: ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದಿಂದ ನನ್ನ ಸಂಪಾದಕತ್ವದಲ್ಲಿ ಸಿದ್ಧಗೊಂಡ **ಕರ್ನಾಟಕ ಚರಿತ್ರೆ:** ಆಕರಸೂಚಿಯಲ್ಲಿರುವ ವಿಜಯನಗರ ಚರಿತ್ರೆ ಕುರಿತ ಪ್ರಕಟಿತ- ಅಪ್ರಕಟಿತ ಕೃತಿಗಳು, ಮಹಾಪ್ರಬಂಧಗಳು ಇತ್ಯಾದಿಯ ಯಾದಿ.

೩. ಹೆಚ್ಚಿನ ವಿವರಗಳಿಗೆ ನನ್ನ ಮಾರ್ಗದರ್ಶನದಲ್ಲಿ ಶ್ರೀ ಬಸವರಾಜಯ್ಯ ಮಠದ ಅವರು ಸಿದ್ಧಪಡಿಸಿದ **ವಿಜಯನಗರ ಕಾಲದ ಸಾಮಾಜಿಕ ಪರಿಸ್ಥಿತಿ: ಕೆಲವು ಅನಿಷ್ಟ ಪದ್ಧತಿಗಳು** ಎಂಬ ಎಂ.ಫಿಲ್. ಮಹಾಪ್ರಬಂಧವನ್ನು (೧೯೯೪ : ಕನ್ನಡ ವಿಶ್ವವಿದ್ಯಾಲಯ, ಹಂಪಿ) ಗಮನಿಸಬಹುದು.

೪. **ಅಡ್ಮಿನಿಸ್ಟ್ರೇಷನ್ ಅಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ - ಪಾರ್ಟ್ II: ಸೋಶಿಯಲ್ ಲೈಫ್**, ಯೂನಿವರ್ಸಿಟಿ ಆಫ್ ಮದರಾಸ್, ಮದರಾಸ್, ೧೯೭೫, ಪು. ೩೧ - ೩೬

❖ ❖

ಪರಿವಿಡಿ

... xvii

೧

ವಿದ್ಯಾರಣ್ಯರಿಗೆ ಸಂಬಂಧಿಸಿದ ಅಪ್ರಕಟಿತ ಓಲೆಗರಿ, ಹಸ್ತಪ್ರತಿಗಳ ಸೂಚಿ

ಕೆಳದಿ ಗುಂಡಾಜೋಯಿಸ್

ಭಾರತ ಹಾಗೂ ಅಂತರರಾಷ್ಟ್ರೀಯ ಚರಿತ್ರೆಯಲ್ಲಿ ಹಿಂದೂ ಸಾಮ್ರಾಜ್ಯದ ಉದಯಕ್ಕೆ ಕಾರಣರಾದ ವಿಜಯನಗರ (City of victory)[೧] ಸಂಸ್ಥಾಪಕ ವಿದ್ಯಾರಣ್ಯರನ್ನು ಕುರಿತಂತೆ ಕೆಳದಿಯನ್ನಾಳಿದ ಹಿರಿಯ ಬಸಪ್ಪನಾಯಕನು (ಕ್ರಿ.ಶ.೧೬೯೮-೧೭೧೪) ತನ್ನ ಮೇರುಕೃತಿ ಶಿವತತ್ವ ರತ್ನಾಕರದಲ್ಲಿ

ಸಾಕೇತನಗರೇ ನಷ್ಟೇ
ವಿದ್ಯಾರಣ್ಯ ಮುನೀಶ್ವರೈಃ |
ನಿರ್ಮಿತಂ ಚಕ್ರನಗರಂ
ಭೂಪಂ ಹರಿಹರಂ ಪ್ರತಿ || ೪ ||

ತಸ್ಮಿನ್ ಪುರವರೇ ರಮ್ಯೇ
ಶ್ರೀ ದೇವೀ ಚಕ್ರನಾಯಿಕಾ |
ಸಾನ್ನಿಧ್ಯ ಮಕರೋತ್ತತ್ರ
ಶತಂ ವರ್ಷ ಸಹಸ್ರಕಮ್ || ೫ ||
ವಿದ್ಯಾರಣ್ಯ ಮುನೀಂದ್ರಸ್ಯ
ವೃತ್ತಾಂತಮಧುನಾ ಬ್ರವೇ |
ಯೇನವ್ಯಧಾಯಿ ನಗರೀ
ವಿದ್ಯಾನಗರ ಸಂಜ್ಞಿತಾ || ೬ ||

ಅಯೋಧ್ಯಾನಗರ ನಷ್ಟವಾದಾಗ ಹರಿಹರ ಭೂಪನಿಗಾಗಿ ವಿದ್ಯಾರಣ್ಯ ಮುನೀಶ್ವರರಿಂದ ಚಕ್ರನಗರವು ನಿರ್ಮಿತವಾಯಿತು. ಆ ರಮ್ಯವಾದ ಶ್ರೇಷ್ಠ ಪಟ್ಟಣವಲ್ಲಿ ಚಕ್ರನಾಯಿಕಾ ಎನಿಸಿದ ಶ್ರೀದೇವಿಯು ಸಾವಿರ ವರ್ಷಗಳ ಕಾಲ ಸಾನ್ನಿಧ್ಯವನ್ನು ವಹಿಸಿದಳು. ವಿದ್ಯಾರಣ್ಯರಿಂದಲೇ ವಿದ್ಯಾನಗರ (ವಿಜಯನಗರ) ನಿರ್ಮಾಣವಾಯಿತು. (ಶಿ.ತ.ರ iv-೧೨) ೧೩೩೬ರ ಶಾಸನಗಳು ವಿದ್ಯಾರಣ್ಯರ ಸಲಹೆ ಮೇರೆಗೆ 'ವಿದ್ಯಾನಗರ'ವೆಂಬ ನಾಮಕರಣವಾಗಿದ್ದು ಉಲ್ಲೇಖಿಸಿದೆ.[೨] ವಿದ್ಯಾರಣ್ಯರ ಕಾಲಮಾನದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ರಾಬರ್ಟ್ ಸೀವೆಲ್, ಕರ್ನಲ್ ಮೆಕಂಜಿ ಮುಂತಾದವರ ಅಭಿಪ್ರಾಯದಂತೆ, ಭಾರತೀ ಕೃಷ್ಣತೀರ್ಥರ ತರುವಾಯ ಶೃಂಗೇರಿ ಗುರುಪೀಠದಲ್ಲಿ ೧೩೮೦-೮೬ರಂದು ವಿರಾಜಮಾನರಾಗಿದ್ದುದನ್ನು ಸಧ್ಯಕ್ಕೆ ಪರಿಶೋಧನೆಯಲ್ಲಿ ಕಂಡುಬಂದಿದೆ. ಕೆಳದಿ ನೃಪವಿಜಯವೂ ಭಾರತೀ ಕೃಷ್ಣಾಚಾರ್ಯರ್ ಆ ತರುವಾಯ ವಿದ್ಯಾರಣ್ಯ ಯೋಗೀಂದ್ರರ್ ಮತ್ತಮಾ ವಿದ್ಯಾರಣ್ಯರೆಂಬವರ್ ಪಂಪಾ ಕ್ಷೇತ್ರದೊಳಿರ್ದ ಶ್ರೀ ಚಕ್ರೋಪಾಸನೆಯಿಂ ದೇವಿಯಂ ಮೆಚ್ಚಿಸಿ ಬಳಿಕ್ಕಂ ಶೃಂಗೇರಿಯ ಮಠದೊಳ್ ವರ್ತಿಸುತ್ತಿರ್ದ ವಿದ್ಯಾಶಂಕರರಿಂದ ಮಾಶ್ರಮವಂ ಕೈಕೊಂಡು ಭಾಗ್ಯಮಂ ಪಡೆದು ಬಳಿಕ್ಕಂ ದೇವಿಯ ನಿರೂಪದಿಂ ಪಂಪಾಕ್ಷೇತ್ರ ಸಮೀಪದೊಳ್ ವಿದ್ಯಾನಗರಿಯೆಂಬ ಪಟ್ಟಣಮಂ ನಿರ್ಮಾಣಂಗೈಸಿ ಆ ರತ್ನ ಸಿಂಹಾಸನದಲ್ಲಿ ಹರಿಹರ ಬುಕ್ಕರೆಂಬಿರ್ವರ್ ಸಹೋದರರೊಳ್ ಪಿರಿಯನಾದ ಹರಿಹರರಾಯಂಗೆ ಪಟ್ಟಮಂ ಕಟ್ಟಿಸಿ ಪಂಪಾಕ್ಷೇತ್ರಮಾರಭ್ಯ ಕೃಷ್ಣವೇಣೀಪರ್ಯಂತ ಮಿಂದ ರಾಜ್ಯಕ್ಕೆಲ್ಲ ಶ್ರೀ ವಿರೂಪಾಕ್ಷನೆ ಕರ್ತೃ.......[೩].

೧೨೨೮ರಿಂದ ೧೩೩೩ರವರೆಗೆ ಶೃಂಗೇರಿ ಗುರುಪೀಠದಲ್ಲಿದ್ದ ವಿದ್ಯಾಶಂಕರ ತೀರ್ಥರವರಿಂದ ವಿದ್ಯಾರಣ್ಯರು ಆಶ್ರಮ ಪಡೆದ ಉಲ್ಲೇಖನವಿದೆ. ಭಾರತೀ ಕೃಷ್ಣತೀರ್ಥರ ಗುರುಗಳ ಕಾಲದಲ್ಲಿಯೇ ಆಶ್ರಮ ಲಭಿಸಿರಬಹುದಾಗಿದೆ. ಭಾರತೀ ಕೃಷ್ಣತೀರ್ಥರ ಕಾಲ ೧೩೩೩-೧೩೮೦. ಇದರಿಂದ ವಿದ್ಯಾರಣ್ಯರು ಇವರಿಗಿಂತಲೂ ಮುಂಚಿನವರೆಂದು ಕಂಡುಬರುತ್ತದೆ.[೪] ೧೫೪೯ರಿಂದ ೧೬೧೪ರವರೆಗೆ ತಂಜಾವೂರಿನಲ್ಲಿ ಪ್ರಧಾನಮಂತ್ರಿಯಾಗಿದ್ದ ಕನ್ನಡ ಮಂತ್ರಿ ಗೋವಿಂದ ದೀಕ್ಷಿತನ ಚರಿತ್ರೆಯ ಹಸ್ತಪ್ರತಿಯಲ್ಲಿ ವಿದ್ಯಾರಣ್ಯರ ಸಮಾಧಿ ಹಂಪೆ ವಿರೂಪಾಕ್ಷ ದೇವಾಲಯದ ಹಿಂಭಾಗದಲ್ಲಿರುವ ಎತ್ತರ ಪಾರ್ಶ್ವದಲ್ಲಿ ತುಂಗಭದ್ರಾ ನದಿಯ ವಶಿಷ್ಟತೀರ್ಥದ ಬಳಿ ಇರುವುದಾಗಿಯೂ ಸಿದ್ಧಿ ಹೊಂದಿದ ಕಾಲ ಕ್ರಿ.ಶ. ೧೩೮೬ (ಶಾಲಿವಾಹನ ಶಕ ಉಲ್ಲೇಖವಿಲ್ಲ) ಕ್ಷಯ ಸಂವತ್ಸರದ ಜೇಷ್ಠ ಕೃಷ್ಣ ೧೩ ಶನಿವಾರವೆಂಬುದಾಗಿಯೂ ಉಲ್ಲೇಖನಗೊಂಡಿದೆ. ಎಫೆಮೆರೀಸ್ ಪ್ರಕಾರ ೨೬.೫.೧೩೮೬ಕ್ಕೆ ಸರಿಹೊಂದುತ್ತದೆ.[೫] ರಾಮಶರ್ಮ ಎಂ.ಎಚ್.ರವರ ಅಭಿಪ್ರಾಯದಲ್ಲಿ ವಿದ್ಯಾರಣ್ಯರ ಜನನ ಕಾಲ ೧೨೬೮.[೬] ಈ ಮೇರೆಗೆ ೧೧೮ ವರ್ಷ ಜೀವಿತಕಾಲವಾಗುತ್ತದೆ. ಶಿವಾವಧಾನಿರವರ 'ವಿದ್ಯಾರಣ್ಯರ ಜೀವನ' ಕೃತಿಯಲ್ಲಿ ೧೧೯ ವರ್ಷ ಜೀವಿಸಿದ್ದು ಕಂಡುಬರುತ್ತದೆ.[೭] ಜಾರ್ಜ್ ಮಿಚೆಲ್‌ರವರು (George Michell)

Foundation of the city

From the very beginning, the city of Vijayanagara was connected with the sage Vidyaranya, a local Smartha Brahman. Living in the surroundings of Hampi. Vidyaranya performed severe penances and dedicated himself to the goddess Bhuvaneswari who was worshipped in the temples there, with the departure of the Muslims, Hakka and Bukka appealed to Vidyaranya for spiritual advice and, when the need arose, to assist in the choosing of a site for the capital of the new kingdom. The incident which led to the selection of an appropriate site occured in the course of a hunting excursion. One day the two brothers crossed over to the southern side of the Tungabhadra river, then thickly covered with jungle, there, while bent upon the chase, they witnessed the astounding phenomena of the hares turning against the hounds, struck with wonder the princess consulted Vidyaranya who declared the spot fitting for a new city. The coronation of Hakka (as Harihara I) followed soon after and the brothers named the capital 'Vijayanagara'.

Whatever the truth embodied in this legendary account, the story is clearly symbolic; the two princes and their spiritual mentor together chose for the capital of the new Hindu dynasty a site already sanctified as a holy place. There was no attempt to build upon an empire of the past (Hakka and Bukka had few royal pretentions); on the contrary, their desire was to create a new and powerfull kingdom on a fresh site.[೯]

ವಿದ್ಯಾರಣ್ಯರ ಧಾರ್ಮಿಕ ಕೃತಿಗಳು

ವಿದ್ಯಾರಣ್ಯರ ಪೂರ್ವಾಶ್ರಮದ ಹೆಸರು ಮಾಧವಾಚಾರ್ಯ. ಈ ಕಾಲದಲ್ಲಿಯೇ ಈತನಿಂದ ಪರಾಶರ ಸ್ಮೃತಿಯ ಭಾಷ್ಯ ಪರಾಶರ ಮಾಧವೀಯ ಕೃತಿಯು ರಚಿಸಲ್ಪಟ್ಟಿತು. ಪರಾಶರ ಸ್ಮೃತಿಯು ವ್ಯವಹಾರ ಕಾಂಡವನ್ನೊಳಗೊಂಡಿರಲಿಲ್ಲ. ಇದನ್ನು ಮನಗಂಡ ಮಾಧವಾಚಾರ್ಯನು ನ್ಯಾಯಾಡಳಿತವನ್ನೊಳಗೊಂಡ ವ್ಯವಹಾರ ವಿಭಾಗವನ್ನು ಸೇರಿಸಿ ಕೃತಿಯನ್ನು ಪೂರ್ತಿಗೊಳಿಸಿದನು. ಇದರ ಉಪೋದ್ಘಾತದಲ್ಲಿಯೇ -

like Angirasa to Indra, Sumati to Nala, Medha to saibya, Dhanuja to Rama Madhava was the Kulaguru as well as the minister to king Bukka Harihara I and his younger brother Bukka I gave to the name of their capital the name of their guru and called it Vidyaranya.

ಎಂದು ಇತಿಹಾಸದಿಂದ ವ್ಯಕ್ತಪಟ್ಟಿದೆ.[೧೦] ಮಾಧವನ ಸಹೋದರರು ಸಾಯಣ, ಭೋಗನಾಥ, ವಿದ್ಯಾರಣ್ಯರ ಸಮಕಾಲೀನರು ವೇದಾಂತ ದೇಶಿಕಾಚಾರ್ಯರು, ಮಾಧವಾಚಾರ್ಯ ವಿದ್ಯಾರಣ್ಯರಾದ ಮೇಲೆ ತಾತ್ಪರ್ಯ ದೀಪಿಕಾ (ಸೂತ ಸಂಹಿತೆ ವ್ಯಾಖ್ಯಾನ)

ರಚಿಸಿದ್ದಾರೆ. ವಿದ್ಯಾರಣ್ಯರ ಕಾಲದಲ್ಲಿ ಬೆಳಕು ಕಂಡ ವೈದೀಕ ಸಾಹಿತ್ಯ ಕೃತಿಗಳು ವಿಶ್ವಖ್ಯಾತಿ ಗಳಿಸಿವೆ. ವೇದ ಭಾಷ್ಯ ಹಾಗೂ ಧರ್ಮಶಾಸ್ತ್ರ, ತತ್ವಜ್ಞಾನಗಳು ದೇಶ ವಿದೇಶಗಳಲ್ಲಿ ಇವರ ಹೆಸರನ್ನು ಅಜರಾಮರವಾಗಿಸಿವೆ. ಅಂದಿನ ಕಾಲದ ಪೌರಸ್ತ್ಯ ವಿದ್ವಾಂಸರು ಭಾರತದ ವೇದಾಂತ ಜ್ಞಾನಗಳಿಗೆ ವಿದ್ಯಾರಣ್ಯರನ್ನೇ ಹೆಚ್ಚಾಗಿ ಅವಲಂಬಿಸಿದರು. ದಿ. ಎಂ.ಎಚ್.ರಾಮಶರ್ಮರವರೇ ಅಭಿಪ್ರಾಯಪಟ್ಟಂತೆ

Side by side with these political events the empire was pulsating with great religious and literary activities, under the patronage of the king, and largely at his suggestion, Vidyaranya planned extra ordinary schemes for the revival of religious learning irrespective of religious opinions. He invited scholors from far and near and gave them every convenience and encouragement and then set them to work on a variely of subjects such as logic, grammar, astronomy, philosophy and vedic theology. The volume of work turned out under his supervision has been the wonder of the whole of India, among his works.

1. Sarvadarshana Sangraha (There is reason to suppose that these were completed in his earlier years).
2. Shankara Digvijaya
3. Manusmruti Vyakhyana
4. Jaiminiya Dhatuvruthi
5. Vivarana Prameya
6. Vedanta Panchadashi
7. Deshopanisad Dipika
8. Vyavahara Madhava
9. Kalam Madhava
10. Anubhuti Prakasha
11. Devi Aparadha Kshamapana Stotra

And a number of small stotras stand out. Sayanacharya, the brother of Vidyaranya was an equally able scholor. No less than 113 works are attributed to him, of these

1. Subhashita Sudhanidhi
2. Alankara Sudhanidhi
3. Kaivalyapanishad Dipika
4. Dattaka Mimamsa
5. Pancharudriyataka
6. Paniniya Shishya Sastra
7. Poorusha Sukta Tika
8. Atmaneelina Viveka

ವಿದ್ಯಾರಣ್ಯರ ತಮ್ಮ ಭೋಗನಾಥನು ಶಾ.ಶ ೧೨೫೦ (೧೩೨೮ A.D)ರಲ್ಲಿ ವಿದ್ಯಾತೀರ್ಥರಿಂದ ಅನುಗ್ರಹ ಪಡೆದು ಸನ್ಯಾಸ ದೀಕ್ಷೆ ಹೊಂದಿದನು. ಈತನ ಕೃತಿಗಳು

೧. ಮಹಾಗಣಪತಿ ಸ್ತೋತ್ರ ೨. ರಾಮೋಲ್ಲಾಸ ೩. ತ್ರಿಪುರ ವಿಜಯ ೪. ಶೃಂಗಾರ ಮಂಜರಿ ೫. ಉದಾಹರಣ ಮಾಲಾ ೬. ಮಹಾಗಣಪತಿಸ್ತವ ೭. ಶೃಂಗಾರ ಮಂಜರಿ ೮. ಗೌರೀನಾಥಾಷ್ಟಕ ೯. ದೃದ್ಸ್ರುಶ್ಯ ವಿವೇಖ ೧೦. ಪಂಚದಶಿಯ ಭಾಗ ೧೧. ಸರ್ವದರ್ಶನ ಸಂಗ್ರಹ.[೧೧]

ವಿದ್ಯಾರಣ್ಯ ಮತ್ತು ಸಾಯಣಚಾರ್ಯರ ನೇತೃತ್ವದಲ್ಲಿ ವೇದ, ಉಪನಿಷತ್ತು, ಆರಣ್ಯಕ - ಬ್ರಾಹ್ಮಣ ವ್ಯಾಖ್ಯಾನ ಕೃತಿಗಳು ಬೆಳಕು ಕಂಡಿವೆ. ಭಾಷ್ಯದ ಉಪೋದ್ಘಾತವನ್ನು ಮಾಧವಾಚಾರ್ಯರೇ (ವಿದ್ಯಾರಣ್ಯರೇ) ರಚಿಸಿದರು.

ಈ ಕೆಳಗಿನ ಹಸ್ತಪ್ರತಿ ಸೂಚಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

1. Descriptive catalogue of Sanskrit Manuscripts oriental Research Institute, Mysore Vol I
2. ಅದೇ, vol 3, (iii)
3. ಅದೇ, vol - vi
4. ಅದೇ, vol - ix
5. Alphabetical list of Mycrofilms in the oriental Research Institute, Mysore up to July 1972, vol iv no.2, C.S.Srinivasan.
6. Catalogue descriptif des manuscripts Institut Francais D Indologie vol I Pondichery, 1986
7. ವೈದೀಕ ಅಪ್ರಕಟಿತ ಗ್ರಂಥಗಳು - ಕರ್ನಾಟಕ ಭಾರತಿ ಸಂ.iv ಸಂ.೩, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
8. ಜಗದ್ಗುರು ಮೂರು ಸಾವಿರ ಮಠದ ವರ್ಣನಾತ್ಮಕ ಹಸ್ತಪ್ರತಿ ಸೂಚಿ (ಹುಬ್ಬಳ್ಳಿ) ಕೆಳದಿ ಗುಂಡಾಜೋಯಿಸ್
9. ಕೆಳದಿ ಸಂಶೋಧನಾಲಯದ ಮುಖಾಂತರ ಶೃಂಗೇರಿ ಮಠದಲ್ಲಿರುವ ಓಲೆಗರಿ ಹಸ್ತಪ್ರತಿ ಸಿದ್ಧಪಡಿಸಿದ (Hand list) ಹ್ಯಾಂಡ್ ಲೀಸ್ಟ್
10. ಶ್ರೀಮನ್ಮಹಾರಾಜರು ಮೈಸೂರು ಅರಮನೆಯ ಸರಸ್ವತಿ ಭಂಡಾರದಲ್ಲಿರುವ ವಿದ್ಯಾರಣ್ಯ ಕಾಲದ ಹಸ್ತಪ್ರತಿ ಸೂಚಿ (Catalogue).
11. Catalogue of palm leaf Manuscripts in the Keladi Research Centre, Keladi Gundajois and Dr. Visweswara
12. Catalogue of Ancient Tigalari palm leaf Manuscripts in India, Vol I; Keladi Gundajois, Government of India.
13. ತುಳು ಲಿಪಿ ಹಸ್ತಪ್ರತಿಗಳ ಸೂಚಿ ಧರ್ಮಸ್ಥಳ.
14. Science Texts in Sanskrit in the Manuscripts Repositories of Kerala and Tamilnadu.

15. Catalogue old manuscripts in Sanskrit in the collection of the Sanathan Dharma Sabha, Ahmadnagar.
16. Catalogue of Sanskrit manuscripts in the Deccan Collage Post Graduate and Research Institute, Poona, Vol III 1966, Dharma Sastra Manuscripts; Edited by Madhukar Mangesh Patkar.
17. Gaikwads Oriental series vol xcvii; An Alphabetical list of manuscripts in the OI, Baroda, vol I, compiled by Raghavan Nambiyar, Shiromani, Nyayabhushana, Catalogue Assistant Oriental Research Institute Baroda, Baroda OI 1942.
18. Gaikwads Oriental Series No cxiv - publish under the authority of the Maharaja, Sayyaji Rao, University of Baroda: General Editor: B.Bhattacharyya, M.A., Ph.D., An Alphabetical list of manuscripts in the OI, Baroda - vol II.

ಇವುಗಳಲ್ಲಿ ಕೇವಲ ವಿದ್ಯಾರಣ್ಯರಿಗೆ ಸಂಬಂಧಿಸಿದ ಹಸ್ತಪ್ರತಿಗಳ ವಿವರಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ. ಇವುಗಳಲ್ಲದೆ ತಿರುಪತಿ, ತಂಜಾವೂರು, ಕಾಶ್ಮೀರ, ನವದೆಹಲಿ ಆದಿಯಾಗಿ ೧೦೮ ಪ್ರಾಚ್ಯಕೋಶಾಗಾರಗಳಲ್ಲಿಯೂ ಹಾಗೂ ಲಂಡನ್‌ನ ಇಂಡಿಯಾ ಆಫೀಸ್ ಗ್ರಂಥ ಭಂಡಾರ, ಬ್ರಿಟಿಷ್ ಮ್ಯೂಜಿಯಂ ಆದಿಯಾಗಿ ಕಠ್ಮಂಡು. ಜರ್ಮನಿಯಲ್ಲಿರುವ ಬರ್ಲಿನ್ ಮುಂತಾದ ಸುಮಾರು ೨೭ ವಿದೇಶಗಳ ಪ್ರಾಚ್ಯ ಕೋಶಾಗಾರಗಳಲ್ಲಿರುವ ಭಾರತೀಯ ಹಸ್ತಪ್ರತಿಗಳು ಸರ್ವೇಕ್ಷಣಾಧ್ಯಯನಕ್ಕೆ ಯೋಗ್ಯವಾಗಿವೆ.[೨] ಡಾ. ವಿ.ರಾಘವನ್‌ರವರು ೧೯೫೩-೫೪ರಲ್ಲಿ ವಿದೇಶಗಳಲ್ಲಿರುವ ಭಾರತದ ಹಸ್ತಪ್ರತಿಗಳ ಸರ್ವೇಕ್ಷಣೆಯಲ್ಲಿ ಕ್ಯಾಟಲಾಗ್ ಆಗಿಲ್ಲದ ಹಸ್ತಪ್ರತಿಗಳ ಸಂಖ್ಯೆ ಸುಮಾರು ೨೦,೦೦೦ ವಿದ್ದರೆ, ಜರ್ಮನಿಯ ಹೀಡಲ್ ಬರ್ಗ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಪರಮೇಶ್ವರ ಅೈತಾಳ್‌ರವರು ತಮ್ಮ ಸರ್ವೇಕ್ಷಣೆಯಲ್ಲಿ ಇದು ೯೦,೦೦೦ರವರೆಗೂ ಹೆಚ್ಚಿರುವುದು ತಮ್ಮ ಗಮನಕ್ಕೆ ಬಂದಿರುವುದಾಗಿ ೧೯೭೭ರಲ್ಲಿ ಅಂತರರಾಷ್ಟ್ರೀಯ ಸಂಸ್ಕೃತ ವಿಶ್ವ ಸಮ್ಮೇಳನದಲ್ಲಿ ಪ್ರಬಂಧವನ್ನು ಮಂಡಿಸಿ ತಿಳಿಸಿದ್ದಾರೆ. ಅವರು ಮುಂದುವರಿದು

Though there are excellent descriptive catalogue for manuscripts in the order collections, no reliable information is available about the manuscripts collected after the publication of order catalogues. In Germany, under the project "Verzeichnib der orientalischen Handschriften in Deutschland" about 2500 MSS, (4380 titles) have been described. In England, a project (in which I am also involved) of preparing descriptive catalogues of Sanskrit MSS (ca, 7000) of "Chundra Shum Shere collection" purchased from Benares and now deposited in the Bodleian library, oxford, is in progress.

ಈ ರೀತಿ ತಿಳಿಸಿದ್ದಾರೆ. ಇದೇ ರೀತಿಯಲ್ಲಿ ಕಳೆದ ೩೦ ವರ್ಷಗಳ ಹಿಂದೆ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಯೋಜನೆಯೊಂದರಲ್ಲಿ ನನ್ನಲ್ಲಿ ಕನ್ನಡವನ್ನು ಕಲಿತು, ಇಲ್ಲಿಯೇ ಹಲವು ವರ್ಷಗಳವರೆಗೆ ನೆಲೆಸಿ, "Religious in South East Asia" ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದ ಡಾ. ಎಡ್ವರ್ಡ್ ಬಿ. ಹಾರ್ಪರ್ ಹಾಗೂ ಲ್ಯೂಯಿಸ್ ಜಿ. ಹಾರ್ಪರ್‌ರವರು, ಈ ಪ್ರಾಂತದ ಹಳ್ಳಿಗಳಲ್ಲಿ ಕೊಂಡಕೊಂಡಿದ್ದ ಪ್ರಾಚೀನ ಹಸ್ತಪ್ರತಿಗಳನ್ನು ಅಮೇರಿಕಾಕ್ಕೆ ಸಾಗಿಸಿದ್ದು ನನ್ನ ಗಮನಕ್ಕೆ ಬಂದಿತು. ಡಾ.ಲ್ಯೂಯಿಸ್ ಜಿ. ಹಾರ್ಪರ್‌ರವರಲ್ಲಿ ಪ್ರಸ್ತಾಪಿಸಿದಾಗ ಓಲೆಗರಿ ಹಸ್ತಪ್ರತಿಯೊಂದನ್ನು ಮೈಕ್ರೋಫಿಲ್ಮ್ ಮಾಡಿಕೊಂಡು ಅದನ್ನು ಇಲ್ಲಿಗೇ ಬಂದು ನನಗೆ ಹಿಂದಿರುಗಿಸಿರುವುದನ್ನು ನನ್ನ ಕೃತಿಯಲ್ಲಿ ಅವಲೋಕಿಸಬಹುದಾಗಿದೆ.[೧] ಲೇಖನ ವಿಸ್ತಾರ ಭಯದಿಂದ ವಿರಮಿಸಲಾಗಿದೆ.

ಪ್ರಾಚೀನ ಅಥರ್ವಣವೇದ ಹಸ್ತಪ್ರತಿ

ವಿಜಯನಗರ ವಿದ್ಯಾರಣ್ಯರ ಶಿಷ್ಯರ ಶಿಷ್ಯರು ಅಥರ್ವಣವೇದ ಕೃತಿಯ ಓಲೆಗರಿ ಹಸ್ತಪ್ರತಿಯೊಂದು ನನ್ನ ಸರ್ವೇಕ್ಷಣೆಯಲ್ಲಿ ಲಭಿಸಿದ್ದು, ಅದನ್ನು ಸಂಕ್ಷಿಪ್ತವಾಗಿ ನಿರೂಪಿಸಿ ಪರಿಚಯಿಸಲಾಗಿದೆ.

ಪ್ರಮಾಣ : ಉ ೧೫.೭ x ಅ ೪.೮ ಸೆ.ಮೀ.;
ಲಿಪಿ : ಕನ್ನಡ ; ಭಾಷೆ : ಸಂಸ್ಕೃತ ; ಅಸಮಗ್ರ ;
ಸಾಲು : ೧೪ ; ಅಕ್ಷರ : ೨೮ ; ಪತ್ರ ಸಂಖ್ಯೆ : ೬೨
ಲಿಪಿಕಾರ : ? : ಕಾಲ : ಸುಮಾರು ೧೬-೧೭ನೇ ಶತಮಾನ.

ಆದಿ : ಮುಂಭಾಗ

ಸಾಲು - ೧ ಸ್ವಸ್ತಿ ಶ್ರೀ ಗಣಾಧಿಪತಯೆನಮಃ || ಶ್ರೀ ವೇದವ್ಯಾಸಾಯ ನಮಃ || ಶ್ರೀ ವಿದ್ಯಾರಣ್ಯಗುರವೆ
೨ ನಮಃ ಭಿಶ್ಚ ಪರಿಗ್ರಾಹ್ಯ ಪುರಾವ್ಯಾಸೇನ ನಿರ್ಮಿತಾ ಭುಕ್ತಿ ಮುಕ್ತಿಪ್ರದಾಬಾಲಾಪದ್ಮ
೩ ತಿಮಂತ್ರಸಂಮಿತಾ ||೧|| ವಿದ್ಯಾರಣ್ಯೆನ ಕಥಿತಾ ಶಿಷ್ಯಾಭ್ಯಃ ಸಂಪ್ರದಾಯನಿ| ಉಷಸ್ಯುದ್ಧಾಯ ಶಿರ
೪ ನತ್ವಾ ಶ್ರೀಗುರುಪಾದುಕಾಂ | ಅಖಂಡ ಮಂಡಲಾಕಾರ ಮಿತ್ಯಾದಿನಾತತೊಬಹಿರ್ನಿ
೫ ರ್ಗತ್ವಾ ದೆಹಧರ್ಮಾಣಿಕಾರಯೆತ್ | ಪಾದ (ಉ) ಪ್ರಕ್ಷಾಳ್ಯಚಾಚಮ್ಯ ಸಂಧ್ಯಾವಂ
೬ ದನಮಾರಚ್ಮಿತ್ | ತತಃಕಿಂಚಿತ್ ದಕ್ಷಪಾಣಿನಾದಾಯ ದೆಶಿಕಃ | ವಾಮಾಂಗುಲಿಭಿ

೭ ರಾವ್ಯಾದ್ಯ ಸಪ್ತಧಾ ಮೂಲಿವಿದ್ಯಯಾ | ಯಿಡಯಾತೊಯಮಾಕೃಷ್ಯ ಕುಂಭಕೆಕ್ಷಾಳನೆ

೮ ನಹಿ | ತದ್ವಾಳಂ ಜಳಾಕಾರಂತೆ ಚಯತ್ ಪಿಂಗಲಾಧ್ವನಾ | ರೆಚಿತಂ ವಜ್ರಪಾಷಾಣಿ |

೯ ಪ್ರಕ್ಷಿಪೆದಸ್ತ್ರಮಂತ್ರತಃ | ವಾಮೆನ ಪಾಣಿನಾವಾರಿ ಸಮಾದಾಯ ಯಥಾಪುರಾ | ಅಭಿ

೧೦ ಮಂತ್ರತತಸ್ತೊಯಂ ನಿಸ್ಸರೆತ್ ಮೂಲವಿದ್ಯಯಾ | ಸಪ್ತಧಾ ಪ್ರೊಕ್ಷಯೆದಾತ್ಮಾತ (ಸೌ) ಮೂರ್ಧ್ನಿಚ ಸಾಧಕಃ

೧೧ ತತ್ವತ್ರಿತಯ ಮಂತ್ರಶ್ಚ ಚತುರ್ವಾರಂ ಪಿಚಿತ್‌ಷಯಃ | ಅರ್ಧಮಂಜಲಿನಾದಾಯ ಗ್ರಾಯತ್ರ್ಯಾತ್

೧೨ (ತ್ರುಟಿತ) ತ್ರಿರುಕ್ಷಿಪೆತ್ ಯಥಾಶಕ್ತಿ ಜಪೆದ್ಧವಿಗಾಯಿತ್ರಿಂ ಸಮನಂತರಂ| ಸೂರ್ಯಾರ್ಘ್ಯಂಚ ತ್ರಿಧಾ

ಅಂತ್ಯ : ಪತ್ರ ಸಂಖ್ಯೆ ೬೦ ಹಿಂಬಾಗ

ಸಾಲು ೧ ತಃ | ತತಃ ಶಾದ್ವದಳಂ ಕಾರ್ಯಂ ಬಿಜಯಂತ್ರಂ ಮನೊರಮಂ | ಸಕಾರಂ ಸದಿಸರ್ಗ

೨ ೦ತಂ ದಳೆ ಪ್ರತ್ಯೆಕ ಶೂನ್ಯಸೆತ್ | ಸಂಪೂಜ್ಯ ವಿಧಿರ್ವಪಶ್ಚಾ ಬಾಹುಮೂಲೆಗಳೆಧವಾ |

೩ ಧಾರಯೆದ್ಯಂತ್ರ ರಾಜೀಕ್ತಂ ಲೊಹತ್ರಿತಯವೇಷ್ಟಿತಂ | ಶಂಕಿಂನ್ಯೊವಾಥಡಾಕಿಂನ್ಯೊ

೪ ಬಾಲಗ್ರಹಸ್ತಥ್ಯೆವಚ x ಭಂತಿಬಾಲಕಾಮುಕ್ತ್ವಾ ಯಂತ್ರರಾಜಸ್ಯದಾ

೫ ರಣಾತ್ ಯಿತಿ ಬಾಲಕಾರಂ ಯಂತ್ರಂ

ವಿಶೇಷ ವಿಷಯ : ೫ನೇ ಪತ್ರದ ಹಿಂಭಾಗದಲ್ಲಿ ಸಮಯಾಷ್ಟಕಂ ಸಂಪೂರ್ಣಂ ಖಾಲೀ ಪತ್ರದ ಹಿಂಭಾಗದಲ್ಲಿಯೂ ನಾನಾಪ್ರಯೋಗ, ನಿಧಿದರ್ಶನ, ಸುದರ್ಶನ ಯಂತ್ರ (೧೨ ಮುಂ), ಶ್ರೀಚಕ್ರಂ (೧೪ ಹಿಂ) ಹೇರಂಬ ಗಣಪತಿ (೨೦ ಹಿಂ) ಶ್ರೀ ಮಹಾಲಕ್ಷ್ಮಿ ಹೃದಯ ಮಂತ್ರ (೨೪ ಮುಂ), ಜ್ಯೋತಿಷ್ಮತಿ ಕಲ್ಪಃ ಸಮಾಪ್ತಃ (೩೪ ಮುಂ) ವಿವಾದ ವಿಜಯ ಯಂತ್ರಃ (೪೨ ಮುಂ), ಅಂತರ್ಬಲ ಸುಲಕ್ಷಣಂ (೪೪ ಹಿಂ) ಯಂತ್ರವ್ಯೆ ಬೀಜ ಸಂಪುಟಂ (೪೬ಮುಂ) ಅಥರ್ವಣಸ್ಯ ವೆದಸ್ಯ ಸಾರಾತ್ಸಾರ ಸಿವಂ ಮಹತ್ (೪೬ ಹಿಂ) ಅಥರ್ವಣವೇದ ಕೃತಿಗಳು (೪೭ ಮುಂ.ಹಿಂ) ಶ್ರೀಚಕ್ರ (೪೮ ಹಿಂ) ವೈಶ್ಯಾಧಿಕಾರೇ ಚತುರ್ಥ ಪೀಠಿಕಾಯಾಂ ವಿವಾದ ವಿಜಯಂ ನಂಮ ಸಪ್ತಮ ಯಂತ್ರಂ ಯಂತ್ರಂ ಚಿಂತಾಮಣಿ (೫೫ ಹಿಂ) ದಾಮೋದರ ವಿರಚಿತೆ ವಶ್ಯಾಧಿಕಾರ ಪೀಠಿಕೆ ಮುಂತಾದ ವಿವರಣೆಗಳೊಂದಿಗೆ ಈ ಅಪೂರ್ವ ತಾಳೆಯೋಲೆ ಒಳಗೊಂಡಿದೆ.

ಅಥರ್ವಣವೇದ

ವೇದಗಳ ಸಾಂಸ್ಕೃತಿಕ ಇತಿಹಾಸದಲ್ಲಿ ಅಥರ್ವಣವೇದವೂ ಸೇರಿದೆ. ವೇದಕಾಲದ ಕೃಷ್ಣೇಂದ್ರಜಾಲ, ಶತ್ರುಮಾರಣ ಮುಂತಾದ ತಾಂತ್ರಿಕ ಸಾಹಿತ್ಯಗಳು ಅಥರ್ವಣವೇದದಲ್ಲಿ ಅಗ್ರಶ್ರೇಣಿಯಲ್ಲಿವೆ. ವೇದದ ಸಾಲಿನಲ್ಲಿ ಅಥರ್ವಣವೇದವನ್ನು ಪರಿಗಣಿಸಲು ವಿದ್ವಾಂಸರಲ್ಲಿಯೇ ಭಿನ್ನಾಭಿಪ್ರಾಯವಿದೆ. ಆಗಮ ಮತ್ತು ತಂತ್ರಶಾಸ್ತ್ರಗಳಾಗಿ ರೂಪುಗೊಂಡ ಸಂಸ್ಕೃತಿಯ ಪೂರ್ವಾವಸ್ಥೆಯಿದೆಂದು ಹೇಳಬಹುದು. ಭೂತ ಪಿಶಾಚಗಳ ಉಚ್ಚಾಟನೆ, ವ್ಯಭಿಚಾರ, ದಂಪತಿ ಭೇದ, ಸ್ತ್ರೀಪುರುಷರಲ್ಲಿ ಮಧ್ಯತ್ವ, ಕ್ಲೀಬತ್ವಗಳ ಪ್ರೇರಣೆ, ಶತೃಪೀಡನೆ ಹಾಗೂ ನಿವಾರಣೆ, ಅಭಿಚಾರಗಳು, ಕೃತ್ಯಾಪರಿಹರಣ ಮುಂತಾದ ವೈದೀಕ ಮಂತ್ರ ಸಾಹಿತ್ಯಗಳು ಅಥರ್ವಣ ವೇದದಲ್ಲಿ ಉಪಲಬ್ಧವಿವೆ.[೧೪] ಅಥರ್ವಣ ವೇದವನ್ನು ಬೋಧಿಸುವ ಅಗ್ರಹಾರ ಕುರಿತಂತೆ ತಾಮ್ರಶಾಸನಗಳು ಮದರಾಸ್ ಸರಕಾರದ ಮ್ಯೂಜಿಯಂನಲ್ಲಿದ್ದು ಕ್ಯಾಟಲಾಗ್‌ನಲ್ಲಿ ಈ ಕೆಳಕಂಡಂತಿದೆ.

Five copper plates received from the collections of Godavari. They are strung on a ring having a worn out seal.

The Inscription is in Sanskrit, the script employed being Chalukyan.

The plates record that, at the request of his chief Indra, Raja Prithivimula, son of Maharaja Prabhakara Visruta, gave the village of Chuyipaka, having constructed an agrahara to forty three families of Brahmans, who studied the Atharvana Veda.

The grant was issued from the city of Kaudali. The village granted was situated in the Talupaka Vishaya.

The grant was made on the third day in the month of Vaishaka in the twenty fifth year of the reign of Prithivimula. (S.L.I. No. 78)

(B.B.R.A.S., 1883-85, vol. xxi, p. 114).[15]

ಫ್ರಾನ್ಸ್ ದೇಶದ ವಿದ್ವಾಂಸರಾದ ಡಾ. ಪೀರ್ರೆ ಫಿಲಿಯೋಜಾಟ್‌ರವರು (Pierre Filliozat) -

- And we have to consider that the role of Vidyaranya in the religious sphere may have been still more important than in the political field. Madhava and Sayana were two brothers, sons of Mayana. Under the invitation of the kings, Bukka and Harihara II, Madhava made his brother Sayana compose and organise the composition of a vast corpus of commentatorial literature on vedic texts, from Samhitas up to upanishads. The attitude of Sayana and his team towards the vedas is first that of erudites who have studied and interpreted the letter of the text with the help of grammar, logic and exegesis which are the three cardinal disciplines of the traditional schools of pundits. This is a corpus learning

which has a great rational value. And it is a landable achievement of these early Vijayanagara Kings to have given a great impetus, to shastraic studies, which have maintained a tradition of intensive intellectual work up to our days.

A second point in Sayana's attitude towards vedic literature is the emphasis on rituals. His interpretations are done mostly from the point of view of rites. And it has been stated that his time is a period of renaissance of vedic rituals with regard to Jnanakhanda, i.e. metaphysical and theological speculations of Upanishads, Sayana followed the monistic doctrine of Shankara, Vidyaranya, which is certainly the name taken by Madhava at the time of Sannyasa, is a name associated with remarkable development of Shankaras doctrine.[೧೬] ಹೀಗೆ ನಿರೂಪಿಸಿದ್ದಾರೆ.

ಉಪಸಂಹಾರ

ವಿದ್ಯಾರಣ್ಯರ ಪೂರ್ವಾಶ್ರಮದ ಮಾಧವಾಚಾರ್ಯರು ವಿಜಯನಗರದಲ್ಲಿಯೇ ಜನ್ಮತಾಳಿ ಸಂಸ್ಕಾರವಂತ ಮಾನವ ಕೋಟಿಗೆ ಶ್ರೇಷ್ಠ ಕೊಡುಗೆ ನೀಡಿದ್ದಾರೆ. ಶ್ರೇಷ್ಠಜ್ಞಾನಿ ತನ್ನ ಸಮಕಾಲೀನರಿಗೆ ಅಥವಾ ಭಾವೀ ಪೀಳಿಗೆಗೆ ನೀಡಬಹುದಾದ ಮಹತ್ವದ ಕೊಡುಗೆಯಿದು. ವಿದ್ಯಾರಣ್ಯ ಸಹೋದರರು ಚತುರ್ವೇದಗಳಿಗೆ ನೀಡಿದ ಭಾಷ್ಯ ಅತ್ಯಂತ ಔನ್ನತ್ಯದ ಸಾಂಸ್ಕೃತಿಕ ದಾಖಲೆಗಳಿಗೆ ಉಳಿದಿವೆ. ಅಂದಿನ ಅವರ ಜ್ಞಾನ ಭಂಡಾರಗಳು ಇಂದಿಗೂ ಹಸ್ತಪ್ರತಿ ರೂಪದಲ್ಲಿ ಅಧ್ಯಯನ ಶೀಲರಿಗೆ ಉಳಿದಿವೆ. ವಿದ್ಯಾರಣ್ಯರನ್ನು ಆದರ್ಶವಾಗಿರಿಸಿಕೊಂಡು ತಂಜಾವೂರಿನ ಪ್ರಧಾನಮಂತ್ರಿ ಗೋವಿಂದ ದೀಕ್ಷಿತರೂ ಹದಿನೇಳನೆ ಶತಮಾನದಲ್ಲಿ ಕೃತಿಗಳನ್ನು ರಚಿಸಿ, ಖ್ಯಾತನಾಮರಾಗಿದ್ದಾರೆ. ಕನ್ನಡಿಗರಾದ ಇವರ ಚರಿತ್ರೆಯು ಕನ್ನಡಿಗರಿಗೇ ಪರಿಚಯವಿಲ್ಲದಂತಾದುದು ದುರ್ದೈವ! ತಮಿಳುನಾಡಿನಲ್ಲಿ ಪ್ರಜೆಗಳ ಹಿತಕ್ಕಾಗಿ ಕೈಗೊಂಡ ಇವರ ಆರ್ಥಿಕ, ಸಾಮಾಜಿಕ, ಧಾರ್ಮಿಕ ಕಾರ್ಯಗಳು ಅಪಾರವಾಗಿದ್ದು ಅವಶೇಷಗಳಾಗಿವೆ. ಮದರಾಸಿನ ಅಡ್ಯಾರ್ ಗ್ರಂಥಾಲಯದಲ್ಲಿರುವ ಗೋವಿಂದ ದೀಕ್ಷಿತರ ಜೀವಿಕ ಚರಿತ್ರೆಯೊಂದು ನನಗೆ ಲಭಿಸಿದ್ದು, ತಿರುಪತಿಯ ಆರ್ಥಿಕ ಸಹಾಯದಿಂದ ಪ್ರಕಟವಾಗಿದೆ. ವೈದೀಕ ಸಾಹಿತ್ಯ ಆರಂಭಗೊಂಡು ಖಗೋಳ, ಗಣಿತ, ಜ್ಯೋತಿಷ್ಯ, ಧರ್ಮಶಾಸ್ತ್ರ, ಕಾವ್ಯ, ಮೀಮಾಂಸ, ವ್ಯಾಕರಣ, ತತ್ವದರ್ಶನವೆಲ್ಲವೂ ವಿದ್ಯಾರಣ್ಯರ ಕಾಲದಲ್ಲಿ ಉನ್ನತಕ್ಕೇರಿ ರಾರಾಜಿಸಿದುವು.

ಭಾರತಾದ್ಯಂತವೂ ಪ್ರಾಚ್ಯ ಕೋಶಾಗಾರಗಳಲ್ಲಿ ಸುಮಾರು ೧೬೭ಕ್ಕಿಂತಲೂ ಹೆಚ್ಚಾದ ವಿದ್ಯಾರಣ್ಯರಿಗೆ ಸಂಬಂಧಿಸಿದ ಹಸ್ತಪ್ರತಿಗಳು ಸಧ್ಯಕ್ಕೆ ಕಂಡುಬಂದಿದ್ದು ಇನ್ನೂ ಹೆಚ್ಚಾಗಿರಲು ಸಾಧ್ಯತೆಯಿದೆ. ಉಪಲಬ್ಧಿ ಹಸ್ತಪ್ರತಿ ಸೂಚಿಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ. ಈಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ಸಂಶೋಧನಾ ಸಂಸ್ಥೆಯಿಂದ ವಿದ್ಯಾರಣ್ಯರ

'ಪುರಾಣಸಾರಃ' ಕೃತಿ ಪ್ರಕಟಗೊಂಡಿದೆ. ನನ್ನ ಸರ್ವೇಕ್ಷಣೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಶ್ರೇಷ್ಠ ವಿದ್ವಾಂಸ ವಿದ್ವಾನ್ ರಾಮಚಂದ್ರಶಾಸ್ತ್ರಿ ಸೂರಿರವರು ನನಗೆ ಉದಾರವಾಗಿ ದಾನವಾಗಿತ್ತ ತಿಗಳಾರಿ ಲಿಪಿ ೪೫೦ ಹಸ್ತಪ್ರತಿಗಳಲ್ಲಿ ಸುಮಾರು ೨೫ ಹಸ್ತಪ್ರತಿಗಳು ವಿದ್ಯಾರಣ್ಯರ ಕಾಲದ್ದೆಂದು ಕಂಡುಬರುತ್ತವೆ.[೧೬] ವಿದ್ಯಾರಣ್ಯರ ಕಾಲದ ಹಸ್ತಪ್ರತಿಗಳ ಸಮಗ್ರ ಸರ್ವೇಕ್ಷಣೆ ಕೈಗೊಂಡು ಸೂಚಿಗಳ ಬೃಹತ್ ಸೂಚಿ (Caatalogues catalogorum) ಸಿದ್ಧಪಡಿಸುವುದು ಅಗತ್ಯ ಕರ್ತವ್ಯಗಳಲ್ಲೊಂದಾಗಿದೆ. ಮೈಸೂರು ಮಹಾರಾಜರ ಅರಮನೆ ಸರಸ್ವತೀ ಭಂಡಾರದಲ್ಲಿರುವ ನಂ. ೨೩೩, ೨೩೪, ೨೬೦, ೧೪೩೩ ಹಾಗೂ ನಂ. ೧೯೪೪ರ ಧರ್ಮಸ್ಥಳದ ತುಳುಲಿಪಿ ಹಸ್ತಪ್ರತಿ ಸೂಚಿಗಳಲ್ಲಿ ಕ್ರಮವಾಗಿ ಕಾಲನಿರ್ಣಯ, ಲಘುಕಾಲ ನಿರ್ಣಯ, ವೈಯಾಸಿಕ ನ್ಯಾಯಮಾಲಾ ಮತ್ತು ಅಧಿಕರಣಮಾಲಾ ಕೃತಿಕಾರರುಗಳು ಭಾರತೀತೀರ್ಥ ಮತ್ತು ಮಾಧವಾಚಾರ್ಯ ಎಂದಿದ್ದುದು ಈರ್ವರೂ ಸೇರಿ ಕೃತಿರಚನೆ ಮಾಡಿದ್ದರೇ ಎಂಬ ಬಗ್ಗೆ ಸಂದೇಹ ತಲೆದೋರುತ್ತದೆ. ಮುಂದಿನ ಘನೀಕೃತ ಆಕರಗಳು ಕಂಡುಬರುವವರೆಗೂ ಪ್ರಕೃತ ಲಭಿಸಿದ ಹಸ್ತಪ್ರತಿಗಳು ವಿದ್ಯಾರಣ್ಯರ ಕಾಲದ ಸಾಹಿತ್ಯಗಳಲ್ಲಿ ಸಮ್ಮಿಳಿತಗೊಂಡಿವೆ. ಇವುಗಳನ್ನು ಮೂಲದಲ್ಲಾಗಲೀ ಅಥವಾ ಮೈಕ್ರೋಫಿಲಂ ರೂಪದಲ್ಲಾಗಲೀ ಶೇಖರಿಸಿ ಮುಂದಿನ ಪೀಳಿಗೆಗೆ ಸಂರಕ್ಷಿಸುವುದು ಆದ್ಯ ಕರ್ತವ್ಯ. ಹಲವು ಹಸ್ತಪ್ರತಿಗಳಲ್ಲಿ ಸಾಯಣ ಮಾಧವರಿಬ್ಬರ ಗ್ರಂಥರಚನೆ ಹಾಗೂ ವ್ಯಾಖ್ಯಾನಗಳು ಕಂಡುಬಂದಿವೆ. ಲಿಂಗಣ್ಣ ಕವಿಯ ಕೆಳದಿ ನೃಪವಿಜಯದಲ್ಲಿ ವಿದ್ಯಾರಣ್ಯರ ಕಾಲಜ್ಞಾನ

ಹಬುಹೋವಿಬುದೇ ರಾವಿದೇವಿಮಾರಾವಿ ಸಂಜ್ಞಿತಾಃ
ಭವಿಷ್ಯಂತಿ ಮಹೀಪಾಲಾಃ ಕರ್ಣಾಟ ಕ್ಷಿತಿಮಂಡಲೇ

ಈ ಭಾಗವು ಗಮನಾರ್ಹವಾಗಿದೆ.[೧೭] ವಿದ್ಯಾರಣ್ಯರ ಸಹೋದರ ಭೋಗನಾಥನ ಕೃತಿಗಳು ಹಾಗೂ ಹಸ್ತಪ್ರತಿಗಳು ಉಪಲಬ್ಧವಿಲ್ಲದಂತಾಗಿದೆ. ೧೩೨೮ರಲ್ಲಿ ಈತನ ಕಾಲದ "ಯತ್ಯಾಶ್ರಮ"ದಲ್ಲಿ ಮಾತೃದೇವೋಭವ-ಪಿತೃದೇವೋಭವ ಉಪನಿಷತ್ತಿಗೆ ಅಧ್ಯಾತ್ಮ ಪ್ರವೃತ್ತಿಯಲ್ಲಿ ಭಿನ್ನಾಂಶವಿದೆಯೆಂಬ ಹೇಳಿಕೆಯಿದೆ.[೧೮]

ಪ್ರಾಚೀನ ಹಸ್ತಪ್ರತಿಗಳು

ತಾಳೆಯೋಲೆ ಮುಂತಾದ ಪುರಾತನ ಹಸ್ತಪ್ರತಿಗಳು ಭಾರತ ಹಾಗೂ ಅಂತರರಾಷ್ಟ್ರೀಯ ವಾಗಿಯೂ ಜ್ಞಾನದ ತವನಿಧಿ, ಎಂಬುದಕ್ಕೆ ಎರಡು ಮಾತಿಲ್ಲ. ಖಾಸಗೀ ಸಂಗ್ರಹಗಳಲ್ಲಿರುವ ಹಸ್ತಪ್ರತಿಗಳಂತೂ ಕಣ್ಣೀರಿಡುತ್ತಾ ತಮ್ಮನ್ನು ರಕ್ಷಿಸಿರೆಂದು ಕೂಗಿ ಹೇಳುತ್ತಿವೆ. ಅಥರ್ವಣ ವೇದವೆಂದರೆ ವಾಮಾಚಾರ ಶಾಸ್ತ್ರವೆಂದು ಬದಿಗೆ ಸರಿಸಲಾಗುತ್ತಿದೆ. ಕಲ್ಕತ್ತಾ ರವೀಂದ್ರ ಭಾರತಿ ವಿಶ್ವವಿದ್ಯಾಲಯದ ಡಾ. ಟಿ.ಎನ್.ಅಧಿಕಾರಿಯವರು ಸಂಸ್ಕೃತ ವಿಶ್ವಸಮ್ಮೇಳನದಲ್ಲಿ "Interpretation of Atharva Vedic Mantras" ಸಂಪ್ರಬಂಧ ಮಂಡಿಸಿ ನೂತನ ಬೆಳಕನ್ನು ವಿದ್ವಾಂಸರಲ್ಲಿ ಮೂಡಿಸಿದ್ದಾರೆ.[೨೦] ಈಗ್ಗೆ ೧೫ ವರ್ಷಗಳ ಕೆಳಗೆ ಶಾಂತಿನಿಕೇತನದ

ಪ್ರಾಧ್ಯಾಪಕ ಡಾ. ದೀಪಕ್ ಭಟ್ಟಾಚಾರ್ಯರು ಅಥರ್ವಣವೇದ ಮಂತ್ರಗಳ ಸಮಗ್ರ ಭಾಗಗಳನ್ನು ಧ್ವನೀಕರಿಸಿಕೊಳ್ಳಲು ಯೋಜನೆಯೊಂದನ್ನು ಸಿದ್ಧಪಡಿಸಿಕೊಂಡು, ನನ್ನೊಂದಿಗೆ ನಡೆಸಿದ ಪ್ರಯತ್ನಗಳು ಇನ್ನೂ ಕೈಗೂಡದಂತಾಗಿದೆ. ಶೃಂಗೇರಿ ಮಠದ ಹಸ್ತಪ್ರತಿ ಭಂಡಾರದಲ್ಲಿ ನಂ ೫೧೮೮ರ ಮೇರೆಗೆ ಓಲೆಗರಿಯಲ್ಲಿ ಅಥರ್ವಣವೇದ ಭಾಷ್ಯ ಕೃತಿಯ ಹಸ್ತಪ್ರತಿ ಕಂಡುಬಂದಿದೆ.[೨೧] ಅಥರ್ವಣ ವೇದದ ತಾಂತ್ರಿಕ ನಿಘಂಟನ್ನು ಸಿದ್ಧಪಡಿಸಲು ಅದೇ ಸಂಸ್ಕೃತ ವಿಶ್ವ ಸಮ್ಮೇಳನದಲ್ಲಿ ಆಂಡ್ರಿ ಪ್ಯಾಡೋಕ್ಸ್, ಪ್ಯಾರಿಸ್ (ಫ್ರಾನ್ಸ್)ನವರ ಸಂಪ್ರಬಂಧದ ಈ ಕೆಳಗಿನ -

The aim of this work is to help scholars and students not acquainted with the vocabulary and notions particular to Tantric Hinduism to understanding the meaning of such terms either proper to such texts or terms used elsewhere but which have in such texts a specific meaning or use. A group of scholars from several European countries are working on this project which is carried out under the joint anspices of the Institut de civilisation Indienne of the collage de France in Paris, the Austrain Academy of Sciences and the University of Vienna.[೨೨]

ಇಂತಹ ಯೋಜನೆಗಳು ನೂತನ ಬೆಳಕು ಚೆಲ್ಲುತ್ತವೆ. 'ಶ್ರೀಚಕ್ರ' ಮೊದಲುಗೊಂಡು ಅಥರ್ವಣ ವೇದದ ಮಂಡಲ ರಹಸ್ಯಗಳು ಹಾಗೂ ತಾಂತ್ರಿಕ ಜ್ಞಾನಗಳನ್ನು ರಷ್ಯಾದ ಅಲೆಕ್ಸೇವ್ ಕುಲ್ಯಾಚೇವ್, ಅಲೆಗ್ಝಾಂಡರ್ ಸಪ್ಪಾಯ್ ಮತ್ತು ಲ್ಯೂತ್‌ಸ್ಕೋ ಮುಂತಾದ ವಿದ್ವಾಂಸರುಗಳು ಪ್ರಯೋಗಗಳಲ್ಲಿ ಕಂಡುಕೊಂಡಿದ್ದಾರೆ. ಪ್ರಾಚೀನ ಹಸ್ತಪ್ರತಿಗಳಲ್ಲಿರುವ ಇಂತಹ ಅಮೂಲ್ಯ ಜ್ಞಾನಭಂಡಾರಗಳನ್ನು ಮುಂದಿನ ಅಧ್ಯಯನಗಳಿಗೆ ಪ್ರಾಮಾಣಿಕವಾಗಿ ಅಳವಡಿಸಿ ಅಧ್ಯಯನ ಕೈಗೊಳ್ಳುವುದು ಆದ್ಯ ಕರ್ತವ್ಯ. ಇದಕ್ಕೆ ಅನುಬಂಧದಲ್ಲಿ ನೀಡಿರುವ ೧೬೦೨ರ ಕಾಲದ ವಿದ್ಯಾರಣ್ಯರ ಕೃತಿ 'ಕಾಲ ನಿರ್ಣಯ ಟೀಕಾ'ವನ್ನು ಉದಾಹರಿಸಬಹುದು.[೨೩] ಒಟ್ಟಿನಲ್ಲಿ ನನಗೆ ಲಭಿಸಿದ ವಿದ್ಯಾರಣ್ಯರ 'ಅಥರ್ವಣ ವೇದ' ಹಸ್ತಪ್ರತಿ ಅಮೂಲ್ಯವಾಗಿದ್ದು, ಇದರ ಶಾಸ್ತ್ರೀಯ ಅಧ್ಯಯನ ಪ್ರಕಟಣೆ ಅಗತ್ಯ ಕರ್ತವ್ಯ.

ವಿದ್ಯಾರಣ್ಯರ ಗ್ರಂಥಗಳ ಹಸ್ತಪ್ರತಿ ಸೂಚಿ (Catalogue)
DCSM: ORI. Mysore. Vol I, III, IV, IX.

Sl No.	No. & Subject	MSS No.	Title of work	Name of Author	Name of Commentator	Material	Script	Sizein cmtrs	No.of Folios	Lines per page	Letters per line	Extent	Conditions & Age	Additional particulars
1	E 779	P 1632/2	Aitareyopanishad Bhashya Vyakhya (Dipika)		Vidyaranya	PL	Na	32.5x4	87-108	8	74	Inc.2nd Aranya-ka of IV Adliyaya	G	
2	780	P 6290	-do-		-do-	PL	Te	20x3.5	1-39	7	28	Inc	W	
3	781	C 618	-do-		-do-	P	K&D	20.3x10.7	1-26	10	32	C	G	
4	782	C2504/1b	-do- (Vedartha Prakasah)		Sayanah	P	Te	20x11	1-24	13	28	C	GO	
5	783	C3927	Aitareyopanishat Bhashyam		Vidyaranya	P	D	32.5x11	1-19	9	50	C	GO	
6	1722	P1814/7	Brahadaranya Kopanishad Vyakhya (Dipika)		Vidyaranya Munih	P	Te	47.5x4	25-37	7	52	INC VI Adhyaya	DW	
7	2682	P1/2	Purushasukta Vyakhya		Vidyaranyah	PL	Gr	45x4	30-34	11	110	C	D	
8	E2947	P384/1	Sandya Bhashyam		-do-	PL	Na	43x3.5	1-8	7	65	C	OD	
9	2948	P1576/2	-do-		-do-	PL	Gr	39.5x5	Five	12	58	Inc	G	No beginning
10	E6540	B687	Brahmasirvada-paddhatih		-do-	P	Tel	19x7.5	1-17	6	18	C	G	

11	7238	P9023/1	Vidyaranya Smritih	-do-	PL	Gr	48.5x5.5	1-10	15	64	Inc	G	
12	E9555	P3926/2	Smritiprakasah	-do-	PL	Te	41x4	16-31	8	50	C	OD	
13	9629	P938/1	Smriti Sangrah	-do-	PL	Te	45x3.3	1-198	7	80	Inc	OD	upto Vruddhi-sraddhah
14	9630	P1031	-do-	-do-	PL	Te	43x4	1-63	8	58	Inc	DW	Ahnikabhaga
15	9631	P1400	-do-	-do-	PL	Te	37.5x4	1-17	7	78	Inc	DW	upto Graha-pujavidhi
16	9632	P2049	-do-	-do-	PL	Gr	42x4	1-170	9	64	Inc	O	
17	9633	P2012	-do-	-do-	PL	Na	35x2.5	1-70	6	60	C	DW	
18	9634	A2787	-do-	-do-	PL	Te	44x4	1-20	7	60	Inc	OD	
19	9635	P2999	-do-	-do-	PL	Gr	33x5	206-393	19	60	Inc	DW	
20	9636	P4248	-do-	-do-	PL	Gr	48x4	1-210	7	64	Inc	OD	Gomeya Sangraha Krama
21	9637	P4703	-do-	-do-	PL	Te	41.5x2.8	1-269	5	66	Inc	OD	Sraddha Karya Vishayah
22	9638	P5959	-do-	-do-	PL	Na	34x3.5	1-144	6	62	Inc	O	
23	9639	P5975	-do-	-do-	PL	Te	24.6x3	1-261	9	24	Inc	DW	upto Chaula-karma Kala nirnaya

24	9640	A613/2	-do-	-do-	P	Te	21x34	9-48	20	22	Inc	G	upto Mahalaya Nirnaya in Sraddha prakarna. S.S. 1772 Sarvari Vaisaka 2 Sanivara
25	E17374	P4807/1	Ramayanara hasyam	Vidyaranya	PL	Na	33.5x5	1-4	9	50	C	G	
26	17375	P3662/2	-do-		PL	Gr	37.5x3.5	104-105	7	60	C	G	
27	E17598	P198	Puranasarah	Madhavah	PL	Gr	43x4	1-200	9	82	C	DW	Now Printed (ORI Mysore)
28	E17599	P4562/1	-do-	Vidyaranyah	PL	Na	48x6	1-177	7	92	C	G	-do-
29	E17600	P4657	-do-	Vidyaranyah	PL	Gr	30x3	1-154	9	45	Inc	G	1-52 Adhyayas -do-
30	E17601	A472	-do-	Madhavacharyah	P	Kan	19.5x32.5	1-315	20	20	C	D	-do-
31	E17603	P4608/1	Purushartha Sudhanidhih	Sayana-madhavah	PL	Gr	39.7x3.5	1-142	7	68	Inc	DW	II Adhyaya in Kamaskandha
32	E18005	P3697	Sivakathamrta Sara Sangraha (Shankara Vilasah)	Vidyaranyah	PL	Gr	48.5x4.5	1.59+ 56-285	9	80	Inc	OD	1-88 Adhyayas sankaravilasah
33	18006	A835	-do-	-do-	P	Te&D	33.5x21	1-276+ 1-358	22	16	Inc	G	1-86 from Skandapurana
34	E18603	A47	Mahaviramahatmyam	-do-	P	Te	18x32	29-34	22	61	C	G	fromPalanatha Samhita Patala
35	E20082	P2468	Lalitha Sahasranama Bhashyam	-do-	PL	Te	23x4	1-90	14	46	Inc	DW	1-7 Parischedasa

36	20083	B1070	-do-	-do-	P	D	16.5x21.5	1-303	12	22	Inc	G	
37	E16677	P371	Purushartha Sudhanidih	Sayanah	PL	Na	48x4	1-82	7	62	Inc		1-15 Adhyayas
38	E17603	P4608/1	-do-	Sayana-madhava	PL	Gr	39.7x3.5	1-142	7	68	Inc	DW	Adhyaya in Kamaskandha
40	29539	P2224/1	Kalajnanam	Vidyaranyah	PL	Na	49x6	1-33	9	76	Inc	G	1-8 Pari-schedas
41	29540	A47/1	-do-	-do-	P	Te	18x32	1-19	22	16	C	O	
42	29541	A47/3	-do-	-do-	P	Te	18x32	22-29	22	16	C	G	
43	31512	A47/19	Pitamaha Samhita	-do-	PL	Te	18x32	107-117	21	16	C	G	81-82 Adhyayas Rajavamsha-valiyoga & Ratnakara Rahasya Yogas.
44	31524	P10765/26	Puskalamsanirnayah	-do-	PL	Na	13x3	one	10	50	C	G	3rd Folio
45	E30533	P2688/14	Jatakasarah	-do-	PL	Te	36x45	97-111	11	86	Inc	O	Bhavaphalam
46	31867	P5651/22	Bhavaphalam	-do-	PL	Na	37x3	198-209	7	60	C	G	
47	31868	P7383/1	-do-	-do-	PL	Na	32x5	123-231	10	50	C	O	
48	E31869	P8818/2	-do-	-do-	PL	Gr	30x3	121-149	6	48	C	G	
49	32052	P26	Muhurthadarshanam Muhurthadarpanam Vidyamadhaviyam	Vidya-Madhava	PL	Na	39x3.3	1-27	8	90	Inc	OD	up to 4 th sloka in IX Adhyaya
50	32172	B620	Meghamalamanjari	-do-	P	Na	15x19	1-53	18	16	Inc	O	End of Mahavrshti-dinalakshana

Alphabetical list of Micro films in the oriental Research Institute, Mysore, up to July 1972.

N. 388 : Vivaranaprameya Sangraha, Vidyaranya; Devanagari Script; Sanskrit language; paper manuscript; No. of Folios: 23; No. of Granthas: 700; complete; SC 345;[1]

Catalogue descriptif des manuscrits Institut Francais D Indologie Vol I No: 100/7 Page 351.

Sutasamhitavyakhya by Vidyaranya

(Yajnavaibhavakhanda)

This text contains the commentatary called Tatparyadipika written by Vidyaranya on the Sutasamhita. This commentary is on ch 8, 9, 10, 39 and 47 of the Yajnavaibhava Khanda of the Sutasamhita. This agrees with the printed edition, Balamanorama press Madras, 1932.[2]

ವೈದೀಕ ಅಪ್ರಕಟಿತ ಗ್ರಂಥಗಳು (ಕರ್ನಾಟಕ ಭಾರತಿ ಸಂ iv ಸಂ ೩)

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

(i) ನಂ ೧೧೮; ಕಾಲಜ್ಞಾನ ಕೃತಿ; ವಿದ್ಯಾರಣ್ಯ : ವಿಶೇಷ ವಿಷಯ : III ೪೨೦.

ಜಗದ್ಗುರು ಮೂರು ಸಾವಿರ ಮಠದ ವರ್ಣನಾತ್ಮಕ ಹಸ್ತಪ್ರತಿ ಸೂಚಿ (ಹುಬ್ಬಳ್ಳಿ)

(i) ನಂ ೧೦೩ : ಗ್ರಂಥ : ಪಂಚದಶಿ : ಕಾಗದ;ಪತ್ರ;೨೯;ಪ್ರ: ಉ ೨೧.೫ x ಅ ೧೫.೬ cmr. ಕೃತಿಕಾರ; ವಿದ್ಯಾರಣ್ಯ; ಲಿ: ಕನ್ನಡ: ಭಾಷೆ: ಸಂ; ಇತಿ ಶ್ರೀ ಪರಮಹಂಸ ಪರಿವಾಜಕಾಚಾರ್ಯ ಶ್ರೀ ಭಾರತೀತೀರ್ಥ ವಿದ್ಯಾರಣ್ಯ ಮುನೀಶ್ವರ ವಿದ್ಯಾರಣ್ಯ ಶಿಷ್ಯೇಣ ಶ್ರೀರಾಮಕೃಷ್ಣಖ್ಯೆ ವಿದೂಷಾ ವಿರಚಿತ ಭೂತವಿವೇಕಸ್ಯ ತಾತ್ಪರ್ಯ ದೀಪಿಕಾ ಸಮಾಪ್ತ ಗುರುಬಸವಲಿಂಗಾಯನಮಃ

1. C.S.Srinivasan; Reprinted from the Mysore Orientalist vol. IV, No.2

2. Institute Francis D Indologie, Pondicherry, 1986

ಶೃಂಗೇರಿ ಮಠದಲ್ಲಿ ಕೆಳದಿ ಸಂಶೋಧನಾಲಯದ ಮುಖಾಂತರ ಸಿದ್ಧಪಡಿಸಿದ ಹಸ್ತಪ್ರತಿ ಸೂಚಿ (Hand leave)

Sl No.	No. & Subject	MSS No.	Title of work	Name of Author	Name of Commentator	Material	Script	Size in cmtrs	No.of Folios	Lines per page	Letters per line	Extent	Conditions & Age	Additional particulars
1	631 ಸ್ತೋತ್ರ	213	ವೈಯಾಸಿಕ ನ್ಯಾಯಮಾಲಾ	ವಿದ್ಯಾರಣ್ಯ		P	D/S	29x10	108	12	47	Inc	G	(No1691)
2	512 ಅದ್ವೈತ ವೇ	95	Jeevanmukti Viveka	-do-		P	D/S	16.5x25	49	28	26	Inc	G	Samvat 1837 (1803) Printed Book
3	466 -do-	47	-do-	-do-		P	D/S	22.3x11	118	9	27	C	G	
4	448 -do-	28	Panchadashi	-do-		P	D/S	31x10.5	125	10	48	C	G	
5	676 -do-		Rudra Bhashya	Sayana-charya		PL	N/S	49x5	17	9	58	Inc	G	
6	581 -do-	100	Purushartha Sudhanidhi	Madhava-mantri		PL	N/S	46x4.5	230	7	58	C	G	
7	571	131	Kalanirnaya Tika		Vidyaranya	PL	N/S	52x4.5	123	7	106	C	G	S.S.134, Paridhavi Aswi-Scribe Shankara Narayana Jois
8	468 Vedic		R K Samhita Bhashya		Sayana Madhava.	PL	N/S	47.5x4.5	293	8	86	Inc	G	
9	472 Vedic	11	Yajuraranyaka Bhashya		-do-	PL	N/S	48x4.5	229	7	85	Inc	G	

10	518 Vedic		Atharvanaveda Bhashyam	Sayana Bhashyam	PL	N/S	52x4.7	148	7	107	Inc		Slightly damaged
11	293 ಅದ್ವೈತ		Vedartha Prakasha	Sayana Madhaviya	PL	N/S		76	9	97	Inc	G	Yajuraranyaka Vivarnam
12	294	209	Parashara Madhaviya	Madhavanatya	PL	N/S	55x5.5	222	7	133	C	G	Ist & last pages sides broken
13	281		-do-	-do-	PL	Te/S	46.5x4	206	6	62	C		Worst insect effects
14	257		Vakyasudha	Vidyaranya	PL	K/S	33.5x5.1	3	11	54	C	G	
15	485		Madhaviya Dhatuvristi	Sayanacharya	PL	N/S	49.5x5	402			C	G	
16	486		Taittiriya Samhita Bhashya	-do-	PL	N/S	51.5x4.5	234			Inc	G	
17	501		Yajussamhita Bhashya	-do-	PL	N/S	44x4	173			Inc	G	Tritiya Kanda
18	548		Vedartha Prakasha	Sayana madhava	PL	K/S	38x3.2	229			Inc	G	
19	662/5		-do-	Sayana charyah	PL	N/S	66x5.5	159				G	Yajussamhitam VII Khande, V prapathaka, Panchavigo navakah
20	676		Rudra Bhashya		PL	N/S	36x5.3	53				G	
21			Sanjnadhyayah	Madhava charya									
22			Bhavaphala Nirnaya	Vidyaranya									

ಅಡಿಟಿಪ್ಪಣಿ : ಆರಂಭದ ನನ್ನ ಸರ್ವೇಕ್ಷಣೆಯಲ್ಲಿದ್ದ ನಂ. ೧೦೩೫ನೇ ನಂಬರಿನ "ಚಿತ್ರದೀಪ ವ್ಯಾಖ್ಯಾ" ವಿದ್ಯಾರಣ್ಯರ ಕೃತಿ. ACC No. ೧೭೯೦/೧೮೮೪ (ನಾ.ಲಿ) ಆರಂಭಿಸಿ, ಹಲವು ಅಮೂಲ್ಯ ಕೃತಿಗಳು ಈ ಬಾರಿಯ ಅನ್ವೇಷಣೆಯಲ್ಲಿ ಕಂಡುಬಾರದೇ ಕಣ್ಮರೆಯಾದುದು ದುರ್ದೈವ!

ಶ್ರೀಮನ್ಮಹಾರಾಜರು ಮೈಸೂರು ಅರಮನೆಯ ಸರಸ್ವತಿ ಭಂಡಾರದಲ್ಲಿರುವ ವಿದ್ಯಾರಣ್ಯರ ಹಸ್ತಪ್ರತಿ ಸೂಚಿ (Catalogue)

ನಂ	ಶಾಸ್ತ್ರ	ಗ್ರಂಥನಾಮ	ಕತೃನಾಮ	ಹಸ್ತಪ್ರತಿ ನಂ	ಲಿಪಿ	ಪತ್ರಸಂಖ್ಯಾ	ಪೂರ್ಣಾಪೂರ್ಣ ವಿವೇಕಃ
೧	೨	೩	೪	೫	೬	೭	೮
೧೨	ಸಂಹಿತ	ತೈತ್ತಿರೀಯ ಸಂಹಿತಾ ಭಾಷ್ಯಂ	ಮಾಧವಾಚಾರ್ಯ	೧೧೧೭	ಗ್ರಂಥ	೨೬೮	೨-೭ ಕಾಣ್ಡೌ
೧೩		- do -	- do -	೧೧೧೭	ಆಂಧ್ರ	೯೧+೩೯	೩ಯಃ, ೪ರ್ಥೆ ೬ಪ್ರಶ್ನಾಶ್ಚ
೧೪		- do -	- do -	೧೦೭೨	ಗ್ರಂಥ	೫೧-೧೩೦	೪ರ್ಥೆ ೩ಪ್ರಶ್ನಾಃ
೩೪	ಆರಣ್ಯಕ	ತೈತ್ತಿರೀಯಾರಣ್ಯಕ ಭಾಷ್ಯಂ	- do -	೧೧೧೮	ಗ್ರಂಥ	೪೮	೧ಮಃ ೩ಪ್ರಶ್ನಃ
೩೫		- do -	- do -	೧೧೦೬	ಆಂಧ್ರ	೭೧-೧೪೦	೧-೨ಪ್ರ.ಉಪನಿಷತ್ಭಾಗಶ್ಚ
೬೬	ವೇದ	ಗಾಯಿತ್ರೀ ಭಾಷ್ಯಂ	ವಿದ್ಯಾರಣ್ಯಃ	೧೦೨	ಆಂಧ್ರ	೩೩-೩೮	ಸಮಗ್ರಂ
೭೪		ಶ್ರೀರುದ್ರಭಾಷ್ಯಂ	ಮಾಧವಾಚಾರ್ಯಃ	೪೨೧	ಆಂಧ್ರ	೬೩	ಸಮಗ್ರಂ
೭೫		- do -	- do -	೧೧೦೪	ಗ್ರಂಥ	೧೧-೬೧	ಸಮಗ್ರಂ
೨೩೪	ಜ್ಯೋತಿಷ	ಕಾಲನಿರ್ಣಯ	ಮಾಧವಾಚಾರ್ಯಃ	೧೦೭೩	ಆಂಧ್ರ	೧೪೬+೧೫	ಸಮಗ್ರಂ
೨೯೧	ಧರ್ಮಶಾಸ್ತ್ರ	ಸ್ಮೃತಿಸಂಗ್ರಹಃ	ವಿದ್ಯಾರಣ್ಯಃ	೮೮೯	ನಾಗರ	೨೨-೧೬೬	ಸಮಗ್ರಂ
೨೯೨		- do -	- do -	೯೦೭	ಗ್ರಂಥ	೨೭೬	ವಿವಾಹ ನಿರೂಪಣಾಂತಃ
೩೯೮	ಸಂಹಿತೆ	ಸೂತಸಂಹಿತಾಟೀಕಾ	ಮಾಧವಾಚಾರ್ಯಃ	೧೦೨೧	ಗ್ರಂಥ	೩೦೪	೧ಮ ಭಾಗಃ
೫೮೦	ಶತಕ	ಸುದರ್ಶನ ಶತಕಂ ವ್ಯಾಖ್ಯಾ	ಮಾಧವಃ	೧೩೪	ಗ್ರಂಥ	೩೮	ಸಮಗ್ರಂ
೭೦೧	ಸುಭಾಷಿತ	ಸುಭಾಷಿತ ಸುಧಾನಿಧಿಃ	ಸಾಯಣಾಚಾರ್ಯಃ	೧೨೦೪	ಗ್ರಂಥ	೬೭-೯೨	ಸಮಗ್ರಂ
೧೧೩೬	ಜ್ಯೋತಿಷ	ಮುಹೂರ್ತದರ್ಶನಂ	ವಿದ್ಯಾಮಾಧವಃ	೩೫೩	ನಾಗರ	೬೮	ಸಮಗ್ರಂ
೧೧೩೭	- do -	- do -	- do -	೭೫೫	ನಾಗರ	೬೫-೯೯	ಸಮಗ್ರಂ
೧೧೩೮	- do -	- do -	- do -	೭೯೬	ಕನ್ನಡ	೧೩೬	ಸಮಗ್ರಂ
೧೧೩೯	- do -	- do -	- do -	೭೦೯	ಆಂಧ್ರ	೪೧	ಸಮಗ್ರಂ
೧೧೪೦	- do -	- do -(ಟಿಪ್ಪಣೀಚ)	- do -	೭೫೪	ನಾಗರ	೧೩೨	೬ ಅಧ್ಯಾಯಾಃ

೧೩೧೦	ಪೂರ್ವವಿತಾ ಮಾಂಸಾ	ಜೈಮಿನೀಯ ನ್ಯಾಯಮಾಲಾ ವಿಸ್ತರಃ	ಮಾಧವಾಚಾರ್ಯಃ	೩೩೧	ಆಂಧ್ರ	೧೪೪	೩-೯ಅಧ್ಯಾಯಾಃ
೨೨೩೭		ತೈತ್ತಿರೀಯ ಸಂಹಿತಾ ಭಾಷ್ಯಂ	ಮಾಧವಾಚಾರ್ಯಃ	೧೨೪೩	ಗ್ರಂಥ	೨೩೬	೧ ಮಃ ಕಾಂಡಃ
೨೨೩೮		- do -	- do -	೧೨೩೨	ಗ್ರಂಥ	೨೧೯-೩೪೯	- do -
೨೨೩೯		- do -	- do -	೧೩೦೯	ಗ್ರಂಥ	೧೮೬	೪ ರ್ಥ ಕಾಂಡಃ

Catalogue of Palm leaf MSS in the Keladi Research Centre

Sl. No.	ACC No	Title	Author/ Commtr	Script uage	Lang- cmr	Size in	Folio	Lines	Letters	Extent	Age & Condi tions	
037	660/1	ವೇದಾರ್ಥಪ್ರಕಾಶಃ Vedarthaprakashah	Sayana Madhava	K	S	47x4.5	12	10	76	Inc	D	PL
218	1143	Parashara Smrutivyakhya	Madhava Matvya	Tg	S	56x5.5	68	11	4.6	Inc	G	PL
1559	488/5	Vidyamadha Viyam	Vidyamadhava	Tg	S	28x6	9	12	50	Inc	G	PL
1560	495	-do-	-do-	Tg	S	28x6	6	14	44	Inc	G	PL
1561	509	-do-	-do-	Tg	S	41x4.5	52	13	74	Inc	D	PL
1562	558/2	-do-	-do-	Tg	S	22x4	18	10	36	Inc	D	PL CIIL Mysore by KGJ
1563	564	-do-	-do-	Tg	S	18.5x9	9	7	19	Inc	G	PL
1564	609/3	-do-	-do-	Tg	S/K	21x4.5	36	9	28	Inc	G	PL
1565	634	-do-	-do-	K	S/K	25x5	4	8	42	Inc	G	PL
1566	1091	-do-	-do-	N	S/K	23x4.5	146	10	45	C	G	PL with Kannada Tiku

Catalogue of Ancient Tigalari PL MSS in India Vol I

by K.G.Jois, Govt. of India

Sl. No.	ACC No	Title	Material	Script	Language	Size in Cmr	Folios	Lines	Letters	Additional Particulars
119	34	Vidyamadhaviya	PL	Tgl	S	33x4	100	7	60	C
140	152	-do-	PL	Tgl	S	36x5.5	120	10	60	C Vidyamadhaviya Commentary in Kannada
150	169	-do-	PL	Tgl	S	21x3.8	100	13	50	C
156	179	-do-	PL	Tgl	S	16.2x6	90	14	40	C

ತುಳುಲಿಪಿ ಹಸ್ತಪ್ರತಿಗಳ ಸೂಚಿ : ಧರ್ಮಸ್ಥಳ

ಕ್ರ.ಸಂ.	ಹ.ಪ್ರ. ಸಂಖ್ಯೆ	ಹೆಸರು	ಗ್ರಂಥಕರ್ತ	ಸಾಮಗ್ರಿ	ಅಳತೆ ಸೆಂ.ಮೀ.	Folio	ಸಾಲು	ಅಕ್ಷರ	ವಿಸ್ತಾರ	ಸ್ಥಿತಿ	ಹೆಚ್ಚಿನ ವಿಷಯಗಳು
೨೭	೫೭೮	ಋಗ್ವೇದ ಸಂಹಿತಾ ಭಾಷ್ಯ	ಸಾಯಣಾಚಾರ್ಯ	PL	೩೮x೪	೧-೪೦	೮	೫೨	ಅಸಮಗ್ರ	ಉ	ಹಲವು ಪತ್ರನಷ್ಟ
೨೮	೫೮೦	-do-	-do-	PL	೪೦x೪	-----	೯	೬೫	ಅ	ಹು	
೨೯	೪೫೫/೮	-do-	-do-	PL	೪೯x೫.೫	೩೨-೧೧೦	೧೬	೮೦	ಅ	ಹ	
೩೦	೪೨೬/೧	-do-	-do-	PL	೨೬x೫	೧-೨೫	೮	೩೫	ಅ	ಜೀ	
೩೧	೩೦೭	-do-	-do-	PL	೫೦x೫.೫	೧೭೬ ಪತ್ರ	೧೧	೮೫	ಅ	ಹು	
೩೪	೫೦೫	ಕೃಷ್ಣಯಜುರ್ವೇದ ಸಂಹಿತಾ ಭಾಷ್ಯ	-do-	PL	೨೪x೪	೧-೧೯೪	೯	೩೬	ಅ	ಉ	೬ನೇ ಕಾಂಡ
೩೫	೪೫೪	-do-	-do-	PL	೪೯x೫	೧-೨೬೮	೯	೬೩	ಸ	ಹು	
೬೧	೫೪೨/೧	ಐತರೇಯೋಪನಿಷತ್ ಭಾಷ್ಯ ವ್ಯಾಖ್ಯಾ ವೇದಾರ್ಥ ಪ್ರಕಾಶ	ಸಾಯಣ	PL	೨೪x೫	೧-೩೧	೧೦	೩೭	ಸ	ಉ	
೩೩೬	೪೫೯/೧	ಕಾಲನಿರ್ಣಯ	ಮಾಧವಾಚಾರ್ಯ	PL	೩೨.೫x೩.೫	೧-೧೦೮	೧೦	೫೫	ಸ	ಹ	
೩೯೮	೩೫೪/೧	ಮುಹೂರ್ತದರ್ಶನ	ವಿದ್ಯಾಮಾಧವ	PL	೩೭x೫.೫	೧-೧೫೪	೧೨	೪೮	ಸ	ಉ	ಭಾದ್ರಪದ ಕೃಷ್ಣಪಕ್ಷ ಮತ್ತು ಭಾರ್ಗವಾರ
೩೯೯	೬೦೦/೧	-do-	-do-	PL	೨೧.೫x೬	೧-೧೬	೯	೩೦	ಅ	ಉ	
೪೧೯	೫೪೯	ವಿದ್ಯಾಮಾಧವೀಯ	ವಿದ್ಯಾಮಾಧವ	PL	೨೩x೪	೧-೪೦	೯	೨೫	ಅ-೧-೧೧ ಅಧ್ಯಾಯ	ಹ	

೪೬೫	೫೭೩/೩	ಅಗ್ನಿನಿರ್ಣಯ	ಮಾಧವ	PL	೨೬x೫.೫	೨೬-೪೪	೧೧	೩೮	ಅ	ಉ	ಲಿಪಿ : ತುಳು ; ಭಾಷೆ : ಕನ್ನಡ
೫೫೯	೫೭೪/೨	ಕರ್ಮವಿಪಾಕ ಸುಧಾನಿಧಿ	ಸಾಯಣಾಚಾರ್ಯ	PL	೪೯x೪.೫	೧-೧೭	೭	೮೫	ಅ	ಹು	
೧೮೫೯	೪೧೭	(ಕಿರಾತಾರ್ಜುನೀಯ ವ್ಯಾಖ್ಯಾ)	(ವಿದ್ಯಾಮಾಧವ ಪಂಡಿತ)	PL	೩೮x೪	೧-೭೦	೯	೭೫	ಅ	ಹು	
೧೯೦೪	೨೯೯/೧	ಶಿಶಿಲಪಾಲತಥವ್ಯಾಖ್ಯಾ	ವಿದ್ಯಾಮಾಧವ	PL	೪೯x೫	೧-೧೯೩	೧೩	೬೫	ಸ	ಉ	
೧೯೯೪	೩೭೨/೨	ಅಧಿಕರಣಮಾಲಾ	ಭಾರತೀತೀರ್ಥ	PL	೪೮x೫	೧-೧೩	೧೦	೭೫	ಸ	ಹು	

Gaikwads Oriental Series Vol XCVII

An Alphabetical list of MSS in the OI, Baroda, Vol I, compiled by Raghavan Nambiyar, Shiromani, Nyayabhushana, catalogue Assistant ORI, Baroda, Baroda OI/P942

No.	Sl. No	ACC No	Name of MS	Author of commentator	Leaves	Granthas	Remarks, Age, Script Material, Condition
1	2	3	4	5	6	7	8
Veda							
1	104	3441	गायित्रि व्याख्यान	विद्यारण्य	4	60	Saka 1746, Moth Eaten,
2	169	6663/g	पुरुषसूक्त भाष्या	-do-	78-81	100	RV Ashtaka 8 Adhy 4 Vargas 1719 P.L.
3	170	6685/B	-do- Ibid	Ibid	81-85	100	PL Gr
4	171	7705	Ibid	Ibid	8	120	Saka 1766
5	172	8699	Ibid	Ibid	6	120	Saka 1746 Accounted
6	259	2324	श्रीसूक्त भाष्या	(भा) Ibid	3	100	Saka 1708
7	260	5553	Ibid	Ibid	9	300	

8	386	7041	तैत्तिरियोपानिषदू भाष्य	Ibid	109	1400	P.L. Te for शिक्षावल्ली Only
9	429	12576	गौत्रप्रवरानिर्णयः	मध्वाचार्यः	9	150	Incomplete
10	1364	13480/C	संध्यावंदन भाष्यमू	विद्यारण्यः	100-120	225	P.L. Te Stray Leaves.
ಅದ್ವೈತ							
11	40	4875	अनुभूति प्रकाश	Ibid	121	2904	
12	41	6746/b	Ibid	Ibid	49-84	900	PL Gr only for seven upanishats
13	42	10861	Ibid	Ibid	99	2904	
14	87	3828	जीवन्मुक्ति विवेकः	Ibid	146	2150	
15	88	4881	Ibid	Ibid	108	Ibid	
16	89	6327	Ibid	Ibid	120-163	Ibid	PL Gr
17	90	6819	Ibid	Ibid	1-115a	Ibid	PL Gr
18	91	11249/e	Ibid	Ibid	88-101	150	PL Gr-Last Prakarana only
19	92	13055	Ibid	Ibid	89	1800	Incomplete
20	365	1956	विवर्ण प्रमेय संग्रह	Ibid	134	2600	Ist Varuaka, One Sutra also known as विवरणोपन्यास

Gaikwads Oriental Series No CXIV

Published under the authority of the Maharaja Sayyaji Rao, University of Baroda; General Editor: B.Bhattacharyya, M.A., Ph.D..
An Alphabetical list of MSS in the OI, Baroda - Vol II

No.	Sl. No	ACC No	Name of MS	Author of commentator	Leaves	Granthas	Remarks, Age, Script Material, Condition
1	2	3	4	5	6	7	8
Stotra							
1	560	6851	ललिता सहस्रनाम भाष्यमू	विद्यारण्यः Disciple of आनंदारण्यः	107	1800	PL Gr 7 Parischedas, 8th Continued
Kavya							
2	406	862	विद्याधरि	विद्यारण्य योग	374	2100	1-3 Sargas
Devi Tantra							
3	59	6939/a	चंडिका नवाक्षरि मंत्र प्रकाशिका	विध्यारण्यः	12	300	PL Gr

ಈ ಕ್ಯಾಟಲಾಗ್‌ನ vol XCVII ನಲ್ಲಿ ಸಾಯಣನ ಕೃತಿಗಳ ಹಸ್ತಪ್ರತಿಗಳೂ ಕಂಡುಬಂದಿವೆ.

Science Texts in Sanskrit in the Manuscripts Repositories of Kerala and Tamilnadu.

Page No. 103; Kalanirnaya (Karika) by
Madhavacharya or Madhava Vidyaranya
brother of Sayana.
Cranganore II 383.
Kerala V 23487
Madras R. 17938
Oppert I 35553
Pondy 33597, 50842
Taylor P.6
Trippunittura I 1483,
Trip. Skt Col. 1071
Up. Br. Mutt 573.

Cranganore: Two hand lists of the MSS, 365 & 485 in the library of the Cranganore Palace, Cranganore, Kerala (Ref by list Nos and Ser Nos.

Kerala : Alph Index of about 35060 Sans MSS in the Kerala University Oriental Research Institute and Manuscripts Library, Tiruvananthapuram (Ref by vol & ser Nos)

Madras D/R : MSS in the Govt. Oriented Manuscripts library, Madras, and described in their Alphabetical index ot Sans, MSS, in three volumes, D referring to the old collections and R referring to the later collections. MSS not catalogued in D/R numbers are documented by their shelf numbers.

Oppert: List of MSS in private Libraries of Southern India by Gutsav Oppert Vol I 8326 MSS Vol II 10421 MSS, (Ref by Vol Nos & Ser Nos).

Pondy : MSS Collection of the French Institute Pondicherry, Typed list (Ref. by Ser. Nos).

Pondy T : 1188 Transcripts of mss, available in the above Institute (Ref. by Ser. Nos)

Trippunittura : Five lists of collections of mss in Trippumittura, Kerala, containing respectively 1839, 353, 211, 43 and 33 mss, I and II in the palace Library, III in the puliannur Mana, IV in the Vatakketattu Mana V belonging to Ayurveda Vidvan T. Kunchu Variyar (Ref by List Nos & Ser. Nos).

Trip Skt Col : List of 1298 MSS preserved in the Sanskrit Collage, Trippunittura, Kerala (Ref. by Ser, Nos).

Trip Skt Col Sup : A Supplementory collection of 157 mss, preserved in the above collage (Ref. by Ser. Nos).

Trip Skt Col Ts : Transcripts of mss. preserved in the above collage (Ref. by ser. Nos)

Up. Br. Mutt : A hand list of 670 mss. in the upanished Brahma Mutt of Kanchi, Kanchipuram, Tamilnadu (Ref. by Ser. Nos).

ಅಪೂರ್ಣ

Catalogue of Sanskrit MSS in the Deccan collage Post Graduate and Research Institute, Poona, Vol III 1966. Dharmashastra MSS. Ed. by : Madhukar Mangesh Patkar.

1.	Serial No & Subject	:	152
2.	Library Accessio or Collection No if any	:	
3.	Title of work	:	Kala Nirnaya
4.	Name of Author	:	Madhava
5.	Name of Commentator	:	----
6.	Material or Substance	:	P
7.	Script	:	
8.	Size, No. of Folios or leaves, lines per page and No. of letters per line	:	29-2x13-3cmr.149 Leaves 10 lines 44 letters Folio No 49 repeated and Folio 93 missing
9.	Extent	:	C
10.	Condition and age	:	Good, Fairly old.
11.	Additional paritculars	:	


ಅಪೂರ್ಣ

4

Catalogue old MSS in Sanskrit in the collection of the Sanathan Dharma Sabha Ahmednagar

No.	Sl No.& Subject	Collection Daptar & No.	Title of work	Name of Author	Name of Comme-ntator	Mate--rial	Script	Volume Sizein LW thich in cmrs	Volume No.of Leaves	Lines per page	Letters per line	Ext-ent	Cond-itions & Age	Remarks particulars
1	2	3	4	5	6	7	8	9	10	11	12	13	14	15
1	57 Vedanga	244/1	Panchadashi Tika	Vidya-ranya	Ramakrishna	P	SK	30x13x2	232	10	43	C	Good	Old Saka 1785 AD 1863, Handwriting good, Shravan Vd II
2	227 Vedanta	323/1	Jeevanmukti Viveka	-Ibid-	-----	P	SK	31x13x2	88	10	38	C	Good	Good Hand writing
3	58	232/3	Shronta Karma	-Ibid-	-----	P	SK	25x11x1.5	105	11	44	C	Good	

ಅಪೂರ್ಣ



ವಿದ್ಯಾರಣ್ಯರ ಅಥರ್ವಣ ವೇದ ಕುರಿತ ಓಲೆಗರಿ

ಅಡಿಟಿಪ್ಪಣಿ

೧. ಅಲೆಗ್ಸಾಂಡರ್ ಜೆ. ಗ್ರೀನ್‌ಲಾ (೧೮೫೬) ಜಾನ್ ಗಾಲಿಂಗ್ಸ್ (೧೯೮೩) ಕಂಡ (City of Victory) ವಿಜಯನಗರ; Splendours of the Vijayanagara Empire, Hampi; Marg Publications, ೧೯೮೧

೨. Progress of Literature and Art in the Vijayanagar Era, by Dewan Bahadur K.S. Ramaswamy Sastry-p.೨೫-೨; The journal of the Tanjore Saraswati Mahal Library; Ed., by S.Gopalan B.A., B.L. Vol I No.2; ೧೯೩೯-೪೦.

೩. A History of Sringeri: Dr. A.K.Shastry, Karnataka University, Dharwar, ೧೯೮೨

೪. ಕೆಳದಿ ನೃಪ ವಿಜಯ; ಆ VII ಗದ್ಯಾನುವಾದ : ಕೆಳದಿ ಗುಂಡಾಜೋಯಿಸ್; ಕ.ಸಾ.ಪ. ೧೯೭೭

೫. A History of Sringeri; ಪೂರ್ವೋಕ್ತ: App. III.

೬. ತಮಿಳುನಾಡಿನ ಕನ್ನಡ ಮಂತ್ರಿ ಗೋವಿಂದ ದೀಕ್ಷಿತ; ಕೆಳದಿ ಗುಂಡಾ ಜೋಯಿಸ್; ಸರಸ್ವತಿ ಸೇವಾ ಸಮಿತಿ, ಕೆಳದಿ, ಅನುಬಂಧ ಪು : VII; ವಿಜಯನಗರ ಅಧ್ಯಯನ ಸಂಪುಟ ೬; ಪುಟ ೯೪

೭. The History of the Vijayanagara Empire, Vol I P.೧೯, By Rama Sharma.

೮. ಮರೆಯಲಾರದ ಮಹಾಸಾಮ್ರಾಜ್ಯ; ಬಿ. ಸೂರ್ಯನಾರಾಯಣರಾವ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪು. ೩೦, ಅನು: ಬಾಲಸುಬ್ರಮಣ್ಯ

೯. Splendours of the Vijayanagara Empire; ಪೂರ್ವೋಕ್ತ; ಪು. ೪೧-೪೨

೧೦. Progress Literature: ಪೂರ್ವೋಕ್ತ ಪು. ೨; ಪ್ರೊ. ಆಫ್ರೆಚ್ಟ್ (Aufrecht)ರವರ ಆಕ್ಸ್‌ಫರ್ಡ್ ಕ್ಯಾಟಲಾಗಿನ ಉಪೋದ್ಘಾತದಲ್ಲಿಯೂ ಮಾಧವ ಕೃತ ಪರಾಶರ ವ್ಯಾಖ್ಯಾನದಲ್ಲಿ ವಿದ್ಯಾರಣ್ಯರ ಸಹೋದರ ಸಾಯಣ ಮತ್ತು ಭೋಗನಾಥ ಕುರಿತ ಸಂಗತಿಯಿದೆ.

೧೧. ಸಾಯಣಾಚಾರ್ಯ ಮತ್ತು ಮಾಧವನೊಂದಿಗೆ ಜಯತೀರ್ಥ ವ್ಯಾಖ್ಯಾನದ ಮುಖಾಂತರ ರಚಿಸಿದ ಕೃತಿ. ವಿಜಯನಗರ ಸ್ಮಾರಕ ಗ್ರಂಥ ಭಾರತ ಇತಿಹಾಸ ಸಂಶೋಧಕ ಮಂಡಳ, ಪುಣೆ १९३६-३७ ಪುಟ ೧೭೧

೧೨. Introduction to Manuscriptology, Dr. R.S. Shivaganesha Murthy PP ೧೭೭ -೧೮೯; Sharada Publishing House, Delhi-೧೯೯೬

೧೩. (a) Xth world Sanskrit conference; International association of Sanskrit studies Jan ૩-೯, ೧೯೯೭; English Abstracts, Rashtreeya Sanskrit Samsthan, New Delhi P.೧೬೯

(b) Catalogue of Ancient Tigalari Palm Leaf Manuscripts in India Vol I; Keladi Gunda Jois; Published by the Government of India -(Photo)

೧೪. ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ ೧; ಮೈಸೂರು ವಿಶ್ವವಿದ್ಯಾಲಯ ೧೯೭೦; ಪುಟ ೧೫೮-೧೫೫ ಮತ್ತು ೧೭೯-೧೮೦

೧೫. Catalogue of copper plate grants in the Govt Museum, Madras ೧೯೧೮ P.೫೦-೫೧. ಲಂಡನ್‌ನ ಬ್ರಿಟಿಷ್ ಮ್ಯೂಜಿಯಂನಲ್ಲಿ ನಲ್ಲಿಯೂ ತಾಮ್ರ ಶಾಸನಗಳಿವೆ.

೧೬. Splendours of the Vijayanagar Empire; ಪೂರ್ವೋಕ್ತ ಪು. ೧೩೩

೧೭. ತುಳು-ತಿಗಳಾರಿ ಲಿಪಿ ಕುರಿತು ಇರುವ ಭಿನ್ನಾಭಿಪ್ರಾಯಗಳಲ್ಲಿ ನನ್ನ ಸಂಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಆಂಧ್ರದ ಕುಪ್ಪಂ ದ್ರಾವಿಡ ವಿಶ್ವವಿದ್ಯಾನಿಲಯ ಹಾಗೂ ಜಪಾನ್ ಸರಕಾರ ಪತ್ರಾಗಾರದ "ಕಿಟನೋಮಾರು" ಹೊತ್ತಿಗೆಗಳಲ್ಲಿ ಹಾಗೂ ಕ.ಸಾ.ಪ. ಪ ೨೦೦೩ರ ವಿದ್ವತ್ ಸಂಚಿಕೆಗಳಲ್ಲಿ ಪ್ರಕಟವಾದ ನನ್ನ ಲೇಖನಗಳಲ್ಲಿ ಅವಲೋಕಿಸಬಹುದಾಗಿದೆ.

೧೮. ಕೆಳದಿ ನೃಪ ವಿಜಯನದಲ್ಲಿರುವ ಎ.ಆರ್.ಕೃ. ಉಪೋದ್ಘಾತ ಮತ್ತು ಮೈಸೂರು ಪುರಾತತ್ವ ವರದಿ ೧೯೩೨ ಪು ೧೧೧ ಹಾಗೂ ಭಾರತ ಸರಕಾರ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಹಂಪಿ ಕಾಮಲಾಪುರ ವಸ್ತುಸಂಗ್ರಹಾಲಯದಲ್ಲಿ ದಿ. ೯.೪.೧೯೮೪ರಲ್ಲಿ ಕೈಗೊಂಡ ನನ್ನ ಸರ್ವೇಕ್ಷಣೆಯಲ್ಲಿ Stock Reg No.೧೩೯೩ (P.೨೩೧) ೧೪೦೧ (P.೨೩೨)ರ ಮೇರೆಗೆ ಕಾಲಜ್ಞಾನ ಓಲೆಗರಿ ಹಸ್ತಪ್ರತಿಗಳಿರುವುದು ಕಂಡುಬಂದಿದೆ. ಇದನ್ನು ದೊರಕಿಸಿಕೊಟ್ಟ ಮದರಾಸ್ ಪುರಾತತ್ವ ಉಚ್ಚಾಧಿಕಾರಿ ಡಾ. ಬಿ.ನರಸಿಂಹಯ್ಯ, ಎಂ.ಎ, ಪಿಎಚ್.ಡಿ. ಹಾಗೂ ಮ್ಯೂಜಿಯಂ ಅಧಿಕಾರಿ ಸಿಬ್ಬಂದಿಗಳಿಗೂ ಕೃತಜ್ಞತೆಗಳನ್ನು ವಿದ್ವಾಂಸರ ಪರವಾಗಿ ಸಲ್ಲಿಸುವೆನು. ಡಾ. ನರಸಿಂಹಯ್ಯನವರು ಇಲಾಖೆ ಮುಖಾಂತರ ಕೆಳದಿ ಸಂಶೋಧನಾಲಯಕ್ಕೂ ವಿಪುರ ಹಸ್ತಪ್ರತಿಗಳನ್ನು ದೊರಕಿಸಿಕೊಟ್ಟಿದ್ದುದನ್ನು ಕೆಳದಿ ಸಂಶೋಧನಾಲಯ ಸದಾ ಸ್ಮರಿಸುತ್ತದೆ.

೧೯. ಮರೆಯಲಾರದ ಮಹಾಸಾಮ್ರಾಜ್ಯ : ಪೂರ್ವೋಕ್ತ, ಪು. ೨೫೫, ಸನ್ಯಾಸಿಗಳ ಧರ್ಮ, ನೀತಿ, ನಡೆವಳಿಕೆ, ನಿಯಮಗಳ ಕುರಿತು ಹಿಂದೂ ಲಾ. ನೋಡಿರಿ, ಅದೇ ಪುಟ.

೨೦. ಪೂರ್ವೋಕ್ತ; ವಿಶ್ವ ಸಂಸ್ಕೃತ ವಿದ್ವಿತ್ ಸಮ್ಮೇಳನದಲ್ಲಿ ನಾನು Our Wealth of Palm Leaf MSS ಸಾದರಪಡಿಸಿದ್ದು ಅಮೇರಿಕಾ ಸ್ಯಾನ್ ಆಂಟೋನಿಯಾದಲ್ಲಿಯೂ ಆಹ್ವಾನ ಬಂದ ಮೇರೆಗೆ ಅಲ್ಲಿಯೂ ನನ್ನ ಪ್ರಬಂಧವು ಶ್ಲಾಘಿಸಲ್ಪಟ್ಟಿರುವುದನ್ನು ಕೆಳದಿ ಸಂಶೋಧನಾಲಯದಲ್ಲಿ ಅವಲೋಕಿಸಬಹುದು. ಇವುಗಳ ಪ್ರದರ್ಶನ ಕೈಗೊಂಡ ಮೇರೆಗೆ ಭಾರತ ಸರಕಾರ National Mission of Manuscripts ಯೋಜನೆ ಕೈಗೆತ್ತಿಗೊಂಡು, ಪ್ರಧಾನಿ ಶ್ರೀ ವಾಜಪೇಯಿರವರು ಸ್ವಾತಂತ್ರೋತ್ಸವದಲ್ಲಿ ಕೆಂಪು ಕೋಟೆಯಲ್ಲಿ ಇವುಗಳಿಗೆ ನೆರವು ನೀಡುವುದಾಗಿ ಪ್ರಕಟಿಸಿದರು.

೨೧. ಅನುಬಂಧ ನೋಡಿರಿ.

೨೨. ವಿಶ್ವ ಸಂಸ್ಕೃತ ಸಮ್ಮೇಳನ : ಪ್ರಬಂಧಗಳ ಸಂಪುಟ- A Dictionary of Tantric Technical Terms from Hindu Tantric Texts Andre Padonx, Paris, France ೧೩

೨೩. ಅನುಬಂಧ ನೋಡಿರಿ ಶೃಂಗೇರಿ ಮಠದ ವಿವರಣಾತ್ಮಕ ಹಸ್ತಪ್ರತಿ ಸೂಚಿ ನಂ ೫೭೧/೧, ಶ್ರೀ ಶೃಂಗೇರಿ ಜಗದ್ಗುರುಗಳ ಆಹ್ವಾನದ ಮೇರೆಗೆ ಮಠದಲ್ಲಿರುವ ಹಸ್ತಪ್ರತಿ ಕೆಳದಿ ಸಂಶೋಧನಾಲಯ ಕ್ಯಾಟಲಾಗ್ ಸಿದ್ಧಪಡಿಸಿಕೊಟ್ಟಿದ್ದು ಪ್ರಕಟವಾಗಬೇಕಾಗಿದೆ (ಅಪ್ರಕಟಿತ).

❖ ❖

೨

ಹಂಪಿ ಪರಿಸರದ ಅವಧೂತರು

ಡಾ. ಎಫ್. ಟಿ. ಹಳ್ಳಿಕೇರಿ

ಅವಧೂತ ಅಂದರೆ ಸಂಸಾರ ಬಂಧನದಿಂದ ದೂರವಾಗಿ ಆತ್ಮನಲ್ಲಿಯೇ ವಿಹರಿಸುವವನು, ವರ್ಣಾಶ್ರಮ ಧರ್ಮಗಳನ್ನು ತ್ಯಜಿಸಿದವನು, ಗುರುವಿನ ಮೂಲಕ ಸದ್ಗತಿಯನ್ನು ಹೊಂದಿದವನು ಎಂಬ ಇತ್ಯಾದಿ ಅರ್ಥಗಳಿವೆ. ಪಂಪ, ಬಾಚಿಕಾಯಕದ ಬಸವಣ್ಣ, ಗುರುಲಿಂಗ ವಿಭು, ಸಪ್ತಕಾವ್ಯದ ಗುರುಬಸವ, ಗುಬ್ಬಿ ಮಲ್ಲಣಾರ್ಯ, ಲಕ್ಷ್ಮೀಶ, ಮಹಾಲಿಂಗರಂಗ ಹೀಗೆ ಹಲವಾರು ಕವಿಗಳು ಅವಧೂತ ಪದವನ್ನು ತಮ್ಮ ಕಾವ್ಯಗಳಲ್ಲಿ ಆನುಷಂಗಿಕವಾಗಿ ಬಳಸಿರುವುದು ಕಂಡುಬರುತ್ತದೆ. ಹೀಗಾಗಿ ಈ ಪರಂಪರೆಗೆ ಸಾವಿರ ವರ್ಷಗಳ ಇತಿಹಾಸವಿದೆ. ಆದರೂ ಇದು ಹೆಚ್ಚು ಜನಪ್ರಿಯಗೊಂಡದ್ದು, ಒಂದು ಪರಂಪರೆಯಾಗಿ ರೂಪುಗೊಂಡದ್ದು, ೧೭ ಮತ್ತು ೧೮ನೆಯ ಶತಮಾನಗಳಲ್ಲಿ. ಮಹಲಿಂಗರಂಗ(೧೬೭೫),ನಿರಂಜನಾವಧೂತ(೧೭೦೦), ಚಿದಾನಂದಾವ ಧೂತ (೧೭೨೫),ಅವಧೂತ ಶಿವಯೋಗಿ(೧೭೫೦), ನಿರಂಜನಾರ್ಯ(೧೭೫೦), ನಿತ್ಯಾನಂದಾವಧೂತ(೧೮೦೦),ಪೂರ್ಣಾನಂದ ಅವಧೂತ ಶಿವಯೋಗಿ ಮೊದಲಾದವರು ತಮ್ಮ ಪ್ರಖರವಾದ ಚಿಂತನೆ ಮತ್ತು ಸಿದ್ಧಾಂತಗಳಿಂದ ಆಧ್ಯಾತ್ಮ, ವೇದಾಂತ ವಿಷಯವನ್ನೊಳಗೊಂಡ ವಿಶಿಷ್ಟಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯದಲ್ಲಿ ಅವಧೂತ ಪರಂಪರೆಯೊಂದರ ಬೆಳವಣಿಗೆಗೆ ಕಾರಣರಾಗಿದ್ದಾರೆ. ಅವರ ಮುಂದುವರಿಕೆಯಾಗಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಅವಧೂತರ ನೆಲೆಗಳು ಇಂದಿಗೂ ಅಸ್ತಿತ್ವದಲ್ಲಿರುವುದನ್ನು ನಾವು ಕಾಣಬಹುದು. ಅಂಥ ಅವಧೂತ ನೆಲೆಗಳಲ್ಲಿ ಪ್ರಮುಖವಾಗಿದೆ, ಹಂಪಿ.

ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳಲ್ಲಿ ಒಂದಾದ ಹಂಪೆಯು ಯಾರ ಒಡೆತನಕ್ಕೂ ಒಳಗಾಗದ ದೇವರಸಾಮ್ರಾಜ್ಯ. ಇಲ್ಲಿ ವಿರೂಪಾಕ್ಷನೇ ಅಧಿಪತಿ. ಆತನ ಹೆಸರಿನಿಂದಲೇ

ಇಲ್ಲಿನ ಶಾಸನಗಳು ರಚನೆಗೊಂಡಿರುವುದು ಇದಕ್ಕೆ ಸ್ಪಷ್ಟ ನಿದರ್ಶನ. ಹರಿಹರ ರಾಘವಾಂಕರಿಂದ ಸಾಹಿತ್ಯಕ ಕೇಂದ್ರವಾಗಿ ಮಹತ್ವ ಪಡೆದ ಇದು ನಂತರದಲ್ಲಿ ವಿಜಯನಗರ ಅರಸರಿಂದ ರಾಜಕೀಯ ಕೇಂದ್ರವಾಗಿ ಜಗತ್ತಿನಾದ್ಯಂತ ಗಮನ ಸೆಳೆಯಿತು. ಇದರ ಜೊತೆಜೊತೆಗೆ ಧಾರ್ಮಿಕವಾಗಿಯೂ ಇದು ಒಂದು ಪ್ರಮುಖ ನೆಲೆಯಾಗಿ ರೂಪುಗೊಂಡಿರುವುದು ಚರಿತ್ರೆಯಿಂದ ತಿಳಿದುಬರುತ್ತದೆ. ಶಿವಶರಣರು, ವಿರಕ್ತರು, ಸಾಧುಸಂತರು, ಸೂಫಿಗಳು, ಅವಧೂತರು, ದಾಸರು ಇನ್ನೂ ಹತ್ತು ಹಲವು ಪಂಥಗಳ ಕಾರ್ಯಸ್ಥಾನವಾಗಿದೆ. ವಿಶೇಷವಾಗಿ ಅವಧೂತರಿಗಂತೂ ಇದು ಹೇಳಿ ಮಾಡಿಸಿದ ತಾಣವಾಗಿದೆ. ಈ ಕಾರಣದಿಂದಾಗಿಯೇ ಈ ಪರಿಸರದಲ್ಲಿ ಅವಧೂತ ಪರಂಪರೆ ಇಂದಿಗೂ ಅಸ್ತಿತ್ವದಲ್ಲಿರುವುದನ್ನು ಗುರುತಿಸಬಹುದು.

ಹಂಪಿ ಪರಿಸರದ ಅವಧೂತ ಪರಂಪರೆಗೆ ಸುಮಾರು ಆರುನೂರು ವರ್ಷಗಳ ಇತಿಹಾಸವಿದೆ. ನೂರೊಂದು ವಿರಕ್ತರಲ್ಲಿ ಅವಧೂತ ಪರಂಪರೆಯೊಂದು ವಿಜಯನಗರ ಕಾಲಕ್ಕೆ ಬೆಳೆಯುತ್ತ ಬಂದಿರುವುದು ಕಂಡುಬರುತ್ತದೆ. ಎಂ.ಎಂ.ಕಲಬುರ್ಗಿ ಅವರು ಈ ನೂರೊಂದು ವಿರಕ್ತರಲ್ಲಿ ಕರಸ್ಥಲ ನಾಗಿದೇವ, ಕರಸ್ಥಲ ವೀರಣ್ಣೊಡೆಯ, ಬಾಲಸಂಗಯ್ಯ ಹೀಗೆ ಬಹಳಷ್ಟು ಜನ ಅವಧೂತ ಪಂಥಕ್ಕೆ ಸೇರಿದವರೆಂಬುದನ್ನು ಲೇಖನವೊಂದರಲ್ಲಿ ಅಭಿಪ್ರಾಯಪಟ್ಟಿದ್ದಾರೆ (ಮಾರ್ಗ-೩, ಪುಟ.೨೩೦). ಈಗ ಲಭ್ಯವಿರುವ ಆಕರಗಳನ್ನು ಗಮನಿಸಿ ಹೇಳುವುದಾದರೆ ನೂರೊಂದು ವಿರಕ್ತರಲ್ಲಿ ಪ್ರಸಿದ್ಧನಾಗಿದ್ದ ಸಪ್ತಕಾವ್ಯದ ಗುರುಬಸವ(೧೪೩೦) ಈ ಪರಿಸರದ ಮೊದಲ ಅವಧೂತನಾಗಿದ್ದಾನೆ. ಈತನ ನಂತರದಲ್ಲಿ ಮತ್ತೊಬ್ಬ ಪ್ರಮುಖ ಅವಧೂತನಾಗಿದ್ದವನು ಅಯೋಧ್ಯೆಯ ಚಿದಾನಂದಾವಧೂತ. ಈತನ ಶಿಷ್ಯಬಳಗದಲ್ಲಿ ಕಾಳಘಟ್ಟದ ರುದ್ರಾನಂದಾವಧೂತರು, ಚೆಳ್ಳಗುರುಕಿ ಎರ್ರಿತಾತನ ಶಿಷ್ಯ ಶಿವರಾಮಾವಧೂತರು ಈ ಪರಿಸರದಲ್ಲಿ ಕಂಡುಬರುವ ಇನ್ನಿತರೆ ಪ್ರಮುಖ ಅವಧೂತರು. ಈ ನಾಲ್ಕು ಜನ ಅವಧೂತರ ಇತಿವೃತ್ತ ವಿಚಾರ,ವ್ಯಕ್ತಿವೈಶಿಷ್ಟ್ಯ ಮತ್ತು ಸಾಧನೆಗಳನ್ನು ಕುರಿತು ವಿವೇಚಿಸುವುದು ಪ್ರಸ್ತುತ ಸಂಪ್ರಬಂಧದ ಉದ್ದೇಶವಾಗಿದೆ.

ಸಪ್ತಕಾವ್ಯದ ಗುರುಬಸವ

'ವಿರಕ್ತರಲ್ಲಿ ಅವಧೂತ ಅವಧೂತರಲ್ಲಿ ವಿರಕ್ತ' ಎಂಬ ಅಭಿದಾನಕ್ಕೆ ಪಾತ್ರನಾದವನು, ಗುರುಬಸವ. ಯೋಗವಿದ್ಯೆಯಲ್ಲಿ ಪರಿಣಿತನಾಗಿದ್ದರಿಂದ 'ಯೋಗದ ಗುರುಬಸವ'ನೆಂದೂ ಈತನನ್ನು ಕರೆಯಲಾಗಿದೆ. ಸ್ವರೂಪಾಮೃತ, ವೃಷಭಗೀತೆ, ಕಲ್ಯಾಣೇಶ್ವರ, ಶಿವಯೋಗಾಂಗ ವಿಭೂಷಣ, ಸದ್ಗುರು ರಹಸ್ಯ, ಅವಧೂತ ಗೀತೆ ಮತ್ತು ಮನೋವಿಜಯ ಕಾವ್ಯ ಎಂಬ ಏಳು ಕೃತಿಗಳನ್ನು ರಚಿಸುವುದರ ಮೂಲಕ 'ಸಪ್ತಕಾವ್ಯದ ಗುರುಬಸವ'ನೆಂದು ಸಾಹಿತ್ಯದಲ್ಲಿ ಪರಿಚಿತನಾಗಿದ್ದಾನೆ. ವೀರಶೈವ ವೇದಾಂತವನ್ನು ನಿರೂಪಿಸುವ ಗುರುಬಸವನ ಕೃತಿಗಳೆಲ್ಲವೂ

ಗುರುಶಿಷ್ಯ ಸಂವಾದ ರೂಪದಲ್ಲಿವೆ. ಮಾನಸಪೂಜೆ ಮತ್ತು ಜ್ಞಾನಮಾರ್ಗಕ್ಕೆ ಹೆಚ್ಚಿನ ಒತ್ತು ಕೊಟ್ಟಿರುವುದು ಇಲ್ಲಿನ ವಿಶೇಷತೆಯಾಗಿದೆ.

ಅವಧೂತದ ಲಕ್ಷಣ, ಅರ್ಥ, ಪ್ರಕಾರ, ವ್ಯಾಪ್ತಿಯನ್ನು ನಿರೂಪಿಸುವ ಅವಧೂತ ಗೀತೆ ಈತನ ಆಧ್ಯಾತ್ಮ ನಿಲುವುಗಳನ್ನು ತಿಳಿಸುವ ಪ್ರಮುಖ ಕೃತಿ. ಚೌಪದಿ ರೂಪದ ೧೦೧ ಪದ್ಯಗಳನ್ನು ಒಳಗೊಂಡ ಇದು ಸರಳ ಶೈಲಿಯಲ್ಲಿದ್ದು, ವಿಶಿಷ್ಟ ತತ್ವವನ್ನೊಳಗೊಂಡಿದೆ. ಈತನ ದೃಷ್ಟಿಯಲ್ಲಿ ಅವಧೂತನೆಂದರೆ ಸರ್ವಸಂಗ ಪರಿತ್ಯಾಗಿಯಾದ ಸನ್ಯಾಸಿ, ದಿಗಂಬರ, ಮುಮುಕ್ಷು ಮಾರ್ಗದಲ್ಲಿ ನಡೆದು ಆತ್ಮಾನಂದದಲ್ಲಿ ವಿರಮಿಸುವ ಯೋಗಿ, ಹಸಿವು ತೃಷಾದಿಗಳನ್ನು ಪರಿಹರಿಸಿ, ಸಕಲೇಂದ್ರಿಯಗಳನ್ನು ನಿಗ್ರಹಿಸಿ, ಯಮನನ್ನು ಜಯಿಸಿದ ಶಿವಕರಜಾತ. ಜೊತೆಗೆ ಅವಧೂತರಲ್ಲಿ ಗಾರ್ಹಸ್ಥ್ಯಾವಧೂತ, ಶೈವಾವಧೂತ, ಬ್ರಹ್ಮಾವಧೂತ ಹಾಗೂ ಹಂಸಾವಧೂತರೆಂಬ ನಾಲ್ಕು ಪ್ರಬೇಧಗಳಿರುವುದನ್ನು ಗುರುಬಸವ ಗುರುತಿಸಿದ್ದಾನೆ. ಕ್ರಿಯಾ-ಜ್ಞಾನ-ಯೋಗ-ಭಕ್ತಿ ಎಂಬ ಚತುರ್ವಿಧ ಯೋಗಗಳನ್ನು ಸಮನ್ವಯ ಮಾಡಿಕೊಂಡ ಗುರುಬಸವನ ಅವಧೂತ ಮಾರ್ಗವು ಶಿವಯೋಗದ ಹಿನ್ನೆಲೆಯಲ್ಲಿಯೇ ಹೆಚ್ಚು ಪ್ರಭಾವಿತಗೊಂಡಿದೆ.

ಸ್ವಾನುಭವದ್ವಯದಿಂ ಗುರುಬಸವ
ತಾನವಧೂತನೆನಿಸಿ ಕೇಳ್ದಿರವ
ಜ್ಞಾನೋತ್ತರ ಮಾರ್ಗದ ಬಹುವಿಧವ
ಸಾನಂದದಿ ಪೇಳ್ದನು ನಿಜಮತವ

ಎಂದು ಹೇಳುವುದರ ಮೂಲಕ ತನ್ನನ್ನು ಸ್ವಾನುಭವ ಸಿದ್ಧನಾದ ಅವಧೂತನೆಂದು ಕರೆದುಕೊಂಡಿದ್ದಾನೆ.

ಚಿದಾನಂದಾವಧೂತ

ಹಂಪಿ ಪರಿಸರದ ಮತ್ತೊಬ್ಬ ಪ್ರಮುಖ ಅವಧೂತ, ಚಿದಾನಂದಾವಧೂತ. ಜ್ಞಾನಸಿಂಧು, ದೇವಿಮಹಾತ್ಮೆ, ಕಥಾಸಾಗರ, ಚಿದಾನಂದ ಲಹರಿ, ಚಿದಾನಂದ ರಗಳೆ, ತತ್ವ ಚಿಂತಾಮಣಿ ಹೀಗೆ ವೈವಿಧ್ಯಮಯವಾದ ಹತ್ತಾರು ಕೃತಿಗಳು ಇವರಿಂದ ರಚನೆಗೊಂಡಿವೆ. ಅವಧೂತಸಾಹಿತ್ಯ ಸಮೃದ್ಧಿಗೆ ಕಾರಣರಾದ ಇವರನ್ನು 'ಕವಿಗಳಲ್ಲಿ ಅವಧೂತ ಅವಧೂತರಲ್ಲಿ ಕವಿ' ಎಂದೂ ಕರೆದರೂ ತಪ್ಪಲ್ಲ. ಅಷ್ಟರಮಟ್ಟಿಗೆ ಇವರ ಕೃತಿಗಳು ಸಂಖ್ಯೆ ಮತ್ತು ಸತ್ವದಿಂದ ಅಧಿಕ ಪ್ರಮಾಣದಲ್ಲಿವೆ. ಮೂಲತಃ ಆದವಾನಿ ಸಮೀಪದ ಹಿರಿಯ ಹರಿವಾಣ ಗ್ರಾಮದಲ್ಲಿ ಜನಿಸಿದ ಈತನಿಗೆ ಗುರು ಕೊಂಡಪ್ಪನಿಂದ ಮುಕ್ತಿ ಪಡೆದ ಕಾರಣ ಚಿದಾನಂದಾವಧೂತನಾದನು. ಗುರುವಿನ ಆಜ್ಞೆಯಂತೆ ಅಯೋಧ್ಯೆ ಗ್ರಾಮಕ್ಕೆ ಬಂದು ನೆಲಸುತ್ತಾನೆ. ಈ ಗ್ರಾಮ ಕಂಪ್ಲಿ ಗಂಗಾವತಿ ರಸ್ತೆಯಲ್ಲಿ ಬರುವ ಚಿಕ್ಕಜಂತಕಲ್ ಊರಿನಿಂದ ನಾಲ್ಕು ಕಿ.ಮೀ.ಗಳ ಅಂತರದಲ್ಲಿ ತುಂಗಭದ್ರಾ ನದಿ ದಂಡೆಯ ಮೇಲಿದೆ. ಈಗಲೂ ಇಲ್ಲಿ

ಚಿದಾನಂದಾವಧೂತರ ಆಶ್ರಮ, ಯೋಗಾಸನಕ್ಕೆ ಕುಳಿತುಕೊಳ್ಳುತ್ತಿದ್ದ ಅಶ್ವತ್ಥ ಕಟ್ಟೆಯ ಕುರುಹುಗಳು ಕಂಡುಬರುತ್ತವೆ.

ಜ್ಞಾನಸಿಂಧು, ಚಿದಾನಂದಾವಧೂತರ ಬೃಹತ್ಕೃತಿಗಳಲ್ಲೊಂದು. ಅದ್ವೈತ ವೇದಾಂತಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಚರ್ಚಿಸುವ ಇದರಲ್ಲಿ ಹಠಯೋಗ, ರಾಜಯೋಗ, ಭಕ್ತಿಯೋಗ, ಲಯಯೋಗ ಇತ್ಯಾದಿ ಯೋಗಾಂಗಳ ವಿಚಾರಗಳನ್ನು ಸುದೀರ್ಘವಾಗಿ ವಿವರಿಸಲಾಗಿದೆ.

ಅವಧೂತನಾಗಿ ಹುಟ್ಟಿ ಅವಧೂತನಾಗಿ ಬೆಳೆದು ಅವಧೂತನಾಗಿ ಸತ್ತ ಚಿದಾನಂದಾವಧೂತರನ್ನು ಕುರಿತು ಅಯ್ಯಪ್ಪ ಕವಿಯು ಚಿದಾನಂದಾವಧೂತ ಚಾರಿತ್ರ್ಯ ಎಂಬ ಕೃತಿಯೊಂದನ್ನು ರಚಿಸಿದ್ದಾನೆ. ಬಾಲ್ಯ ವಿವರ, ಕ್ಷೇತ್ರ ಸಂಚಾರ, ಸದ್ಗುರು ಕಟಾಕ್ಷ, ಹಠಯೋಗ, ರಾಜಯೋಗ, ಕಾಶಿಯಾತ್ರೆ ಹಾಗೂ ಚಿದಾನಂದಾವಧೂತರ ಚರಿತ್ರೆ ಎಂಬ ಏಳು ಅಧ್ಯಾಯಗಳಲ್ಲಿ ಚಿದಾನಂದಾವಧೂತರ ಜೀವನ ಮತ್ತು ಸಾಧನೆಗಳನ್ನು ನಿರೂಪಿಸಲಾಗಿದೆ. ಕವಿ ಅಯ್ಯಪ್ಪನು ಚಿದಾನಂದಾವಧೂತರ ಶಿಷ್ಯಬಳಗದಲ್ಲಿದ್ದವನು. ಹೀಗಾಗಿ ಈ ಕೃತಿಗೆ ಪರಿಪೂರ್ಣತೆ ಪ್ರಾಪ್ತವಾಗಿದೆ.

ಕಾಳಘಟ್ಟದ ರುದ್ರಾನಂದಾವಧೂತ

ಹೊಸಪೇಟೆ ತಾಲೂಕಿನ ಅನಂತಶಯನಗುಡಿ ಗ್ರಾಮದ ಎಡಭಾಗಕ್ಕೆ ಆರು ಕಿ. ಮೀ. ಗಳ ಅಂತರದಲ್ಲಿ ಹಂಪಿ ಪರಿಸರದಲ್ಲಿ ಕಾಳಘಟ್ಟ ಎಂಬ ಪ್ರದೇಶವಿದೆ. ವಿಜಯನಗರ ಕಾಲದ ಸೈನಿಕರಿಗೆ ತರಬೇತಿ ನೀಡುತ್ತಿದ್ದ ಸ್ಥಳವಾದ್ದರಿಂದ ಇದಕ್ಕೆ ಕಾಳಘಟ್ಟ ಎಂಬ ಹೆಸರು ಬಂದಿರುವುದಾಗಿ ಈ ಪರಿಸರದ ಜನ ಹೇಳುತ್ತಾರೆ. ಈಗ ಬೆಟ್ಟದ ಹತ್ತಿರ ರುದ್ರಾನಂದಾವಧೂತರ ಆಶ್ರಮವೊಂದನ್ನು ಬಿಟ್ಟರೆ ಇಲ್ಲಿ ಜನವಸತಿಯಾಗಲಿ, ಊರಾಗಲಿ ಅಸ್ತಿತ್ವದಲ್ಲಿಲ್ಲ. ಅವಧೂತ ಪರಂಪರೆಯಲ್ಲಿ ಪ್ರಮುಖವಾಗಿರುವ ಚಿದಾನಂದಾವಧೂತರ ಶಿಷ್ಯಪರಂಪರೆಯಲ್ಲಿ ಸಿದ್ಧಪುರುಷನೆಂದು ಹೆಸರು ಮಾಡಿದ, ಹಠಯೋಗಿ ತಿಮ್ಮಾವಧೂತರು ಈ ಆಶ್ರಮದ ಸ್ಥಾಪಕರು. ಅವರ ಶಿಷ್ಯರಲ್ಲಿ ರುದ್ರಾನಂದಾವಧೂತರಿಗೆ ಅಗ್ರಸ್ಥಾನ.

ಆಶ್ರಮವು ತುಂಬ ಪ್ರಶಾಂತವಾದ ವಾತಾವರಣದಲ್ಲಿದ್ದು, ತುಂಗಭದ್ರ ನದಿ ದಂಡೆಗೆ ಹೊಂದಿಕೊಂಡಿದೆ. ರುದ್ರಾನಂದಾವಧೂತರ ಮಠದ ಎಡಭಾಗದಲ್ಲಿ ತಿಪ್ಪೇಸ್ವಾಮಿ ಮತ್ತು ರಂಗಾವಧೂತರ ಜ್ಞಾಪಕ ಸಮಾಧಿಗಳಿವೆ. ಮುಂಭಾಗದಲ್ಲಿ ರುದ್ರಾನಂದಾವಧೂತ ಶಿಷ್ಯರ ಸಮಾಧಿಗಳ ಜೊತೆಗೆ ನರಸಿಂಹಾವಧೂತರ ಶಿಷ್ಯೆ ಸಿದ್ಧಮ್ಮಾಜಿಯ ಸಮಾಧಿಯಿದೆ. ಬಲಭಾಗದಲ್ಲಿ ಒಂದು ಅನುಭವ ಮಂಟಪ, ಅದರ ಪಕ್ಕಕ್ಕೆ ನರಸಿಂಹಾವಧೂತರ ನಿಜ ಸಮಾಧಿಯಿದೆ. ಅಲ್ಲದೇ ಆಶ್ರಮದ ಆವರಣದಲ್ಲಿ ಕೃಷ್ಣಾವಧೂತ, ಲಕ್ಷ್ಮೀದೇವಿ, ರತ್ನಮ್ಮ, ಬಸವರಾಜಪ್ಪ, ಭೀಮಪ್ಪ, ನೀಲಮ್ಮ, ಶಾಂತಮ್ಮ, ತಿಪ್ಪಣ್ಣ ಮೊದಲಾದ ಶಿಷ್ಯಂದಿರ ಸಮಾಧಿಗಳಿವೆ. ಇವು ದತ್ತಾತ್ರೇಯ ಪೀಠದ ಶೈಲಿಯಲ್ಲಿ ಅಂದರೆ ಅ ಉ ಮ ಕಾರಗಳ

ಮಾದರಿಯಲ್ಲಿ ನಿರ್ಮಿಸಲ್ಪಟ್ಟಿವೆ. ಮಠದ ಎಡಭಾಗದಲ್ಲಿ ಕೊಂಚ ನದಿತೀರದ ಬೆಟ್ಟದಲ್ಲಿ ಒಂದು ಸಣ್ಣ ಗವಿಯು ಕಾಣಿಸುತ್ತದೆ. ಇದು ರುದ್ರಾನಂದಾವಧೂತರು ಯೋಗಾಭ್ಯಾಸ ಮಾಡುವ ಸ್ಥಳವಾಗಿತ್ತು. ಈ ಬೆಟ್ಟದ ಮೇಲೊಂದು ಬೃಹತ್ ಮೂರು ಬಂಡೆಗಳ ಮಧ್ಯದಲ್ಲಿ ನಿಸರ್ಗದತ್ತವಾದ ಸಣ್ಣ ಮನೆಯಿದೆ. ಇದನ್ನು ತ್ರಿಕೂಟಗಿರಿಯೆಂದು ಕರೆಯಲಾಗುತ್ತದೆ. ಇಲ್ಲಿ ತ್ರಿನಯನನ ತ್ರಿಕಾಲ ಪೂಜೆ ನಡೆಯುತ್ತಿತ್ತು. ಇದರೊಳಗಡೆ ರುದ್ರಾನಂದಾವಧೂತ, ಕೆಂಚಾವಧೂತ, ತಿಪ್ಪೇಸ್ವಾಮಿ, ರಂಗಾವಧೂತ ಮತ್ತು ನರಸಿಂಹಾವಧೂತರ ಜ್ಞಾಪಕಾರ್ಥವಾಗಿ ಒಂದರ ಮೇಲೊಂದು ಸಮಾಧಿಗಳನ್ನು ಕಟ್ಟಲಾಗಿದೆ. ಇಷ್ಟೆಲ್ಲ ಒಂದು ಕಾಲದಲ್ಲಿ ವೈಭವಯುತವಾಗಿದ್ದ ಈ ಆಶ್ರಮ ಇಂದು ಅನಾಥ ಸ್ಥಿತಿಯಲ್ಲಿದೆ. ನರಸಿಂಹಾವಧೂತರ ತಮ್ಮನಾದ ರುದ್ರಪ್ಪನವರು ಈ ಆಶ್ರಮದ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ದೊಡ್ಡಸಿದ್ಧವ್ವನಹಳ್ಳಿ, ರುದ್ರಾನಂದಾವಧೂತರ ಜನ್ಮಸ್ಥಳ. ಲೌಕಿಕ ಜೀವನದ ಬಗೆಗೆ ಜಿಗುಪ್ಸೆ ಹೊಂದಿ, ವೈರಾಗ್ಯ ತಾಳಿ, ವಿರಾಗಿಯಾಗಿ ಊರೂರು ಅಲೆಯುತ್ತ ಹಂಪಿಗೆ ಬಂದು, ಕಾಳಘಟ್ಟದ ತಿಮ್ಮಾವಧೂತರ ಶಿಷ್ಯರಾಗಿ ಗುರುಸೇವೆಯಲ್ಲಿ ತೊಡಗುತ್ತಾರೆ. ಅಲ್ಲಿ ಗುರೂಪದೇಶವನ್ನು ಪಡೆದು ರಾಜಯೋಗ ಮತ್ತು ಹಠಯೋಗವನ್ನು ಸಾಧಿಸುತ್ತಾರೆ. ಈಗಿನ ಆಶ್ರಮದ ಎಡಭಾಗಕ್ಕೆ ತುಂಗಭದ್ರ ನದಿ ದಂಡೆಯಲ್ಲಿ ಸಣ್ಣಗವಿಯೊಂದು ಇದೆ. ಇಲ್ಲಿಯೇ ರುದ್ರಾನಂದಾವಧೂತರು ಯೋಗಾಭ್ಯಾಸವನ್ನು ಮಾಡುತ್ತ, ಆಯುರ್ವೇದ ವಿದ್ಯೆಯನ್ನು ಕಲಿತಿದ್ದರು. ತಮ್ಮನ್ನು ನಂಬಿ ಬಂದ ಭಕ್ತರ ರೋಗರುಜಿನಗಳನ್ನೂ ಹೋಗಲಾಡಿಸುವಲ್ಲಿ ಶ್ರಮಿಸುತ್ತಿದ್ದರು. ಹೀಗಾಗಿ ಇವರ ವ್ಯಕ್ತಿತ್ವ, ಸಾಧನೆ, ಸಿದ್ಧಿಯನ್ನರಿತವರು ಶಿಷ್ಯತ್ವವನ್ನು ಪಡೆದುಕೊಂಡಿದ್ದಾರೆ. ಅಂಥವರಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಕಳವೀಭಾಗಿಯ ರಾಜಯೋಗಿ ತಿಪ್ಪೇಸ್ವಾಮಿಗಳು, ಇದೇ ಜಿಲ್ಲೆಯ ಕೊಳಾಳು ಗ್ರಾಮದ ಸಿದ್ಧಪುರುಷ ಕೆಂಚಪ್ಪನವರು ಪ್ರಮುಖರು. ಮುಂದೆ ಇವರು ತುಂಬ ಪ್ರಸಿದ್ಧಿ ಪಡೆದ ಕಾರಣ ಅಪಾರ ಭಕ್ತರನ್ನು ಪಡೆದಿರುವುದನ್ನು ಕಾಣಬಹುದು. ರುದ್ರಾನಂದಾವಧೂತರು ತಮ್ಮ ಅಂತ್ಯದ ಸಮಯದಲ್ಲಿ ತನ್ನೆಲ್ಲ ಆಸ್ತಿ ಮತ್ತು ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಬಗೆಗೆ ಶಿಷ್ಯೆ ದುರ್ಗಮ್ಮಳನ್ನು ಕರೆದು "ನನ್ನ ಶಿಷ್ಯ ಮಕ್ಕಳೆಲ್ಲ ಬಂದು ನನ್ನ ಸಮಾಧಿಯ ಮೇಲೆ ಜೋಳದ ಕಾಳುಗಳನ್ನು ಚೆಲ್ಲಬೇಕು. ಯಾರು ಹಾಕಿದ ಜೋಳದ ಕಾಳುಗಳು ಹರಳುಗಳಾಗುವವೋ ಅವರೇ ನನ್ನ ಉತ್ತರಾಧಿಕಾರಿಗಳು" ಎಂದು ಹೇಳಿದರು. ಆ ಪ್ರಕಾರ ಕೆಂಚಾವಧೂತರು ಮತ್ತು ತಿಪ್ಪೇಸ್ವಾಮಿಗಳು ಹಾಕಿದ ಜೋಳದ ಕಾಳುಗಳು ಹರಳುಗಳಾದವು. ಇದರ ಪ್ರತೀಕವಾಗಿ ತಿಪ್ಪೇಸ್ವಾಮಿಗಳು ಕಳವೀಭಾಗಿಯಲ್ಲಿ, ಕೆಂಚಾವಧೂತರು ಕೊಳಾಳುವಿನಲ್ಲಿ ಅವಧೂತ ಪರಂಪರೆಯನ್ನು ಮುಂದುವರೆಸಿದರು. ತಿಪ್ಪೇಸ್ವಾಮಿಗಳ ಶಿಷ್ಯನಾಗಿ ರಂಗಾವಧೂತರು, ರಂಗಾವಧೂತರ ಶಿಷ್ಯನಾಗಿ ನರಸಿಂಹಾವಧೂತರು ಈ ಪರಂಪರೆಯನ್ನು ಮುನ್ನಡೆಸುತ್ತಾರೆ.

ತಿಪ್ಪೇಸ್ವಾಮಿ ಮತ್ತು ರಂಗಾವಧೂತರ ನಿಜ ಸಮಾಧಿಗಳು ಕಳವೀಭಾಗಯಲ್ಲಿದ್ದರೆ, ನರಸಿಂಹಾವಧೂತರ ಸಮಾಧಿ ಕಾಳಘಟ್ಟದಲ್ಲಿದೆ. ಇವರು ಅಪಾರ ಶಿಷ್ಯಬಳಗವನ್ನು ಹೊಂದಿದ್ದರೆಂಬುದಕ್ಕೆ ಆಶ್ರಮದಲ್ಲಿರುವ ಪತ್ರಗಳೇ ನಿದರ್ಶನ. ನರಸಿಂಹಾವಧೂತರ ಪುಣ್ಯತಿಥಿ ಹಾಗೂ ವಿಶೇಷ ದಿನಗಳಂದು ಭಕ್ತರು ಆಶ್ರಮಕ್ಕೆ ಆಗಮಿಸಿ ಶಿವಭಜನೆ, ಆಧ್ಯಾತ್ಮಿಕ ಚಿಂತನೆಗಳಲ್ಲಿ ಭಾಗವಹಿಸುವ ಪದ್ಧತಿ ನಿರಂತರವಾಗಿ ನಡೆಯುತ್ತಿದೆ.

ಸರಕಾರಿ ನೌಕರರಾಗಿದ್ದ ನರಸಿಂಹಾವಧೂತರು ಬಿಡುವಿನ ವೇಳೆಯಲ್ಲಿ ಯೋಗಮಾರ್ಗ ಹಿಡಿದು ಆಧ್ಯಾತ್ಮ ಸಾಧನೆಯನ್ನು ಮಾಡಿದವರು. ಲಿಂಗ, ಜಾತಿ, ಮತ, ಧರ್ಮಭೇದವಿಲ್ಲದೆ ನೂರಾರು ಜನ ಶಿಷ್ಯರನ್ನು ಹೊಂದಿದ್ದ ಇವರು ಆಶ್ರಮದಲ್ಲಿ ದಿನನಿತ್ಯ ಶಿವಭಜನೆ, ದೇವಿ ಪಾರಾಯಣ, ಜ್ಞಾನಸಿಂಧು ಪ್ರವಚನ, ಯೋಗಾಭ್ಯಾಸ ನಡೆಸುತ್ತಿದ್ದರು. ಇದಕ್ಕಾಗಿ ಬರುತ್ತಿದ್ದ ಭಕ್ತಾದಿಗಳಿಗೆ ನಿತ್ಯ ಅನ್ನಸಂತರ್ಪಣೆ ಏರ್ಪಡಿಸುತ್ತಿದ್ದರು. ಗುರು ರಂಗಾವಧೂತರ ಅಪೇಕ್ಷೆಯಂತೆ ವೇದಾಂತ ಗ್ರಂಥಗಳನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಸರಳವಾದ ಭಾಷೆಯಲ್ಲಿ ಕೃತಿಗಳನ್ನು ರಚಿಸಿದುದು ಇವರ ಸಾಧನೆ ಗಳಲ್ಲೊಂದು. ಚಿದಾನಂದಾವಧೂತರನ್ನು ಕುರಿತು ಶ್ರೀ ಝುಂಕಣ್ಣನವರ ಬಾಲಲೀಲೆ ಹಾಗೂ ಸ್ತೋತ್ರರೂಪದ ಶ್ರೀ ರಾಜರಾಜೇಶ್ವರಿಯ ಸ್ತುತಿ ಎಂಬ ಎರಡು ಕೃತಿಗಳನ್ನು ಪ್ರಕಟಿಸಿದ್ದಾರೆ. ಏಳು ಸಂಧಿಗಳಲ್ಲಿ ನಿರೂಪಗೊಂಡ ಕವಿ ಅಯ್ಯಪ್ಪನ ಚಿದಾನಂದಾವಧೂತ ಚಾರಿತ್ರವನ್ನು ಮೂಲವನ್ನಾಗಿಟ್ಟುಕೊಂಡು ರಚನೆಗೊಂಡ ಗದ್ಯಕೃತಿಯಾಗಿದೆ, ಝುಂಕಣ್ಣನವರ ಬಾಲಲೀಲೆ. ಇದು ಪೀಠಿಕಾ ಅಧ್ಯಾಯ, ಝುಂಕಣ್ಣನವರ ಬಾಲಲೀಲೆಯು, ಕ್ಷೇತ್ರಸಂಚಾರ, ಸದ್ಗುರುಗಳ ಮನೆಯಲ್ಲಿ ಸೇವಾವೃತ್ತಿ, ಸದ್ಗುರುಗಳ ಲಕ್ಷಣ, ಕಾಲನಿರ್ಣಯ, ಸದ್ಗುರು ಕಟಾಕ್ಷ, ಹಠ ರಾಜಯೋಗ, ಶುದ್ಧರಾಜಯೋಗ, ಕಾಶಿಯಾತ್ರೆ, ಅವಧೂತರ ಚರಿತ್ರೆ ಮತ್ತು ಜೀವನ್ಮುಕ್ತಿ ಎಂಬ ಹನ್ನೆರಡು ಅಧ್ಯಾಯಗಳಲ್ಲಿ ವಿಸ್ತೃತಗೊಂಡಿದೆ.


ಶಿವರಾಮಾವಧೂತರು

ಚೆಳ್ಳಗುರಿಕಿ ಎರ್ರಿತಾತನ ಪ್ರಭಾವಕ್ಕೊಳಗಾಗಿ ಹಲವಾರು ವರ್ಷ ಸೇವೆಗೈದು ಶಿಷ್ಯತ್ವವನ್ನು ಪಡೆದು ಅವರ ಆಜ್ಞೆಯಂತೆ ಹಂಪಿಗೆ ಬಂದು ನೆಲಸಿದವರು, ಶಿವರಾಮಾವಧೂತರು. ಈಗ ಹಂಪಿಯ ಹೇಮಕೂಟದಲ್ಲಿ ಶ್ರೀ ಸದ್ಗುರು ಶಿವರಾಮಾವಧೂತರ ಆಶ್ರಮವು ಕಂಗೊಳಿಸುತ್ತಿದೆ. ಮೂಲತಃ ಹೂವಿನಹಡಗಲಿ ತಾಲೂಕಿನ ಮೈಲಾರ ಶಿವರಾಮಾವಧೂತರ ಜನ್ಮಗ್ರಾಮ. ಜೀವನದಲ್ಲಿ ದುರ್ಜನರ ಸಹವಾಸದಿಂದಾಗಿ ಮನೆ ಆಸ್ತಿ ಕಳೆದುಕೊಂಡಿದ್ದು, ನಾಲ್ಕುಜನ ಮಕ್ಕಳು ಕಾಯಿಲೆಗೆ ತುತ್ತಾಗಿ ಮರಣಹೊಂದಿದ್ದು ಇವರ ವೈರಾಗ್ಯಕ್ಕೆ ಕಾರಣವಾಯಿತು. ಊರು ಬಿಟ್ಟು ಹಂಪನೂರು ಸೇರಿ ಓದಿನಮಠ ಪ್ರಾರಂಭಿಸಿ ಮಕ್ಕಳಿಗೆ ವಿದ್ಯೆಬುದ್ಧಿಯನ್ನು ಬೋಧಿಸತೊಡಗುತ್ತಾರೆ. ಹಂಪೆ ವಿರೂಪಾಕ್ಷನ ಪರಮಭಕ್ತರಾದ ಶಿವರಾಮಾವಧೂತರು ತೀರ್ಥಕ್ಷೇತ್ರಗಳನ್ನು ಅಲೆಯುತ್ತ ಹುಬ್ಬಳಿಯ ಸದ್ಗುರು

ಸಿದ್ಧಾರೂಢರ ಆಶ್ರಮಕ್ಕೆ ಬರುತ್ತಾರೆ. ಆರೂಢರ ಆದೇಶದಂತೆ ಚೇಳಗುರಿಕಿಗೆ ಹೋಗಿ ನಿರಂತರ ಐದು ವರ್ಷ ಸೇವೆ ಸಲ್ಲಿಸಿ ತಾತನ ಕೃಪೆಗೆ ಪಾತ್ರರಾಗುತ್ತಾರೆ. ದಿನಾಲು ತಾತನ ದೇಹದಿಂದ ಸೋರುವ ಮಲಮೂತ್ರಾದಿಗಳನ್ನು ತೊಳೆಯುತ್ತ ಬೆಳಗಾಗುವುದರೊಳಗೆ ಮಠದ ಆವರಣವನ್ನು ಸ್ವಚ್ಛಗೊಳಿಸಿ ಗುರುಸೇವೆಯಲ್ಲಿ ತಲ್ಲೀನರಾಗಿರುತ್ತಿದ್ದರು. ಉಳಿದ ಭಕ್ತಸಮೂಹ ಇವನ್ಯಾರವ, ಯಾವ ಊರಿನವ, ಯಾವ ಕುಲದವನೆಂದು ಪೀಡಿಸಿದರೂ ನೊಂದುಕೊಳ್ಳದೆ ದೃಢಭಕ್ತಿಯಿಂದ ತಾತನ ಸೇವೆಗೈದಿದ್ದಾರೆ. ನೀನು ಸಾಧುಗಿರಿ(ಚಾಕುಬಂಡೆ)ಗೆ ಹೋಗಿ ವಾಸಿಸಯ್ಯ, ನಾನಲ್ಲಿಗೆ ಬರುವೆನಯ್ಯ ಎಂದು ಆಶಿರ್ವದಿಸಿ ತಾತನವರು ಕಳುಹಿಸಿದರಂತೆ. ಅದರಂತೆ ಶಿವರಾಮಾವಧೂತರು ಚಾಕುಬಂಡೆಯಲ್ಲಿ ಐದು ವರ್ಷಗಳ ಕಾಲ ನೆಲೆನಿಂತು ಭಜನೆ, ಆರಾಧನೆ, ಅನ್ನಸಂತರ್ಪಣೆ ಇತ್ಯಾದಿ ಸತ್ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ನಂತರ ತಾತನವರ ಆದೇಶದಂತೆ ಹಂಪಿಗೆ ಬಂದು ಸೀತಾಸರೋವರದ ಗವಿಯಲ್ಲಿ ಯೋಗ ತಪಸ್ಸುಗಳಲ್ಲಿ ನಿರತರಾದರು. ಕ್ರಮೇಣ ಅಪಾರ ಶಿಷ್ಯರನ್ನು ಪಡೆದ ಇವರು ಇಷ್ಟಾರ್ಥಗಳನ್ನು ನೆರವೇರಿಸುವ ಪೂಜ್ಯರಾದರು. ಕೊನೆಗಾಲದಲ್ಲಿ ಶಿಷ್ಯರನ್ನು ಕರೆದು 'ನಾನು ಬಂದ ಕಾರ್ಯ ಮುಗಿಯಿತು. ನನ್ನ ಸಮಾಧಿಯನ್ನು ನಿಂತು ಮುಗಿಸಿ ಹೋಗಿರಿ' ಎಂದು ತಿಳಿಸಿ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತ ಶಾಲಿವಾಹನ ಶಕ ೧೮೫೬ (೧೯೪೩) ಭಾವನಾಮ ಸಂವತ್ಸರ ಶರದೃತು ಮಾಸ ಅಶ್ವಯುಜ ದುರ್ಗಾಷ್ಟಮಿಯ ಶುಭದಿನದಂದು ಶಿವನಲ್ಲಿ ಲೀನವಾದರು.

ಇವರ ಶಿಷ್ಯ ಶಿವಶರಣಾನಂದರು ಗುರುಗಳಂತೆ ಆಶ್ರಮಕ್ಕೆ ಬರುವ ಭಕ್ತರ ನೋವು ಕಷ್ಟಗಳನ್ನು ಪರಿಹರಿಸುವಲ್ಲಿ ವಿಶೇಷ ಕಾಳಜಿವಹಿಸಿದ್ದಾರೆ. ಶಿವಶರಣಾನಂದರ ನಂತರ ಕಟ್ಟೆ ಬಸವರಾಜಸ್ವಾಮಿಯವರು ಆಶ್ರಮದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಇವರಿಬ್ಬರ ಸಮಾಧಿಗಳನ್ನು ಈ ಆಶ್ರಮದ ಆವರಣದಲ್ಲಿ ಈಗಲೂ ಕಾಣಬಹುದು. ಮುಂದೆ ಇಂಚಲ ಸಾಧು ಸಂಸ್ಥಾನ ಮಠದ ಪೀಠಾಧಿಕಾರಿಗಳಾದ ಶ್ರೀ ಶಿವಾನಂದ ಭಾರತಿ ಮಹಾಸ್ವಾಮಿಗಳು, ಅವರ ತರುವಾಯ ಅಂದರೆ ಈಗ ವಿದ್ಯಾನಂದ ಭಾರತಿ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಆಶ್ರಮದಲ್ಲಿ ಪೂಜೆ, ಪ್ರವಚನಗಳ ಜೊತೆಗೆ ಶಿವರಾಮಾವಧೂತರ ರಥೋತ್ಸವವನ್ನು ಪ್ರತಿವರ್ಷ ಏರ್ಪಡಿಸುತ್ತಿದ್ದಾರೆ. ಇಂದು ಆಶ್ರಮ ವೈವಿದ್ಯಪೂರ್ಣವಾಗಿ ಬೆಳೆಯುತ್ತಿದ್ದು ಬಂದು ಹೋಗುವ ಭಕ್ತರಿಗೆ ಸಕಲ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲಾಗಿದೆ. ಕಲ್ಯಾಣ ಮಂಟಪ, ಭೋಜನಶಾಲೆಗಳನ್ನು ಕಟ್ಟಿಸಿ ಅನುಕೂಲ ಮಾಡಿಕೊಟ್ಟಿರುವುದನ್ನು ಭಕ್ತಾದಿಗಳು ಸ್ಮರಿಸುತ್ತಾರೆ.

ಹೀಗೆ ಹಂಪಿ ಪರಿಸರದಲ್ಲಿ ಮೇಲೆ ಉಲ್ಲೇಖಿಸಿದ ಅವಧೂತರ ಜೊತೆಗೆ ಹೇರೂರು ವಿರೂಪಾವಧೂತರು, ಹೊಸಪೇಟೆ ಕೆಂಪಾವಧೂತರಂಥವರು ಆಗಿಹೋಗಿದ್ದಾರೆ. ಈ ನಿಟ್ಟಿನಲ್ಲಿ ವ್ಯಾಪಕ ಕ್ಷೇತ್ರಕಾರ್ಯ ಕೈಕೊಂಡರೆ ಅವಧೂತ ಪರಂಪರೆಯ ಬಗೆಗೆ ಇನ್ನೂ ಹೊಸ ಸಂಗತಿಗಳು ದೊರಕುವ ಸಾಧ್ಯತೆಗಳಿವೆ.*



ಬೆಟ್ಟದ ಬುಡದಲ್ಲಿರುವ ಗವಿ



ಶ್ರೀ ರುದ್ರಾನಂದಾವಧೂತರ ಯೋಗಾಶ್ರಮ ಕಾಳಘಟ್ಟ

ಸಹಾಯಕ ಗ್ರಂಥಗಳು

೧. ಚಾದಾನಂದಾವಧೂತ ಚಾರಿತ್ರ ಅಪ್ರಕಟಿತ ಹಸ್ತಪ್ರತಿ

೨. ನರಸಿಂಹಾವಧೂತರು, ಶ್ರೀ ಝುಂಕಣ್ಣನವರ ಬಾಲಲೀಲೆ, ಕಾಳಘಟ್ಟ

೩. ಶ್ರೀ ರಾಜರಾಜೇಶ್ವರಿಯ ಸ್ತುತಿ ಪುಸ್ತಕ, ಕಾಳಘಟ್ಟ

---

* ಅಪೂರ್ವ ಮಾಹಿತಿ ನೀಡಿದ ಕಾಳಘಟ್ಟ ನರಸಿಂಹಾವಧೂತರ ತಮ್ಮನಾದ ಹೊಸಪೇಟೆಯ ಡಾ. ರುದ್ರಪ್ಪ ಅವರಿಗೆ ಮತ್ತು ಕ್ಷೇತ್ರಕಾರ್ಯದಲ್ಲಿ ನೆರವಾದ ಡಾ. ಜಾಜಿ ದೇವೇಂದ್ರಪ್ಪನವರಿಗೆ ಕೃತಜ್ಞತೆಗಳು.

೩

ವಿಜಯನಗರ ಕಾಲದ ನೌಕಾಯುದ್ಧಗಳು

ಡಾ. ಎಸ್.ವೈ.ಸೋಮಶೇಖರ್

ನೌಕಾಪಡೆಯು ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದುದು ಪುರಾತತ್ವ ಹಾಗೂ ಸಾಹಿತ್ಯ ಆಕರಗಳಿಂದ ವ್ಯಕ್ತಗೊಳ್ಳುತ್ತದೆ.[೧] ಕರ್ನಾಟಕದಲ್ಲಿ ಬಾದಾಮಿ ಚಾಳುಕ್ಯ ಅರಸರಾದ ಮಂಗಳೇಶ ಮತ್ತು ಇಮ್ಮಡಿ ಪುಲಿಕೇಶಿ ಅನೇಕ ದ್ವೀಪಗಳನ್ನು ನೌಕಾಸೈನ್ಯದ ಸಹಾಯದಿಂದ ಗೆದ್ದುದು ಐಹೊಳೆ ಶಾಸನದಿಂದ ತಿಳಿದುಬರುವುದು. ಇಮ್ಮಡಿ ಪುಲಕೇಶಿಯು ನೂರು ನೌಕೆಗಳ ನೆರವಿನಿಂದ ಪುರಿಯ ಪ್ರಾಬಲ್ಯವನ್ನು ಅಡಗಿಸಿ, ರೇವತಿ ಮತ್ತಿತರ ದ್ವೀಪಗಳನ್ನು ವಶಪಡಿಸಿಕೊಂಡುದಾಗಿಯೂ ಹೇಳಿದೆ.[೨] ಪ್ರಾಚೀನ ನೌಕಾಪರಂಪರೆಯ ಅಡಿಪಾಯದ ಮೇಲೆ ಅನಂತರ ಬಂದ ಪಲ್ಲವರು ಮತ್ತು ಚೋಳರು ನೌಕಾಪಡೆಗಳ ಮೂಲಕ ಸಾರಗದಾಚೆಯ ದಿಗ್ವಿಜಯ ಸಾಧಿಸಿದ್ದುದನ್ನು ಸಂಗವ್ ಸಾಹಿತ್ಯದಲ್ಲಿ ವರ್ಣಿಸಲಾಗಿದೆ.[೩]ರಾಜರಾಜ ಚೋಳನು ಲಕ್ಷದ್ವೀಪ, ಶ್ರೀಲಂಕಾ, ಮಾಲ್ಡೀವ್ಸ್ ಮತ್ತೀತರ ಆಗ್ನೇಯ ಏಷ್ಯಾದ ದ್ವೀಪಗಳನ್ನು ಗೆದ್ದುದಾಗಿ ಶಾಸನದಲ್ಲಿ ಹೇಳಲಾಗಿದೆ.[೪]

ವೀರಗಲ್ಲಿನಲ್ಲಿ ಬಹು ಅಪರೂಪವೆನ್ನುವಂತೆ ದೋಣಿಯ ಚಿತ್ರವಿರುವ ವೀರಗಲ್ಲನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯಲ್ಲಿ ಕಾಣಬಹುದು. ಇದರಲ್ಲಿ ಸೈನಿಕನೋರ್ವನು ನೌಕ ಯುದ್ಧದಲ್ಲಿ ಹೋರಾಡಿ ಮಡಿದ ವಿವರವಿದೆ. ದೋಣಿ, ಉಟ್ಟುಗಳ ಚಿತ್ರಣವೂ ಇದರಲ್ಲಿ ಸ್ಪಷ್ಟವಾಗಿದೆ. ಇದರಿಂದ ಪ್ರಾಚೀನ ಕಾಲದಲ್ಲಿ ನೌಕೆಗಳ ಬಳಕೆಯಿದ್ದು, ಕರ್ನಾಟಕದ ಅರಸರು ಸಮುದ್ರದಾಚೆಯ ಪ್ರದೇಶಗಳತ್ತ ಗಮನಹರಿಸಿದ್ದುದು ದೃಢಪಡುತ್ತದೆ. ವಿಜಯನಗರ ಕಾಲದಲ್ಲಿ ನೌಕಾಪಡೆಯ ವಿವರಗಳು ಸಾಕಷ್ಟು ದೊರೆಯದಿದ್ದರೂ ನೌಕಾಯುದ್ಧಗಳನ್ನು ಕೈಗೊಂಡ ಉಲ್ಲೇಖಗಳಿವೆ. ಶಾಸನಗಳು, ಸಾಹಿತ್ಯ ಹಾಗೂ ಪ್ರವಾಸಿಗರ ವರದಿಗಳಿಂದ ನೌಕಾಯುದ್ಧದ ಚಿತ್ರಣವನ್ನು ನೀಡಲು ಪ್ರಸ್ತುತ

ಲೇಖನದಲ್ಲಿ ಯತ್ನಿಸಲಾಗಿದೆ. ಅಬ್ದುಲ್ ರಜಾಕ್ ವಿಜಯನಗರದ ವಿಸ್ತಾರವನ್ನು, "ರಾಜ್ಯ(ವಿಜಯನಗರ) ಸೆರೆನ್‌ದಿಬ್ (ಸಿಂಹಳ) ಗಡಿಯಿಂದ ಕಲ್ಬೆರ್ಗಾದ ಕೊಟ್ಟಕೊನೆಯ ವರೆಗೆ ಸಾವಿರ ಪರಸಾಂಗುಗಳಷ್ಟು ವಿಸ್ತರಿಸಿದೆ" ಎಂದಿದ್ದಾನೆ. ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ ಬಂದರುಗಳ ಸಂಖ್ಯೆಯನ್ನು, "ಈ ದೇಶದಲ್ಲಿ ಮುನ್ನೂರು ಬಂದರುಗಳಿವೆ" ಎನ್ನುತ್ತಾನೆ.[೫] ಈ ಅಂಶಗಳು ವಿಜಯನಗರವು ಸಮುದ್ರ ವ್ಯಾಪಾರದಲ್ಲಿ ಸಾಧಿಸಿದ ಹಿಡಿತವನ್ನು ಸಮರ್ಥಿಸುತ್ತವೆ.

ವಿಜಯನಗರ ಕಾಲದ ನೌಕಾಪಡೆಯು ಶ್ರೀಲಂಕಾದ ಮೇಲೆ ವೀರ ಕಂಪಣರಾಯನ ನೇತೃತ್ವದಲ್ಲಿ ದಂಡೆತ್ತಿ ಹೋದುದಾಗಿ ನೀಲಕಂಠಶಾಸ್ತ್ರಿಯವರು ಹೇಳುತ್ತಾರೆ.[೬] ಆದರೆ ಇದಕ್ಕೆ ಸರಿಯಾದ ಪುರಾವೆಗಳು ದೊರೆಯುತ್ತಿಲ್ಲ. ವೀರಕಂಪಣರಾಯನ ದಿಗ್ವಿಜಯವನ್ನು ಸಾರುವ 'ಮಧುರಾ ವಿಜಯಂ' ಕೃತಿಯಲ್ಲೂ ಶ್ರೀಲಂಕಾ ದಂಡಯಾತ್ರೆ ಕುರಿತು ಸ್ಪಷ್ಟವಾಗಿ ಹೇಳುತ್ತಿಲ್ಲ. ಅದರಲ್ಲಿ ೫ನೆಯ ಸರ್ಗದ ೯ನೆಯ ಪದ್ಯವೊಂದರಲ್ಲಿ ಸಿಂಹಳವು ವಿಜಯನಗರದ ಅಧೀನ ರಾಜ್ಯವಾಗಿದ್ದಿತೆಂದು ಹೇಳಿದೆ. ಆದರೆ ಇದರಿಂದ ಶ್ರೀಲಂಕಾವನ್ನು ಕಂಪಣ ಜಯಿಸಿದ್ದನೇ, ಇಲ್ಲವೇ ಎಂಬುದನ್ನು ಹೇಳುವುದು ಕಷ್ಟ. ಕ್ರಿ.ಶ.೧೩೭೮ರ ವಿಜಯನಗರವನ್ನು ಫೆರಿಸ್ತಾ ವರ್ಣಿಸುತ್ತಾ, "ಮಲಬಾರ್, ಸಿಲೋನ್ ಮತ್ತು ಇತರ ದ್ವೀಪಗಳ ರಾಯರು ಅವನ(ಒಂದನೆಯ ಬುಕ್ಕ) ದರಬಾರಿನಲ್ಲಿ ರಾಯಭಾರಿಗಳನ್ನು ಇಟ್ಟಿದ್ದರು ಮತ್ತು ಪ್ರತಿವರ್ಷ ಕಾಣಿಕೆ ಸಲ್ಲಿಸುತ್ತಿದ್ದರು."[೭] ಎನ್ನುತ್ತಾನೆ. ಫೆರಿಸ್ತಾನು ತನ್ನ ವರದಿಯನ್ನು ಬರೆದುದು ವಿಜಯನಗರೋತ್ತರ ಕಾಲದಲ್ಲಿ. ಆದುದರಿಂದ ಇಲ್ಲಿ ದಂಡಯಾತ್ರೆ ಕೈಗೊಂಡ ವಿಚಾರ ಬರುವುದಿಲ್ಲ. ಆದರೆ ಶ್ರೀಲಂಕಾ ಅಧೀನವಾದ ಅಂಶವನ್ನು ಈ ಮೇಲಿನ ಎರಡೂ ಹೇಳಿಕೆಗಳು ನೀಡುವುದರಿಂದ ವಿಜಯನಗರವು ನೌಕಾಪಡೆಯನ್ನು ಹೊಂದಿದ್ದಿತೆಂದು ಹೇಳಬಹುದು.

ಆದರೆ ಎರಡನೆಯ ಹರಿಹರನ ಕಾಲದಲ್ಲಿ ಯುವರಾಜನಾಗಿದ್ದ ಎರಡನೆಯ ವಿರೂಪಾಕ್ಷನು ವೀರಕಂಪಣನ ಮರಣದ ನಂತರ ತುಂಡೀರ, ಚೋಳ, ಪಾಂಡ್ಯ ರಾಜ್ಯಗಳನ್ನು ಜಯಿಸಿ ಅವುಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈ ರಾಜ್ಯಗಳ ದಿಗ್ವಿಜಯದ ನಂತರ ಶ್ರೀಲಂಕಾದ ಮೇಲೆ ದಂಡಯಾತ್ರೆ ಕೈಗೊಂಡನೆಂದು ಅರಿಯೂರು ತಾಮ್ರ ಶಾಸನದಿಂದ ತಿಳಿದುಬರುತ್ತದೆ. ಸಿಂಹಳವನ್ನು ವಿರೂಪಾಕ್ಷನು ವಿಜಯಗಳಿಸಿದುದರ ನೆನಪಿಗಾಗಿ ವಿಜಯಸ್ತಂಭವನ್ನು ನೆಟ್ಟ ವಿವರವನ್ನು ಈ ಶಾಸನದಲ್ಲಿ ಹೇಳಲಾಗಿದೆ.[೮] ನಾರಾಯಣಿ ವಿಲಾಸಂ ಕೃತಿಯಲ್ಲೂ ಇದರ ಪ್ರಸ್ತಾಪವಿದೆ.[೯] ಕ್ರಿ.ಶ.೧೩೮೬ರ ಸೊರೈಕ್ಕೆವೂರು ತಾಮ್ರಶಾಸನದಲ್ಲಿ ತುಂಡೀರ, ಜೋಳ ಮತ್ತು ಪಾಂಡ್ಯ ರಾಜ್ಯಗಳನ್ನು ವಿರೂಪಾಕ್ಷನು ವಶಪಡಿಸಿಕೊಂಡ ವಿವರವಿದ್ದು, ಅದರಲ್ಲಿ ಶ್ರೀಲಂಕಾದ ದಿಗ್ವಿಜಯವನ್ನು ಪ್ರಸ್ತಾಪಿಸಿಲ್ಲ.[೧೦] ಇದರಿಂದ ವಿರೂಪಾಕ್ಷನು ಶ್ರೀಲಂಕಾದ ಮೇಲೆ ದಂಡೆತ್ತಿ ಹೋದುದು ೧೩೮೬ರ ನಂತರವೆಂಬುದು ಸ್ಪಷ್ಟವಾಗುತ್ತದೆ. ನೀಲಕಂಠಶಾಸ್ತ್ರಿಯವರು ಅರಿಯೂರು ಮತ್ತು

ಸೊರೈಕ್ಕೆವೂರು ತಾಮ್ರಶಾಸನಗಳು ನೀಡುವ ವಿವರದ ಹಿನ್ನೆಲೆಯಲ್ಲಿ ಎರಡನೆಯ ವಿರೂಪಾಕ್ಷನು ಶ್ರೀಲಂಕಾದ ಉತ್ತರ ಭಾಗ ಮತ್ತು ಜಾಪ್ನಾ ದ್ವೀಪವನ್ನು ವಶಪಡಿಸಿಕೊಂಡಿರಬೇಕೆಂದು ಹೇಳಿದ್ದಾರೆ. ಈ ದ್ವೀಪಗಳ ವಿಜಯದ ಸಂಕೇತವಾಗಿ ರಾಮೇಶ್ವರದ ರಾಮನಾಥದೇವರಿಗೆ ದಾನ ನೀಡಿದನೆಂದು ದೃಢಪಡಿಸುವರು.[೧೧] ಎರಡನೆಯ ವಿರೂಪಾಕ್ಷನು ದಕ್ಷಿಣದ ದಂಡಯಾತ್ರೆಯ ವೇಳೆಯಲ್ಲಿ ಶ್ರೀಲಂಕಾ ಮತ್ತಿತರ ದ್ವೀಪಗಳನ್ನು ವಶಪಡಿಸಿಕೊಂಡು ವಿಜಯಸ್ತಂಭವನ್ನು ನೆಟ್ಟುದುದು ವಿಜಯನಗರದ ಅಂದಿನ ನೌಕಾಸೇನೆಯ ಬಲಿಷ್ಠತೆಯನ್ನು ಪ್ರತಿನಿಧಿಸುತ್ತದೆ.

ವಿರೂಪಾಕ್ಷನ ನಂತರ ಶ್ರೀಲಂಕಾದ ಮೇಲೆ ದಂಡಯಾತ್ರೆ ಕೈಗೊಂಡ ವಿಜಯನಗರ ಅರಸನೆಂದರೆ ಎರಡನೆಯ ದೇವರಾಯ. ಕ್ರಿ.ಶ.೧೪೩೫ರಲ್ಲಿ ದೇವರಾಯ ತನ್ನ ದಂಡನಾಯಕ ಲಕ್ಕಣ್ಣ ದಂಡೇಶನನ್ನು ದಕ್ಷಿಣ ದಂಡಯಾತ್ರೆಗೆಂದು ಸೈನ್ಯ ಸಮೇತ ಕಳುಹಿಸಿದ್ದನು. ಲಕ್ಕಣ್ಣನು ದಕ್ಷಿಣ ದಂಡಯಾತ್ರೆಯಲ್ಲಿ ಯಶಸ್ಸನ್ನು ಸಾಧಿಸಿದ ಬಳಿಕ ಶ್ರೀಲಂಕಾದ ಮೇಲೆ ದಂಡೆತ್ತಿ ಹೋದನು. ಶ್ರೀಲಂಕಾದ ರಾಜ ಆರನೆಯ ಪರಾಕ್ರಮಬಾಹುವನ್ನು ಸೋಲಿಸಿ ಯಾಳಪಾಣಂ(yalapanam), ನಾಪಟಮಣಂ (Napatamanam) ಮತ್ತು ಈಳಂ (Ilam)ಗಳನ್ನು ಗೆದ್ದುಕೊಂಡನೆಂದು ಶಾಸನದಲ್ಲಿ ಹೇಳಲಾಗಿದೆ.[೧೨] ಲಕ್ಕಣ್ಣ ದಂಡೇಶನು ಈ ವಿಜಯದ ನೆನಪಿಗಾಗಿ 'ದಕ್ಷಿಣ ಸಮುದ್ರಾಧಿಪತಿ' ಎಂಬ ಗೌರವಕ್ಕೆ ಪಾತ್ರನಾದನೆಂಬುದು ಶಾಸನಗಳಲ್ಲಿ ವ್ಯಕ್ತಗೊಳ್ಳುವ ಅಂಶವಾಗಿದೆ.[೧೩] ಈ ದಿಗ್ವಿಜಯದ ಹಿನ್ನೆಲೆಯಲ್ಲಿ ಎರಡನೆಯ ದೇವರಾಯನು 'ಈಳಂ ತಿರೈಕೊಂಡ'ನೆಂದು ಕರೆದುಕೊಂಡಿದ್ದುದನ್ನು ಕ್ರಿ.ಶ.೧೪೪೦ರ ಶಾಸನವು ಹೇಳುತ್ತದೆ.[೧೪] ಇದಲ್ಲದೆ 'ದಕ್ಷಿಣ ಸಮುದ್ರಾಧೀಶ್ವರ'ನೆಂದು ದೇವರಾಯನನ್ನು ಕರೆಯಲಾಗಿದೆ.

ವಿಜಯನಗರದ ಆರಂಭದ ಅರಸರಲ್ಲಿ ಹರಿಹರನು 'ಪೂರ್ವಪಶ್ಚಿಮ ಸಮುದ್ರಾಧಿಪತಿ'ಯೆಂದು, ಬುಕ್ಕರಾಯನು 'ಚತುಸಮುದ್ರಾಧಿಪತಿ'ಯೆಂದೂ ಕರೆದುಕೊಂಡಿದ್ದಾರೆ. ಒಂದನೆಯ ದೇವರಾಯನೂ, 'ಪೂರ್ವಪಶ್ಚಿಮ ದಕ್ಷಿಣೋತ್ತರ ಚತುಸಮುದ್ರಾಧಿಪತಿ' ಎಂಬ ಬಿರುದನ್ನು ಧರಿಸಿದ್ದುದು ಶಾಸನದಿಂದ ತಿಳಿದುಬರುವುದು.[೧೫] ಈ ಬಿರುದುಗಳು ವಿಜಯನಗರ ಆರಂಭದ ಅರಸರು ಸಮುದ್ರದ ಮೇಲೆ ಸಾಧಿಸಿದ ಹಿಡಿತ ಸಂಕೇತಗಳೇನೋ ನಿಜ. ಆದರೆ ಅವುಗಳನ್ನು ಯಾರೊಂದಿಗೆ ಮತ್ತು ಯಾವಾಗ ಯುದ್ಧ ಕೈಗೊಂಡರೆಂಬ ವಿವರ ತಿಳಿದುಬರುತ್ತಿಲ್ಲ. ಲಕ್ಕಣ್ಣ ದಂಡೇಶನು ಶ್ರೀಲಂಕಾದ ಮೇಲೆ ದಂಡಯಾತ್ರೆ ಕೈಗೊಂಡ ವಿವರವನ್ನು ಈ ಮೇಲಿನ ಶಾಸನಗಳು ಸ್ಪಷ್ಟವಾಗಿ ನಮೂದಿಸುವುದಲ್ಲದೆ ಕಾಲವನ್ನು ಕ್ರಿ.ಶ.೧೪೩೫ಯೆಂದು ಹೇಳುತ್ತವೆ. ಆದರೆ ಸಿ.ಹಯವದನರಾವ್‌ರು ಶ್ರೀಲಂಕಾ ದಂಡಯಾತ್ರೆಯು ಕ್ರಿ.ಶ.೧೪೪೨ರನವೆಂಬರ್ ಮತ್ತು ೧೪೪೩ರ ಏಪ್ರಿಲ್ ತಿಂಗಳ ನಡುವೆ ನಡೆಯಿತೆನ್ನುವರು.[೧೬] ಆದರೆ ಇವರ ಅಭಿಪ್ರಾಯವು ಶಾಸನಗಳ ಹಿನ್ನೆಲೆಯಲ್ಲಿ ಲಕ್ಕಣ ದಂಡೇಶನು ಕೈಗೊಂಡ ಎರಡನೆಯ

ದಂಡೆಯಾತ್ರೆಯಿರಬಹುದೇನೋ? ನ್ಯೂನಿಜ್, ಎರಡನೆಯ ದೇವರಾಯನಿಗೆ ''ಕೌಲ್ಲಾವ್ (ಕೈಲಾನ್), ಸಿಲೋನ್, ಪೆಲಿಕಾಟೆ(ಪುಲಿಕಾಟ್), ಪೆಗು, ತನಸರಿ(ತೆನ್ನಾಸರಿ) ಮತ್ತು ಇತರ ರಾಜರುಗಳು ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು''ಎಂದು ಹೇಳಿದ್ದಾನೆ. ಇದು ವಿಜಯನಗರ ಅರಸರು ಶ್ರೀಲಂಕಾವನ್ನಲ್ಲದೆ ಸಮುದ್ರದಾಚೆಯ ಹಲವು ದ್ವೀಪಗಳನ್ನು ನೌಕಾಪಡೆಯ ಮೂಲಕ ಯಶಸ್ಸು ಸಾಧಿಸಿದ್ದುದರ ಸಮರ್ಥನೆಯಾಗಿದೆ.

ಎರಡನೆಯ ದೇವರಾಯನ ನಂತರ ಸಿಗುವ ಆಕರ ವಾರ್ಥೇಮಾನ ವರದಿ. ಇವನು ಕ್ರಿ.ಶ.೧೫೦೩ ರಿಂದ ೧೫೦೮ರ ಅವಧಿಯ ವಿಜಯನಗರವನ್ನು ಕುರಿತು ಹೇಳುವಾಗ ಈ ಸಾಮ್ರಾಜ್ಯವು ಶ್ರೀಲಂಕಾದವರೆಗೂ ವಿಸ್ತರಿಸಿದ್ದಿತೆನ್ನುತ್ತಾನೆ. ಇದರಿಂದ ಎರಡನೆಯ ದೇವರಾಯನ ಆಳ್ವಿಕೆಯಲ್ಲಿ ಶ್ರೀಲಂಕಾವು ಅಧೀನದಲ್ಲಿದ್ದ ಕಾರಣ ಕಪ್ಪಕಾಣಿಕೆಗಳನ್ನು ನೀಡುವುದನ್ನು ಶ್ರೀಲಂಕಾದ ರಾಜರು ಮುಂದುವರಿಸಿದ್ದುದನ್ನು ಕಾಣಬಹುದು. ಇದು ಕ್ರಿ.ಶ.೧೫೨೨ರವರೆಗೂ ಮುಂದುವರಿಯಿತೆನ್ನಬಹುದು. ಕ್ರಿ.ಶ.೧೫೨೨ರಲ್ಲಿ ಕೃಷ್ಣದೇವರಾಯನು ಶ್ರೀಲಂಕದಲ್ಲಾದ ಗಲಭೆಯನ್ನು ಹತ್ತಿಕ್ಕಿದ್ದುದು ಪಿರಾನ್‌ಮಲೈ ಶಾಸನದಿಂದ ತಿಳಿದುಬರುತ್ತದೆ.[೧೭] ಕೊಪ್ಪಳ ತಾಲ್ಲೂಕಿನ ಕಿಡಿದಾಳು ಗ್ರಾಮದ ಶಾಸನದಲ್ಲಿ ಕೃಷ್ಣದೇವರಾಯ ಅಂಗ, ವಂಗ, ಕಳಿಂಗ, ಗೂರ್ಜರ, ಮಗಧ, ಲಾಟ, ಕರ್ನಾಟ, ಗೌಳ, ಮಾಳವ, ರೇವಣ, ಕೊಂಕಣ, ಬಡಗಣ, ಮೂಡಣ, ಪಾಂಚಾಳ, ಕೇರಳ, ಹಮ್ಮೀರ ದೇಶಗಳಲ್ಲದೇ, ಸಿಂಹಳವನ್ನು ಗೆದ್ದುದಾಗಿಯೂ ಹೇಳಲಾಗಿದೆ. ಶಾಸನದಲ್ಲಿ ಸಿಂಹಳವನ್ನು ಶಿಂಹಲಾಳ ಎಂದು ಕರೆದಿದೆ.[೧೮]

ಕೃಷ್ಣದೇವರಾಯನ ಕಾಲದಲ್ಲಿ ಇಬ್ಬರು ನಾವಿಕ ಮುಖಂಡರಿದ್ದುದನ್ನು ಬಾರ್ಬೋಸಾ ಹೇಳುತ್ತಾನೆ: ''ಈ ರಾಜ್ಯದ ಅಧಿಪತಿಯ(ಕೃಷ್ಣದೇವರಾಯ) ಆಶ್ರಯದಲ್ಲಿ ಇಬ್ಬರು ಕಡಲುಗಳ್ಳ ನಾಯಕರಿದ್ದರು. ಒಬ್ಬನ ಹೆಸರು ತಿಮ್ಯೊಜ(ತಿಮ್ಮೋಜ); ಮತ್ತೊಬ್ಬನ ಹೆಸರು ರಾವ್‌ಜಿ (ಮಾಧವರಾವ್). ಪ್ರತಿಯೊಬ್ಬರ ಬಳಿಯಲ್ಲಿ ಸುಸಜ್ಜಿತವಾದ ಐದಾರು ಹಡಗುಗಳಿರುತ್ತಿದ್ದವು. ಇವರು ಸಮುದ್ರದ ಮೇಲೆ ಹೋಗಿ ಮಲಬಾರೀ ಹಡಗುಗಳನ್ನು ಬಿಟ್ಟು ಉಳಿದೆಲ್ಲ ಹಡಗುಗಳನ್ನು ಕೊಳ್ಳೆಹೊಡೆಯುತ್ತಿದ್ದರು.''[೧೯] ಇದರಲ್ಲಿ ತಿಮ್ಮೋಜ ಮತ್ತು ರಾವ್‌ಜಿಯನ್ನು ಕಡಲುಗಳ್ಳರ ನಾಯಕರೆಂದು ಹೇಳಿದ್ದರೂ, ಇಲ್ಲಿ ವ್ಯಕ್ತಗೊಳ್ಳುವ ಸುಸಜ್ಜಿತ ಹಡಗು ಪಡೆಗಳಿದ್ದುದನ್ನು ಗಮನಿಸಬೇಕು. ಇದು ವಿಜಯನಗರ ಕಾಲದಲ್ಲಿ ಸಮುದ್ರಾಚೆಯ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಬೇಕಾದ ಸೇನೆಯನ್ನು ಕೊಂಡೊಯ್ಯಲು ಸಾಕಷ್ಟು ಹಡಗುಗಳನ್ನು ಬಳಸಿಕೊಂಡಿದ್ದರೆಂದು ಹೇಳಬಹುದು.

ಅಚ್ಯುತರಾಯ ಮತ್ತು ಸದಾಶಿವರಾಯರ ಕಾಲದಲ್ಲೂ ವಿಜಯನಗರದ ಸೇನೆ ಶ್ರೀಲಂಕಾದ ಮೇಲೆ ದಂಡೆತ್ತಿ ಹೋಗಿದ್ದುದು ತಿಳಿದುಬರುತ್ತದೆ.[೨೦] ಕ್ರಿ.ಶ.೧೫೪೪ರಲ್ಲಿ ಅಚ್ಯುತರಾಯನು ಈಳಂ(ಶ್ರೀಲಂಕಾ) ಮೇಲೆ ಜಯ ಸಾಧಿಸಿದುದಾಗಿ ತಂಜಾವೂರಿನ ರಾಜಗೋಪಾಲ ಪೆರುಮಾಳ್ ದೇವಾಲಯದ ಶಾಸನವು ತಿಳಿಸುತ್ತದೆ.[೨೧]

ಒಟ್ಟಿನಲ್ಲಿ ವಿಜಯನಗರವು ಆರಂಭದ ಅರಸರಿಂದ ಹಿಡಿದು ಸದಾಶಿವರಾಯನವರೆಗೆ ಶ್ರೀಲಂಕಾ ಮತ್ತಿತರ ದ್ವೀಪಗಳ ಮೇಲೆ ಹಡಗುಗಳ ಮೂಲಕ ಸೇನೆಯನ್ನು ಕೊಂಡೊಯ್ದು ನೌಕಾಯುದ್ಧಗಳನ್ನು ಕೈಗೊಂಡಿದ್ದರು ಹಾಗೂ ಅವರು ಕೈಗೊಂಡ ಯುದ್ಧಗಳಲ್ಲಿ ಜಯಗಳಿಸಿ ಕೊನೆಯವರೆಗೂ ದ್ವೀಪಗಳ ಮೇಲೆ ತಮ್ಮ ಹಿಡಿತ ಸಾಧಿಸಿದ್ದರೆಂಬುದು ಸ್ಪಷ್ಟವಾಗುತ್ತದೆ.

ಅಡಿಟಿಪ್ಪಣಿಗಳು

೧. ಲೋಥಲ್ ಮತ್ತು ಸಿಂಧೂ ನಾಗರೀಕತೆ, ಡಾ.ಎಸ್.ಆರ್.ರಾವ್

೨. Epigraphia Indica., Vol-VI, P.10

೩. ಸಂಗಮ್ ಕಾಲದ ಸಾಮಾಜಿಕ ರಾಜಕೀಯ ವ್ಯವಸ್ಥೆ, ಪು.೧೭೭

೪. E.I., Vol-XVIII, P.152

೫. ಪ್ರವಾಸಿ ಕಂಡ ಇಂಡಿಯಾ, ಸಂ-೨, ಪು.೧೫೪

೬. South India and Srilanka, K.K.pillay, P.105

೭. ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ರಾಬರ್ಟ್ ಸಿವೆಲ್,(ಅನು: ಸದಾನಂದ ಕನವಳ್ಳಿ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೪೫, ೧೯೯೨

೮. Indian Antiquary, vol-xxxviii, P.12

೯. Sources of Vijaynagar History, P.53

೧೦. E.I., Vol-VIII, P.300-301; ಅದೇ, Vol-III, P. 228

೧೧. South India and Srilanka, K.K.pillay, P.105-6

೧೨. South Indian Inscriptions., Vol-vii., No.778

೧೩. ಅದೇ, ಸಂಖ್ಯೆ. ೪೨೮

೧೪. Annual Report on Epigraphy, 144 of 1916; Quoted: South India and Srilanka, P.107

೧೫. SII., Vol-ix-ii, No.429

೧೬. Mysore Gazetteer, New Edition, P.1581

೧೭. Indian Antiquary, Vol-XLIII, P.45; MER of 1904, No.149; EI, Vol-XXI, 1931-32

೧೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಸಂಖ್ಯೆ-೧೩೮, ಪು.೧೩೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೧೯. ಪ್ರ.ಕಂ.ಇಂ., ಸಂ-೨, ಬಾರ್ಬೋಸಾ, ಪು.೨೮೧

೨೦. Indian Antiquary, Vol-xiv. P.230, Note.

೨೧. ಅದೇ, Vol-XLIII, P.186; MER of 1897, No.40;49-50 of 1900

❖ ❖

೪

ಪಾಪಿನಾಯಕನಹಳ್ಳಿ : ಗ್ರಾಮಚರಿತ್ರೆ

ಡಾ. ಎಂ.ಕೊಟ್ರೇಶ್

ಹೊಸಪೇಟೆಯಿಂದ ಹನ್ನೆರಡು ಕಿಲೋಮೀಟರ್ ದೂರದ ಪಶ್ಚಿಮ ದಿಕ್ಕಿಗಿರುವ ಪಾಪಿನಾಯಕನಹಳ್ಳಿಯು ಒಂದು ಗ್ರಾಮ ಪಂಚಾಯಿತಿ ಕೇಂದ್ರ. ಗ್ರಾಮದ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ದಿಕ್ಕುಗಳಿಗೆ ಬಯಲು ಸೀಮೆಯ ಹೊಲ-ಗದ್ದೆಗಳಿವೆ. ಉತ್ತರ ದಿಕ್ಕಿಗೆ ಬೆಟ್ಟದ ಸಾಲಿದೆ. ಪಾಪಿನಾಯಕನಹಳ್ಳಿಯಿಂದ ಈ ಬೆಟ್ಟದ ಸಾಲು ಸಾಗಿ ದರೋಜಿ ಬೆಟ್ಟದ ಶ್ರೇಣಿಗೆ ಸೇರುತ್ತದೆ. ಈ ಬೆಟ್ಟದಲ್ಲಿರುವುದೇ ಪಾಪಿನಾಯಕನಹಳ್ಳಿಯ ಗಿರಿದುರ್ಗ.

ಪಾಪನಾಯಕ ಎನ್ನುವ ಪಾಳೆಯಗಾರನಿಂದಾಗಿಯೇ ಈ ಗ್ರಾಮಕ್ಕೆ ಪಾಪಿನಾಯಕನಹಳ್ಳಿ ಎಂದು ಕರೆದಿರುವುದು. ಈತನೇ ಇಲ್ಲಿ ಕೋಟೆ ಕಟ್ಟಿಸಿರಬಹುದೆಂದು ಸ್ಥಳೀಯರಿಂದ ತಿಳಿದುಬರುವ ಅಂಶ. ಈ ಪಾಳೆಯಗಾರರು ಹಂಪಿ ಕಡೆಯಿಂದ ಬಂದಿರುವನೆಂದೂ ಹೇಳುತ್ತಾರೆ. ಹಾಗಾದರೆ ಪಾಪನಾಯಕ ಯಾರು? ಮ್ಯಾಸಬೇಡ ಜನಾಂಗದ ಸಾಂಸ್ಕೃತಿಕ ವೀರನೆಂದು ಗುರುತಿಸಿರುವ ಗಾದರಿ ಪಾಲನಾಯಕನ ವಂಶಸ್ಥರಾದ ತೊರ್ರೆಲ ಮಲ್ಲನಾಯ್ಕನ ಮಗ ಪಾಪನಾಯಕನಿರಬಹುದು.[೧] ಈತನು ಪಶುಪಾಲನೆ ವೃತ್ತಿಗಾಗಿ ಈ ಪ್ರದೇಶಕ್ಕೆ ಬಂದಿರುವನೆ. ಇದಕ್ಕೆ ಒತ್ತುನೀಡುವ ಇನ್ನೊಂದು ಅಂಶವೆಂದರೆ ಆನೆಗೊಂದಿ ರಾಜರ ಮರ್ಯಾದೆಗೆ ಕುಂದು ಉಂಟಾಗುವಂತೆ ಊರ ಬಾಗಿಲಿಗೆ ತನ್ನ ಇಜಾರ ಕಟ್ಟಿಸಿ ಮೆರೆಯುತ್ತಿದ್ದ ಭೀಮಾಜೆಟ್ಟಿ ಎಂಬುವನನ್ನು ಸೋಲಿಸಿದ್ದು, ಪಾಪನಾಯಕನ ಮೊಮ್ಮಗ ಜೋಡಿ ಮಲ್ಲಪ್ಪನಾಯಕ ಎಂಬುವುದಿದೆ.[೨]

ಕೈಫಿಯತ್ತು ಈ ಗ್ರಾಮವನ್ನು ಮೊದಲು ಅಪಲಾಪುರವೆಂದು[೩] ಕರೆದಿದ್ದು, ನಂತರ ಪಾಪನಾಯಕನಹಳ್ಳಿ ಎಂದು ಉಲ್ಲೇಖಿಸಿ, ಇಲ್ಲಿ ತಿಮ್ಮಪ್ಪನಾಯಕನು ಕೋಟೆ ಕಟ್ಟಿಸಿದಂತೆ ತಿಳಿಸುತ್ತದೆ.[೪] ಪಾಪಿನಾಯಕನಹಳ್ಳಿಯ ದಕ್ಷಿಣ ದಿಕ್ಕಿಗಿರುವ ಅಂಕಾಲಮ್ಮನ ಗುಡಿಯ ಮುಂದೆ

ಶಾಸನವಿದೆ. ಕ್ರಿ.ಶ. ೧೫೩೨ರ ಈ ಶಾಸನದಲ್ಲಿ ಈ ಗ್ರಾಮವನ್ನು ಪಾ(ಅ)ಪಿನಾಯಕನ ಪುರ ಮತ್ತು ಇಲ್ಲಿ ತಲಾರಿ ತಿಮ್ಮನಾಯಕನು ಆಳ್ವಿಕೆ ಮಾಡಿದಂತೆ ತಿಳಿಸುತ್ತದೆ.[೫] ಪಾ(ಅ)ಪಿನಾಯಕನ ಪುರ, ಜನ ಭಾಷೆಯಲ್ಲಿ ಪಾಪಿನಾಯಕನಹಳ್ಳಿಯಾಗಿದೆ. ತಿಮ್ಮನಾಯಕ ಎನ್ನುವವನು ಇಲ್ಲಿ ಕೋಟೆ ಕಟ್ಟಿಸಿರಬೇಕು. ಇವನೇ ಸ್ಥಳೀಯರು ಹೇಳುವ ಪಾಪನಾಯಕನು. ವಿಜಯನಗರ ಕಾಲದಲ್ಲಿ ಕಮಲಾಪುರ (ಕೊಂಡ ಮಾರಸಯ್ಯನವಾಡಿ)ದ ಪಾಳ್ಯದಂತೆ ಇದು ಒಂದು ಪಾಳ್ಯ.

ಮೂಲ ನೆಲೆ ಹಾಗೂ ಕೋಟೆ

ಪಾಪಿನಾಯಕನಹಳ್ಳಿ ಕೋಟೆಯು ನಿಸರ್ಗದತ್ತವಾದ ಬೆಟ್ಟವನ್ನು ಬಳಸಿ ನಿರ್ಮಿಸಿದ ಚಿಕ್ಕ ಕೋಟೆಯಾಗಿದೆ. ಇದರ ಪಕ್ಕದಲ್ಲಿ ವಸತಿ ತಾಣವಿದ್ದ ಈ ಕೋಟೆಯನ್ನು ಸ್ಥಳೀಯರು ಸಂತಗುಡ್ಡದ ಕೋಟೆಯೆಂದು ಕರೆಯುತ್ತಾರೆ. ಇದಕ್ಕೆ ಪೂರಕವಾಗಿ ಕೋಟೆಯ ಪೂರ್ವ ಭಾಗಕ್ಕೆ ವಿಶಾಲವಾದ ಬಯಲಿದೆ. ಇದನ್ನು ಸಂತೆ ಬಯಲು ಎನ್ನುವರು. ಉತ್ತರದಿಂದ ದಕ್ಷಿಣ ದಿಕ್ಕಿಗೆ ಇಳಿಜಾರಾಗಿರುವ ಬೆಟ್ಟದ ಮೇಲ್ತುದಿಯನ್ನು ಆವರಿಸಿ ಕೋಟೆಯನ್ನು ಕಟ್ಟಲಾಗಿದೆ. ಈ ಕೋಟೆಗೆ ದಕ್ಷಿಣದಿಂದ ಪ್ರವೇಶ ಕಲ್ಪಿಸಿರುವರು. ಈ ಪ್ರವೇಶ ದ್ವಾರವು ಬಹು ಕಿರಿದಾಗಿದ್ದು, ಇದರ ಇಕ್ಕೆಲಗಳಲ್ಲಿ ತಾಯಮ್ಮ ಹಾಗೂ ವೀರಭದ್ರನ ಚಿಕ್ಕ ಚಿಕ್ಕ ಗುಡಿಗಳನ್ನು ಹೊಂದಿ, ಸುಮಾರು ೨ ಎಕರೆ ವಿಸ್ತೀರ್ಣವನ್ನು ಹೊಂದಿರುವ ಕೋಟೆಯ ಮಧ್ಯದಲ್ಲಿ ಯಾವುದೇ ಸ್ಮಾರಕಾವಶೇಷಗಳು ಗೋಚರಿಸುವುದಿಲ್ಲ. ಕೋಟೆ ಗೋಡೆಯು ೫ ರಿಂದ ೧೦ ಅಡಿಗಳ ವರೆಗೆ ಎತ್ತರ ಹಾಗೂ ೫ ಅಡಿ ಅಗಲವಾಗಿದೆ. ಕೆಲವು ಕಡೆ ಹೆಚ್ಚು ಕಡಿಮೆ ಇದೆ. ಸ್ಥಳೀಯವಾಗಿ ದೊರೆಯುವ ಚಿಕ್ಕ ಮತ್ತು ಮಧ್ಯಮಗಾತ್ರದ ಶಿಲೆಗಳನ್ನು ಕೋಟೆ ಕಟ್ಟಡಕ್ಕೆ ಬಳಸಲಾಗಿದೆ. ಇದರ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳನ್ನು ನಿರ್ಮಿಸಲಾಗಿದ್ದು, ಒಟ್ಟು ಮೂರು ಕೊತ್ತಳಗಳಿವೆ. ಕೋಟೆಯ ಹಿಂಭಾಗ ಗೋಡೆಗಿರುವ ಕೊತ್ತಳವು ಬೃಹದಾಕಾರವಾಗಿದೆ. ವೃತ್ತಾಕಾರವಾಗಿರುವ ಈ ಕೊತ್ತಳವು ಸುಮಾರು ೨೦ ಅಡಿಗಳಷ್ಟು ಎತ್ತರವಾಗಿರುವುದು. ಇದರ ಮೇಲಿನಿಂದ ನೋಡಿದರೆ ಇಡೀ ಕೋಟೆಯು ತಲೆ ಕೆಳಗಾಗಿ ಕಾಣುತ್ತದೆ. ಶತ್ರುಗಳ ಬರುವಿಕೆಯನ್ನು ಗ್ರಹಿಸುವುದಕ್ಕಾಗಿ ಕೊತ್ತಳವನ್ನು ನಿರ್ಮಿಸಿದ್ದಾರೆ. ಇನ್ನುಳಿದ ಎರಡು ಕೊತ್ತಳಗಳು ಕೋಟೆಯ ಪ್ರವೇಶದ ಎರಡು ಬದಿಗಳಲ್ಲಿವೆ. ಇವು ಸಾದಾರಣ ಮಟ್ಟದವು.

ಈ ಕೋಟೆಯಿರುವ ಬೆಟ್ಟದಿಂದ ಕೆಳಗೆ ಪಶ್ಚಿಮಕ್ಕೆ ವಸತಿಯ ಅವಶೇಷಗಳಿವೆ. ನಮ್ಮ ಊರು ಮೊದಲು ಅಲ್ಲೆ ಇತ್ತು. ನಮ್ಮ ಮನೆಗಳು ಅಲ್ಲಿದ್ದವೆಂದು ಸುಮಾರು ೮೦ ವರ್ಷದ ದುರುಗಮ್ಮ ಹೇಳುತ್ತಾರೆ.[೬] ಈ ಹಳೇ ಊರಿನಿಂದ ಹಂಪಿಗೆ ನೆಲಮಾಳಿಗೆ ಇದೆಯಂತೆ, ಇಲ್ಲಿಂದ ಹಂಪಿಗೆ ದಾರಿ ಇದೆ ಎನ್ನುವುದು ಸ್ಥಳೀಯರ ನಂಬಿಕೆ. ಇದಕ್ಕೆ ಪೂರಕವೆಂಬಂತೆ ಈಗಲೂ ಹಳೇ ಊರಿನಲ್ಲಿ ಭೂಮಿಯೊಳಗೆ ನೆಲಮಾಳಿಗೆ ಇದೆ. ಅದು ಎಲ್ಲಿಯವರೆಗೆ ಹೋಗಿದೆ ಎಂಬುದು ತಿಳಿಯದು.

ದೇವಾಲಯಗಳು

ಈ ಕೋಟೆಯ ಮುಂಭಾಗದಲ್ಲಿ ಪೂರ್ವಾಭಿಮುಖವಾಗಿರುವ ವೆಂಕಟೇಶ್ವರನ ದೇವಾಲಯವಿದೆ. ಇದು ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಸುತ್ತಲೂ ಪ್ರಾಕಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ವೆಂಕಟೇಶ್ವರನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅಂತರಾಳದಲ್ಲಿ ಗಣೇಶನ ಶಿಲ್ಪವಿದೆ. ಗರ್ಭಗೃಹ ಹಾಗೂ ಅಂತರಾಳದ ಬಾಗಿಲುಗಳು ಸರಳವಾಗಿವೆ. ಸಭಾಮಂಟಪದಲ್ಲಿ ಯಾಳಿ ಶಿಲ್ಪಗಳುಳ್ಳ ನಾಲ್ಕು ಕಂಬಗಳಿವೆ. ಇದರ ಬಲ ಪಾರ್ಶ್ವದಲ್ಲಿ ಆಂಜನೇಯನ ಶಿಲ್ಪವಿದೆ. ಸಭಾಮಂಟಪದ ಪ್ರವೇಶದ ಎರಡು ಬದಿಗೆ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗೃಹದ ಮೇಲೆ ದ್ರಾವಿಡಶೈಲಿಯ ಶಿಖರ, ಸಭಾಮಂಟಪದ ಮೇಲೆ ಕೈಪಿಡಿ ಗೋಡೆ ಇದೆ. ದೇವಾಲಯದ ಮುಂಭಾಗದಲ್ಲಿ ಗರುಡಗಂಬವಿದೆ. ದೇವಾಲಯಕ್ಕೆ ಕಣಶಿಲೆ, ಇಟ್ಟಿಗೆ, ಗಾರೆಯನ್ನು ಬಳಸಲಾಗಿದೆ. ಈ ದೇವಾಲಯದ ವಾಸ್ತು ಮತ್ತು ಶೈಲಿಗಳನ್ನು ಗಮನಿಸಿದಾಗ ವಿಜಯನಗರದೆಂದು ಹೇಳಬಹುದು.

ಟಿಪ್ಪಣಿಗಳು

೧. ಶಿವಣ್ಣ ಮೀರಾಸಾಬಿಹಳ್ಳಿ. ೨೦೦೧. ನಾಯಕನಹಟ್ಟಿ ಪಾಳೆಯಗಾರರು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು (ಸಂ: ವಸು ಎಂ.ವಿ), ಪು. ೭೯. ಹಂಪಿ : ಕನ್ನಡ ವಿಶ್ವವಿದ್ಯಾಲಯ.

೨. ಅದೇ, ಪು. ೮೦

೩. ಕಲಬುರ್ಗಿ, ಎಂ.ಎಂ. (ಸಂ.), ೧೯೯೪. ಕರ್ನಾಟಕದ ಕೈಫಿಯತ್ತುಗಳು, ಪು. ೪೧೯. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪. ಅದೇ, ಪುಟ ೪೧೨

೫. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) - ೧, ಪು. ೩೫೦. ಹಂಪಿ : ಕನ್ನಡ ವಿಶ್ವವಿದ್ಯಾಲಯ.

೬. ದುರುಗಮ್ಮ. ಪಾಪಿನಾಯಕನಹಳ್ಳಿ ಗ್ರಾಮದ ಹಿರಿಯರಲ್ಲಿ ಒಬ್ಬರು

❖ ❖

೫

ಹಂಪಿಯಲ್ಲಿರುವ ಒಂದು ಹೊಸ ಶಾಸನ

ಡಾ. ಆರ್.ಗೋಪಾಲ್

ಟಿ.ಎಸ್. ಗಂಗಾಧರ

ಮಾತಂಗ ಪರ್ವತದ ಪೂರ್ವಕ್ಕೆ ತುರ್ತಾ (ಹಿರಿಯ) ಕಾಲುವೆಯಿದ್ದು, ಅದರ ದಕ್ಷಿಣದಲ್ಲಿ ರಂಗಾರಿ ಸೀನಪ್ಪ ಎಂಬುವರ ಗದ್ದೆಯಲ್ಲಿರುವ ಬಂಡೆಯ ಮೇಲೆ ಒಂದು ಅಪ್ರಕಟಿತ ಶಾಸನವಿದೆ.[೧] ಶಾಸನದ ಮೇಲಿನ ಭಾಗದಲ್ಲಿ ಶಂಖ, ಚಕ್ರಗಳಿವೆ. ಈ ಶಾಸನದ ಲಿಪಿ ಹಾಗೂ ಭಾಷೆ ಕನ್ನಡ. ಆದರೆ ಕಾಲದ ಉಲ್ಲೇಖವಿಲ್ಲ. ಶಾಸನದ ಅಕ್ಷರಗಳ ಶೈಲಿ ಹಾಗೂ ಶಾಸನ ದೊರೆತಿರುವ ಸ್ಥಳವನ್ನು ಗಮನಿಸಿದಾಗ ಇದು ಕ್ರಿ.ಶ. ೧೫ನೇ ಶತಮಾನದ ವಿಜಯನಗರ ಶಾಸನವೆಂದು ನಿರ್ಧರಿಸಬಹುದಾಗಿದೆ. ಶಾಸನದಲ್ಲಿ ಸ್ವಸ್ತಿ, ವಚನ ಅಥವಾ ಅಂತ್ಯ ಭಾಗದಲ್ಲಿ ಕಂಡುಬರುವ ಶಾಪದ ಭಾಗ ಅಥವಾ ಮಂಗಳ ಪಾಠ ಇಲ್ಲಿ ನಮೂದಿತವಾಗಿಲ್ಲ. ನೇರವಾಗಿ ದಾನ ನೀಡಿದವರ ಹೆಸರು ಮತ್ತು ದಾನ ಪಡೆದವರ ಹೆಸರುಗಳು ಹಾಗೂ ಭೂಮಿ ನೀಡಿದ ವಿವರ ಮಾತ್ರ ಉಲ್ಲೇಖಿತವಾಗಿರುವುದು ಕಂಡುಬರುತ್ತದೆ. ಇಲ್ಲಿ ನರಸಿಂಗರಾಜ ಒಡೆಯನು ಚಿಂನಪ ಎಂಬುವವರಿಗೆ ಆರು ಗುಳ (ಕೊಳಗ)ದ ಗದ್ದೆಯನ್ನು ದಾನವಾಗಿ ಕೊಟ್ಟಿರುವ ಅಂಶ ಶಾಸನದ ಪ್ರಮುಖ ವಿಷಯವಾಗಿದ್ದು, ಗದ್ದೆಯ ಸೀಮೆ (ಮೇರೆ)ಯ ಗುರುತಿಗಾಗಿ ಈ ಶಾಸನವನ್ನು ಬರೆಸಲಾಗಿದೆ.

ದಾನ ನೀಡಿರುವ ವ್ಯಕ್ತಿ ನರಸಿಂಗರಾಜ ಒಡೆಯ, ಈತನು ಸಾಳುವ ನರಸಿಂಹನಿರಬಹುದಾಗಿದ್ದು, ಒಡೆಯ ಎಂಬುದರ ಉಲ್ಲೇಖ ರಾಜನಿಗೆ ಸಲ್ಲುತ್ತದೆ.[೨] ಉದಾ: ಬುಕ್ಕಣ ಒಡೆಯ ಎಂದು, ಒಡೆಯ ಪದದ ಬಳಕೆ ಒಂದನೇ ಬುಕ್ಕರಾಯನ ಶಾಸನಗಳಲ್ಲೂ ಉಲ್ಲೇಖವಿರುವುದು ಕಂಡುಬರುತ್ತದೆ.[೩]


ಶಾಸನದ ಪಾಠ

೧. ನರಸಿಂಗ ರಾಜ ಒಡೆ

೨. ಯ ಚಿಂನಪಗೆ ಕೊಟ

೩. ಅಱು ಗುಳದ ಗದ್ದೆಯ

೪. ಸೀಮೆ



ಸಾಳುವ ನರಸಿಂಗದೇವನು ಅಚ್ಯುತರಾಯರ ಕಾಲದಲ್ಲಿ ದಂಡನಾಯಕನಾಗಿ ಸೇವೆ ಸಲ್ಲಿಸುತ್ತಿದ್ದ ಬಗ್ಗೆ ಎರಡು ಶಾಸನಗಳು ಉಲ್ಲೇಖಿಸುತ್ತವೆ.[೪] ಇದರ ಆಧಾರದಿಂದ ನರಸಿಂಗರಾಜ ಒಡೆಯನು ಅಚ್ಯುತದೇವರಾಯನ ಕಾಲದಲ್ಲಿ ದಂಡನಾಯಕನಾಗಿರ ಬಹುದೆಂದು ಅಭಿಪ್ರಾಯಪಡಬಹುದಾಗಿದೆ.

ಟಿಪ್ಪಣಿ

೧. ತಮ್ಮಲ್ಲಿದ್ದ ಅಪ್ರಕಟಿತ ಶಾಸನವನ್ನು ನೀಡಿ ಲೇಖನ ಮಂಡಿಸಲು ನೆರವಾದ ಶ್ರೀ ಟಿ.ಎಂ.ಮಂಜುನಾಥಯ್ಯನವರಿಗೆ ಅಭಾರಿಯಾಗಿದ್ದೇವೆ.

೨. ARIE, 1903-04 of 1904, South Indian Inscriptions Vol. IX part II No. 533, SII XVII No. 23

೩. Filliozat Pierre - Sylvain and Vasundhara Filliozat, 1988, Hampi Vijayanagar, The Temple of Vithala, No.IV.

೪. Channabasappa S. Patil: 1995 Inscriptions of Karnataka Vol.I, Inscriptions at Vijayanagara; No. 173, 432

❖ ❖

೬

ತಿಮ್ಮಲಾಪುರದ ಗಜಸಂಹಾರ ಉಬ್ಬುಶಿಲ್ಪ

ಡಾ. ಕೆ.ಎಂ.ಸುರೇಶ್

ತಿಮ್ಮಲಾಪುರವು ಹೊಸಪೇಟೆ ತಾಲೂಕಿನ ಬಳ್ಳಾರಿ ಜಿಲ್ಲೆಯಲ್ಲಿದ್ದು, ಹೊಸಪೇಟೆಯಿಂದ ದಕ್ಷಿಣಕ್ಕೆ ಸುಮಾರು ೨೬ ಕಿ.ಮೀ.ದೂರದಲ್ಲಿರುವ ಒಂದು ಚಿಕ್ಕಗ್ರಾಮ. ತಿಮ್ಮಲಾಪುರದಲ್ಲಿ ಹಂಪೆಯ ವಿರೂಪಾಕ್ಷನ ಧರ್ಮಪತ್ನಿ ಹಾಗೂ ಅದಿದೇವತೆ ಪಂಪಾದೇವಿಯು ಜನಿಸಿದಳೆಂದು ಪ್ರಾಚೀನ ಐತಿಹ್ಯವಿದೆ. ತಿರುಮಲ ಎಂಬ ಅರಸ ಆತನ ಹೆಂಡತಿ ತಿರುಮಲಾಂಬಳ ಹೆಸರಿಗಾಗಿ ಈ ಗ್ರಾಮವನ್ನು ಕಟ್ಟಿಸಿದನೆಂದು ಸ್ಥಳೀಯರ ಅಭಿಪ್ರಾಯವಾಗಿದೆ.

ವಿಜಯನಗರದ ಅರಸ ಅಚ್ಯುತರಾಯನು ಆಳ್ವಿಕೆ ಮಾಡುವಾಗ ಕೊಂಡವೀಡು ಮಹಾಮಂಡಳೇಶ್ವರನಾದ ಬಯಕಾರ ರಾಮಪ್ಪನು ತನ್ನ ತಂದೆಯಾದ ಪೆದ್ದ ತಿಮ್ಮಯ್ಯನ ಹೆಸರಿನಲ್ಲಿ ತಿಮ್ಮಲಾಪುರ ಅಗ್ರಹಾರವನ್ನು ಸ್ಥಾಪಿಸಿದನೆಂದು ಕ್ರಿ.ಶ. ೧೫೩೯ರ ಶಾಸನವೊಂದು ತಿಳಿಸುತ್ತದೆ. ಇದೇ ಬಯಕಾರ ರಾಮಪ್ಪನು ನೂರಾರು ಕೆರೆಗಳನ್ನು ಕಟ್ಟಿಸಿದಂತೆ ಶಾಸನಗಳು ಉಲ್ಲೇಖಿಸುತ್ತವೆ. ಉದಾಹರಣೆಗಾಗಿ ಅಚ್ಯುತಮ್ಮ ಸಮುದ್ರ, ಬಾಚಸಮುದ್ರ, ರಾಮಸಮುದ್ರ, ಕಾಮಸಮುದ್ರ, ಅಮ್ಮನಸಮುದ್ರ, ವೀರಸಮುದ್ರ ಇತ್ಯಾದಿಗಳು. ತಿಮ್ಮಲಾಪುರ ಪ್ರದೇಶದಲ್ಲಿ ಪೆದ್ದತಿಮ್ಮಸಮುದ್ರ, ಬಾಚಸಮುದ್ರ, ಅಮ್ಮಸಮುದ್ರ ಮುಖ್ಯವಾಗಿವೆ. ಇಲ್ಲಿ ಕೆರೆಗಳ ಆಕಾರದಿಂದಾಗಿಯೇ ಸಮುದ್ರವೆಂದು ಗುರುತಿಸಿರಬಹುದು. ಅದೇನೇ ಇದ್ದರೂ "ತಿಮ್ಮಲಾಪುರ" ಎಂಬ ಹೆಸರನ್ನು ಬಯಕಾರ ರಾಮಪ್ಪನು ತನ್ನ ತಂದೆಯ ನೆನಪಿಗಾಗಿ ಇಟ್ಟನೆಂದು ಶಾಸನ ಆಧಾರಗಳಿಂದ ದೃಢಪಡುತ್ತಿದೆ.

ತಿಮ್ಮಲಾಪುರದಲ್ಲಿ ದೇವಾಲಯ, ಕೋಟೆ-ಕೊತ್ತಳಗಳ ಅವಶೇಷಗಳು ಕಾಲನ ತುಳಿತಕ್ಕೆ ಒಳಗಾದರೂ ಅಳಿಯದೆ ಸಂರಕ್ಷಿತವಾಗಿವೆ. ಮುಖ್ಯವಾಗಿ ನಾವಿಲ್ಲಿ ಗೋಪಿನಾಥ, ಈಶ್ವರ, ಮಲ್ಲಿಕಾರ್ಜುನ, ವೀರಭದ್ರನ ಗುಡಿಗಳನ್ನು ಕಾಣುತ್ತೇವೆ. ಇಲ್ಲಿಯ ಈಶ್ವರ ದೇವಾಲಯವು

ಮುಖ್ಯವಾಗಿದ್ದು ಇದು ತ್ರಿಕೂಟಾಚಲವಾಗಿದೆ. ಕ್ರಿ.ಶ. ೧೫೪೯ರ ಶಾಸನದಲ್ಲಿ ತನ್ನ ಸಂಬಂಧಿಗಳಾದ ಬಾಚೇಶ್ವರ, ಅಮ್ಮೇಶ್ವರ ಮತ್ತು ಕೃಷ್ಣೇಶ್ವರರಿಗಾಗಿ ಬಯಕಾರ ರಾಮಪ್ಪನು ಕಟ್ಟಿಸಿದಂತೆ ತಿಳಿದುಬರುವುದು. ವಿಶಾಲ ಪ್ರಾಕಾರದಲ್ಲಿ ಎತ್ತರ ಜಗತಿಯ ಮೇಲೆ ನಿರ್ಮಾಣವಾದ ಈ ದೇವಾಲಯವು ಮೂರು ಗರ್ಭಗೃಹಗಳು, ಅವುಗಳ ಮುಂದೆ ಅಂತರಾಳಗಳು, ಸಭಾಮಂಟಪ ಮತ್ತು ತೆರೆದ ಮುಖಮಂಟಪಗಳಿಂದ ಕೂಡಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಮೂರು ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಅಂತರಾಳಗಳ ಪ್ರವೇಶದ ಇಕ್ಕೆಲಗಳಲ್ಲಿ ಶೈವದ್ವಾರ ಪಾಲಕರ ಉಬ್ಬುಗೆತ್ತನೆಗಳನ್ನು ನೋಡಬಹುದು. ಸಭಾಮಂಟಪದ ಮಧ್ಯದಲ್ಲಿ ಬೃಹದಾಕಾರದ, ಚೌಕಾಕಾರದ ನಾಲ್ಕು ಕಂಬಗಳು ಉಬ್ಬುಶಿಲ್ಪಗಳನ್ನೊಳಗೊಂಡಿವೆ. ಒಂದು ಕಂಬದಲ್ಲಿ "ಗಜಸಂಹಾರ" ಉಬ್ಬುಶಿಲ್ಪವು ತುಂಬಾ ಸುಂದರವಾಗಿದೆ. ಅದರ ವಿವರಣೆಯನ್ನು ನೀಡುವುದು ಈ ಪ್ರಬಂಧದ ಮೂಲ ಆಶಯವಾಗಿದೆ. ಇಂತಹ 'ಗಜಸಂಹಾರ' ಶಿಲ್ಪಗಳು ಪ್ರಾಚೀನ ಕಾಲದಿಂದಲೂ ಪೌರಾಣಿಕ ಹಿನ್ನೆಲೆಯಲ್ಲಿ ಮೂಡಿಬಂದಿವೆ. ಕರ್ನಾಟಕದಲ್ಲಿ ಸ್ವಲ್ಪ ಪ್ರಾಚೀನವೆನ್ನಬಹುದಾದ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿ ಈ ಶಿಲ್ಪವನ್ನು ಕಾಣಬಹುದು. ಮುಂದೆ ಹೊಯ್ಸಳರ ಪ್ರಮುಖ ಸಂಸ್ಕೃತಿಯ ನೆಲೆಯಾದ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದಲ್ಲಿ ಹಾಗೂ ಅಮೃತಪುರದ ಅಮೃತೇಶ್ವರ ದೇವಾಲಯದಲ್ಲಿ ಈ ಶಿಲ್ಪಗಳನ್ನು ಕಾಣಬಹುದು. ಗಜಸಂಹಾರ ಶಿಲ್ಪದ ಪೌರಾಣಿಕ ಹಿನ್ನೆಲೆ ಏನೆಂದರೆ "ಕುರ್ಮಪುರಾಣ"ದ ಪ್ರಕಾರ ಶಿವಭಕ್ತರು ಶಿವನನ್ನು ಕುರಿತಾಗಿ ಧ್ಯಾನದಲ್ಲಿ ತೊಡಗಿರುವ ಸಂದರ್ಭದಲ್ಲಿ ರಾಕ್ಷಸನೊಬ್ಬ ಆನೆಯ ರೂಪದಲ್ಲಿ ಬಂದು ಧ್ಯಾನವನ್ನು ಭಗ್ನಮಾಡಲು ಪ್ರಯತ್ನ ಮಾಡುವಾಗ ಶಿವಲಿಂಗದಿಂದ ಶಿವನು ಎದ್ದುಬಂದು ಆನೆಯನ್ನು ಸಂಹಾರ ಮಾಡಿದ ಮತ್ತು ಅದರ ಚರ್ಮವನ್ನು ಮೇಲುಡುಪಾಗಿ ಧರಿಸಿದನೆಂದು ಹೇಳುತ್ತದೆ. ಈ ರೀತಿಯ ಕಥೆಗಳ ಆಧಾರದಿಂದಾಗಿಯೇ ಹದಿನಾರರಿಂದ ಸುಮಾರು ಹದಿನೆಂಟು ಶಿವಲೀಲಾ ಮೂರ್ತಿಗಳನ್ನು ನಿರ್ದೇಶಿಸುವುದು ಉಂಟು. ಶಿವಲೀಲಾ ಮೂರ್ತಿಗಳಲ್ಲಿ ಎರಡು ಬಗೆ ಇವೆ. ಅನುಗ್ರಹಮೂರ್ತಿಗಳು, ಸಂಹಾರ ಮೂರ್ತಿಗಳು ಗಜಸಂಹಾರ ಮೂರ್ತಿಯು ೨ನೇ ಪ್ರಬೇಧಕ್ಕೆ ಸೇರಿದ್ದು.

ಅಂಶಮೂಬೇದಾಗಮ ಮತ್ತು ಶಿಲ್ಪರತ್ನ ಇತರೆ ಶೈವ ಆಗಮಗಳಲ್ಲಿ ಈ ಗಜಸಂಹಾರ ಮೂರ್ತಿಶಿಲ್ಪಗಳ ಲಕ್ಷಣಗಳನ್ನು ವಿವರವಾಗಿ ಹೇಳಿವೆ. ತಿಮ್ಮಲಾಪುರದ 'ಗಜಸಂಹಾರ' ಉಬ್ಬುಶಿಲ್ಪವು ತ್ರಿಭಂಗ ಸ್ಥಿತಿಯಲ್ಲಿದ್ದು, ತಲೆಯನ್ನು ಆನೆಯ ಸಂಹಾರದ ಕಡೆ ಸ್ವಲ್ಪ ವಾಲಿದಂತೆ ಕೆತ್ತಲಾಗಿದೆ. ನಾಲ್ಕು ಕೈಗಳನ್ನು ಹೊಂದಿದ್ದು, ಬಲಗಡೆಯ ಮೇಲಿನ ಕೈಯಲ್ಲಿ ಉದ್ದನೆಯ ತ್ರಿಶೂಲವಿದ್ದು ಅದು ಆನೆಯನ್ನು ಕೆಳಗೆ ಸಂಹರಿಸಲು ಬಳಸಿದಂತೆ ಕಾಣುವುದು. ಎಡಭಾಗದ ಮೇಲಿನ ಕೈಯಲ್ಲಿ ಅಂಕುಶವಿದೆ. ಕೆಳಗಿನ ಎಡ ಮತ್ತು ಬಲ ಕೈಗಳು ಆನೆಯ ಚರ್ಮವನ್ನು ಹಿಡಿದಿವೆ. ಆನೆಯ ಚರ್ಮವು ಶಿಲ್ಪದ ಪ್ರಭಾಮಂಡಲಕ್ಕೆ ವ್ಯಾಪಿಸಿದಂತೆ



ಗಜಸಂಹಾರ ಮೂರ್ತಿಶಿಲ್ಪ, ತಿಮ್ಮಲಾಪುರ

ಗೋಚರಿಸುತ್ತದೆ. ಕರಂಡಮುಕುಟ, ಕರ್ಣಕುಂಡಲ, ಕಂಠಿಹಾರ, ಉದ್ದನೆಯ ವನಮಾಲಾ, ದೋತಿ ಸೊಂಟಪಟ್ಟಿಗಳಿಂದ ಅಲಂಕರಿಸಲಾಗಿದೆ. ವಿಜಯನಗರ ಶೈಲಿಯ ಈ ಶಿಲ್ಪವು ಗ್ರಾನೈಟ್ ಶಿಲೆಯ ಕಂಬದಲ್ಲಿ ಸುಂದರವಾಗಿ ಗೋಚರಿಸುತ್ತದೆ.

❖ ❖

೭

ಮೀನಗೊಂದಿಯ ಬಡಿಗೆ ಹಬ್ಬ : ವಿಜಯನಗರದ ಯೋಧ ಪರಂಪರೆಯ ಪ್ರತೀಕ?

ಡಾ. ಜಾಜಿ ದೇವೆಂದ್ರಪ್ಪ

ವಿಜಯನಗರ ಕಾಲದ ಹಬ್ಬಾಚರಣೆಗಳ ಕುರುಹಾಗಿ ಇಂದು ಕರ್ನಾಟಕದಾದ್ಯಂತ ಉಳಿದಿರುವ ಬೊಂಬೆಹಬ್ಬ ಮುಂತಾದವು ಗಮನಾರ್ಹ. ಅದೇ ತೆರನಾಗಿ ಈ ದಸರಾ ಉತ್ಸವದಲ್ಲಿ ಸೈನಿಕರಿಗೆ ಹೆಚ್ಚಿನ ಮಹತ್ವವಿತ್ತು. ರಾಯರ ಕಾಲದಲ್ಲಿ ಸೈನಿಕರು ಪ್ರದರ್ಶಿಸುತ್ತಿದ್ದ ವಿವಿಧ ಬಗೆಯ ಖಡ್ಗದಾಟ, ಬಾಣದ ಸಿಡಿತ, ಕುಸ್ತಿ ಮೊದಲಾದುವು ಉತ್ಸವದಲ್ಲಿ ಹೆಚ್ಚಿನ ಮಹತ್ವವನ್ನೊಂದಿದ್ದವು. ಅದರ ಕುರುಹು ಎಂಬಂತೆ ಇಂದಿಗೂ ಮೀನಗೊಂದಿ ಮಲ್ಲಯ್ಯನ ದಸರಾ ಉತ್ಸವದಲ್ಲಿ ನಡೆಯುವ ಬಡಿಗೆ ಆಟವು ವಿಜಯನಗರ ಕಾಲದ ಯೋಧ ಪರಂಪರೆಯ ಪ್ರತೀಕ ಎಂಬುದನ್ನು ಗುರುತಿಸಬಹುದು. ವರ್ತಮಾನದಲ್ಲಿ ನಿಂತು ಗತಕಾಲವನ್ನು ಅವಲೋಕಿಸಿದರೆ ಅದೆಷ್ಟೋ ಸಾಂಸ್ಕೃತಿಕ ಚಹರೆಗಳ ರೂಪುರೇಷೆಯು ನಮಗೆ ದೊರೆಯುತ್ತವೆ. ಇದರಿಂದ ಗತದ ಚರಿತ್ರೆಯು ನಮ್ಮೆದುರಿಗೆ ಕಟ್ಟಿಕೊಳ್ಳುತ್ತದೆ. ಇಂದು ಅಲ್ಲಲ್ಲಿ ಸಾಂಕೇತಿಕವಾಗಿ ಉಳಿದುಕೊಂಡಿರುವ ಹಲವಾರು ಹಬ್ಬಾಚರಣೆಗಳು ಚರಿತ್ರೆಯ ಮುಖ್ಯ ಘಟನೆಗಳನ್ನು ಪ್ರತಿನಿಧಿಸುತ್ತವೆಯೆಂಬುದನ್ನು ಗಮನಿಸಬೇಕು.

ಮೀನಗೊಂದಿಯು ಇಂದು ಆಲೂರು ತಾಲ್ಲೂಕು ಕರ್ನೂಲು ಜಿಲ್ಲೆಯಲ್ಲಿದೆ. ಇದನ್ನು ದೇವರಗುಡ್ಡ' ಎಂದು ಕರೆಯಲಾಗುತ್ತದೆ. ಇಲ್ಲಿನ ಮುಖ್ಯ ದೈವ ಮಲ್ಲಯ್ಯ. ಮೂಲತಃ ಇದು ಮೈಲಾರ ಕ್ಷೇತ್ರ. ಮೈಲಾರ ಕ್ಷೇತ್ರಗಳೆಲ್ಲವುಗಳಲ್ಲಿ ಕಾರಣಿಕ ಮುಂತಾದ ಆಚರಣೆಗಳಿವೆ. ಆದರೆ ಮೀನಗೊಂದಿಯಲ್ಲಿ ಈ ಬಡಿಗೆಯಿಂದ ಹೊಡೆದಾಡುವ ಅಥವಾ ಬಡಿಗೆಯಿಂದ ಉತ್ಸವ ಮೂರ್ತಿಗಳನ್ನು ಮೆರೆಸುತ್ತಾ ಬರುವ ಪದ್ಧತಿಯು

ವಿಜಯನಗರೋತ್ತರ ಕಾಲಾವಧಿಯಲ್ಲಿ ರೂಢಿಯಾಗಿರಬೇಕು. ಮೀನಗೊಂದಿಯ ಪರಿಸರದ ಆದವಾನಿ, ಕೌತಾಳಂ, ಕೋಟಕಲ್ಲು, ಬೂದೂರು, ಕುರುಕುಂದೆ, ಗೂಳ್ಯ, ಚಿಪ್ಪಗಿರಿ, ಬೆಳ್ಡೋಣೆ, ಬೊಳಗೋಟಿ, ಸುಳುವಾಯಿ, ಹತ್ತಿಬೆಳಗಲ್ಲುಗಳಲ್ಲಿ ದೊರೆಯುವ ವಿಜಯನಗರ ಕಾಲದ ಅನೇಕ ಶಾಸನಗಳಲ್ಲಿ ಈ ಬಡಿಗೆಹಬ್ಬ ಕುರಿತಾದ ಉಲ್ಲೇಖಗಳು ಕಂಡುಬರುವುದಿಲ್ಲ. ಆದರೂ ಮೌಖಿಕ ಕಥನಗಳು ಮತ್ತು ಸ್ಥಳೀಯ ಮೌಖಿಕ ಹೇಳಿಕೆಗಳಿಂದ ಇದನ್ನು ನಿರೂಪಿಸಿಕೊಳ್ಳಬೇಕಾಗಿದೆ. ಅಂತೆಯೇ ವಿದೇಶೀಯರು ವಿಜಯನಗರವನ್ನು ಕಂಡು ಬರೆದ ಪ್ರವಾಸಿ ಬರೆಹ, ರತ್ನಾಕರವರ್ಣಿಯ 'ಭರತೇಶ ವೈಭವಗಳು' ಇದಕ್ಕೆ ಮತ್ತಷ್ಟು ಆಧಾರಗಳನ್ನು ಒದಗಿಸುತ್ತವೆ.


ವಿಜಯನಗರದ ದಸರಾ ಉತ್ಸವವನ್ನು ಪಯಾಸ್ "ವಿಜಯದಶಮಿಯ ದಿನ ರಾಜಧಾನಿಯ ಪ್ರಮುಖ ಸ್ಥಳಗಳಲ್ಲಿಯೂ ರಸ್ತೆಗಳಲ್ಲಿಯೂ ಸೈನ್ಯಗಳು ಸಾಲುಗಟ್ಟಿ ನಿಂತಿರುತ್ತಿದ್ದವು. ಸರೋವರ ಅಥವಾ ಕೆರೆಗಳಿದ್ದೆಡೆಯಲ್ಲಿಯೂ ಸೈನಿಕರು ನಿಂತಿದ್ದರು. ರಸ್ತೆಗಳು ಕಿರಿವಾಗಿದ್ದರಿಂದ ಬೆಟ್ಟ-ಗುಡ್ಡಗಳ ಹತ್ತಿರ, ಮೇಲೆ ನಿಲ್ಲಿಸುತ್ತಿದ್ದರು. ಪ್ರತಿಯೊಂದು ದಂಡಿನ ತುಕಡಿಯ ಮುಂದೆ ಒಬ್ಬ ದಂಡನಾಯಕ ಇರುತ್ತಿದ್ದ. ಆನೆ, ಕುದುರೆಗಳೂ ಇರುತ್ತಿದ್ದವು. ಯುದ್ಧಕ್ಕೆ ಹೊರಟವರಂತೆ ಕಾಣುತ್ತಿರುತ್ತಾರೆ. ಸೇನೆಗಳ ಹತ್ತಿರ ರಾಯನು ಬಂದಾಗ ಸಿಡಿಮದ್ದನ್ನು ಹಾರಿಸುತ್ತಿದ್ದರು" ಎಂದು ವರ್ಣಿಸುತ್ತಾನೆ. ಮೀನಗೊಂದಿಯ ಪರಿಸರದಲ್ಲಿಯೂ ಈ ಬಗೆಯ ಭೌಗೋಳಿಕ ಚಹರೆಯಿದ್ದು ಕೆರೆಯ ದಂಡೆ, ಬೆಟ್ಟ-ಗುಡ್ಡಗಳ ಮೇಲೆ ಬಡಿಗೆಯನ್ನಿಡಿದು ಸೈನಿಕರೋಪಾದಿಯಲ್ಲಿ ಜನರು ನಿಂತಿರುತ್ತಾರೆ. ಹೆಗ್ಗಡೆಯು ಕುದುರೆಯ ಮೇಲೆ ಬಂದನಂತರ ಇಲ್ಲಿಯೂ ಔಟನ್ನು (ಸಿಡಿಮದ್ದು) ಹಾರಿಸುತ್ತಾರೆ.

ಅದೇ ರೀತಿಯಾಗಿ ಪಯಾಸ್ ಉಲ್ಲೇಖಿಸುವಂತೆ, 'ರಾಜನು ಸಿಂಹಾಸನದ ಮೇಲೆ ಕುಳಿತು ನಾರಿಯರ ಹಾಗೂ ನೃತ್ಯಗಾತಿಯರ, ವೇಶ್ಯಾ ಸ್ತ್ರೀಯರ ಹಲವಾರು ನೃತ್ಯ ವೀಕ್ಷಿಸುತ್ತಿದ್ದನು' ಎಂದು ಹೇಳುತ್ತಾನೆ. ಮೀನಗೊಂದಿಯಲ್ಲಿಯೂ ದೊರೆ ಎಂದೆನಿಸಿಕೊಂಡ ಹೆಗ್ಗಡೆಯು ಸಿಂಹಾಸನ ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಾನೆ. ಆಗ ಬಸವಿಯರು ಕುಣಿದು ನೃತ್ಯ ಮಾಡುವುದನ್ನು ವೀಕ್ಷಿಸುತ್ತಾನೆ.

ವಿಜಯದಶಮಿಯ ದಿನ ದಂಡಾಳುಗಳಲ್ಲದೇ ಸಾಮಾನ್ಯ ಜನರೂ ಇದರಲ್ಲಿ ಭಾಗವಹಿಸಿ ತಮ್ಮ ಆನಂದೋತ್ಸಾಹಗಳನ್ನು ಗಮನಾರ್ಹವಾಗಿ ಪ್ರಕಟಿಸುತ್ತಿದ್ದರು. ದಂಡಾಳುಗಳು ಆಗಾಗ್ಗೆ ತಂಡೋಪತಂಡವಾಗಿ ಬೆಟ್ಟಗುಡ್ಡಗಳ ಇಳಿಜಾರಿನಿಂದ ಕೆಳಗಡೆಗೆ ನುಗ್ಗಿಬರುತ್ತಾ ಕೇಕೆಗಳನ್ನು ಹಾಕುತ್ತಾ ತಮ್ಮ ಕೈಗಳಲ್ಲಿದ್ದ ಗುರಾಣಿಗಳನ್ನು ಬಡಿಯುತ್ತಾ ಹಿಡಿದಿದ್ದ ಆಯುಧಗಳನ್ನು ಝಳಪಿಸುತ್ತಿದ್ದರೆಂದು ವಿಜಯನಗರದ ಉತ್ಸವ ಕುರಿತು ಹೇಳಾತ್ತಾರೆ. ಅದರಂತೆ ಮೀನಗೊಂದಿಯಲ್ಲಿಯೂ ಜನರು ತಮ್ಮ ಕೈಗಳಲ್ಲಿ ಹಿಡಿದ ಉದ್ದವಾದ ಬಡಿಗೆಗಳನ್ನು ತಂಡೋಪತಂಡವಾಗಿ ನಿಂತು ಬಡಿಯುತ್ತಾರೆ. ನೆರೆದ ಸಾಮಾನ್ಯ ನೋಡುಗರು ಅವರಿಗೆ ಭಂಡಾರವನ್ನು ಚೆಲ್ಲಿ ಕೇಕೆ ಹೊಡೆದು ಹುರಿದುಂಬಿಸುತ್ತಾರೆ. ಆಯಾ ಗ್ರಾಮಗಳಿಂದ

ಬಂದ ಬಡಿಗೆ ಹಿಡಿದ ಗುಂಪು ಅಲ್ಲಲ್ಲಿ ಚಿಕ್ಕ ಬೆಟ್ಟಗಳ ಮೇಲಿನಿಂದ ಬಡಿಗೆಯ ನಾದವನ್ನು ಪ್ರದರ್ಶಿಸುತ್ತಾರೆ.

ಮೀನಗೊಂದಿಯ ಬಡಿಗೆ ಹಬ್ಬದ ದೃಶ್ಯಗಳು





ಭರತೇಶ ವೈಭವದಲ್ಲಿ ದಿಗ್ವಿಜಯ ಪ್ರಕರಣದ ನವರಾತ್ರಿ ಸಂಧಿಯಲ್ಲಿ ರತ್ನಾಕರವರ್ಣಿಯು ರಾಯನ ಕಾಲದ ನವರಾತ್ರಿಯ ವೈಭವವನ್ನು ವರ್ಣಿಸಿದ್ದಾನೆ. ಅಲ್ಲಿ ಓಲಗ ರಾತ್ರಿ ನೆರೆಯಿತು. ಅನೇಕ ಬಗೆಯ ಬಾಣಗಳನ್ನು ಉರಿಸುತ್ತಿದ್ದರು. ಕತ್ತಿ, ಕಠಾರಿ, ಬೆತ್ತ, ಕಕ್ಕಡೆ, ಕೊಡಲಿ, ಚೂರಿ ಮುಂತಾದುವನ್ನು ಪ್ರದರ್ಶಿಸುತ್ತಿದ್ದ ಜನರನ್ನು ಭೂಪಾಲ ನಿಂತು ನೋಡಿದನು. ಮುಂತಾದ ವಿವರಗಳಿವೆ. ಇದಕ್ಕೆ ಹೋಲುವಂತೆಯೇ ದೇವರಗುಡ್ಡ (ಮೀನಗೊಂದಿ)ದಲ್ಲಿ ಬಡಿಗೆಹಬ್ಬ ರಾತ್ರಿ ನೆರವೇರುತ್ತದೆ. ಬಂದಂತಹ ಭಕ್ತಾದಿಗಳು ತಮ್ಮ ಆಯುಧಗಳನ್ನು ಪ್ರದರ್ಶಿಸುತ್ತಾರೆ.

ಮೀನಗೊಂದಿಯಲ್ಲಿಯೂ ಹೆಗ್ಗಡೆ ಅಥವಾ ಗೊರವಪ್ಪ ಸೈನಿಕರೋಪಾದಿಯಲ್ಲಿ ನಿಂತ ಬಡಿಗೆಧಾರಿಗಳನ್ನು ನೋಡುತ್ತಾ ಬನ್ನಿಮರದ ಕಟ್ಟೆಗೆ ಬಂದು ಪೂಜೆಯಾದ ಬಳಿಕ ಮಹಾನವಮಿ ಮುಕ್ತಾಯವಾಗುತ್ತದೆ.

ವಿಜಯನಗರದಲ್ಲಿ ನಡೆಯುತ್ತಿದ್ದ ಮಹಾನವಮಿ ಹಬ್ಬದ ವಿವರಗಳನ್ನು ಮೀನಗೊಂದಿ ಹಬ್ಬಕ್ಕೆ ಹೋಲಿಸಲು ಕಾರಣವಿಷ್ಟೇ, ರಾಜಧಾನಿಯಾದ ಹಂಪಿಯಲ್ಲಿ ಚಕ್ರವರ್ತಿಯ ಸಮ್ಮುಖದಲ್ಲಿ ನಡೆಯುತ್ತಿದ್ದ ಈ ಸೈನಿಕರ ಕವಾಯತು, ಶೌರ್ಯ ಪ್ರದರ್ಶನ ಅವರ ಆಡಳಿತಕ್ಕೆ ಒಳಪಟ್ಟ ಎಲ್ಲಾ ಪ್ರದೇಶಗಳಲ್ಲಿಯೂ ಆಯಾ ರಾಜರು, ಸಾಮಂತರು, ನಾಯಕರು ಮುಂತಾದವರು ಆಚರಿಸಿರಬೇಕು. ಅಲ್ಲದೇ ವಿಜಯನಗರದ ಈ ಸಮೃದ್ಧಿಯು ಕೃಷ್ಣದೇವರಾಯನ ದಂಡುಬೀಡು ಬಿಟ್ಟಿದ್ದ ಪಾಳೆಯದಲ್ಲಿಯೂ ಕಾಣಬಹುದು ಎಂದು ವಿದೇಶಿ ಪ್ರವಾಸಿಗ ನ್ಯೂನಿಜ್ ಉಲ್ಲೇಖಿಸುತ್ತಾನೆ. ಬಹುಶಃ ವಿಜಯನಗರ ಕಾಲದಲ್ಲಿ ಸೈನಿಕರು ಈ ಮೀನಗೊಂದಿ ಪರಿಸರದ ವಿಶಾಲವಾದ ಬೆಟ್ಟಗಳ ನಡುವಿನ ಮೈದಾನದಲ್ಲಿ ಬೀಡುಬಿಟ್ಟಿದ್ದಿರಬೇಕು. ಅಲ್ಲದೇ ಇಲ್ಲಿರುವ 'ಮದ್ದಿನಮನೆ' ಎಂಬುದು ಅವರ ಮದ್ದುಗುಂಡು, ಆಯುಧಾಗಾರವಾಗಿದ್ದಿರಬೇಕು. ಇದನ್ನು ಜನಸಾಮಾನ್ಯರೂ ಐತಿಹ್ಯಕಟ್ಟಿ ಕೃಷ್ಣದೇವರಾಯನ ಸೈನಿಕರು ಇದ್ದ ಜಾಗೆ' ಎಂದು ಹೇಳುತ್ತಾರೆ. ದಂಡು ಬೀಡು ಬಿಟ್ಟಿದ್ದ ಈ ಪ್ರದೇಶದಲ್ಲಿ ವಿಜಯದಶಮಿಯ ದಿನದಂದು ಆನಂದೋತ್ಸಾಹದಿಂದ ಕುಣಿದಾಡಿರಬೇಕು. ಈ ಪರಂಪರೆಯೇ ಇಂದಿಗೂ ಉಳಿದಿರುವ ಸಾಧ್ಯತೆಯಿದೆ. ಮೂಲತಃ ಈ ಮೀನಗೊಂದಿ ಕ್ಷೇತ್ರವು ಮೈಲಾರ ಕ್ಷೇತ್ರವಾದರೂ, ವಿಜಯನಗರ ಕಾಲಕ್ಕೆ ಈ ಸೈನಿಕರು ಇಲ್ಲಿ ಬೀಡುಬಿಟ್ಟು, ಇಂತಹ ಸೈನಿಕ ಹಬ್ಬಕ್ಕೆ ಕಾರಣವಾಗಿರಬಹುದು. ಇಂದು ಅದು ಬಡಿಗೆಯಿಂದ ಹೊಡೆದಾಡುವ ರೂಪದಲ್ಲಿ ವಿಜಯನಗರದ ಯೋಧ ಪರಂಪರೆಯ ಪ್ರತೀಕವಾಗಿರಬಹುದೆಂದು ಊಹಿಸಬಹುದು.

❖ ❖

೮

ಶ್ರೀ ರಾಮಚಂದ್ರಾಪುರ ಅಗ್ರಹಾರ :
ವಿಜಯನಗರ ಮತ್ತು ಕೆಳದಿ ಅರಸರ ಕುರಿತಂತೆ ಚಾರಿತ್ರಿಕ ದಾಖಲೆ

ಡಾ. ಕೆಳದಿ ವೆಂಕಟೇಶ್ ಜೋಯಿಸ್

ಕರ್ನಾಟಕದ ಮಧ್ಯಕಾಲೀನ ಇತಿಹಾಸದಲ್ಲಿ ರಾಜಮಹಾರಾಜರಿಂದ ಮಠಮಾನ್ಯಗಳು ವಿಶೇಷವಾಗಿ ಗೌರವಕ್ಕೆ ಪಾತ್ರವಾಗಿದ್ದವು. ಅಂದು ಮಠಗಳು ತಮ್ಮ ಧಾರ್ಮಿಕ ಚಟುವಟಿಕೆಗಳಿಗೆ ಮತ್ತು ಶಾಸ್ತ್ರ, ಪುರಾಣ ಇತರ ಅಧ್ಯಯನಕ್ಕೆ ದಾನದತ್ತಿಗಳನ್ನು ಪಡೆಯುತ್ತಿದ್ದವು. ಅದರಂತೆ ಅಗ್ರಹಾರಗಳ ಸ್ಥಾಪನೆ ಶಾಸ್ತ್ರಾದಿಗಳ ಅಧ್ಯಯನ ನಡೆದುಬರುತ್ತಿತ್ತು. ಹೀಗೆ ಆಶ್ರಯ ಪಡೆದ ಮಠಗಳಲ್ಲಿ ಇಂದಿನ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನಲ್ಲಿರುವ ಶ್ರೀ ರಾಮಚಂದ್ರಾಪುರ ಮಠವೂ ಒಂದು. ಕೆಳದಿ ಸಂಸ್ಥಾನ ಉಛ್ರಾಯ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಆ ಸಂಸ್ಥಾನದಿಂದ ಆಶ್ರಿತವಾಗಿ ವಿಶೇಷವಾಗಿ ಈ ಮಠ ಬೆಳೆದುಬಂದಿತು. ಇದು ಆರನಾಡು ಮಾಗಣಿ ಹುಂಚ ಹೋಬಳಿಯಲ್ಲಿತ್ತು. ಇಂದು ಇದನ್ನು ರಾಮಚಂದ್ರಾಪುರ ಸೀಮೆ ಎಂದು ಕರೆಯಲ್ಪಡುತ್ತಿದೆ. ಈ ಮಠವು ಪ್ರಾರಂಭದಲ್ಲಿ ಶ್ರೀ ಶಂಕರಾಚಾರ್ಯರಿಂದ ಗೋಕರ್ಣದ ಅಶೋಕದಲ್ಲಿ ಸ್ಥಾಪನೆಯಾಗಿ ಶ್ರೀ ಸಂಸ್ಥಾನ ಗೋಕರ್ಣ ರಘೋತ್ತಮ ಮಠವೆಂದು ಪ್ರಖ್ಯಾತವಾಗಿ ಅಲ್ಲಿಂದ ಧರ್ಮಕಾರ್ಯಗಳನ್ನು ನಡೆಸಿಕೊಂಡುಬರುತ್ತಿತ್ತು. ಆ ಮಠವೇ ಮುಂದೆ ಹನ್ನೆರಡನೆಯ ಶ್ರೀ ರಾಮಚಂದ್ರಭಾರತಿರವರ ಕಾಲಕ್ಕೆ ಶರಾವತಿ ನದಿ ತೀರದಲ್ಲಿರುವ ಅಗಸ್ತ್ಯ ತೀರ್ಥಕ್ಕೆ ಸ್ಥಳಾಂತರಿಸಲ್ಪಟ್ಟು ಅನಂತರ ರಾಮಚಂದ್ರಾಪುರ ಎಂಬುದಾಗಿ ನಾಮಾಂಕಿತವಾಯಿತು.[೧] ಇದು ವಿಜಯನಗರದ ವೀರನರಸಿಂಹನ ಕಾಲದಲ್ಲಿ ಅಂದರೆ ಕ್ರಿ.ಶ. ೧೫೦೭ರಲ್ಲಿ ಆಗಿರುವುದಾಗಿದೆ. ಬಿದನೂರು ಕೋಟೆಯ ಮಗ್ಗುಲಲ್ಲಿರುವ ಈ ಮಠವು ಅನಂತರದಲ್ಲಿ

ಕೆಳದಿ ಅರಸರಿಂದ ಅಭಿವೃದ್ಧಿ ಹೊಂದುತ್ತ ಬಂದಿತು. ಈಗಿನ ಮಠವಿರುವ ಸ್ಥಳದಲ್ಲಿ ಕ್ರಿ.ಶ. ೧೫೦೭ರಲ್ಲಿ ವಿಜಯನಗರದ ವೀರನರಸಿಂಹನ ಕಾಲದಲ್ಲಿ ರಾಮಚಂದ್ರಾಪುರ ಅಗ್ರಹಾರ ಸ್ಥಾಪನೆ ಕುರಿತಂತೆ ನಮಗೆ ಶಾಸನವೊಂದು ಈ ರೀತಿ ತಿಳಿಸುತ್ತದೆ. ೧೭೧ ಸಾಲುಗಳುಳ್ಳ ಈ ಶಾಸನದಲ್ಲಿ ೧೨೮ನೇ ಸಾಲಿನಲ್ಲಿ[೨]

೧೨೮. .... ದುಂದುಭಿ ಸಂವತ್ಸರದ ಪು
೧೨೯. ಷ್ಯಮಾಸ ಸೂರ್ಯೋಪರಾಗ ಪುರ್ಣಕಾಲದಲ್ಲು ಕೃಷ್ಣವೇಣೀ ನದೀತಟಶೂರ್ಪಾಲ
೧೩೦. ಯಕ್ಷೇತ್ರದಲ್ಲು ಶ್ರೀಮದ್ರಾಜಾಧಿರಾಜಪರಮೇಶ್ವರ ವೀರ ಪ್ರತಾಪಮೂರುರಾಯರ
೧೩೧. ಗಂಡಾಖ್ಯ ಸೋಮಂಣನಾಯಕರು ಶ್ರೀ ಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ್ಯ
೧೩೨. ಪದವಾಕ್ಯ ಪ್ರಮಾಣಪಾರಾಪಾರೀಣಶತಶೃಂಗಪುರವರಾಧೀಶ್ವರರಹಶ್ರೀಮದ್ರಾ
೧೩೩. ಘವೇಶ್ವರಭಾರತೀಸ್ವಾಮೀ ಶ್ರೀಪಾದಂಗಳಪರಮಾರಾಧ್ಯಮೂರ್ತ್ತಿಶ್ರೀಮ
೧೩೪. ದ್ರಾಮಚಂದ್ರದೇವರ ಅಮೃತಪಡೀಗೆಪೊಡವಟ್ಟು ಕೊಟ್ಟ ಧರ್ಮಶಾಸನ ಶಾಲಿ
೧೩೫. ವಾಹನಶಕವರ್ಷ ೧೪೨೯ನೇ ಕ್ಷಯ ಸಂವತ್ಸರದ ಪುಷ್ಯ ಬಹುಳ ೩೦
೧೩೬. ಯೂ ರವಿವಾರ ಸೂರ್ಯೋಪರಾಗ ಪುಂಣ್ಯಕಾಲದಲು ಶ್ರೀಮತ್ತುಂಗಭದ್ರಾತೀ
೧೩೭. ರಶ್ರೀಮತ್ಪಂಪಾವಿರೂಪಾಕ್ಷೇಶ್ವರ ದೇವರ ಸಂನಿಧಿಯಲ್ಲು ಭೂದಾನವಾಗಿ
೧೩೮. ಸರ್ವ್ವಮಾನ್ಯಾಗ್ರಹಾರವಾಗಿ ಸಹಿರಂಣ್ಯೋದಕ ದಾನಧಾರಾಪೂರ್ವ್ವಕವಾಗಿ ಕೊ
೧೩೯. ಟ್ಟ ಹುಟ್ಟುವಳೀಯ ವಿವರ.......................

ಎಂಬುದಾಗಿಯೂ

೧೫೮. .... ಕ್ಷಯಸಂವತ್ಸರದ ಪು
೧೫೯. ಷ್ಯ ಬ ೩೦ ಯಾರಭ್ಯವಾಗಿ ಸರ್ವಮಾನ್ಯಾಗ್ರಹಾರವಾಗಿ ಆಚಂದ್ರಾರ್ಕ
೧೬೦. ಸ್ಥಾಯಿಯಾಗಿ ಸುಖದಿಂ ಭೋಗಿಸುವುದು ....[೩]

ಎಂಬುದಾಗಿಯೂ ಶ್ರೀ ರಾಮಚಂದ್ರಾಪುರ ಅಗ್ರಹಾರ ಸ್ಥಾಪನೆಯ ಕುರಿತಂತೆ ಉಲ್ಲೇಖ ಕಂಡುಬರುತ್ತದೆ. ಇದು ಕ್ರಿ.ಶ. ೧೫೦೭ರಲ್ಲಿ ಶರಾವತಿ ನದಿ ತೀರದಲ್ಲಿ ವಿಜಯನಗರದ ವೀರನರಸಿಂಹನ ಕಾಲದಲ್ಲಿ ಅಗ್ರಹಾರ ಸ್ಥಾಪನೆ ಆದದ್ದನ್ನು ಪ್ರತಿಪಾದಿಸುತ್ತದೆ.[೪] ಶಾಸನದಲ್ಲಿ ಉಲ್ಲೇಖಿತವಾಗಿರುವ ನಲ್ಲುಂಡೆ ಸೀಮೆ, ಕರಣ ಸೀಮೆ, ಹೆಜಳಿ (ಇಂದು ಹೆದ್ನಿ) ಹನಿಯ, ಬಂಡಗದೆ (ವಂದಗದೆ ಎಂದಾಗಿದೆ) ಸಿಂಗಾಪುರ ಸೀಮೆ, ವಾರಂಬಳ್ಳಿ ಸೀಮೆ, ದೇವರ ಶಲಿಕೆ ಸೀಮೆ (ದೇವರ ಸಲಿಕೆ ಎಂದಾಗಿದೆ) ಬೋರಿಕೊಪ್ಪ ಮತ್ತು ಸಂದಸಂ (?) ಸೀಮೆಗಳು, ಅರನಾಡ ಸೀಮೆ, ಹೊನ್ನಕೊಪ್ಪ ಸೀಮೆ ಮೊದಲಾದವು ಇಂದೂ ಸಹ ಶ್ರೀ ರಾಮಚಂದ್ರಾಪುರ ಮಠದ ಆಸುಪಾಸಿನಲ್ಲಿ ಅದೇ ಹೆಸರಿನಲ್ಲಿ ಇದ್ದು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ.[೫]

ಇತ್ತೀಚೆಗೆ ದೊರೆತ ಹೊಸ ದಾಖಲೆ

ಶ್ರೀ ರಾಮಚಂದ್ರಾಪುರ ಮಠದಲ್ಲಿ ೨೦೦೨ರಲ್ಲಿ ಶ್ರೀ ಭಾರತಿ ಪತ್ರಾಗಾರವನ್ನು ಸ್ಥಾಪಿಸಲಾಗಿದೆ. ಆ ಪತ್ರಾಗಾರದಲ್ಲಿ ಸುಮಾರು ೪೦ ಸಾವಿರಕ್ಕೂ ಹೆಚ್ಚು ದಾಖಲೆಗಳು

ಸಂಗ್ರಹಿಸಿ ರಕ್ಷಿಸಲ್ಪಡುತ್ತಿದೆ. ಈ ಪತ್ರಾಗಾರದಲ್ಲಿರುವ ದಾಖಲೆಗಳನ್ನು ಸರ್ವೇಕ್ಷಣೆ ನಡೆಸುವ ಸದವಕಾಶವನ್ನು ಪೂಜ್ಯ ಶ್ರೀರವರು ನನಗೆ ಒದಗಿಸಿದ್ದಾರೆ. ಈ ಪತ್ರಾಗಾರದಲ್ಲಿ ನಮಗೆ ದೊರೆತಿರುವ ಶಾಸನ ಪ್ರತಿಯೊಂದು ಗಮನಾರ್ಹವಾಗಿದೆ. ಇದು ಕೆಳದಿ ಅರಸರಿಂದ ಈ ಮೊದಲು ರಾಯದತ್ತವಾಗಿ ಬಂದಿದ್ದ ಅಗ್ರಹಾರವನ್ನು ಮತ್ತೊಮ್ಮೆ ಜೀರ್ಣೋದ್ಧರಿಸಿದ್ದನ್ನು ತಿಳಿಸುತ್ತದೆ. ಶಾಸನದ ಪಾಠ ಕೆಳಗಿನಂತಿದೆ.[೬]

೦೧. ಶ್ರೀ ಶುಭಮಸ್ತು ನಮಸ್ತುಂಗ ಶಿರಚುಂಬಿ ಚಂದ್ರ ಚಾಮರ್‍ರ ಚಾರ್‍ರವೆ ತ್ರೈಲೋಕ್ಯ ನಗರಾರ್‍ರಂಭ

೦೨. ಮೂಲಸ್ತಂಭಾಯ ಶಂಭವೆ ಸ್ವಸ್ತಿ ಶ್ರೀ ಜಯಭ್ಯೊದಯ ಶಾಲಿವಾಹನ ಶಖವರುಷ ೧೫೮೨

೦೩. ನೆ ಪರ್‍ರಿವರ್ತಮಾನಕ್ಕೆ ಸಲುವಾ ಶಾರ್ವರ್‍ರಿ ಸಂವತ್ಸರ್‍ರದ ಮಾಘ ಶು ೧ ಯು ಸೋಮವಾರದಲ್ಲೂ ಶ್ರೀ

೦೪. ಮದ ಭೋಗವರ್ದನವಾಳ ಪುರ್‍ರುಶಾದಿಸ್ತಿತ್ತರಾದ ರಾಮಚಂದ್ರಾಪುರ್‍ರದ ಶ್ರೀ ಪರ್‍ರಮೇಶ್ವ

೦೫. ರ್‍ರ ಭಾರ್‍ರತ್ತಿಗಳವರ ಕರ್‍ರಕಮಲ ಸಂಜಾತ್ತರಾದ ರಾಮಚಂದ್ರಭಾರ್‍ರತ್ತಿತ್ತೀರ್ಥ ಶ್ರೀಪಾ

೦೬. ದಂಗಳವರ್‍ರು ಕಾಶಿಪಗೋತ್ರದ ಭೊದಾಯನ ಸೂತ್ರದ ಯಜುಶಾಖೇಯ ತಿರ್ಥರ್‍ರಾಜ ಪು

೦೭. ರ್‍ರದ ಗಣಪತಣತ ಬಟ್ಟರ್‍ರ ಪ್ರಪಲುತ್ತ್ರರಾದ ಭಿಮಬೆಟ್ಟರ್‍ರ ಪವುತ್ತರಾದ ನರಸಿಂಹ ಬ

೦೮. ಟ್ಟರ್‍ರ ಪುತ್ರರಾದ ವಡಯಂಭಟ್ಟರ್‍ರಿಗೆ ಕೊಟ್ಟ ಗ್ರಹಾರಾಮಕ್ಷೇತ್ರಾ ಬೂಧಾನ ಪಟ್ಟೆ ಕ್ರಮ

೦೯. ವೆಂತ್ತೆದರ್‍ರೆ ಪೂರ್ವದಲ್ಲಿ ರಾಯದತ್ತವಾಗಿ ಬಂದ ರಾಮಚಂದ್ರಾಪುರ್‍ರದ ಅಗ್ರಹಾರ

೧೦. ದಲ್ಲು ಸರ್ವಮಾನ್ಯವಾಗಿ ನಡದು ಬರ್‍ರುತ್ತಾಯಿದಲ್ಲಿ ದೇಶ ಕಾಲದಿಂದ ವಿಷಕಲಿತ್ತವಾಗಿ

೧೧. ತ್ತೆರ್‍ರುಮಾಡಿ ಶಿಸ್ತು ಕಟ್ಟೆ ನಂಮ ಮಠದೊಳಗೆ ಮಠದವಳಗೆ ಅರ್‍ರಮನೆಗೆ ತ್ತೆತ್ತು ಬರ್‍ರುತ್ತಯಿದಲ್ಲಿ ಕೆಳ

೧೨. ದಿ ಸದಾಶಿವಪ್ಪ ನಾಯ್ಕರ್‍ರ ಪ್ರಪುತ್ರರ್‍ರಾದ ಸಂಕಣ್ಣನಾಯ್ಕರ ಪವುತ್ರರಾದ ಶಿವ

೧೩. ಪ್ಪನಾಯ್ಕರ್‍ರ ಪುತ್ರರಾದ ವೆಂಗಟಪ್ಪ ನಾಯ್ಕರ್‍ರು ಯೀ ಅಗ್ರಹಾರವಂನ್ನು ಜಿರ್ಣೊ

೧೪. ಉಧಾರ್‍ರ ಮಾಡಬೆಕೆಂದು ಪ್ರಾಕು ಆಶ್ವಿಜ ಶು ೧೫ ಯು ಸೊಮವಾರ್‍ರ ಸೊಮೊಪ

೧೫. ರ್‍ರಾಗ ಪುಂಣ್ಯಕಾಲದಲ್ಲು ತ್ತಂಮ ಅಗ್ರಜರ್‍ರಾದ ಶಿವಪ್ಪನಾಯ್ಕರ್‍ರಿಗೆ ಶಾಶ್ವತ ಶಿವ

೧೬. ಲೊಕ ವಾಗ ಬೆಕೆಂದು ಶರ್‍ರಾವತ್ತಿ ತ್ತಿರ್‍ರದಲ್ಲು ಕಟ್ಟಿದ ಅಗ್ರಹಾರಕ್ಕೆ ಬಿಟ್ಟುಕೊಟ್ಟ ಭೂ

೧೭. ಮಿ ಬಿರ್‍ರಾಡ ಮೆಲ್ಲುಹಣ ಮುಂತ್ತಾದಂನ್ನು ಶಿವಾರ್ಪಣ ಮಾಡಿ ಸರ್ವಮಾನ್ಯವಾಗಿ ಮಾಡಿದು

೧೮. ಅಗ್ರಹಾರ್‍ರದೊಳಗೆ ನಿಮಗೆ ಕೊಟ್ಟವೃತ್ತಿ ೧ ಕ್ಕೆ ಸಲುವಭೂಮಿ ವಾರ್‍ರಂಬಳಿವಳಗೆ ಗೂರ್‍ರ

೧೯. ನಹಂನೆ ಬಿಜಿವರ್‍ರಿ ಖಂಡಿ ೪ ಗಡಿ ಬತ್ತ ಖಂಡಗ ೧೬ ಮದಲು ಬೈಲುವಳಗೆ ಬಿಜಿವರ್‍ರಿ

೨೦. ಖಂಡಿ ೨ ಗಡಿ ಖಂಡಗ ೮ ದೆವರ್‍ರ ನಲಿಕೆವಳಗೆ ಬಿಜಿವರ್‍ರಿ ಖಂಡಿ ೨ ಗಡಿ ಖಂಡಗ ೮ ಕು

೨೧. ಲ್ಲುಗದೆ ಬಿಜವರ್‍ರಿ ಖಂಡಿ ೩ ಗಡಿ ಖಂಡಗ ೧೨ ನಲುಂಡೆವಳಗೆ ಜಿಡುಗಢೆ ಖಂಡಗ ೧೧೧೦

೨೨. ಗಡಿ ಖಂಡಗ ೬ ಅಂತ್ತು ಬಿಜವರ್‍ರಿ ಖಂಡಿ ಗೆ ಗಡಿ ಬತ್ತ ಖಂಡಗ ೫೦ ನಲುಂಡೆ ವಳಗೆ
೨೩. ಶಂಕ್ರನಾರ್‍ರಾಯಣ ಭಟ್ಟನ ತೊಟದವಳಗೆ ತ್ತೊಟ ಮರ್‍ರ ೧೨೦ ಉಭಯಂ ವೃತ್ತಿ ೧ ಕೆ
೨೪. ಗ ಯೆಳವರ್‍ರೆ ವರ್‍ರಾಹಾಯಿದಕ್ಕೆ ಬಂದ ಗ್ರಹಾ ನಿವೆಶನ ಹೊಳೆಬದಿಯಲ್ಲು ತ್ತಾಗಿನ
೨೫. ಕೆರ್‍ರೆವಳಗೆ ೧೦ನೆ ಮನೆ ಮೆಟ್ಟು ೪೦ ನಾಲವತಉತ ಮೇಕ್ಕಿನ ನಿವೆಶನ ಸಾಹಾ ತ್ತುಂಗಭದ್ರಾ
ಸ
೨೬. ೦ಗಮದಲ್ಲಿ ಪ್ರಾಕು ಪುಶ್ಯ ಬ೩೦ ಯು ಭಾನುವಾರ್‍ರ ಅರ್ಧೋಧಯ ಪುಣ್ಯಕಾಲದಲ್ಲು
ಸ
೨೭. ಹಿರಂಣ್ಯೊದಕ ದಾನಾಧಾರ್‍ರಾ ಪೂರ್ವಕವಾಗಿ ಶ್ರೀಮದಭೊಗ ವರ್ದನವಾಳ ಪುರ್‍ರುಷಧಿಷ್ಟಿ
೨೮. ತ್ತರಾದ ರಾಮಚಂದ್ರಪುರ್‍ರದ ಪರ್‍ರಮೆಶ್ವರ್‍ರ ಭಾರ್‍ರತಿ ಶ್ರೀ ಸ್ವಾಮಿಗಳವರ್‍ರ ಕರ್‍ರ ಕಮಲ
೨೯. ಸಂಜಾತ್ತರಾದ ರಾಮಚಂದ್ರಭಾರ್‍ರತ್ತಿತೀರ್ಥ ಶ್ರೀಪಾದಂಗಳವರ್‍ರು ಕಾಶ್ಯಪ ಗೊತ್ರ

ಹಿಂಭಾಗ

೩೦. ದ ಬೊದಾಯನ ಸೂತ್ರದ ಯಜುಶಾಖೆಯ ತೀರ್ಥರಾಜಪುರ್‍ರದ ಗಣಪತಿ ಭಟ್ಟರ್‍ರ ಪ್ರ
೩೧. ಪುತ್ರರಾದ ಭಿಮಭಟ್ಟರ್‍ರ ಪುತ್ರರಾದ ನರಶಿಂಹ್ವ ಭಟ್ಟರ್‍ರ ಪುತ್ರರ್‍ರಾದ ವಡಯ
೩೨. ೦ ಭಟ್ಟರ್‍ರಿಗೆ ಯೀ ಭೂಮಿಗೆ ಪೂರ್ವ ಮರ್‍ರಿಯಾದ ಚತ್ತುರ್ಗಡಿವಳಗುಳ್ಳ ನಿಧಿ ನಿಕ್ಷೆ
೩೩. ಪ ಜಲ ಪಾಷಾಣಾ ಅಕ್ಷಿಣಿ ಅಗಾಮಿ ಶಿಧ ಸಾದ್ಯಂಗಳೆಂಬ ಅಷ್ಟಬೋಗತ್ತೇಜ
೩೪. ಸಾಂಮ್ಯವಂನ್ನೂ ಅನ್ನು ಭವ್ಸಿಕೊಂಡು ನಿಉನಿಂಮ ಪುತ್ರ ಪವಿತ್ರ ಸಂತಾನ ಪಾರ್‍ರಂಪ
೩೫. ರ್ಯವಾಗಿ ಅಚಂದ್ರಾರ್ಕ ಸ್ತಾಯಿಗಳಾಗಿ ಸಮಯ ವಿಶೇಷಗಳಲ್ಲಿ ದಾನಾದಿ ಪರ್‍ರಿವರ್ತ
೩೬. ನಿಗೆ ಸರ್‍ರಿಕೊಂಡು ಬಹರ್‍ರಿಯಂದು ಶ್ರೀಮಠದ ಭೊಗವರ್ದನವಾಳ ಪುರ್‍ರುಶಾದಿಷ್ಟ
೩೭. ತ್ತರಾದ ರಾಮಚಂದ್ರಾಪುರ್‍ರದ ಶ್ರೀಪರ್‍ರಮೆಶ್ವರ್‍ರ ಭಾರತ್ತಿಗಳವರ್‍ರ ಕರ್‍ರಕಮಲ ಸಂ
೩೮. ಜಾತ್ತರಾದ ರಾಮಚಂದ್ರಭಾರ್‍ರತ್ತಿತೀರ್ಥ ಶ್ರೀಪಾದಂಗಳವರ್‍ರು ಕಾಶ್ಯಪ ಗೋತ್ರದ ಬೊ
೩೯. ದಾಯನ ಸೂತ್ರದ ಯಜಿ ಶಾಖೆಯ ತೀರ್ಥರಾಜ ಪುರ್‍ರದ ಗಣಪತ್ತಿ ಭಟ್ಟರ್‍ರ
೪೦. ಪ್ರಪುತ್ರರಾದ ಭಿಮಭಟ್ಟರ್‍ರ ಪಉತ್ತರಾದ ನರಸಿಂಹ ಭಟ್ಟರ್‍ರ ಪುತ್ರ
೪೧. ರಾದ ವಡಯಂಭಟ್ಟರ್‍ರಿಗೆ ಕರ್ಣಿಕೆಕೊಟ್ಟ ಭೂಧಾನ ಪಟ್ಟೆಯತ್ತಪುತ್ತಿ ಆ
೪೨. ದಿತ್ಯಾಚಂದ್ರಾವ ನಿಲೊನಳಶ್ಚ ದೆಉಭೂರ್ಮಿರಾಪೊ ಹೃದಯಂಯಮಶ್ಚ ಆ
೪೩. ಹಚ ರಾತ್ರಿ ಶ್ಚಾ ಉಭಯಂಚ ಸಂದಿ ಧರ್ಮಶ್ಯಚಾನಾತ್ತಿನರ್‍ರಶ್ಚ ವೃತ್ತಾಂ ಶ್ರೀ
೪೪. ರಾಮಚಂದ್ರ ಯಂತ್ತಾದಸ್ತೂಕತ್ತು ಶಿಕಾಮೊಹರ್‍ರು ನದ್ರಾ ಸಾಕ್ಷಿಗಳು ಸಾಹಯಿ
೪೫. ರುತ್ತಾದೆ

ಶಾಸನ ಸಾರಾಂಶ

ಶಾಸನಪ್ರತಿಯು ೪೫ ಸಾಲುಗಳನ್ನು ಒಳಗೊಂಡಿದೆ. ಶಾ.ಶ.೧೫೮೨ನೇ ಪರಿವರ್ತಮಾನಕ್ಕೆ ಸಲ್ಲುವ ಶಾರ್ವರಿ ಸಂವತ್ಸರದ ಮಾಘ ಶು ೧ ಯು ಸೋಮವಾರದಲ್ಲಿ ಶ್ರೀ ಭೋಗವರ್ದನವಾಳದ ಪುರುಷಾದಿಷ್ಟಿತರಾದ ಶ್ರೀ ರಾಮಚಂದ್ರಾಪುರದ ಶ್ರೀ

ಪರಮೇಶ್ವರಭಾರತಿ ಶ್ರೀಗಳವರ ಕರಕಮಲ ಸಂಜಾತರಾದ ರಾಮಚಂದ್ರಭಾರತಿ ತೀರ್ಥ ಶ್ರೀಪಾದಂಗಳವರು (ಅವರಿಗೆ ರಾಘವೇಶ್ವರ ಭಾರತಿಗಳೆಂದೂ ಕರೆಯಲಾಗುತ್ತಿತ್ತು) ಕಾಶ್ಯಪ ಗೋತ್ರದ ಭೋಧಾಯನ ಸೂತ್ರದ ಯಜುಃಶಾಖೆಯ ತೀರ್ಥರಾಜಪುರದ ಗಣಪತಿಭಟ್ಟರ ಪ್ರಪಾತ್ರರಾದ ಭೀಮಭಟ್ಟರ ಪಾತ್ರರಾದ ನರಸಿಂಹಭಟ್ಟರ ಪುತ್ರರಾದ ವಡಯಂಭಟ್ಟರಿಗೆ ಕೊಟ್ಟ ಗ್ರಹಾರಾಮಕ್ಷೇತ್ರ ಭೂದಾನ ಪಟ್ಟಿಯಾಗಿದೆ. ಅಂದರೆ ಶಾಸನವು ಕ್ರಿ.ಶ. ೧೬೬೦ಕ್ಕೆ ಸರಿಹೊಂದುತ್ತದೆ. ಶಾಸನದಲ್ಲಿ ಈ ಮೊದಲು ಅಂದರೆ ಕ್ರಿ.ಶ.೧೫೦೭ರಲ್ಲಿ ವಿಜಯನಗರದ ವೀರನರಸಿಂಹರಾಯರಿಂದ ರಾಯದತ್ತವಾಗಿ ನಡದುಬಂದ ರಾಮಚಂದ್ರಾಪುರ ಅಗ್ರಹಾರದಲ್ಲು ಸರ್ವಮಾನ್ಯವಾಗಿ ನಡೆದುಬರುತ್ತಿದ್ದಲ್ಲಿ ದೇಶಕಾಲದಿಂದ ವಿಷಕಲಿತವಾಗಿ ತೆರ್ರುಮಾಡಿ ಶಿಸ್ತು ಕಟ್ಟಿ ನಮ್ಮ ಮಠದ ಒಳಗೆ ಅರಮನೆಗೆ ತೆತ್ತು ಬರುತ್ತಿದ್ದಲ್ಲಿ ಕೆಳದಿಯ ಸದಾಶಿವಪ್ಪನಾಯಕರ ಪ್ರಪಾತ್ರರಾದ ಸಂಕಣ್ಣನಾಯಕರ ಪಾತ್ರರಾದ ಶಿವಪ್ಪನಾಯಕರ ಪುತ್ರರಾದ ವೆಂಕಟಪ್ಪನಾಯಕರು ಈ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಬೇಕೆಂದು ಪ್ರಾಕು ಆಶ್ವೀಜ ಶು ೧೫ ಯು ಸೋಮವಾರ ಸೋಮೋಪರಾಗ ಪುಣ್ಯಕಾಲದಲ್ಲು ತಮ್ಮ ಅಗ್ರಜರಾದ ಶಿವಪ್ಪನಾಯಕರಿಗೆ ಶಾಶ್ವತ ಶಿವಲೋಕವಾಗಬೇಕೆಂದು ಶರಾವತಿ ನದಿ ತೀರದಲ್ಲಿ ಕಟ್ಟಿದ ಅಗ್ರಹಾರಕ್ಕೆ ಬಿಟ್ಟುಕೊಟ್ಟ ಭೂಮಿ, ಬಿರಾಡ, ಮೇಲುಹಣ ಮುಂತಾದನ್ನು ಶಿವಾರ್ಪಣ ಮಾಡಿ ಸರ್ವಮಾನ್ಯವಾಗಿ ಮಾಡಿದ ಅಗ್ರಹಾರದೊಳಗೆ ವಡೆಯಂಭಟ್ಟರಿಗೆ ವೃತ್ತಿ ಕೊಟ್ಟಿದ್ದಾಗಿದೆ.


ಕಾಲಕ್ರಮದಲ್ಲಿ ಅಗ್ರಹಾರದಲ್ಲಿ ಬಿಟ್ಟಿಕೊಟ್ಟಿದ್ದ ಭೂಮಿಯಲ್ಲಿ ಉತ್ಪತ್ತಿ ಕಡಿಮೆ ಆಗುತ್ತ ಬಂದು ಈ ಹುಟ್ಟುವಳಿಯಿಂದ ಜೀವನ ನಡೆಸುವುದು ಕಷ್ಟವಾದ್ದರಿಂದ ಅಲ್ಲದೆ ಮುಂದೆ ಸರ್ಕಾರಕ್ಕೆ ಕಂದಾಯ ಪಾವತಿ ಮಾಡಲು ಆಗದೆ ಆ ಭೂಮಿಯನ್ನು ಮತ್ತೊಮ್ಮೆ ಈ ವಡೆಯಂಭಟ್ಟರ ವಂಶಸ್ತರು ಶ್ರೀ ಮಠಕ್ಕೆ ಹಿಂತಿರುಗಿಸಿರುವ ಕುರಿತಂತೆ ದಾಖಲೆಗಳು ಲಭ್ಯವಿದೆ.

ಶರಾವತಿ ನದಿ ತೀರದಲ್ಲಿದ್ದ ಈ ಅಗ್ರಹಾರದಲ್ಲಿ ಇದ್ದ ಮನೆದಳಗಳ ಮತ್ತು ದೇವಾಲಯಗಳ ಅವಶೇಷಗಳು ಈಗಲೂ ಆ ಸ್ಥಳದಲ್ಲಿ ಕಂಡುಬರುತ್ತಿದೆ. ಅವುಗಳಲ್ಲಿ ಹೊಳೆ ದೇವಸ್ಥಾನ ಎಂದು ಕರೆಯಲ್ಪಡುವ ಶ್ರೀ ವಿಶ್ವೇಶ್ವರ ದೇವಸ್ಥಾನವು ಈಗಲು ಇದ್ದು ಜೀರ್ಣಾವಸ್ಥೆಯಲ್ಲಿದೆ. ಕೆಳದಿ ಕಾಲದಲ್ಲಿ ಕಳೂರು ಕಟ್ಟೆ (ಹೊಸನಗರ) ಮತ್ತು ಬಿದನೂರು (ನಗರ)ಕ್ಕೆ ಮುಖ್ಯ ಮಾರ್ಗ ಈ ದೇವಾಲಯದ ಪಕ್ಕದಲ್ಲಿತ್ತು.[೭]

ಈಗ ಶ್ರೀ ರಾಮಚಂದ್ರಾಪುರ ಮಠದ ಪೀಠಾಧಿಕಾರಿಗಳಾಗಿರುವ ಶ್ರೀ ಶ್ರೀ ಶ್ರೀ ರಾಘವೇಶ್ವರ ಭಾರತಿ ಸ್ವಾಮಿಗಳು (೩೬ನೆಯವರು) ಮತ್ತೊಮ್ಮೆ ಈ ಅಗ್ರಹಾರವನ್ನು ಜೀರ್ಣೋದ್ಧಾರಗೊಳಿಸುವ ನಿಟ್ಟಿನಲ್ಲಿ ಇದೇ ಅಗಸ್ತ್ಯ ತೀರ್ಥದ ದಂಡೆಯಲ್ಲಿ ಸರ್ವಶಾಸ್ತ್ರಗಳನ್ನು ಒಳಗೊಂಡು ಅಭ್ಯಾಸಕ್ಕೆ ಅನುಕೂಲವಾಗುವಂತೆ ವಿಶ್ವವಿದ್ಯಾಲಯವೊಂದನ್ನು ಸ್ಥಾಪನೆ ಮಾಡಹೊರಟಿದ್ದಾರೆ. ಇದು ರಾಜಮಾನ್ಯವಾಗಿ

ನಡೆದುಬಂದ ಅಗ್ರಹಾರವೊಂದು ಮತ್ತೊಮ್ಮೆ ಅಂದರೆ ಮೂರನೆಯ ಬಾರಿ ಈಗಿನ ಕಾಲಕ್ಕೆ ತಕ್ಕಂತೆ ಜೀರ್ಣೋದ್ಧಾರಗೊಳ್ಳುತ್ತಿರುವುದು ಅಭಿನಂದನೆಗೆ ಪಾತ್ರವಾಗಿದೆ. ಪೂರ್ವದಲ್ಲಿ ರಾಜಮಹಾರಾಜರಿಂದ ಬಂದಿದ್ದ ಅಗ್ರಹಾರವೊಂದು ಸ್ವಾತಂತ್ರ್ಯನಂತರದಲ್ಲಿ ವಿಶೇಷ ಆಸ್ತೆಯಿಂದ ವಿಶ್ವವಿದ್ಯಾನಿಲಯವಾಗಿ ರೂಪುಗೊಳ್ಳುತ್ತಿರುವುದು ಇದೇ ಮೊದಲನೆಯದಾಗಿದೆ.

ಈ ಪ್ರಬಂಧವನ್ನು ಮಂಡಿಸಲು ಅವಕಾಶ ನೀಡಿದ ನಿರ್ದೇಶಕರು, ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ದೇಶನಾಲಯ, ಹೊಸಪೇಟೆ ಇವರಿಗೆ, ಪ್ರಬಂಧಕ್ಕೆ ಶಾಸನದ ಪ್ರತಿಯನ್ನು ಬಳಸಿಕೊಳ್ಳಲು ಅವಕಾಶವಿತ್ತ ಶ್ರೀ ರಾಮಚಂದ್ರಾಪುರ ಮಠದ ಪೂಜ್ಯ ಶ್ರೀ ರಾಘವೇಶ್ವರ ಭಾರತಿ ಸ್ವಾಮಿಯವರಿಗೆ, ಭಾರತಿ ಪತ್ರಾಧಾಮದ ಅಧಿಕಾರಿವರ್ಗಕ್ಕೆ, ಪ್ರಬಂಧಮಂಡನೆಗೆ ಸಹಕರಿಸಿದ ಶ್ರೀ ಹೆದ್ಲಿ ಅಶೋಕ್ ರವರಿಗೆ ನಾನು ಕೃತಜ್ಞನಿದ್ದೇನೆ.



ಶ್ರೀಮದ್ರಾಮಚಂದ್ರಪುರ ಮಠದ ಗುರುಪರಂಪರಾ ವಂಶವೃಕ್ಷ

೧ ಶ್ರೀಮಚ್ಛಂಕರಾಚಾರ್ಯಃ

೨ ಶ್ರೀಮತ್ಸುರೇಶ್ವರಾಚಾರ್ಯಃ

ಶ್ರೀ ಗೋಕರ್ಣ ರಘೂತ್ತಮಪೀಠಂ

೩ ವಿದ್ಯಾನಂದಾಚಾರ್ಯಃ
೪ ಚಿದ್ಬೋಧಭಾರತೀ
೫ ನಿತ್ಯಾನಂದಭಾರತೀ
೬ ನಿತ್ಯಬೋಧಘನೇಂದ್ರಭಾರತೀ
೭ ಸಚ್ಚಿದಾನಂದಭಾರತೀ
೮ ಚಿದ್ಘನೇಂದ್ರಭಾರತೀ (ರಘುವೀರೇಂದ್ರಭಾರತೀ)
೯ ಸೀತಾರಾಮಚಂದ್ರಭಾರತೀ
೧೦ ಚಿದ್ಬೋಧಭಾರತೀ (ಕ್ರಿ. ಶ. ೧೩೯೦)
೧೧ ರಾಘವೇಶ್ವರಭಾರತೀ (ಕ್ರಿ. ಶ. ೧೪೬೪)

ಶೃಂಗೇರಿ ಶಾರದಾಪೀಠಂ

ನಿತ್ಯಬೋಧಘನಾಚಾರ್ಯ

ಕೆಕ್ಕಾರು ರಘೂತ್ತಮಮಠ


೧ ರಘೂತ್ತಮಭಾರತೀ
೨ ವಿಶ್ವರೂಪಭಾರತೀ
೩ ಸತ್ಯರೂಪಭಾರತೀ


೪ ಸರ್ವೇಶ್ವರಭಾರತೀ
೫ ರಘುನಾಥಭಾರತೀ
೬ ನೃಸಿಂಹ ಭಾರತೀ
೭ ರಾಮಚಂದ್ರಭಾರತೀ
೮ ರಘೂತ್ತಮಭಾರತೀ
೯ ರಾಘವೇಶ್ವರಭಾರತೀ
೧೦ ರಘುನಾಥಭಾರತೀ
೧೧ ರಘೂತ್ತಮಭಾರತೀ
೧೨ ರಾಮಚಂದ್ರಭಾರತೀ
* ೧೩ ರಾಘವೇಶ್ವರಭಾರತೀ (ಹಿರಿವಡೆಯರು)

ಶ್ರೀಮದ್ರಾಮಚಂದ್ರಪುರಮಠ

೧೨ ರಾಮಚಂದ್ರಭಾರತೀ (ಕ್ರಿ. ಶ. ೧೫೦೦)
೧೩ ಅಭಿನವ ರಾಘವೇಶ್ವರಭಾರತೀ
೧೪ ರಾಮಯೋಗೀಂದ್ರಭಾರತೀ

೧೫ ನೃಸಿಂಹಭಾರತೀ
೧೬ ಅನಂತೇಂದ್ರಭಾರತೀ
೧೭ ರಾಮಭದ್ರಭಾರತೀ
೧೮ ರಾಘವೇಶ್ವರಭಾರತೀ
೧೯ ವಿದ್ಯಾಧನೇಂದ್ರಭಾರತೀ
೨೦ ರಘುನಾಥಭಾರತೀ
೨೧ ರಾಮಚಂದ್ರಭಾರತೀ
೨೨ ರಘೂತ್ತಮಭಾರತೀ
೨೩ ಪರಮೇಶ್ವರಭಾರತೀ
೨೪ ರಾಘವೇಶ್ವರಭಾರತೀ
೨೫ ರಘೂತ್ತಮಭಾರತೀ
೨೬ ರಾಘವೇಶ್ವರಭಾರತೀ
೨೭ ರಘೂತ್ತಮಭಾರತೀ
೨೮ ರಾಘವೇಶ್ವರಭಾರತೀ
೨೯ ರಘೂತ್ತಮಭಾರತೀ
೩೦ ರಾಘವೇಶ್ವರಭಾರತೀ
* ೩೧ ರಾಮಚಂದ್ರಭಾರತೀ
೩೨ ರಾಘವೇಂದ್ರಭಾರತೀ
೩೩ ರಾಘವೇಶ್ವರಭಾರತೀ
೩೪ ರಾಮಚಂದ್ರಭಾರತೀ
೩೫ ರಾಘವೇಂದ್ರಭಾರತೀ (ಕ್ರಿ. ಶ. ೧೯೫೩)





ಅಡಿಟಿಪ್ಪಣಿ

೧. ಶ್ರೀ ರಾಮಚಂದ್ರಾಪುರ ಮಠದ ರಾಜಮಾನ್ಯ ಇತಿಹಾಸ ವೈಭವ ಸಂ.೧ ಸಂ: ಕೆಳದಿ ಗುಂಡಾಜೋಯಿಸ್ ಪುಟ ೧ ರಿಂದ ೧೪. ಪ್ರ: ರಾಜ್ಯ ಪತ್ರಾಗಾರ ಇಲಾಖೆ, ೨೦೦೨

೨. ಅದೇ ಪುಟ ೨೨ ರಿಂದ ೩೯

೩. ಅದೇ ಪುಟ ೩೦ ರಿಂದ ೩೨

೪. ಅದೇ ಪುಟ ೩೯

೫. ಕೆನೃವಿ ಪುಟ ೧೨೧. ಕೆಳದಿ ಅರಸರ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಕೆಳದಿ ವೆಂಕಟೇಶ ಜೋಯಿಸ್, ಕ.ಸಾ.ಪ. ಬೆಂಗಳೂರು, ಪುಟ ೫೬. ಕೆಳದಿ ನೃಪವಿಜಯವು ಇದನ್ನು ಪ್ರತಿಪಾದಿಸುತ್ತದೆ.

೬. ಕನ್ನಡದ ರಾಯ ಎಂಬುದು ಸಂಸ್ಕೃತದಲ್ಲಿ ರಾಜ ಎಂಬ ಪದದ ಅರ್ಥ. ವಿಜಯನಗರದ ಅರಸರು ಯಾವಾಗಲೂ 'ರಾಯ'ರು ಎಂದೇ ಕರೆಸಿಕೊಂಡಿದ್ದಾರೆ. ಮರೆಯಲಾಗದ ಮಹಾಸಾಮ್ರಾಜ್ಯ, ಮೂಲ: ಬಿ.ಸೂರ್ಯನಾರಾಯಣರಾವ್, ಕನ್ನಡಕ್ಕೆ ಬಾಲಸುಬ್ರಮಣ್ಣ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಪುಟ ೩೧, ೨೦೦೦.

೭. ಶ್ರೀ ರಾಮಚಂದ್ರಾಪುರ ಮಠದ ರಾಜಮಾನ್ಯ ಇತಿಹಾಸ ವೈಭವ ಸಂ.೨, ಸಂ: ಕೆಳದಿ ಗುಂಡಾಜೋಯಿಸ್

೯

ವಿಜಯನಗರ ಕಾಲದ ಹರಿದ್ರಾ ನದಿಕಟ್ಟೆಯು ಇದ್ದ ಸ್ಥಳ ಗುರ್ತಿಸುವಿಕೆ

ಡಾ. ಜಗದೀಶ

ವಿಜಯನಗರದ ಅರಸರು ಆಡಳಿತಕ್ಕೆ ಪ್ರಸಿದ್ಧರಾಗಿದ್ದಂತೆ, ತಮ್ಮ ನಾಡಿನಲ್ಲಿ ನೀರಾವರಿ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವಲ್ಲಿ ಮುಂದಾಗಿದ್ದರು. ಪ್ರಾಕೃತಿಕ ಜಲಸಂಪತ್ತನ್ನು ಶೇಖರಿಸಿ ನೀರಾವರಿ ಕೃಷಿಗೆ ಬಳಸಿರುವುದು ಉತ್ತಮ ಉದಾಹರಣೆಯಾಗಿದೆ. ಇಂತಹದೊಂದು ಅಣೆಕಟ್ಟೆಯನ್ನು ಹರಿಹರದ ಬಳಿ ಇರುವ ಹರಿದ್ರಾನದಿಗೆ ಕಟ್ಟಿ ಆ ಪರಿಸರದ ರೈತರಿಗೆ ಉಪಯುಕ್ತವಾಗುವಂತೆ ಮಾಡಿದ ಕಾರ್ಯ ಮಹತ್ವದ್ದು.

ಒಂದನೇ ದೇವರಾಯನ ಕ್ರಿ.ಶ.೧೪೧೦ರ ಹರಿಹರ ಶಾಸನದಲ್ಲಿ ತುಂಗಭದ್ರೆಯ ಉಪನದಿಯಾದ ಹರಿದ್ರೆಯನ್ನು ಕಟ್ಟೆಯ ಮೂಲಕ ಕಟ್ಟಿದ ಉಲ್ಲೇಖವಿದೆ. ಈ ಕಟ್ಟೆಯು ಹರಿಹರ ದೇವರ ಸೀಮೆಯೊಳಗಿನ ಬನ್ನಿಕೋಡು ಸೀಮೆಯಲ್ಲಿತ್ತು. ಈ ಕಟ್ಟೆಯಿಂದ ಹೊರಟ ಕಾಲುವೆಯು ಬನ್ನಿಕೋಡು, ಬೆಳುವಾಡಿ, ಹನಗವಾಡಿ, ಹರಿಹರ, ಗುತ್ತೂರು ಮತ್ತು ಗಂಗನರಸಿ ಗ್ರಾಮಗಳ ಭೂಮಿಗಳಿಗೆ ನೀರುಣಿಸುತ್ತಿತ್ತು. ಈ ಕಟ್ಟೆಯನ್ನು ವೀರ ಪ್ರತಾಪ ದೇವರ ಮಹಾ ಪ್ರಧಾನಿ ನಾಗಣ್ಣ ದಂಡನಾಯಕರ ನಿರೂಪದ ಮೇರೆಗೆ ಅಮಾತ್ಯ ಬುಳ್ಳ ನಿರ್ಮಿಸುತ್ತಾನೆ. ಗೌತಮ ಗೋತ್ರದ ಜಂಗಮನಾಥ ಮತ್ತು ಚೆನ್ನಾಂಬಿಕೆ ಇವರ ಪುತ್ರನು ಬುಳ್ಳನು ಕಂಮ್ಮೆ ಕುಲದವನು.[೧] ಈ ಕಟ್ಟೆಯು ಕ್ರಿ.ಶ. ೧೪೨೪ರಲ್ಲಿ (೧೪ ವರ್ಷಗಳ ತರುವಾಯ) ಒಡೆದಿದೆ. ಅಮಾತ್ಯ ಬುಳ್ಳನು ಕಟ್ಟೆಯ ಪುನಃ ಪ್ರತಿಷ್ಠೆ ಮಾಡುವ ಕಾರ್ಯವನ್ನು ಬೊಪ್ಪದೇವನ ಮಗನಾದ ಚಾಮನೃಪನಿಗೆ ಒಪ್ಪಿಸುತ್ತಾನೆ. ಶಾಸನವು ಈತನನ್ನು ಅಭಿನವ ಭೋಜನೆಂದು ಗುರ್ತಿಸಿದೆ.[೨]

ಹರಿದ್ರೆಯು ಹರಿಶಪುರಕ್ಕೆ ಬರದಿದ್ದುದಕ್ಕೆ ಅದನ್ನು ಕಟ್ಟಿ, ಈ ಕಟ್ಟೆಯ ಸ್ಥಳದಲ್ಲಿ ನಿಲ್ಲು ಎಂದು ಆಜ್ಞೆಯ ಮೂಲಕ ನಿಲ್ಲಿಸಿ ಕಾಲುವೆಯ ಮುಖಾಂತರ ಕರತಂದನೆಂದು ಶಾಸನವು ವೀರ ಅಮಾತ್ಯ ಬುಳ್ಳನನ್ನು ಸ್ತುತಿಸಿದೆ. ಮೊದಲ ಕಟ್ಟೆ ಪುನಃ ಒಡೆದಾಗ ಅದನ್ನು ಅಮಾತ್ಯ ಬುಳ್ಳ ತನ್ನ ಸ್ವಯಾರ್ಜಿತ ಧನದಿಂದ ಜೀರ್ಣೋದ್ಧಾರ ಮಾಡಿಸುತ್ತಾನೆ. ಹರಿದ್ರಾನದಿಯ ಕಟ್ಟೆ ಎಲ್ಲಿ ಇತ್ತೆಂಬ ಬಗ್ಗೆ ನಿಖರವಾಗಿ ತಿಳಿದಿರುವುದಿಲ್ಲ. ಬಿ. ರಾಜಶೇಕರಪ್ಪ ಬನ್ನಿಕೋಡು ಸಮೀಪದಲ್ಲಿ ಅಣೆಕಟ್ಟೆ ನಿರ್ಮಾಣವಾಗಿರಬೇಕೆಂದು ಸೂಚಿಸುತ್ತಾರೆ. ಹರಿದ್ರಾ ನದಿಯ ಕಟ್ಟೆಯು ಪುನಃ ಒಡೆದು ಜೀರ್ಣೋದ್ಧಾರ ಮಾಡದೆ ಅದು ನಶಿಸಿ ಹೋಗಿರಬೇಕೆಂದು ಅದು ಉಳಿದು ಬಂದಿದ್ದರೆ ಆ ಕಾಲದ ಅಣೆಕಟ್ಟೆ ನಿರ್ಮಾಣದ ತಾಂತ್ರಿಕ ನೈಪುಣ್ಯತೆಯನ್ನು ಅರಿಯಲು ಸಾಧ್ಯವಾಗುತ್ತಿತ್ತೆಂದು ಅಭಿಪ್ರಾಯಪಡುತ್ತಾರೆ.[೩] ಹರಿಹರ ಶ್ರೀನಿವಾಸರಾವ್ ಬ್ಯಾಲದಹಳ್ಳಿಯ ಬಳಿ ಕಟ್ಟೆಯಿದ್ದು ಕಾಲವೆ ಅಲ್ಲಿಂದ ಹೊರಟಿತ್ತೆಂದು ಸೂಚಿಸುತ್ತಾರೆ.[೪] ಮತ್ತೊಬ್ಬರು ವಿಜಯನಗರ ಕಾಲದ ಕಟ್ಟೆಯು ದೇವರ ಬೆಳಕೆರೆ ಗ್ರಾಮದ ಹತ್ತಿರ ಕಟ್ಟಲಾಗಿತ್ತೆಂದು ಮತ್ತು ಈಗ ಅದೇ ಹಳೆ ಕಟ್ಟೆಯ ಮೇಲೆ ನೀರಾವರಿ ಇಲಾಖೆ ೧೯೮೬ರಲ್ಲಿ ತಡೆಗೋಡೆ (ಪಿಕ್‌ಅಪ್)ಯನ್ನು ಕಟ್ಟಿದೆಯೆಂದು ಅಭಿಪ್ರಾಯಪಡುತ್ತಾರೆ.[೫]

ಹಂಪಿ ಸುತ್ತಮುತ್ತ ತುಂಗಭದ್ರಾ ನದಿ ಪಾತ್ರವು ಕಲ್ಲು ಬಂಡೆಗಳಿಂದ ಕೂಡಿದ್ದು, ತುರ್ತಾ ಕಾಲುವೆಯೂ ಸೇರಿದಂತೆ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು ಹನ್ನೆರಡು ಕಟ್ಟೆಗಳಿರುವುದಾಗಿ ಕೊಟ್ರಯ್ಯನವರು ಗುರ್ತಿಸಿದ್ದಾರೆ.[೬] ವಿಜಯನಗರ ಪ್ರಗತಿಯ ವರದಿಯಲ್ಲಿ ತುರ್ತಾ ಕಟ್ಟೆಯ ಚಿತ್ರಗಳು ಇವೆ. ಅಕ್ಕಪಕ್ಕದ ಕಲ್ಲುಗಳಲ್ಲಿ ಕುಳಿಗಳಿದ್ದು ಕಬ್ಬಿಣದ ಪಟ್ಟಿಗಳು (ಸಲಾಖೆ / ಡವೆಲ್ಸ್) ಅವುಗಳನ್ನು ಬಂಧಿಸಿರುವುದನ್ನು ಕಾಣಬಹುದು. ಕಬ್ಬಿಣದ ಪಟ್ಟಿಗಳು ನೀರಿನ ಸೆಳವಿನೊಂದಿಗೆ ಕಲ್ಲುಗಳ ಸ್ಥಾನಪಲ್ಲಟ ಆಗದಂತೆ ನೋಡಿಕೊಳ್ಳುತ್ತವೆ.

ಕಟ್ಟೆಯು ನಿರ್ದಿಷ್ಟ ಸ್ಥಳದ ಬಗ್ಗೆ ವಿವಿಧ ಮಾಹಿತಿ ಮತ್ತು ಖಚಿತ ಮಾಹಿತಿ ಇಲ್ಲದೆ ಇರುವುದರಿಂದ ಪ್ರಾಥಮಿಕ ಸರ್ವೇಕ್ಷಣೆಯನ್ನು ಆಧರಿಸಿ ಈ ಹರಿದ್ರಾ ನದಿಯ ಕಟ್ಟೆಯು ಹಂಪಿಯ ತುರ್ತಾ ಕಾಲುವೆಯ ಕಟ್ಟೆಯಂತೆ ಇದ್ದು ನೀರನ್ನು ತಿರುವು ಮಾಡುವ ಸಾಧನವಾಗಿತ್ತೆಂದು ತೋರುತ್ತದೆ. ಇದರ ಸ್ಥಳವು ನೀರಾವರಿ ಇಲಾಖೇಯು ನಿರ್ಮಿಸಿರುವ ಪಿಕ್‌ಅಪ್‌ಗಿಂತ ೨-೩ಕಿ.ಮೀ. ಮುಂದೆ ಇರಬಹುದೆಂದು ಸೂಚಿಸಿದ್ದೆ.[೭] ಈ ವರ್ಷ (ದಿನಾಂಕ ೨೪.೦೬.೨೦೦೩) ಮತ್ತೊಮ್ಮೆ ಸರ್ವೇಕ್ಷಣೆ ಮಾಡಿದಾಗ ಈಗಿನ ಪಿಕ್‌ಅಪ್‌ನಿಂದ ಮುಂದೆ ನದಿಗುಂಟ ೨ ಕಿ.ಮೀ. ಸಾಗಿದರೆ (ಹಕ್ಕಿಯಂತೆ ಹಾರಿದರೆ ೧.೨೫ ಕಿ.ಮೀ.) ಬಲಬದಿಯಲ್ಲಿ ವಿಜಯನಗರಪೂರ್ವ ಕಾಲದ ಎರಡು ದೇವಾಲಯಗಳಿವೆ. ಮೊದಲ ದೇವಾಲಯ ಕಲ್ಲೇಶ್ವರ ಎಂದು ಕರೆಯಲ್ಪಡುತ್ತದೆ. ರಂಗಮಂಟಪ ಕಂಭವೊಂದರ ಶಾಸನ ವಿವರದಂತೆ ದೇವಾಲಯವು ಕಲಿದೇವರ ದೇವಾಲಯವಾಗಿರುತ್ತದೆ.[೮] ಈ ಪ್ರದೇಶವನ್ನು ದೇವರ ಬೆಳಕೆರೆ ಗ್ರಾಮದ ಹಳೆಹಾಳು ಪಾಳು ಗ್ರಾಮವೆಂದು ಗುರ್ತಿಸಲಾಗಿದೆ. ಕಲಿದೇವರ ದೇವಾಲಯಕ್ಕೆ ನೇರವಾಗಿ

ಹರಿದ್ರಾ ನದಿಗೆ ಬಂದರೆ ಇಲ್ಲಿ ನದಿಯ ಪಾತ್ರದಲ್ಲಿ ನೈಸರ್ಗಿಕವಾದ ಮೃದು ಕಲ್ಲಿನ ಹಾಸು ಬಂಡೆಯಿದೆ.




ಹರಿದ್ರಾ ನದಿ ಕಟ್ಟೆ ಭಾಗದಲ್ಲಿರುವ ಕಣ ಶಿಲೆ ಸಮೀಪ ನೋಟ



ಹರಿದ್ರಾ ನದಿ ಕಟ್ಟೆ ಭಾಗದಲ್ಲಿರುವ ಕಣ ಶಿಲೆ ಸಮೀಪ ನೋಟ



ಹರಿದ್ರಾ ನದಿ ಕಟ್ಟೆ ಭಾಗದಲ್ಲಿನ ಕಣ ಶಿಲೆಗಳು



ಹರಿದ್ರಾ ನದಿ ಕಟ್ಟೆ ಭಾಗದಲ್ಲಿನ ಕಣ ಶಿಲೆಗಳು

ಹಾಸು ಬಂಡೆಯ ಪ್ರದೇಶದಲ್ಲಿ ಅಲ್ಲಲ್ಲಿ ಚದುರಿದಂತೆ ಬಿದ್ದಿರುವ ಕಣ ಶಿಲೆಯ ಕಲ್ಲುಗಳನ್ನು ಕಾಣಬಹುದು. ಅವು ನೀಳವಾಗಿವೆ ಮತ್ತು ಕಡಿಮೆ ಅಗಲ ಹೊಂದಿವೆ. ಇವುಗಳನ್ನು ಬೇರೆಡೆಯಿಂದ ತಂದು ನೀರಿನ ಸೆಳೆವಿನ ದಿಕ್ಕಿಗೆ ನೀಳಭಾಗ ಇರುವಂತೆ ಹಾಕಲಾಗಿದೆ. (ತುರ್ತಾ ಕಟ್ಟೆಯ ಮಾದರಿಯಂತೆ) ಇಲ್ಲಿನ ಕಲ್ಲುಗಳಲ್ಲಿ ಕುಳಿಗಳು ಇಲ್ಲ. ಆದ್ದರಿಂದ ಕಬ್ಬಿಣದ ಪಟ್ಟಿಗಳಿಂದ ಬಂಧಿಸಿರುವ ಸಾಧ್ಯತೆ ಇಲ್ಲ. ನದಿಯ ಪಾತ್ರದಲ್ಲಿ ಹಾಸು ಬಂಡೆ ಮಾತ್ರ ಇದ್ದು ಅಲ್ಲಲ್ಲಿ ಮೇಲೆದ್ದ ನೈಸರ್ಗಿಕ ಬಂಡೆಗಳು ಇಲ್ಲಿ ಇಲ್ಲದೇ ಇರುವುದರಿಂದ ಪ್ರವಾಹಗಳ ಸಂದರ್ಭದಲ್ಲಿ ಕಲ್ಲುಗಳು ಸಡಿಲವಾಗಿ ಕಟ್ಟೆಯು ಒಡೆದಿರುವಂತೆ ತೋರುತ್ತದೆ. ಹೊರಗಿನಿಂದ ತಂದ ಅಗಾಧ ಪ್ರಮಾಣದ ಕಣ ಶಿಲೆಗಳ ರಾಶಿಯ ಅವಶೇಷ ಕಂಡುಬರದೇ ಇದ್ದರೂ ಮಾನವ ಪ್ರಯತ್ನದ ಕುರುಹಾಗಿ ನೀಳಬಂಡೆಗಳನ್ನು ನದಿಯ ಹರಿವಿನ ದಿಕ್ಕಿಗೆ ಹಾಕಿರುವ ಕುರುಹುಗಳಿಂದಾಗಿ ಸದ್ಯಕ್ಕೆ ವಿಜಯನಗರ ಕಾಲದ ಹರಿದ್ರಾನದಿಯ ಕಟ್ಟೆಯಿದಾಗಿತ್ತೆಂದು ಗುರ್ತಿಸಬಹುದು.

(ಸ್ಥಳಕ್ಕೆ ಬಂದು ಸಹಕರಿಸಿದ ಮುಕ್ತೇನಹಳ್ಳಿಯ ವಾಗೀಶಗೌಡ ಮತ್ತು ವೀರಯ್ಯ ಹಾಗೂ ಸ್ಥಳೀಯ ಗ್ರಾಮಸ್ಥರಿಗೆ ನನ್ನ ವಂದನೆಗಳು).

ಅಡಿಟಿಪ್ಪಣಿ

೧. ಇ.ಸಿ.೧೧ ದಾವಣಗೆರೆ ನಂ ೨೩

೨. ಇ.ಸಿ.೧೧ ದಾವಣಗೆರೆ ನಂ ೨೯

೩. ಬಿ. ರಾಜಶೇಖರಪ್ಪ, ೨೦೦೨, ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಸಂ: ರಾಜರಾಂ ಹೆಗಡೆ, ಚಿತ್ರದುರ್ಗ ಪ್ರದೇಶದ ಕೆರೆಗಳು : ನಿರ್ವಹಣೆಯ ಐತಿಹಾಸಿಕ ಅವಲೋಕನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೧೫

೪. ಮೇಲಿನಂತೆ ಅದೇ, ಪುಟ ೪೪

೫. ಮಂಜುನಾಥ ಡಿ, ಹರಿಹರ ದೇವಾಲಯ ಧಾರ್ಮಿಕ ಆಚರಣೆಗಳು, ಎಂಫಿಲ್ ಪ್ರಬಂಧ, ಕುವೆಂಪು ವಿಶ್ವವಿದ್ಯಾಲಯ, ೨೦೦೨

೬. ಸಿ.ಟಿ.ಎಂ.ಕೊಟ್ರಯ್ಯ, ೨೦೦೧, ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೫೧

೭. ಜಗದೀಶ ಅಗಸಿ ಬಾಗಲವರ, ೨೦೦೨, ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಸಂ: ರಾಜಾರಾಂ ಹೆಗಡೆ, ಕೆರೆಗಳ ನಿರ್ಮಾಣ ತಾಂತ್ರಿಕತೆ ಮತ್ತು ಮಿತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೨೦

೮. ಇ.ಸಿ.೧೧ ದಾವಣಗೆರೆ ನಂ.೭೪

❖ ❖

೧೦

ಶಿವಮೊಗ್ಗ ಜಿಲ್ಲೆ ಹೆಗಡೆಗೆರೆಯಲ್ಲೊಂದು ವಿಜಯನಗರ ಕಾಲದ ಅಪ್ರಕಟಿತ ಶಾಸನ

ಜಯದೇವಪ್ಪ ಜೈನಕೇರಿ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು, ಕೋಣಂದೂರಿನಿಂದ ಆಗ್ನೇಯ ದಿಕ್ಕಿನಲ್ಲಿ ಸುಮಾರು ೩ ಕಿ.ಮೀ. ದೂರದ ತ್ಯಾನಂದೂರು ಗ್ರಾಮಕ್ಕೆ ಸೇರಿದ ಹೆಗಡೆಗೆರೆ ಮಜರೆ ಒಂದು ಪುಟ್ಟ ಹಳ್ಳಿ. ಈ ಗ್ರಾಮದ ಶ್ರೀ ಮಂಜುನಾಥ ಗೌಡರಿಗೆ ಸೇರಿದ ಸರ್ವೆ ನಂ.೧೭೮ ಅಡಿಕೆ ತೋಟದ ಮೊರಡಿಯಲ್ಲಿ ೧೫ನೇ ಶತಮಾನದ ಆರಂಭದ ಎರಡನೇ ದಶಕಕ್ಕೆ ಸೇರಿದ ವಿಜಯನಗರ ಕಾಲದ ಅಪ್ರಕಟಿತ ಶಾಸನವೊಂದು ನಮ್ಮ ಇತ್ತೀಚಿನ ಕ್ಷೇತ್ರಕಾರ್ಯದಲ್ಲಿ ದೊರಕಿದೆ.


ಸುಮಾರು ೧೫೦ ಸೆಂ.ಮೀ. (೫ ಅಡಿ ಎತ್ತರ) ೭೫ ಸೆಂ.ಮೀ. (೨ವರೆ ಅಡಿ ಅಗಲ) ಇರುವ ಒರಟು ಕಣ ಶಿಲೆಯ ಈ ಶಾಸನದಲ್ಲಿ ೩೦ ಸಾಲುಗಳಿವೆ. ಇದೊಂದು ದಾನ ಶಾಸನವಾಗಿದೆ. ಪ್ರಾರಂಭದಲ್ಲಿ ಶಿವಸ್ತುತಿಯ ಮೊದಲ ಸಾಲು ನಾಗರಿ ಲಿಪಿಯಿಂದ ಆರಂಭವಾಗಿದೆ. ನಂತರ ಕನ್ನಡ ಲಿಪಿಯಲ್ಲಿ ಮುಂದುವರೆದಿದೆ.

ಸ್ವಸ್ತಿ ಜಯಾಭ್ಯುದ (ಯ) ಗತ ವರುಷ ೧೩೪೧ನೇ ವಿಳಂಬಿ ಸಂವತ್ಸರದ ವಯಿಶಾಖ ಶುದ್ಧ ಶು ೨ ಅಂದರೆ ಕ್ರಿ.ಶ. ೧೪೧೯ಕ್ಕೆ ಈ ದಾನ ಶಾಸನ ಸಂಬಂಧಿಸಿದೆ. ವಿಜಯನಗರ ಅರಸು ೧ನೇ ದೇವರಾಯನ ಕಾಲ ಕ್ರಿ.ಶ. ೧೪೦೬ ೧೪೨೨ದಲ್ಲಿ ಶ್ರೀ ಮತು ಗುಂಡರಸರ ಮಕ್ಕಳು ಮಲ್ಲಪ್ಪಗಳು .... ಬಸಪ್ಪ .... ಮಕ್ಕಳು ಬರ (ಮ)ಂಣ ಹೆಗಡೆಗೆರೆಯ .... ಮೊರಡಿ .... ಉಂಬಳಿ ಕೊಟ್ಟ .... ಶ್ರೀ ಕಲಿನಾಥ ದೇವರೂ:: ಶ್ರೀ ಮಲ್ಲಿಕಾರ್ಜುನ ದೇವರು:

ಮುಂತಾದ ವಿವರಗಳಿಂದ ಇದೊಂದು ದಾನ ಶಾಸನವೆಂಬ ನಿರ್ಣಯಕ್ಕೆ ಬರಬಹುದಾಗಿದೆ. ವಿಜಯನಗರ ಅರಸರ ಕಾಲದ ಪ್ರಮುಖ ಆಡಳಿತ ಕೇಂದ್ರವಾಗಿದ್ದ ಆರಗವೇಂತೆಯಲ್ಲಿರುವ, ಕಲಿನಾಥ ದೇವಾಲಯ ಹೆಗಡೆಗೆರೆಯಿಂದ ೭-೮ ಕಿ.ಮೀ. ದೂರದಲ್ಲಿದ್ದು, ಅಲ್ಲಿರುವ ಶ್ರೀ ಕಲಿನಾಥ ಮತ್ತು ಶ್ರೀ ಮಲ್ಲಿಕಾರ್ಜುನ ದೇವರ ಸೇವೆಗೆ ದಾನದತ್ತಿ ನೀಡಿದ ದಾನ ಶಾಸನವಾಗಿದೆ.

ಇದುವರೆಗೆ ಪ್ರಕಟವಾಗಿರುವ ವಿಜಯನಗರ ಶಾಸನ ಸಂಪುಟಗಳಲ್ಲಿ ದಾಖಲೆಯಾಗದಿರುವ ಈ ಶಾಸನವು ಒಂದು ಅಪ್ರಕಟಿತ ಶಾಸನವಾಗಿದ್ದು, ವಿಜಯನಗರ ಶಾಸನ ಅಧ್ಯಯನದಲ್ಲಿ ಹೊಸದಾಗಿ ಸೇರ್ಪಡೆಯಾಗಲು ಅರ್ಹವಾಗಿದೆ. ಈ ಶಾಸನದ ಕಾಲಮಾನವು ವಿಜಯನಗರ ಅರಸ ೧ನೇ ದೇವರಾಯನ ಚಾರಿತ್ರಿಕ ಅಂಶಗಳೊಂದಿಗೆ ತಾಳೆ ಆಗುತ್ತಿದೆ.

ಹೆಗಡೆಗೆರೆ ಶಾಸನಶಿಲ್ಪ ಒರಟು ಕಣಶಿಲೆಯಲ್ಲಿ ಕೆತ್ತಲಾಗಿದ್ದು ೩೦ ಸಾಲುಗಳು ಒತ್ತಾಗಿ ಅಡ್ಡಾದಿಡ್ಡಿಯಾಗಿವೆ. ಬಹುಪಾಲು ಅಕ್ಷರಗಳು ಸವೆದುಹೋಗಿದ್ದು ಓದಲು ಕಷ್ಟಕರವಾಗಿದೆ. ಶಾಸನ ಪ್ರತಿಯನ್ನು ಇನ್ನೂ ಹೆಚ್ಚಿನ ಅಧ್ಯಯನಕ್ಕೆ ಒಳಪಡಿಸಿ ಪೂರ್ಣಪಾಠವನ್ನು ದಾಖಲಿಸಬೇಕಾಗಿದೆ.



ಹೆಗ್ಗಡೆಗೆರೆ ಶಾಸನ

ವಿಜಯನಗರ ಕಾಲದ ಅಪ್ರಕಟಿತ ಶಾಸನದ ಪ್ರಥಮ ಮಾಹಿತಿ ನೀಡಿದ ಕವಲೇದುರ್ಗ ಮಹಾಮತ್ತಿನ ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಅವರಿಗೆ, ಅಧ್ಯಯನಕ್ಕೆ ಸಹಕರಿಸಿದ ತೋಟದ ಮಾಲೀಕರಾದ ಶ್ರೀ ಮಂಜುನಾಥಗೌಡ, ಶ್ರೀ ಚಂದ್ರಶೇಖರಪ್ಪ ಗೌಡರಿಗೆ ಶಾಸನ ಪ್ರತಿಯನ್ನು ತೆಗೆದು ಶಾಸನ ಪಾಠ ಓದಲು ಸಹಕರಿಸಿದ ಮಿತ್ರ ಡಾ. ಜಗದೀಶ ಅವರಿಗೆ ಮತ್ತು ದಿ. ೪.೧೧.೨೦೦೩ರಂದು ನಡೆದ ಹಂಪಿ ಉತ್ಸವದ ವಿಚಾರ ಸಂಕಿರಣದಲ್ಲಿ ಈ ಅಪ್ರಕಟಿತ ಶಾಸನವನ್ನು ಮೊದಲಬಾರಿಗೆ ಮಂಡಿಸಲು ಅವಕಾಶ ನೀಡಿದ ಶ್ರೀ ರಾಮಕೃಷ್ಣ, ನಿರ್ದೇಶಕರು, ರಾಜ್ಯ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ಅವರಿಗೆ ಕೃತಜ್ಞತೆಗಳು.

ಶಾಸನಪಾಠ

ತ್ಯಾನಂದೂರು ಗ್ರಾಮ ಹೆಗಡೆಗೆರೆ ಮಜರೆ ಅಪ್ರಕಟಿತ ಶಾಸನ, ವಿಜಯನಗರ ಕಾಲ

ಶಾ.ಶ.೧೩೪೧ ಕ್ರಿ.ಶ.೧೪೧೯ I ನೇ ದೇವರಾಯ (೧೪೦೬-೧೪೨೨) ೩೦ ಸಾಲುಗಳು

ಭಾಷೆ : ನಾಗರಿ ಮತ್ತು ಕನ್ನಡ

೧. ಶ್ರೀ ಗಣಾದಿಪತೆಯೇ ನಮಃ ನಮಸ್ತುಂಗ ಸಿರಚ್ಚುಂಬಿ (ನಾಗರಿ) ಚಂದ್ರ ಚಾಮರವೇ ತ್ರಯಿ
೨. ಲೋಕ್ಯ ನಗರಾರಂಭ ಮೂಲಸ್ಥಂಭಾಯ ಶಂಭವೆ ಸ್ವಸ್ತಿ ಜಯಾಭ್ಯುದ (ಯ)
೩. ಶಕ ವರುಷ ೧೩೪೧ನೆಯ ವಿಳಂಬಿ ಸಂವತ್ಸರದ ವಯಿಶಾಖ (ಬ)೨ ರಲು
೪. ಶ್ರೀ ಮತ್ತು ಗುಂಡರಸರ ಮಕ್ಕಳು ಮಲ್ಲಪ್ಪಗಳು.... ಬಸಪ್ಪ .... ಮ
೫. ಮಕ್ಕಳು ಬರ (ಮ) ಂಣ
೬. .... ಹೆಗಡೆಗೆ (ಜೆ)
೧೧. .... ನಿಉನಮ ಕಲಿನಾಥ
೧೩. .... ಕಲಿನಾಥ ....
೧೪. ರಿಂದ ೨೦ನೇ ಸಾಲು ತೃಟಿತವಾಗಿವೆ
೨೧. ಯಾ ಹೆಗ್ಗಡೆಗೆಜೆಯಲಿ ....
೨೨. .... ಮೊರಡಿ .... ಉಂಬಟೆ ಕೊಟ್ಟು ....
೨೩. ರಿಂದ ೨೯ ರವರೆಗೆ ತೃಟಿತವಾಗಿವೆ
೩೦. .... ಶ್ರೀ ಕಲಿನಾಥ ದೇವರು .... ಶ್ರೀ ಮಲ್ಲಿಕಾರ್ಜುನ ದೇವರು

ಆಕರ : ಗೋಪಾಲ ಬಾ.ರಾ. ವಿಜಯನಗರ ಶಾಸನ ಸಂಪುಟಗಳು, ೧೯೯೯, ರಾಜ್ಯ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ

❖ ❖

೧೧

ಸಂತೆಬೆನ್ನೂರು ಕೊಳ (ಪುಷ್ಕರಣಿ)

ವಿನೋದಾ ಪಾಟೀಲ


ಭೂಮಿಯ ಮೇಲೆ ವಾಸಿಸುವ ಜೀವಿಗಳಿಗೆ ಉಸಿರಾಡಲು ಗಾಳಿ ಎಷ್ಟು ಮುಖ್ಯವೋ ಬದುಕಲು ನೀರು ಅಷ್ಟೇ ಮುಖ್ಯವಾದ ವಸ್ತು. ಪುರಾಣದ ಪ್ರಕಾರ ಭಗೀರಥ ಗಂಗೆಯನ್ನು ಭೂಮಿಗೆ ಕರೆತಂದ. ನಂತರ ಗಂಗೆ ಅನೇಕ ನದಿಗಳಾಗಿ ದೇಶದ ಉದ್ದಗಲಕ್ಕೂ ಹರಿದಳು. ನೈಸರ್ಗಿಕವಾಗಿ ಮಳೆಯಿಂದ ನದಿಗಳಲ್ಲಿ ನೀರು ಸಂಗ್ರಹವಾಗಿ ಜನರ ದೈನಂದಿನ ಅವಶ್ಯಕತೆಗಳನ್ನು ಪೂರೈಸುತ್ತಿವೆಯಾದರೂ ಜನಸಂಖ್ಯೆ ಹೆಚ್ಚಾದಂತೆಲ್ಲ ಈ ನೀರು ಸಾಕಾಗದಾಗಿ ಜನರು ಬಾವಿ, ಕೆರೆ, ಕೊಳಗಳನ್ನು ನೀರು ಸಂಗ್ರಹಣೆಗಾಗಿ ಕಟ್ಟಿಸುವ ಪದ್ಧತಿ ಸಾವಿರಾರು ವರ್ಷಗಳಿಂದ ಪ್ರಾರಂಭವಾಗಿದೆ. ಅನ್ನದಾನ, ವಸ್ತ್ರದಾನದಷ್ಟೇ ಜಲದಾನವೂ ಪುಣ್ಯ ದೊರಕಿಸಿಕೊಡುವ ಮೂಲವೆಂದು ತಿಳಿದು ದೇಶವನ್ನಾಳಿದ ಅರಸರು, ಅಧಿಕಾರಿಗಳು ಮತ್ತು ಸಾಮಾನ್ಯ ಜನರು ಪ್ರಾಚೀನ ಕಾಲದಿಂದಲೂ ಬಾವಿ, ಕೆರೆ, ಕೊಳಗಳನ್ನು ಕಟ್ಟಿಸುವ ಕಾರ್ಯಕೈಗೊಂಡಿದ್ದಾರೆ. ಮೌರ್ಯ ಚಕ್ರವರ್ತಿ ಅಶೋಕನ ಕಾಲದಿಂದ ಪ್ರಾರಂಭವಾದ ಈ ಕಾರ್ಯ ಆಧುನಿಕ ಯುಗದವರೆಗೂ ಮುಂದುವರೆದುಕೊಂಡು ಬಂದುದು ಆಯಾ ಕಾಲದ ಶಾಸನಗಳಿಂದ ತಿಳಿಯುತ್ತದೆ. ಸಾಮಾಜಿಕ, ಆರ್ಥಿಕ, ಧಾರ್ಮಿಕ ಕಾರಣಗಳೂ ಕೊಳ, ಬಾವಿಗಳನ್ನು ಕಟ್ಟಿಸುವುದಕ್ಕೆ ಕಾರಣವಾಗಿವೆ. ಪ್ರವಾಸಿಗರು ವಿಶ್ರಾಂತಿ ಪಡೆಯಲು ರಸ್ತೆ ಬದಿಗಳಲ್ಲಿ ಬಾವಿ, ವಿಶ್ರಾಂತಿ ಗೃಹಗಳನ್ನು ಕಟ್ಟಿಸಿ ತೋಟಗಳನ್ನು ಬೆಳೆಸಿದ ಉದಾಹರಣೆಗಳು ಅನೇಕ ಶಾಸನಗಳಲ್ಲಿ ದೊರೆಯುತ್ತವೆ. ಇದು ಆಳರಸರ ಒಂದು ಸಾಮಾಜಿಕ ಹೊಣೆಯಾಗಿದ್ದೂ ಅಲ್ಲದೆ ಜನರ ಪ್ರೀತಿ ಗಳಿಸುವ ಮಾರ್ಗವೂ ಆಗಿತ್ತು. ತಂದೆ ತಾಯಿಗಳಿಗೆ ಪುಣ್ಯ ದೊರೆಯಲೆಂದು ಮಕ್ಕಳು ಅಥವಾ ಮಕ್ಕಳಿಗೆ ಒಳ್ಳೆಯದಾಗಲೆಂದು ತಂದೆ ತಾಯಿಗಳು ಹೇಗೆ ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದರೋ ಅದೇ ರೀತಿ ಬಾವಿಗಳನ್ನು ಕಟ್ಟಿಸುವ ಪದ್ಧತಿ

ಪ್ರಾರಂಭವಾಯಿತು. ಈ ಎಲ್ಲ ಕಾರಣಗಳಿಂದ ಬಾವಿಗಳನ್ನು ಕಟ್ಟಿಸುವ ಕಾರ್ಯ ಕೇವಲ ವೃತ್ತಾಕಾರದ ಅಥವಾ ಚೌಕಾಕಾರದ ಬಾವಿಗಳ ನಿರ್ಮಾಣಕ್ಕಷ್ಟೇ ಸೀಮಿತವಾಗದೆ ಅವು ಆಕರ್ಷಕವಾಗಿ ಕಾಣಲು ಬಾವಿಗಳನ್ನು ಅಲಂಕಾರಿಕವಾಗಿ ಕಟ್ಟಲು ಪ್ರಾರಂಭಿಸಿದರು. ಅಲ್ಲದೆ ನಮ್ಮ ಸಂಸ್ಕೃತಿಯ ಕುರುಹುಗಳಾದ ರಾಮಾಯಣ, ಮಹಾಭಾರತ, ಪಂಚತಂತ್ರ ಕಥೆಗಳು, ಶಿವ, ವಿಷ್ಣು, ಬ್ರಹ್ಮ, ಗಣೇಶ ಮುಂತಾದ ದೇವತೆಗಳ ಶಿಲ್ಪಗಳನ್ನು ಕೆತ್ತಿ ಸಂಸ್ಕೃತಿ ಸದಾ ಜನರ ಮನಸ್ಸಿನಲ್ಲಿ ಉಳಿಯಲು ಸಹಕರಿಸಿದ್ದಾರೆ. ಇಂತಹ ಸುಂದರವಾದ ವಾಸ್ತುಶೈಲಿಯುಳ್ಳ ಅಲಂಕಾರಿಕ ಬಾವಿಗಳು, ಕೊಳಗಳು ನಮ್ಮ ರಾಜ್ಯದ ಪ್ರತಿ ಹಳ್ಳಿಗಳಲ್ಲಿಯೂ ಇವೆಯೆಂದರೆ ತಪ್ಪಾಗಲಾರದು. ಇಂತಹ ಒಂದು ಸುಂದರವಾದ ಕೊಳ (ಬಾವಿ) ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲೂಕಿನಲ್ಲಿರುವ ಸಂತೆಬೆನ್ನೂರಿನಲ್ಲಿದೆ. ಕ್ರಿ.ಶ. ೧೫೫೮ರಿಂದ ಕ್ರಿ.ಶ. ೧೮೧೪ರವರೆಗೆ ಇಲ್ಲಿ ನಾಯಕರು ಆಳುತ್ತಿದ್ದರು. ಹನುಮಪ್ಪ ನಾಯಕ, ಸರ್ಜಾ ಹನುಮಪ್ಪ ನಾಯಕ, ಎರಡನೆ ಹನುಮಪ್ಪ ನಾಯಕ, ಸೀತಾರಾಮಪ್ಪ, ಸರ್ಜಾ ರಂಗಪ್ಪ ಮುಂತಾದವರು ಇಲ್ಲಿ ಆಳಿದ್ದಾರೆ. ಈ ಕೊಳದಲ್ಲಿರುವ ಕಟ್ಟಡ, ಗೋಪುರಗಳು ಹಿಂದೂ ಸಾರ್ಸನಿಕ್ ವಾಸ್ತು ಶೈಲಿಯಲ್ಲಿದ್ದು, ವಿಜಯನಗರ (ಹಂಪಿ) ದಲ್ಲಿರುವ ಲೋಟಸ್ ಮಹಲ್, ಅಶ್ವಶಾಲೆ, ಝುನಾನಾ ಆವರಣದಲ್ಲಿರುವ ಗೋಪುರ ಮತ್ತು ಕಟ್ಟಡಗಳ ಮಾದರಿಯಲ್ಲಿರುವುದರಿಂದ ಇದನ್ನು ವಿಜಯನಗರ ಅರಸರ ಕಾಲದಲ್ಲಿ ಕಟ್ಟಿರಬಹುದೆಂದು ಊಹಿಸಬಹುದಾಗಿದೆ.

ಈ ಕೊಳ ೧೦೦x೧೦೦ ಅಡಿ ಅಳತೆ ಹೊಂದಿದ್ದು ಗ್ರಾನೈಟ್ ಶಿಲೆಗಳಿಂದ ಕಟ್ಟಿದ್ದಾರೆ. ಪ್ರವೇಶ ಬಾಗಿಲಿನ ಮೇಲ್ಭಾಗ ಮತ್ತು ಗೋಪುರಗಳನ್ನು ಇಟ್ಟಿಗೆ ಮತ್ತು ಸುಣ್ಣದ ಕಲ್ಲುಗಳಿಂದ (Mortar) ಕಟ್ಟಿದ್ದಾರೆ. ಕೊಳದ ಮಧ್ಯದಲ್ಲಿ ಒಂದು ಕಟ್ಟಡವಿದ್ದು ಇದು ಮೂರು ಅಂತಸ್ತುಗಳಲ್ಲಿದೆ. ಅತ್ಯಂತ ಕೆಳಗಿನ ಅಂತಸ್ತು ಸರಳ ಗೋಡೆಗಳನ್ನೊಳಗೊಂಡಿದೆ. ನಾಲ್ಕೂ ಬದಿಗಳಲ್ಲಿ ಕಮಾನುಗಳುಳ್ಳ ಆಳವಾದ ಗೂಡುಗಳಿವೆ. ಪ್ರತಿಯೊಂದು ಗೂಡಿನ ಎಡಭಾಗದಲ್ಲಿ ಮೇಲಿನ ಅಂತಸ್ತಿಗೆ ಹೋಗಲು ಮೆಟ್ಟಿಲುಗಳಿವೆ. ಎರಡನೆ ಅಂತಸ್ತಿನ ಮಧ್ಯದಲ್ಲಿ ಒಂದು ಕೋಣೆಯಿದೆ. ಅದರ ಸುತ್ತಲೂ ಅಂದರೆ ನಾಲ್ಕೂ ಬದಿಗಳಲ್ಲಿ ಮುಂಚಾಚಿಕೊಂಡಿರುವ ಬಾಲ್ಕನಿಗಳಿವೆ. ಈ ಬಾಲ್ಕನಿಗಳಿಗೆ ಕಮಾನುಗಳ ಪ್ರವೇಶಗಳಿವೆ. ಅಲ್ಲದೆ ಈ ಬಾಲ್ಕನಿಗಳಿಗೆ ಪುಷ್ಪ ಬೋದಿಗೆಗಳು ಆಧಾರವಾಗಿವೆ. ಮಧ್ಯದ ಕೋಣೆಯ ಗೋಡೆಗಳು ದೊಡ್ಡ ಮತ್ತು ಆಳವಲ್ಲದ ಗೂಡುಗಳಿಂದ ಅಲಂಕರಿಸಲ್ಪಟ್ಟಿವೆ. ಬಾಲ್ಕನಿಯ ತುದಿಯಲ್ಲಿ ಕಲ್ಲಿನ ಮೆರ್ಲಾನ್ ಅಲಂಕಾರ ಮತ್ತು ಗೋಪುರಗಳಿವೆ. ಮೂರನೆಯ ಅಂತಸ್ತಿನಲ್ಲಿ ಸುತ್ತಲೂ ಸಣ್ಣ ಕಮಾನುಗಳ ಕಟಾಂಜನವಿದೆ (railing). ಇದು ಒಂದು ತೆರೆದ ಮಂಟಪದಂತಿದೆ. ಮೂರನೆಯ ಅಂತಸ್ತಿನ ಮೇಲೆ ಎತ್ತರವಾದ ಗುಮ್ಮಟವಿದೆ. ಕುಳಿತಿರುವ ಸಿಂಹಗಳು ಈ ಗುಮ್ಮಟವನ್ನು ಎತ್ತಿಹಿಡಿದಿವೆ. ಮಧ್ಯದಲ್ಲಿರುವ ಈ ಗುಮ್ಮಟ ಮತ್ತು ಪ್ಯಾರಾಪೆಟ್ ಮಧ್ಯ ಅಗಲವಾದ ಸ್ಥಳವಿದೆ. ಈ ಪ್ಯಾರಾಪೆಟ್‌ನಲ್ಲಿ ಅನೇಕ ಕಮಾನುಗಳಿದ್ದು ಅವುಗಳಲ್ಲಿ ಗಾರೆಯಿಂದ ಮಾಡಿದ ಜ್ಯಾಮಿತಿ (geometric)

ಅಲಂಕಾರಗಳಿವೆ. ಈ ಕಮಾನುಗಳ ಮೇಲೆ ಸಿಂಹ, ಆನೆ, ಗಂಡಭೇರುಂಡ, ಗಿಳಿ ಮತ್ತು ಬಳ್ಳಿಯ ಶಿಲ್ಪಗಳಿವೆ.

ಈಶಾನ್ಯ ಮೂಲೆಯಲ್ಲಿರುವ ತೂಬು ನಾಲ್ಕು ಕಂಬಗಳಿಂದ ಮಾಡಲ್ಪಟ್ಟಿದ್ದು ಮೇಲೆ ಇಟ್ಟಿಗೆಯಿಂದ ಕಟ್ಟಿದ ಗೋಪುರವಿದೆ. ದಕ್ಷಿಣ ಬದಿಯಲ್ಲಿರುವ ಪ್ರವೇಶದ್ವಾರವು ಎತ್ತರದ ಮಟ್ಟದಲ್ಲಿದೆ. ಇದು ನೀರಿನಲ್ಲಿ ಮುಂದೆ ಚಾಚಿಕೊಂಡಿದ್ದು ಜಗಲಿಯಂತಿದೆ. ಈ ಜಗಲಿಯನ್ನು ನಾಲ್ಕು ಕಂಬಗಳ ಮೇಲೆ ನಿಂತಿರುವ ಕೆಳಗಿನ ಅಂತಸ್ತು ಎತ್ತಿಹಿಡಿದಿದೆ. ಕೆಳಗಿನ ಅಂತಸ್ತು ಕಪೋತದೊಂದಿಗೆ ಕೊನೆಗೊಂಡಿದ್ದು ಇದು ಕೂಡುಗಳಿಂದ ಅಲಂಕೃತಗೊಂಡಿದೆ. ಈ ಕೂಡುಗಳ ಮೇಲೆ ಕೀರ್ತಿಮುಖಗಳಿವೆ. ಮೇಲಿನ ಅಂತಸ್ತಿನ ಅತ್ಯಂತ ಕೆಳಗಿನ ಹಂತವು ಪದ್ಮವಾಗಿದೆ. ಈ ಹಂತದಲ್ಲಿ ಉತ್ತರದ ಬದಿಯಲ್ಲಿ ಒಂದು ಕಾಲುವೆಯಿದೆ. ಈ ಕೊಳದ ದಕ್ಷಿಣದ ಬದಿಯಲ್ಲಿರುವ ಇನ್ನೊಂದು ಕೊಳದಿಂದ ನೀರು ಈ ಕಾಲುವೆಯ ಮೂಲಕ ಈ ಕೊಳಕ್ಕೆ ಬರುತ್ತದೆ. ಮೇಲಿರುವ ಜಗಲಿಯನ್ನು ೬ ಕಂಬಗಳಿಂದ ಕಟ್ಟಿದ್ದಾರೆ. ಇವು ೧೨-೧೩ನೇ ಶತಮಾನದವುಗಳಾಗಿದ್ದು ಅವುಗಳಲ್ಲಿ ಎರಡು ಕಂಬಗಳು ವೃತ್ತಾಕಾರದಲ್ಲಿದ್ದರೆ ಉಳಿದ ನಾಲ್ಕು ಕಂಬಗಳು ಷಡ್ಭುಜಾಕೃತಿಯಲ್ಲಿವೆ. ಕೆಲವು ಕಂಬಗಳ ಕೆಳಗಿನ ಚೌಕಾಕಾರದ ದಿಂಡಿನ ಮೇಲೆ ಅಂಜಲಿ ಮುದ್ರೆಯಲ್ಲಿ ನಿಂತಿರುವ ಮನುಷ್ಯ, ನೃತ್ಯ ಮಾಡುತ್ತಿರುವ ಬಾಲಕೃಷ್ಣ, ಉಮಾಮಹೇಶ್ವರ, ನಂದಿ, ಪಕ್ಷಿ ಮುಂತಾದ ಶಿಲ್ಪಗಳಿವೆ. ಜಗಲಿಯ ಪ್ಯಾರಾಪೆಟ್ ಎತ್ತರವಾಗಿದ್ದು ಸಾಲಾಗಿ ಕಮಾನುಗಳಿವೆ.



ಸಂತೆಬೆನ್ನೂರಿನ ಕೊಳ

ಕೃಪೆ : ಸುಮತೀಂದ್ರ ನಾಡಿಗ

ಕೊಳದ ಪ್ರವೇಶ ಮತ್ತು ಮೂಲೆಗಳಲ್ಲಿರುವ ಮಂಟಪಗಳನ್ನು ಕಟ್ಟಲು ಉಪಯೋಗಿಸಿರುವ ಕಂಬಗಳು ಚೌಕಾಕಾರದಲ್ಲಿದ್ದು ಮೂರು ಚೌಕಾಕಾರದ ದಿಮ್ಮಿಗಳನ್ನು ಮತ್ತು ಇವುಗಳನ್ನು ಜೋಡಿಸಲು ೧೬ ಮುಖಗಳ ಅಡ್ಡಪಟ್ಟಿಗಳನ್ನು ಹೊಂದಿವೆ. ಚೌಕಾಕಾರದ ದಿಮ್ಮಿಗಳ ಮೇಲೆ ದೇವತೆಗಳ, ಪಕ್ಷಿ, ಬಳ್ಳಿ, ಮಕರ, ಸಿಂಹ, ಆನೆ, ಪೂರ್ಣಕುಂಬ, ಕೋತಿಗಳ ಶಿಲ್ಪಗಳಿವೆ.

ಪೂರ್ವಕ್ಕಿರುವ ಪ್ರವೇಶ ಮಂಟಪದ ಕಂಬಗಳು ಐರಾವತರ ಮೇಲೆ ಕುಳಿತಿರುವ ಇಂದ್ರ, ಶ್ರೀರಾಮ, ಆಂಜನೇಯ, ಕುದುರೆ ಸವಾರರು, ಸೂರ್ಯ ಮುಂತಾದ ಶಿಲ್ಪಗಳಿಂದ ಅಲಂಕೃತವಾಗಿವೆ.

ದಕ್ಷಿಣಕ್ಕಿರುವ ಪ್ರವೇಶ ಮಂಟಪದ ಕಂಬಗಳು ಕೋಣನ ಮೇಲಿರುವ ಯಮ, ಆರತಿ ಮತ್ತು ಘಂಟೆ ಹಿಡಿದಿರುವ ಮೃಗಪುರುಷ, ಗರುಡ, ಆಂಜನೇಯ ಮುಂತಾದ ಶಿಲ್ಪಗಳಿಂದ ಅಲಂಕೃತವಾಗಿವೆ.

ಪಶ್ಚಿಮಕ್ಕಿರುವ ಮಂಟಪದಲ್ಲಿ ನಾಲ್ಕು ಕಂಬಗಳು ಮಾತ್ರ ಇದ್ದು ಮೇಲೆ ಗೋಪುರವಿಲ್ಲ. ಕಂಬಗಳ ಮೇಲೆ ಶಿಲ್ಪಗಳ ಅಲಂಕಾರವಿಲ್ಲ.

ವಾಯುವ್ಯ ಮೂಲೆಯಲ್ಲಿರುವ ಮಂಟಪವು ಅಧಿಷ್ಠಾನವನ್ನೊಳಗೊಂಡಿದೆ. ಇದು ಕೆಳಗೆ ಮಡಚಿದ (ಬಾಗಿದ, moulded) ಕಂಠವನ್ನು ಹೊಂದಿದೆ. ಕಂಬಗಳ ಮೇಲೆ ಜಿಂಕೆಯ ಮೇಲೆ ಕುಳಿತಿರುವ ನಿರುತಿ, ಆಂಜನೇಯ ಶಿಲ್ಪಗಳಿವೆ. ಮೇಲೆ ಗುಮ್ಮಟವಿದೆ.

ಉತ್ತರಕ್ಕಿರುವ ಮಂಟಪದ ಕಂಬಗಳ ಮೇಲೆ ಖಡ್ಗ ಮತ್ತು ಗುರಾಣಿ ಹಿಡಿದಿರುವ ದಿಕ್ಪಾಲಕ, ಗಣೇಶ, ವಿಷ್ಣು, ಆಂಜನೇಯ ನಂದಿಯ ಶಿಲ್ಪಗಳಿವೆ. ಮಂಟಪದ ಮೇಲೆ ಮಧ್ಯದಲ್ಲಿ ಗುಮ್ಮಟ ಮತ್ತು ಸುತ್ತಲೂ ಎತ್ತರವಾದ ಕಮಾನುಗಳುಳ್ಳ ಪ್ಯಾರಾಪೆಟ್ ಇದೆ. ಎತ್ತರವಾದ ಕಮಾನುಗಳ ಮಧ್ಯದಲ್ಲಿ ಚಿಕ್ಕ ಕಮಾನುಗಳಿವೆ.

ಈಶಾನ್ಯ ಮೂಲೆಯಲ್ಲಿರುವ ಮಂಟಪದ ಕಂಬಗಳು ನಂದಿಯ ಮೇಲೆ ಕುಳಿತಿರುವ ದಿಕ್ಪಾಲಕ, ಆಂಜನೇಯ, ಅಂಜಲಿ ಮುದ್ರೆಯಲ್ಲಿ ನಿಂತಿರುವ ಮನುಷ್ಯರ, ಅಲಂಕಾರಗಳನ್ನೊಳಗೊಂಡಿವೆ. ಮೇಲೆ ಗೋಪುರವಿಲ್ಲ.

ಕೊಳದ ಪಶ್ಚಿಮಕ್ಕೆ ಮುಸ್ಲಿಂ ಶೈಲಿಯಲ್ಲಿರುವ ಪ್ರವಾಸಿಮಂದಿರವಿದೆ. ಇದು ಆಯತಾಕಾರದಲ್ಲಿದ್ದು ಮುಂದೆ ಎರಡು ಗೋಪುರಗಳಿವೆ. ಪೂರ್ತಿ ಕಟ್ಟಡವನ್ನು ಕಲ್ಲಿನಿಂದ ಕಟ್ಟಿದ್ದಾರೆ.

ಟಿಪ್ಪಣಿ

೧. ಎಂ.ಎ.ಆರ್ ೧೯೩೭

೨. ಡಾ. ಚನ್ನಬಸಪ್ಪ ಎಸ್. ಪಾಟೀಲರ ಕ್ಷೇತ್ರಕಾರ್ಯದ ಆಧಾರ

❖ ❖

೧೨

ಹಂಪಿಯ ಸ್ಮಾರಕಗಳಲ್ಲಿ ಜನಪದ ಸಂಗೀತ ಪರಿಕರಗಳು

ಡಾ. ಸ.ಚಿ.ರಮೇಶ್

ಇತಿಹಾಸ ಪ್ರಸಿದ್ಧ ಹಂಪಿಯು ಹಲವು ಕಾರಣಗಳಿಂದಾಗಿ ಸಾಕಷ್ಟು ಜನಪ್ರಿಯತೆಯನ್ನು ಹೊಂದಿದೆ. ಚರಿತ್ರಾಕಾರರು, ಪುರಾತತ್ವ ಶಾಸ್ತ್ರಜ್ಞರು, ಮಾನವ ಶಾಸ್ತ್ರಜ್ಞರು ಅವರವರ ವಿಷಯದ ಹಿನ್ನೆಲೆಯಲ್ಲಿ ಸಂಶೋಧನೆ ನಡೆಸಿ, ವ್ಯಾಖ್ಯಾನಿಸಿದ್ದಾರೆ. ಈಗಲೂ ಸಂಶೋಧನೆಗೆ ತೊಡಗಿದ್ದಾರೆ. ಜಾನಪದ ತಜ್ಞರು ಹಂಪಿ ಪರಿಸರದ ಮೌಖಿಕ ಮಾಹಿತಿಯನ್ನು ಸಂಗ್ರಹಿಸಿ, ಲಿಖಿತ ಇತಿಹಾಸ ದಾಖಲಿಸದ ಅನೇಕ ವಿಚಾರಗಳತ್ತ ಬೆಳಕು ಚೆಲ್ಲಿದ್ದಾರೆ. ಮೌಖಿಕ ಚರಿತ್ರೆಯನ್ನು ಬಳಸಿಕೊಳ್ಳದೇ ರಚಿಸುವ ಚರಿತ್ರೆ ಅಪೂರ್ಣವಾದುದು ಎನ್ನುವುದನ್ನು ಚರಿತ್ರೆಕಾರರೇ ಒಪ್ಪುತ್ತಾರೆ. ಹಲವು ಸಾರಿ ಮೌಖಿಕ ಮಾಹಿತಿಗಳು ಸತ್ಯದ ಪ್ರತಿಬಿಂಬಗಳಾಗಿರುತ್ತವೆ. ಕಾಲಕಾಲಕ್ಕೆ ನಡೆಯುವ ಎಲ್ಲ ವಸ್ತು, ವಿಚಾರಗಳ ಸುತ್ತ ಜನಪದರು ತಮ್ಮದೇ ಆದ ಜ್ಞಾನವನ್ನು ಹೊಂದಿರುತ್ತಾರೆ. ಪ್ರಸ್ತುತ ಲೇಖನದಲ್ಲಿ ಹಂಪಿಯ ಪರಿಸರದಲ್ಲಿರುವ ಗುಡಿ ಗೋಪುರಗಳಲ್ಲಿ ಕೆತ್ತಲಾದ ಜನಪದ ಸಂಗೀತ ಪರಿಕರಗಳ ಬಗೆಗೆ ಜನಪದರು ಹೊಂದಿರುವ ಲೋಕ ದೃಷ್ಟಿಯನ್ನು ಚರ್ಚಿಸಲಾಗಿದೆ.

ಜನಪದರು ನೇರವಾಗಿ ಇಲ್ಲವೇ ಪರೋಕ್ಷವಾಗಿ ಲೋಕದ ಸಮಸ್ತದ ಬಗೆಗೆ ಹೊಂದಿರುವ ದರ್ಶನವೇ ಲೋಕದೃಷ್ಟಿ ಎಂದು ಕರೆಯಲಾಗಿದೆ. ಇದು ಜನವರ್ಗದಿಂದ ಜನವರ್ಗಕ್ಕೆ, ಸಂಸ್ಕೃತಿಯಿಂದ ಸಂಸ್ಕೃತಿಗೆ ಭಿನ್ನ ಸ್ವರೂಪವನ್ನು ಹೊಂದುತ್ತದೆ. ಲೋಕದೃಷ್ಟಿ ಯಾವಾಗಲೂ ಆಯಾಯಾ ಸಮುದಾಯಕ್ಕೆ ಪರಮಶ್ರೇಷ್ಠವೆನಿಸಿದರೆ, ಹೊರಗಿನವರಿಗೆ ಅವೈಜ್ಞಾನಿಕವಾಗಿ ತೋರುತ್ತದೆ. ಹಾಗೆ ಸರ್ವಸಮ್ಮತವಾದ ಲೋಕದೃಷ್ಟಿಯು ಇರಲು

ಸಾಧ್ಯ. ಇದಕ್ಕೆ ಆಯಾಯಾ ಪರಿಸರ ಕಾರಣವಾಗುತ್ತದೆ. ಹಂಪಿಯ ಸ್ಮಾರಕಗಳಲ್ಲಿ ಜನಪದ ವಾದ್ಯಗಳು ಸ್ಥಾನಪಡೆದಿವೆ. ಇಲ್ಲಿ ಕಂಡುಬರುವ ವಾದ್ಯಗಳನ್ನು ಈ ರೀತಿ ವಿಂಗಡಿಸಿಕೊಳ್ಳಬಹುದು. ಚರ್ಮವಾದ್ಯಗಳು, ತಂತಿವಾದ್ಯಗಳು, ಲೋಹವಾದ್ಯಗಳು ಮತ್ತು ಗಾಳಿವಾದ್ಯಗಳು. ಇವುಗಳ ಬಗೆಗೆ ಜನಪದರಲ್ಲಿ ತಮ್ಮದೇ ಆದ ಲೋಕದೃಷ್ಟಿಯಿದೆ. ಈ ಹಿನ್ನೆಲೆಯಲ್ಲಿ ಹಂಪಿಯ ಸ್ಮಾರಕಗಳಲ್ಲಿ ಕಂಡುಬರುವ ವೈವಿಧ್ಯಮಯ ವಾದ್ಯ ಪರಿಕರಗಳು ಹೊಸ ಅಂಶಗಳತ್ತ ಬೆಳಕು ಚೆಲ್ಲುತ್ತವೆ.

ದೇವಾಲಯಗಳಲ್ಲಿ ಈ ಬಗೆಯ ಸಂಗೀತ ಪರಿಕರಗಳನ್ನು ನುಡಿಸುವ ಭಂಗಿಯಲ್ಲಿರುವ ಶಿಲ್ಪಗಳು ಏಕೆ ಕಂಡುಬರುತ್ತವೆ. ಇದರ ಉದ್ದೇಶವೇನು? ಈ ಬಗೆಗೆ ತಿಳಿಯಲು ಜನಪದ ರಲ್ಲಿರುವ ಕಾಲಬದ್ಧತೆ ಹಾಗೂ ಸ್ಥಳಬದ್ಧತೆಯನ್ನು ಗಮನಿಸಬಹುದು. ಪ್ರತಿಸಂಸ್ಕೃತಿಯಲ್ಲಿ ಕಾಲಬದ್ಧತೆ ಹಾಗೂ ಸ್ಥಳಬದ್ಧತೆಯೂ ಇರುತ್ತದೆ. ಒಂದು ಸಂಸ್ಕೃತಿಗೆ ಪವಿತ್ರವಾದ ಸ್ಥಳ, ವಸ್ತು ಮತ್ತು ಕಾಲಗಳು ಇನ್ನೊಂದು ಸಂಸ್ಕೃತಿಗೆ ಪವಿತ್ರವಾಗಿರುವುದಿಲ್ಲ. ಸ್ಮಶಾನದಂತಹ ಸ್ಥಳಗಳಲ್ಲಿ ಕ್ರಿಶ್ಚಿಯನ್‌ರು ಉದ್ಯಾನಗಳನ್ನು ಬೆಳೆಸುತ್ತಾರೆ. ಮುಸ್ಲಿಂರು ತಾಜಮಹಲಿನಂತಹ ಸುಂದರ ಸ್ಮಾರಕಗಳನ್ನು ಕಟ್ಟಿ ಗೌರವಿಸುತ್ತಾರೆ. ಆದರೆ ಹಿಂದೂಗಳು ಆ ಸ್ಥಳದ ಕಡೆ ತಿರುಗುವುದಿರಲಿ ತಲೆ ಹಾಕಿ ಮಲಗುವುದಿಲ್ಲ. ಕಾರಣ ಅವರಿಗಿರುವ ಭೂತ ಪಿಶಾಚಿಗಳ ನಂಬಿಕೆ, ಭಯ ಮತ್ತು ಅವು ವಾಸಮಾಡುವ ನೆಲೆ ಸ್ಮಶಾನವೆಂದು ಭಾವಿಸಲಾಗಿದೆ.

ಕಾಲ ಮತ್ತು ಸ್ಥಳಗಳು ವ್ಯಕ್ತಿ ಅಥವಾ ಸಮುದಾಯಗಳ ಆಶೋತ್ತರಗಳಿಗೆ ಅನುಗುಣ ವಾಗಿಯೇ ಇರುತ್ತವೆ. ಸಮುದಾಯದ ಆಶೋತ್ತರಗಳು ಕೂಡ ಕಾಲ ಮತ್ತು ಸ್ಥಳಗಳಿಂದ ಪ್ರೇರಣೆ ಪಡೆದಿರುತ್ತವೆ. ಉದಾ : ಜುಟ್ಟು, ಗಡ್ಡಗಳು ಒಂದು ಸಂಸ್ಕೃತಿಯನ್ನು, ಒಂದು ನಿರ್ದಿಷ್ಟ ಸ್ಥಳ ಕಾಲಗಳ ನೆಲೆಗಳಲ್ಲಿ ಪ್ರತಿನಿಧಿಸುತ್ತವೆ. ಹಾಗೆಯೇ ವ್ಯಕ್ತಿಯು ಧರಿಸುವ ಉಡುಗೆ, ಆಭರಣ ಹಾಗೂ ಸಂಗೀತ ಪರಿಕರಗಳು ಆಯಾಯಾ ಸಂಸ್ಕೃತಿಯ ಮೂರ್ತರೂಪಗಳಾಗುತ್ತವೆ. ಕಾಲ, ಸ್ಥಳ ಮತ್ತು ವ್ಯಕ್ತಿಗೆ ಅಥವಾ ಸಮುದಾಯಕ್ಕೆ ಸಂಬಂಧಿಸಿದಂತೆ ಸಂಸ್ಕೃತಿ ಒಳಗೊಂಡಿರುತ್ತದೆ.

ಜನಪದ ಜೀವನ, ಪುರಾಣ ಚರಿತ್ರೆಯನ್ನು ಶಿಲ್ಪಗಳು ಹೇಳುತ್ತವೆ. ಆದರೆ ಅಕ್ಷರ ಜ್ಞಾನ ಇಂಥಹ ಸಾಮಗ್ರಿಗಳನ್ನು ಮರೆಮಾಚುತ್ತದೆ. ಇದನ್ನು ಚರಿತ್ರೆಯ ಪುಟಪುಟಗಳು ಪ್ರತಿಬಿಂಬಿಸಿವೆ. ಆಳುವ ವರ್ಗದ ರಾಜಕೀಯ ಧೋರಣೆಗೆ ಅಕ್ಷರಜ್ಞಾನ ಶರಣಾಗಿದೆ. ಈ ಹಿನ್ನೆಲೆಯಲ್ಲಿ ಚರಿತ್ರೆ, ಪುರಾಣ ರಚಿಸಲಾಗಿದೆ. ಇದು ಜನಪದ ಸಂಸ್ಕೃತಿಯನ್ನು ನಿರಾಕರಿಸಿದೆ. ಜನಪದ ಜೀವನದ ಚರಿತ್ರೆಯನ್ನು ಶಿಲ್ಪಗಳಲ್ಲಿ ಕಂಡುಕೊಳ್ಳಬಹುದು. ಚರಿತ್ರೆ, ಪುರಾಣ, ಮತಾಚರಣೆಗಳ ಬಗೆಗೆ ಜನಪದರು ಹೊಂದಿರುವ ಧೋರಣೆಗಳನ್ನು, ಆ ಬಗೆಗಿನ ಅವರ ಮನಸ್ಸನ್ನು ಶಿಲ್ಪಗಳಿಂದ ಅರ್ಥೈಸಬಹುದಾಗಿದೆ.

ಅವ್ಯವಸ್ಥಿತ ಪರಿಸರವನ್ನು ವ್ಯವಸ್ಥಿತ ಪರಿಸರವನ್ನಾಗಿ ಮಾಡಲು ಜನಪದ ವಾದ್ಯ ಪರಿಕರಗಳು ಸಹಕಾರಿಯಾಗಿವೆ. ಕನ್ನಡ ಜಾನಪದದ ಲೋಕದೃಷ್ಟಿಯು ಪ್ರಕೃತಿಯನ್ನು ಮೂಲತಃ ಒಂದು ಅವ್ಯವಸ್ಥಿತವಾದ ವ್ಯವಸ್ಥೆ ಎಂದು ಭಾವಿಸುತ್ತದೆ. ಹೀಗಾಗಿ ಅನೇಕ ಆಚರಣೆಗಳಲ್ಲಿ ಅವ್ಯವಸ್ಥಿತ ಪ್ರಕೃತಿಯನ್ನು ಮತ್ತೆ ವ್ಯವಸ್ಥೆಗೆ ಒಳಪಡಿಸುವ ಪ್ರಯತ್ನವನ್ನು ಕಾಣಬಹುದು. ಇಲ್ಲದಿರುವುದನ್ನು ಇರುವ ಹಾಗೆ ಭ್ರಮಿಸಿ, ಪ್ರಕೃತಿಯನ್ನು ವ್ಯವಸ್ಥೆಗೆ ಒಳಪಡಿಸಿಕೊಂಡು ಸಂಭ್ರಮಿಸಲಾಗುತ್ತದೆ. ಈ ಲೆಕ್ಕಾಚಾರ ಸಾವಿನಲ್ಲಿ ತಲೆಕೆಳಗಾಗುತ್ತದೆ. ಹೀಗೆ ಪ್ರಕೃತಿಯನ್ನು ವ್ಯವಸ್ಥೆಗೆ ಒಳಪಡಿಸಲು ಆಗದೇ ಇರುವಾಗ ವಿಷಾದದಿಂದ ದುಃಖಿಸುತ್ತಾರೆ. ಈ ಎರಡು ಸ್ಥಿತಿಗೆ ಜನರನ್ನು ಮಾನಸಿಕವಾಗಿ ಕೇಂದ್ರೀಕರಿಸಿ, ಒಗ್ಗೂಡಿಸುವ ಕೆಲಸವನ್ನು ಸಂಗೀತ ಪರಿಕರಗಳು ಮಾಡುತ್ತವೆ. ಪ್ರಕೃತಿಯನ್ನು ತನಗೆ ಒಗ್ಗಿಸಿಕೊಳ್ಳಲು ಮಾನವ ಮಾಡುವ ಪ್ರಯತ್ನವನ್ನು ಜೀವನಾವರ್ತನ ಮತ್ತು ವಾರ್ಷಿಕಾವರ್ತನದ ಆಚರಣೆಗಳಲ್ಲಿ ಬಳಸುವ ವಾದ್ಯ, ಸಮ್ಮೇಳ, ಡೋಲು ಮುಂತಾದ ಸಂಗೀತದಲ್ಲಿ ಕಾಣಬಹುದು. ಇವು ನಿಯತವಾದ ಶಬ್ದವನ್ನು ಉಂಟುಮಾಡುವುದರ ಮೂಲಕ ಪ್ರಕೃತಿಯ ಮಧ್ಯೆ ಮಾನವನಿಗೆ ಅಗತ್ಯವಾದ ಒಂದು ಬಗೆಯ ಅಮೂರ್ತವಾದ ಮತ್ತು ಅಲೌಕಿಕವಾದ ವಾತಾವರಣವನ್ನು ಉಂಟು ಮಾಡುವುವು. ಹೀಗೆ ಬೇಕಾದ ಪರಿಸರವನ್ನು ನಿರ್ಮಾಣ ಮಾಡುವ ಶಕ್ತಿ ಹೊಂದಿರುವ ಸಂಗೀತ ಸಾಧನಗಳನ್ನು ಅವರು ಸಹಜವಾಗಿ ದೇವಾಲಯಗಳ ಶಿಲ್ಪಗಳಲ್ಲಿ ಕೆತ್ತಿದ್ದಾರೆ.

ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರವನ್ನು ಪ್ರತಿಬಿಂಬಿಸುವ ಶಿಲ್ಪಗಳನ್ನು ಜವಾಬ್ದಾರಿಯುತ ಹಾಗೂ ಮಹತ್ವಪೂರ್ಣ ಸ್ಥಳಗಳಲ್ಲಿ ಕೆತ್ತಲಾಗುತ್ತಿತ್ತು. ದೇವಾಲಯಗಳು ಭಕ್ತಿಯ ಕೇಂದ್ರವಾಗಿರದೆ, ವಿದ್ಯಾಕೇಂದ್ರಗಳಾಗಿ, ಮನರಂಜನೆಯ ಸ್ಥಳಗಳಾಗಿ, ಕುಶಲಕಲೆಗಳ ಕಲಿಕಾ ಕೇಂದ್ರವಾಗಿ, ಸೌಂದರ್ಯೋಪಾಸನೆಯ ತವರೂರಾಗಿ, ಮತಧರ್ಮಗಳ ಕೇಂದ್ರವಾಗಿ, ದೀನದಲಿತರ ಆಶ್ರಯತಾಣಗಳಾಗಿ ಹತ್ತು ಹಲವು ಕಾರ್ಯಕ್ಷೇತ್ರಗಳ ಸಂಗಮ ಸ್ಥಳಗಳಾಗಿದ್ದವು. ಸಾರ್ವಜನಿಕ ಸ್ಥಳಗಳಲ್ಲಿ ಜನರ ನಿಯಂತ್ರಣವು ಬಂದು ಆ ನಿಯಂತ್ರಣವನ್ನು ತನ್ನಿಂದ ತಾನೆ ಆಗುವಂತೆ ಅಲ್ಲಿ ಕೆತ್ತಲಾದ ಶಿಲ್ಪಗಳು ಮಾಡುತ್ತಿದ್ದವು. ಹಲವು ಸಂಸ್ಕೃತಿಗಳನ್ನು ಪ್ರತಿನಿಧಿಸುವ ಸಂಗೀತ ಪರಿಕರಗಳನ್ನು ಹಿಡಿದು ನಾನಾ ಬಗೆಯ ನೃತ್ಯ ಭಂಗಿಯ ಶಿಲ್ಪಗಳು ಅಲ್ಲಿವೆ. ಅವು ಅಲ್ಲಿ ಸೇರುವ ಜನವರ್ಗಗಳ ದೈವಗಳಾಗಿರುವುದೇ ನಿಂಯತ್ರಣದ ಗುಟ್ಟಾಗಿದೆ. ಉದಾ : ಡೋಲು, ಕಿನ್ನರಿ, ತಮಟೆ, ನಗಾರಿ, ಡಮರುಗ, ಗಂಟೆ, ತಂಬೂರಿ ಮುಂತಾದವು. ಅವು ಅವರಿಗೆ ದೈವಗಳಿಂದ ಬಂದ ಪರಿಕರಗಳಾಗಿರುತ್ತವೆ. ಕೊರಗರಲ್ಲಿ ಡೊಳ್ಳು ಬಂದಿರುವುದು ಹೀಗೆ. ಶಿವನು ಸಿದ್ಧಗಿರಿಯಲ್ಲಿ ತಪಸ್ಸಿಗೆ ಕುಳಿತಾಗ ಚಾರವಾದಕನೆಂಬ ದೈತ್ಯನು ಕಾವಲಿಗಿದ್ದನು. ಶಿವನ ಭೇಟಿಗೆ ಬಂದ ಪಾರ್ವತಿ ಮತ್ತು ನಂದಿಯರನ್ನು ಚಾರವಾದಕನು ತಡೆದು ನಿಲ್ಲಿಸಿದನು. ಆಗ ನಂದಿ ಮತ್ತು ಚಾರವಾದಕನ ನಡುವೆ ಯುದ್ಧ ನಡೆಯಿತು. ಚಾರವಾದಕ ಯುದ್ಧದಲ್ಲಿ ಸೋತು

ತೀರಿಕೊಂಡನು. ಈ ಸುದ್ದಿ ಶಿವನಿಗೆ ತಿಳಿಯಿತು. ಚಾರವಾದಕನ ಭಕ್ತಿ, ನಿಷ್ಠೆಗಳಿಗೆ ಮೆಚ್ಚಿದ ಶಿವನು ಅವನ ಮೃತ ದೇಹದ ಅಸ್ಥಿ, ಚರ್ಮ, ನರಗಳಿಂದ ಡೊಳ್ಳು ತಯಾರಿಸಿ ಅದನ್ನು ಕುರುಬ ಜನಾಂಗಕ್ಕೆ ನೀಡಿದನು. ಹೀಗೆ ಹಲವು ಬಗೆಯ ಕಥೆಗಳು ನಮ್ಮ ಜನಪದ ಸಂಗೀತ ಪರಿಕರಗಳ ಸೃಷ್ಟಿಯ ಬಗೆಗೆ ಹೇಳುತ್ತವೆ. ತಮ್ಮ ಕುಲದೈವಗಳಿಂದ ಬಂದ ಸಂಗೀತ ಪರಿಕರಗಳು ಇರುವ ಸ್ಥಳ ಅವರಿಗೆ ಭಕ್ತಿ ತಾಣಗಳಾಗುತ್ತವೆ. ಈ ಕಾರಣದಿಂದಲೇ ದೇವಾಲಯಗಳಲ್ಲಿ ಜನಪದ ಸಂಗೀತ ಪರಿಕರಗಳನ್ನು ಹಿಡಿದ ನೃತ್ಯ ಶಿಲ್ಪಗಳನ್ನು ಕೆತ್ತಿರಬೇಕು.

ನಿರಕ್ಷರರಿಗೆ ಶ್ರಮವಿಲ್ಲದೆ ಅಲ್ಲಿನ ಸಾಂಸ್ಕೃತಿಕ ಮಹತ್ವವನ್ನು ತಿಳಿಸುತ್ತವೆ. ಅವರ ಕೀಳರಿಮೆಯನ್ನು ಹೋಗಲಾಡಿಸಿ, ಆತ್ಮಸ್ಥೈರ್ಯ ತುಂಬುವ ಕಾರ್ಯವನ್ನು ನಿರ್ವಹಿಸಿವೆ. ನಿಶಬ್ದವನ್ನು ಶಬ್ದ ಅಥವಾ ನಾದವಾಗಿ ಭ್ರಮಿಸಲು ಸಹಾಯಕವಾಗಿವೆ. ಇದರಿಂದ ಇಲ್ಲದ್ದನ್ನು ಇರುವ ಹಾಗೆ ಕಲ್ಪಿಸಿಕೊಂಡು ಪರಿಸರವನ್ನು ವ್ಯವಸ್ಥೆ ಅಥವಾ ಅಣಿಗೊಳಿಸಿಕೊಳ್ಳಲು ಸಹಕಾರಿಯಾಗಿವೆ. ಒಂದು ಪೂರ್ಣ ಪೂಜೆಯಾಗಬೇಕಾದರೆ ಪಂಚವಾದ್ಯ ಮೇಳ ಬೇಕೇಬೇಕು. ಆದರೆ ಪೂಜೆಯ ವೇಳೆಯಲ್ಲಿ ಅದು ಸಾಧ್ಯವಾಗದಿರುವಾಗ ಪೂಜೆ ನಿಲ್ಲಬಾರದಲ್ಲ. ಅದಕ್ಕಾಗಿ ಎಲ್ಲವೂ ಇವೆ ಎಂದು ಭ್ರಮಿಸಿಕೊಳ್ಳಬೇಕು. ಭ್ರಮಿಸಿಕೊಳ್ಳಲು ಒಂದು ಪರಿಸರ ಅಥವಾ ವಸ್ತು ಬೇಕು. ಆ ಕೆಲಸವನ್ನೇ ನೃತ್ಯಭಂಗಿಯ ಶಿಲ್ಪಗಳು ನಿರ್ವಹಿಸುತ್ತವೆ. ಆಗ ಪೂಜೆ ಪೂರ್ಣಗೊಂಡು ಅವರಿಗೆ ನೆಮ್ಮದಿ ಉಂಟಾಗುತ್ತದೆ. ದೇವಾಲಯಗಳಲ್ಲಿ ನಾದ ಏಕೆ ಮಾಡುತ್ತಾರೆ? ಎಂಬ ಪ್ರಶ್ನೆ ಹಾಕಿಕೊಂಡರೆ ಅದು ದೇವರಿಗೆ ಪ್ರಿಯವಾಗಿದೆ ಎಂಬ ಉತ್ತರ ಬಂದುಬಿಡುತ್ತದೆ. ಆದರೆ ಅದು ಹಾಗಲ್ಲ. ಅದರ ಕಾರ್ಯ ಬೇರೆಯದೇ ಆಗಿದೆ. ನಾದವು ಒಂದು ನಿರ್ದಿಷ್ಟ ಪೂಜಾ ವೇಳೆಯನ್ನು ಸಂವಹನಿಸುತ್ತದೆ. ಗುಡಿಗಳು ಸಾರ್ವಜನಿಕ ಸ್ಥಳಗಳಾಗಿರುವುದರಿಂದ ಅಲ್ಲಿ ಹುಳು ಹುಪ್ಪಡಿ, ಹಾವು, ಪ್ರಾಣಿಗಳು ಇರಬಾರದೆಂದು ನಾದ ಮಾಡುತ್ತಾರೆ. ಸುತ್ತಲಿನ ಜನರಿಗೆ ವೇಳೆಯನ್ನು ತಿಳಿಸುವ ವಿಚಾರವನ್ನು ಅಲ್ಲಗಳೆಯುವಂತಿಲ್ಲ. ಆಗಮಶಾಸ್ತ್ರದ ರೀತ್ಯಾ ದೇವಸ್ಥಾನದಲ್ಲಿ ಗಂಟಾ ಸೇವೆ ಅತ್ಯಾವಶ್ಯಕ, ಶುದ್ಧವಾದ ಲೋಹ ಅಥವಾ ಕಂಚಿನಿಂದ ತಯಾರಿಸಿದ ಗಂಟೆಗಳ ನಾದದಲ್ಲಿ ಕಿವಿಗೆ ಕೇಳಲು ಇಂಪಾದ ಮತ್ತು ಮನಕ್ಕೆ ಹಿತವಾದ ಓಂಕಾರನಾದ ಹೊರಹೊಮ್ಮುತ್ತದೆ. ಇದು ಇಡೀ ವಾತಾವರಣದಲ್ಲಿನ ರಾಕ್ಷಸೀ ಶಕ್ತಿಗಳು ದೂರವಾಗಿ, ದೈವಿಕ ಭಾವನೆಗಳು ಜನಿಸುತ್ತವೆ ಎಂದು ನಂಬಲಾಗುತ್ತದೆ. ಗಂಟೆಯ ನಾಲಿಗೆಯಲ್ಲಿ, ಮುಖದಲ್ಲಿ, ಉದರದಲ್ಲಿ ಅನೇಕ ದೇವಾಧಿದೇವತೆಗಳು ನೆಲೆಸಿರುವುದರಿಂದ, ಇದನ್ನು ಬಾರಿಸಿದಾಗ ಸ್ಫುರಿಸುವ ನಾದತತ್ವ ಭಗವಂತನನ್ನು ಸುಪ್ರೀತಗೊಳಿಸುತ್ತದೆ ಎಂಬ ನಂಬಿಕೆಯೂ ಉಂಟು. ಆದ್ದರಿಂದಲೇ ಗಂಟೆಯು ಪೂಜಾರ್ಹವಾಗಿದೆಯಲ್ಲದೇ ಪೂಜೆಯ ಪ್ರತಿಹಂತದಲ್ಲೂ ಯಾವುದೇ ವಿಘ್ನವನ್ನು ನಿವಾರಿಸಿ, ಶುಭಕಾರ್ಯಕ್ಕೆ ನಾಂದಿಹಾಕುತ್ತದೆ.

ದೇವಾಲಯದಲ್ಲಿರುವ ಮಹಾಗಂಟೆಯು ಭಕ್ತರಿಗೆ ಗುಡಿಯಲ್ಲಿ ನಡೆಸುವ ಪೂಜಾವಿಧಿಯ ಬಗೆಗೆ ಸಂವಹನಿಸುತ್ತದೆ. ಪ್ರತಿದಿನ ಗುಡಿಗಳಲ್ಲಿ ಅರ್ಚಕರು ಬೆಳಗಿನಜಾವ

ದೇವರ ಆಗಮನಕ್ಕಾಗಿ ಮತ್ತು ರಾಕ್ಷಸರ ನಿರ್ಗಮನಕ್ಕಾಗಿ ದೇವಾಲಯದ ಲಾಂಛನವಾದ ಘಂಟೆಯನ್ನು ಬಾರಿಸುತ್ತಾರೆ. ಬಾರಿಸುವಾಗ ಈ ಮಂತ್ರ ಪಠಿಸುತ್ತಾರೆ "ಆಗಮಾರ್ಥಂತು ದೇವಾನಾಂ ಗಮನಾರ್ಥಂತು ರಾಕ್ಷಸಾಂ ಕುರ್ವೇಘಂಟಾರವಂ ತತ್ರ ದೇವತಾಹ್ವಾನ ಲಾಂಛನಂ" ದೇವಾಲಯದಲ್ಲಿ ರಾತ್ರಿಯ ಸಮಯದಲ್ಲಿ ಅವಿತಿಟ್ಟುಕೊಳ್ಳುವ ಯಾವುದೇ ಪ್ರಾಣಿ, ಸರ್ಪಗಳು ಅಲ್ಲಿಂದ ದೂರಸರಿಯುತ್ತವೆ. ಹತ್ತು ಕಿ.ಮೀ. ದೂರಕ್ಕೂ ಕೇಳಿಬರುವ ಮಹಾಘಂಟೆಯ ನಾದವು ದೇವರಿಗೆ ನೈವೇದ್ಯವನ್ನು ಅರ್ಪಿಸುವ ಸಮಯದಿಂದ, ಮಹಾಮಂಗಳಾರತಿ ನಡೆಯುವವರೆಗೆ ಎಡಬಿಡದೆ ನಿವಾರಿಸುತ್ತದೆ. ಭಕ್ತಾದಿಗಳು ಪೂಜೆಗೆ ಸರಿಯಾಗಿ ದೇವಸ್ಥಾನಕ್ಕೆ ಬರುವಂತೆ ಆಹ್ವಾನಿಸುವ ವಾಸ್ತವಿಕ ಉದ್ದೇಶವೂ ಇದರಲ್ಲಿ ಅಡಗಿದೆ.

ಕೈಗಂಟೆಯ ಉದರವು ಸಮಯದ ದೈವತ್ವವನ್ನು ಪ್ರತಿನಿಧಿಸುತ್ತದೆ ಎಂದು ನಂಬಲಾಗುತ್ತದೆ. ಅದರ ಹಿಡಿಕಿಯು ಆಂಜನೇಯ, ಗರುಡ, ನಂದಿ ಅಥವಾ ಚಕ್ರದಾಕಾರದಲ್ಲಿನ ಪ್ರಾಣಶಕ್ತಿಯ ಪ್ರತೀಕವಾಗಿರುವುದರಿಂದ, ಇವುಗಳ ಪೈಕಿ ಯಾವುದೇ ಆಕೃತಿಯನ್ನು ಹೊಂದಿಲ್ಲದಂತಹ ಕೈ ಹಿಡಿಕೆ ಇಲ್ಲದ ಗಂಟೆಯು ಅಮಂಗಳಕಾರಕ ಎಂದು ಪರಿಗಣಿಸಿ ನಿಷೇಧಿಸಲಾಗಿದೆ.

ಜನಪದರು ನಿಶಬ್ದದಲ್ಲಿ ಶಬ್ದವನ್ನು ಭ್ರಮಿಸುವುದು ಅವರ ನಾದಪ್ರಿಯತೆಯನ್ನು, ಗೌರವ, ಭಕ್ತಿಯನ್ನು ಸಂಕೇತಿಸುತ್ತದೆ. ಅವರ ಭ್ರಮಾಲೋಕದಲ್ಲಿ ನಾದ ಹೇಗೆ ಬೇಕಾದರೂ ಹಾಗೆ ಹುಟ್ಟಬಲ್ಲದು. 'ನಾಲಿಗೆ ಇಲ್ಲದ ಘಂಟೆ ನುಡಿದಾವೊ', 'ಕಲ್ಲು ಕೋಳಿ ಕೂಗ್ಯಾವೊ' ಇನ್ನು ಮುಂತಾದ ನುಡಿಮುತ್ತುಗಳನ್ನು ಗಮನಿಸಬಹುದು. ನಾಲಿಗೆ ಇಲ್ಲದ ಘಂಟೆ ನುಡಿಯಲು ಸಾಧ್ಯವಿಲ್ಲ. ಆದರೂ ಅವರ ಭ್ರಮಾಲೋಕದಲ್ಲಿ ಅದು ರಿಂಗಣಿಸುತ್ತದೆ. ಹಾಗೆ ಕಲ್ಲುಕೋಳಿ ಕೂಗಲು ಸಾಧ್ಯವಿಲ್ಲ. ಈ ಸಾಧ್ಯ ಎಲ್ಲದನ್ನು ಸಾಧ್ಯಮಾಡಿಕೊಳ್ಳುವುದು ಜನಪರ ಮನೋಧರ್ಮ. ಹೀಗೆ ಆಗು ಮಾಡಲಿಕ್ಕೆ ವಾದ್ಯಗಳು ಸಹಕಾರಿಯಾಗುತ್ತವೆ.

ಜನವರ್ಗಕ್ಕೆ ಸಂಬಂಧಿಸಿದ ಆ ವಾದ್ಯವು ಅವರನ್ನು ಕೆಲವು ನಿರ್ದಿಷ್ಟ ಘಟ್ಟಗಳಲ್ಲಿ ಮಾನಸಿಕವಾಗಿ ಒಂದಾಗುವಂತೆ ಮಾಡುತ್ತದೆ. ಹುಟ್ಟು, ಸಾವು, ಖಾಯಿಲೆ, ಕೃಷಿ ಕೆಲಸವೇ ಮೊದಲಾದ ಜೀವನಾವರ್ತನದ ಮತ್ತು ವಾರ್ಷಿಕಾವರ್ತನದ ಘಟ್ಟಗಳಲ್ಲಿ ಜನರು ಒಂದುಗೂಡಿ ಸಂತೋಷ, ಸಂಭ್ರಮ, ವಿಷಾದಗಳನ್ನು ಹಂಚಿಕೊಳ್ಳಲು ಕಾರಣ ಆಳದಲ್ಲಿ ಅವರೆಲ್ಲ ಆ ವಾದ್ಯದ ಬಗೆಗೆ ಒಂದೇ ವಿಧದ ಲೋಕದೃಷ್ಟಿಗೆ ಬದ್ಧವಾಗಿರುವುದು. ಇಂಥಕಡೆ ಅವರ ಆ ಬಗೆಗಿನ ಲೋಕದೃಷ್ಟಿಯು ಜನರಿಗೆ ಮಾನಸಿಕ ರಕ್ಷಣೆಯನ್ನು ನೀಡುತ್ತದೆ. ಅವು ಕಾಣುವ ಎಲ್ಲ ಸ್ಥಳಗಳಲ್ಲೂ ಅವರು ಭಾವುಕರಾಗುತ್ತಾರೆ. ಇದರಿಂದಾಗಿ ಆ ಪರಿಸರಕ್ಕೆ ಒಂದು ವಿಶೇಷ ಮಹತ್ವ ಬರುತ್ತದೆ.

ಡೊಳ್ಳು, ತಮಟೆ, ಕೊಂಬು ಮುಂತಾದ ಜನಪದ ಸಂಗೀತ ಪರಿಕರಗಳು ದುಃಖ ಹಾಗೂ ಸಂತೋಷ ಎರಡು ಕಡೆ ಬಳಕೆಯಾಗುತ್ತದೆ. ಆದರೆ ಈ ವಾದ್ಯಗಳು ಹೊರಡಿಸುವ ವಿವಿಧ

ಸ್ವರಗಳು (ಲಯಗಳು) ಅಲ್ಲಿನ ಸಂದರ್ಭವನ್ನು ಕೇಳುಗನಿಗೆ ಸಂವಹನಿಸುತ್ತವೆ. ಇದು ಅಶಾಬ್ದಿಕ ಮಾಧ್ಯಮವಾದರೂ, ಅದಕ್ಕೆ ಶಾಬ್ದಿಕ ಮಾಧ್ಯಮವನ್ನು ಮೀರುವ ಪರಿಣಾಮಕಾರಿ ಶಕ್ತಿ ಇರುತ್ತದೆ. ಆಚರಣೆಯಿಂದ ಆಚರಣೆಗೆ ವಾದ್ಯಗಳು ಹೊರಡಿಸುವ ಲಯಗಳು ಬೇರೆ ಬೇರೆಯಾಗಿರುತ್ತವೆ. ಕ್ರಿಯಾತ್ಮಕ ಸಾಂಸ್ಕೃತಿಕ ಪರಿಸರದಲ್ಲಿ ಒಂದು ನಿರ್ದಿಷ್ಟ ಭಾವ ಪ್ರಪಂಚವನ್ನು ಸೃಷ್ಟಿಸುವುದಕ್ಕೆ ಸಹಕಾರಿಯಾಗಿವೆ. ಹಬ್ಬ, ಮದುವೆ ಮುಂತಾದ ಸಂದರ್ಭಗಳಲ್ಲಿ ಅವು ಸಂತೋಷದ ಭಾವವನ್ನು ಸೃಷ್ಟಿಸುತ್ತವೆ. ಆ ವರ್ಗದ ಜನರು ಹಬ್ಬ ಮತ್ತು ಮದುವೆಗಳಲ್ಲಿ ಆ ವಾದನದ ನಾದಕ್ಕೆ ಪ್ರತಿಕ್ರಿಯಿಸುತ್ತಾರೆ. ಸಾವಿನಲ್ಲಾದರೆ ದುಃಖಿಸುತ್ತಾರೆ. ಸಾವಿನಲ್ಲಿ ವಾದನವು ಹೊರಡಿಸುವ ನಾದಲಯವು ಶೋಕದ ಭಾವವನ್ನು ಸೃಷ್ಟಿಸುವುದಷ್ಟೇ ಅಲ್ಲ ಅದನ್ನು ಉದ್ದೀಪನಗೊಳಿಸುವ ಶಕ್ತಿಯನ್ನು ಹೊಂದಿರುತ್ತದೆ.

ಶಿಲ್ಪಗಳಲ್ಲಿನ ಜನಪದ ವಾದ್ಯಗಳು ದೇಶಿ ಮತ್ತು ಮಾರ್ಗಗಳ ಕೊಡುಕೊಳ್ಳುವಿಕೆಯನ್ನು ಸಂಕೇತಿಸುತ್ತವೆ. ಸರಳ ರಚನೆಗಳಾಗಿ ಉಗಮಗೊಂಡ ಜನಪದ ವಾದ್ಯಗಳು ನಾಗರಿಕತೆ ವಿಕಾಸಗೊಂಡಂತೆ ತಾವೂ ವಿಕಾಸಗೊಳ್ಳುತ್ತಾ ಸಂಕೀರ್ಣ ರಚನೆಗಳಾದವು. ಜನಪದ ಸಂಗೀತ ಪರಿಷ್ಕರಣಗೊಂಡು ಶಾಸ್ತ್ರೀಯ ಸಂಗೀತವಾದಾಗ, ಅದರೊಂದಿಗೆ ಕೆಲವು ಜನಪದ ವಾದ್ಯಗಳಾದರೆ, ಕೆಲವು ಶಾಸ್ತ್ರೀಯ ವಾದ್ಯಗಳಾದವು. ಹೀಗೆ ಜನಪದ ಮೂಲದಿಂದಲೇ ಶಾಸ್ತ್ರೀಯತೆಯ ಮಟ್ಟಕ್ಕೇರಿದ ಕೆಲವು ಮಾರ್ಗಶೈಲಿಯ ವಾದ್ಯಗಳು ಹಿಂತಿರುಗಿ ಜನಪದ ವಾದ್ಯಗಳ ಮೇಲೆ ಪ್ರಭಾವ ಬೀರಿದವು. ಇದು ವಾದ್ಯಗಳ ಜೀವಂತಿಕೆಯನ್ನು ಸೂಚಿಸುತ್ತದೆ.

ಜನಪದ ವಾದ್ಯಗಳು ಜನಪದರ ಬದುಕಿನ ಭಾಗವಾಗಿರುವುದತ್ತ ಬೆರಳುಮೂಡಿವೆ. ಗ್ರಾಮೀಣ ಸಮುದಾಯದ ಸಾಂಸ್ಕೃತಿಕ ಜೀವನದೊಂದಿಗೆ ಜನಪದ ವಾದ್ಯಗಳು ನಿಕಟ ಸಂಬಂಧವನ್ನು ಪಡೆದುಕೊಂಡಿವೆ. ಜನಪದವಾದ್ಯ ಮೇಳಗಳಲ್ಲದೇ ಹಳ್ಳಿಗಳಲ್ಲಿ ಯಾವುದೇ ಸಾಂಸ್ಕೃತಿಕ ಸಂದರ್ಭ ಜರುಗುವುದಿಲ್ಲ. ಇದನ್ನು ಊಹಿಸಿಕೊಳ್ಳುವುದು ಅಸಾಧ್ಯ. ಹಬ್ಬ, ಉತ್ಸವ, ಜಾತ್ರೆ, ಮೆರವಣಿಗೆ ಮುಂತಾದ ಸಾರ್ವಜನಿಕ ಸಮಾರಂಭಗಳಿಗೆ, ಮದುವೆ, ಗುಗ್ಗಳ, ಗೊಂದಲ ಮುಂತಾದ ಕೌಟುಂಬಿಕ ಆಚರಣೆಗಳಿಗೆ ವಾದ್ಯಗಳು ಬೇಕೇಬೇಕು. ಉಲ್ಲಾಸದ ಸಂದರ್ಭಗಳಲ್ಲಿ ಬೆರೆತುಕೊಳ್ಳುವಂತೆ ವಾದ್ಯಗಳು ದುಃಖದ ಸನ್ನಿವೇಶಕ್ಕೂ ಅನಿವಾರ್ಯವೆನಿಸಿರುವುದು ಗಮನಾರ್ಹವಾಗಿದೆ. ಹಲಗೆ, ಕಹಳೆ, ಶಹನಾಯಿಗಳನ್ನು ಶುಭಕಾರ್ಯಗಳಲ್ಲಿ ಬಳಸುವಂತೆ ಶವಯಾತ್ರೆಯಲ್ಲಿಯೂ ಬಾರಿಸಲಾಗುವುದು. ಆದರೆ ಲಯ ಮಾತ್ರ ದುಃಖದಾಯಕವಾಗಿರುತ್ತದೆ. ಇದನ್ನು ದೂರದಲ್ಲಿ ಕೇಳಿದವರು ಶವಯಾತ್ರೆಯ ಸನ್ನಿವೇಶವೆಂದು ಸಂವಹನಿಸಿಕೊಳ್ಳುತ್ತಾನೆ.

ಹೀಗೆ ಜನಪದ ವಾದ್ಯ ಪರಿಕರಗಳನ್ನು ಹಲವು ಕಾರಣಗಳಿಂದಾಗಿ ದೇವಾಲಯ, ಗುಡಿ ಗೋಪುರ, ನೃತ್ಯಶಾಲೆ, ಇತ್ಯಾದಿ ಸ್ಮಾರಕಗಳಲ್ಲಿ ಕೆತ್ತಲಾಗಿದೆ. ಅವುಗಳು ಈ ಕೆಳಗಿನ ಅಂಶಗಳತ್ತ ಬೆಳಕು ಚೆಲ್ಲುತ್ತವೆ.

೧. ಜನಪದರ ಜೀವನ, ಪುರಾಣ, ಚರಿತ್ರೆಯನ್ನು ಹೇಳುತ್ತವೆ.

೨. ಅವ್ಯವಸ್ಥಿತ ಪರಿಸರವನ್ನು ವ್ಯವಸ್ಥಿತವಾಗಿ ಮಾಡಿಕೊಳ್ಳಲು ಅವು ಸಹಕಾರಿಯಾಗಿವೆ.

೩. ಅಮೂರ್ತವಾದ ಮತ್ತು ಅಲೌಕಿಕವಾದ ವಾತಾವರಣವನ್ನುಂಟು ಮಾಡಲು ಸಹಕಾರಿಯಾಗಿವೆ.

೪. ಸಾಂಸ್ಕೃತಿಕ ಪರಿಸರವನ್ನು ಪ್ರತಿಬಿಂಬಿಸುತ್ತವೆ.

೫. ಅವು ಅವರಿಗೆ ದೈವಗಳಿಂದ ಬಂದ ಬಳುವಳಿಗಳಾಗಿವೆ. ಅವು ಅವರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

೬. ನಿರಕ್ಷರಿಗೆ ಸಾಂಸ್ಕೃತಿಕ ಮಹತ್ವವನ್ನು ತಿಳಿಸುತ್ತವೆ.

೭. ಜನರನ್ನು ನಿಯಂತ್ರಿಸಿ, ಅವರನ್ನು ಭಕ್ತಿಯಕಡೆಗೆ ಒಯ್ಯುತ್ತವೆ.

೮. ಶಬ್ದವು ಭಗವಂತನನ್ನು ಸುಪ್ರೀತಗೊಳಿಸುವ ಸಾಧನ

೯. ಅವು ಅವರ ನಾದಪ್ರಿಯತೆ, ಗೌರವಭಕ್ತಿಯನ್ನು ಸಾಂಕೇತಿಸುತ್ತವೆ.

೧೦. ತಾವೆಲ್ಲ ಒಂದೇ ಎಂದು ಮಾನಸಿಕವಾಗಿ ಒಂದಾಗುವಂತೆ ಮಾಡುತ್ತವೆ.

೧೧. ಸಂತೋಷವನ್ನು ದುಃಖವನ್ನು ಸೃಷ್ಟಿಸಿ, ಅದನ್ನು ಉದ್ದೀಪನಗೊಳಿಸಲು ಸಹಕಾರಿಯಾಗಿವೆ.

❖ ❖

೧೩

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಮತ್ತು ಗೋಕಾಕ ತಾಲೂಕುಗಳ ವಿಜಯನಗರ ಕಾಲದ ಮಹಾಸತಿ ಕಲ್ಲುಗಳು

ಡಾ. ಆರ್.ಎಂ.ಷಡಕ್ಷರಯ್ಯ
ಸಿ.ಎನ್.ಕೋಳಿಗುಡ್ಡೆ

ವಿಜಯನಗರ ಸಾಮ್ರಾಜ್ಯದ ಆಳ್ವಿಕೆಗೆ ಬೆಳಗಾವಿಯ ಕೆಲ ಪ್ರದೇಶಗಳು ವಿಶೇಷವಾಗಿ ಮಲಪ್ರಭಾ ನದಿಯ ದಕ್ಷಿಣದವರೆಗೂ ಒಳಪಟ್ಟಿದ್ದವು. ಸಂಪಗಾವ, ಪರಸಗಡ ಮತ್ತು ರಾಮದುರ್ಗ ತಾಲೂಕುಗಳಲ್ಲಿ ವಿಜಯನಗರ ಕಾಲದ ಶಿಲಾಶಾಸನಗಳು ದೊರೆತಿವೆ. ಮೊದಲನೆಯ ಹರಿಹರನ ಕಾಲದ ಕ್ರಿ.ಶ. ೧೩೪೦ರ ಶಾಸನ ಮಲಪ್ರಭಾದವರೆಗಿನ ಪ್ರದೇಶ (೧೩೪೭ ರವರೆಗೆ) ಆತನ ಆಳ್ವಿಕೆಗೆ ಒಳಪಟ್ಟಿತ್ತೆಂದು ಉಲ್ಲೇಖಿಸುತ್ತದೆ.[೧] ಅಲ್ಲದೆ ಇವರ ಆಳ್ವಿಕೆಗೆ ಘಟಪ್ರಭಾದ ಪ್ರದೇಶ, ಖಾನಾಪೂರ, ಬೆಳಗಾವಿ ತಾಲೂಕು ಒಳಗೊಂಡಿದ್ದಿತು.

ಕೃಷ್ಣದೇವರಾಯನ ಆಳ್ವಿಕೆಗೆ ಬೆಳಗಾವಿ ಒಳಪಟ್ಟಿತ್ತೆಂದು ಕ್ರಿ.ಶ. ೧೫೧೪-೧೫ರ ಸವದತ್ತಿಯಲ್ಲಿ[೨] (ಯಲ್ಲಮ್ಮನ ದೇವಾಲಯ) ದೊರೆತ ಶಾಸನ ತಿಳಿಸುತ್ತದೆ. ಈ ಶಾಸನ ರಾಯರ ಬಾಗಿಲ ತಿಮ್ಮಪ್ಪನಾಯಕನು ಈ ದೇವಾಲಯದ ಪಶ್ಚಿಮದ್ವಾರಕ್ಕೆ ಕಲ್ಲುಪ್ಪರಿಗೆಯನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೫೫೧ರ ಸದಾಶಿವರಾಯನ ಕಾಲದ ಮುರುಗೋಡ ಶಾಸನ[೩] ಆತನ ಅಧಿಕಾರಿಯೊಬ್ಬ ಅಲ್ಲಿಯ ಮಲ್ಲಿಕಾರ್ಜುನನ ದೇವಾಲಯಕ್ಕೆ ದತ್ತಿ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೫೬೦ರ ಸದಾಶಿವರಾಯನ ಕಾಲದ ಮತ್ತೊಂದು ಶಾಸನ[೪] (ಸವದತ್ತಿ ಯಲ್ಲಮ್ಮನ ದೇವಾಲಯದಲ್ಲಿ) ಪ್ರಧಾನಿ ವೆಂಕಟಾದ್ರಿಯ ಕಾರ್ಯಕರ್ತ ವಿಠೋಬ ಎಂಬುವನು ಆ ದೇವಾಲಯಕ್ಕೆ ದಾನಕೊಟ್ಟ ಬಗ್ಗೆ ಉಲ್ಲೇಖಿಸುತ್ತದೆ.

ಫರಿಸ್ತಾನ್[೫] ಪ್ರಕಾರ ಮಹಮ್ಮದ್ ತುಘಲಕ್ ಬೆಳಗಾವಿ ಪ್ರದೇಶದ ರಾಯಭಾಗ ಮತ್ತು ಹುಕ್ಕೇರಿ ಪ್ರಾಂತ್ಯದಲ್ಲಿ ಇಬ್ಬರು ಅಧಿಕಾರಿಗಳನ್ನು ನೇಮಿಸಿದ್ದನೆಂದು ತಿಳಿದುಬರುತ್ತದೆ. ಮಹಮ್ಮದ್ ತುಘಲಕ್ ನ ವಿರುದ್ಧ ಅಮೀರರು ನಡೆಸಿದ ಯಶಸ್ವೀ ದಂಗೆಗಳ ಪರಿಣಾಮವಾಗಿ ಕ್ರಿ.ಶ. ೧೩೪೭ರ ಆಗಸ್ಟನಲ್ಲಿ ಬಹಮನಿ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಿತು. ಬಹಮನಿ ರಾಜ್ಯಸ್ಥಾಪಕ ಅಲ್ಲಾವುದ್ದೀನ ಹಸನಗಂಗು ಮೂಲತಃ ಬೆಳಗಾವಿ ಜಿಲ್ಲೆಯ ಕುಡಚಿ ಪ್ರದೇಶದವನೆಂದು ತಿಳಿಯಲಾಗಿದೆ.[೬]

ಕ್ರಿ.ಶ. ೧೪೪೯ರಲ್ಲಿ ಗೋವಾದಲ್ಲಿ ಬಹಮನಿ ಕೋತ್ವಾಲನಾಗಿದ್ದ ಬಹದ್ದೂರ ಗಿಲಾನಿ ದಂಗೆಯೆದ್ದು, ಗೋವಾ ಮತ್ತು ಬೆಳಗಾವಿಯನ್ನು ವಶಪಡಿಸಿಕೊಂಡನು. ಸಂಕೇಶ್ವರವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಮೀರಜ್ ಮತ್ತು ಜಮಖಂಡಿ ಪ್ರದೇಶಗಳನ್ನು ವಶಪಡಿಸಿಕೊಂಡನು.

ಬಿಜಾಪುರದ ಆದಿಲ್ ಶಾಹಿಗಳು[೮] ಬೆಳಗಾವಿ, ಹುಕ್ಕೇರಿ ಮತ್ತು ರಾಯಭಾಗ ಪ್ರದೇಶಗಳನ್ನು ಪ್ರಮುಖ ಆಡಳಿತ ಕೇಂದ್ರಗಳನ್ನಾಗಿ ಮುಂದುವರೆಸಿದರು.

ಆದರೆ ಪ್ರಸ್ತುತ ಅಧ್ಯಯನದ ಚಿಕ್ಕೋಡಿ ಮತ್ತು ಗೋಕಾಕ್ ತಾಲೂಕುಗಳಲ್ಲಿ ಈ ಕಾಲದ ಯಾವ ವಿವರಗಳೂ ಇಲ್ಲದಿರುವುದು ಗೋಚರಿಸುತ್ತದೆ. ಈ ಪ್ರದೇಶದ ಅನ್ವೇಷಣೆಯಿಂದ ಈ ಕಾಲದ ಕೆಲವು ಮಹಾಸತಿಶಿಲ್ಪಗಳು ಕಂಡುಬಂದಿದ್ದು ಅವುಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ. ಅಧ್ಯಯನದಲ್ಲಿ ಕೇವಲ ಈ ಪ್ರದೇಶಗಳ ಮಹಾಸತಿಕಲ್ಲುಗಳ ಕಲಾಚರಿತ್ರೆಯನ್ನು ಪ್ರಸ್ತುತಪಡಿಸಲಾಗಿದೆ.

ಮಹಾಸತಿ ಶಿಲ್ಪಗಳು

ಈ ಅಧ್ಯಯನದಲ್ಲಿ ಮಹಾಸತಿ ಶಿಲ್ಪಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಲಾಗಿದೆ.

೧. ಏಕ ಕಂಬಕ್ಕೆ ಜೋಡಿಸಿದ ಬಲತೋಳುಗೈ ಶಿಲ್ಪಗಳು

೨. ಏಕ ಕಂಬಕ್ಕೆ ಜೋಡಿಸಿದ ತೋಳುಗೈ ಜೊತೆ ವಿಭಿನ್ನ ದೃಶ್ಯಗಳುಳ್ಳ ಶಿಲ್ಪಗಳು

೩. ಜೋಡು ತೋಳುಗೈಯುಳ್ಳ ಶಿಲ್ಪಗಳು

೪. ಪಟ್ಟಿಕೆಯುಳ್ಳ ಮಹಾಸತಿ ಶಿಲ್ಪಗಳು

೧. ಏಕ ಕಂಬಕ್ಕೆ ಜೋಡಿಸಿದ ಬಲತೋಳುಗೈ ಶಿಲ್ಪಗಳು

ಸದಗಲಾ (ಚಿಕ್ಕೋಡಿ ತಾ.) ಗ್ರಾಮದ ಹೊರಗೆ ಇರುವ ಒಂದು ಮಹಾಸತಿಶಿಲ್ಪದಲ್ಲಿ ಬಲತೋಳುಗೈಯನ್ನು ಉದ್ದವಾದ ಕಂಬದ ಮಧ್ಯ ಜೋಡಿಸಲಾಗಿದೆ. ಮೇಲ್ಭಾಗದಲ್ಲಿ ಕೈ ಮತ್ತು ಕಂಬದ ತುದಿ ಮಧ್ಯ ಶಿವಲಿಂಗವಿದ್ದು, ಅದನ್ನು ಯತಿ ಮತ್ತು ದಂಪತಿಗಳು


ಕೈಮುಗಿದು ಪೂಜಿಸುತ್ತಿರುವ ರೀತಿಯಲ್ಲಿ ನಿಂತಿದ್ದಾರೆ.(?) ಈ ರೀತಿಯ ಸ್ವಲ್ಪ ಭಿನ್ನವಾದ ಒಂದು ಶಿಲ್ಪ ಮಂಗೋರಿಯಲ್ಲಿದೆ. (ಚಿಕ್ಕೋಡಿ ತಾ.)

೨. ಏಕ ಕಂಬಕ್ಕೆ ಜೋಡಿಸಿದ ತೋಳುಗ್ಯೆ ಜೊತೆ ವಿಭಿನ್ನ ದೃಶ್ಯಗಳುಳ್ಳ ಶಿಲ್ಪಗಳು

ಚಿಂಚಣಿ (ಚಿಕ್ಕೋಡಿ ತಾ.) ಗ್ರಾಮದ ಮುಖ್ಯ ರಸ್ತೆ ಬದಿಯಲ್ಲಿಯ ಒಂದು ಶಿಲ್ಪದಲ್ಲಿ ಕೇವಲ ಕಂಬಕ್ಕೆ ಜೋಡಿಸಿದ ಬಲತೋಳುಗ್ಯೆ ಚಿತ್ರವಿದೆ. ತೋಳಿನ ಕೆಳಗಡೆ ದಂಪತಿಗಳು ಕೈಮುಗಿದು ಕುಳಿತಿರುವರು. ಈ ನಮೂನೆಯ ಈ ಕಾಲದ ಶಿಲ್ಪಗಳು ಮಂಗೂರು ಮತ್ತು ಗಳಿಗತಾ ಗ್ರಾಮಗಳಲ್ಲಿವೆ. ಈ ಶಿಲ್ಪದಲ್ಲಿ ಸೂರ್ಯ-ಚಂದ್ರ, ಶಿವಲಿಂಗ ಮತ್ತು ದಂಪತಿಗಳನ್ನು ಎದ್ದು ಕಾಣುವಂತೆ ಚಿತ್ರಿಸಲಾಗಿದೆ.



ನಾ ಇಂಗ್ಲಜ್ (ಚಿಕ್ಕೋಡಿ ತಾ.) ಮಾರುತಿ ದೇವಾಲಯದ ಬಳಿ ದೊರೆತಿರುವ ಶಿಲ್ಪದಲ್ಲಿ ಮೂರು ಪಟ್ಟಿಕೆಗಳಿದ್ದು ಅದರಲ್ಲಿ ಕೆಳಗಿನ ಪಟ್ಟಿಕೆ ಮತ್ತು ಮೇಲಿನ ಪಟ್ಟಿಕೆಗಳ ಮಧ್ಯೆ ವಿಶಾಲವಾಗಿ ಕಂಬಕ್ಕೆ ಜೋಡಿಸಿದ ಬಲತೋಳುಗೈಯನ್ನು ಸುಂದರವಾಗಿ ಚಿತ್ರಿಸಲಾಗಿದೆ. ಈ ತೋಳಿನ ಪಟ್ಟಿಕೆಯಲ್ಲಿ ಕುಳಿತ ದಂಪತಿಗಳ ಬದಿಗಳಲ್ಲಿ ಸೇವಕಿಯರು ನಿಂತಿದ್ದಾರೆ. ಮೇಲಿನ ಪಟ್ಟಿಕೆಯಲ್ಲಿ ದಂಪತಿಗಳ ಮುಂದೆ ಯತಿ ನಿಂತು ಶಿವಲಿಂಗವನ್ನು ಪೂಜಿಸುತ್ತಿರುವನು. ಈ ಶಿಲ್ಪದ ಮೇಲ್ಭಾಗ ತ್ರಿಕೋನಾಕಾರದಲ್ಲಿದೆ. ಮಮ್ದಾಪುರ (ಗೋಕಾಕ ತಾ.) ಗ್ರಾಮದ ಮುಖ್ಯರಸ್ತೆಯ ಪಕ್ಕದಲ್ಲಿರುವ ಶಿಲ್ಪದಲ್ಲಿ ಬಲತೋಳುಗೈಯನ್ನು ಒಂದು ಉದ್ದವಾದ ಕಂಬಕ್ಕೆ ಜೋಡಿಸಿಡಲಾಗಿದೆ.



ತೋಳಿನ ಕೆಳಭಾಗದಲ್ಲಿ ಒಂದು ಚಿಕ್ಕ ಚೌಕಾದ ಪಟ್ಟಿಕೆ, ಅದಕ್ಕೆ ಹೊಂದಿ ಕಿರುಮೆಟ್ಟಿಲು ತೋರಿಸಿರುವುದು ಸತಿಶಿಲ್ಪಗಳ ಕಲಾಚರಿತ್ರೆಯಲ್ಲಿ ಅಪರೂಪದ್ದೆನಿಸಿದೆ. ಬಲಗೈ ಬೆರಳು ಮತ್ತು ಕಂಬತುದಿ ಮೇಲ್ಭಾಗದ ಪಟ್ಟಿಕೆಯಲ್ಲಿ ದಂಪತಿಗಳು ಕೈಮುಗಿದು ಶಿವಲಿಂಗದ ಕಡೆ ಮುಖಮಾಡಿ ಕುಳಿತಿರುವರು.




ಸಾವಳಗಿ (ಗೋಕಾಕ ತಾ.) ಗ್ರಾಮದ ಹನುಮಂತನ ಗುಡಿ ಹತ್ತಿರ ಇರುವ ಈ ಶಿಲ್ಪದಲ್ಲಿ ಕಂಬಕ್ಕೆ ಜೋಡಿಸಿದ ಎತ್ತಿದ ಬಲತೋಳುಗೈಯಿದೆ. ತೋಳಿನ ಕೆಳಭಾಗದಲ್ಲಿ ಒಬ್ಬ ವೀರ, ಮೂರು ಜನ ಪತ್ನಿಯರು ನಿಂತಿರುವುದು ಗಮನೀಯ. ತೋಳುಗೈ ಮೇಲ್ಭಾಗದಲ್ಲಿ ಶಿವಲಿಂಗಕ್ಕೆ ಪೂಜಿಸುತ್ತಿರುವ ಯತಿ, ಬಲಪಾರ್ಶ್ವದಲ್ಲಿ ಕೈಮುಗಿದು ಕುಳಿತ ಸತಿ, ಎಡಪಾರ್ಶ್ವದಲ್ಲಿ ಕುಳಿತ ನಂದಿಯ ಚಿತ್ರಗಳಿವೆ.

ಬೆಡಕಿಹಾಳ (ಚಿಕ್ಕೋಡಿ ತಾ.) ಗ್ರಾಮದ ಸಿದ್ದೇಶ್ವರ ದೇವಾಲಯದ ಒಳಗೋಡೆಯಲ್ಲಿರುವ ಮಹಾಸತಿ ಶಿಲ್ಪದಲ್ಲಿ ಎಡ ಅಂಚಿನ ಗುಂಟ ತೋರಿಸಿದ ಕಂಬ, ಅದರ ಮಧ್ಯೆ ಭಾಗಕ್ಕೆ ಬಲತೋಳುಗೈಯನ್ನು ಜೋಡಿಸಲಾಗಿದೆ. ಈ ಕಂಬಕ್ಕೆ ಎರಡು ಚೌಕ ಪಟ್ಟಿಕೆಗಳು ಮೇಲೆ ಕಳಸ ಅಲಂಕಾರವುಳ್ಳ ಗುಮ್ಮಟವಿದೆ. ಶಿಲ್ಪದಲ್ಲಿ ತೋಳುಗೈಯೊಂದಿಗೆ ನಾಲ್ಕು ಬೇರೆ ಬೇರೆ ಚಿತ್ರಗಳಿವೆ. ಕೆಳಗಿನ ಚಿತ್ರದಲ್ಲಿ ವೀರ ತನ್ನ ಎರಡೂ ಕೈಗಳನ್ನು ಮೇಲಕ್ಕೆತ್ತಿಕೊಂಡು ಕುದುರೆ ಮೇಲೆ ಕುಳಿತಿದ್ದಾನೆ. ತೋಳುಗೈಯ ಮೇಲೆ ದಂಪತಿಗಳು ಕೈಮುಗಿದು ವಿಮಾನದಲ್ಲಿ ಕುಳಿತಿದ್ದಾರೆ. ಅದರ ಮತ್ತು ಕಂಬದ ಮೇಲ್ಭಾಗದಲ್ಲಿ ಮಂಟಪವಿದ್ದು ಅಲ್ಲಿ ಶಿವಲಿಂಗಕ್ಕೆ ಪೂಜಿಸುತ್ತಿರುವ ಯತಿ ಇದ್ದಾನೆ. ಅದರ ಮೇಲೆ ಬಲಗಡೆಗೆ ಒಂದು ಚೌಕದಡಿಯಲ್ಲಿ ದಂಪತಿಗಳು ಕೈಮುಗಿದು ಕುಳಿತಿದ್ದಾರೆ. ಈ ಶಿಲ್ಪದಲ್ಲಿ ಕಂಬ, ಕುದುರೆ ಸವಾರ, ಶಿವಲಿಂಗ ದಂಪತಿಗಳನ್ನು ವಿಮಾನ ಮತ್ತು ಗೂಡಿನಲ್ಲಿ ಚಿತ್ರಿಸಿರುವ ಶೈಲಿಯ ವಿಶೇಷವೆನಿಸಿದೆ.

೩. ಜೋಡು ತೋಳುಗೈವುಳ್ಳ ಶಿಲ್ಪಗಳು


ಚಿಂಚಣೀ (ಚಿಕ್ಕೋಡಿ ತಾ.) ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಒಳಗೋಡೆಯ ಮಹಾಸತಿ ಶಿಲ್ಪದಲ್ಲಿ ಜೋಡುತೋಳುಗೈಗಳು ಇರುವುದು ವಿಶೇಷ. ಅದರಲ್ಲಿ ಎಡಕ್ಕೆ ಬಲತೋಳುಗೈ, ಬಲಕ್ಕೆ ಎಡತೋಡುಗೈಗಳನ್ನು ಒಂದಕ್ಕೊಂದು ಹತ್ತಿರ ಸಮಾಂತರವಾಗಿ



ಚಿತ್ರಿಸಿರುವುದು ಗಮನೀಯ. ಈ ತೋಳುಗೈಗಳ ಕೆಳಗೆ ಕುದುರೆ ಸವಾರ, ತಲೆ ಮೇಲೆ ವಸ್ತುವನ್ನು ಹೊತ್ತ ವ್ಯಕ್ತಿ ಮತ್ತು ಎರಡೂ ಕೈಗಳನ್ನು ಮೇಲಕ್ಕೆತ್ತಿದ ಸತಿ ಮುಂತಾದವರ ದೃಶ್ಯವು ವಿಶೇಷವೆನಿಸಿದೆ. ತೋಳುಗೈ ಮೇಲ್ಭಾಗದಲ್ಲಿ ಬಲಕ್ಕೆ ಶಿವಲಿಂಗ, ಪಕ್ಕದಲ್ಲಿ ವೀರನು ತನ್ನ ಇಬ್ಬರು ಪತ್ನಿಯರ ಸಂಗಡ ಕೈಮುಗಿದು ಕುಳಿತಿರುವನು.

೪. ಪಟ್ಟಿಕೆಯುಳ್ಳ ಮಹಾಸತಿ ಶಿಲ್ಪಗಳು

ಸದಗಲಾ (ಚಿಕ್ಕೋಡಿ ತಾ.) ಗ್ರಾಮದ ಮಹಾದೇವ ದೇವಾಲಯದ ಶಿಲ್ಪದಲ್ಲಿ ಮೂರು ಪಟ್ಟಿಕೆ (ಹಂತ)ಗಳಿವೆ. ಕೆಳಗಿನ ಪಟ್ಟಿಕೆಯಲ್ಲಿ ದಂಪತಿಗಳು ಕೈಮುಗಿದು ಕುಳಿತಿದ್ದು, ಅವರ ಮಧ್ಯೆ ಬಾಳೆಯ ಗಿಡವಿದೆ. ಈ ಪಟ್ಟಿಕೆಯ ಎಡಕ್ಕೆ ಮೇಲ್ಭಾಗದಲ್ಲಿ ಅಂಚಿನಗುಂಟ ಅಲಂಕೃತ ಒಂದು ಕಂಬವಿದೆ. ಈ ಕಂಬಕ್ಕೆ ಎರಡು ಚೌಕಗಳಿದ್ದು ಮೇಲಿನ ಚೌಕಪಟ್ಟಿಕೆಯಲ್ಲಿ



ಉದ್ದ ಕಳಸ (?)ವುಳ್ಳ ಗುಮ್ಮಟವಿದೆ. ಈ ಕಂಬದ ಎರಡನೇ ಚೌಕಪಟ್ಟಿಕೆಗೆ ಬಲತೋಳುಗ್ಗೆ ತುದಿಯನ್ನು ಜೋಡಿಸಲಾಗಿದೆ. ಈ ತೋಳಿನ ಮತ್ತು ಕೆಳಗಿನ ಪಟ್ಟಿಕೆಯ ಮಧ್ಯದಲ್ಲಿ ಅರ್ಧವೃತ್ತಾಕಾರದ ಪಟ್ಟಿಕೆ ಇದೆ. ಅದರ ಮಧ್ಯದಲ್ಲಿ ಶಿವಲಿಂಗವಿದೆ. ಬಲಕ್ಕೆ ಮತ್ತು ಕಂಬದ ಕಳಸ ಮೇಲ್ಭಾಗದಲ್ಲಿ ಅಸ್ಪಷ್ಟ ಚಿತ್ರಗಳ ಅಲಂಕರಣವಿದೆ. ಈ ಶಿಲ್ಪದಲ್ಲಿ ಬಾಳೆಗಿಡ, ಶಿವಲಿಂಗ ಮತ್ತು ಬಲತೋಳುಗ್ಗೆ ವಿಶಿಷ್ಟವೆನಿಸಿವೆ.

ಪಂಗೇರಿಯ ಅಡ್ಡರಸ್ತೆ ಹತ್ತಿರ ದೊರೆತಿರುವ ಮಹಾಸತಿಶಿಲ್ಪದಲ್ಲಿ ಅನೇಕ ಶಿಲ್ಪಗಳನ್ನು ಮೂರು ಭಾಗದಲ್ಲಿ ತೋರಿಸಲಾಗಿದೆ. ಕೆಳಗಿನ ಭಾಗದಲ್ಲಿ ನಾಲ್ವರು ವೀರರು ಕೈಮುಗಿದು ನಿಂತಿದ್ದಾರೆ. ಬಲಗಡೆ ತೋಳಿನ ಮೇಲೆ ಗಿಂಡಿಯಿದೆ. ಮೇಲಿನ ಭಾಗದಲ್ಲಿ ಶಿವಲಿಂಗ, ನಿಂತ ನಂದಿ, ಕೈಮುಗಿದು ಕುಳಿತ ವೀರರ ಚಿತ್ರಗಳಿವೆ. ಈ ಶಿಲ್ಪದಲ್ಲಿ ತೋರಿಸಿದ ಗಿಂಡಿ ಚಿತ್ರ ವಿಶೇಷ ಗಮನವನ್ನು ಸೆಳೆಯುತ್ತದೆ.



ಈ ಮಹಾಸತಿ ಶಿಲ್ಪಗಳು ಶೈಲಿಯ ದೃಷ್ಟಿಯಿಂದ ಕ್ರಿ.ಶ. ೧೬ ಮತ್ತು ೧೭ನೇ ಶತಮಾನಕ್ಕೆ ಸೇರಿದವುಗಳೆಂದು ಕಂಡುಬರುತ್ತವೆ. ಹಾಗೂ ಇವು ಈ ಕಾಲದ ಈ ಪ್ರದೇಶದ ಮೂಲ ಆಕರಗಳು ಎನಿಸಿಕೊಳ್ಳುವವು. ಈ ಪ್ರದೇಶದಲ್ಲಿ ಆಳೆತ್ತರದ ಮನುಷ್ಯಾಕೃತಿಯುಳ್ಳ ಮಹಾಸತಿ ಶಿಲ್ಪಗಳು ಒಂದೂ ಕಂಡುಬಂದಿರುವುದಿಲ್ಲ ಹಾಗೂ ಕಂಡುಬಂದಿರುವ ಮಹಾಸತಿ ಶಿಲ್ಪಗಳಲ್ಲಿ ಕೆಲವು ವಿಶಿಷ್ಟ ಲಕ್ಷಣಗಳಿರುವುದು ಗಮನೀಯ. ಉದಾಹರಣೆಗೆ - ಬಾಳೆಗಿಡ, ಚಿತೆಯ ಚಿತ್ರ, ಎತ್ತಿದ ಎಡತೋಳುಗೈ, ಕಂಬಗಳಲ್ಲಿ (ಅರ್ಧಗಂಬ) ಅಲಂಕರಣ, ಒಂದು ಕಂಬದ ಕಳಸ ಭಾಗವನ್ನು ಮಹಿಳೆಯ ಮುಖದ ರೂಪದಲ್ಲಿ ಕಂಡರಿಸಿರುವುದು, ಕುದುರೆ ಮೇಲೆ ಸತಿ ನಿಂತಿರುವುದು, ದೇವಲೋಕಕ್ಕೆ ಅಪ್ಸರೆಯರನ್ನು ಒಯ್ಯುತ್ತಿರುವುದು ಈ ಪ್ರದೇಶದ ಕೆಲವು ವಿಶೇಷ ಅಂಶಗಳಾಗಿವೆ. ಚಿತೆಯನ್ನು ತೋರಿಸಿದ ಶಿಲ್ಪಗಳು ಕರ್ನಾಟಕದಲ್ಲಿ ಅನೇಕ ಕಡೆಗಳಲ್ಲಿ ಕಂಡುಬಂದಿವೆ. ಉದಾಹರಣೆಗೆ ಸಸ್ತಾಪುರ[೯] (ಬೀದರಜಿಲ್ಲೆ) ಇತ್ಯಾದಿ. ಆದರೆ ಇಲ್ಲಿ ಖಾಲಿ ಚಿತಾವೇದಿಕೆಯನ್ನು ತೋರಿಸಿರುವುದಿಲ್ಲ. ಅದೇ ರೀತಿ ಕುದುರೆಯನ್ನೇರಿ ನಿಂತ ಸತಿ ಶಿಲ್ಪಗಳು ಬೀದರ ಪ್ರದೇಶದ ಕೆಲವು ಮಹಾಸತಿ ಶಿಲ್ಪಗಳನ್ನು ಹೋಲುತ್ತವೆ. ಆದರೆ ಅಲ್ಲಿಯ ಮಹಾಸತಿ ಕಲ್ಲುಗಳಲ್ಲಿ ಸಾಮಾನ್ಯವಾಗಿ ಸತಿ ಕುದುರೆಯನ್ನೇರಿ ಕುಳಿತಿರುವಳು.[೧೦] ಇನ್ನೊಂದು ಅಂಶ ಎಂದರೆ ಎತ್ತಿದ ಎಡತೋಳುಗೈಯನ್ನು ತೋರಿಸಿದ ಶಿಲ್ಪಗಳು ಅನೇಕ ಕಡೆ[೧೧] (ಶಿವಮೊಗ್ಗ, ಧಾರವಾಡ, ಹಾವೇರಿ ಜಿಲ್ಲೆ)ಗಳಲ್ಲಿ ಕಂಡುಬಂದಿದ್ದರೂ ಪ್ರಸ್ತುತ ಅಧ್ಯಯನದಲ್ಲಿ ತೋರಿಸಿರುವ ರೀತಿ ಅಪರೂಪವೆನಿಸಿದೆ.

ಅಡಿಟಿಪ್ಪಣಿಗಳು

೧. ಇಂಡಿಯನ್ ಎಂಟಿಕ್ವೆರಿ, ವಾಲ್ಯೂಮ್ - ೧೨, ಪು. ೯೫

೨. ಸೂರ್ಯನಾಥ ಕಾಮತ್ : ಬೆಳಗಾವಿ ಜಿಲ್ಲಾ ಗೆಝೆಟಿಯರ್, ೧೯೮೭, ಬೆಂಗಳೂರು, ಪು. ೧೦೦

೩. ಎನ್ಯುಯಲ್ ರಿಪೋರ್ಟ್ ಆಫ್ ಸೌತ್ ಇಂಡಿಯನ್ ಎಪಿಗ್ರಾಫಿ - (೧೯೪೨-೪೩), ನಂ.೭

೪. ಎನ್ಯುಯಲ್ ರಿಪೋರ್ಟ್ ಆಫ್ ಸೌತ್ ಇಂಡಿಯನ್ ಎಪಿಗ್ರಾಫಿ - (೧೯೪೨-೪೩) ನಂ.೭

೫. ಸೂರ್ಯನಾಥ ಕಾಮತ್ : ಬೆಳಗಾವಿ ಡಿಸ್ಟ್ರಿಕ್ಟ್ ಗೆಝೆಟಿಯರ್, ೧೯೮೭, ಬೆಂಗಳೂರು, ಪು. ೧೦೧

೬. ಅದೇ, ಪು. ೧೦೧

೭. ಅದೇ, ಪು. ೧೦೪

೮. ಅದೇ, ಪು. ೧೦೬

೯. ಶೇಷಾಶಾಸ್ತ್ರಿ : ಕರ್ನಾಟಕದಲ್ಲಿ ವೀರಗಲ್ಲು, ೧೯೮೨. ಬೆಂಗಳೂರು

೧೦. ಡಾ. ಆರ್ .ಎಂ.ಷಡಕ್ಷರಯ್ಯ ಅವರು ತಮ್ಮ ಅನ್ವೇಷಣೆಯಲ್ಲಿ ಗಮನಿಸಿದ್ದಾರೆ.

೧೧. ಡಾ. ಆರ್ .ಎಂ.ಷಡಕ್ಷರಯ್ಯ : ವಿಜಯನಗರ ಅಧ್ಯಯನ, ವಾಲ್ಯೂಮ್ -೮, ಹಂಪಿ, ೨೦೦೩, ಪು. ೧೮೧

❖ ❖

೧೪

ಕಲಘಟಗಿ ಪ್ರದೇಶದಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಶಿಲ್ಪಗಳು, ಇತ್ಯಾದಿ

ಡಾ. ರು.ಮ.ಷಡಕ್ಷರಯ್ಯ

ಜಯಮ್ಮ ಬಿ.

ಧಾರವಾಡ ಜಿಲ್ಲೆಯ ಧಾರವಾಡ, ಹುಬ್ಬಳ್ಳಿ, ಕುಂದಗೋಳ, ನವಲಗುಂದ[೧] ಈ ನಾಲ್ಕು ತಾಲೂಕುಗಳಲ್ಲಿ ಇವರ ಕಾಲದ ಶಾಸನಗಳು ಕಂಡುಬಂದರೂ ಕಲಘಟಗಿ ತಾಲೂಕಿನಲ್ಲಿ ಮಾತ್ರ ಇವರ ಉಲ್ಲೇಖವಿರುವ ಯಾವ ಶಾಸನಗಳೂ ಕಂಡುಬರುವುದಿಲ್ಲ. ಆದರೂ ಈ ಪ್ರದೇಶದಲ್ಲಿ ಕ್ರಿ.ಶ.ಸು. ೧೫-೧೬ನೇ ಶತಮಾನದ ಲಕ್ಷಣವುಳ್ಳ ಒಂದೆರಡು ತ್ರುಟಿತ ಶಾಸನಗಳು[೨] ಕಂಡುಬಂದಿವೆ. ಆದರೆ ಅವುಗಳಿಂದ ಯಾವುದೇ ವಿಷಯವು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ.

ಈ ಪ್ರದೇಶದಲ್ಲಿ ಇವರ ಕಾಲದ ಕೋಟೆ, ಧಾರ್ಮಿಕ ಶಿಲ್ಪಗಳು, ಲೌಕಿಕ ಶಿಲ್ಪಗಳು ಕಂಡುಬಂದಿರುವ ಅನೇಕ ಶಿಲ್ಪಗಳ ಕಲಾ ಇತಿಹಾಸವನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಲೌಕಿಕ ಸ್ಮಾರಕಗಳು

ಮಿಶ್ರಿಕೋಟಿ ಗ್ರಾಮದಲ್ಲಿ ಗ್ರಾಮದ ಪೂರ್ವಕ್ಕೆ ಬಲವಾದ ಕೋಟೆಯಿದೆ. ಈ ಕೋಟೆಯ ಗೋಡೆಗೆ ಹೊಂದಿ ಅನೇಕ ಹುಡೆಗಳಿವೆ. ಕೋಟೆಗೋಡೆ ಸುತ್ತ ಆಳವಾದ ಕಂದಕವಿದ್ದು, ಅದರಲ್ಲಿ ನೀರು ನಿಂತಿರುತ್ತದೆ. ಈ ಕೋಟೆ ವಿಜಯನಗರ ಅರಸರ ಕಾಲದ್ದಾಗಿದ್ದು, ಆದಿಲ್ ಶಾಹಿಗಳಿಂದ ವಿಸ್ತರಿಸಲ್ಪಟ್ಟಿದ್ದರೂ[೩] ಈಗ ಅಲ್ಲಲ್ಲಿ ನಶಿಸಲ್ಪಟ್ಟಿದೆ.

ಧಾರ್ಮಿಕ ಶಿಲ್ಪಗಳು


ಶೈವ ಶಿಲ್ಪಗಳು

ಶೈವ ಶಿಲ್ಪಗಳಲ್ಲಿ ಶಿವ, ವೀರಭದ್ರನ ಶಿಲ್ಪಗಳು ಇಲ್ಲಿ ಕಂಡುಬಂದಿವೆ.

ದುಮ್ಮವಾಡ ಗ್ರಾಮದಲ್ಲಿ ಶಿವನ ಶಿಲ್ಪ ಕಂಡುಬಂದಿದೆ. ಶಿವನು ಲಲಿತಾಸನದಲ್ಲಿ ಪೀಠದ ಮೇಲೆ ಕುಳಿತಿದ್ದಾನೆ. ಚತುರ್ಭುಜಧಾರಿಯಾಗಿರುವ ಈತನು ತನ್ನ ಕೈಗಳಲ್ಲಿ ಕಠಾರಿ, ತ್ರಿಶೂಲ, ಡಮರು ಮತ್ತು ಕಪಾಲಗಳನ್ನು ಹಿಡಿದಿದ್ದಾನೆ. ಕಿವಿಗಳಲ್ಲಿ ಪತ್ರಕುಂಡಲ, ಕೈ, ತೋಳು, ಕಾಲು, ಸೊಂಟ ಭಾಗಗಳಿಗೆ ರುದ್ರಾಕ್ಷಿಯನ್ನು ಧರಿಸಿರುವನು. ಶಿಲ್ಪದ ಸುತ್ತಲೂ ಸರಳ ಹೂಬಳ್ಳಿಯ ಅಲಂಕರಣವಿದೆ.



ಈ ಕಾಲದ ಕೆಲವು ವೀರಭದ್ರ ಶಿಲ್ಪಗಳು ದುಮ್ಮವಾಡ, ಗಂಜೀಗಟ್ಟಿ, ಜಿ.ಬಸವಕೊಪ್ಪ ಗ್ರಾಮಗಳಲ್ಲಿ ಕಂಡುಬಂದಿವೆ. ಸಾಮಾನ್ಯವಾಗಿ ವೀರಭದ್ರನು ತ್ರಿಭಂಗಿಯಲ್ಲಿ ನಿಂತಿದ್ದು ಚತುರ್ಭುಜಧಾರಿಯಾಗಿರುವನು, ಅವನ ಕೈಯಲ್ಲಿ ಖಡ್ಗ, ಬಿಲ್ಲು, ಬಾಣ ಮತ್ತು ಗುರಾಣಿಗಳಿರುತ್ತವೆ. ವಸ್ತ್ರಾಭರಣ ಧರಿಸಿರುವನು. ಬದಿಗಳಲ್ಲಿ ದಕ್ಷಬ್ರಹ್ಮ ಮತ್ತು ಕಾಳಿಕಾ ಶಿಲ್ಪಗಳಿರುತ್ತವೆ.








ವೈಷ್ಣವ ಶಿಲ್ಪಗಳು

ಈ ಪ್ರದೇಶದಲ್ಲಿ ವಿಷ್ಣು ಮತ್ತು ಗರುಡನ ಶಿಲ್ಪಗಳು ಕಂಡುಬಂದಿವೆ.


ಕೂಡಲಗಿ ಗ್ರಾಮದಲ್ಲಿ ಸ್ಥಾನಿಕ ವಿಷ್ಣುವಿನ ಶಿಲ್ಪವಿದೆ. ಈತನು ಚತುರ್ಭುಜಧಾರಿಯಾಗಿದ್ದು, ತನ್ನ ಕೈಗಳಲ್ಲಿ ಗಧೆ, ಚಕ್ರ, ಶಂಖ ಮತ್ತು ಪದ್ಮ (?) ಗಳನ್ನಿಡಿದಿದ್ದಾನೆ. ಕೈಗಳಲ್ಲಿ ಹಿಡಿದಿರುವ ಆಯುಧಗಳ ಕ್ರಮಾಂಕದಿಂದ ಈತನನ್ನು ತ್ರಿವಿಕ್ರಮ"ನೆಂದು ಗುರುತಿಸಬಹುದು. ಈತ ವಸ್ತ್ರಾಭರಣಗಳಿಂದ ಅಲಂಕೃತಗೊಂಡಿದ್ದಾನೆ. ಈ ಶಿಲ್ಪದ ಪಕ್ಕದಲ್ಲಿಯೇ ಮಾನವ ರೂಪದ ಗರುಡನ ಶಿಲ್ಪವಿದೆ. ಈ ಗರುಡನ ಅಂಜಲಿ ಮುದ್ರೆಯಲ್ಲಿ ಸ್ಥಾನಿಕ ಭಂಗಿಯಲ್ಲಿದ್ದಾನೆ. ದೇಹದ ಹಿಂಬದಿಯಲ್ಲಿ ರೆಕ್ಕೆಗಳಿವೆ. ತಲೆಯಲ್ಲಿ ಕಿರೀಟವಿದೆ. ವಸ್ತ್ರಾಭರಣಗಳಿಂದ ಅಲಂಕೃತಗೊಂಡಿದ್ದಾನೆ. ಶಿಲ್ಪದ ಸುತ್ತಲೂ ಸ್ತಂಭಗಳ ಮೇಲೆ ಮಕರತೋರಣವು ಪ್ರಭಾವಳಿಯಲ್ಲಿದ್ದು ಅದರ ಮಧ್ಯೆ ಕೀರ್ತಿಮುಖವಿದೆ. ಈ ಎರಡೂ ಶಿಲ್ಪಗಳು ಬೇರೆ ಬೇರೆ ಸ್ಥಳಗಳಿಂದ ಇಲ್ಲಿಗೆ ಸ್ಥಳಾಂತರಿಸಲ್ಪಟ್ಟಿವೆ.



ಇನ್ನಿತರ ಶಿಲ್ಪಗಳು

ಶಿಗೀಗಟ್ಟಿ ಗ್ರಾಮದಲ್ಲಿ ನಾಗ-ನಾಗಿಣಿಯ ಶಿಲ್ಪವಿದೆ. ಈ ಶಿಲ್ಪದಲ್ಲಿ ನಾಗ-ನಾಗಿಣಿಯರ ದೇಹಾಂಗಗಳು ಒಂದಕ್ಕೊಂದು ಸುತ್ತಿಕೊಂಡಿವೆ. ವಿಭಿನ್ನ ಆಕಾರದ ನಾಲ್ಕು ಸುತ್ತುಗಳು

ಮತ್ತು ಎರಡು ಹಂತಗಳ ಗಂಟುಗಳಿವೆ. ಕೆಳಭಾಗದಲ್ಲಿ ಪೀಠವಿದೆ. ಮೇಲ್ಭಾಗದಲ್ಲಿ ಕೀರ್ತಿಮುಖವಿದೆ. ನಾಗನನ್ನು ಐದು ಹೆಡೆಗಳಲ್ಲಿ, ನಾಗಿಣಿಯನ್ನು ಮೂರು ಹೆಡೆಗಳಲ್ಲಿ ಚಿತ್ರಿಸಲಾಗಿದೆ. ಇದೊಂದು ನಾಗ-ನಾಗಿಣಿ ದಂಪತಿಗಳ ಚಿತ್ರವಾಗಿದೆ.



ಲೌಕಿಕ ಶಿಲ್ಪಗಳು

ಲೌಕಿಕ ಶಿಲ್ಪಗಳಲ್ಲಿ ವೀರಗಲ್ಲು - ೩, ವೀರ-ಸತಿಕಲ್ಲು - ೨ ಮತ್ತು ಮಹಾಸತಿ ಶಿಲ್ಪಗಳು - ೫ ಒಟ್ಟು ಹತ್ತು ಲೌಕಿಕ ಶಿಲ್ಪಗಳು ಕಂಡುಬಂದಿವೆ.


ಬೇಗೂರು ಗ್ರಾಮದಲ್ಲಿ ದೊರೆತಿರುವ ವೀರಗಲ್ಲು ಎರಡು ಹಂತಗಳಲ್ಲಿದೆ. ಕೆಳಗಿನ ಭಾಗದಲ್ಲಿ ವೀರನು ಬಿಲ್ಲು, ಬಾಣ ಹಿಡಿದು ಹೊಡೆಯುವ ರೀತಿಯಲ್ಲಿ ನಿಂತಿದ್ದಾನೆ. ಈತನ ಸೊಂಟದಲ್ಲಿ ಕಠಾರಿ ಇದೆ. ಈತನು ವಸ್ತ್ರಾಭರಣಗಳನ್ನು ಧರಿಸಿದ್ದು, ತನ್ನ ತಲೆಯ ಕೂದಲ ಸಿಂಬೆಯನ್ನು ಬಲಕ್ಕೆ ಕಟ್ಟಿರುವನು. ಎರಡನೇ ಭಾಗದಲ್ಲಿ ವೀರ ಪದ್ಮಾಸನದಲ್ಲಿ ಕುಳಿತಿದ್ದಾನೆ. ಬಲಭುಜದ ಮೇಲೆ ಗಿಣಿಯೊಂದು ಕುಳಿತಿರುವುದು ಅಪರೂಪವೆನಿಸಿದೆ. ಇದೇ ರೀತಿ ತುಮಕೂರಿನ ಮದಲೂರು ಗ್ರಾಮದಲ್ಲಿ ದೊರೆತಿರುವ ಮಾಸ್ತಿಕಲ್ಲಿನಲ್ಲಿ ಮಾಸ್ತಿಯ ಎಡಭುಜದ ಮೇಲೆ ಗಿಣಿ ಕುಳಿತಿರುವುದು[೫] ಕಂಡುಬಂದಿದೆ. ಈ ರೀತಿ ಗಿಣಿಯನ್ನು ಚಿತ್ರಿಸುವುದು ಬಹುಶಃ ಅದು ಅವರು ಸಾಕಿದ ಗಿಣಿಯಿರಬಹುದು. ವೀರ ತನ್ನ ಎಡ ಪಕ್ಕದಲ್ಲಿ ಕತ್ತಿಯನ್ನಿರಿಸಿಕೊಂಡಿದ್ದಾನೆ. ತಲೆಯಲ್ಲಿ ಕಿರೀಟವಿದೆ. ತಲಾ ಒಬ್ಬರ ಚಿತ್ರಗಳನ್ನು ಫಲಕದ ಒಳಗಡೆ ಕಡೆದು ರಚಿಸಲಾಗಿದೆ. ಮೇಲಿನ ಭಾಗ ತ್ರಿಕೋನಾಕಾರದಲ್ಲಿದೆ. ಮೇಲೆ ಸೂರ್ಯ-ಚಂದ್ರ ಚಿತ್ರಗಳಿವೆ. ಶಿಲ್ಪದಲ್ಲಿ ಅಪ್ರಕಟಿತ ಶಾಸನವಿದೆ (?).



ಹಿರೇಹೊನ್ನಿಹಳ್ಳಿಯಲ್ಲಿ ಕಂಡುಬಂದಿರುವ ವೀರಗಲ್ಲು ಮನುಷ್ಯೆತ್ತರದ ಗಾತ್ರದಲ್ಲಿದೆ. ವೀರನು ಬಲಗೈಯಲ್ಲಿ ಕಠಾರಿ, ಎಡಗೈಯಲ್ಲಿ ಬಿಲ್ಲನ್ನು ಹಿಡಿದುಕೊಂಡು ವೀರಾವೇಶದಲ್ಲಿ ನಿಂತಿದ್ದಾನೆ. ಬೆನ್ನ ಹಿಂದೆ ಬತ್ತಳಿಕೆಯಿದೆ. ತಲೆಯ ಕೇಶವನ್ನು ಮೇಲಕ್ಕೆ ಕಟ್ಟಿದ್ದಾನೆ. ಸೊಂಟದಲ್ಲಿ ಕಠಾರಿ ಇದೆ. ಆಭರಣಗಳು ಮತ್ತು ಧರಿಸಿರುವ ವಸ್ತ್ರವನ್ನು ನೋಡಿದರೆ ಈತ ಒಬ್ಬ ಪ್ರಮುಖ ವ್ಯಕ್ತಿಯೇ ಇರಬಹುದು.




ಮಸಳೀಕಟ್ಟೆ ಗ್ರಾಮದಲ್ಲಿಯೂ ಒಂದು ವೀರಗಲ್ಲು ಕಂಡುಬಂದಿದೆ. ಇದೂ ಕೂಡ ಮನುಷ್ಯೆತ್ತರದ ಗಾತ್ರದಲ್ಲಿದೆ. ಈತನ ಬಲಗೈ ಹೊಟ್ಟೆಯ ಸಮಭಾಗಕ್ಕೆ ಇದೆ. ಎಡಗೈ 'V' ಆಕಾರದಲ್ಲಿದ್ದು ಅದರಲ್ಲಿ ಬಿಲ್ಲನ್ನು (?) ಹಿಡಿದಿದ್ದಾನೆ. ಸೊಂಟದಲ್ಲಿ ಕಠಾರಿಯನ್ನು ಸಿಕ್ಕಿಸಿಕೊಂಡಿದ್ದಾನೆ. ಈತನ ಬಲ ಪಾರ್ಶ್ವದಲ್ಲಿ ಕಿರಿದಾಗಿ ನಿಂತ ಸೇವಕನ ಚಿತ್ರವಿದೆ.



ಹಿರೇಹೊನ್ನಿಹಳ್ಳಿಯಲ್ಲಿ ವೀರ-ಸತಿಗಲ್ಲೊಂದು ಕಾಣಿಸಿದೆ. ಈ ವೀರ ಸತಿಕಲ್ಲಿನಲ್ಲಿ ಮೂರು ದೃಶ್ಯಗಳಿವೆ. ಕೆಳಗಿನ ಪಟ್ಟಿಕೆಯಲ್ಲಿ ವೀರನು ಕುದುರೆಯ ಮೇಲೆ ಕುಳಿತು ಹಂದಿಯೊಡನೆ ಕಾದಾಡುತ್ತಿದ್ದಾನೆ. ಕೆಳಗಿನಿಂದ ಒಂದು ನಾಯಿ, ಮೇಲಿನಿಂದ ಒಂದು ನಾಯಿ ಆ ಹಂದಿಯ ಜೊತೆ ಕಾದಾಡುತ್ತಿವೆ. ವೀರನ ಕುದುರೆಯ ಹಿಂದೆ ಸೈನಿಕನೊಬ್ಬ ಛತ್ರಿ ಹಿಡಿದು ನಿಂತಿದ್ದಾನೆ. ಆತನ ಹಿಂದೆ ಇಬ್ಬರು ಸತಿಯರು ಇದ್ದಾರೆ. ಒಬ್ಬ ಸತಿಯು ಬಲತೋಳುಗೈ ಯನ್ನು ಎತ್ತಿದ್ದರೆ, ಇನ್ನೊಬ್ಬಳು ಎಡತೋಳುಗೈಯನ್ನು ಎತ್ತಿದ್ದಾಳೆ. ಒಬ್ಬಳು ಎಡಗೈ ಚಾಚಿ ಮತ್ತೊಬ್ಬಳ ಬಲ ಭುಜದ ಮೇಲಿಟ್ಟಿದ್ದಾಳೆ. ಮತ್ತೊಬ್ಬಳು ಬಲಗೈಯನ್ನು ಕೆಳಗೆ ಇಳಿಬಿಟ್ಟಿದ್ದಾಳೆ. ಎರಡನೆಯ ಭಾಗದ ಮಧ್ಯದಲ್ಲಿ ವೀರನು ನಿಂತಿರುವನು. ಆತನ ಬದಿಯಲ್ಲಿ ಒಟ್ಟು ನಾಲ್ವರು ಸ್ತ್ರೀಯರು ತಮ್ಮ ಬಲಗೈಗಳನ್ನು ಮೇಲಕ್ಕೆತ್ತಿ ನಿಂತಿದ್ದಾರೆ. ಅವರ ಎಡಗೈಗಳಲ್ಲಿ ಗಿಂಡಿಗಳಿವೆ. ಮೇಲಿನ ದೃಶ್ಯದಲ್ಲಿ ಒಂದೇ ಸಾಲಿನಲ್ಲಿ ನಾಲ್ವರು ಸ್ತ್ರೀಯರು ಕೈಮುಗಿದು ಕುಳಿತಿದ್ದಾರೆ. ಅವರ ಮೇಲ್ಭಾಗದಲ್ಲಿ ಅವರ ಪತಿ (ವೀರ) ಕೈಮುಗಿದು ಕುಳಿತಿರು ವನು. ಸತಿಯರ ಎಡಪಾರ್ಶ್ವದಲ್ಲಿ ವ್ಯಕ್ತಿಯೊಬ್ಬ ಶಿವಲಿಂಗವನ್ನು ಪೂಜಿಸುತ್ತಿರುವನು. ಮೇಲ್ಭಾಗದಲ್ಲಿ ಸೂರ್ಯ-ಚಂದ್ರರ ಚಿತ್ರಗಳಿವೆ.


ಕುತೂಹಲವೆಂದರೆ ಹೋರಾಟದ ದೃಶ್ಯದಲ್ಲಿ ಇಬ್ಬರು ಸತಿಯರನ್ನು, ಸ್ವರ್ಗಾರೋಹಣ ಮತ್ತು ಶಿವನ ಸಾನಿಧ್ಯದಲ್ಲಿ ನಾಲ್ವರು ಸತಿಯರನ್ನು ಚಿತ್ರಿಸಲಾಗಿದೆ. ಹೋರಾಟದ ದೃಶ್ಯದಲ್ಲಿ ಒಬ್ಬ ಸತಿ ಬಲಗೈ, ಮತ್ತೊಬ್ಬಳು ಎಡಗೈಯನ್ನು ಮೇಲಕ್ಕೆತ್ತಿರುವುದು ವಿಶೇಷವಾಗಿದೆ.



ಮತ್ತೊಂದು ವೀರ-ಮಹಾಸತಿ ಕಲ್ಲು ದ್ಯಾವನಕೊಂಡ ಗ್ರಾಮದಲ್ಲಿ ದೊರೆತಿರುವುದು. ಇದರಲ್ಲಿ ಮೂರು ದೃಶ್ಯಗಳಿವೆ. ಕೆಳಗಿನ ದೃಶ್ಯದಲ್ಲಿ ಸತಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿ ನಿಂತಿರುವಳು. ಎಡಗೈಯಲ್ಲಿ ದರ್ಪಣವನ್ನಿಡಿದು ಹೊಟ್ಟೆಯ ಸಮಭಾಗಕ್ಕೆ ಹಿಡಿದಿದ್ದಾಳೆ. ನೆತ್ತಿಯ ಎಡಭಾಗಕ್ಕೆ ತುರುಬನ್ನು ಕಟ್ಟಿದ್ದಾಳೆ. ವಸ್ತ್ರಾಭರಣಗಳಲ್ಲಿ ಈಕೆಯು ಧರಿಸಿದ ಸೀರೆ ಲಂಗದಂತೆ ಕಾಣುತ್ತದೆ. ಸತಿಯ ಬಲ ಪಾರ್ಶ್ವದಲ್ಲಿ ಅವಳಿಗಿಂತ ಸ್ವಲ್ಪ ಕಿರುಗಾತ್ರದಲ್ಲಿ

ಅವಳ ಪತಿ (ವೀರ) ಯನ್ನು ತೋರಿಸಲಾಗಿದೆ. ಪತಿಯು ತನ್ನ ಬಲಗೈಯಲ್ಲಿ ಕತ್ತಿಯನ್ನಿಡಿದು ನಿಂತಿದ್ದಾನೆ. ಎರಡನೆಯ ದೃಶ್ಯದಲ್ಲಿ ವೀರನು ಬಿಲ್ಲು, ಬಾಣಗಳನ್ನು ಸಾಂಕೇತಿಕವಾಗಿ ಹಿಡಿದಂತೆ ಕಾಣುವನು. ಆತನ ವೈರಿ ಕುದುರೆಯ ಮೇಲೆ ಕುಳಿತು ಆತನ ಸಂಗಡ ಹೋರಾಡುತ್ತಿದ್ದಾನೆ. ಎಡಭಾಗದಲ್ಲಿ ಒಬ್ಬನು ಕಹಳೆಯನ್ನು ಊದುತ್ತಿರುವನು. ಕಹಳೆಯನ್ನು ಊದುತ್ತಿರುವುದು ಬಹುಶಃ ಯುದ್ಧ ಅಥವಾ ಹೋರಾಟದ ಪ್ರಾರಂಭಕ್ಕೆ ಇರಬಹುದು. ಮೇಲ್ಭಾಗದಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಯತಿ ಹಾಗೂ ಆತನ ಬಲಭಾಗಕ್ಕೆ ವೀರ ಕೈಮುಗಿದು ಕುಳಿತಿದ್ದಾನೆ. ಎಡಕ್ಕೆ ಕುಳಿತ ನಂದಿಯು ತನ್ನ ಮುಂಗಾಲನ್ನು ಮುಂದಿಟ್ಟಿದೆ. ಮೇಲ್ಭಾಗದಲ್ಲಿ ಸೂರ್ಯ-ಚಂದ್ರರಿದ್ದಾರೆ.

ಈ ಶಿಲ್ಪದಲ್ಲಿ ಕುದುರೆಯ ವೇಷಭೂಷಣ ಮತ್ತು ಕಹಳೆ ಊದುವ ವ್ಯಕ್ತಿ ಹಾಗೂ ಹೋರಾಟ ದೃಶ್ಯವನ್ನು ಎರಡನೆಯ ಭಾಗದಲ್ಲಿ ಚಿತ್ರಿಸಿರುವುದು ವಿಶೇಷವಾಗಿದೆ.



ದ್ಯಾವನಕೊಂಡ ಗ್ರಾಮದಲ್ಲಿಯ ಸತಿಕಲ್ಲಿನಲ್ಲಿ ಎರಡು ಪಟ್ಟಿಕೆಗಳಿವೆ. ಕೆಳಗಿನ ಪಟ್ಟಿಕೆಯಲ್ಲಿ ಸತಿಯನ್ನು ಮನುಷ್ಯೆತ್ತರದ ಗಾತ್ರದಲ್ಲಿ ಚಿತ್ರಿಸಲಾಗಿದೆ. ಸತಿಯ ಬಲಬದಿಯಲ್ಲಿ ನಿಂತ ಪತಿಯನ್ನು ಆಕೆಗಿಂತ ಸ್ವಲ್ಪ ಕಿರುಗಾತ್ರದಲ್ಲಿ ಚಿತ್ರಿಸಲಾಗಿದೆ. ಸತಿಯು ತನ್ನ ಬಲಗೈಯಲ್ಲಿ ನಿಂಬೆಹಣ್ಣು ಹಿಡಿದು ಕೆಳಗೆ ಇಳಿಬಿಟ್ಟಿದ್ದಾಳೆ. ಎಡಗೈಯಲ್ಲಿ ಬಹುಶಃ ದರ್ಪಣ ಹಿಡಿದಿರಬಹುದು.(?) ಆ ಭಾಗ ಅಸ್ಪಷ್ಟ. ಇವಳು ತಲೆಯ ಕೇಶವನ್ನು ಕೇದಿಗೆಯಿಂದ ಹೆಣೆದುಕೊಂಡಿದ್ದು, ಸೀರೆಯನ್ನು ಸೊಂಟದಿಂದ ಪಾದದವರೆಗೆ ಧರಿಸಿದ್ದು, ಅದರ ಮಡಿಕೆಗಳು ಎದ್ದು ಕಾಣುತ್ತವೆ. ಆಭರಣಗಳನ್ನು ಸಹ ಧರಿಸಿರುವಳು. ಮೇಲಿನ ಪಟ್ಟಿಕೆಯಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಯತಿ, ಆತನ ಬಲಪಾರ್ಶ್ವದಲ್ಲಿ ದಂಪತಿಗಳು ಕೈಮುಗಿದು ಕುಳಿತಿದ್ದಾರೆ. ಎಡಭಾಗದಲ್ಲಿ ಕುಳಿತ ನಂದಿ ಬಲಗಾಲನ್ನು ಮುಂದೆ ಚಾಚಿದೆ.



ಸೋಮನಕೊಪ್ಪ ಗ್ರಾಮದಲ್ಲಿ ಕಂಡುಬಂದಿರುವ ಮಹಾಸತಿ ಶಿಲ್ಪದಲ್ಲಿ ದಂಪತಿಗಳನ್ನು ಮನುಷ್ಯೆತ್ತರದ ಸಮಗಾತ್ರದಲ್ಲಿ ಚಿತ್ರಿಸಲಾಗಿದೆ. ವೀರನು ಸತಿಯ ಬಲಪಾರ್ಶ್ವದಲ್ಲಿ ನಿಂತಿರುವನು. ಈತ ಬಲಗೈಯಲ್ಲಿ ಕಠಾರಿ ಹಿಡಿದು ಎಡಗೈ ಕೆಳಗೆ ಇಳಿಬಿಟ್ಟಿರುವನು. ಸತಿಯು ತನ್ನ ಬಲಗೈಯನ್ನು 'V' ಆಕಾರದಲ್ಲಿ ಮೇಲಕ್ಕೆ ಎತ್ತಿ ನಿಂತಿರುವಳು. ಎಡಗೈಯಲ್ಲಿ ನಿಂಬೆಹಣ್ಣು ಹಿಡಿದು ಕೆಳಗೆ ಇಳಿಬಿಟ್ಟಿರುವಳು. ಸೀರೆಯನ್ನು ಧರಿಸಿರುವಳು. ಮೇಲಿನ ದೃಶ್ಯದಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಯತಿ, ನಂದಿ ಚಿತ್ರಗಳಿವೆ. ಈ ಮೇಲಿನ ಭಾಗ ಅರ್ಧವೃತ್ತಾಕಾರದಲ್ಲಿದೆ.



ಗಂಜೀಗಟ್ಟಿ ಗ್ರಾಮದಲ್ಲಿಯೂ ಸಹ ಮನುಷ್ಯೆತ್ತರ ಗಾತ್ರದ ಮಹಾಸತಿ ಶಿಲ್ಪ ಕಂಡುಬಂದಿದೆ. ಈ ಶಿಲ್ಪದಲ್ಲಿ ಸತಿಯು ತನ್ನ ಬಲ ತೋಳುಗೈಯನ್ನು ಮೇಲಕ್ಕೆತ್ತಿ ನಿಂತಿದ್ದಾಳೆ. ಎಡಗೈಯನ್ನು ಕೆಳಗೆ ಇಳಿಬಿಟ್ಟಿದ್ದು ಅದರಲ್ಲಿ ನಿಂಬೆಹಣ್ಣು ಹಿಡಿದಿದ್ದಾಳೆ. ಇವಳು ತನ್ನ ಕೇಶವನ್ನು ತಲೆಯ ಬಲಕ್ಕೆ ತುರುಬನ್ನಾಗಿ ಕಟ್ಟಿರುವಳು. ಸೀರೆಯನ್ನು ಸೊಂಟದಿಂದ ಪಾದದವರೆಗೆ ಉಟ್ಟಿರುವಳು. ಸೀರೆಯಲ್ಲಿ ಕೆಲವು ನೆರಿಗೆಗಳು ಕಂಡುಬರುತ್ತವೆ. ಸತಿಯ ಎಡಭಾಗದಲ್ಲಿ ವೀರನನ್ನು ಕಿರುಗಾತ್ರದಲ್ಲಿ ಚಿತ್ರಿಸಲಾಗಿದೆ. ವೀರ ತನ್ನ ಕೈಗಳಲ್ಲಿ ಬಿಲ್ಲು-ಬಾಣಗಳನ್ನು ಹಿಡಿದಿರುವವನು ಮತ್ತು ತನ್ನ ಕೇಶವನ್ನು ಎಡಭಾಗಕ್ಕೆ ಕಟ್ಟಿರುವವನು.



ಹಟಕಿನಾಳ ಗ್ರಾಮದಲ್ಲಿಯೂ ಸಹ ಮಹಾಸತಿ ಶಿಲ್ಪ ಕಂಡುಬಂದಿದೆ. ಆದರೆ ಅದು ಈಗ ಭಗ್ನಗೊಂಡು ಮೂರು ಭಾಗಗಳಾಗಿದೆ. ಈ ಮಹಾಸತಿ ಶಿಲ್ಪದಲ್ಲಿ ನಾಲ್ವರು ಸತಿಯರ

ಮಧ್ಯೆ ವೀರ ನಿಂತಿದ್ದಾನೆ. ವೀರನ ಪಾರ್ಶ್ವಗಳಲ್ಲಿ ಇಬ್ಬಿಬ್ಬರು ಸತಿಯರು ತಮ್ಮ ಬಲಗೈಗಳನ್ನು ಮೇಲಕ್ಕೆತ್ತಿ ನಿಂತಿದ್ದಾರೆ. ಈ ನಾಲ್ಕು ಜನ ಸತಿಯರು ವಿವಿಧ ರೀತಿಯ ಕೇಶಾಲಂಕಾರವನ್ನು ಮಾಡಿಕೊಂಡಿದ್ದಾರೆ.

ಮಡಕಿ ಹೊನ್ನಳ್ಳಿಯಲ್ಲಿ ಕಂಡುಬಂದಿರುವ ಸತಿಕಲ್ಲು ಎರಡು ಭಾಗಗಳಲ್ಲಿದೆ. ಕೆಳಗಿನ ಭಾಗದಲ್ಲಿ ಸತಿಯು ತನ್ನ ಬಲತೋಳುಗೈಯನ್ನು ಮೇಲಕ್ಕೆತ್ತಿದ್ದಾಳೆ. ಎಡಗೈಯಲ್ಲಿ ನಿಂಬೆಹಣ್ಣನ್ನು ಹಿಡಿದು ಕೆಳಗೆ ಇಳಿಬಿಟ್ಟಿದ್ದಾಳೆ. ಸತಿಯ ಬಲಪಾರ್ಶ್ವದಲ್ಲಿ ಪತಿಯು ಕುದುರೆ ಮೇಲೆ ಕುಳಿತಿರುವನು. ಅವನು ತನ್ನ ಬಲಗೈಯಲ್ಲಿ ಕತ್ತಿ ಹಿಡಿದಿದ್ದಾನೆ. ಮೇಲಿನ ಭಾಗದಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಯತಿ, ನಂದಿ ಹಾಗೂ ಸೂರ್ಯ-ಚಂದ್ರರ ಚಿತ್ರಗಳಿವೆ.

ಈ ಎಲ್ಲಾ ಶಿಲ್ಪಗಳು ಶೈಲಿಯ ದೃಷ್ಟಿಯಿಂದ ವಿಜಯನಗರ ಮತ್ತು ವಿಜಯನಗರೋತ್ತರ (ಕ್ರಿ.ಶ. ೧೪ ರಿಂದ ೧೯ನೇ ಶತಮಾನ) ಕಾಲದ್ದಾಗಿದೆ. ಇಲ್ಲಿಯ ಕೆಲವು ಶಿಲ್ಪಗಳಲ್ಲಿ ಕಾಣಿಸಿರುವ ವಿಶಿಷ್ಟ ಲಕ್ಷಣಗಳು;

೧. ಮಾನವಾಕಾರದ ಆಳೆತ್ತರದ ಸತಿ ಶಿಲ್ಪಗಳು ಮಾತ್ರ ಕಾಣಿಸಿವೆ.

೨. ಕೇವಲ ಕೈ ಎತ್ತಿದ ಶಿಲ್ಪಗಳು ಈ ಭಾಗದಲ್ಲಿ ಕಾಣಿಸುವುದಿಲ್ಲ.

೩. ವೀರನ ಭುಜನ ಮೇಲೆ ಗಿಳಿ ಕುಳಿತಿರುವುದು.

೪. ನಾಲ್ವರು ಸತಿಯರು ಸತಿ ಹೊಂದಿದ ವಿವರಗಳು, ಸತಿಯರಿಬ್ಬರಲ್ಲಿ ಒಬ್ಬಳು ಮತ್ತೊಬ್ಬಳ ಹೆಗಲ ಮೇಲೆ ಕೈಯಿಟ್ಟಿರುವುದು.

೫. ಕಹಳೆ ಊದುತ್ತಿರುವುದು.

ಈ ಅಧ್ಯಯನದಿಂದ ಕಲಘಟಗಿ ತಾಲೂಕಿನ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಕೆಲವು ಪುರಾತತ್ವ ಅವಶೇಷಗಳು ಅಲ್ಲಿ ಇಂದಿಗೂ ಉಳಿದುಕೊಂಡಿರುವುದರಿಂದ ಈ ಕಾಲದ ತಕ್ಕಮಟ್ಟಿನ ಇತಿಹಾಸ ರಚನೆಗೆ ಸಹಕಾರಿಯಾಗಿವೆ.

ಅಡಿಟಿಪ್ಪಣಿಗಳು

೧. South Indian Inscriptions, Vol. XX, XV

೨. Annual Report on South Indian Epigraphy, ೧೯೫-೫೨, No. ೫೨, ೫೪

೩. ಸೂರ್ಯನಾಥ ಯು.ಕಾಮತ್ (ಸಂ), ೧೯೯೫, ಧಾರವಾಡ ಜಿಲ್ಲಾ ಗ್ಯಾಝೆಟಿಯರ್ , ಬೆಂಗಳೂರು, ಪು. ೯೮೯

೪. T.A.Gopinath Rao, Hindu Icongraphy, Vo-II, P. ೨೩೧

೫. ಬಸವರಾಜ ಕಲ್ಗುಡಿ, ೧೯೮೫, ಮಹಾಸತಿ ಆಚರಣೆ ಒಂದು ಅಧ್ಯಯನ, ಬೆಂಗಳೂರು, ಪು. ೪೮

❖ ❖

೧೫

ವಿಜಯನಗರ ಪಟ್ಟಣದಲ್ಲಿ ಮುಸ್ಲಿಂ ಧರ್ಮ

ಬಿ.ಅಬ್ದುಲ್ ಮನ್ನಾನ್

ವಿಜಯನಗರ ಪಟ್ಟಣದಲ್ಲಿ ಧರ್ಮವಿದ್ದುದರ ಕುರುಹವಾಗಿ ಇಲ್ಲಿರುವ ಪುರಾತನ ಅವಶೇಷಗಳು, ಶಿಲಾ ಶಾಸನಗಳು ಹಾಗೂ ಸಾಹಿತ್ಯಕ್ಕೆ, ಆಕಾರಗಳು. ಇಲ್ಲಿ ಅಂದು ಬಾಳಿ ಬೆಳಗಿದೆ ಎಂಬುದನ್ನು ದೃಢಪಡಿಸುತ್ತವೆ.

ಬಹುತೇಕವಾಗಿ ದೆಹಲಿ ಸುಲ್ತಾನ ಅಲ್ಲಾ ಉದ್-ದ್ದೀನ್ ಖಿಲ್ಜಿ ಅವರ ದಕ್ಷಿಣ ಭಾರತದ ದಾಳಿಯನಂತರ ಇಲ್ಲಿ ಮುಸ್ಲಿಂ ಧರ್ಮ ನೆಲೆಯೂರಿತ್ತೆಂದು ಹೇಳಬಹುದಾಗಿದೆ. ಬಿಜಾಪುರ, ಗುಲ್ಬರ್ಗಾ ವಿಭಾಗಗಳನ್ನು ದೆಹಲಿ ಸುಲ್ತಾನರ ವಶವಾಗಿದ್ದು, ಆ ಪ್ರದೇಶದಲ್ಲಿ ಸುಲ್ತಾನರು ತೆರಿಗೆಗಳನ್ನು ವಿಧಿಸಿದ್ದುದರ ಹಿನ್ನೆಲೆಯಲ್ಲಿ ಗಮನಿಸಿದರೆ ಕ್ರಿ.ಶ. ೧೩೪೧ರ ವೇಳೆಗೆ ಈ ಪ್ರದೇಶದಲ್ಲಿ ಮುಸ್ಲಿಂ ಧರ್ಮ ಪ್ರವೇಶಿಸಿತು.

೧. ನಂತರ ದೆಹಲಿ ಸುಲ್ತಾನನಾಗಿ ಪಟ್ಟಕ್ಕೆ ಬಂದ ಮಹಮ್ಮದ್-ಬಿನ್-ತುಘಲಕ್ ಬಾದಷಹನು ತನ್ನ ಸೋದರ ಅಳಿಯ ಬಹ-ಉದ್-ದ್ದೀನ್ ಗುಸ್ತಾಪ್ (ಬಾದುರ್‌ಖಾನ್)ನನ್ನು ಗುಲ್ಬರ್ಗಾ ಪ್ರದೇಶದ ಸಗರ ನಾಡಿಗೆ ರಾಜ್ಯಪಾಲನನ್ನಾಗಿ ನೇಮಿಸಿದುದನ್ನು, ಕುಮಾರರಾಮನ ಸಾಂಗತ್ಯಗಳು ದೃಢೀಕರಿಸುತ್ತವೆ.

೨. ನಂತರ ಸುಲ್ತಾನಿಗೂ ಮತ್ತು ಬಾದುರ ಖಾನನಿಗೂ ವೈಮನಸ್ಸುಂಟಾಗಿ ಬಾದುರನನ್ನು ಸುಲ್ತಾನನು ಗಡಿಪಾರು ಮಾಡಿದನು. ಈ ಒಂದು ಸನ್ನಿವೇಶದಿಂದ ಬಾದುರನು ತನ್ನ ಸಂಸಾರ ಪರಿವಾರ ಸಮೇತ ಕಂಪಿಲದೇವನ ಆಶ್ರಯಕ್ಕಾಗಿ ಬಂದನು. ಕಂಪಿಲರಾಯನು ಬಾದುರ ಖಾನನಿಗೆ ರಾಜಾಶ್ರಯ ನೀಡಿ ಅವನಲ್ಲೇ ಇರುವಂತೆ ವ್ಯವಸ್ಥೆ ಮಾಡಿದನು.

ಇದರಿಂದ ಒಬ್ಬ ಹಿಂದೂ ಧರ್ಮದ ರಾಜ ಮುಸ್ಲಿಂ ಧರ್ಮದ ಬಾದುರ ಖಾನನಿಗೆ ಆಶ್ರಯ ನೀಡಿ, ಹಿಂದೂ, ಮುಸ್ಲಿಂ ಧರ್ಮ ಸಮನ್ವಯತೆಯ ಬ್ರಾತೃತ್ವವನ್ನು ತೋರಿಸಿದವನು ಕಂಪಿಲರಾಯ. ಇದರಿಂದ ಮುಂದೆ ವಿಜಯನಗರ ಪರಿಸರದಲ್ಲಿ ಮುಸ್ಲಿಂ ಧರ್ಮಕ್ಕೆ ಅಡಿಪಾಯ ಹಾಕಿದವನು ಕಂಪಿಲರಾಯನೆ ಹಿಂದೂ ಹಬ್ಬ ಉತ್ಸವಗಳಲ್ಲಿಯೂ ಬಾದುರಖಾನ, ಆತನ ಮಕ್ಕಳು ಪರಿವಾರದವರು ಸಹ ಭಾಗವಹಿಸಿದ್ದುದನ್ನು ಕುಮಾರರಾಮನ ಸಾಂಗತ್ಯಗಳು ದೃಢೀಕರಿಸುತ್ತವೆ. ನಂತರ ಸುಲ್ತಾನನ ಮಗಳು ಬಾಬಮಿ ಕುಮಾರರಾಮನನ್ನು ಮನಸಾರೆ ಪ್ರೀತಿಸಿ ಮದುವೆಯಾಗಲು ಉತ್ಸುಕಳಾಗಿದ್ದುದನ್ನು ಕಂಡು ತಂದೆ ಸುಲ್ತಾನನು ಮಗಳ ಇಚ್ಛೆಯನ್ನು ನೆರವೇರಿಸಲು, ಕುಮಾರರಾಮನನ್ನು ತನ್ನ ಮಗಳು ಬಾಬಮಿಯನ್ನು ಮದುವೆಯಾಗಬೇಕೆಂದು ನಂತರ ಆತನಿಗೆ ದಕ್ಷಿಣ ಭಾರತದ ಪೂರ್ವ ಭಾಗವನ್ನು ಉಡುಗೊರೆಯಾಗಿ ನೀಡುವುದಾಗಿ ಮಾತು ಕೊಡುತ್ತಾನೆ. ಈ ಒಂದು ಕಾರಣ ಮತ್ತು ಬಾದುರಖಾನನನ್ನು ಒಪ್ಪಿಸುವಂತೆ ಕಮ್ಮಟದ ಮೇಲೆ ಯುದ್ಧ ಮಾಡಿದ್ದು, ಈ ಯುದ್ಧಗಳಲ್ಲಿ ಸುಲ್ತಾನನು ೪ (ನಾಲ್ಕು) ಬಾರಿ ಸೋತನು. ಕಾರಣ ಬಾದುರಖಾನನ ಯುದ್ಧ ಪರಿಣತೆ, ಯುದ್ಧ ತಂತ್ರದಲ್ಲಿ ಕುದುರೆಕಲ್ಲುಗಳು ಹಾಗೂ ನುಗ್ಗು ಗಲ್ಲುಗಳ ತಂತ್ರಜ್ಞಾನವನ್ನು ಅಳವಡಿಸಿದುದರಿಂದ ಕುಮ್ಮಟ ದುರ್ಗವನ್ನು ಸುಲ್ತಾನರಿಂದ ಸುಲಭವಾಗಿ ಜಯಿಸುವುದು ಕಷ್ಟವಾಯಿತು. ಈ ಒಂದು ವೈಜ್ಞಾನಿಕ ಯುದ್ಧ ತಾಂತ್ರಿಕ ಕಲೆ ಬಾದುರಖಾನನ ಕೊಡುಗೆಯಾಗಿದೆ. ಕ್ರಿ.ಶ. ೧೩೨೭ರಲ್ಲಿ ನಡೆದ ನಿರ್ಣಾಯಕ ಯುದ್ಧದಲ್ಲಿ ಸುಲ್ತಾನನು ವಿಜಯಿಯಾಗಿ ಕಂಪಿಲನ ರಾಜ್ಯದ ಅವನತಿಯಾಯಿತು. ಆದರೂ ಕಂಪಿಲರಾಯನು ಬಾದುರಖಾನನನ್ನು ಹೊಯ್ಸಳ ಅರಸರ ಮೂರನೆ ಬಲ್ಲಾಳನ ಆಶ್ರಯದಲ್ಲಿರಿಸಿದ್ದು ಇದರಿಂದ ಕಂಪಿಲರಾಯನ ಹಿಂದೂ ಮುಸ್ಲಿಂ ಬಾಂಧವ್ಯದ ಪ್ರತೀಕವಾಗಿದೆ. ತದನಂತರ ದೆಹಲಿ ಸುಲ್ತಾನರ ಮಹಮ್ಮದ್ ಬಿನ್-ತುಘಲಕ್‌ನ ಮಗಳು ಬಾಬಮಿಯನ್ನು ಆಸೆಯ ಮೇರೆಗೆ ಕುಮಾರ ರಾಮನಾಥನನ್ನು ಜೀವಂತವಾಗಿ ಹಿಡಿದು ತರುವಂತೆ ಆಜ್ಞೆ ಮಾಡಿದನಾದರೂ ರಾಮನಾಥನು ಈ ಯುದ್ಧದಲ್ಲಿ ಮಡಿದಿದ್ದರಿಂದ ಬಾಬಮಿ ಆನೆಗಳೊಂದಿಗೆ, ಹಂಪೆಯ ಪರಿಸರಕ್ಕೆ ಬಂದು ಪ್ರಾಣ ನೀಗಿದಳೆಂದು ಸಾಹಿತಿಕ ಗ್ರಂಥಗಳಾದ ಕುಮಾರ ರಾಮನಾಥ ಸಾಂಗತ್ಯದಲ್ಲಿ ಉಲ್ಲೇಖವಾಗಿದೆ. ನಂತರ ಬಾಬಮಿಯ ಹೆಸರಿನಲ್ಲಿ ಸಮಾಧಿ (ಘೋರಿ) ಯನ್ನು ಕಟ್ಟಲಾಯಿತೆಂದು ದೆಹಲಿ ಸುಲ್ತಾನನ ಮಗಳ ಮೇಲಿನ ಪ್ರೀತಿ ಹಾಗೂ ಬಾದುರಖಾನನ ಮೇಲಿನ ದ್ವೇಷದಿಂದ ಕುಮ್ಮಟದ ಮೇಲೆ ಯುದ್ಧ ಮಾಡಬೇಕಾಯಿತೆಂಬ ಅಂಶವನ್ನು ಬಿಟ್ಟರೆ, ಅನ್ಯತಃ ಕಂಪಿಲನ ಮೇಲೆ ವೈರತ್ವವಿರಲಿಲ್ಲವೆಂದು ತಿಳಿದುಬರುತ್ತದೆ. ಈ ಅಂಶವು ವಿಜಯನಗರ ಸ್ಥಾಪನೆಯ ಮೊದಲು ನಡೆದ ಘಟನೆಗಳಿಂದ ಈ ನೆಲದಲ್ಲಿ ಮುಸ್ಲಿಂ ಧರ್ಮ ನೆಲೆಯೂರಿತೆಂದು ಸ್ಪಷ್ಟವಾಗುತ್ತದೆ.

ವಿಜಯನಗರ ಪಟ್ಟಣಕ್ಕೆ ಸಂಬಂಧಿಸಿದಂತೆ ವಿವಿಧ ಧರ್ಮಗಳ ಜನರು ಈ ಪಟ್ಟಣದಲ್ಲಿದ್ದು ಮೂರರು (ಮುಸ್ಲಿಂಮರು) ಪಟ್ಟಣದ ಪೂರ್ವ ಭಾಗದಲ್ಲಿದ್ದರೆಂದು

ವಿದೇಶಿಯರ ಬರಹಗಳು ಈ ಧರ್ಮವಿರುವುದನ್ನು ಪ್ರಚುರ ಪಡಿಸಿವೆ. (ವಿ.ಪಿ.ಆರ್ . ೧೯೭೯-೮೩, ೧೯೮೩-೮೪, ೧೯೮೪-೮೭) ಇಲ್ಲಿ ಧರ್ಮಶಾಲೆ, ಗೋರಿಗಳು, ಮಸೀದಿಗಳು ಇರುವುವು. ಹಾಗೂ ಕಡ್ಡೀ ರಾಮಪುರದಲ್ಲಿರುವ ಬೃಹತ್ ಗ್ಹೋರಿಗಳು, ಒಳಕೋಟೆಯಲ್ಲಿರುವ ಘೋರಿಗಳು ಶಾಸನಗಳು ಈ ಅಂಶವನ್ನು ಎತ್ತಿಹಿಡಿದಿವೆ.

ವಿಜಯನಗರ ಸೈನ್ಯದಲ್ಲಿಯೂ ಮುಸ್ಲಿಂ ಸೈನಿಕರು ಹಾಗೂ ಸೈನ್ಯಾಧಿಕಾರಿಗಳು ಇದ್ದರು. ಈ ದಿಶೆಯಲ್ಲಿ ಕಟ್ಟಿಗೆ ಅಹ್ಮದ್ ಖಾನ್ ಎಂಬ ಸೈನ್ಯಾಧಿಕಾರಿ ದೇವರಾಯರಿಗೆ ಧರ್ಮವಾಗಬೇಕೆಂದು ಕಟ್ಟಿಸಿದ ಧರ್ಮಶಾಲೆ ಮತ್ತು ಬಾವಿ ಆಚಂದ್ರಕರ್ ಸ್ಥಾಯಿಯಾಗಿ ಇರಲೆಂದು ಉಲ್ಲೇಖವಿದೆ. ಈ ಒಂದು ಅಂಶದಿಂದ ವಿಜಯನಗರ ಪಟ್ಟಣ ಹಿಂದೂ-ಮುಸ್ಲಿಂ ಬಾಂಧವ್ಯದ ಸಮನ್ವಯವೆಂದೆ ಹೇಳಬಹುದಾಗಿದೆ. ಈಗಲೂ ಧರ್ಮಶಾಲೆ ಬಾವಿ ಹಾಗೂ ಕಟ್ಟಿಗೆ ಅಹಮ್ಮದ್ ಖಾನನ ಸಮಾಧಿಯನ್ನು ಸಂರಕ್ಷಿಸಲಾಗಿದೆ.

ಕಡೆ ರಾಮಪುರದ ಬಳಿ ಇರುವ ಎರಡು ಘೋರಿಗಳ ಬಳಿ ಇರುವ ಶಾಸನದಲ್ಲಿ ಸುಲ್ತಾನ (ಸುಲಿತಾಣ) ಷಾಯಿದು ಪೀರಿಗೆ ಮತ್ತು ಬಾಬಯನ ಗುಡಿಗೆ ಎಲೆಕುಲು ಧರ್ಮವನ್ನು ಬಿಟ್ಟಿರುವರು.

ಅಹಮ್ಮದ್ ಖಾನ್ ಧರ್ಮಶಾಲೆಯಲ್ಲಿ ಈಶಾನ್ಯಕ್ಕೆ ಹಲವು ಗೋರಿಗಳು ಇರುವವು. ಈ ಗೋರಿಗಳ ಬಳಿಯಲ್ಲಿರುವ ಶಾಸನಗಳಲ್ಲಿ ಗೋರಿಗಳನ್ನು ಕಟ್ಟಿಸಿದ ಕುರಿತಾಗಿದೆ. ಮಿಯಾ ರಾಹುತನ ಘೋರಿ ಹಾಗೂ ದಾದನ ರಾಹುತನ ಘೋರಿಗಳ ಉಲ್ಲೇಖವಿದ್ದು, ಈ ಘೋರಿಗಳನ್ನು ಯಾರು ಹಾಳು ಮಾಡಬಾರದು, ಒಂದು ವೇಳೆಮಾಡಿದರೆ ಮಕ್ಕಾ ತೀರ್ಥದಲ್ಲಿ, ತಾಯಿ ತಂದೆಯರನ್ನು ಕೊಂದ ಪಾಪಕ್ಕೆ ಹೋಗುವರೆಂದಿದೆ.

ಇನ್ನೊಂದು ಶಾಸನವು ಉಲ್ಲೇಖಿಸುವಂತೆ ಅಚ್ಯುತರಾಯನ ಮಗ ಚಿಕ್ಕರಾಯನಿಗೆ ಪುಣ್ಯವಾಗಬೇಕೆಂದು ಶಕಲಜಿ ರಾಹುತನು ಚಿಕ್ಕರಾಯನ ಹೆಸರಿನಲ್ಲಿ ಗುಮ್ಮಟವನ್ನು ಕಟ್ಟಿಸಿದ್ದಾನೆ.

ಕ್ರಿ.ಶ. ೧೪೧೨ರಲ್ಲಿ ಹೊಸಪೇಟೆಯಲ್ಲಿ ಕಟ್ಟಿಸಿದ ಗುಮ್ಮಟ ಈ ಪರಿಸರದಲ್ಲಿ ಕಟ್ಟಿದ ಅತ್ಯಂತ ದೊಡ್ಡ ಗುಮ್ಮಟವಾಗಿದೆಯೆಂದು ಡಾ. ಜಾರ್ಜ್ ಮಿಶೆಲರವರು ಅಭಿಪ್ರಾಯಪಡುತ್ತಾರೆ. ಇಲ್ಲಿ ಎರಡು ಗುಮ್ಮಟಗಳಿವೆ. ಗುಮ್ಮಟ ಸುಸ್ತಿಯಲ್ಲಿದೆ.

ನಲ್ಲಾಪುರದ ಬಳಿಯಲ್ಲಿ ಒಂದು ಚಿಕ್ಕದಾದ ಗುಮ್ಮಟವಿದೆ.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಈ ಪರಿಸರದಲ್ಲಿ ಅಂದರೆ ವಿಜಯನಗರ ಕಾಲಾವಧಿಯಲ್ಲಿ ಇಸ್ಲಾಂ ಧರ್ಮವೂ ಬಾಳಿ ಬೆಳಗಿತ್ತು ಎಂಬ ಅಂಶವು ಕಂಡುಬರುತ್ತದೆ. ಐತಿಹಾಸಿಕವಾಗಿ ಈ ಅಂಶಗಳನ್ನು ಗಮನಿಸಿದಾಗ ಕೃಷ್ಣದೇವರಾಯನು ಬಿಜಾಪುರದಲ್ಲಿ ಸುಲ್ತಾನನ ಮಗನಿಗೆ ಪಟ್ಟಗಟ್ಟಿದ್ದು. ವಿಜಯನಗರದ ಅರಸರು ಮುಸ್ಲಿಂ ದ್ವೇಷಿಗಳಾಗಿರಲಿಲ್ಲವೆಂದು ಅಭಿಪ್ರಾಯ ಪಡಬಹುದಾಗಿದೆ.

ಡೋಮಿಂಗೊ ಪಾಯೆಸನ ಉಲ್ಲೇಖದಂತೆ ಮೂರರ ಮನೆಗಳು ವಿಜಯನಗರ ಪಟ್ಟಣದಲ್ಲಿರುವ ಮುಖ್ಯ ಬೀದಿಯ ತುದಿಯಲ್ಲಿದ್ದವೆಂದು ಇದು ನಗರದ ಆಚಿನ ಭಾಗವಾಗಿತ್ತು ಎಂದಿದ್ದಾರೆ. ಮೂರರಲ್ಲಿ ಅನೇಕ ಜನರು ರಾಜನ ಅಂಗರಕ್ಷಕರಾಗಿ ಮತ್ತು ಸೈನಿಕರಾಗಿ, ಸೈನ್ಯಾಧಿಕಾರಿಗಳಾಗಿಯೂ ವಿಜಯನಗರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆಂದು ಉಲ್ಲೇಖವಿದೆ.

ಇಲ್ಲಿ ಇರುವ ಘೋರಿಗಳ ಮೇಲಿರುವ ಶಿಲೆಗಳ ಮೇಲೆ ಖುರಾನಿನ ಶ್ಲೋಕಗಳನ್ನು ಬರೆಯಲಾಗಿದೆ.

ಶಿವಪುರದ ಬಳಿ ಇರುವ ಶಾಸನದಲ್ಲಿ ನಾಗಪ್ಪ ದಣ್ಣಾಯಕರಿಗೆ ಧರ್ಮವಾಗಲೆಂದು ರೇಖಲಖಾನ್ ಎಂಬುವರು ಗದ್ದೆಯನ್ನು ಕೊಟ್ಟ ವಿವರವಿದೆ. ಡಾ. ಆರ್.ಗೋಪಾಲ್, ನಿರ್ದೇಶಕರು, ಪ್ರಾಚ್ಯವಸ್ತು ಸಂಗ್ರಹಾಯಲಗಳ ನಿರ್ದೇಶನಾಲಯ ಹೊಸಪೇಟೆ ಇವರು ಇತ್ತೀಚೆಗೆ ಶಾಸನವನ್ನು ಬೆಳಕಿಗೆ ತಂದಿರುವರು. ಒಟ್ಟಾರೆ ವಿಜಯನಗರ ಕಾಲದಲ್ಲಿ ಮುಸ್ಲಿಂ ಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಹಿಂದೂ ಧರ್ಮದಲ್ಲಿರುವಂತೆ ಗಂಗಾತೀರ್ಥ, ಪಂಪಾತೀರ್ಥದಂತಹ ಪವಿತ್ರ ತೀರ್ಥವೊಂದು ಮುಸ್ಲಿಂ ಧರ್ಮದಲ್ಲಿಯೂ ಇರುವುದನ್ನು ಈ ಪರಿಸರದ ಶಾಸನ ಒಂದು ಉಲ್ಲೇಖಿಸುತ್ತದೆ. ದಾದನ ರಾಹುತನ ಗುಮ್ಮಟವನ್ನು ಹಾಳು ಮಾಡಿದವರು "ಮಕ್ಕಾತೀರ್ಥ"ದಲ್ಲಿ ತಮ್ಮ ತಾಯಿ ತಂದೆಯವರನ್ನು ಕೊಂದ ಪಾಪಕ್ಕೆ ಹೋಗುವರೆಂದಿದೆ. ಇದರಿಂದ ಮಕ್ಕಾದಲ್ಲಿರುವ ತೀರ್ಥವು ಮುಸ್ಲಿಂ ಧರ್ಮದವರಿಗೆ ಪವಿತ್ರವಾದುದಾಗಿತ್ತೆಂಬುದು ಇಲ್ಲಿನ ಅಭಿಪ್ರಾಯವಾಗಿದೆ. ಕಡೇ ರಾಮಪುರದಲ್ಲಿನ ಶಾಸನ ಕ್ರಿ.ಶ. ೧೫೦೦ರಲ್ಲಿ ಸೈದು ಪೀರು ಅಲಿ ಮಕ್ಕಳು ಅಬೂಮಗ ಮುರದ ಎಂಬುವರು ಬಾಬಯ (ಬಾಬಮು)ನ ಗುಡಿಯನ್ನು ಕಟ್ಟಿಸಿ, ಮಾಹುವರಗಳನ್ನು ಕೊಟ್ಟು, ಸೇವೆಯನ್ನು ಮಾಡಿದರೆಂದು ಉಲ್ಲೇಖವಿದೆ. ಇದರಿಂದ ಈ ಗುಮ್ಮಟ ಮಸೀದಿಯನ್ನು ಕಟ್ಟಿಸಿದ್ದರು ಎಂದು ಸ್ಪಷ್ಟವಾಗಿದೆ.

ವಿಜಯನಗರದಲ್ಲಿರುವ ಮುಸ್ಲಿಂ ಧರ್ಮದ ಶಾಸನಗಳಲ್ಲಿ ಕಂಡುಬರುವ ಒಂದು ಮುಖ್ಯ ಅಂಶವೆಂದರೆ ಇವರು ಮುಸ್ಲಿಂರಾದರೂ ಹಿಂದೂ ಧರ್ಮದ ಅಂಶಗಳನ್ನು ತಮ್ಮ ಶಾಸನದಲ್ಲಿ ಅಳವಡಿಸಿರುವುದು ಪ್ರಮುಖ ಅಂಶ.

ಶುಭಮಸ್ತು, ಸ್ವಸ್ತಿಶ್ರೀ ಜಯಾ ಬ್ಯುದ್ಯಶಾಲಿವಾಹನ ಶಕೆ ವರ್ಷ, ಸಂವತ್ಸರ ಮಾಸ, ತಿಥಿ, ವಾರ ಮತ್ತು ಇಲ್ಲಿನ ಅರಸರ ಹೆಸರುಗಳು ಹಾಗೂ ಶಾಪಭಾಗದಲ್ಲಿ ತಂದೆ ತಾಯಿಗೆ ತಪ್ಪಿರುವರು, ಗುರುವಿಗೆ ತಪ್ಪಿದವರು ಎಂದಿದೆ, ಕೊನೆಯಲ್ಲಿ (ಅಂತ್ಯದಲ್ಲಿ) ಮಂಗಳ ಮಹಾಶ್ರೀ ಎಂದು ಉಲ್ಲೇಖಿಸಲಾಗಿದೆ.

ಹಿಂದೂಗಳಾದ ಬಸವ ಮತ್ತು ರಾಮನಾಯಕನು ಮಿಯಾ ರಾಹುತೆಗೆ ಪುಣ್ಯವಾಗ ಬೇಕೆಂದು ಮೀಯಾ ರಾಹುತನ ಹೆಸರಿನಲ್ಲಿ ಯಿಂಬುಗೋರಿ (ಸಮಾಧಿಗೋರಿ) ಮಜಾರ,

ಮಸೀದಿಯನ್ನು ಕಟ್ಟಿಸಿದರೆಂದು ಉಲ್ಲೇಖವಿದೆ. ವಿಜಯನಗರ ಕಾಲದಲ್ಲಿದ್ದ ಹಿಂದೂ ಮುಸ್ಲಿಂ ಬಾಂಧವ್ಯಕ್ಕೆ ಇದೊಂದು ಕೈಗನ್ನಡಿಯಂತಿದೆ.

ಅಂದಿನ ಕಾಲದಲ್ಲಿಯೂ ಗುಮ್ಮಟಗಳ ಒಳಗೆ ಅಗೆತಮಾಡುವ ಕಳ್ಳರಿದ್ದಾರೆಂದು ಇಂತಹ ಕಾರ್ಯಗಳನ್ನು ಮಾಡಿದವರು. ತಮ್ಮ ತಂದೆ ತಾಯಿಯನ್ನು "ಮಖಾತೀರ್ಥದಲ್ಲಿ" ಕೊಂದ ಪಾಪಕ್ಕೆ ಹೋಗುವರೆಂದು, ಇದು "ಕಲಾಬನಾಣಿ" ಹಾಗೂ ಮುಂದಿನ ಜನ್ಮದಲ್ಲಿ ಹಂದಿ ಹಾಗೂ ನಾಯಿಯ ಬಸಿರಲ್ಲಿ ಹುಟ್ಟುವರೆಂದು ಶಾಸನದ ಶಾಪ ಭಾಗದಲ್ಲಿದೆ. ಗೋರಿ ಕೆಳಗಣ ಮಾಗಣಿ, ಗೋರಿ ಮಾಗಣಿ ಎಂಬ ಸ್ಥಳಸೂಚಕಗಳು ಶಾಸನಗಳಲ್ಲಿವೆ. ಕ್ರಿ.ಶ. ೧೪೩೫ರ ಶಾಸನದಲ್ಲಿ ಗೋರಿ ಕೆಳಗಿನ ಮಾಗಣಿಯನ್ನು ವಿಠಲೇಶ್ವರ ದೇವರ ಅಮೃತಪಡಿ ನೈವೇದ್ಯಕ್ಕೆ ಮಾನ್ಯ ಮಾಡಿರುವರು. ಇದರಿಂದ ಗೋರಿ ಇದ್ದುದರ ಉಲ್ಲೇಖವನ್ನು ಶಾಸನಗಳು ತಿಳಿಸುತ್ತವೆ.

ಅಡಿಟಿಪ್ಪಣಿ

೧. Nagaraja Rao M.S. ೧೯೮೩ Ahmad Khans Dharmasala, VPR- ೧೯೭-೮೩, P. ೫೬೫

೨. George Michell : ೧೯೮೫ Architecture of the Muslim quarters at Vijayanagar, VPR- ೧೯೮೩-೮೪, Pp ೧೦-೧೧೮

೩. SII Vol. IX Par-II, No. ೪೪೭, P.No. ೪೫೭

೪. VPR- ೧೯೮೪-೮೭, No. ೨, ೧೪-೧೫೦, ೨೧೮-೨೨೧

೫. VPR- ೧೯೮೪-೮೭, No. ೧೪೯-೧೫೦

೬. C.S.Patils and Vinodha Patil, ೧೯೯೬ Vijayanagar Inscriptions, Vol. I, No. ೭೩; ೨೭೯, ೨೮೦, ೨೮೨, ೨೮೩, ೧೭೫

೭. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩, ನಂ. ೧೪೯, ೧೫೦

೮. ಮಖಾ ತೀರ್ಥವೆಂದು ಕರೆಯಲ್ಪಡುವ ತೀರ್ಥವು ಮಕ್ಕಾದ ಮಹಾಮಸೀದಿ ಸಮೀಪವಿದ್ದು ಇದನ್ನು "ಅಬೇಜಂಜಂ" ಎಂದು ಅರಬ್ಬಿ ಭಾಷೆಯಲ್ಲಿ ಕರೆಯುತ್ತಾರೆ. ಇಲ್ಲಿನ ನೀರನ್ನು ಅತ್ಯಂತ ಪವಿತ್ರವೆಂದು ಭಾವಿಸಲಾಗಿದೆ. ಈ ತೀರ್ಥದ ಉಲ್ಲೇಖವನ್ನು ಹಂಪೆಯ ಶಾಸನಗಳಲ್ಲಿ ಕಾಣಬಹುದಾಗಿದೆ.

❖ ❖

೧೬

ಕೃಷ್ಣದೇವರಾಯನ ಹೊಸ ಅಗ್ರಹಾರದ ಅಪ್ರಕಟಿತ ತಾಮ್ರಶಾಸನ

ಡಾ. ಎನ್ .ಹವಳಯ್ಯ

ಇತ್ತೀಚೆಗೆ ನಾನು ಯುಜಿಸಿ ವತಿಯಿಂದ ಪ್ರಧಾನ ಸಂಶೋಧನೆ ಕಾರ್ಯಕ್ರಮದಡಿಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಈ ತಾಮ್ರಶಾಸನ ದೊರಕಿತು. ಅದನ್ನು ತಂದು ಪರೀಕ್ಷಿಸಿದ ನಂತರ ಅದೊಂದು ಅಪ್ರಕಟಿತವೆಂದು ತಿಳಿದುಬಂದಿತು. ಆದುದರಿಂದ ಈ ಶಾಸನವನ್ನು ಈ ಸಭೆಯಲ್ಲಿ ಮೊಟ್ಟಮೊದಲ ಬಾರಿಗೆ ವಿದ್ವಾಂಸರ ಗಮನಕ್ಕೆ ತರುತ್ತಿದ್ದೇನೆ.

ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲೂಕಿನ ಹೊಸ ಅಗ್ರಹಾರ ಗ್ರಾಮದಲ್ಲಿ ಕೃಷ್ಣನಾಯಕ ಎಂಬ ರೈತ ತನ್ನ ಹೊಲದಲ್ಲಿ ನೀರಿಗಾಗಿ ಬಾವಿ ತೋಡುತ್ತಿದ್ದಾಗ ಭೂಮಟ್ಟದಿಂದ ಸುಮಾರು ಒಂಭತ್ತುವರೆ ಅಡಿ ಆಳದಲ್ಲಿ ದೊರಕಿತು. ಇದರಲ್ಲಿ ಐದು ತಾಮ್ರದ ಹಲಗೆಗಳಿವೆ. ತಾಮ್ರದ ಬಳೆಯಿದೆ. ಅದರ ಮೇಲೆ ವರಾಹ ಮುದ್ರೆಯಿದೆ. ಈ ಮುದ್ರೆಯಲ್ಲಿ ವರಾಹ ಎಂಬ ನಾಗರೀ ಲಿಪಿಯ ಬರಹ ಮತ್ತು ಸೂರ್ಯ-ಚಂದ್ರರಿದ್ದಾರೆ. ಒಂದನೆ ಹಲಗೆಯ ಸ್ವಲ್ಪ ಭಾಗ ನಾಲ್ಕನೆಯ ಹಲಗೆಯ ಹಿಂಭಾಗ ಮತ್ತು ಐದನೆಯ ಹಲಗೆಯ ಬಹುಭಾಗ ಸವೆದುಹೋಗಿದೆ.

ಇದು ಸಂಸ್ಕೃತ ಮತ್ತು ಕನ್ನಡ ಭಾಷೆಯ ಶಾಸನ. ಮೊದಲನೆಯ ೧೩೫ ಪಂಕ್ತಿಗಳು ಸಂಸ್ಕೃತ ಭಾಷೆಯಲ್ಲಿದ್ದರೆ, ಉಳಿದ ಪಂಕ್ತಿಗಳು ಕನ್ನಡದಲ್ಲಿವೆ. ಶಾಸನವು ಪೂರ್ಣವಾಗಿ ನಂದಿನಾಗರಿ ಲಿಪಿಯಲ್ಲಿದೆ. ಕೊನೆಯಲ್ಲಿ ಶ್ರೀ ವಿರೂಪಾಕ್ಷ ಎಂಬ ದೊರೆಯ ಅಂಕಿತ ಮಾತ್ರ ಕನ್ನಡ ಲಿಪಿಯಲ್ಲಿದೆ. ಈ ಶಾಸನ ವಿಜಯನಗರ ದೊರೆ ಕೃಷ್ಣದೇವರಾಯನಿಗೆ ಸೇರಿದ್ದಾಗಿದ್ದು, ಶಾಸನದಲ್ಲಿ ಕಾಲದ ಪೂರ್ಣ ವಿವರಗಳಿವೆ. ಅದೇನೆಂದರೆ ಶಾಲಿವಾಹನಶಕ

೧೪೫೦ ಸರ್ವಧಾರಿ ಸಂವತ್ಸರ ವೈಶಾಖ ಸೂರ್ಯಗ್ರಹಣ. ಇದು ಕ್ರಿ.ಶ. ೧೫೨೮ ಮೇ ತಿಂಗಳು ೧೮ನೆಯ ದಿನಕ್ಕೆ ಸಮನಾಗುತ್ತದೆ. ಆದಿನ ಸೋಮವಾರ.

ಶ್ರೀ ಗಣಾಧಿಪತೆಯೇ ನಮಃ ಎಂದು ಶಾಸನ ಆರಂಭವಾಗಿ ನಮಸ್ತುಂಗ ಶಿರಶ್ಚುಂಬಿ ಎನ್ನುವ ಶ್ಲೋಕದೊಡನೆ ಮುಂದುವರಿದು, ಹರೇರ್ಲೀಲಾ ವರಾಹಸ್ಯ ಎನ್ನುವ ಶ್ಲೋಕದೊಡನೆ ಪ್ರಾರ್ಥನೆ ಮುಗಿಯುತ್ತದೆ. ಆ ನಂತರದ ೧೬ ಸಾಲುಗಳು ಸವೆದು ಹೋಗಿರುವುದರಿಂದ ವಂಶಾವಳಿಯ ವಿವರಗಳು ತಿಳಿಯುವುದಿಲ್ಲ. ೨೬ನೆಯ ಸಾಲಿನಲ್ಲಿ ಕೃಷ್ಣರಾಯ ಮಹೀಪತಿ ಎಂದು ಹೇಳಿದ್ದು ಅವನು ರಾಜ್ಯವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಕೃಷ್ಣರಾಯನು ವಿರೂಪಾಕ್ಷ, ಕಾಲಹಸ್ತಿ, ಕಾಂಚಿ, ಶ್ರೀಶೈಲ, ಅಹೋಬಲ, ಸಂಗಮ, ಶ್ರೀರಂಗ, ಕುಂಭಕೋಣ, ಮಹಾನಂದಿ, ಗೋಕರ್ಣ, ರಾಮಸೇತು ಮುಂತಾದ ಪುಣ್ಯಕ್ಷೇತ್ರಗಳಿಗೆ ಮಹಾದಾನಗಳನ್ನು ಕೊಟ್ಟು ಪುಣ್ಯಕಾರ್ಯಗಳನ್ನು ಮಾಡಿದ್ದನೆಂದು ತಿಳಿಸುತ್ತದೆ. ಆನಂತರ ಕೃಷ್ಣದೇವರಾಯನ ಬಿರುದಾವಳಿಗಳನ್ನು ತಿಳಿಸುತ್ತದೆ. ಇವುಗಳಲ್ಲಿ ಹೊಸವಿಷಯಗಳೇನೂ ಕಾಣಬರುವುದಿಲ್ಲ.

ಇವಿಷ್ಟೂ ಆದನಂತರ ೭೩ನೆಯ ಸಾಲಿನಿಂದ ಶಾಸನದ ಕೊನೆಯವರೆಗೆ ಕೃಷ್ಣದೇವರಾಯನು ಪ್ರಸ್ತುತ ದಾನಮಾಡಿದ ವಿವರಗಳನ್ನು ತಿಳಿಸುತ್ತದೆ. ಮೇಲೆ ಹೇಳಿದ ಶುಭದಿನದಲ್ಲಿ ತುಂಗಭದ್ರಾ ತೀರದಲ್ಲಿ ಶ್ರೀ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಸೋಮನಾಥಪುರ ಸೀಮೆಗೆ ಸೇರಿದ ಹೊಸಹಳ್ಳಿ ಗ್ರಾಮಕ್ಕೆ ಕೃಷ್ಣರಾಯಪುರ ಎಂದು ಹೆಸರನ್ನು ಕೊಟ್ಟು ಆ ಗ್ರಾಮವನ್ನು ೩೪ ವೃತ್ತಿಗಳಾಗಿ ವಿಭಾಗಿಸಿ ವಿವಿಧ ಗೋತ್ರ ಹಾಗೂ ಸೂತ್ರಗಳಿಗೆ ಸೇರಿದ ಪಂಡಿತ ಬ್ರಾಹ್ಮಣರಿಗೆ, ಈ ವೃತ್ತಿಗಳನ್ನು ದಾನಮಾಡಿದ ವಿವರಗಳಿವೆ. ಒಟ್ಟು ೨೩ ವೇದವಿದರಾದ ಬ್ರಾಹ್ಮಣರಿಗೆ ಈ ದಾನಗಳನ್ನು ಕೊಟ್ಟನು. ಅವರ ಹೆಸರುಗಳು ಇಂತಿವೆ. ವಿರೂಪಾಕ್ಷ ಭಟ್ಟರ ಮಗನಾದ ಅಗಸ್ತ್ಯ ಗೋತ್ರದ ಬಹೃಚ್ಚರಣ ಶಾಖೆಯ ಮಗಾಭಟ್ಟನಿಗೆ ಮಾತ್ರ ೧೨ ವೃತ್ತಿಗಳನ್ನು ನೀಡಲಾಗಿದೆ. ಮಿಕ್ಕ ೨೨ ಬ್ರಾಹ್ಮಣರಿಗೆ ಪ್ರತಿಯೊಬ್ಬರಿಗೂ ಒಂದು ವೃತ್ತಿಯನ್ನು ನೀಡಲಾಗಿದೆ. ಅದರ ವಿವರಗಳು ಹೀಗಿವೆ :

ವ್ಯಕ್ತಿ	ತಂದೆ	ಗೋತ್ರ	ಸೂತ್ರ	ಶಾಖೆ	ವೃತ್ತಿ
ಕುಕ್ಕೆನಾಥ	ದೇವರೇ ದೀಕ್ಷಿತ	ವಿಶ್ವಾಮಿತ್ರ	ಬೋಧಾಯನ	----	೧
ದೇವರೇಭಟ್ಟ	ಯಜ್ಞೇಶ್ವರ	ಶಾಂಡಿಲ್ಯ	" - "	ಸಾಮ	೧
ಸಾಯಭಟ	ಕಾಶೀಭಟ್ಟ	ಮೌನಭಾರ್ಗವ	" - "	ಬಹೃಚ	೧
ನಾರಸಿಂಹ	ನಾರಸಿಂಹ	ಮೌನಭಾರ್ಗವ	" - "	ಬಹೃಚ	೧
ಸುಬ್ರಹ್ಮಣ್ಯ	ನೃಹರಿ	ಹರಿತ	" - "	ಬಹೃಚ	೧
ನಂಜಿನಾಥ	ದೇವಪಾಧ್ವರಿ	ಆತ್ರೇಯ	" - "	ಬಹೃಚ	೧
ಸಂಗುಭಟ್ಟ	ನಾಗುಪಾಧ್ಯಾಯ	ಭಾರದ್ವಾಜ	" - "	ಬಹೃಚ	೧
ಚೆಲ್ವಾಜ್ಯೋತಿಷಿ	ಸುಬ್ರಹ್ಮಣ್ಯ	ಕೌಸಿಕ್	" - "	ಯಾಜುಷ	೧

ರಾಮಾಜ್ಯೋತಿಷಿ	ನಂಜಿನಾಥ	ಮೌನಭಾರ್ಗವ	"-"	ಬಹೃಚ	೧
ದಿವಾಕರಭಟ್ಟ	ಚೌಡಿಭಟ್ಟ	ಮೌನಭಾರ್ಗವ	"-"	ಬಹೃಚ	೧
ಗೋಪಿನಾಥಭಟ್ಟ	ಚೆನ್ನಿಭಟ್ಟ	ಅಗಸ್ತ್ಯ	"-"	ಯಾಜುಷ	೧
ಸಂಗುಭಟ್ಟ	ತಿಂಮಾಭಟ್ಟ	ಸಂಕೃತಿ	"-"	ಯಾಜುಷ	೧
ಲಖ್ಖಿಯ	ವಿರೂಪಾಕ್ಷಭಟ್ಟ	ಸ್ವಕಪಿ	"-"	ಬಹೃಚೋ	೧
ಲಕ್ಷ್ಮೀನೃಸಿಂಹ	ವಿರೂಪಾಕ್ಷಭಟ್ಟ	ಭಾರದ್ವಾಜ	"-"	ಯಾಜುಷ	೧
ತಿರುಪತಿಕಾಮಪ್ಪ	ಲಕ್ಷ್ಮಣಾಧ್ವಂ	ಗಾರ್ಗ್ಯ	"-"	ಯಾಜುಷ	೧
ಭೈರವ	ಗೌರಿಭಟ್ಟ	ಕಾಶ್ಯಪ	"-"	ಯಾಜುಷ	೧
ವಿರೂಪಾಕ್ಷಭಟ್ಟ	ಹರಿಭಟ್ಟ	ಕಾಶ್ಯಪ	"-"	ಬಹೃಚ	೧
ಸುಬ್ರಹ್ಮಣ್ಯ	ಚೌಡಿಭಟ್ಟ	ವಿಶ್ವಾಮಿತ್ರ	"-"	ಬಹೃಚ	೧
ನಂಜಿನಾಥ	ನಂಜಿನಾಥ	ಕೌಶಿಕ	"-"	ಯಾಜುಷ	೧
ಸುಬ್ರಹ್ಮಣ್ಯ	ಲಕ್ಷ್ಮೀಕಾಂತ	ಭಾರದ್ವಾಜ	"-"	ಬಹೃಚ	೧
ಮಗಾಭಟ್ಟ	ವಿರೂಪಾಕ್ಷಭಟ್ಟ	ಅಗಸ್ತ್ಯ	"-"	ಬಹೃಚ	೧೨
ಹರಿ	ದೇವರು				೧
ಹರ					೧
				ಒಟ್ಟು	೩೪

ಒಟ್ಟಿನಲ್ಲಿ ಈ ತಾಮ್ರಶಾಸನ ರಾಜಕೀಯವಾಗಿ ಹೊಸ ವಿಷಯಗಳನ್ನು ತಿಳಿಸದೇ ಇದ್ದರೂ, ಹೊಸಹಳ್ಳಿ ಗ್ರಾಮದಲ್ಲಿ ವೇದಶಾಸ್ತ್ರ ಪಾರಂಗತವಾದ ಬ್ರಾಹ್ಮಣರು ನೆಲೆಸಿದ್ದು ವಿದ್ಯಾಭ್ಯಾಸದಲ್ಲಿ ನಿರತರಾಗಿದ್ದ ವಿಷಯವನ್ನು ತಿಳಿಸುತ್ತದೆ. ಈ ದಾನವನ್ನು ಕೊಟ್ಟನಂತರ ಕಾಲಕ್ರಮದಲ್ಲಿ ಇದೇ ಹೊಸಹಳ್ಳಿ ಗ್ರಾಮವನ್ನು ಹೊಸ ಅಗ್ರಹಾರವೆಂದು ಕರೆದಿರಬೇಕು ಎಂದು ತೋರುತ್ತದೆ. ಇದಕ್ಕೆ ಸಮೀಪದಲ್ಲಿರುವ ಈಗಿನ ಸೋಮನಾಥಪುರವೇ ಇದಾಗಿರಬೇಕು. ಒಟ್ಟಿನಲ್ಲಿ ಇದೊಂದು ವಿಜಯನಗರದ ಶ್ರೀಕೃಷ್ಣದೇವರಾಯನ ಅಪ್ರಕಟಿತ ಹೊಸ ಶಾಸನ.

ಶಾಸನಪಾಠ

ಒಂದನೆಯ ಹಲಗೆಯ ಹಿಂಭಾಗ

೧. ಶ್ರೀ ಗಣಾಧಿಪತಯೇ ನಮಃ। ನಮಸ್ತುಂಗ ಶಿರಶ್ಚುಂದಿ ಚಂದ್ರಚಾಮರಚಾರ

೨. ವೇ। ತ್ರೈಲೋಕ್ಯ (ನಗರಾ) ರಂಭ ಮೂಲಸ್ತಂಭಾಯ ಶಂಭವೇ। ಹರೇರ್ಲೀಲಾ

೩. ವರಾಹಸ್ಯ (ದಂಷ್ಟ್ರಾ) ದಂಡಸ್ಸ ಪಾತು ವಃ। ಹೇಮಾದ್ರಿಕಲಶಾ ಯತ್ರ ಧಾ

೪. ತ್ರೀಛತ್ರಶ್ರಿಯಂ ದಧೌ। ಕಲ್ಯಾಣಾಯಾಸ್ತು ತದ್ಧಾಮಪ್ರತ್ಯೂಹತಿಮಿ

೫. ರಾಪಹಂ। ಯದ್ಗಜೋ (ಪ್ಯಗಜೋದ್ಭೂತಂ) ಹರಿಣಾಪಿ ಚಪೂಜ್ಯತೇ। ಅಸ್ತಿ

೬. ಕ್ಷೀರಮಯಾದ್ವೇ..... ಬುಧೇನವನೀತಮಿವೋದ್ಭೂತ
೭. ಮಪನೀತತಮೋ (ಮಹಃ)... ಸೀತನಯಸ್ತಪೋಭಿರತುಲ್ಯೈರನ್ವ
೮. ರ್ಥನಾಮಾಬುಧಃ ....
೯- ೨೫ (ಸವೆದಿದೆ)

ಎರಡನೆಯ ಹಲಗೆಯ ಮುಂಭಾಗ

೨೬. ಣಾವಿವ ನಂದನೌ| ಜಾತೌ ವೀರನೃಸಿಂಹೇಂದ್ರ ಕೃಷ್ಣರಾಯಮಹೀಪತೀ| ವೀ
೨೭. ರಶ್ರೀನಾರಸಿಂಹಸ್ಸವಿಜಯನಗರೇ ರತ್ನಸಿಂಹಾಸನಸ್ಥಃ ಕೀರ್ತ್ಯಾ
೨೮. ನೀತ್ಯಾನಿರಸ್ಯ ನೃಗನಲನಹುಷಾನಪ್ಯವನ್ಯಾಮಥಾನ್ಯಾನ್ | ಆಸೇ
೨೯. ತೋರಾಸುಮೇರೋರವನಿಸುರನುತಃ ಸ್ವೈರಮಾಚೋದಯಾದ್ರೇರಾಪಾಶ್ಚಾ
೩೦. ದ್ಯಾಚಲಾಂತಾದಖಿಲ ಹೃದಯಮಾವರ್ಜ್ಯ ರಾಜ್ಯಂಶಶಾಸ| ನಾನಾದಾನಾ
೩೧. ನ್ಯಕಾರ್ಷೀತ್ಕನಕಸದಸಿಯಃ ಶ್ರೀವಿರೂಪಾಕ್ಷ ದೇವಸ್ಥಾನೇಶ್ರೀಕಾಲಹಸ್ತೀ
೩೨. ಶಿತುರಪಿನಗರೇ ವೇಂಕಟಾದ್ರೌಚ ಕಾಂಚ್ಯಾಂ| ಶ್ರೀಶೈಲೇಶೋಣಶೈಲೇ ಮಹತಿ ಹ
೩೩. ರಿಹರೇಹೋಬಲೇ ಸಂಗಮೇ ಚ| ಶ್ರೀರಂಗೇ ಕುಂಭಘೋಣೇ ಹತ ತಮಸಿ ಮಹಾನಂದಿ
೩೪. ತೀರ್ಥೇ ನಿವೃತ್ತೌ| ಗೋಕರ್ಣೇ ರಾಮಸೇತೌ ಜಗತಿ ತದಿತರೇಷ್ವಶೇಷೇಷು ಪು
೩೫. ಣ್ಯಸ್ಥಾನೇಷ್ವಾರಬ್ಧ ನಾನಾವಿಧ ಬಹಲ ಮಹಾದಾನವಾರಿಪ್ರವಾಹೈಃ| ಯಸ್ಯೋ
೩೬. ದಂಚ್ಚತುರಂಗ ಪ್ರಕರಖುರರಜಃ ಶುಷ್ಯದಂಬೋಧಿ ಮಗ್ನ ಕ್ಷ್ಮಾ ಭೃತ್ಪಕ್ಷಚ್ಛಿದೋ
೩೭. ದ್ಯತ್ತರ ಕುಲಿಶಧರೋತ್ಕಂಠಿತಾ ಕುಂಠಿತಾಭೂತ್ | ಬ್ರಹ್ಮಾಂಡಂ ವಿಶ್ವಚಕ್ರಂಘ
೩೮. ಟಮುದಿತ ಮಹಾಭೂತಕಂ ರತ್ನಧೇನುಂ ಸಪ್ತಾಂಬೋಧಿಂ ಚ ಕಲ್ಪಕ್ಷಿತಿರು
೩೯. ಹಲತಿಕೇ ಕಾಂಚನೀಂ ಕಾಮಧೇನು| ಸ್ವರ್ಣಕ್ಷ್ಮಾ ಯೋ ಹಿರಣ್ಯಶ್ವರಥಮಪಿ
೪೦. ತುಲಾಪೂರುಷಂ ಗೋಸಹಸ್ರಂ ಹೇಮಾಶ್ವಂ ಹೇಮಗರ್ಭಂ ಕನ(ಕ*) ಕರಿರಥಂ ಪಂಚ
೪೧. ಲಾಂಗಲ್ಯತಾನೀತ್ | ಪ್ರಾಜ್ಯಂ ಪ್ರಶಾಸ್ಯ ನಿರ್ವಿಘ್ನಂ ರಾಜ್ಯಂ ದ್ಯಾಮಿವ ಶಾ
೪೨. ಸಿತುಂ| ತಸ್ಮಿನ್ಗುಣೇನ ವಿಖ್ಯಾತೇ ಕ್ಷಿತೇರಿಂದ್ರೇ ದಿವಂಗತೇ| ತತೋಪ್ಯವಾ
೪೩. ರ್ಯವೀರ್ಯ ಶ್ರೀಕೃಷ್ಣರಾಯ ಮಹೀಪತಿಃ ಬಿಭರ್ತಿಮಣಿಕೇಯೂರನ್ನಿರ್ವಿ
೪೪. ಶೇಷಂ ಮಹೀಭುಜೇ| ಕೀರ್ತ್ಯಾಯಸ್ಯ ಸಮಂತತಃ ಪ್ರಸೃತಯಾ ವಿಶ್ವಂ ರು
೪೫. ಚೈಕ್ಯಂ ವ್ರಜೇದಿತ್ಯಾಶಂಕ್ಯ ಪುರಾಪುರಾರಿರಭವದ್ಭಾಲೇಕ್ಷಣಃ ಪ್ರಾಯಶಃ
೪೬. ಪದ್ಮಾಕ್ಷೋಪಿ ಚತುರ್ಭುಜೋಜನಿ ಚತುರ್ವಕ್ತ್ರೋಭವತ್ಪದ್ಮಭೂಃ| ಕಾಲೀಖಡ್ಗ
೪೭. ಮಧಾದ್ರಮಾ ಚ ಕಮಲಂ ವೀಣಾಂಚ ವಾಣೀಕರೇ| ಶತ್ರೂಣಾಂ ವಾಸುಮೇತೇ ದದತ
೪೮. ಇತಿ ರುಷಾ ಕಿಂನು ಸಪ್ತಾಂಬುರಾಶೀನ್ನಾನಾ ಸೇನಾ ತುರಂಗ ತ್ರುಟಿತ ವಸುಮ
೪೯. ತೀ ಧೂಲಿಕಾ ಪಾಲಿಕಾಭಿಃ ಸಂಶೋಷ್ಯ ಸ್ವೈರಮೇತತ್ ಪ್ರತಿನಿಧಿ ಜಲ
೫೦. ಧಿ ಶ್ರೇಣಿಕಾ ಯೋ ವಿಧತ್ತೇ| ಬ್ರಹ್ಮಾಂಡಂ ಸ್ವರ್ಣಮೇರು ಪ್ರಮುಖ ನಿಜಮಹಾದಾ

೫೧. ನತೋಯಮೌರಮೇಯ್ಯೈ| ಮದ್ದತ್ತಾಮರ್ಥಿಸಾರ್ಥಾಃಶ್ರಿಯಮಿಹ ಸುಚಿರಂ ಭುಂಜ
೫೨. ತಾಮಿತ್ಯವೇತ್ಯಪ್ರಾಯಃ ಪ್ರತ್ಯೂಹಹೇತೋಸ್ತಪನರಥಗತೇರಾಲಯಂ
೫೩. ದೇವತಾನಾಂ| ತತ್ತದ್ದಿಗ್ಗೈತ್ರವೃತ್ಯಾಪಿಚ ಬಿರುದಪದ್ಯೈರಂಕಿತಾಂ ಸ್ತ
೫೪. ತ್ರತತ್ರ ಸ್ತಂಭಾಂ ಜಾತಪ್ರತಿಷ್ಠಾನ್ಯತನುತ ಭುವಿ ಯೋ ಭೂಭೃದಭ್ರಂ

ಎರಡನೆಯ ಹಲಗೆಯ ಹಿಂಭಾಗ

೫೫. ಕಷಾಗ್ರಾನ್ | ಕಾಂಚೀಶ್ರೀಶೈಲ ಶೋಣಾಚಲ ಕನಕಸಭಾ ವೇಂಕಟಾ.
೫೬. ದ್ರಿಪ್ರಮುಖ್ಯೇಷ್ವಾವರ್ತ್ಯಾವರ್ತ್ಯ ಸರ್ವೇಷ್ವತನುತ ವಿಧಿವದ್ಭೂಯಸೇ ಶ್ರೇ
೫೭. ಯಸೇ ಯಃ| ದೇವಸ್ಥಾನೇಷು ತೀರ್ಥೇಷ್ವಪಿ ಕನಕತುಲಾಪೂರುಷಾದೀ
೫೮. ನಿ ನಾನಾದಾ (ನಾ) ನ್ಯೈರ್ವೋಪದಾನ್ಯೈರಪಿ ಸಮಮಖಿಲ್ಯೈರಾಗಮೋಕ್ತಾ
೫೯. ನಿತಾನಿ| ರೋಷಕೃತಪ್ರತಿಪಾರ್ಥಿವದಂಡಃ ಶೇಷಭುಜಃ ಕ್ಷಿತಿರ
೬೦. ಕ್ಷಣಶೌಂಡಃ| ಭಾಷೆಗೆ ತಪ್ಪುವರಾಯರಗಂಡ (ಃ) ಸ್ತೋಷಕೃದರ್ಥಿಷು
೬೧. ಯೋ ರಣಚಂಡಃ| ರಾಜಾಧಿರಾಜ ಇತ್ಯುಕ್ತೋ ಯೋರಾಜಪರಮೇಶ್ವರಃ|
೬೨. ಮೂರುರಾಯರಗಂಡಶ್ಚ ಪರರಾಯಭಯಂಕರಃ| ಹಿಂದುರಾಯಸುರ (ತ್ರಾ *)
೬೩. ಣೋ ದುಷ್ಟಶಾರ್ದೂಲ (ಮರ್ದ)ನಃ| ವೀರಪ್ರತಾಪ ಇತ್ಯಾದಿ ಬಿರುದೈ ರುಚಿತೈರ್ಯು
೬೪. ತಃ| ಆಲೋಕಯ ಮಹಾರಾಯ ಜಯಜೀವೇತಿ ವಾದಿಭಿಃ| ಅಂಗವಂಗ
೬೫. ಕಲಿಂಗಾದ್ಯೈ ರಾಜಭಿಃ ಸೇವ್ಯತೇಚಯಃ| ಸ್ತುತೌದಾರ್ಯಃಸುಧೀ
೬೬. ಭಿಸ್ಸವಿಜಯನಗರೇ ರತ್ನಸಿಂಹಾಸನಸ್ಥಃ| ಕ್ಷ್ಮಾಪಾಲಾನ್
೬೭. ಕೃಷ್ಣರಾಯ ಕ್ಷಿತಿಪತಿರಧರೀಕೃತ್ಯ ನೀತ್ಯಾ ನೃಗಾದೀನ್ |
೬೮. ಆಪೂರ್ವಾದ್ರೇರಥಾಸ್ತ ಕ್ಷಿತಿಧರಕಟಕಾದಾಚ ಹೇಮಾಚಲಾ (ನ್ *)
೬೯. ತಾದಾಸೇತೋರರ್ಥಿಸಾರ್ಥ ಶ್ರಿಯಮಿಹಬಹಲೀಕೃತ್ಯಕೀರ್ತ್ಯಾ ಸಮಿಂ
೭೦. ಧೇ| ಶಾಲಿವಾಹನ ನಿರ್ಣಿತೇಶಕಾಬ್ದೇ ದಶಭೀ ಶತ್ಯೈಃ ಚತುರ್ಭಿ
೭೧. ಶ್ಚಶತ್ಯೈಃ ಪಂಚಾಶತಾಚ ಗಣಿತೇ ಕ್ರಮಾತ್ | ಸರ್ವಧಾರ್ಯಾಹ್ವ
೭೨. ಯೇ ವರ್ಷೇ ಮಾಸಿ ವೈಶಾಖ ನಾಮನಿ| ಸೂರ್ಯೋಪರಾಗ ಸಮಯೇ ಪುಣ್ಯ
೭೩. ದರ್ಶೇ ದಿನೇ ಶುಭೇ| ತುಂಗಭದ್ರಾಪಗಾ ತೀರೇ ಶ್ರೀವಿರೂಪಾಕ್ಷಸ
೭೪. ನ್ನಿಧೌ| ನಾನಾ ಶಾಖಾಭಿಧಾಗೋತ್ರಸೂತ್ರೇಭ್ಯಃ ಶಾಸ್ತ್ರವಿತ್ತಯಾ
೭೫. ವಿಖ್ಯಾತೇಭ್ಯೋ ದ್ವಿಜಾತಿಭ್ಯೋ ವೇದವಿದ್ಭ್ಯೋ ವಿಶೇಷತಃ| ನಶ್ಶ್ರೀ
೭೬. ಪುರರಾಜ್ಯಾಂತವರ್ತ್ತಿತಾಂ ಸಮುಪಾಶ್ರಿತಂ| ಸೋಮನಾಥಪು
೭೭. ರಾಖ್ಯಾಯಾಂ ಸೀಮಾಯಾಂ ವಾಸಾಮಾಶ್ರಿತಂ| ಗ್ರಾಮಾದ್ಧನುಮನಹ
೭೮. ಲ್ಯಾಖ್ಯಾಪ್ರಾಚೀಮಾಶಾಮುಪಾಶ್ರಿತಂ| ಗ್ರಾಮಾತ್ಸುಗ್ಗನಹ
೭೯. ಲ್ಯಾಖ್ಯಾದ್ದಕ್ಷಿಣಾಮಾಶ್ರಿತಂ ದಿಶಂ| ಗ್ರಾಮಾದೆಯಪ್ಪಹಲ್ಯಾಖ್ಯಾ

೮೦. ಪಶ್ಚಿಮಾಯಾಂ ದಿಶಿ ಸ್ಥಿತಂ| ಗ್ರಾಮಾಂಗದ್ಬೊಮ್ಮನಹಲ್ಯಾಶ್ಚೋ
೮೧. ತ್ತರಾಂ ದಿಶಮಾಶ್ರಿತಂ| ಕೃಷ್ಣರಾಯಪುರಶ್ಚೇತಿನಾಮ

ಮೂರನೆಯ ಹಲಗೆಯ ಮುಂಭಾಗ

೮೨. ಸಮಶ್ರಿತಂ| ಹೊಸಹಲ್ಲ್ಯಾ ದ್ವಯಂ ಗ್ರಾಮಂ ಹರ್ಯಾಬಲ್ಲೀಸ
೮೩. ಮನ್ವಿತಂ| ಸರ್ವಮಾನ್ಯ ಚತುಃಸೀಮಾ ಸಂಯುತಂ ಚ ಸಮಂತ
೮೪. ತಃ| ನಿಧಿನಿಕ್ಷೇಪಾಷಾಣ ಸಿದ್ಧಸಾಧ್ಯ ಜಲಾನ್ವಿ
೮೫. ತಂ| ಸಹಿರಣ್ಯಾಗಾಮಿ ಸಂಯುಕ್ತಂ ಗಣಭೋಗ್ಯ ಸಭೂರು
೮೬. ತಂ| ವಾಪೀಕೂಪತಟಾಕೈಶ್ಚ ಕಚ್ಛೇನಾಪಿ ಸಮನ್ವಿತಂ
೮೭. ಪುತ್ರಪೌತ್ರಾದಿಭಿರ್ಭೋಗ್ಯಂ ಕ್ರಮಾದಾಚಂದ್ರ ತಾರಕಂ| ದಾ
೮೮. ನಸ್ಯಾಧಮನಸ್ಯಾಪಿ ವಿಕ್ರಯಸ್ಯಾಪಿಚೋಚಿತಂ| ಪ
೮೯. ರೀತಃ ಪ್ರಯತ್ನೈಃ ಸ್ನಿಗ್ಧೈಃ ಪುರೋಹಿತ ಪುರೋಗಮೈಃ| ವಿವಿ
೯೦. ಧೈರ್ವಿಬುಧ್ಯೈಃಶ್ರೌತಪಥಿಕೈರಧಿಕೈರ್ಗಿರಾ| ಕೃಷ್ಣದೇ
೯೧. ವರಾಯಮಹಾರಾಯೋ ಮಾನನೀಯೋ ಮನಸ್ವಿನಾಂ| ಸಹಿರಂಣ್ಯ
೯೨. ಪಯೋ ಧಾರಾಪೂರ್ವಕಂ ದತ್ತವಾನ್ಮು ದಾ| ಗ್ರಾಮಕೇಸ್ಮಿನ್ ಚ
೯೩. ತು(ಃ) ಸ್ತ್ರೀಂಶದ್ವೃತ್ತಿಕೇ ಧರಣೀಸುರಾಃ| ವೃತ್ತಿಮಂತೋ ವಿಲಿ
೯೪. ಖ್ಯಂತೇ ಸರ್ವಶಾಸ್ತ್ರಾಬ್ಧಿಪಾರಗಾಃ| ವಿಶ್ವಾಮಿತ್ರಾನ್ವಯೋದ್ಭೂ
೯೫. ತೋ ದೇವರೇದೀಕ್ಷಿತಾತ್ಮಜಃ| ಕುಕ್ಕೆ(೧) ನಾಥಸುಧೀರೇಕಾಂ
೯೬. ವೃತ್ತಿಂ ಬೋಧಾಯನೋಶ್ನುತೇ| ಯಜ್ಞೇಶ್ವರಸುಧೀಸ್ಸೂನು ಶಾಂ
೯೭. ಡಿಲ್ಯಾನ್ವಯ ಸಂಭವಃ| ಸಾಮಕೋ ದೇವರೇಭಟ್ಟೋ ವೃತ್ತಿ
೯೮. ಮೇಕಾಮಿಹಾಶ್ನುತೇ| ಕಾಶೀಭಟ್ಟಾತ್ಮಜೋ ಧೀಮಾನ್ಮಾ
೯೯. ನಭಾರ್ಗವಗೋತ್ರಜಃ| ಬಹೃಚಃ ಸಾಯಿಭಟ್ಟಾಖ್ಯೋ ವೃತ್ತಿ
೧೦೦. ಮೇಕಾಮಿಹಾಶ್ನತೇ| ನಾರಸಿಂಹ ಸುಧೀಸೂನು ಮೌನಭಾರ್ಗ
೧೦೧. ವಗೋತ್ರಜಃ| ಬಹೃಚೋ ನಾರಸಿಂಹಾಖ್ಯೋವೃತ್ತಿಮೇಕಾಮಿ
೧೦೨. ಹಾಶ್ನುತೇ| ಸೂನುರ್ನೃಹರಿಭಟ್ಟಾಖ್ಯ ಬಹೃಚೋ ಹರಿತಾನ್ವ
೧೦೩. ಯಃ| ಸುಬ್ರಹ್ಮಣ್ಯಾಹ್ವಯಃ ಸೂರಿರ್ವೃತ್ತಿಮೇಕಾಮಿಹಾಶ್ನುತೇ| ಆ
೧೦೪. ತ್ರೇಯಗೋತ್ರಸಂಭೂತೋ ದೇವಪಾಧ್ವರಿನಂದನಃ| ಬಹೃಚೋ ನಂ
೧೦೫. ಜಿನಾಥಾಖ್ಯೋ ವೃತ್ತಿಮೇಕಾಮಿಹಾಶ್ನುತೇ| ಭಾರದ್ವಾಜಾನ್ವ

ಮೂರನೆಯ ಹಲಗೆಯ ಹಿಂಭಾಗ

೧೦೬. ಯೋದ್ಭೂತೋ ನಾಗುಪಾಧ್ಯಾಯನಂದನಃ| ಸಂಗುಭಟ್ಟಾಹ್ವಯೋತ್ರೈಕಾಂ ವೃತ್ತಿ

೧೦೭. ಮಾಪ್ನೋತಿ ಬಹ್ವೃಚಃ| ಸುಬ್ರಹ್ಮಣ್ಯಸುಧೀಸೂನುರ್ಯಾಜುಷಃ ಕೌಸಿಕಾ
೧೦೮. ನ್ವಯಃ| ಚೆಲ್ವಾಜ್ಯೋತಿಷಿಕೋ ಧೀಮಾನ್ವೃತ್ತಿಮೇಕಾಮಿಹಾಶ್ನುತೇ| ಮೌನ
೧೦೯. ಭಾರ್ಗವಗೋತ್ರ ಶ್ರೀ ನಂಜಿನಾಥಸುಧೀಸುತಃ| ರಾಮಾಜ್ಯೋತಿಕೋ
೧೧೦. ತ್ರೈಕಾಂ ವೃತ್ತಿಮಾಪ್ನೋತಿ ಬಹ್ವೃಚಃ| ನಂದನ(ಃ) ಶ್ಚಾಡಿಭಟ್ಟಸ್ಯ ಮೌನ
೧೧೧. ಭಾರ್ಗವಗೋತ್ರಜಃ| ಶ್ರೀದಿವಾಕರಭಟ್ಟಾಖ್ಯೋ ಬಹ್ವೃಚೋತ್ರೈಕ ವೃ
೧೧೨. ತ್ತಿಕಃ| ಅಗಸ್ತ್ಯಗೋತ್ರಜಃ ಸೂನು(ಃ)ಶ್ಚೆನ್ನಿಭಟ್ಟಸ್ಯ ಯಾಜುಷಃ
೧೧೩. ಶ್ರೀಗೋಪಿನಾಥಭಟ್ಟಾಖ್ಯೋ ವೃತ್ತಿಮೇಕಾಮಿಹಾಶ್ನುತೇ| ಸಂಗುಭ
೧೧೪. ಟ್ಟಾಹ್ವಯೋ ಧೀಮಾ ಸ್ತಿಂ ಮಾಭಟ್ಟಸ್ಯ ನಂದನಃ| ಯಾಜುಷೋತ್ರಾಶ್ನು
೧೧೫. ತೇ ವೃತ್ತಿಮೇಕಾಂ ಸಂಕೃತಿಗೋತ್ರಜಃ| ಶ್ರೀ ವಿರೂಪಾಕ್ಷಭಟ್ಟಸ್ಯ
೧೧೬. ಸೂನುಃಸ್ವಕಪಿಗೋತ್ರಜಃ| ಬಹ್ವೃಚೋ ಲಖ್ಖಿಯಾಭಿಖ್ಯೋ ವೃತ್ತಿ
೧೧೭. ಮೇಕಾಮಿಹಾಶ್ನುತೇ| ಲಕ್ಷ್ಮೀನೃಸಿಂಹಭಟ್ಟಾಖ್ಯೋ ಭಾರದ್ವಾ
೧೧೮. ಜಾನ್ವಯೋದ್ಭವಃ| ಯಾಜುಷೋ ಶ್ರೀವಿರೂಪಾಕ್ಷಭಟ್ಟಜೋತ್ರೈಕವೃ
೧೧೯. ತ್ತಿಕಃ| ಲಕ್ಷ್ಮಣಾಧ್ವರಿಣಃ ಸೂನುಃ ಯಾಜುಷೋ ಗಾರ್ಗ್ಯಗೋತ್ರ
೧೨೦. ಜಃ| ಸಹಿತಾನ್ತಿರುಪತ್ಯೇಕಾಲ ವೃತ್ತಿಂ ಕಾಮಪ್ಪನಾಮಕಃ
೧೨೧. ನಂದನೋ ಗೌರಿಭಟ್ಟಸ್ಯ ಯಾಜುಷಃ ಕಾಶ್ಯಪಾನ್ವಯಃ
೧೨೨. .....ನೀಯೀ ಭೈರವಾಭಿಖ್ಯೋವೃತ್ತಿಮೇಕಾಮಿಹಾಶ್ನುತೇ|
೧೨೩. ನಂದನ(ಃ)ಹರಿಭಟ್ಟಸ್ಯ ಬಹ್ವೃಚಃ ಕಾಶ್ಯಪಾನ್ವಯಃ
೧೨೪. ಶ್ರೀವಿರೂಪಾಕ್ಷಭಟ್ಟಾಖ್ಯೋ ವೃತ್ತಿಮೇಕಾಮಿಹಾಶ್ನು
೧೨೫. ತೇ| ನಂದನ(ಃ)ಶ್ಚಾಡಿಭಟ್ಟಸ್ಯವಿಶ್ವಾಮಿತ್ರಾನ್ವಯೋದ್ಭವಂ
೧೨೬. ಸುಬ್ರಹ್ಮಣ್ಯಾನ್ವಯೋತ್ರೈಕಾಂ ವೃತ್ತಿಂ ಬೋಧಾಯನೋಶ್ನುತೇ|
೧೨೭. ನಂಜಿನಾಥ ಸುಧೀಸೂನು ನಂಜಿನಾಥೋಮಹಾಮ
೧೨೮. ತಿಃ| ಅತ್ರೈಕಾಮಶ್ನುತೇ ವೃತ್ತಿಂ ಯಾಜುಷಃ ಕೌಶಿಕಾನ್ವ
೧೨೯. ಯಃ| ಭಾರದ್ವಾಜಾನ್ವಯೋದ್ಭೂತೋ ಲಕ್ಷ್ಮೀಕಾಂತಸುಧೀಸುತಃ|

ನಾಲ್ಕನೆಯ ಹಲಗೆಯ ಮುಂಭಾಗ

೧೩೦. ಸುಬ್ರಹ್ಮಣ್ಯಾಹ್ವಯೋ ಧೀಮಾನ್ಬಹ್ವೃಚೋತ್ರೈಕವೃತ್ತಿಕಃ|
೧೩೧. ಶ್ರೀವಿರೂಪಾಕ್ಷಭಟ್ಟಸ್ಯ ನಂದನೋಗಸ್ತ್ಯಗೋತ್ರಜಃ (೧)
೧೩೨. ಮಗಾಭಟ್ಟಾಹ್ವಯೋ ವೃತ್ತೀರ್ದ್ವಾದಶಾತ್ರೈತಿ ಬಹ್ವೃಚಃ|
೧೩೩. ಸುರಾಸುರಶಿರೋರತ್ನ ರಂಜಿತಾಪ್ಘ್ರೇರನಾರತಂಹ
೧೩೪. ರೇರೇಕಾಹರಸ್ಯೇ ವೃತ್ತಿರತ್ರಸಮರ್ಪಿತಾ| ಗ್ರಾಮ
೧೩೫. ಸ್ಯಾಸ್ಯೈವ ಸೀಮ್ಯಾನೋದಿಹು ಪ್ರಾಚ್ಯಾದಿಷು ಕ್ರಮಾತ್ | ಭತ್ತಚ್ಚೆ

೧೩೬. ಹ್ನ ಸಮಾಯುಕ್ತಾ ಲಿಖ್ಯತೇ ದೇಶಭಾಷಯಾ| ಸೀಮವಲೆಯವಿವ
೧೩೭. ರ| ಮೂಡ(ಣಸ್ಯ) ತಘ(ಬಂ)ದಲ್ಲಿಯ ಪಡವಣ ದೊಡ್ಡತೆವಕ ಅಲ್ಲಿ ಆ
೧೩೮. ಗ್ನೇಯದಲ್ಲಿ ಕರಿಯಮೊರಿಡಿ ಅಲ್ಲಿಂದ ಗದ್ದೆಯ ಮೇರು. ಅಲ್ಲಿಂ
೧೩೯. ದ ಆಗ್ನೇಯ ಮಾಸ್ತಿಯಾಲ| ಅಲ್ಲಿಂದ ತೆಂಕಲು ಬೊಮನಹ
೧೪೦. ಲ್ಲಿಯ ಬಡಗ ಸೊಪಿನತೋಟದ ಬೇಲಿ| ಅಲ್ಲಿಂದ ತೆಂಕ ಅ
೧೪೧. ಲ್ಲಿಂದ ತೆವರ ಬೊಬ್ಬುಲಿಯ ಮರ| ಅಲ್ಲಿಂದ ಕಂಗುಟ್ಟೆಯತೆಂ
೧೪೨. ಕಣ ಕೋಡಿಪರಿಯಂತರ ಗದ್ದೆ ಮಕವೆ ಅಲ್ಲಿಂದ ಕಂಗುಟ್ಟೆ
೧೪೩. ಯ ಬಡಗಣ ಕೋಡಿಗದ್ದೆಮೋರು (ಅ *)ಲ್ಲಿಂದ ಪಡುವ ಕೋಡೀ
೧೪೪. ಸಾರಿಗಂತ ಯಲ್ಲೆಕಲ್ಲು ಅಲ್ಲಿಂದ ನೈರೃತ್ಯ ಕಾಕ
೧೪೫. ನ ಹಲ್ಲಿಯ ಕೆರ್‍ರೆಯ ಬಡಗಣ ಕೋಡಿ ಅಲ್ಲಿಂದ
೧೪೬. ಪಡುಹ(O)ಗಲು| ಅಲ್ಲಿಂದ ಬಡಗಲು ಕರಿಯ ಮೊ
೧೪೭. ರಡಿ ಅಲ್ಲಿಂದ ವಾಯವ್ಯ ಸಟ್ಟೆಯ ಕೆರ್ಕಿಯ ಬೋಲು
೧೪೮. ಅರ್ರೆಯ ಕರಿಯ ಮೊರಡಿ ಅಲ್ಲಿಂದ ವಾಯಾವ್ಯ
೧೪೯. (ಬಾಂದೊ)ಗಲ್ಲು| ಅಲ್ಲಿಂದ ಮೂಡಲು ಸುಗನಹ
೧೫೦. ಲ್ಲಿಯ ಯಲ್ಲೆಕಲ್ಲು| ಯೆಲ್ಲೆಕಲಿಂ ಮೂಡಲು ನಂ

ನಾಲ್ಕನೆಯ ಹಲಗೆಯ ಹಿಂಭಾಗ

(ಸವೆದಿದೆ)

ಐದನೆಯ ಹಲಗೆಯ ಮುಂಭಾಗ


(ಸವೆದಿದೆ)

೧೫೧. ....ತೇ ರಾಮಚಂದ್ರಃ
ಶ್ರೀವಿರೂಪಾಕ್ಷ (ಕನ್ನಡ ಅಕ್ಷರಗಳಲ್ಲಿ)


ಕೃತಜ್ಞತೆಗಳು

ಈ ಲೇಖವನ್ನು ಬರೆಯಲು ಸಹಕರಿಸಿದ ಪ್ರೊ. ಎ.ವಿ.ನರಸಿಂಹಮೂರ್ತಿಯವರಿಗೆ ನನ್ನ ನಮನಗಳು.

ಈ ಶಾಸನವನ್ನು ಓದುವಲ್ಲಿ ಸಹಕರಿಸಿದ ಶ್ರೀ ಹೆಚ್.ಎಂ.ನಾಗರಾಜರಾವ್ ರವರಿಗೆ ನನ್ನ ಕೃತಜ್ಞತೆಗಳು. ಮತ್ತು ಇದರ ಅಚ್ಚು ತೆಗೆಯಲು ಸಹಕರಿಸಿದ ಶಾಸನಶಾಸ್ತ್ರ ನಿರ್ದೇಶನಾಲಯ, ಮೈಸೂರು ವಿಭಾಗದ ಉಪನಿರ್ದೇಶಕರಾದ ಶ್ರೀ ಡಿ.ಎಂ.ನಾಗರಾಜ ಅವರಿಗೂ ಸಹ ನನ್ನ ಕೃತಜ್ಞತೆಗಳು.



ಶ್ರೀ ಕೃಷ್ಣದೇವರಾಯನ ಕಾಲದ ತಾಮ್ರ ಶಾಸನ



ಶ್ರೀ ಕೃಷ್ಣದೇವರಾಯನ ಕಾಲದ ತಾಮ್ರ ಶಾಸನ

೧೭

ಮುಂಡರಗಿ ತಾಲೂಕಿನ ವಿಜಯನಗರ ಕಾಲದ ರಾಜಕೀಯ ಇತಿಹಾಸ, ಧಾರ್ಮಿಕ ಕಟ್ಟಡಗಳು ಮತ್ತು ಶಿಲ್ಪಗಳು

ಡಾ. ರು.ಮ.ಷಡಕ್ಷರಯ್ಯ
ಕು.ವನಜಾಕ್ಷಿ ಎನ್.ಭರಮಗೌಡರ

ಗದಗ ಜಿಲ್ಲೆಯ ಮುಂಡರಗಿ ತಾಲೂಕು ತನ್ನದೇ ಆದ ಪ್ರಾಚೀನ ಕಾಲದ ಇತಿಹಾಸವನ್ನು ಒಳಗೊಂಡಿದೆ. ಈ ತಾಲೂಕು ಪುರಾತತ್ವ ದೃಷ್ಟಿಯಿಂದಲೂ, ದೇವಾಲಯ, ಶಾಸನಗಳ ಶೋಧನೆ ಮತ್ತು ಅಧ್ಯಯನಗಳ ದೃಷ್ಟಿಯಿಂದ ಹೆಚ್ಚು ಮಹತ್ವವಾದ ಪ್ರದೇಶವಾಗಿದೆ. ತಾಲೂಕಿನಾದ್ಯಂತ ಇರುವ ಕೆಲವು ದೇವಾಲಯಗಳು ಮತ್ತು ಶಿಲಾಶಾಸನಗಳು ಆಗಲೇ ಬೆಳಕನ್ನು ಕಂಡಿವೆ. ಅನೇಕ ವಿದ್ವಾಂಸರು, ಇತಿಹಾಸ ಆಸಕ್ತರು ಈ ಪ್ರದೇಶದ ಕುರಿತಾಗಿ ವಿಭಿನ್ನ ಲೇಖನಗಳನ್ನು ಬರೆದಿದ್ದಾರೆ. ಈ ಎಲ್ಲ ಪುರಾತತ್ವ ಆಧಾರಗಳಿಂದ ಮುಂಡರಗಿ ತಾಲೂಕಿನ ಪ್ರಾಚೀನ ಇತಿಹಾಸವನ್ನು ರಚಿಸಲು ಸಾಧ್ಯವಾಗಿದೆ. ಈ ಹಿಂದೆ ಮುಂಡರಗಿ ಪ್ರದೇಶ ಮಾಸವಾಡಿ-೧೪೦ ಎಂಬ ಪ್ರಾಚೀನ ಆಡಳಿತ ಕೇಂದ್ರವಾಗಿದ್ದಿತು. ಮುಂಡರಗಿ ಪ್ರದೇಶದ ರಾಜಕೀಯ ಇತಿಹಾಸವನ್ನು ಅಲೋಕಿಸಿದಾಗ ರಾಷ್ಟ್ರಕೂಟರಿಂದ ಹಿಡಿದು ವಿಜಯನಗರ ಕಾಲದ ಅನೇಕ ಅರಸರ ಶಾಸನಗಳು ಲಭ್ಯವಾಗಿದೆ.[೧] ವಿಜಯನಗರ ಸಾಮ್ರಾಜ್ಯ ಕ್ರಿ.ಶ. ೧೩೩೬ ರಿಂದ ೧೫೬೫ ರವರೆಗೆ ಸುಮಾರು ೨೨೦ ವರ್ಷಗಳ ಬಹುದೀರ್ಘವಾದ ಅವಧಿಯವರೆಗೆ ಆಳ್ವಿಕೆಯನ್ನು ನಡೆಸಿತು. ಆಗ ಈ ಪ್ರದೇಶವು ಅದರ ಅಧೀನದಲ್ಲಿತ್ತು. ವಿಜಯನಗರ ಅರಸರ ಕಾಲದ ಶಾಸನಗಳು ಲಭ್ಯವಾಗಿದ್ದರೂ ಅವುಗಳಲ್ಲಿ ಅರಸರ

ಹೆಸರುಗಳನ್ನು ಪ್ರಸ್ತಾಪಿಸಲಾಗಿಲ್ಲ. ಬದಲಿಗೆ ಕೆಲ ಅಧಿಕಾರಿಗಳ ಹೆಸರುಗಳಿವೆ. ಕಾಲಮಾನ ಹಾಗೂ ಲಿಪಿಯ ಆಧಾರದಿಂದ ವಿಜಯನಗರ ಕಾಲದವುಗಳೆಂದು ಊಹಿಸಬಹುದಾಗಿದೆ.[೨] ಈ ಶಾಸನಗಳ ಆಧಾರದಿಂದ ಈ ಪ್ರದೇಶದ ವಿಜಯನಗರ ರಾಜಕೀಯ ಇತಿಹಾಸವನ್ನು ವಿವೇಚಿಸಲಾಗಿದೆ. ಜೊತೆಗೆ ಈ ಪ್ರದೇಶದಲ್ಲಿ ಇವರ ಕಾಲದ ಕೋಟೆ, ಕೆಲವು ಧಾರ್ಮಿಕ ಕಟ್ಟಡಗಳು, ಲೌಕಿಕ ಶಿಲ್ಪಗಳು ಕಾಣಿಸಿವೆ. ಕಂಡುಬಂದಿರುವ ಅನೇಕ ಶಿಲ್ಪಗಳ ಕಲಾ ಇತಿಹಾಸವನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

ರಾಜಕೀಯ ಇತಿಹಾಸ

ಕ್ರಿ.ಶ. ೧೪೦೪ರ ಶಾಸನವೊಂದು ಮುಂಡರಗಿಯಿಂದ ಸುಮಾರು ೩೫ ಕಿ.ಮೀ. ದೂರದಲ್ಲಿಯ ಬ್ಯಾಗಿನಕೇರಿ ಗ್ರಾಮದ ಕೆರೆಯ ತೂಬಿನ ಹತ್ತಿರವಿದ್ದು, ಇದರಲ್ಲಿ ಚಿಕ್ಕಣ್ಣ ಉಪಾಧ್ಯಾಯನ ಮಗ ಗೋಪಣ್ಣ ಮೂವತ್ತು ಪ್ರತಾಪಗಳನ್ನು ವ್ಯಯಿಸಿ ಕೆರೆಗೆ ತೂಬನ್ನು ನಿರ್ಮಿಸಿದನೆಂಬ ಉಲ್ಲೇಖವಿರುವುದು.[೩] ಈ ಶಾಸನದಲ್ಲಿ ಉಲ್ಲೇಖವಾಗಿರುವ ಗೋಪಣ್ಣ ಎಂಬುವವನು ವಿಜಯನಗರ ಅರಸನಾದ ಇಮ್ಮಡಿ ಹರಿಹರನ ಅಧಿಕಾರಿಯಾಗಿದ್ದಿರಬಹುದು. ಏಕೆಂದರೆ ಮೊದಲನೇ ಬುಕ್ಕರಾಯ ಅಧಿಕಾರದಲ್ಲಿದ್ದಾಗ ಇವನ ಮಗನಾದ ಕಂಪಣ್ಣನು ಮಧುರೆಗೆ ಮುತ್ತಿಗೆ ಹಾಕಿದಾಗ ಸಾಳುವ ಮಂಗೂ, ಮಂತ್ರಿಯಾದ ಗೋಪಣ್ಣ ಅವನಿಗೆ ನೆರವಾದನು ಮತ್ತು ಗೋಪಣ್ಣ ಇಮ್ಮಡಿ ಹರಿಹರನ ಅವಧಿಯಲ್ಲೂ ಮಂತ್ರಿಯಾಗಿದ್ದಿರಬಹುದು. ಆದ್ದರಿಂದ ಕ್ರಿ.ಶ. ೧೩೭೯ರ ತಾಮ್ರಪಟ ಶಾಸನವೊಂದರ ಪ್ರಕಾರ ಡಂಬಳ ಹಾಗೂ ಇತರ ೬೬ ಗ್ರಾಮಗಳು ವಿಜಯನಗರದ ೨ನೆಯ ಹರಿಹರನ ಆಳ್ವಿಕೆಗೆ ಒಳಪಟ್ಟಿದ್ದವೆಂದು ತಿಳಿಯುತ್ತದೆ.[೪]

ಮುಷ್ಟಿಕೊಪ್ಪ ಗ್ರಾಮದ ವೆಂಕಟೇಶ್ವರ ದೇವಾಲಯದ ಎದುರಿನ ಕಂಬದ ಮೇಲಿನ ಶಾಸನವು ಕ್ರಿ.ಶ. ೧೫೩೨ರ ಕಾಲಮಾನದಾಗಿದ್ದು,[೫] ಬಾರಿಕರ ಬಿಲ್ಲವೀರನು ದಾನ ನೀಡಿದ ವಿಷಯವಿದೆ. ಆದರೆ ಶಾಸನ ಅಸ್ಪಷ್ಟವಾಗಿದೆ. ಜ್ಯಾಲವಾಡಗಿ ಗ್ರಾಮದ ಕ್ರಿ.ಶ. ೧೬ನೆಯ ಕಾಲಮಾನದ ಶಾಸನದಲ್ಲಿ[೬] ಚಿಕ್ಕವೀರಣ್ಣನಿಗೆ ಚಿನ್ನದ ಕಾಣಿಕೆಯನ್ನು ನೀಡಿರುವ ಬಗ್ಗೆ ಉಲ್ಲೇಖವಿದೆ. ಬಾಗೇವಾಡಿಯ ವೀರಪ್ಪ ಮಾಚನೂರವರ ಹೊಲದಲ್ಲಿ ಇರುವ ಶಾಸನದಲ್ಲಿ ಪರುಸನಾಯಕನಿಂದ ಕೂಲಬಾಗೇವಾಡಿಯಲ್ಲಿ ಬಸಣ್ಣಗೌಡನಿಗೆ ಭೂದಾನ ನೀಡಿದ ವಿಷಯವಿದೆ. ಹೀಗೆ ವಿಜಯನಗರ ಅರಸರ ಉಲ್ಲೇಖ ಈ ಪ್ರದೇಶದ ಶಾಸನಗಳಲ್ಲಿ ಕಂಡುಬಂದಿಲ್ಲ. ಆದ್ದರಿಂದ ಶಾಸನಗಳ ಕಾಲಮಾನ ಲಿಪಿಯ ಆಧಾರದ ಮೇಲೆ ಅರ್ಥೈಸಿಕೊಳ್ಳಬಹುದಾಗಿದೆ.

ಧಾರ್ಮಿಕ ಕಟ್ಟಡಗಳು ಹಾಗೂ ಶಿಲ್ಪಗಳು

ಮುಂಡರಗಿ ಪ್ರದೇಶದ ಪ್ರಾಚೀನ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಧಾರ್ಮಿಕ

ಕಟ್ಟಡಗಳು ಮತ್ತು ಶಿಲ್ಪಗಳು ಹಾಗೂ ಅದರ ಸಮಕಾಲೀನ ಮುಸ್ಲಿಂ ಸ್ಮಾರಕಗಳು ಸಂಪೂರ್ಣವಾಗಿ ಕಂಡುಬಂದಿಲ್ಲವಾದರೂ ಕೆಲವೊಂದು ಧಾರ್ಮಿಕ ಕಟ್ಟಡಗಳಲ್ಲಿ ವಿಜಯನಗರ ವಾಸ್ತುಶೈಲಿಯ ಪ್ರಭಾವವನ್ನು ಕಾಣುತ್ತೇವೆ. ಅವುಗಳಲ್ಲಿ ಗೋಣಿಬಸಪ್ಪ ಮಠ, ತೋಂಟದಾರ್ಯ ಮಠ, ಮುಷ್ಟಿಕೊಪ್ಪದ ವೆಂಕಟೇಶ ದೇವಾಲಯ ಪ್ರಮುಖವಾಗಿವೆ.

ವೀರಶೈವ ಮಠಗಳು

ಗೋಣಿಬಸಪ್ಪಮಠ

ಮುಂಡರಗಿ ತಾಲೂಕಿನ ಒಂದು ವೀರಶೈವ ಮಠ ಗುಮ್ಮಗೋಳದ ಗೋಣಿಬಸಪ್ಪ. (ಚಿತ್ರ ಸಂಖ್ಯೆ ೧-೩) ಈ ಮಠವನ್ನು ಗೋಣಿಬಸಪ್ಪ ಎಂಬ ಪವಾಡ ಪುರುಷರು ನಿರ್ಮಿಸಿದ್ದಾರೆಂದು ಸ್ಥಳಿಕರು ಹೇಳುವರು. ಈ ಗೋಣಿಬಸಪ್ಪನವರು ಮೂಲತಃ ಹರಪನಹಳ್ಳಿಯಲ್ಲಿ ನೆಲೆಸಿದವರು. ಈ ಕಾಲದ ಅವರ ಮೂಲ ಮಠವು ದಾವಣಗೇರಿ ಜಿಲ್ಲೆಯ ಹರಪನಹಳ್ಳಿಯ ತಾಲೂಕಿನ ಕೂಲಹಳ್ಳಿಯಲ್ಲಿದೆ. ಅವರು ಈ ಪ್ರದೇಶದ ಪಂಚಗಣಾಧೀಶ್ವರರಾದ ಕೊಟ್ಟೂರೇಶ್ವರ, ಬಸವೇಶ್ವರ, ತಿಪ್ಪೇಸ್ವಾಮಿ, ಕೆಂಪಯ್ಯಾ, ಕೋಲಶಾಂತಾ ಮತ್ತು ಗೋಣಿಬಸವೇಶ್ವರರಲ್ಲಿ ಒಬ್ಬರು. ಈ ಪಂಚಗಣಾಧೀಶ್ವರರು ಬಳ್ಳಾರಿ, ದಾವಣಗೆರೆ ಚಿತ್ರದುರ್ಗ ಜಿಲ್ಲೆ ಪ್ರದೇಶಕ್ಕೆ ಆಗಮಿಸಿ ತಮ್ಮ ಪವಾಡಗಳನ್ನು ತೋರಿಸಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಪ್ರತಿಯೊಬ್ಬರ ಕುರಿತು ಸ್ಥಳ ಪುರಾಣಗಳಿವೆ. ಕೊಟ್ಟೂರಿನಲ್ಲಿ ಕೊಟ್ಟೂರೇಶ್ವರ ಹರಪನಹಳ್ಳಿಯಲ್ಲಿ ಕೆಂಪಯ್ಯ, ಅರಸೀಕೆರೆಯಲ್ಲಿ ಕೋಲಶಾಂತೇಶ, ತಿಪ್ಪೇಸ್ವಾಮಿ ನಾಯಕನಹಟ್ಟಿಯಲ್ಲಿ ಮತ್ತು ಗೋಣಿಬಸವೇಶ್ವರ ಕೂಲಹಳ್ಳಿಯಲ್ಲಿ ನೆಲೆಸಿ ವೀರಶೈವ ಧರ್ಮವನ್ನು ಉದ್ಧಾರಗೊಳಿಸಿದರೆಂದು ಸ್ಥಳೀಯ ಪುರಾಣಗಳಿಂದ ತಿಳಿದುಬರುತ್ತದೆ. ಈ ಎಲ್ಲ ಐದು ಸ್ಥಳಗಳಲ್ಲಿ ಈ ಪಂಚಗಣಾಧೀಶ್ವರರ ಭವ್ಯವಾದ ಮಠಗಳಿವೆ. ಆದರೆ ಒಬ್ಬ ಗಣಾಧೀಶ್ವರನ ಹೆಸರಿನಲ್ಲಿ ಎರಡೂ ಕಡೆಗಳಲ್ಲಿ ಸಮಕಾಲೀನವಾಗಿ ಕಟ್ಟಿದ ಮಠಗಳಲ್ಲಿ ಕೇವಲ ಗೋಣಿಬಸವೇಶ್ವರರದು ಮಾತ್ರ ಕಾಣುತ್ತದೆ.

ವಾಸ್ತು

ಈ ಮಠದ ವಿಸ್ತೀರ್ಣ ಸುಮಾರು ೫೦ ಮೀಟರ್ ಉದ್ದ, ೮ ಮೀಟರ್ ಅಗಲವಿದೆ. ಅದರ ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ, ಅರ್ಧಮಂಟಪ, ಕಲ್ಯಾಣಿ, ಸಭಾಮಂಟಪ ಹಾಗೂ ಸುಂದರವಾದ ಗೋಪುರವನ್ನು ಒಳಗೊಂಡ ಪ್ರವೇಶದ್ವಾರವಿದೆ. ಸಂಪೂರ್ನ ಇಟ್ಟಿಗೆ, ಗಾರೆಯನ್ನು ಬಳಸಿ ನಿರ್ಮಿಸಿರುವ ಈ ಮಠದ ಒಳ ಆವರಣದಲ್ಲಿರುವ ಸ್ತಂಭಗಳು ವೈವಿಧ್ಯಮಯವಾಗಿವೆ.

ಈ ಮಠದ ಗರ್ಭಗೃಹದಲ್ಲಿ ಗೋಣಿಬಸವೇಶ್ವರರ ಗದ್ದುಗೆ ಇರುವುದು, ಅದರ ಮೇಲೆ ಪೀಠವನ್ನು ಹೊಂದಿದ ಶಿವಲಿಂಗವಿದೆ. ಗರ್ಭಗೃಹದ ದ್ವಾರಬಂಧವು ೩ ಶಾಖೆಗಳಿಂದ ಕೂಡಿದ್ದು, ಅವುಗಳು ಕ್ರಮವಾಗಿ ವಜ್ರ, ಪುಷ್ಪ, ಅರ್ಧಗಂಭದ ಅಲಂಕಾರಗಳಾಗಿವೆ. ಗರ್ಭಗೃಹದ ಇಕ್ಕೆಲಗಳಲ್ಲಿ ಪೂಜಾ ಗವಿಗಳಿವೆ. ಅವುಗಳಲ್ಲಿ ನಂದಿಯ ವಿಗ್ರಹ ಶಿವಲಿಂಗವಿದೆ. ಪಕ್ಕದಲ್ಲಿಯೇ ಗೋಡೆಯ ಮೇಲೆ ಧ್ಯಾನಮುದ್ರೆಯಲ್ಲಿ ಕುಳಿತ ಶಿಲ್ಪವಿದ್ದು ಇದು ಗೋಣಿಬಸಪ್ಪನವರದಾಗಿರಬಹುದು. ಈ ಮಠದ ಗರ್ಭಗೃಹದ ಮೇಲಿನ ಶಿಖರ ದ್ರಾವಿಡ ಮಾದರಿಯಾದಾಗಿದ್ದು, ಗರ್ಭಗೃಹದ ಎದುರಿಗೆ ತೆರೆದ ಅಂತರಾಳವಿದ್ದು, ಮಧ್ಯದಲ್ಲಿ ಪುಷ್ಕರಣಿಯನ್ನು ಒಳಗೊಂಡಿದೆ. ಪುಷ್ಕರಣಿಯ ಮಂಟಪದ ಸುತ್ತಲೂ ೫೪ ಸರಳ ಸ್ತಂಭಗಳಿದ್ದು ಸಿಂಹವಕ್ರ ಪ್ರಣಾಳಿಕೆಯ ಕೆತ್ತನೆಯನ್ನು ಒಳಗೊಂಡಿವೆ. ಪುಷ್ಕರಣಿಯ ಸುತ್ತಲೂ ಶಿಲ್ಪಗಳಿದ್ದು, ಅವುಗಳಲ್ಲಿ ಭೃಂಗಿ, ವೀಣೆ ನುಡಿಸುತ್ತಿರುವ ಶಿಲ್ಪ, ನಂದಿಯ ಶಿಲ್ಪ, ಮಾರುತಿ, ಸಿಂಹಶಿಲ್ಪಗಳು, ನೃತ್ಯಮಾಡುತ್ತಿರುವ, ಧ್ಯಾನಮುದ್ರೆಯಲ್ಲಿರುವ ಶಿಲ್ಪಗಳಿವೆ. ಪ್ರಾಚೀನ ಕಾಲದ ೬೪ ಪುರಾತನರಲ್ಲಿ ಕೆಲವರನ್ನು ಇಲ್ಲಿ ತೋರಿಸಿರುವುದು ಗಮನೀಯ.

ತೆರೆದ ಅಂತರಾಳದ ನಂತರ ಕಲ್ಯಾಣಿ, ಸಭಾಮಂಟಪವಿದ್ದು, ಸುತ್ತಲೂ ೩೬ ಮಿಶ್ರಕ ಸ್ತಂಭಗಳಿವೆ. ಸಭಾಮಂಟಪದ ಮಧ್ಯದಲ್ಲಿ ನೃತ್ಯವೇದಿಕೆ ಇದೆ. ಪೂರ್ವ-ಪಶ್ಚಿಮಾಭಿಮುಖವಾಗಿ ಎರಡು ಕೋಷ್ಟಗಳಿವೆ. ಅವುಗಳಲ್ಲಿ ವೀರಭದ್ರ ಹಾಗೂ ಗಣೇಶನ ಕಿರುಶಿಲ್ಪಗಳಿವೆ. ಸಭಾಮಂಟಪದ ದ್ವಾರಬಾಗಿಲಿನ ಲಲಾಟಪಟ್ಟಿಕೆಯಲ್ಲಿ ಶಿವನ ಕೈಲಾಸಮಂಟಪ ಚಿತ್ರವಿದೆ.

ಈ ಮಠದ ಪ್ರವೇಶದ್ವಾರಬಂಧವು ದ್ವಿಶಾಖೆಯನ್ನು ಹೊಂದಿದ್ದು, ಅವುಗಳಲ್ಲಿ ಲತೆ, ವಜ್ರದ ಅಲಂಕಾರವನ್ನು ಬಿಡಿಸಲಾಗಿದೆ. ಲಲಾಟ ಬಿಂಬದಲ್ಲಿ ಯಾವುದೇ ಶಿಲ್ಪವಿಲ್ಲ. ಮುಖ್ಯದ್ವಾರದ ಇಕ್ಕೆಲಗಳಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಪ್ರವೇಶದ್ವಾರದ ಎಡ ಮತ್ತು ಬಲಭಾಗದಲ್ಲಿ ದ್ವಾರಪಾಲಕರು ನಿಂತಿರುವರು. ಪ್ರವೇಶದ್ವಾರದ ಮೇಲೆ ಭವ್ಯವಾದ ಗೋಪುರವಿದೆ. ಈ ಗೋಪುರವನ್ನು ಹಂಪೆಯ ವಿರೂಪಾಕ್ಷ ಮಂದಿರದ ಪೂರ್ವಭಾಗದ ೧೧ ಅಂತಸ್ತಿನ ಗೋಪುರವನ್ನು ನಿರ್ಮಾಣ ಮಾಡಿದವನು ಭಿಷ್ಟಪ್ಪಯ್ಯ ಎಂಬ ಪವಾಡಪುರುಷರು ನಿರ್ಮಿಸಿದ್ದಾರೆ ಎಂದು ಪ್ರತೀತಿ. ಈ ಭಿಷ್ಟಪ್ಪಯನವರ ಶಿಲ್ಪವೊಂದು ಈ ಪ್ರದೇಶದ ವಿಠ್ಠಲಾಪುರ ಎಂಬ ಗ್ರಾಮದ ವಿಠ್ಠಲಮಂದಿರದಲ್ಲಿದೆ. ಈ ಮಠದ ವಾಸ್ತುಶೈಲಿಯು ಮುಸ್ಲಿಂ ಕಲಾಶೈಲಿಯ ಮಂಟಪಗಳ ಕಮಾನುಗಳನ್ನು ಹೋಲುತ್ತದೆ. ಶೈಲಿಯ ದೃಷ್ಟಿಯಿಂದ ಈ ಮಠದ ಕಾಲ ಸುಮಾರು ಕ್ರಿ.ಶ. ೧೬-೧೭ ಶತಮಾನ.

ಡಂಬಳ ಗ್ರಾಮದ ತೋಂಟದಾರ್ಯ ಮಠ

ಡಂಬಳ ಗ್ರಾಮದಲ್ಲಿ ವೀರಶೈವ ಧರ್ಮದ ಶ್ರೀ ಜಗದ್ಗುರು ತೋಂಟದಾರ್ಯ ಮಠವಿದೆ (ಚಿತ್ರ ಸಂಖ್ಯೆ ೪). ಎಡೆಯೂರು ತೋಂಟದ ಶ್ರೀ ಸಿದ್ಧಲಿಂಗ ಜಗದ್ಗುರುಗಳವರ ಪರಂಪರೆಗೆ ಸೇರಿದೆ. ಈ ಮಠ ಡಂಬಳ, ಗದಗ ಸಂಸ್ಥಾನ ಮಠ. ಈ ಸಂಸ್ಥಾನ ಮಠದ ಅಧಿಪತಿಗಳನ್ನು ರಾಜಪಾಳೆಯಗಾರರು, ದೇಸಾಯಿ, ದೇಶಪಾಂಡೆಯರು ಭಕ್ತಿಪೂರ್ವಕ ಗೌರವಿಸಿ ಅಪೂರ್ವ ಕಾಣಿಕೆಗಳನ್ನು ಕೊಡಮಾಡಿದ್ದಾರೆ. ಅವುಗಳನ್ನು ಕೆಳದಿ ಅರಸ ಬಸವಪ್ಪನಾಯಕನು ದಾನವಾಗಿ ನೀಡಿರುವನು. ತನ್ನ ಪತ್ನಿಯ ಹೆಸರಿನಲ್ಲಿ ಚಿನ್ನದ ಮುಲಾಮಿರುವ ಎತ್ತರವಾದ ನವಿರಾದ ಕಳಸವನ್ನು ಈ ಮಠಕ್ಕೆ ನೀಡಿದ್ದು, ಈಗ ಅದು ಮಠದ ವಶದಲ್ಲಿದೆ. ಒಟ್ಟು ೧೮ ಅಧಿಪತಿಗಳು ಈ ಸಂಸ್ಥಾನಮಠದ ಪೀಠವನ್ನು ಅಲಂಕರಿಸಿದ್ದಾರೆ. ಸದ್ಯದಲ್ಲಿ ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಈ ಸಂಸ್ಥಾನಮಠವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ವಾಸ್ತು

ಶ್ರೀ ಜಗದ್ಗುರು ತೋಂಟದಾರ್ಯ ಮಠ ಸುಮಾರು ಕ್ರಿ.ಶ. ೧೩-೧೮ನೆಯ ಕಾಲಮಾನದಲ್ಲಿ ನಿರ್ಮಿಸಲ್ಪಟ್ಟಿದೆ. ಈ ಮಠದ ಸುತ್ತಲೂ ಪ್ರಾಕಾರ ಗೋಡೆ ಮತ್ತು ಉತ್ತರ ಗೋಡೆಯ ಮಧ್ಯದಲ್ಲಿ ಪ್ರವೇಶದ್ವಾರವಿದೆ.

ಅದಕ್ಕೆ ವಿಶಾಲವಾದ ಆವರಣ ಮಧ್ಯದಲ್ಲಿ ಚೌಕಾಕಾರದ ಒಂದು ಕಲ್ಲಿನ ಮಂಟಪವಿದೆ. ಆ ಮಂಟಪದ ಮಧ್ಯೆ ಸ್ವಾಮಿಗಳ ಗದ್ದುಗೆ ಮಂಟಪವಿದೆ. ಈ ಮಂಟಪದ ಹೊರಗಡೆ ಸುತ್ತಲೂ ೨೦ ಸ್ತಂಭಗಳಿದ್ದು, ಇವುಗಳು ಮಂಟಪದ ಮೇಲ್ಛಾವಣಿಯನ್ನು ಹೊತ್ತು ನಿಂತಂತಿವೆ.

ಈ ಮಂಟಪದ ಮಧ್ಯದಲ್ಲಿರುವ ಗದ್ದುಗೆಯ ಭುವನೇಶ್ವರಿಯಲ್ಲಿ ನಾಗ ಚಿತ್ರದ ಅಲಂಕಾರವಿದೆ. ಈ ಗದ್ದುಗೆ ಮಂಟಪದ ಮೇಲಿನ ಶಿಖರವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ.

ಈ ಗದ್ದುಗೆಯ ದ್ವಾರಬಾಗಿಲು ಅಲಂಕೃತಗೊಂಡಿದ್ದು ಪಂಚಶಾಖೆಗಳನ್ನು ಹೊಂದಿದೆ. ಅವುಗಳು ವಜ್ರಶಾಖೆ, ಅರ್ಧಸ್ತಂಭ, ಸುರುಳಿಯಾಕಾರದ ಬಳ್ಳಿಯ ಸುಂದರ ವಿನ್ಯಾಸದ ಕೆಳಗೆ ಶೈವ ದ್ವಾರಪಾಲಕರಿರುವರು.

ಈ ದ್ವಾರಬಾಗಿಲಿನ ಮಂಗಳಫಲಕದಲ್ಲಿ ನಾಗಲಿಂಗನ ಚಿತ್ರವಿದ್ದು ತೋರಣದಲ್ಲಿ ಕಳಶಪಟ್ಟಿಯಿದೆ. ಈ ಮಠದ ವಾಸ್ತು ಲಕ್ಷಣ ಸು.ಕ್ರಿ.ಶ. ೧೭-೧೮ನೇ ಶತಮಾನದ್ದಾಗಿದೆ.

ತೋಂಟದಾರ್ಯ ಮಠದ ಒಂದು ಫಲಕದಲ್ಲಿ ಈ ಪೀಠಾಧೀಪತಿಗಳ ಪಟ್ಟಿಯನ್ನು ಕೊಡಲಾಗಿದೆ.

೧. ಮೊದಲನೆಯವರು ತೋಂಟದಾರ್ಯ ಮಠದ ಶ್ರೀ ಮನ್ನಿರಂಜನ ಜಗದ್ಗುರು, ಪೀಠಾರೋಹಣ ಕ್ರಿ.ಶ. ೧೪೫೯, ಇವರ ಸಮಾಧಿಸ್ಥಳ - ಯಡೆಯೂರಲ್ಲಿದೆ.

೨. ತೋಂಟದ ಬೋಳಬಸವ ಸ್ವಾಮಿಗಳು, ಇವರು ಮಠದ ಎರಡನೆಯ ಪೀಠಾಧಿಪತಿಗಳು (ಕ್ರಿ.ಶ. ೧೪೫೯-೧೪೭೨), ಸಮಾಧಿಸ್ಥಳ - ಕೋಳೂರು.

೩. ಉದ್ಘಾನಾರ್ಯ ಸ್ವಾಮಿಗಳು (ಕ್ರಿ.ಶ. ೧೫೦೭-೧೫೩೦), ಸಮಾಧಿಸ್ಥಳ - ಹಿರೇಹಡಗಲಿ.

೪. ಹರಿಹರ ಸ್ವಾಮಿಗಳು, ಸಮಾಧಿಸ್ಥಳ - ಹಿರೇಹಡಗಲಿ.

೫. ಬಸವಲಿಂಗ ಸ್ವಾಮಿಗಳು (ಕ್ರಿ.ಶ. ೧೫೩೦-೧೫೯೦), ಸಮಾಧಿಸ್ಥಳ - ರುದ್ರಾಮ.

೬. ಕಟಗಿನ ಹಳ್ಳಿಯ ರಾಚೋಟಿ ಸ್ವಾಮಿಗಳು (ಕ್ರಿ.ಶ. ೧೫೯೦-೧೬೧೦), ಸಮಾಧಿಸ್ಥಳ - ತಿಳುವಳ್ಳಿ.

೭. ಖಾದಿ ಮಹಾಂತಸ್ವಾಮಿಗಳು (ಕ್ರಿ.ಶ. ೧೬೭೫-೧೭೨೫), ಸಮಾಧಿಸ್ಥಳ - ಡಂಬಳ.

೮. ಅರ್ಧನಾರೀಶ್ವರ ಸ್ವಾಮಿಗಳು.

೯. ಈಸೂರು ನಂದೀಶ್ವರ ಸ್ವಾಮಿಗಳು (ಕ್ರಿ.ಶ. ೧೭೨೫-೧೭೭೦), ಸಮಾಧಿಸ್ಥಳ - ಅಣ್ಣಿಗೇರಿ.

೧೦. ಉಗ್ಗದ ತೋಂಟದಾರ್ಯಸ್ವಾಮಿಗಳು (ಕ್ರಿ.ಶ. ೧೭೭೦-೧೭೭೬), ಸಮಾಧಿಸ್ಥಳ - ಅಣ್ಣಿಗೇರಿ.

೧೧. ಸದಾಶಿವ ಸ್ವಾಮಿಗಳು (ಕ್ರಿ.ಶ. ೧೭೭೬-೧೮೧೧), ಸಮಾಧಿಸ್ಥಳ -

೧೨. ವೃದ್ಧ ತೋಂಟದಾರ್ಯ ಸ್ವಾಮಿಗಳು (ಕ್ರಿ.ಶ. ೧೭೭೦-೧೭೭೬), ಸಮಾಧಿಸ್ಥಳ - ಅಣ್ಣಿಗೇರಿ.

೧೩. ಮಹಾಂತ ಸ್ವಾಮಿಗಳು (ಕ್ರಿ.ಶ. ೧೮೧೧-೧೮೩೮), ಸಮಾಧಿಸ್ಥಳ - ಹಂಪಸಾಗರ.

೧೪. ಮೃತ್ಯುಂಜಯ ಸ್ವಾಮಿಗಳು (ಕ್ರಿ.ಶ. ೧೮೭೮-೧೮೮೧), ಸಮಾಧಿಸ್ಥಳ - ಗದಗ.

೧೫. ಸಿದ್ದೇಶ್ವರ ಸ್ವಾಮಿಗಳು (ಕ್ರಿ.ಶ. ೧೮೮೧-೧೯೨೪), ಸಮಾಧಿಸ್ಥಳ - ಗದಗ.

೧೬. ಗುರುಬಸವ ಸ್ವಾಮಿಗಳು (ಕ್ರಿ.ಶ. ೧೯೨೪-೧೯೩೦), ಸಮಾಧಿಸ್ಥಳ - ತಿಳಿದಿಲ್ಲ.

೧೭. ಶಿವಕುಮಾರ ಸ್ವಾಮಿಗಳು, ಕಾಲಮಾನ ತಿಳಿದಿಲ್ಲ.

೧೮. ಸಿದ್ಧಲಿಂಗ ಸ್ವಾಮಿಗಳು (ಕ್ರಿ.ಶ. ೧೯೭೪ ರಿಂದ).

ಸದ್ಯದ ಶ್ರೀ ಜಗದ್ಗುರು ತೋಟಂದ ಮಠಾಧಿಪತಿಗಳು ಸಿದ್ಧಲಿಂಗ ಮಹಾಸ್ವಾಮಿಗಳವರು. ಜಗದ್ಗುರು ತೋಂಟದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳ ಸಾಮಾನ್ಯರ ಸ್ವಾಮೀಜಿಯೆಂದೇ ಹೆಸರಾಗಿರುವ ಇವರು ಶಿಷ್ಯರ ಸೇವೆಯೇ ಶಿವಪೂಜೆ ಎಂಬ ಧ್ಯೇಯವನ್ನು ತಮ್ಮ ವೈಚಾರಿಕ ನಿಲುವುಗಳ ಮೂಲಕ ಇಡೀ ನಾಡಿನಲ್ಲಿ ಬಿತ್ತರಿಸುತ್ತಿದ್ದಾರೆ. ತೋಂಟದಾರ್ಯ ಮಠದ ಜಾತ್ರೆ ಮಾಘಬಹುಳ ಹುಣ್ಣಿಮೆಯಲ್ಲಿ ಮೂರು ದಿನಗಳ ಕಾಲ ಭಾರೀ ಪ್ರಮಾಣದಲ್ಲಿ ನಡೆಯುತ್ತದೆ.

ದೇವಾಲಯಗಳು

ವಿಠ್ಠಲ ಮಂದಿರ

ಮುಂಡರಗಿ ಪ್ರದೇಸದ ವಿರುಪಾಪುರದಲ್ಲಿರುವ ವಿಠ್ಠಲ ಮಂದಿರ ೧೫ನೆಯ ಶತಮಾನದಲ್ಲಿ ನಿರ್ಮಾಣವಾಗಿದ್ದು. ಇತ್ತೀಚೆಗೆ ಇದು ಪುನರ್ ನಿರ್ಮಾಣಗೊಂಡಿದೆ. ಅದರ ತಳಪಾಯದಲ್ಲಿ ಗರ್ಭಗೃಹ, ನವರಂಗಗಳಿವೆ. ಇಲ್ಲಿಕಂಡುಬರುವ ಮುಖ್ಯವಾದ ಮಾಹಿತಿ ಎಂದರೆ ನವರಂಗದಲ್ಲಿ ಭಿಷ್ಟಪ್ಪಯ್ಯನವರ ಶಿಲ್ಪವಿದೆ. ಈತನು ಹಂಪೆಯ ವಿರೂಪಾಕ್ಷ ದೇವಾಲಯದ ಮುಂದಿನ ಗೋಪುರ ನಿರ್ಮಿಸಲು ಕಾರಣನಾಗಿದ್ದಾನೆ. ಈತನೊಬ್ಬ ಪವಾಡ ಪುರುಷ. ಈತನು ಪಂಚಲೋಹದ ಪೀಠದಲ್ಲಿಯ ಪಾರಜಬಂಧ ಶಿವಲಿಂಗವನ್ನು ಸ್ಥಾಪಿಸಿದನು. ಈ ಪಾರಜಬಂಧ ಶಿವಲಿಂಗ ಸುಮಾರು ೨೪-೨೫ ಕೆ.ಜಿ. ಭಾರವಿದ್ದು, ಇಂತಹ ಪಾರಜಬಂಧ ಶಿವಲಿಂಗ ಕಾಶಿಯಲ್ಲಿ ಬಿಟ್ಟರೆ ಬೇರೆ ಯಾವ ಸ್ಥಳದಲ್ಲಿಯೂ ಕಂಡುಬರುವುದಿಲ್ಲವೆಂದು ಹೇಳುತ್ತಾರೆ. ದೇವಾಂಶಸಂಭೂತರೆಂದು ಪರಿಗಣಿಸಲ್ಪಟ್ಟ ಭಿಷ್ಟಪ್ಪಯ್ಯರವರ ವಿಗ್ರಹ ಅತ್ಯಂತ ಸುಂದರವಾದ ರಸಲಿಂಗ ವಿಠ್ಠಲನೊಂದಿಗೆ ಪೂಜೆಗೊಳ್ಳುತ್ತಾ ಬಂದಿದೆ.

ಮುಷ್ಟಿಕೊಪ್ಪದ ವೆಂಕಟೇಶ ದೇವಾಲಯ

ಪ್ರಾಚೀನ ಈ ದೇವಾಲಯವನ್ನು ಸಂಪೂರ್ಣವಾಗಿ ಇತ್ತೀಚೆಗೆ ಸಂಪೂರ್ಣ ದುರಸ್ತಿಗೊಳಿಸಲಾಗಿದೆ. ಅಲ್ಲಿರುವ ಕೆಲವು ಪುರಾವೆಗಳಿಂದ ಈ ದೇವಾಲಯದ ಕಾಲಮಾನ ಸುಮಾರು ಕ್ರಿ.ಶ. ೧೪-೧೫ (ಚಿತ್ರ ಸಂಖ್ಯೆ ೫).

ಲೌಕಿಕ ಸ್ಮಾರಕಗಳು ಮತ್ತು ಶಿಲ್ಪಗಳು

ಮುಂಡರಗಿ ಪ್ರದೇಶದಲ್ಲಿ ವಿಜಯನಗರ ವಾಸ್ತುಶೈಲಿಯ ಪ್ರಭಾವವನ್ನು ಒಳಗೊಂಡ ಕೇವಲ ಧಾರ್ಮಿಕ ಕಟ್ಟಡಗಳಲ್ಲದೆ ಕೆಲ ಲೌಕಿಕ ಸ್ಮಾರಕಗಳು ಮತ್ತು ಶಿಲ್ಪಗಳಿವೆ.

ಕೋಟೆ

ಡಂಬಳ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ಪ್ರಾಚೀನ ಕೋಟೆ ಸಂಪೂರ್ಣವಾಗಿ ಶಿಥಿಲಗೊಂಡಿದೆ (ಚಿತ್ರ ಸಂಖ್ಯೆ ೬). ಇದು ಪೂರ್ವಾಭಿಮುಖವಾಗಿದ್ದು, ಕಲ್ಲುಮಣ್ಣಿನಿಂದ ನಿರ್ಮಿಸಲ್ಪಟ್ಟಿದೆ. ವೃತ್ತಾಕಾರದ ಒಂದು ಹುಡೆಯನ್ನು ಹೊಂದಿದ್ದು ಇದಕ್ಕೆ ಹೊಂದಿಕೊಂಡಂತೆ ಒಂದು ಬಾವಿಯೊಂದಿದೆ.

ಸೇತುವೆ

ಮುಂಡರಗಿ ಪ್ರದೇಶದ ಕೋರಲಹಳ್ಳಿಯಲ್ಲಿ ಒಂದು ಸೇತುವೆಯಿದೆ. ಪ್ರಸ್ತುತ ಅದು ಶಿಥಿಲಗೊಂಡಿದೆ (ಚಿತ್ರ ಸಂಖ್ಯೆ ೭). ಈ ಸೇತುವೆ ವಿಜಯನಗರ ಕಾಲದಲ್ಲಿಯೇ ನಿರ್ಮಾಣಗೊಂಡಿದೆ ಎಂಬುದಕ್ಕೆ ಶಾಸನಧಾರ ಇಲ್ಲ. ಆದರೆ ಸ್ಥಳೀಯ ಮಾಹಿತಿಯ ಪ್ರಕಾರ ವಿಜಯನಗರ ಅರಸ ಎರಡನೆಯ ದೇವರಾಯ ತನ್ನ ಆಡಳಿತದ ಅವಧಿಯಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ ಒಂದು ಆಣೆಕಟ್ಟು ನಿರ್ಮಿಸಿ, ಹದಿನೈದು ಮೈಲಿಗಳಷ್ಟು ಉದ್ದವಾದ ನಾಲೆಗಳನ್ನು ತೋಡಿಸಿದನು. ಈ ನಾಲೆಗಳ ಮೂಲಕ ಜಲಭಾವದಿಂದ ನರಳುತ್ತಿದ್ದ ರಾಜಧಾನಿಗೆ ನೀರನ್ನು ಪೂರೈಸಲು ವ್ಯವಸ್ಥೆ ಮಾಡಿದನು. ಈ ಕುರಿತು ನ್ಯೂನಿಜ್ ಮತ್ತು ನಿಕೋಲೋಕಾಂಟಿ ಇಬ್ಬರೂ ಅವನ ಸಾಧನೆಗಳನ್ನು ಶ್ಲಾಘಿಸುತ್ತಾರೆ. ಎರಡನೆಯ ದೇವರಾಯ ನಿರ್ಮಿಸಿದಂತಹ ಆ ಸೇತುವೆ ಇದೇ ಆಗಿರಬಹುದೇ ಎಂಬುದು ಅನುಮಾನ. ಇವನ ಉಲ್ಲೇಖವಿರುವ ಶಾಸನಗಳಾವವೂ ಲಭ್ಯವಿಲ್ಲ.

ಶಿಲ್ಪಗಳು

ಮುಂಡರಗಿ ಪ್ರದೇಶದಲ್ಲಿ ಕಂಡುಬರುವಂತಹ ಶಿಲ್ಪಗಳಲ್ಲಿ ಕೆಲವು ಶೈವ, ವೀರಶೈವ ಮತ್ತು ವೈಷ್ಣವದ್ದಾಗಿವೆ. ಅವು ವಿಜಯನಗರ ಕಾಲದ್ದಾಗಿವೇ. ಅವುಗಳಲ್ಲಿ ವೀರಭದ್ರ, ನೂರೊಂದು ಶಿವಲಿಂಗಗಳು, ಭಿಷ್ಟಪ್ಪಯ್ಯನವರ ಶಿಲ್ಪ ಹಾಗೂ ವೆಂಕಟೇಶ್ವರ ಶಿಲ್ಪಗಳು ವಿಶಿಷ್ಟವಾಗಿವೆ.

ವೀರಭದ್ರ

ಮುಂಡರಗಿ ಪ್ರದೇಶದ ಗುಮ್ಮಗೋಳದ ಗೋಣಿಬಸಪ್ಪ ಮಠದ ತೆರೆದ ನೃತ್ಯ ಮಂಟಪದ ಎಡಭಾಗದ ಕೋಷ್ಟಕದಲ್ಲಿ ಈ ಶಿಲ್ಪವಿದೆ (ಚಿತ್ರ ಸಂಖ್ಯೆ ೮). ವೀರಭದ್ರನು ತ್ರಿಭಂಗಿಯಲ್ಲಿ ನಿಂತಿರುವನು. ಚತುರ್ಭುಜಧಾರಿಯಾಗಿದ್ದು, ಕೈಗಳಲ್ಲಿ ಬಿಲ್ಲು-ಬಾಣ, ಖಡ್ಗ ಹಾಗೂ ಡಾಲುಗಳನ್ನು ಹಿಡಿದಿರುವನು. ಶಿರದ ಹಿಂದೆ ಶೇಷ, ಮಗ್ಗುಲಿಗೆ ಭದ್ರಕಾಳಿ, ಅಂಜಲಿ ಮುದ್ರೆಯಲ್ಲಿ ಟಗರಿನ ತಲೆಯುಳ್ಳ ದಕ್ಷನ ಶಿಲ್ಪಗಳನ್ನು ಸಹ ವೀರಭದ್ರನ ಜೊತೆಗೆ ನಿರ್ಮಿಸಲಾಗಿದೆ.

ನೂರೊಂದು ಶಿವಲಿಂಗಗಳು

ವಿಶಿಷ್ಟವಾದ ನೂರೊಂದು ಶಿವಲಿಂಗಗಳು ಮುಂಡರಗಿಯ ಗುಡ್ಡದ ಮೇಲಿವೆ (ಚಿತ್ರ ಸಂಖ್ಯೆ ೯). ಇವುಗಳನ್ನು ಶಿಲಾನೆಲದ ಮೇಲೆ ಹತ್ತು ಸಾಲುಗಳಲ್ಲಿ ತಲಾ ಒಂದು ಸಾಲಿನಲ್ಲಿ ಹತ್ತು ಶಿವಲಿಂಗಗಳನ್ನು ಕಂಡರಿಸಲಾಗಿದೆ. ಮಧ್ಯದಲ್ಲಿ ಒಂದು ಶಿವಲಿಂಗವಿದೆ. ಈ

ರೀತಿಯಲ್ಲಿ ಶಿವಲಿಂಗಗಳನ್ನು ಕಂಡರಿಸುವ ಪರಂಪರೆ ವಿಜಯನಗರ ಅರಸರ ಕಾಲದಲ್ಲಿ ಸಾಮಾನ್ಯವಾಗಿದ್ದಿತು. ಅಂತಹವು ಹಂಪಿ, ಸೊಂದಾ, ಸಿಂದಗಿ, ಪುರ (ಗಂಗಾವತಿ ತಾ.) ಇತ್ಯಾದಿ ಸ್ಥಳಗಳಲ್ಲಿ ಕಾಣಬಹುದು.

ಭಿಷ್ಟಪ್ಪಯ್ಯನವರ ಶಿಲ್ಪ

ಮುಂಡರಗಿ ತಾಲೂಕಿನ ವಿಠಲಾಪುರದ ವಿಠ್ಠಲಮಂದಿರದ ನವರಂಗದಲ್ಲಿ ಭಿಷ್ಟಪ್ಪಯ್ಯನವರ ಶಿಲ್ಪವನ್ನು ಅಷ್ಟಕೋನ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಈ ಶಿಲ್ಪ ಕುಳಿತುಕೊಂಡಿರುವ ರೀತಿಯಲ್ಲಿದ್ದು, ಬಲಗೈಯನ್ನು ತೊಡೆಯ ಮೇಲಿರಿಸಿ, ಎಡಗೈಯಲ್ಲಿ ಆಯುಧವನ್ನು ಹಿಡಿದಿರುವಂತಿದೆ.

ವೈಷ್ಣವ ಶಿಲ್ಪಗಳು (ವೆಂಕಟೇಶ್ವರ)

ಮುಷ್ಟಿಕೊಪ್ಪದ ವೆಂಕಟೇಶ ದೇವಾಲಯದ ಗರ್ಭಗೃಹದಲ್ಲಿರುವ ಈ ವೆಂಕಟೇಶನ ಶಿಲ್ಪವಿದೆ (ಚಿತ್ರ ಸಂಖ್ಯೆ ೧೦). ಸಮಭಂಗಿಯಲ್ಲಿರುವನು. ಚತುರ್ಭುಜಧಾರಿಯಾಗಿದ್ದಾನೆ. ಶಿರದ ಮೇಲೆ ಕಿರೀಟವಿದ್ದು, ಹಿಂದಿನೆರಡು ಹಸ್ತಗಳಲ್ಲಿ ಶಂಖ, ಚಕ್ರವನ್ನು ಹಿಡಿದಿರುವನು. ಮುಂದಿನ ಬಲಗೈ ಅಭಯಹಸ್ತದಲ್ಲಿದೆ.

ಲೌಕಿಕ ಶಿಲ್ಪಗಳು

ವೀರಗಲ್ಲುಗಳು

ಮುಂಡರಗಿ ಪ್ರದೇಶದಲ್ಲಿ ಕಂಡುಬರುವ ಲೌಕಿಕ ಶಿಲ್ಪಗಳಲ್ಲಿ ಈ ಕಾಲಮಾನದವು ವೀರಗಲ್ಲುಗಳು ಮಾತ್ರ ಏಕ್ಲಾಸಪುರದ ಗ್ರಾಮದಲ್ಲಿವೆ. ಅದರಲ್ಲಿ ಒಂದು ವೀರಗಲ್ಲು ಕುಮಾರರಾಮನದಾಗಿದ್ದು, ವಿಶಿಷ್ಟವಾಗಿದೆ. ಈ ವೀರಗಲ್ಲಿನಲ್ಲಿ ಒಬ್ಬ ವ್ಯಕ್ತಿಯು ಕುದುರೆಯ ಮೇಲೆ ಕತ್ತಿಯನ್ನಿಡಿದು ಕುಳಿತುಕೊಂಡಿದ್ದಾನೆ. ಪ್ರಾಯಶಃ ಯುದ್ಧಕ್ಕೆ ಹೊರಟು ನಿಂತಂತಿದೆ. ಬಲಗೈಯಲ್ಲಿ ಗದೆಯನ್ನು, ಎಡಗೈಯಲ್ಲಿ ಕುದುರೆಗೆ ಹಾಕಿದ ಕಡಿವಾಣವನ್ನು ಹಿಡಿದಿರುವನು. ಕುದುರೆಯ ಹಿಂಭಾಗದ ಮೇಲೆ ಒಬ್ಬ ವ್ಯಕ್ತಿಯು ಛತ್ರಿಯ ಕೆಳಗಡೆ ನಿಂತಿದ್ದಾನೆ. ಇವನು ಕುಮಾರ ರಾಮನಿರಬಹುದು (ಚಿತ್ರ ಸಂಖ್ಯೆ ೧೧). ಇಂಥ ಶಿಲ್ಪಗಳು ತುಂಬಾ ಅಪರೂಪವಾಗಿ ಲಭ್ಯವಾಗಿವೆ ಕಾಲ ಸುಮಾರು ೧೬ನೇ ಶತಮಾನ.


ಇದೇ ಗ್ರಾಮದ ಮತ್ತೊಂದು ಮಹಾಸತಿ ವೀರಗಲ್ಲು ವಿಜಯನಗರ ಕಾಲದ್ದಾಗಿದೆ. ಈ ವೀರಗಲ್ಲು ನಾಲ್ಕು ಹಂತಗಳನ್ನು ಒಳಗೊಂಡಿದೆ. ಅತ್ಯಂತ ಕೆಳಗಿನ ಹಂತದಲ್ಲಿ ಮತ್ತು ಅದರ ಮೇಲಿನ ಎರಡನೇ ಕ್ರಮವಾಗಿ ಕುದುರೆ ಸವಾರರು ಮತ್ತು ಕಾಲ್ಬಳದವರ ದೃಶ್ಯವಿದೆ. ಕಾಲ್ಬಳದಲ್ಲಿ ವೀರರು ತಮ್ಮ ಎದುರಿನ ವೀರರೊಡನೆ ಕೈಗಳಲ್ಲಿ ಕತ್ತಿ, ಗುರಾಣಿ, ಭರ್ಚಿಯನ್ನು

ಹಿಡಿದು ಯುದ್ಧ ಮಾಡುತ್ತಿದ್ದಾರೆ. ಮೂರನೆಯ ಹಂತದಲ್ಲಿ ಯುದ್ಧದಲ್ಲಿ ಮಡಿದಂತಹ ಇಬ್ಬರು ಯೋಧರು ಎರಡು ವಿಮಾನಗಳಲ್ಲಿ ಕುಳಿತಿದ್ದಾರೆ. ಅವುಗಳನ್ನು ಅಪ್ಸರೆಯರು ಸ್ವರ್ಗಕ್ಕೆ ಹೊತ್ತೊಯ್ಯುತ್ತಿದ್ದಾರೆ. ನಾಲ್ಕನೆಯ ಹಂತದ ಮೇಲಿನ ಭಾಗದಲ್ಲಿ ಶಿವಲಿಂಗವಿದ್ದು ಅದರ ಎಡಭಾಗದಲ್ಲಿ ಇಬ್ಬರು ಯೋಧರು ಧ್ಯಾನಮುದ್ರೆಯಲ್ಲಿ ಕುಳಿತುಕೊಂಡಿದ್ದು, ಸೂರ್ಯ, ಚಂದ್ರರ ಶಿಲ್ಪಗಳಿವೆ. ಈ ಶಿಲ್ಪವು ವಿಜಯನಗರ ಕಾಲದ್ದಾಗಿದೆ (ಚಿತ್ರ ಸಂಖ್ಯೆ ೧೨).


ಹೀಗೆ ಮುಂಡರಗಿ ಪ್ರದೇಶದಲ್ಲಿ ವಿರಳ ಸಂಖ್ಯೆಯಲ್ಲಿ ವಿಜಯನಗರ ಕಾಲದ ಪುರಾವೆಗಳಿದ್ದರೂ (ದೇವಾಲಯ, ಕೋಟೆ, ಶಿಲ್ಪಗಳು) ಅವು ಮಹತ್ವದ್ದೆನಿಸಿವೆ. ಹಾಗೂ ಈ ಪ್ರದೇಶದ ಇತಿಹಾಸ ಪುನರಚನೆಗೆ ಸಹಾಯಕಾರಿಯಾಗಿವೆ.




ಚಿತ್ರ ೨




ಚಿತ್ರ ೧




ಚಿತ್ರ ೨



ಚಿತ್ರ ೪



ಚಿತ್ರ ೫



ಚಿತ್ರ ೬




ಚಿತ್ರ ೭



ಚಿತ್ರ ೮




ಚಿತ್ರ ೯



ಚಿತ್ರ ೧೦



ಚಿತ್ರ ೧೧



ಚಿತ್ರ ೧೨

ಗ್ರಂಥಋಣ

೧. ಸೂರ್ಯನಾಥ ಕಾಮತ್ (ಸಂ), ೧೯೮೯, ಧಾರವಾಡ ಜಿಲ್ಲಾ ಗ್ಯಾಝೆಟಿಯರ್, ಕರ್ನಾಟಕ ಸರಕಾರ, ಪು. ೫೩೦, ಬೆಂಗಳೂರು

೨. South Indian Inscription, Vo-XV, Par-II, No. ೬೬೫, P. ೪೧೭

೩. ಪಾಟೀಲ ಬಿ.ಎಸ್. ೨೦೦೦, ಕಪೋತಗಿರಿ (ಸ್ಮರಣ ಸಂಚಿಕೆ), ಗದಗ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ, ಮುಂಡರಗಿ, ಪು. ೩೦

೪. South Indian Inscription, Vo-೫, XV, Par-II, 1 No. ೬೮೬, P. ೪೨೭

೫. ಅದೇ, No. ೭೦೨, P. ೪೩೬

❖ ❖

೧೮

ಹಂಪಿ ದೇವಾಲಯಗಳ ಆಡಳಿತ ವರ್ಗ

ಡಾ. ಕೆ.ಮಹೇಶ್

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯು ದಕ್ಷಿಣಭಾರತಕ್ಕೆ ಒಂದು ರಾಜಕೀಯ ಶಕ್ತಿಯನ್ನು ಹುಟ್ಟುಹಾಕಿ, ಸ್ವಶಕ್ತಿಯನ್ನು ಸಂವರ್ಧಿಸುವ ಜೊತೆಗೆ ಹಿಂದೂ ಧರ್ಮ ಹಾಗೂ ಭಾರತೀಯ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿತು. ಸಾಮ್ರಾಜ್ಯದಲ್ಲಿ ಧರ್ಮ, ಕಲೆ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ, ಶಿಲ್ಪಕಲೆಗಳು ಯತೇಚ್ಛವಾಗಿ ಪ್ರೋತ್ಸಾಹ ಪಡೆದುಕೊಂಡವು. ಅಂದು ಧರ್ಮ ರಕ್ಷಣೆಗೆ ಹಾಗೂ ಪ್ರಚಾರಕ್ಕೆ ದೇವಾಲಯಗಳನ್ನು ಮಾಧ್ಯಮಗಳಾಗಿ ಉಪಯೋಗಿಸಿಕೊಳ್ಳಲಾಯಿತು. ಹಿಂದೂ ಸಂಸ್ಕೃತಿಯ ಎಲ್ಲಾ ವೈಶಿಷ್ಟ್ಯಗಳನ್ನು ಸಂರಕ್ಷಿಸಿ, ಪುನಃಶ್ಚೇತನಗೊಳಿಸಿ ವೈಭವೋಪೇತವಾಗಿ ಮಾಡುವುದು ಅಂದಿನ ಎಲ್ಲಾ ಅರಸರ ಪ್ರಮುಖ ಧ್ಯೇಯವಾಗಿತ್ತು.

ವಿಜಯನಗರ ಸಾಮ್ರಾಜ್ಯವು ಕರ್ನಾಟಕ ಸಾಮ್ರಾಜ್ಯವೆಂದೇ ಹೆಸರು ಪಡೆದು ಕ್ರಿ.ಶ. ೧೪ನೇ ಶತಮಾನದಿಂದ ಕ್ರಿ.ಶ. ೧೬ನೇ ಶತಮಾನದವರೆಗೆ ತನ್ನ ವೈಭವವನ್ನು ಮೆರೆಯಿತು. ಇದು ಹಂಪಿ (ಹೊಸಪಟ್ಟಣ, ವಿಜಯನಗರ, ಬಿಜೆಯನಗರ, ಬಿಸ್ನಾಗರ್) ಯನ್ನು ತನ್ನ ಕೇಂದ್ರ ಅಥವಾ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ನಡೆಸಿತು. ಹಂಪಿಯು ಪುರಾಣ ಪ್ರಸಿದ್ಧ ಶೈವ ಕ್ಷೇತ್ರವಾಗಿ ಹೆಸರುಪಡೆದಿದೆ. ನಮಗೆ ಮೊದಲು ಹೊಯ್ಸಳ ಹಾಗೂ ಸಿಂದರ ಕಾಲದ ಶಾಸನಗಳು ಸಿಗುತ್ತವೆ. ಇವರ ಕಾಲಕ್ಕಾಗಲೇ ಈ ಪ್ರದೇಶವು ಚಿರಪರಿಚಿತವಾಗಿತ್ತು. ಹಂಪಿಯಲ್ಲಿರುವ ಮೂಲ ದೇವಾಲಯಗಳೆಂದರೆ, ಹೇಮಕೂಟದಲ್ಲಿರುವ ದೇವಾಲಯಗಳ ಸಮೂಹ, ಮನ್ಮಥಕೊಂಡದ ಬಳಿಯ ದೇವಾಲಯಗಳು ಮುಖ್ಯವಾಗಿವೆ. ಇವುಗಳು ವಿಜಯನಗರ ಸ್ಥಾಪನೆಗಿಂತ ಮುಂಚಿನ ದೇವಾಲಯಗಳು. ನಂತರ ದಿನಗಳಲ್ಲಿ ಹಂಪಿ ಮತ್ತು ಅದರ ಸುತ್ತಮುತ್ತ ಅನೇಕ

ದೇವಾಲಯಗಳು ನಿರ್ಮಾಣವಾದವು. ದೇವಾಲಯಗಳು ಅಂದಿನ ಸಾಮೂಹಿಕ ಕೇಂದ್ರಗಳಾಗಿ ಸಮಾಜದ ವಿಭಿನ್ನ ಅಂಗವಾಗಿ ರೂಪುಗೊಂಡಿದ್ದವು. ದೇವಾಲಯಗಳಲ್ಲಿ ಪೂಜೆ-ಪುನಸ್ಕಾರಗಳು, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ದೇವಾಲಯದ ವಿಸ್ತರಣೆ ಬೆಳೆದಂತೆಲ್ಲಾ ದೇವಾಲಯದ ಜವಾಬ್ದಾರಿ ಬೆಳೆಯುತ್ತ ಹೋಯಿತು. ದೇವಾಲಯಗಳ ನಿರ್ವಹಣೆ ಸಂಕೀರ್ಣವಾಗಿ ಅವುಗಳ ಕಾರ್ಯಕಲಾಪಗಳಲ್ಲಿ ಬದಲಾವಣೆಗಳಾದವು. ಸಾಮೂಹಿಕ ಪೂಜಾ ಕೇಂದ್ರಗಳಾಗಿ ರೂಪುಗೊಂಡ ದೇವಾಲಯಗಳು ಕ್ರಮೇಣ ಸಮಾಜದ ಕೇಂದ್ರ ಬಿಂದುಗಳಾದವು. ಇಲ್ಲಿ ವಿದ್ಯಾಭ್ಯಾಸ ಧರ್ಮಪ್ರಚಾರ, ಕಲೆ, ನ್ಯಾಯದಾನ, ಸಂಗೀತ, ನೃತ್ಯ, ಅನ್ನಛತ್ರ ಇತ್ಯಾದಿಗಳ ಬೆಳವಣಿಗೆಗೆ ಮೂಲಸ್ಥಾನವಾಯಿತು.

ದೇವಾಲಯಗಳು ಸಾಮಾಜಿಕ ಸಂಸ್ಥೆಗಳಾಗಿ ರೂಪುಗೊಂಡು ಜನರೆಲ್ಲರನ್ನು ತಮ್ಮೆಡೆಗೆ ಸೆಳೆದವು. ಇಲ್ಲಿ ಮೇಲು-ಕೀಳು, ಬಡವ-ಬಲ್ಲಿದ ಎಂಬ ಭಾವನೆ ಇರುತ್ತಿರಲಿಲ್ಲ. ಇದೊಂದು ದೊಡ್ಡ ಆಡಳಿತ ಸಂಸ್ಥೆಯಾಗಿ ಬೆಳೆದುದರಿಂದ ಆಡಳಿತ ನಿರ್ವಹಣೆಯಲ್ಲಿ ಹಲವು ಜನರು ಬೆರೆಯಬೇಕಾಯಿತು. ಇದರಲ್ಲಿ ಸ್ಥಾನಿಕ, ಆಡಳಿತ ಮಂಡಳಿಯವರು, ಅರ್ಚಕರು ಮುಂತಾದವರಲ್ಲದೆ, ಪರಿಚಾರಕ ವರ್ಗದವರಲ್ಲಿ ಮುಖ್ಯವಾದವರೆಂದರೆ, ವೇದಪಾರಾಯಣದವರು, ಪುರಾಣ ಹೇಳುವವರು, ಜ್ಯೋತಿಷ್ಯರು, ಘಳಿಯಾರದವು, ಮಂತ್ರಪುಷ್ಪದವರು, ವಿದ್ವಾಂಸರು, ದೇವಾಲಯದ ಸದಸ್ಯರು, ಸ್ಥಳ ಸೇನಭೋವರು, ಮಹಾಜನಂಗಳು, ತೀರುವೀಧಿ ವಿನಿಯೋಗದವರು, ಪವಮಾನಭಿಷೇಕದವರು, ನಿತ್ಯದಾನದವರು, ಬ್ರಾಹ್ಮಣರು, ರಂಗ ಭೋಗದವರು, ಅಂಗಭೋಗದವರು, ಭಂಡಾರದವರು, ಉಗ್ರಾಣದವರು, ಛತ್ರದವರು, ವಾದ್ಯದವರು, ದನಗಾಹಿಗಳು, ಹೂವಿನ ತೋಟದವರು, ಕೂಲಿಗಳು, ಸ್ವಯಂಪಾಕದವರು, ಕರಣಿಕರು, ಸೇನಭೋವ ರುಲಿಪಿಕಾರರು, ಶಾಸನಖಂಡನೆಕಾರರು, ಕಟ್ಟಡ (ಮಂಟಪ) ನಿರ್ಮಾಣಕಾರರು, ಅಧಿಕಾರಿಗಳು, ಇತಿಹಾಸದವರು ಇನ್ನೂಳಿದವರು ಪ್ರಮುಖರಾಗಿದ್ದಾರೆ. ಇವರೆಲ್ಲ ದೇವಾಲಯದ ಆಡಳಿತ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಇವರ ನೇಮಕ, ಸಂಬಳ, ಆಡಳಿತ, ಕರ್ತವ್ಯಗಳನ್ನು ನೋಡಿಕೊಳ್ಳಲು ಸ್ಥಾನಿಕ ಅಥವಾ ಸ್ಥಾನಚಾರ್ಯರು ನೇಮಕವಾದರು.

ದೇವಾಲಯಗಳನ್ನು ನಿರ್ಮಿಸಿದ ಅಥವಾ ಜೀರ್ಣೋದ್ಧಾರ ಮಾಡಿದ ವ್ಯಕ್ತಿಗಳು ಅದರ ಕಾರ್ಯ ಚಟುವಟಿಕೆಗಳು ಸುಗಮವಾಗಿ ನಡೆಯುವುದಕ್ಕೆ ಹೇರಳವಾಗಿ ದಾನದತ್ತಿಗಳನ್ನು ನೀಡುತ್ತಿದ್ದರು. ಹೀಗೆ ಬಂದಂತಹ ದಾನದತ್ತಿಗಳಿಂದ ದೇವಾಲಯದ ಕೆಲಸಕಾರ್ಯಗಳು, ಅಲ್ಲಿನ ಆಡಳಿತ ನಿರ್ವಹಣೆ, ಪೂಜಾ ಕೈಂಕರ್ಯಗಳು ಮುಂತಾದ ಜವಾಬ್ದಾರಿಗಳನ್ನು ಗಂಭೀರವಾಗಿ ಪರಿಗಣಿಸಬೇಕಾಯಿತು. ಆದುದರಿಂದ ದೇವಾಲಯದ ಆಡಳಿತಾತ್ಮಕ ಜವಾಬ್ದಾರಿಯನ್ನು ನೋಡಿಕೊಳ್ಳಲು ವ್ಯಕ್ತಿಯ ನೇಮಕಾತಿ ಅನಿವಾರ್ಯವಾದ ಸಂದರ್ಭದಲ್ಲಿ ಸ್ಥಾನಿಕ ಎನ್ನುವ ವ್ಯಕ್ತಿಯನ್ನು ನೇಮಿಸಲಾಯಿತು. ಇವನು ಇಡೀ

ದೇವಾಲಯದ ಜವಾಬ್ದಾರಿ ಹೊತ್ತ ಮುಖ್ಯಸ್ಥನಾದನು. ಇವನಿಗೆ ಸ್ಥಾನಪತಿ ಅಥವಾ ಸ್ಥಾನಿಕ, ಸ್ಥಾನಚಾರ್ಯ ಇತ್ಯಾದಿ ಹೆಸರುಗಳಿಂದ ಶಾಸನಗಳಲ್ಲಿ ಕರೆಯಲಾಗಿದೆ.

ಸ್ಥಾನಿಕ

ದೇವಸ್ಥಾನದ ಮೇಲ್ವಿಚಾರಣೆಯು ಸ್ಥಾನಿಕನ ಹತೋಟಿಯಲ್ಲಿದ್ದಿತ್ತೆಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಇಲ್ಲಿ ಸ್ಥಾನಿಕ ಎಂಬ ಪದವು ಅಧಿಕಾರ ಸೂಚಕವಾಗಿ ಪ್ರತಿಬಿಂಬಿಸುವುದು. ಸ್ಥಾನಿಕ ಎಂಬುವವನು ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಳ್ಳುವ ವ್ಯಕ್ತಿ. ಮುಂದಿನ ದಿನಗಳಲ್ಲಿ ದೇವಾಲಯದ ಸ್ಥಿರ ಮತ್ತು ಚರ ಆಸ್ತಿಯನ್ನು ನೋಡಿಕೊಳ್ಳುವ ವ್ಯಕ್ತಿಯನ್ನು ಸ್ಥಾನಿಕ ಅಥವಾ ಸ್ಥಾನಪತಿ ಎಂದು ಕರೆಯಲಾಯಿತು. ಇವನು ಶೈವ, ವೈಷ್ಣವ ಮತ್ತು ಜೈನ ದೇವಾಲಯಗಳ ಆಡಳಿತವರ್ಗದಲ್ಲಿ ಗೌರವದ ಸ್ಥಾನ ಪಡೆದಿದ್ದಾನೆ. ದೇವಾಲಯಗಳ ಆಡಳಿತಾತ್ಮಕ ಮತ್ತು ಆರ್ಥಿಕ ಜವಾಬ್ದಾರಿಯನ್ನು ಹೊತ್ತುಕೊಂಡ ಸ್ಥಾನಿಕನನ್ನು ಅರಸನಾಗಲೀ ಅಥವಾ ಅಧಿಕಾರಿಗಳಾಗಲೀ ನೇಮಿಸುತ್ತಿದ್ದಂತೆ ಎಲ್ಲಿಯೂ ಶಾಸನಗಳ ಉಲ್ಲೇಖವಿಲ್ಲ. ಇಲ್ಲಿ ಮುಖ್ಯವಾಗಿ ಕಂಡುಬರುವುದೇನೆಂದರೆ, ದೇವಾಲಯದ ನಿರ್ಮಾತೃಗಳಾದ ದಾನಿಗಳು ಅಥವಾ ದತ್ತಿಗಳನ್ನು ನೀಡುವವರು ಸ್ಥಾನಿಕರನ್ನು ನೇಮಿಸಿರುವುದು ತಿಳಿದುಬರುತ್ತದೆ. ದೇವಾಲಯದ ನಿರ್ಮಾಣವು ದಾನಿಗಳಿಂದ ಕೈಗೊಂಡಾಗ ಹೊಸ ದೇವಾಲಯಕ್ಕೆ ಸ್ಥಾನಿಕರನ್ನು ಮತ್ತು ಪರಿಚಾರಕ ವರ್ಗದವರನ್ನು ನೇಮಿಸುವ ಜವಾಬ್ದಾರಿಯು ದಾನಿಗೆ ಇದ್ದಿತು. ಉದಾ :- ಕೃಷ್ಣದೇವರಾಯನು ಹಂಪಿಯ ಬಾಲಕೃಷ್ಣ ದೇವಾಲಯವನ್ನು ನಿರ್ಮಿಸಿ ಅದರ ನಿರ್ವಹಣೆಗೆ ಇಬ್ಬರು ಸ್ಥಾನಿಕರನ್ನು ಆಯ್ಕೆ ಮಾಡಿದನು.[೧] ದೇವಾಲಯದ ನಿರ್ಮಾಪಕರು ಸ್ಥಾನಿಕರನ್ನು ಆಯ್ಕೆಮಾಡಿ ತಮ್ಮ ಹೇಳಿಕೆಗಳನುಸಾರವಾಗಿ ನಡೆದುಕೊಂಡು ಬರಲು ಕಟ್ಟಳೆಗಳನ್ನು ವಿಧಿಸಿರುವುದು ಕೆಲವು ಶಾಸನಗಳಲ್ಲಿ ಮಾಹಿತಿ ಸಿಗುತ್ತದೆ. ಹೊಸದಾಗಿ ದೇವಾಲಯವನ್ನು ನಿರ್ಮಾಣ ಮಾಡಿದಾಗ ಹೊಸ ಸ್ಥಾನಿಕರನ್ನು ನೇಮಿಸುವುದು ಕೆಲವು ಶಾಸನಗಳಲ್ಲಿ ಉಲ್ಲೇಖ ದೊರೆತರೆ, ಇನ್ನೂ ಹಳೆಯ ದೇವಾಲಯಗಳ ಸ್ಥಾನಕರಿಗೆ ಹೊಸ ದೇವಾಲಯಗಳ ನಿರ್ವಹಣಾ ಜವಾಬ್ದಾರಿಯನ್ನು ನೀಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ರಂಗಭಟ್ಟನೆನ್ನುವವನು ಹಂಪಿಯ ವಿಠಲ ದೇವಾಲಯದಲ್ಲಿ ಆಳ್ವಾರರ ಪೂಜೆ ಮತ್ತು ದೇವಾಲಯದ ಆಡಳಿತ ನೋಡಿಕೊಳ್ಳಲು ಆಯಿರಾಮಜಯ್ಯನ ಮಕ್ಕಳು ಸ್ಥಾನಿಕರಾದ ಹಿರಿಯವಲಭಯ್ಯ ಮತ್ತು ಚಿಕ್ಕವಲಭಯ್ಯರಿಗೆ ಒಪ್ಪಿಸಿದುದು ತಿಳಿಯುತ್ತದೆ.[೨] ಈ ಶಾಸನದ ಪ್ರಕಾರ ಇವರು ಸ್ಥಾನಿಕ ಪದವಿಯ ಜೊತೆಗೆ ಪೂಜೆ, ನೈವೇದ್ಯ ಮಾಡಿಕೊಂಡು ಬರಬೇಕೆಂದು ಉಲ್ಲೇಖಿಸಿದ್ದು ವಿಶೇಷವಾಗಿದೆ. ಇಂತಹ ಉಲ್ಲೇಖಗಳು ಹೆಚ್ಚಿನ ಕಡೆ ಕಂಡು ಬಂದಿಲ್ಲದಿರುವುದರಿಂದ ಸ್ಥಾನಿಕ ಪದವಿಯು ವಂಶಪಾರಂಪರ್ಯವಾಗಿ ಅಥವಾ ಶಿಷ್ಯಪರಂಪರೆಯಾಗಿ ಮುಂದುವರಿಯುವ ಅಧಿಕಾರವಾಗಿದ್ದಿತ್ತೆನ್ನಬಹುದು.

ಸ್ಥಾನಿಕನು ದೇವರಿಗೆ ಮತ್ತು ದೇವಾಲಯಕ್ಕೆ ನೀಡಲ್ಪಟ್ಟ ದಾನಗಳನ್ನು ಸ್ವೀಕರಿಸುವ ಅಧಿಕಾರ ಹೊಂದಿದ್ದನು. ಇವನು ದಾನಿಗಳು ನೀಡಿದ ದಾನಗಳನ್ನು ದಾಖಲೆಮಾಡಿ ಅವುಗಳನ್ನು ಸಂರಕ್ಷಿಸಲು ವ್ಯಾಖ್ಯಾನ ಮಾಡುತ್ತಿದ್ದನು. ದಾನಿಗಳಿಂದ ಪಡೆದ ದಾನವನ್ನು ವ್ಯವಸ್ಥಿತವಾಗಿ ವಿನಿಯೋಗಿಸುವ ಆರ್ಥಿಕ ಜವಾಬ್ದಾರಿಯು ಇವನ ಮೇಲಿದ್ದಿತು. ದೇವಾಲಯಕ್ಕೆ ಸಂಬಂಧಿಸಿದಂತೆ ಪ್ರಥಮಾಧಿಕಾರವು ಸ್ಥಾನಿಕನದೆ ಆಗಿದ್ದಿತು. ಇವನು ಗುರು ಸ್ಥಾನದಲ್ಲಿರುತ್ತಿದ್ದುದರಿಂದ ಆಚಾರ್ಯ ಸ್ಥಾನವೂ ಜೊತೆಗೂಡಿ ದೇವಸ್ಥಾನವು ಇವನ ಮಾತಿಗೆ ತಕ್ಕಂತೆ ನಡೆದುಕೊಂಡು ಬರುತ್ತಿದ್ದಿತು. ದೇವಾಲಯ ಆಡಳಿತ ವರ್ಗದ ಅಧಿಕಾರ ಸ್ಥಾನದಲ್ಲಿ ಸ್ಥಾನಿಕನೇ ವಿನ: ಮತ್ತಾರೂ ದೇವಾಲಯವನ್ನು ಪ್ರತಿನಿಧಿಸುತ್ತಿರಲಿಲ್ಲ. ನಾಡನ್ನಾಳುವ ಅರಸರು, ಊರೊಡೆಯರು, ವರ್ತಕವರ್ಗ, ಊರ ಪ್ರಮುಖರು, ಮಹಾಜನರು ಸ್ಥಾನಪತಿಯ ಜೊತೆಗೆ ದೇವಾಲಯದ ಆಡಳಿತಾತ್ಮಕ ವಿಷಯ ಮತ್ತು ಕಾರ್ಯಗಳಲ್ಲಿ ಸಹಕಾರವಿರುತ್ತಿತ್ತು; ಆದರೂ ದೇವಾಲಯ ಆಡಳಿತದ ಎಲ್ಲಾ ಅಧಿಕಾರವು ಸ್ಥಾನಿಕನದೇ ಆಗಿರುತ್ತಿತ್ತು. ಸ್ಥಾನಿಕರ ಉಲ್ಲೇಖವಿರುವ ಹಲವು ಶಾಸನಗಳು ಹಂಪಿಯಲ್ಲಿ ಕಂಡುಬರುತ್ತವೆ. ರಾಮಚಂದ್ರದೇವರ ದೇವಾಲಯದಲ್ಲಿ ಮಾಧವಯ್ಯ ಎಂಬ ಸ್ಥಾನಿಕನು ಆಡಳಿತ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದನು.[೬] ರಘುನಾಥದೇವರ ದೇವಾಲಯದ ಸ್ಥಾನಿಕರಲ್ಲಿ ಮುಳುವಾಗಿಲ ಕೇಶವದೇವರ ಸ್ಥಾನಿಕ ರಂಗಣಾಚಾರ್ಯರ ಮಗ ಚೆನ್ನಪ್ಪಯ್ಯನ ಉಲ್ಲೇಖವಿದೆ.[೭] ಕೆಲವೊಂದು ದೇವಾಲಯಗಳಲ್ಲಿ ಒಬ್ಬ ಸ್ಥಾನಿಕನಲ್ಲದೆ ಹಲವು ಜನ ಸ್ಥಾನಿಕರಿದ್ದುದು ಶಾಸನದಿಂದ ತಿಳಿಯುತ್ತದೆ. ಹಂಪಿಯ ವಿಠಲ ದೇವಾಲಯದ ಕೆಲಸಕಾರ್ಯಗಳನ್ನು ನಿರ್ವಹಿಸಲು ದೇಮಯ, ನರಸಯ್ಯ, ವೀರಪ, ಚಿಕ್ಕವೀರಪ ಮತ್ತು ಪುರುಷೋತ್ತಮ ಎನ್ನುವ ಈ ಐದು ಜನ ಸ್ಥಾನಿಕರನ್ನು ನೇಮಿಸಲಾಗಿದ್ದಿತು.[೮] ದೇವಾಲಯದ ಸ್ಥಾನಿಕ ಪದವಿಯು ನೈಷ್ಠಿಕ ಬ್ರಹ್ಮಚಾರಿಗಳಿಗೆ ಮಾತ್ರ ಅವಕಾಶವನ್ನು ಕಲ್ಪಿಸಲಾಗಿತ್ತು. ಸ್ಥಾನಿಕ ಅಥವಾ ಸ್ಥಾನಚಾರ್ಯರು ಹಾದಿತಪ್ಪಿದಾಗಲೆಲ್ಲಾ ಅವರನ್ನು ಜನರು ಎಚ್ಚರಿಸುತ್ತಿದ್ದರು. ಸ್ಥಾನಿಕರನ್ನು ನೇಮಿಸುವ ದಾನಿಗಳು ಕೆಲವೊಂದು ಕಟ್ಟಳೆಯನ್ನು ಹಾಕಿ ನೇಮಿಸಿರುವುದು ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ವಿಜಯನಗರ ಕಾಲದ ಸ್ಥಾನಿಕರ ಕರ್ತವ್ಯಗಳನ್ನು ಕುರಿತಂತೆ ಎನ್.ವೆಂಕಟರಮಣಯ್ಯನವರು ಉಲ್ಲೇಖಿಸುವಂತೆ "ದೇವಾಲಯಗಳಿಗೆ ಸೇರಿದ ಭೂಮಿಗಳನ್ನು ನೋಡಿಕೊಳ್ಳುವುದು; ದೇವಾಲಯದ ಪರವಾಗಿ ಧನರೂಪದ ಆಸ್ತಿಯನ್ನು ಹೆಚ್ಚಿಸುವುದು; ಉತ್ಸವಗಳಿಗೆ ಹಣದ ಅಡಚಣೆ ಒದಗಿದರೆ ಇದ್ದ ಭೂಮಿಯನ್ನು ಮಾರುವುದು; ಹೊಲದ ಆಧಾರದ ಮೇಲೆ ದೇವಾಲಯದ ಹಣವನ್ನು ಬಡ್ಡಿಗೆ ಸಾಲವಾಗಿ ನೀಡುವುದು; ಸಾಲ ತೀರದಿದ್ದಾಗ ಅಡವಿಟ್ಟಿದ್ದ ಹೊಲವನ್ನು ವಶಪಡಿಸಿಕೊಳ್ಳುವುದು; ದೇವಸ್ಥಾನದ ಭೂಮಿಯನ್ನು ರೈತರಿಗೆ ಗೇಣಿಯಾಗಿ ಕೊಡುವುದು; ದೇವಾಲಯದ ಐಶ್ವರ್ಯದ ಮೇಲ್ವಿಚಾರಣೆ ನೋಡಿಕೊಳ್ಳುವುದಲ್ಲದೆ ಪರಿಚಾರಕ ವರ್ಗದವರನ್ನು ಹಾಗೂ ಅರ್ಚಕರನ್ನು ನೇಮಕ ಮಾಡಿಕೊಳ್ಳುವ ಜವಾಬ್ದಾರಿಯು

ಸ್ಥಾನಿಕನದಾಗಿರುತ್ತಿತ್ತು"[೬] ಎಂದು ಹೇಳಿರುವು ಸಮಂಜಸವಾಗಿದೆ. ಇಲ್ಲಿ ದೇವಾಲಯದ ಸಕಲ ಜವಾಬ್ದಾರಿಯೂ ಸ್ಥಾನಿಕನದಾಗಿರುತ್ತಿತ್ತು ಎಂಬ ವಿಷಯ ಸ್ಪಷ್ಟವಾಗಿ ಕಂಡುಬರುತ್ತದೆ.

ಆಡಳಿತ ಮಂಡಳಿ

ದೇವಾಲಯಗಳ ಆಡಳಿತ ನಿರ್ವಹಣೆಯಲ್ಲಿ ಮಂಡಳಿಯು ಇರುವುದು ತಿಳಿಯುತ್ತದೆ. ಇಲ್ಲಿ ಮುಖ್ಯವಾಗಿ ಮಂಡಳಿಯಲ್ಲಿ ಸದಸ್ಯರಿರುತ್ತಿದ್ದರು. ದೇವಾಲಯದ ಸದಸ್ಯರನ್ನು ಉಲ್ಲೇಖಿಸುವ ಶಾಸನವು ಹಂಪಿಯ ಬಾಲಕೃಷ್ಣ ದೇವಾಲಯದಲ್ಲಿ ಕಂಡುಬರುತ್ತದೆ. ಈ ದೇವಾಲಯದಲ್ಲಿ ಮಾತ್ರವೇ ಮಂಡಳಿ ಇದ್ದು ಸದಸ್ಯರಿರುವುದನ್ನು ಹೆಸರಿಸಲಾಗಿದೆ. ಇನ್ನುಳಿದ ಶಿಲಾಶಾಸನದಲ್ಲಿ ಸದಸ್ಯರು ಅಥವಾ ಮಂಡಳಿಗಳ ಬಗ್ಗೆ ಉಲ್ಲೇಖ ಸಿಗುವುದಿಲ್ಲ. ಮೇಲೆ ತಿಳಿಸಿದ ದೇವಾಲಯದ ಶಾಸನದಲ್ಲಿ ಸದಸ್ಯರುಗಳ ಹೆಸರುಗಳನ್ನು ಉಲ್ಲೇಖಿಸಿರುವುದರಿಂದ ಮಂಡಳಿಯೂ ಇದ್ದಿತ್ತೆಂಬುದು ಸ್ಪಷ್ಟವಾಗುತ್ತದೆ. ದೇವಾಲಯದ ಸದಸ್ಯರೆಂದು ಉಲ್ಲೇಖಿಸಿದ ಶಾಸನದಲ್ಲಿ ಶೀಲಾದೀಕ್ಷಿತ, ನರಸಿಂಹದೀಕ್ಷಿತ, ಭಾನುಭಟ್ಟ, ವಿರೂಪಾಕ್ಷಭಟ್ಟ, ಲಿಂಗಭಟ್ಟ ಈ ಐವರು ಪ್ರಮುಖರಾಗಿದ್ದಾರೆ.[೭] ದೇವಾಲಯದ ಹೆಚ್ಚಿನ ಕಾರ್ಯನಿರ್ವಹಣೆ, ಸಲಹಾ ಸಮಿತಿಯ ರೀತಿಯಲ್ಲಿ ಸ್ಥಾಪಕರಿಗೆ ಸಹಾಯಕರಾಗಿ ಮಂಡಳಿಯು ಇದ್ದಿತ್ತೆನ್ನಬಹುದು. ಮಂಡಳಿಯಲ್ಲಿ ಎಷ್ಟು ಸದಸ್ಯರಿರಬೇಕೆಂದು ಶಾಸನದಲ್ಲಿ ಹೇಳಿರುವುದಿಲ್ಲ. ಈ ಶಾಸನದಲ್ಲಿ ಐದು ಸದಸ್ಯರನ್ನು ಮಾತ್ರ ಉಲ್ಲೇಖಿಸಲಾಗಿದೆ. ದೇವಾಲಯದ ಅಭಿವೃದ್ಧಿ ಕಾರ್ಯದಲ್ಲಿ ಸದಸ್ಯರಿರುವ ಮಂಡಳಿಯು ಮಹತ್ವದ ಸ್ಥಾನವನ್ನು ಪಡೆದುಕೊಂಡಿತ್ತೆಂದು ಹೇಳಬಹುದು. ಇವರ ನೇಮಕಾತಿಯು ಯಾರಿಂದಾಗುತ್ತಿತ್ತು ಎನ್ನುವುದು ತಿಳಿಯುವುದಿಲ್ಲ. ಇವರನ್ನು ದೇವಾಲಯದ ನಿರ್ಮಾಪಕರು ನೇಮಿಸುವ ಪರಿಪಾಠವಿರಬಹುದು. ಇಂತಹ ಮಂಡಳಿಯ ಸದಸ್ಯರ ಉಪಜೀವನಕ್ಕೆ ಕೃಷ್ಣದೇವರಾಯನು ದೇವಾಲಯದ ನಿರ್ಮಾಣದ ಸಂದರ್ಭದಲ್ಲಿ ಇವರಿಗಾಗಿ ತಲಾ ಅರ್ಧ ಖಂಡುಗ ಗದ್ದೆಯನ್ನು ಬೇರೆ ಬೇರೆ ಕಡೆಯಲ್ಲೂ ಬಿಟ್ಟಂತೆ ಅಲ್ಲಿರುವ ಶಾಸನದಲ್ಲಿ ಉಲ್ಲೇಖವಾಗಿದೆ.

ಅರ್ಚಕ

ದೇವಾಲಯದ ಪರಿಚಾರಕರಲ್ಲಿ ಮುಖ್ಯವಾಗಿ ಅರ್ಚಕನು ಪ್ರಥಮ ಸ್ಥಾನದವನಾಗಿದ್ದಾನೆ. ದೇವಾಲಯ ನಿರ್ಮಾಣವಾದಂದಿನಿಂದಲೆ ಅರ್ಚಕನು ನೇಮಿಸಲ್ಪಡುತ್ತಿದ್ದನು. ದೇವಾಲಯದ ಮೂಲ ಮೂರ್ತಿಗೆ ಸಾಂಗೋಪಾಂಗವಾಗಿ ಪೂಜೆ-ಪುನಸ್ಕಾರಗಳನ್ನು ತಪ್ಪದೆ ನೆರವೇರಿಸಿಕೊಂಡು ಹೋಗುವುದಕ್ಕೆ ಅರ್ಚಕನು ನೇಮಕವಾಗುತ್ತಿದ್ದನು. ಅರ್ಚಕನನ್ನು ದಾನಿಗಳು, ದೇವಾಲಯಗಳ ನಿರ್ಮಾಪಕರು, ಮಹಾಜನರು ಅರಸರು ತಮ್ಮಗಳ ಆದೇಶನುಸಾರವಾಗಿ ನಡೆಯುವ ವ್ಯಕ್ತಿಯನ್ನು ಆಯ್ಕೆ ಮಾಡುತ್ತಿದ್ದರು. ಇವರಲ್ಲದೆ ಇನ್ನುಳಿದ ಅರ್ಚಕವರ್ಗವು ನೇಮಕವಾಗುತ್ತಿತ್ತು. ಒಂದು

ದೇವಾಲಯದಲ್ಲಿ ಒಬ್ಬರಲ್ಲವೆ ಹಲವು ಅರ್ಚಕರು ಇರುತ್ತಿದ್ದರು. ಅರ್ಚಕರು ಇಂತಿಷ್ಟೆ ಇರಬೇಕೆಂದು ನಿರ್ಬಂಧವಿಲ್ಲ. ದೇವಾಲಯದ ಗಾತ್ರ, ಪೂಜೆ-ಪುನಸ್ಕಾರ, ಉತ್ಸವ-ರಥೋತ್ಸವಗಳಿಗನುಗುಣವಾಗಿ ಅರ್ಚಕರಿರುತ್ತಿದ್ದರು. ಮುಖ್ಯವಾಗಿ ಅರ್ಚಕನನ್ನು ನೇಮಿಸಿದ ಮೇಲೆ ಇವನು ದಿನನಿತ್ಯದಲ್ಲೂ ಪೂಜೆಕೈಂಕರ್ಯಗಳನ್ನು ನಡೆಸಿಕೊಂಡು ಹೋಗಬೇಕಾಗುತ್ತಿತ್ತು. ಇವರಲ್ಲಿ ಅರ್ಚಕವೃತ್ತಿ ವಂಶಪಾರಂಪರ್ಯವಾಗಿ ಮುಂದುವರಿಯುತ್ತಿತ್ತು. ದೇವಾಲಯ ಮತ್ತು ದೇವರ ಸನ್ನಿಧಾನವು ಆಕರ್ಷಕ ಮತ್ತು ಸುಂದರವಾಗಿರಲೂ ಅರ್ಚಕನು ಮುಖ್ಯ ಕಾರಣನಾಗುತ್ತಿದ್ದನೆಂಬುದು ಶೈವಾಗಮದಲ್ಲಿ ನಿರೂಪಿತವಾಗಿದೆ. ಆಗಮೋಕ್ತ ಕ್ರಮದಲ್ಲಿ ಪ್ರತಿನಿತ್ಯ ದೇವರ ವಿಗ್ರಹಕ್ಕೆ ಪೂಜೆ ಸಲ್ಲಿಸುವುದು ಪೂಜಾರಿಯ ಅಥವಾ ಅರ್ಚಕನ ಕರ್ತವ್ಯವಾಗಿರುತ್ತಿತ್ತು. ಬೇರಾವ ವಿಷಯಕ್ಕೂ ಹಾಗೂ ಕೆಲಸಕಾರ್ಯಗಳಿಗೂ ಅವನು ಜವಾಬ್ದಾರನಾಗಿರಲಿಲ್ಲ. ಅವನ ಸೇವೆಯನ್ನು ಪರಿಗಣಿಸಿ ದಾನಿಗಳು, ದೇವಾಲಯದ ಬೇರಾವ ವಿಷಯಕ್ಕೂ ಹಾಗೂ ಕೆಲಸಕಾರ್ಯಗಳಿಗೂ ಅವನು ಜವಾಬ್ದಾರನಾಗಿರಲಿಲ್ಲ. ಅವನ ಸೇವೆಯನ್ನು ಪರಿಗಣಿಸಿ ದಾನಿಗಳು, ದೇವಾಲಯದ ನಿರ್ಮಾಪಕರ, ಅರಸರು ಮುಂತಾದ ಜನರು ಭೂಮಿ ಮತ್ತು ಹಣದ ರೂಪದಲ್ಲಿ ಸಂಭಾವನೆಯನ್ನು ನೀಡುತ್ತಿದ್ದರು. ಹಂಪಿಯ ದೇವಾಲಯಗಳಲ್ಲಿ ಅರ್ಚಕರು ಮತ್ತು ಅವರ ಹೆಸರು, ಹುದ್ದೆ, ಅವರಿಗೆ ನೀಡಿದ ದಾನದತ್ತಿಗಳ ಉಲ್ಲೇಖವಿರುವ ಶಾಸನಗಳು ಹಲವು ದೊರೆಯುತ್ತವೆ. ಬಾಲಕೃಷ್ಣ ದೇವಾಲಯದ ಶಾಸನದಲ್ಲಿ ಅರ್ಚಕರನ್ನು ಉಲ್ಲೇಖಿಸಿದೆ.[೮] ದೇವಾಲಯಗಳಲ್ಲಿ ಅರ್ಚಕನು ಬಹಳ ಮುಖ್ಯ ಅಂಗವಾಗಿದ್ದನು. ಅವನು ಹೇಗಿರಬೇಕೆಂದು ಆಗಮವೊಂದು ಹೀಗೆ ಹೇಳುತ್ತಿದೆ.

"ಅರ್ಚಕಸ್ಯತು ಮಹಾತ್ಮ್ಯಾತ್ ಪೂಜ್ಯ ಬಿಂಬಸ್ಯ ಸೌಷ್ಮವಾತ್ ಪೂಜೋಪಕರಣಾಚ್ಚೈವ ತ್ರಿಭಿಸ್ಸಾನ್ನಿಧ್ಯಮುಚ್ಯತೇ"[೯]

ಎಂದಿದೆ ಇದರರ್ಥ ಅರ್ಚಕನು ಸದಾಚಾರ ಸಂಪನ್ನನಾಗಿ, ಸುಶಿಕ್ಷಿತವಾಗಿ, ತಪಸ್ವಿಯಾಗಿ, ನಿಗ್ರಹಾನುಗ್ರಹ ಸಾಮರ್ಥ್ಯಶಾಲಿಯಾಗಿರಬೇಕೆಂಬುದೇ ಆಗಿದೆ. ದೇವಾಲಯದ ಅರ್ಚಕನಿಗೆ ಕೆಲವು ವಿಶೇಷ ಗುಣಗಳಿರಬೇಕೆಂದು ಶಾಸ್ತ್ರ ಗ್ರಂಥಗಳು ಹೇಳುತ್ತವೆ. ಅರ್ಚಕರಿಗೆ ತಪಸ್ಸು, ನಿಷ್ಠೆ, ನಿಯಮ ಹಾಗೂ ಶೀಲಗಳಿರಬೇಕು ಅದಕ್ಕೆ ಅರ್ಚಕಸ್ಯ ತಪೋಬಲಾತ್ ಎಂದು ಹೇಳಿವೆ. ಹಂಪಿಯ ಬಾಲಕೃಷ್ಣ ದೇವಾಲಯದ ಪೂಜೆ-ಉತ್ಸವ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗಲು ಕೃಷ್ಣದೇವರಾಯನು ೩೭ ಬ್ರಾಹ್ಮಣರನ್ನು ನೇಮಿಸಿದನು.[೧೦] ಈ ಶಾಸನದಲ್ಲಿ ವಿಶೇಷವಾಗಿ ಒಂದೇ ದೇವಾಲಯದಲ್ಲಿ ಬೇರೆ ಬೇರೆ ಪೂಜಾ ವಿಧಿಗಳನ್ನು ನೆರವೇರಿಸಲು ಹಲವು ವಿಧಿಗಳಿಗೆ ಹಲವಾರು ಅರ್ಚಕರಿರುತ್ತಿದ್ದುದು ತಿಳಿಯುತ್ತದೆ. ಅರ್ಚಕರು ಬ್ರಾಹ್ಮಣರಾಗಿರುತ್ತಿದ್ದುದರಿಂದ ರಾಯನು ತನ್ನ ಆಮುಕ್ತಮಾಲ್ಯದದಲ್ಲಿ ಬ್ರಾಹ್ಮಣರನ್ನು ಹೆಚ್ಚು ಗೌರವಿಸಿ ಅವರನ್ನು ವಿಶೇಷವಾಗಿ ಕಾಣುತ್ತಿದ್ದುದು ತಿಳಿದುಬರುತ್ತದೆ. ಬ್ರಾಹ್ಮಣರು ನೀತಿವಂತರೂ, ಪ್ರಾಮಾಣಿಕರೂ, ಕಾರ್ಯಸಮರ್ಥರು ಆಗಿದ್ದುದರಿಂದ

ಅಂದಿನ ಬ್ರಾಹ್ಮಣರಲ್ಲಿ ರಾಯನಿಗೆ ಭಕ್ತಿ ಮತ್ತು ನಂಬಿಕೆಗಳು ಹೆಚ್ಚಿದ್ದವು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬ್ರಾಹ್ಮಣರನ್ನು ವೇದಾಧ್ಯಯನ ಸಂಪನ್ನರೂ, ಜಪಯಜ್ಞಶೀಲರೂ ಆಗಿದ್ದರು. ಕೇವಲ ಐಶ್ವರ್ಯಕಾಂಕ್ಷಿಗಳಾಗಿರಲಿಲ್ಲ. ಇಂದ್ರ ಕುಬೇರರು ದಾನಕೊಟ್ಟರೂ ಅವರು ದಾನಕ್ಕಾಗಿ ಕೈಯೊಡ್ಡುವವರಾಗಿರಲಿಲ್ಲ ಎಂದು ತನ್ನ ಗ್ರಂಥದಲ್ಲಿ ಹೇಳಿದ್ದಾನೆ. ಇನ್ನೊಂದು ಕಡೆ ರಾಯನು ಬ್ರಾಹ್ಮಣರು ವಿದ್ವತ್ತಿನಿಂದಲೂ, ವೈದಿಕ ವೃತ್ತಿಯಿಂದಲೂ ಜೀವನ ಸಾಗಿಸುತ್ತಿದ್ದರು. ದೇವಾಲಯದಲ್ಲಿ ಅರ್ಚಕರಾಗಿ, ಪುರೋಹಿತರಾಗಿ, ಜ್ಯೋತಿಷ್ಯರಾಗಿ ಜೀವನ ನಡೆಸುತ್ತಿದ್ದರು. ಇವರಿಗೆ ದೇವಾಲಯದ ಛತ್ರದಲ್ಲಿ ಉಚಿತ ಭೋಜನ ಸಿಗುತ್ತಿದ್ದಿತ್ತೆಂದು ಅಮುಕ್ತಮಾಲ್ಯದದಲ್ಲಿ ಉಲ್ಲೇಖಿಸಲಾಗಿದೆ.

ಆಚಾರ್ಯರು

ಇವರು ಬ್ರಾಹ್ಮಣ ವರ್ಗದವರಾಗಿದ್ದು, ದೇವಾಲಯದ ಕೆಲಸ ಕಾರ್ಯಗಳಲ್ಲಿ ಸಲಹೆ-ಸೂಚನೆಗಳನ್ನು ನೀಡುವವರಾಗಿದ್ದರು. ಬಾಲಕೃಷ್ಣ ದೇವಾಲಯದ ಆಚಾರ್ಯರಾದ ತಿಮ್ಮಣ್ಣಾಚಾರ್ಯ ಮತ್ತು ರಾಮಣಾಚಾರ್ಯನಿಗೆ ೧ ಖಂಡುಗ ಗದ್ದೆಯನ್ನು ದತ್ತಿಯಾಗಿ ನೀಡಿರುವುದು ಶಾಸನದಲ್ಲಿ ಉಲ್ಲೇಖಿತವಾಗಿದೆ.[೧೧]

ಪೌರಾಣಿಕರು

ಇವರು ಶೈವ ಮತ್ತು ವೈಷ್ಣವ ದೇವಾಲಯಗಳೆರಡರಲ್ಲೂ ಕಂಡುಬರುತ್ತಾರೆ. ದೇವಾಲಯದ ವಿಶೇಷ ದಿನದಂದು ಮೂಲ ದೇವರಿಗೆ ಸಂಬಂಧಿಸಿದಂತೆ ಪುರಾಣವನ್ನು ಹೇಳುವುದು ಇವರ ಮುಖ್ಯ ಕೆಲಸವಾಗಿತ್ತು. ಇವರನ್ನು ಶಾಸನಗಳಲ್ಲಿ ಪುರಾಣದವರೆಂದು ಕರೆಯಲಾಗಿದೆ. ಶಕ್ತಿ ದೇವಾಲಯಗಳಲ್ಲಿಯೂ ದೇವಿ ಪುರಾಣವನ್ನು ಹೇಳಲಾಗುತ್ತಿದ್ದಿತು. ಇಂದಿಗೂ ಕೂಡಾ ಈ ಒಂದು ಸಂಪ್ರದಾಯ ಬೆಳೆದುಕೊಂಡು ಬಂದಿದೆ. ಹಂಪಿಯ ಬಾಲಕೃಷ್ಣ ದೇವಾಲಯದಲ್ಲಿ ಪುರಾಣ ಹೇಳುವುದಕ್ಕೆ ಕೃಷ್ಣದೇವರಾಯನು ಆರಗದ ವಿಷ್ಣುಭಟ್ಟರ ಮಕ್ಕಳು ಹಂಪಣಭಟ್ಟರಿಗೆ ಮತ್ತು ಆನೆಗುಂದಿಯ ನಾರಸಿಂಹಭಟ್ಟರಿಗೆ ೨ ಖಂಡುಗ ಗದ್ದೆಯನ್ನು ನೀಡಿರುವುದು ಕಂಡುಬರುತ್ತದೆ.[೧೨] ಅಲ್ಲದೆ, ಕ್ರಿ.ಶ. ೧೦೭೬ರ ಶಾಸನವೊಂದರಲ್ಲಿ ಮಠದಲ್ಲಿ ಪುರಾಣ ವ್ಯಾಖ್ಯಾನ ಮಾಡುವ ಉಪಾಧ್ಯಾಯರಿಗೆ ಪ್ರತಿವರ್ಷ ೮೦ ಲೊಕ್ಕಿಗದ್ಯಾಣ ನೀಡಿದಂತೆ ತಿಳಿಯುತ್ತದೆ.[೧೩] ಹಂಪಿಯ ಶಾಸನಗಳಲ್ಲಿ ಕಂಡುಬರುವಂತೆ ಪುರಾಣ ಹೇಳುವವರನ್ನು ದಾನಿಗಳು ನೇಮಿಸಿ ಅವರಿಗೆ ಗದ್ದೆ ಅಥವಾ ಹಣದ ರೂಪದಲ್ಲಿ ಸಂಭಾವನೆಯನ್ನು ನೀಡಲಾಗುತ್ತಿತ್ತು. ಇವರ ಉಲ್ಲೇಖ ಕೆಲವೊಂದು ಶಾಸನಗಳಲ್ಲಿ ಮಾತ್ರ ಕಂಡುಬರುತ್ತದೆ.

ಜ್ಯೋತಿಷ್ಯರು

ಹಂಪಿಯ ದೊಡ್ಡ ದೇವಾಲಯಗಳಲ್ಲಿ ಜ್ಯೋತಿಷ್ಯರು ಪ್ರಮುಖರಾಗಿ ಕಂಡುಬರುತ್ತಾರೆ. ಇವರ ಹೆಸರೆ ಹೇಳುವಂತೆ ದೇವಾಲಯದಲ್ಲಿ ನಡೆಯುವ ಪೂಜೆ-ಉತ್ಸವಾದಿ ಇತ್ಯಾದಿ ಕಾರ್ಯಗಳ ಬಗ್ಗೆ ಮಹತ್ವದ ದಿನಗಳನ್ನು ಮತ್ತು ಸಮಯವನ್ನು ಸೂಚಿಸಲು ನೇಮಕವಾಗಿದ್ದರು. ಇದನ್ನು ಜ್ಯೋತಿಷ್ಯಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖವಾದಂತೆ ದಿನಗಳನ್ನು ತಾಳೆನೋಡಿ ಸೂಚನೆಯನ್ನು ನೀಡುತ್ತಿದ್ದರು. ಇವರ ಕುರಿತಂತೆ ಬಾಲಕೃಷ್ಣ ದೇವಾಲಯದಲ್ಲಿ ಉಲ್ಲೇಖ ಸಿಗುತ್ತದೆ. ಕೃಷ್ಣದೇವರಾಯನು ತಿಪ್ಪಜೋಯಿಷ್ಯರನ್ನು ದೇವಾಲಯದ ಜ್ಯೋತಿಷ್ಯರನ್ನಾಗಿ ನೇಮಕ ಮಾಡಿ ಅವರಿಗೆ ಮುದ್ದಲಾಪುರದಲ್ಲಿ ಬೆನಕನಗದ್ದೆ ಖಂಡುಗ ಹತ್ತು ಕೊಳಗ ಭೂಮಿಯನ್ನು ದಾನ ನೀಡಿರುವನು. ಇದನ್ನು ದೇವಾಲಯದಲ್ಲಿರುವ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೧೪]

ಬ್ರಹ್ಮತ್ವದವರು

೧೪. ಬ್ರಹ್ಮ ಎನ್ನುವ ವ್ಯಕ್ತಿಯು ಹಬ್ಬಗಳ ವಿಶೇಷ ಸಂದರ್ಭದಲ್ಲಿ ದೇವಾಲಯದ ಮುಖ್ಯ ಪೂಜಾರಿ ಅಥವಾ ಅರ್ಚಕನಾಗಿ ನೇಮಕವಾದ ವ್ಯಕ್ತಿಯಾಗಿದ್ದನು. ಇವನ ಬಗ್ಗೆ ಬಾಲಕೃಷ್ಣ ದೇವಾಲಯದಲ್ಲಿ ಉಲ್ಲೇಖ ಸಿಗುತ್ತದೆ.[೧೫] ಬ್ರಹ್ಮತ್ವದ ರಂಗನಾಥ ದೀಕ್ಷಿತರಿಗೆ ಮುದ್ದಲಾಪುರದಲ್ಲಿ ಗದ್ದೆಯನ್ನು ರಾಯನು ದತ್ತಿಯಾಗಿ ನೀಡಿದ ವಿಷಯ ತಿಳಿದುಬರುತ್ತದೆ.

ವೇದಪಾರಾಯಣದವರು

ಹೆಚ್ಚು ವೈಷ್ಣವ ದೇವಾಲಯಗಳಲ್ಲಿ ಪ್ರತಿನಿತ್ಯದಲ್ಲೂ ಹಾಗೂ ವಿಶೇಷ ದಿನಗಳಲ್ಲಿ ವೇದಗಳನ್ನು ಹೇಳಲು, ಪಠನಮಾಡಲು ವ್ಯಕ್ತಿಗಳಿರುತ್ತಿದ್ದರು. ಇವರನ್ನು ವೇದಪರಾಯಣದವರೆಂದು ಕರೆಯಲಾಗಿದೆ. ಇವರು ಪೂಜೆಯ ವೇಳೆ ನವರಂಗದಲ್ಲಿ ವೇದಗಳಾದ ಋಗ್ವೇದ, ಸಾಮವೇದ, ಯಜುರ್ವೇದ ಮತ್ತು ಅಥರ್ವವೇದಗಳನ್ನು ಪಠಣಮಾಡುತ್ತಿದ್ದರು. ಒಂದೊಂದು ವೇದಗಳನ್ನು ಓದಲಿಕ್ಕೆ ಒಬ್ಬೊಬ್ಬರನ್ನು ನೇಮಿಸಿರುವುದು ಕಂಡುಬರುತ್ತದೆ. ಬಾಲಕೃಷ್ಣ ದೇವಾಲಯದಲ್ಲಿ ನಾಲ್ಕು ವೇದಗಳು ಓದಲ್ಪಡುತ್ತಿದ್ದವು. ಋಗ್ವೇದಕ್ಕೆ ಭಾನುಭಟ್ಟರು, ಯಜುರ್ವೇದಕ್ಕೆ ವಿರೂಪಕ್ಷಾಭಟ್ಟರು, ಸಾಮವೇದಕ್ಕೆ ನಾರಸಿಂಹಭಟ್ಟರನ್ನು ನೇಮಿಸಿ ಅವರ ಉಪಜೀವನಕ್ಕೆ ೩ ಖಂಡುಗ ಗದ್ದೆಯನ್ನು ಕೃಷ್ಣದೇವರಾಯನು ನೀಡಿರುವುದು ಶಾಸನದಲ್ಲಿ ಉಲ್ಲೇಖವಿದ.[೧೬]

ಮಂತ್ರಪುಷ್ಪದವರು

ದೇವಾಲಯದ ಪೂಜೆಯ ವೇಳೆಯಲ್ಲಿ ಅರ್ಚಕರಿಗೆ ಸಹಾಯಕರಾಗಿ ಮಂತ್ರಗಳನ್ನು

ಪಠಿಸುತ್ತಾ ಪುಷ್ಪವನ್ನು ದೇವರಿಗೆ ಅರ್ಪಿಸುವ ವರ್ಗದವರಿಗೆ ಮಂತ್ರಪುಷ್ಪದವರೆಂದು ಶಾಸನಗಳಲ್ಲಿ ಕರೆಯಲಾಗಿದೆ. ಪ್ರತಿಯೊಂದು ದೊಡ್ಡ ದೇವಾಲಯಗಳಲ್ಲಿ ಈ ವರ್ಗವು ಕೆಲಸ ಮಾಡುತ್ತಿದ್ದಿತು. ದಾನಿಗಳೇ ಇವರನ್ನು ನೇಮಿಸುತ್ತಿದ್ದುದಲ್ಲದೆ, ಸ್ಥಾನಿಕನು ಇವರನ್ನು ಕೆಲವೊಂದು ಬಾರಿ ನೇಮಕ ಮಾಡುತ್ತಿದ್ದನು. ಬಾಲಕೃಷ್ಣ ದೇವಾಲಯದ ಮಂತ್ರಪುಷ್ಪಕ್ಕೆ ಎಲ್ಲಂಭಟ್ಟರನ್ನು ಹಾಗೂ ಇನ್ನೂ ಮೂರು ಜನರನ್ನು ನೇಮಿಸಿ ಅವರಿಗೆ ಹದಿನೈದು ಕೊಳಗ ಖಂಡುಗ ಗದ್ದೆಯನ್ನು ದತ್ತಿ ನೀಡಿರುವುದು ಅದೇ ದೇವಾಲಯದ ಶಾಸನದಲ್ಲಿ ಉಲ್ಲೇಖಿತವಾಗಿದೆ.[೧೭]

ಪವಾಮಾನಭಿಷೇಕದವರು

ದೇವಾಲಯಗಳಲ್ಲಿ ವಿಶೇಷ ದಿನದ ಪೂಜೆಗಾಗಿ ಪವಾಮಾನಾಭಿಷೇಕವು ನಡೆಯುತ್ತಿದ್ದಿತು. ಈ ಕಾರ್ಯಕ್ಕೆ ೧೨ ಜನರನ್ನು ನೇಮಿಸಿರುವುದು ಬಾಲಕೃಷ್ಣ ದೇವಾಲಯದ ಶಾಸನದಿಂದ ತಿಳಿದುಬರುತ್ತದೆ.[೧೮] ಈ ಶಾಸನದಲ್ಲಿ ಪವಾಮಾನಾಭಿಷೇಕ ವರ್ಗದಲ್ಲಿ ನಾರಸಿಂಹಭಟ್ಟರು, ರಾಮದೇವಭಟ್ಟರು, ಮುಮ್ಮಡಿಭಟ್ಟರು, ಕೋನೇರಿಭಟ್ಟರು, ವೆಲ್ಲಂಭಟ್ಟರು, ದೇವಣಭಟ್ಟರು, ಶಂಕರಭಟ್ಟರು, ಅಹೋಬಲಭಟ್ಟರು, ಕನಕಾಭಟ್ಟರು, ತಿಮ್ಮಣಭಟ್ಟರು, ರಾಮಾಭಟ್ಟರು, ತಿರುಮಲಭಟ್ಟರು ಪ್ರಮುಖರಾಗಿದ್ದರು. ಇವರೆಲ್ಲ ಬ್ರಾಹ್ಮಣ ವರ್ಗದವರಾಗಿದ್ದು ಇವರ ಉಪಜೀವನಕ್ಕೆ ದಾನಿಗಳು ೬ ಖಂಡುಗ ಗದ್ದೆಯನ್ನು ನೀಡಿರುವುದು ಅದೇ ಶಾಸನದಲ್ಲಿ ಉಕ್ತವಾಗಿದೆ.

ನಾಮಾತ್ರೇಯರು

ಇವರು ಬ್ರಾಹ್ಮಣವರ್ಗದವರಾಗಿ ದೇವಾಲಯದಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಇವರು ದೊಡ್ಡ ದೊಡ್ಡ ದೇವಾಲಯಗಳಲ್ಲಿ ಇರುತ್ತಿದ್ದು, ಪೂಜೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಆಡಳಿತ ವರ್ಗದವರಲ್ಲಿ ಪ್ರಮುಖರಾಗಿರುವರು.

ಸೇನಭೋವರು

ದೇವಾಲಯದ ಬೇರೆ ಬೇರೆ ಕೆಲಸಗಳಿಗನುಗುಣವಾಗಿ ಸೇನಭೋವರು ಇರುತ್ತಿದ್ದರು. ಇವರಲ್ಲಿ ಕಾಣಾಚಿಯ ಸೇನಭೊವ, ಪೇಠೆಯ ಸೇನಭೊವ, ಸ್ಥಳ ಸೇನಭೊವ ಮುಂತಾದವರು ಪ್ರಮುಖರಾಗಿರುವರು. ಇವರ ಉಲ್ಲೇಖ ಹಂಪಿಯ ಎಲ್ಲಾ ದೇವಾಲಯಗಳಲ್ಲಿ ಕಂಡುಬರುತ್ತದೆ.[೧೯] ಹಜಾರರಾಮ ಚಂದ್ರ ದೇವಾಲಯದಲ್ಲಿ ಸೇನಭೊವ ನರಸಯನ ಉಲ್ಲೇಖವಿದೆ. ದೇವಾಲಯಕ್ಕೆ ಸಂಬಂಧಪಟ್ಟ ತೀರ್ವಾನದಲ್ಲಿ ಇವರು ಪ್ರಮುಖರಾಗಿರುತ್ತಿದ್ದರು. ದೇವಾಲಯದ ಭೂಮಿಗಳಿಂದ ಬರುವ ತೆರಿಗೆ ಆದಾಯಗಳನ್ನು ಇವರ ಮೂಲಕ ಸಂಗ್ರಹಿಸಲಾಗುತ್ತಿದ್ದಿತು.

ಕರಣಿಕ (ಲೆಕ್ಕಿಗ)

ದೇವಾಲಯಕ್ಕೆ ದಾನಿಗಳು ನೀಡಿದ ದಾನಗಳನ್ನು ಮತ್ತು ಖರ್ಚು-ವೆಚ್ಚವನ್ನು ದೇವಾಲಯದ ಪುಸ್ತಕದಲ್ಲಿ ದಾಖಲೆ ಮಾಡುವ ಅಧಿಕಾರಿಯಾಗಿದ್ದನು. ದಾನಿ ಮತ್ತು ಸ್ಥಾನಿಕನ ಮಧ್ಯ ಆದಂತಹ ಒಪ್ಪಂದಗಳನ್ನು ಇವನು ಲೆಕ್ಕದ ಪುಸ್ತಕದಲ್ಲಿ ನಮೂದಿಸಬೇಕಾಗಿದ್ದಿತು. ದೊಡ್ಡ ದೇವಾಲಯಗಳಲ್ಲಿ ಇವರ ಸಂಖ್ಯೆ ಹೆಚ್ಚಾಗಿರುತ್ತಿದ್ದಿತು. ಧೇವಾಲಯಗಳು ದೇವಸ್ಥಾನಕ್ಕೆ ಸಂಬಂಧಿಸಿ ದಾಖಲೆಗಳನ್ನು ಇಟ್ಟುಕೊಳ್ಳುವ ಜವಾಬ್ದಾರಿಯನ್ನು ಹೊಂದಿದ್ದವು. ಆದಕಾರಣ ತಪ್ಪದೆ ಕೆಲಸವನ್ನು ನಿರ್ವಹಿಸಲು ಕರಣಿಕ ಅಥವಾ ಲೆಕ್ಕಿಗ ಅವಶ್ಯಕವಾದ ಅಂಗವಾಗಿ ದೇವಾಲಯಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದನು. ಇವನು ತನ್ನ ವೃತ್ತಿಯ ಜೊತೆಗೆ ದೇವಾಲಯದ ಪಾತ್ರ ವರ್ಗದ ಬೆಂಪಾಯಿ ಎಂಬುವವಳಿಗೆ ಮೂರು ಕೊಳಗ ಹೊಲವನ್ನು ನೀಡಿರುವುದು ಬಾಲಕೃಷ್ಣ ದೇವಾಲಯದ ಶಾಸನದಲ್ಲಿ ಉಕ್ತವಾಗಿದೆ.[೨೦] ಅದೇ ರೀತಿ ವಿಠಲ ದೇವಾಲಯದ ಆವರಣದಲ್ಲಿನ ತಿರುಮಂಗೈ ಆಳ್ವಾರರ ದೇವಾಲಯದ ಕರಣಿಕನಾಗಿ ರಾಮಯ್ಯಂಗಾರನು ಮತ್ತು ಲೆಕ್ಕಿಗನಾಗಿ ನಯನಾರ್ ತಿರುವೆಂಗಳಯ್ಯಂಗಾರರು ಪುತ್ರ ಪೌತ್ರ ಪಾರಂಪರವಾಗಿ ಲೆಕ್ಕ ಬರೆಯುವ ಕೆಲಸವನ್ನು ಮಾಡುತ್ತಿದ್ದರು.[೨೧] ಇವರು ದೇವಾಲಯಗಳಲ್ಲಿ ನಡೆಯುವ ಕೊಡು-ಕೊಳಿಗೆಯನ್ನು ತಪ್ಪದೆ ದಿನನಿತ್ಯದಲ್ಲೂ ದೇವಾಲಯದ ಲೆಕ್ಕ ಪುಸ್ತಕದಲ್ಲಿ ನಮೂದಿಸಬೇಕಾಗಿತ್ತು. ಇವರು ದೇವಾಲಯದ ಅವಶ್ಯ ಅಂಗವಾಗಿದ್ದರು.

ಘಳಿಯಾರದವರು (ಕಾಯುವವರು)

ಇವರು ದೊಡ್ಡ ದೇವಾಲಯಗಳಲ್ಲಿ ಕಾವಲುಗಾರರಾಗಿ ದೇವಾಲಯದ ರಕ್ಷಣೆಯನ್ನು ಮಾಡುವಲ್ಲಿ ನಿರತರಾದ ವರ್ಗದವರಾಗಿದ್ದರು. ಹೆಚ್ಚಿನದಾಗಿ ದೊಡ್ಡ ದೇವಾಲಯಗಳಲ್ಲಿ ಮಾತ್ರ ಇವರ ಉಲ್ಲೇಖ ಕಂಡುಬರುತ್ತದೆ. ವಿಠಲ ದೇವಾಲಯದ ಶಾಸನದಲ್ಲಿ ಇವರ ಉಲ್ಲೇಖವಿದೆ.[೨೨] ವಿಠಲ ದೇವರ ಪ್ರಸಾದದ ಪಾಲಿನಲ್ಲಿ ಇವರಿಗೆ ಒಂದು ಪಾಲನ್ನು ನೀಡಲಾಗಿದ್ದು, ಮೇಲಿನ ಶಾಸನದಿಂದ ತಿಳಿದುಬರುತ್ತದೆ. ಬಾಲಕೃಷ್ಣ ದೇವಾಲಯದ ಘಳಿಯಾರದವರಾದ ನಾರಸಿಂಹ ಜೋಯಿಷ್ಯರಿಗೆ ಮುದ್ದಲಾಪುರದಲ್ಲಿ ೧೦ ಕೊಳಗ ಗದ್ದೆಯನ್ನು ನೀಡಿರುವುದು ದೇವಾಲಯದ ಶಾಸನದಲ್ಲಿ ತಿಳಿಸಲಾಗಿದೆ.[೨೩] ಇವರು ಪ್ರಮುಖ ವರ್ಗದವರಾಗಿ ಕೆಲಸ ನಿರ್ವಹಿಸುತ್ತಿದ್ದರು. ಇವರಿಗೆ ದಾನಿಗಳು ನೀಡಿದ ದತ್ತಿಗಳಿಂದ ಮತ್ತು ದೇವಾಲಯದ ಆಸ್ತಿಯಿಂದ ಸಂಭಾವನೆಯನ್ನು ನೀಡಲಾಗುತ್ತಿತ್ತು.

ವಿದ್ವಾಂಸರು

ದೇವಾಲಯದ ವರ್ಗದವರಲ್ಲಿ ವಿದ್ವಾಂಸರು ಅಥವಾ ವಿದ್ವನ್ಮಣಿಗಳು ಪ್ರಮುಖರು ಇವರ ಉಲ್ಲೇಖ ಬಾಲಕೃಷ್ಣ ದೇವಾಲಯದಲ್ಲಿದೆ. ವಾಸುದೇವಚಾರ್ಯರು ಮತ್ತು

ಕೃಷ್ಣಭಟ್ಟರು ದೇವಾಲಯದ ವಿದ್ವಾಂಸರಾಗಿದ್ದರು.[೨೪] ದೇವಾಲಯದಲ್ಲಿ ಸಲಹೆ ಸೂಚನೆ ನೀಡುವುದಲ್ಲೆ, ಪಾಂಡಿತ್ಯ ಪ್ರದರ್ಶನ ನೀಡುವುದು ಇವರ ಕೆಲಸವಾಗಿದ್ದಿತು.

ತಿರುವೀಧಿವಿನಿಯೋಗದವರು

ಇವರು ಸಾಮಾನ್ಯವಾಗಿ ಬ್ರಾಹ್ಮಣರುಗಳಾಗಿದ್ದರು. ದೇವಾಲಯಗಳ ಮುಂದಿನ ಬೀದಿಗಳಲ್ಲಿ ವಾಸವಾಗಿರುತ್ತಿದ್ದರು. ಇವರನ್ನು ಶಾಸನಗಳಲ್ಲಿ ವಿನಿಯೋಗದವರೆಂದು ಕರೆಯಲಾಗಿದೆ. ಇವರ ಉಲ್ಲೇಖವು ಬಾಲಕೃಷ್ಣ ದೇವಾಲಯದ ಶಾಸನದಲ್ಲಿ ಕಂಡುಬರುತ್ತದೆ.[೨೫]

ಮಹಾಜನಂಗಳು

ಬಾಲಕೃಷ್ಣ ದೇವಾಲಯದ ಶಾಸನದಲ್ಲಿ ಇವರ ಉಲ್ಲೇಖವಿದೆ.[೨೬] ಇವರ ಉಪಜೀವನಕ್ಕೆ ಭೂಮಿ (ಗದ್ದೆ) ಯನ್ನು ದಾನವಾಗಿ ನೀಡಲಾಗಿದೆ. ಇವರು ದೇವಾಲಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಊರಪ್ರಮುಖರಾಗಿದ್ದರು.

ಬ್ರಾಹ್ಮಣರು

ದೇವಾಲಯದ ಸಕಲ ಕಾರ್ಯಗಳಲ್ಲಿ ಬ್ರಾಹ್ಮಣ ವರ್ಗದವರು ಪಾಲ್ಗೊಳ್ಳುತ್ತಿದ್ದರು. ದೇವಾಲಯದ ಹೊರ ಆವರಣದಲ್ಲಿ ಇವರು ವಾಸವಾಗಿದ್ದು, ಬಾಲಕೃಷ್ಣ ದೇವಾಲಯದ ಶಾಸನದಲ್ಲಿ ಇವರ ಉಲ್ಲೇಖವಿದೆ. ಇವರಿಗೆ ಗದ್ದೆಯನ್ನು ದಾನ ನೀಡಿರುವರು.[೨೭]

ನಿತ್ಯದಾನದವರು

ದೇವಾಲಯದ ವರ್ಗದವರಲ್ಲಿ ನಿತ್ಯದಾನದವರು ದೊಡ್ಡ ದೊಡ್ಡ ದೇವಾಲಯಗಳಲ್ಲಿ ಕಂಡುಬರುತ್ತಾರೆ. ದೇವಾಲಯಕ್ಕೆ ಪ್ರತಿನಿತ್ಯದಲ್ಲೂ ನಡೆಯುವ ಪೂಜಾಕಾರ್ಯಗಳಿಗೆ ದಾನ ನೀಡುವವರನ್ನು ನಿತ್ಯದಾನದವರೆಂದು ಕರೆಯಲಾಗುತ್ತದೆ. ಇವರು ಹೆಚ್ಚಾಗಿ ಶ್ರೀಮಂತ ವರ್ಗಕ್ಕೆ ಸೇರಿದವರಾಗಿದ್ದರು. ಬಾಲಕೃಷ್ಣ ದೇವಾಲಯದಲ್ಲಿ ನಿತ್ಯದಾನವನ್ನು ನಡೆಸಲು ಕನಕಾಭಟ್ಟರು ಇದ್ದರು. ಇವರಿಗೆ ಭೂಮಿಯನ್ನು ದಾನ ನೀಡಿದ್ದು ಅಲ್ಲಿನ ಶಾಸನದಿಂದ ತಿಳಿಯಬಹುದು.[೨೮]

ರಂಗಭೋಗದವರು

ಪ್ರತಿಯೊಂದು ದೇವಾಲಯದಲ್ಲಿ ಸಂಗೀತ, ನಾಟ್ಯ, ವಾದ್ಯಗಳಿಂದ ದೇವರನ್ನು ಸಂತೃಪ್ತಿಗೊಳಿಸಲು ರಂಗಭೋಗದವರಿರುತ್ತಿದ್ದರು. ದೇವಾಲಯಗಳ ಗರ್ಭಗೃಹದ ಮುಂದೆ

ರಂಗಮಂಟಪವು ಅಥವಾ ನವರಂಗದಲ್ಲಿ ಈ ರಂಗಭೋಗದ ಚಟುವಟಿಕೆಗಳು ನಡೆಯುತ್ತಿದ್ದವು. ಹಂಪಿಯಲ್ಲಿರುವ ಪ್ರತಿಯೊಂದು ದೇವಾಲಯಗಳಲ್ಲಿ ಶೈವ ಮತ್ತು ವೈಷ್ಣವ ಎರಡರಲ್ಲಿಯೂ ಈ ರಂಗಭೋಗ ನಡೆಯಲು ನವರಂಗ ಇರುವುದು ಕಂಡುಬರುತ್ತದೆ. ಇದರಲ್ಲಿ ವಾದ್ಯಗಾರರು, ನೃತ್ಯಗಾರರು, ಹಾಡುವವರು, ಪಾತ್ರದವರು ಪ್ರಮುಖರಾಗಿ ಕಂಡುಬರುತ್ತಾರೆ. ಇವರ ಉಲ್ಲೇಖಗಳು ಹಂಪಿಯ ಎಲ್ಲಾ ಶಾಸನಗಳಲ್ಲಿ ಸಿಗುತ್ತವೆ.[೫೯]

ಭಂಡಾರದವರು

ದೇವಾಲಯದ ಆಸ್ತಿ (ಚಿರ ಮತ್ತು ಚರ) ಯನ್ನು ನೋಡಿಕೊಳ್ಳಲು ನೇಮಕವಾದ ವರ್ಗಕ್ಕೆ ಭಂಡಾರದವರೆಂದು ಶಾಸನಗಳಲ್ಲಿ ಉಕ್ತವಾಗಿದೆ. ದಾನಿಗಳು ಹಣವನ್ನು ದಾನ ಮಾಡಿ ಅದನ್ನು ಪುಲಿವೆಟ್ಟು (ಠೇವಣಿ) ಆಗಿ ಪರಿಗಣಿಸಿ ಅದರ ಮೇಲಿನ ಬಡ್ಡಿಯನ್ನು ದೇವರ ಸೇವೆಗೆ ಉಪಯೋಗಿಸುವಂತೆ ನಿಬಂಧನೆಗಳನ್ನು ವಿಧಿಸುತ್ತಿದ್ದರು. ಇಂತಹ ಹಣವನ್ನು ದೇವರ ಭಂಡಾರದಲ್ಲಿಟ್ಟು ಅದನ್ನು ಸಾಲವಾಗಿ ನೀಡಿ ಬಡ್ಡಿಯನ್ನು ಗಳಿಸುತ್ತಿದ್ದವು. ದೇವಾಲಯದ ಭಂಡಾರವನ್ನು ನೋಡಿಕೊಳ್ಳಲು ಭಂಡಾರದವರಿದ್ದರು. ವಿಠಲ ದೇವಾಲಯದಲ್ಲಿ ಹಿರಿಯ ತಿಮ್ಮಯ್ಯನು ದೇವರ ಭಂಡಾರದವನಾಗಿ ದೇವರ ನಾನಾ ಆಭರಣಗಳನ್ನು ಮತ್ತು ಬೀಗಮುದ್ರೆಯನ್ನು ಕಾಯ್ದುಕೊಂಡು ಬರುತ್ತಿದ್ದನು.[೬೦] ಅದಕ್ಕಾಗಿ ಅವನಿಗೆ ಕಂಪಿಲೆ ಮಾಗಣೆಯ ಸಾಯಣಪುರವನ್ನು ನೀಡಿದಂತೆ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಅದೇ ರೀತಿ ವರದಪ್ಪನಾಯಕನು ವಿಠಲೇಶ್ವರ ದೇವರ ನಿತ್ಯ ನೈವೇದ್ಯಕ್ಕೆ ದೇವರಭಂಡಾರಕ್ಕೆ ಹತ್ತು ಘಟ್ಟಿ ವರಹಗಳನ್ನು ನೀಡುತ್ತಾರೆ.[೬೧] ಹಂಪಿಯಲ್ಲಿ ಸಿಗುವ ಇನ್ನುಳಿದ ಶಾಸನಗಳಲ್ಲಿ ದೇವರ ಭಂಡಾರದ ಉಲ್ಲೇಖವಿದೆ.[೬೨] ಶಾಸನಗಳು ದೇವಾಲಯಗಳ ಆಡಳಿತದ ಸ್ವಾಯತ್ತತೆ ಲಕ್ಷಣಗಳನ್ನು ಸ್ಪಷ್ಟಪಡಿಸುತ್ತವೆ.

ಛತ್ರದವರು

ಕೆಲವೊಂದು ದೇವಾಲಯಗಳಲ್ಲಿ ಶ್ರೀ ವೈಷ್ಣವರ ಊಟಕ್ಕಾಗಿ ರಾಮಾನುಜಕೂಟ ವಿರುತ್ತಿದ್ದವು. ಈ ಕೂಟಗಳಲ್ಲಿ ಕೆಲಸಮಾಡಲು ಛತ್ರದವರಿರುತ್ತಿದ್ದರು. ಇಲ್ಲಿ ಹಲವಾರು ಜನರು ಕೆಲಸ ಮಾಡುತ್ತಿದ್ದರು. ಇದರ ಉಲ್ಲೇಖ ವಿಠಲ ದೇವಾಲಯದ ಹತ್ತಿರದ ಮೊದಲಿ ಆಳ್ವಾರರ ದೇವಾಲಯದಲ್ಲಿತ್ತು ಇದಕ್ಕೆ ಹರಿವಾಣ ಪ್ರಸಾದ ವಿಠಲದೇವಾಲಯದಿಂದ ಹೋಗುತ್ತಿತ್ತು.[೬೩] ಇವರು ದೇವಾಲಯದ ವರ್ಗದವರಲ್ಲಿ ಪ್ರಮುಖರಾಗಿ ಕಂಡುಬರುತ್ತಾರೆ. ಹಂಪಿಯ ಚಂಡಿಕೇಶ್ವರ ದೇವಾಲಯದಲ್ಲಿ ಛತ್ರವಿದ್ದು ಶಾಸನದಲ್ಲಿ ಉಲ್ಲೇಖವಾಗಿದೆ.[೬೪] ವಿರೂಪಾಕ್ಷ ದೇವಾಲಯದ ಛತ್ರದಲ್ಲಿ ದಿನವೂ ಭೋಜನ ನಡೆಯುತ್ತಿತ್ತು.

ಉಗ್ರಾಣದವರು

[೩೫]ಹಂಪಿಯಲ್ಲಿ ಕಂಡುಬರುವ ದೊಡ್ಡ ದೇವಾಲಯಗಳಲ್ಲಿ ಉಗ್ರಾಣವಿರುವುದು ಇಂದಿಗೂ ನೋಡಬಹುದು. ದೇವಾಲಯಕ್ಕೆ ಬಂದಂತಹ ಧಾನ್ಯಗಳನ್ನು ಈ ಉಗ್ರಾಣದಲ್ಲಿ ಸಂಗ್ರಹಿಸುತ್ತಿದ್ದರು. ಇದನ್ನು ನೋಡಿಕೊಳ್ಳುವುದಕ್ಕೆ ಉಗ್ರಾಣದವರು ನೇಮಕವಾಗಿದ್ದರು. ಉಗ್ರಾಣದಿಂದ ಧಾನ್ಯಗಳನ್ನು ಪೂಜೆ-ಪ್ರಸಾದಕ್ಕೆ ದಿನನಿತ್ಯದಲ್ಲೂ ಉಗ್ರಾಣದ ಅಧಿಕಾರಿಯು ನೀಡುತ್ತಿದ್ದನು. ಬಾಲಕೃಷ್ಣ, ವಿಠಲ, ವಿರೂಪಾಕ್ಷ ಮುಂತಾದ ದೇವಾಲಯಗಳಲ್ಲಿ ಉಗ್ರಾಣಗಳು ಉಳಿದುಕೊಂಡು ಬಂದಿವೆ. ಉಗ್ರಾಣದಲ್ಲಿ ಅಕ್ಕಿ, ಉಪ್ಪು, ಮೆಣಸು, ಸಾಂಬಾರು, ಹೆಸರು, ತುಪ್ಪ, ಸಕ್ಕರೆ, ಬಾಳೆಹಣ್ಣು, ಹಾಲು, ಮೊಸರು, ವೀಳೆಯ ಇತ್ಯಾದಿ ವಸ್ತುಗಳು ಇರುತ್ತಿದ್ದವು.[೩೬]

ಪಾತರದವರು

ದೊಡ್ಡ ದೊಡ್ಡ ದೇವಾಲಯಗಳಲ್ಲಿ ದೇವರ ಸೇವೆಗೆ ಹೆಣ್ಣುಗಳನ್ನು ದಾಸಿಯರಾಗಿ, ಪಾತ್ರದವರಾಗಿ ಬಿಡುವುದು ಪ್ರಾಚೀನ ಕಾಲದಿಂದಲೂ ಕಾಣಸಿಗುತ್ತದೆ. ದೇವಾಲಯದ ರಂಗಭೋಗ ಸೇವೆಯಲ್ಲಿ ಇವರು ಮಹತ್ವದ ಪಾತ್ರವನ್ನು ವಹಿಸುತ್ತಿದ್ದರು. ವಿಜಯನಗರ ಕಾಲದಲ್ಲಿ ಇವರ ಸಂಖ್ಯೆ ದೇವಾಲಯಗಳಲ್ಲಿ ದೇವರ ಸೇವೆಗೆ ಹೆಚ್ಚಾಗಿದ್ದಿತು. ಇವರು ದಿನನಿತ್ಯದಲ್ಲೂ ದೇವರ ಸೇವೆ ಮಾಡಿಕೊಂಡಿರಬೇಕಾಗಿತ್ತು. ಇವರು ಹೆಚ್ಚಾಗಿ ಎಲ್ಲಾ ದೇವಾಲಯಗಳಲ್ಲಿರುತ್ತಿದ್ದರು. ಆರ್ಥಿಕವಾಗಿ ಪ್ರಬಲವಿದ್ದಂತಹ ದೇವಾಲಯಗಳಲ್ಲಿ ಹೆಚ್ಚಿನದಾಗಿ ದಾಸಿಯರು ಅಥವಾ ಪಾತರ ಜನರಿರುತ್ತಿದ್ದರು. ಬಾಲಕೃಷ್ಣ ದೇವಾಲಯದ ಪಾತರದ ಚೆಂಪಾಯಿ ಎಂಬುವವಳು ದೇವರ ಏಕಾಂತದ ಅವಸರದ ಪರಮಾನ್ನದ ಅವಸರದ ನೈವೇದ್ಯಕ್ಕೆ ಮೂರು ಕೊಳಗ ಹೊಲವನ್ನು ದಾನಬಿಟ್ಟಂತೆ ಶಾಸನದಿಂದ ಗೊತ್ತಾಗುತ್ತದೆ.[೩೭] ವಿಜಯನಗರದ ಎಲೆಯ ಮಹಾನಾಡ ಹಲರು ಸೇರಿ ಮಾತಂಗ ಪರ್ವತದ ವೀರೇಶ್ವರ ದೇವರ ಪಾತ್ರ ವೈಭೋಗಕ್ಕೆ ಒಂದು ಗಟ್ಟಿ ವೀಸವನ್ನೂ ನೀಡಿದಂತೆ ಶಾಸನದಿಂದ ತಿಳಿಯುತ್ತದೆ.[೩೮]

ಹೂವಿನ ದಂಡೆಯವರು

ಹಂಪಿಯ ದೇವಾಲಯಗಳಲ್ಲಿ ದೇವರ ಪೂಜೆಗೆ ಹೂವಿನ ತೋಟವು ಪ್ರತಿಯೊಂದು ದೇವಾಲಯಗಳಲ್ಲಿ ಇದ್ದುದು ಗೊತ್ತಾಗುತ್ತದೆ. ತೋಟದ ಹೂವನ್ನು ತಂದು ಹಾರಗಳನ್ನು ಅಥವಾ ದಂಡೆಗಳನ್ನು ಕಟ್ಟುವ ಕೆಲಸಗಾರರಿರುತ್ತಿದ್ದರು. ಪ್ರತಿನಿತ್ಯ ಇವರು ಹೂವನ್ನು ಕಟ್ಟುವುದು, ಕಟ್ಟಿದ ದಂಡೆಗಳನ್ನು ದೇವರ ಪೂಜೆಗೆ ಅರ್ಪಿಸುವುದು ಇವರ ಕೆಲಸವಾಗಿದ್ದಿತು. ಹಂಪಿಯ ಹೇಮಕೂಟದ ನರಸಿಂಹದೇವರ ಹೂವಿನ ತೋಟವಿದ್ದುದು ಕಂಡುಬರುತ್ತದೆ.[೩೯]

ಅದೇ ರೀತಿಯಾಗಿ ವಿಠಲ ದೇವಾಲಯದ ಆವರಣದಲ್ಲಿ ಗಂಧದ ತಿಪ್ಪಿಸೆಟ್ಟೆಯು ಆಳ್ವಾರರನ್ನು ಪ್ರತಿಷ್ಠೆಮಾಡಿ, ದೇವರುಗಳಿಗೆ ಹೂವಿನದಂಡೆ ಸರಬರಾಜಿನ ವೆಚ್ಚಕ್ಕಾಗಿ ೧೦೦ ವರಹ ಗದ್ಯಾಣಗಳನ್ನು ಪೊದುವಟ್ಟಾಗಿ ನೀಡಿರುತ್ತಾನೆ.[೪೦] ವಿಠಲ ದೇವಾಲಯದ ದೇವರ ಪೂಜೆಗೆ ಹೂವಿನ ಹಾರ ತಯಾರಿಸಿದವರಿಗೆ ೩ ಪಡಿಯನ್ನು ಬಿಡಬೇಕೆಂದು ಶಾಸನದಲ್ಲಿದೆ.[೪೧] ಒಟ್ಟಾರೆಯಾಗಿ ದೇವಾಲಯಗಳ ತೋಟದಿಂದ ತಂದಂತಹ ಹೂವನ್ನು ಹಾರ ಅಥವಾ ದಂಡೆಗಳನ್ನು ಕಟ್ಟಲಿಕ್ಕೆ ಹೂವಿನದಂಡೆಯವರಿರುತ್ತಿದ್ದರು.

ಇತಿಹಾಸದವರು

ಇತಿಹಾಸದವರು ಮುಖ್ಯವಾಗಿ ದೇವಾಲಯಗಳ ಚರಿತ್ರೆಯನ್ನು ದಿನನಿತ್ಯದ ಕಾರ್ಯಚಟುವಟಿಕೆಗಳನ್ನು ದಾಖಲಿಸುತ್ತಿದ್ದರು. ಇದಕ್ಕಾಗಿ ನೇಮಕವಾದ ಅಧಿಕಾರಿಗಳನ್ನು ಶಾಸನಗಳಲ್ಲಿ ಇತಿಹಾಸದವರೆಂದು ಕರೆಯಲಾಗಿದೆ. ದೇವಾಲಯದ ಆಡಳಿತ ವರ್ಗದಲ್ಲಿ ಇವರು ಪ್ರಮುಖಪಾತ್ರ ವಹಿಸುತ್ತಿದ್ದರು. ಹಂಪಿಯಲ್ಲಿರುವ ಅಚ್ಯುತನಾರಾಯಣಸ್ವಾಮಿ ಮತ್ತು ಬಾಲಕೃಷ್ಣ ದೇವಾಲಯಗಳಲ್ಲಿ ಇವರ ಉಲ್ಲೇಖ ಸಿಗುತ್ತದೆ. ಅಚ್ಯುತದೇವರಾಯನು ಇತಿಹಾಸಕ್ಕೆ ಒಬ್ಬರನ್ನು ನೇಮಿಸಿ ಗ್ರಾಮವನ್ನು ದತ್ತಿಯಾಗಿ ನೀಡಿ ಅವರ ಜೀವಿತ ಪ್ರಸಾದಕ್ಕೆ ಕಟ್ಟಳೆಯನ್ನು ಮಾಡುತ್ತಾನೆ.[೪೨] ಬಾಲಕೃಷ್ಣ ದೇವಾಲಯದಲ್ಲಿ ಇತಿಹಾಸದ ತಿರುಮಲಭಟ್ಟನ ಹೆಸರನ್ನು ಉಲ್ಲೇಖಿಸಿದ್ದು, ದೇವಾಲಯದ ಸೇವೆಗಾಗಿ ಇವರಿಗೆ ಗದ್ದೆಯನ್ನು ದಾನವಾಗಿ ಬಿಡಲಾಗಿದೆ.[೪೩]

ಭಾಗವತರು

ಇವರು ಹೆಚ್ಚಾಗಿ ವೈಷ್ಣವ ದೇವಾಲಯಗಳಲ್ಲಿ ಇರುವುದು ಕಂಡುಬರುತ್ತದೆ. ಭಾಗವತ ಧರ್ಮದ ಅನುಯಾಯಿಗಳಾಗಿದ್ದು, ವಿಷ್ಣುವಿನ ಪರಮ ಭಕ್ತರಾಗಿ ಧರ್ಮಪ್ರಚಾರಕರಾಗಿ ಕೆಲಸ ಮಾಡುವ ವರ್ಗವಾಗಿತ್ತು. ಇವರನ್ನು ಶಾಸನಗಳಲ್ಲಿ ಭಾಗವತರೆಂದೆ ಉಲ್ಲೇಖಿಸಿದೆ. ಇವರು ಅಚ್ಯುತನಾರಾಯಣ ದೇವಾಲಯದಲ್ಲಿ ಇಬ್ಬರು ಭಾಗವತರ ಉಲ್ಲೇಖವಿದ್ದು, ಇವರು ಭಾಗವತ ಪುರಾಣ ಹೇಳುವ ಕಾರ್ಯದಲ್ಲಿ ನೆರವಾಗುವ ವರ್ಗದವರಾಗಿದ್ದರು. ಇವರ ಉಪಜೀವನಕ್ಕೆ ಗ್ರಾಮಗಳನ್ನು ದತ್ತಿಯಾಗಿ ನೀಡಲಾಗಿದ್ದು, ಅಲ್ಲಿನ ಶಾಸನದಿಂದ ತಿಳಿದುಬರುತ್ತದೆ.[೪೪]

ರಕಟ್ಟಿಗೆಯುವರು

ದೇವಾಲಯಗಳಲ್ಲಿ ನಡೆಯುವ ಪೂಜಾ-ಉತ್ಸವಗಳ ಸಂದರ್ಭದಲ್ಲಿ ಪ್ರಸಾದವನ್ನು ತಯಾರಿಸಲು ಅಡುಗೆಗೆ ಕಟ್ಟಿಗೆಯನ್ನು ಬಳಸುತ್ತಿದ್ದುದರಿಂದ ಅವುಗಳನ್ನು ತೆಗೆದುಕೊಂಡು ಬರಲು ಮತ್ತು ತಂದಂತಹ ಕಟ್ಟಿಗೆಗಳನ್ನು ಒಡೆಯಲು ಕಟ್ಟಿಗೆಯವರಿರುತ್ತಿದ್ದರು.

ತಿರುವೆಂಗಳನಾಥ ದೇವಾಲಯದಲ್ಲಿ ಇಬ್ಬರು ಕಟ್ಟಿಗೆಯವರನ್ನು ಉಲ್ಲೇಖಿಸಿದೆ.[೪೫] ಅದೇ ರೀತಿ ವಿಠಲ ದೇವಾಲಯದಲ್ಲಿ ಅಡುಗೆಗೆ ಅಡುಗಲು ಮತ್ತು ಅಡುಗರಿ, ಅಡುಗರಿಸುವವರಿಗೆ ಕೂಲಿಯು ೧೨ ಸಂಜಿಯನ್ನು ನೀಡಲಾಗಿದ್ದು, ಅಲ್ಲಿನ ಶಾಸನದಲ್ಲಿ ಉಲ್ಲೇಖವಿದೆ.[೪೬]

ಸ್ವಯಂಪಾಕದವರು

ದೊಡ್ಡ ದೇವಾಲಯಗಳಲ್ಲಿ ನಡೆಯುವ ದಿನನಿತ್ಯದ ಪೂಜೆಗೆ ಪ್ರಸಾದ ತಯಾರಿಸಲು ಸ್ವಯಂಪಾಕದವರಿರುತ್ತಿದ್ದರು. ತಿನಿಸು, ಭಕ್ಷ್ಯಗಳನ್ನು ಮಾಡಿ ಪೂಜೆಗೆ ಸಿದ್ಧಪಡಿಸುವುದು ಇವರ ಕೆಲಸವಾಗಿರುತ್ತಿತ್ತು. ವಿಠ್ಠಲ ಮತ್ತು ತಿರುವೆಂಗಳನಾಥ ದೇವಾಲಯಗಳ ಶಾಸನಗಳಲ್ಲಿ ಇವರ ಉಲ್ಲೇಖಗಳಿವೆ.[೪೭]

ಪರಿಚಾರಕರು

ದೇವಾಲಯಗಳಲ್ಲಿ ನಡೆಯುವ ಪೂಜಾ-ಉತ್ಸವ-ರಥೋತ್ಸವ ಹಾಗೂ ದಿನನಿತ್ಯದ ಕಾರ್ಯಕ್ರಮಗಳಲ್ಲಿ ಸಹಾಯಕರಾಗಿ ಪರಿಚಾರಕರು ಇರುತ್ತಿದ್ದರು. ಇವರ ಉಲ್ಲೇಖ ವಿಠ್ಠಲ ದೇವಾಲಯದ ಶಾಸನಗಳಲ್ಲಿ ಕಂಡುಬಂದಿದೆ.[೪೮]

ದನಗಾಹಿಗಳು

ದೇವಾಲಯಗಳಲ್ಲಿ ನಡೆಯುವ ಪೂಜೆಯ ಪ್ರಸಾದಕ್ಕೆ ಹಾಲನ್ನು ಉಪಯೋಗಿಸುವುದಕ್ಕೆ ದಾನಿಗಳು ಹಸುಗಳನ್ನು ಬಿಡುತ್ತಿದ್ದರು. ಈ ದೇವಾಲಯಗಳ ಹಸುಗಳನ್ನು ನೋಡಿಕೊಳ್ಳುವುದಕ್ಕೆ ಜನರನ್ನು ನೇಮಿಸಲಾಗುತ್ತಿತ್ತು. ಇವರನ್ನು ಶಾಸನಗಳಲ್ಲಿ ದನಗಾಹಿಗಳೆಂದು ಕರೆಯಲ್ಪಟ್ಟಿದೆ. ಕೃಷ್ಣದೇವರಾಯನ ರಾಣಿಯರು ವಿಠ್ಠಲ ದೇವಾಲಯದ ನೈವೇದ್ಯ ಆರೋಗಣೆಯನ್ನು ನಡೆಸುವುದಕ್ಕೆ ೨೦೦ ಹಸುಗಳನ್ನು ದಾನ ನೀಡಿದಳು.[೪೯] ದನಗಾಹಿಗಳು ದಿನನಿತ್ಯದಲ್ಲೂ ಹಸುಗಳನ್ನು ಮೇಯಿಸಿಕೊಂಡು ಬರಬೇಕಾಗಿತ್ತು. ಇವರು ಪರಿಚಾರಕರಲ್ಲಿ ಒಬ್ಬರಾಗಿ ಕೆಲಸಮಾಡುತ್ತಿದ್ದರು.

ಗುರುಗಳು

ಹಂಪಿಯ ಶಾಸನಗಳಲ್ಲಿ ಕಂಡುಬರುವಂತೆ ದೇವಾಲಯಗಳಲ್ಲಿ ಒಬ್ಬ ಗುರುಗಳು ಇರುವುದು ಕಂಡುಬರುತ್ತದೆ. ವಿದ್ಯಾರಣ್ಯ, ವ್ಯಾಸರಾಯರು, ಕಂದಾಳ ಭಾವನಾಚಾರ್ಯರು, ಶ್ರೀ ರಂಗಾಚಾರ್ಯರ ಹೆಸರುಗಳು ಉಲ್ಲೇಖವಾಗಿವೆ. ಇವರು ಒಂದು ಧರ್ಮದ ಸನ್ಯಾಸಿಗಳಾಗಿದ್ದು ಧರ್ಮರಕ್ಷಣೆಗಾಗಿ ದುಡಿಯುತ್ತಿದ್ದರು. ದೇವಾಲಯದ ಪ್ರಮುಖ ವಿಷಯಗಳ ತೀರ್ಮಾನವು ಇವರ ಮೂಲಕ ನಡೆಯುತ್ತಿತ್ತು. ಇವರ ಉಲ್ಲೇಖ ವಿಠ್ಠಲ ದೇವಾಲಯದ ಶಾಸನದಲ್ಲಿ ಉಕ್ತವಾಗಿದೆ. ಉದಯಗಿರಿ ತಿಮ್ಮರಾಜನು ಗುರುಗಳಾದ

ಶ್ರೀರಂಗಾಚಾರ್ಯರಿಗೆ ಪ್ರಸಾದ ವ್ಯವಸ್ಥೆಯನ್ನು ಮಾಡಿದನು.[೫೦] ವೈಷ್ಣವ ದೇವಾಲಯಗಳಲ್ಲಿ ಮತ್ತು ಶೈವ ದೇವಾಲಯಗಳಲ್ಲಿ ಆಯಾ ಧರ್ಮದ ಗುರುಗಳಿರುತ್ತಿದ್ದರು.

ಹಿರಿಯರುಗಳು

ವಿಠ್ಠಲ ದೇವಾಲಯದ ಶಾಸನದಲ್ಲಿ ಇವರ ಉಲ್ಲೇಖವಿದ್ದು, ಇವರು ದೇವಾಲಯದ ವರ್ಗದವರಲ್ಲಿ ಪ್ರಮುಖರಾಗಿ ಕಂಡುಬರುತ್ತಾರೆ. ಇವರಿಗೆ ವಿನಿಯೋಗದ ಹಿರಿಯರು ಎಂದು ಕರೆಯಲಾಗಿದೆ.[೫೧]

ಹಿಟ್ಟು ಕುಟ್ಟುವವರು

ದೇವಾಲಯಗಳಲ್ಲಿ ನಡೆಯುವ ಪೂಜೆ-ಉತ್ಸವಾದಿಗಳಲ್ಲಿ ತಯಾರಿಸುವ ಪ್ರಸಾದಕ್ಕೆ ಹಿಟ್ಟನ್ನು ಮತ್ತು ಗೋದಿ ಬೀಸುವುದಕ್ಕೆ ಕೂಲಿಕಾರರಿರುತ್ತಿದ್ದರು. ಇವರ ಉಲ್ಲೇಖ ವಿಠ್ಠಲ ದೇವಾಲಯದ ಶಾಸನದಲ್ಲಿ ಉಲ್ಲೇಖವಾಗಿದೆ.[೫೨]

ವಾದ್ಯದವರು

ದೊಡ್ಡ ದೇವಾಲಯಗಳಲ್ಲಿ ವಾದ್ಯದವರ ವರ್ಗವಿರುತ್ತಿತ್ತು. ಇವರು ವಿಶೇಷ ದಿನಗಳಲ್ಲಿ ನಡೆಯುವ ಉತ್ಸವ, ರಥೋತ್ಸವಗಳಲ್ಲಿ ಭಾಗವಹಿಸಲ್ಪಡುತ್ತಿದ್ದರು. ಇದರಲ್ಲಿ ಗಂಡುಮೇಳ ಮತ್ತು ಹೆಣ್ಣುಮೇಳಗಳಿರುತ್ತಿದ್ದವು. ವಿಠ್ಠಲದೇವಾಲಯದ ೧೪೨ ದಿನಗಳ ವಿಶೇಷ ಉತ್ಸವಗಳ ಸಂದರ್ಭದಲ್ಲಿ ಇವರಿಗೆ ಗದ್ದೆಯನ್ನು ನೀಡಿರುವುದು ಉಲ್ಲೇಖ ದೇವಾಲಯದ ಶಾಸನದಲ್ಲಿದೆ.[೫೩]

ಸತಿಗೆ ಮತ್ತು ಪತಾರೆಗಳು

ದೇವಾಲಯಗಳಲ್ಲಿ ನಡೆಯುವ ಉತ್ಸವ-ರಥೋತ್ಸವದಲ್ಲಿ ಛತ್ರಿ ಮತ್ತು ಧ್ವಜಗಳನ್ನು ಹಿಡಿಯುವ ವರ್ಗದವರಿಗೆ ಶಾಸನಗಳಲ್ಲಿ ಸತಿಗೆ ಮತ್ತು ಪತಾರೆಗಳೆಂದು ಕರೆಯಲಾಗಿದೆ.[೫೪] ಇವರು ರಥೋತ್ಸವದ ಸಂದರ್ಭದಲ್ಲಿ ಮಾತ್ರ ಪಾಲ್ಗೊಳ್ಳುವ ವರ್ಗದವರಾಗಿದ್ದರು. ಇವರು ವಿಠ್ಠಲ ದೇವಾಲಯದ ಶಾಸನದಲ್ಲಿ ಕಂಡುಬರುತ್ತಾರೆ.

ಚಪ್ಪರದವರು

ಇವರು ವಿಠ್ಠಲ ದೇವಾಲಯದಲ್ಲಿ ನಡೆಯುವ ಉತ್ಸವಾದಿಗಳಲ್ಲಿ ಮಂಟಪದ ಮುಂದೆ ಚಪ್ಪರವನ್ನು ಹಾಕಲು ನೇಮಕವಾದ ವರ್ಗದವರಾಗಿದ್ದರು.[೫೫] ಉತ್ಸವಗಳಲ್ಲಿ ಮಾತ್ರ ಇವರಿಗೆ ಕೆಲಸವಿರುತ್ತಿದ್ದಿತು. ಇವರಿಗೆ ಗದ್ದೆಯನ್ನು ದತ್ತಿಯಾಗಿ ನೀಡಲಾಗಿದೆ.

ಕಟ್ಟಡದವರು

ದೇವಾಲಯಗಳ ಅಭಿವೃದ್ಧಿ ಕಾರ್ಯಗಳಲ್ಲಿ ಜೀರ್ಣೋದ್ಧಾರದ ಕೆಲಸಗಳಲ್ಲಿ ಕಟ್ಟಡದವರು ಪ್ರಮುಖರಾಗಿ ಕಂಡುಬರುತ್ತಾರೆ. ದೇವಾಲಯ ಕಟ್ಟಡದ ವಿಸ್ತರಣೆ ಹೊಸ ಹೊಸ ಮಂಟಪಗಳ ರಚನೆ ಇತ್ಯಾದಿ ಚಟುವಟಿಕೆಗಳಲ್ಲಿ ಇವರು ಭಾಗವಹಿಸುತ್ತಿದ್ದರು. ದೇವಾಲಯದ ವರ್ಗದವರಲ್ಲಿ ಇವರು ಪ್ರಮುಖವಾಗಿ ಕಾಣುತ್ತಾರೆ. ಹಂಪಿಯ ಶಾಸನದಲ್ಲಿ ನೇರವಾಗಿ ಇವರ ಹೆಸರು ಕಂಡುಬಂದಿಲ್ಲದಿದ್ದರೂ ತಿರುಮಲದ ದೇವಾಲಯದಲ್ಲಿ ಇವರ ಉಲ್ಲೇಖ ಬಹಳವಾಗಿ ಸಿಗುತ್ತದೆ.

ಪಂಜುಹಿಡಿಯುವವರು

ದೊಡ್ಡ ದೇವಾಲಯಗಳಲ್ಲಿ ರಾತ್ರಿ ಉತ್ಸವದ ಸಂದರ್ಭದಲ್ಲಿ ಎಣ್ಣೆ ಪಂಜು ಹಿಡಿಯುವುದಕ್ಕೆ ಕೆಲಸಗಾರರು ನೇಮಕವಾಗುತ್ತಿದ್ದರು. ಇವರನ್ನು ಶಾಸನಗಳು ಉಲ್ಲೇಖಿಸಿದ್ದು, ಧ್ವಜಾರೋಹಣ ಸಂಬಂಧ ವಿಠ್ಠಲ ದೇವಾಲಯದಲ್ಲಿ ಎಣ್ಣೆ ಪಂಜು ಹಿಡಿಯಲು ಇವರನ್ನು ನೇಮಕ ಮಾಡಿರುವುದು ತಿಳಿಯುತ್ತದೆ.[೫೬]

ಶಾಸನ ರಚನೆಕಾರ

ಪ್ರತಿಯೊಂದು ದೇವಾಲಯಗಳಲ್ಲಿ ಒಬ್ಬ ಶಾಸನ ಖಂಡನೆಕಾರನು ಇರುತ್ತಿದ್ದನು. ಇವನು ದೇವಾಲಯದ ಪರಿಚಾರಕ ವರ್ಗದವರಲ್ಲಿ ಮುಖ್ಯವಾಗಿದ್ದನು. ದಾನಿಗಳು ಮತ್ತು ಸ್ಥಾನಿಕ ನಡುವೆ ಆದಂತಹ ಒಪ್ಪಂದಗಳನ್ನು ದಾನಿಗಳ ಮಾಹಿತಿ, ಕಟ್ಟಳೆ, ಪಾಲನೆಯನ್ನು ದೇವಾಲಯದ ಗೋಡೆ ಅಥವಾ ಬಂಡೆಕಲ್ಲಿನ ಮೇಲೆ ಅದನ್ನು ಖಂಡಿಸಬೇಕಾಗಿದ್ದಿತು. ಇವನ ಉಲ್ಲೇಖ ಲಕ್ಷ್ಮೀನರಸಿಂಹಸ್ವಾಮಿ ದೇವರಿಗೆ ನೀಡಿದ ದತ್ತಿ ಶಾಸನವೊಂದರಲ್ಲಿ ಶಾಸನ ರಚನೆಕಾರ ಚೆರಟೆಮಂಗಲದ ಅಂಗರಸರ ಮಗ ತಿಮ್ಮಪ್ಪ ಎಂದು ಸ್ಪಷ್ಟವಾಗಿ ಹೇಳಿದೆ.[೫೭] ಇದಲ್ಲದೆ ಇನ್ನೂ ಅನೇಕ ಶಾಸನಗಳಲ್ಲಿ ಶಾಸನ ರಚನಕಾರರ ಉಲ್ಲೇಖಗಳು ಕಂಡುಬರುತ್ತದೆ.[೫೮]

ಸಂಕೀರ್ತನೆಕಾರರು

ವಿಠ್ಠಲ ದೇವಾಲಯದ ಆವರಣದಲ್ಲಿನ ತಿರುಮಂಗೈಯಾಳ್ವಾರರ ದೇವಾಲಯದಲ್ಲಿ ಸಂಕೀರ್ತನೆ ಮಾಡುವುದಕ್ಕೆ ನಾರಾಯಣಾಯ್ಯಂಗಾರನು ನೇಮಕವಾಗಿದ್ದನು.[೫೯] ವೈಷ್ಣವ ದೇವಾಲಯಗಳಲ್ಲಿ ಪೂಜೆಯ ವೇಳೆ ಸಂಕೀರ್ತನೆಯನ್ನು ಹಾಡಲು ಕೀರ್ತನಕಾರರು ಇರುತ್ತಿದ್ದರು. ಇವರು ದೇವಾಲಯದ ವರ್ಗದವರಲ್ಲಿ ಪ್ರಮುಖರಾಗಿ ಕಂಡುಬರುತ್ತಾರೆ.

ಆಗಮಿಕ

ದೇವಾಲಯಗಳ ಆಡಳಿತದಲ್ಲಿ ಆಗಮಿಕ ಎನ್ನುವವನು ಇರುತ್ತಿದ್ದನು. ಇವನ ಕೆಲಸದ ಬಗ್ಗೆ ಶಾಸನದಲ್ಲಿ ಏನು ಹೇಳಿಲ್ಲ. ಇವನ ಬಗ್ಗೆ ಉಲ್ಲೇಖ ನಮಗೆ ಹಜಾರರಾಮಚಂದ್ರ ದೇವಾಲಯದ ಶಾಸನದಿಂದ ತಿಳಿಯುತ್ತದೆ. ತಿಮ್ಮರಾಜನಿಗೆ ಆಗಮಿಕ ನಾರಾಯಣಭಟ್ಟರು ಇನ್ನುಳಿದವರೆಲ್ಲ ಸೇರಿ ಗದ್ದೆಯನ್ನು ದಾನಕೊಟ್ಟಿದ್ದು ಉಲ್ಲೇಖವಾಗಿದೆ.[೬೦]

ಅಧಿಕಾರಿಗಳು

ದೊಡ್ಡ ದೊಡ್ಡ ದೇವಾಲಯಗಳಲ್ಲಿ ಪರಿಚಾರಕವರ್ಗದವರು ಯಥೇಚ್ಛವಾಗಿ ಇರುತ್ತಿದ್ದುದರಿಂದ ಇವರನ್ನೆಲ್ಲಾ ನೋಡಿಕೊಳ್ಳಲು ಅಧಿಕಾರಿ ಎನ್ನುವ ವರ್ಗದವರಿರುತ್ತಿದ್ದರು. ಇವನ ಕೆಲಸ ಪರಿಚಾರಕ ವರ್ಗದವರನ್ನು ನಿಯಂತ್ರಿಸುವುದಾಗಿತ್ತು. ಇವನ ಉಲ್ಲೇಖ ರಾಮಚಂದ್ರ ದೇವಾಲಯದ ಶಾಸನದಲ್ಲಿ ಕಂಡುಬರುತ್ತದೆ. ಅಲ್ಲಮರಸರು ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದನು.[೬೧] ಹಂಪಿಯ ಶಾಸನಗಳಲ್ಲಿ ಉಕ್ತವಾಗಿರುವಂತೆ ಮೇಲಿನ ಎಲ್ಲಾ ವರ್ಗದವರು ದೇವಾಲಯಗಳ ಆಡಳಿತದಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಇಲ್ಲಿ ದೇವಾಲಯಗಳು ಉದ್ಯೋಗವನ್ನು ನೀಡುವ ಸಂಸ್ಥೆಗಳಾಗಿದ್ದವೆಂದು ಇದರಿಂದ ಹೇಳಬಹುದು. ಸಣ್ಣ ದೇವಾಲಯಗಳಲ್ಲಿ ಈ ಎಲ್ಲಾ ಪರಿಚಾರಕರು ಕಂಡು ಬರದಿದ್ದರೂ, ದೊಡ್ಡ ದೇವಾಲಯಗಳಲ್ಲಿ, ಆರ್ಥಿಕವಾಗಿ ಪ್ರಬಲವಾದ ದೇವಾಲಯಗಳಲ್ಲಿ ಇವರುಗಳು ತಪ್ಪದೇ ಇರುತ್ತಿದ್ದರು. ದೇವಾಲಯಗಳು ಸಮಾಜದ ಒಂದು ಕೇಂದ್ರವಾಗಿ ಬೆಳೆದ ಮೇಲೆ ಸಮಾಜ ಜನರು ಹೆಚ್ಚು ಹೆಚ್ಚು ದೇವಾಲಯದ ಕಾರ್ಯಗಳಲ್ಲಿ ಭಾಗವಹಿಸಿದ್ದು ನೋಡಬಹುದು. ಇದು ಹಂಪಿಯ ಎಲ್ಲಾ ಶಾಸನಗಳನ್ನು ಗಮನಿಸಿದಾಗ ಒಂದು ಶಾಸನದಲ್ಲಿ ಈ ಎಲ್ಲಾ ವರ್ಗದವರನ್ನು ಸೂಚಿಸದಿದ್ದರೂ, ಬೇರೆ ಬೇರೆ ಶಾಸನಗಳಲ್ಲಿ ಇವರು ಇರುವುದು ಕಂಡುಬರುತ್ತದೆ. ದೇವಾಲಯಗಳಲ್ಲಿ ಬೆಳೆದ ಪೂಜಾ-ಉತ್ಸವಾದಿ ಕಾರ್ಯಕ್ರಮಗಳಿಂದ ಆಡಳಿತ ವರ್ಗವು ಬೆಳೆಯಬೇಕಾಯಿತು. ಇಲ್ಲಿ ಬ್ರಾಹ್ಮಣರಿಂದ ಹಿಡಿದು ವಿವಿಧ ಜಾತಿವರ್ಗದವರು ಇರುವುದು ಕಂಡುಬರುವುದು. ದೇವಾಲಯದ ಎಲ್ಲಾ ವರ್ಗದವರ ಜಾತಿಯನ್ನು ನೇರವಾಗಿ ಹೇಳದಿದ್ದರೂ ಅವರು ನಿರ್ವಹಿಸುವ ಕೆಲಸವನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಸಮಾಜದ ಎಲ್ಲರೂ ಭಾಗವಹಿಸಿರುವುದು ಇದರಿಂದ ತಿಳಿಯುತ್ತದೆ. ಶಾಸನಗಳಲ್ಲಿ ಉಕ್ತವಾದ ಪರಿಚಾರಕರನ್ನು ಇಲ್ಲಿ ವಿವೇಚಿಸಲಾಗಿದ್ದು ಇನ್ನೂ ಉಲ್ಲೇಖವಿರದ ವರ್ಗದವರು ಇರಲೂಬಹುದು. ಹೆಚ್ಚಿನ ಅಧ್ಯಯನದಿಂದ ಮುಂದೆ ಬರುವ ಅಧ್ಯಯನಗಳು ಈ ಬಗ್ಗೆ ಕಾರ್ಯಪ್ರವೃತ್ತಿಗೊಂಡರೆ ಹೆಚ್ಚು ಮಾಹಿತಿ ದೊರಕಬಹುದು. ಮುಂದಿನ ಅಧ್ಯಯನಕಾರರಿಗೆ ಈ ಒಂದು ಲೇಖನ ಸಹಾಯವಾಗಬಹುದೆಂದು ಭಾವಿಸುತ್ತೇನೆ.

ದೇವಾಲಯಗಳಲ್ಲಿ ಕಂಡುಬರುವ ಪರಿಚಾರಕವರ್ಗದ ಪಟ್ಟಿ

ಸ್ಥಾನಿಕರು
ಮಂಡಳಿ ಸದಸ್ಯರು
ಅರ್ಚಕರು
ಆಚಾರ್ಯರು
ಪೌರಾಣಿಕರು
ಜ್ಯೋತಿಷ್ಯರು
ಬ್ರಹ್ಮತ್ವದವರು
ವೇದಪರಾಯಣದವರು
ಮಂತ್ರಪುಷ್ಪದವರು
ಪವಾಮಾನಭಿಷೇಕದವರು
ನಾಮಾತ್ರೇಯರು
ಸೇನಭೋವರು
ಕರಣಿಕ (ಲೆಕ್ಕಿಗ)
ಘಳಿಯಾರದವರು
ವಿದ್ವಾಂಸರು
ತಿರುವೀಧಿ ವಿನಿಯೋಗದವರು
ಮಹಾಜನಂಗಳು
ಬ್ರಾಹ್ಮಣರು
ನಿತ್ಯದಾನದವರು
ರಂಗಭೋಗದವರು
ಭಂಡಾರದವರು
ಛತ್ರದವರು
ಉಗ್ರಾಣದವರು
ಪಾತರದವರು
ಹೂವಿನದಂಡೆಯವರು
ಇತಿಹಾಸದವರು
ಭಾಗವತರು
ಕಟ್ಟಿಗೆಯವರು
ಸ್ವಯಂಪಾಕದವರು

ಪರಿಚಾರಕರು
ದನಗಾಹಿಗಳು
ಗುರುಗಳು
ಹಿರಿಯರು
ಹಿಟ್ಟುಕಟ್ಟುವವರು
ವಾದ್ಯದವರು
ಸತಿಗೆ ಮತ್ತು ಪತಾಕಿಗಳು
ಚಪ್ಪರದವರು
ಕಟ್ಟಡದವರು
ಪಂಜು ಹಿಡಿಯುವವರು
ಶಾಸನ ರಚನೆಕಾರರು
ಸಂಕೀರ್ತನೆಕಾರರು
ಆಗಮಿಕರು
ಅಧಿಕಾರಿಗಳು

ಟಿಪ್ಪಣಿಗಳು

೧. SI-IV, ನಂ. ೨೫೫
೨. ಕವಿಶಾಸಂ - ೩, ಹಂಪಿ, ಸಂಖ್ಯೆ ೨೧೦
೩. ಕವಿಶಾಸಂ - ೩, ಹಂಪಿ, ಸಂಖ್ಯೆ ೨೫೭
೪. ಕವಿಶಾಸಂ - ೩, ಹಂಪಿ, ಸಂಖ್ಯೆ ೩೨೬
೫. SI-IX, ii- ೬೦೭, ೬೦೮
೬. ಸ್ಟಡೀಸ್ ಇನ್ ದಿ ಹಿಸ್ಟರಿ ಆಫ್ ದಿ ಥರ್ಡ್ ಡೈನಾಸ್ಟಿ ಆಫ್ ವಿಜಯನಗರ, ಪು. ೩೩೨
೭. ಕವಿಶಾಸಂ - ೩, ಸಂಖ್ಯೆ ೭೩
೮. ಕವಿಶಾಸಂ - ೩, ಸಂಖ್ಯೆ ೭೩
೯. ಶೈವಾಗಮ - ಸಿದ್ಧಾಂತಶೇಖರ ಮತ್ತು ಶ್ರೀಮದ್ಭಾಗವತ
೧೦. SI-IV, ನಂ. ೨೫೭ ಮತ್ತು ೨೫೫
೧೧. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೧೨. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೧೩. ಕವಿಶಾಸಂ - ೩, ಹಂಪಿ, ಸಂಖ್ಯೆ ೨೫೫
೧೪. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೧೫. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೧೬. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩

೧೭. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೧೮. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೧೯. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩, ೭೪, ೧೩೨, ೧೯೭, ೨೫೭
೨೦. ಕವಿಶಾಸಂ - ೩, ಹಂಪಿ, ಸಂಖ್ಯೆ ೭೮
೨೧. ಕವಿಶಾಸಂ - ೩, ಹಂಪಿ, ಸಂಖ್ಯೆ ೨೦೯
೨೨. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೬
೨೩. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೨೪. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೨೫. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೨೬. ಕವಿಶಾಸಂ - ೩, ಹಂಪಿ, ಸಂಖ್ಯೆ ೭೪
೨೭. ಕವಿಶಾಸಂ - ೩, ಹಂಪಿ, ಸಂಖ್ಯೆ ೭೪
೨೮. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೨೯. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩, ೧೯೬, ೭೮
೩೦. SI-I-೨೭೭, ಕವಿಶಾಸಂ - ೩, ಸಂಖ್ಯೆ ೨೦೮
೩೧. ಕವಿಶಾಸಂ - ೩, ಸಂಖ್ಯೆ ೧೯೩
೩೨. ಕವಿಶಾಸಂ - ೩, ಸಂಖ್ಯೆ ೧೯೪, ೧೯೬, ೨೦೧, ೨೦೫
೩೩. SI-I-ii- ೬೦೭
೩೪. ಕವಿಶಾಸಂ - ೩, ಸಂಖ್ಯೆ ೭೮
೩೫. ಕವಿಶಾಸಂ - ೩, ಸಂಖ್ಯೆ ೫೫
೩೬. ಕವಿಶಾಸಂ - ೩. ಸಂಖ್ಯೆ ೧೯೩
SI-IV- ನಂ. ೨೭೪
೩೭. ಕವಿಶಾಸಂ - ೩, ಸಂಖ್ಯೆ ೭೮
೩೮. ಕವಿಶಾಸಂ - ೩, ಸಂಖ್ಯೆ ೧೧೧
೩೯. ಕವಿಶಾಸಂ - ೩, ಸಂಖ್ಯೆ ೭೮
೪೦. ಕವಿಶಾಸಂ - ೩, ಸಂಖ್ಯೆ ೧೮೯
೪೧. ಕವಿಶಾಸಂ - ೩, ಸಂಖ್ಯೆ ೨೧೦
೪೨. ಕವಿಶಾಸಂ - ೩, ಸಂಖ್ಯೆ ೧೩೨
೪೩. ಕವಿಶಾಸಂ - ೩, ಸಂಖ್ಯೆ ೭೩
೪೪. ಕವಿಶಾಸಂ - ೩, ಸಂಖ್ಯೆ ೧೩೨
೪೫. ಕವಿಶಾಸಂ - ೩, ಸಂಖ್ಯೆ ೧೩೨
೪೬. ಕವಿಶಾಸಂ - ೩, ಸಂಖ್ಯೆ ೧೮೬
೪೭. ಕವಿಶಾಸಂ - ೩, ಸಂಖ್ಯೆ ೧೩೨, ೨೦೯
೪೮. ಕವಿಶಾಸಂ - ೩, ಸಂಖ್ಯೆ ೨೦೯
೪೯. ಕವಿಶಾಸಂ - ೩, ಸಂಖ್ಯೆ ೧೮೧, ೧೮೨

೫೦. ಕವಿಶಾಸಂ - ೩, ಸಂಖ್ಯೆ ೧೮೩

೫೧. ಕವಿಶಾಸಂ - ೩, ಸಂಖ್ಯೆ ೧೮೩

೫೨. ಕವಿಶಾಸಂ - ೩, ಸಂಖ್ಯೆ ೫೨

೫೩. ಕವಿಶಾಸಂ - ೩, ಸಂಖ್ಯೆ ೧೯೧

೫೪. ಕವಿಶಾಸಂ - ೩, ಸಂಖ್ಯೆ ೧೯೧

೫೫. ಕವಿಶಾಸಂ - ೩, ಸಂಖ್ಯೆ ೧೯೧

೫೬. ಕವಿಶಾಸಂ - ೩, ಸಂಖ್ಯೆ ೧೮೬

೫೭. ಕವಿಶಾಸಂ - ೩, ಸಂಖ್ಯೆ ೩೨೨

೫೮. ಕವಿಶಾಸಂ - ೩, ಸಂಖ್ಯೆ ೫೫, ೬೯, ೨೫೭, ೩೯೮

೫೯. ಕವಿಶಾಸಂ - ೩, ಸಂಖ್ಯೆ ೨೦೯

೬೦. ಕವಿಶಾಸಂ - ೩, ಸಂಖ್ಯೆ ೨೫೭

೬೧. ಕವಿಶಾಸಂ - ೩, ಸಂಖ್ಯೆ ೨೫೭

❖ ❖

೧೯

ಹಂಪಿಯ ಶಾಸನೋಕ್ತ ಶಿವಲಿಂಗಗಳು

ಡಾ. ಕೆ.ರವೀಂದ್ರನಾಥ

ತಿಂತಿಣಿಪ ಶಿವಲಿಂಗವಿಪ್ಪುವಾ ಪುರುದೊಳಗೆ
- - - - - - - - - - - - - - - - -
- - - - - - - - - - - - - - - - -
ಲೋಕಕ್ಕೆ ಪಾವನ ದೇವರುಂ ಕೋಟಿಶಂಕರಂ
ಲೋಕಕ್ಕೆ ರಂಜಿಪೇಕಾಂತ ರಾಮೇಶ್ವರಂ
ಇನ್ನು ನಾನರಿಯದವನೇಕ ಲಿಂಗಂ ಕೂಡೆ
ಸನ್ನಿಹತವಿಪ್ಪುವಾ ಪುರದ ಸುತ್ತಂ ನೋಡೆ
ಎಣಿಸಲೆನ್ನಳವೇ ಪಂಪಾಪುರದ ಮಹಿಮೆಯಂ
ತ್ರಿಣಯನುಂ ಲಿಂಗಮಯವಾದ ನಿಸ್ಸೀಮೆಯಂ [೧]

"ಗುಂಪುಗುಂಪಾಗಿ ಕಂಡುಬರುವ ಶಿವಲಿಂಗಗಳಲ್ಲಿ ಲೋಕಕ್ಕೆ ಪಾವನವಾದ ಕೋಟಿಶಂಕರಲಿಂಗ, ಏಕಾಂತರಾಮೇಶ್ವರಲಿಂಗ ಇನ್ನೂ ಎಣಿಸಲು ಸಾಧ್ಯವಾಗದಷ್ಟು ಆತನಿಗೆ ತಿಳಿಯದ ಅನೇಕ ಲಿಂಗಗಳು ಪುರದ ಸುತ್ತಲೂ ಇರುವ ಕಾರಣ ಪಂಪಾಪುರ (ಹಂಪಿಕ್ಷೇತ್ರ) ಲಿಂಗಮಯವಾದ ನಿಸ್ಸೀಮೆಯಾಗಿತ್ತು" ಎಂಬುದಾಗಿ ಹರಿಹರಕವಿ ತನ್ನ ಪಂಪಾಕ್ಷೇತ್ರ ರಗಳೆಯಲ್ಲಿ ಬಣ್ಣಿಸಿದ್ದಾನೆ.

ಲಿಂಗ ವಿಶ್ವದ ಪ್ರತೀಕವೆಂಬ ಮನೋಭಾವದಿಂದಲೇ ಹರಪ್ಪಾ ಮತ್ತು ಮೊಹೆಂಜದಾರೋಗಳಿಗಿಂತ ಅಸ್ತಿತ್ವದಲ್ಲಿದ್ದ "ಕ್ವೆಚ್ಚಾ ಸಂಸ್ಕೃತಿ, ಅಮ್ರಿನಾಲ್ ಸಂಸ್ಕೃತಿ, ಕುಲ್ಲಿ ಸಂಸ್ಕೃತಿ ಮತ್ತು ಉತ್ತರ ಬೆಲೂಚಿಸ್ಥಾನದ ಜೋಬ್ ಸಂಸ್ಕೃತಿಗಳಾದಿಯಾಗಿ ಪುರಾಣ ಇತಿಹಾಸ ಕಾಲದಲ್ಲಿಯು ಲಿಂಗವೆಂಬುದು ಪರಶಿವನಶಕ್ತಿಯ ನಿಜನಿವಾಸ ಎಂದು

ಆರಾಧಿಸಿಕೊಂಡು ಬಂದಿದ್ದಾರೆ ಇದಕ್ಕೆ ಆಚರಣೆ, ಸಾಹಿತ್ಯ, ಶಾಸನ, ಶಿಲ್ಪಗಳು ಪ್ರಮಾಣೀಕರಿಸುತ್ತವೆ.[೨] ಶಿವಲಿಂಗಗಳ ಪ್ರಭೇದಗಳನ್ನು ಡಾ. ಬಿ.ಎ.ಗೋಪಿನಾಥರಾವ್ ಅವರು ೧. ಚಲಲಿಂಗಗಳು ೨. ಅಚಲಲಿಂಗಗಳು ಎಂದು ವಿಂಗಡಿಸುತ್ತಾರೆ. ಇವುಗಳನ್ನೇ ಜಂಗಮ ಹಾಗೂ ಸ್ಥಾವರ ಲಿಂಗಗಳೆಂದು ಕರೆಯಬಹುದು. ಚಲಲಿಂಗಗಳಲ್ಲಿ ಮಣ್ಣಿನಿಂದ ತಯಾರಿಸಿದವುಗಳನ್ನು ಮ್ರಿಣ್ಮಯಲಿಂಗ, ಲೋಹಗಳಿಂದ ತಯಾರಿಸಿದವುಗಳನ್ನು ಲೋಹಜಲಿಂಗ, ಬೆಲೆಬಾಳುವ ರತ್ನಗಳಿಂದ ತಯಾರಿಸಿದವುಗಳನ್ನು ರತ್ನಜಲಿಂಗ, ಕಟ್ಟಿಗೆಯಿಂದ ತಯಾರಿಸಿದವುಗಳನ್ನು ದಾರುಜಲಿಂಗ, ಶಿಲೆಯಿಂದ ತಯಾರಿಸಿದವುಗಳನ್ನು ಶೈಲಜಲಿಂಗ ಹಾಗೂ ಅಕ್ಕಿ, ಬೆಣ್ಣೆ, ನದಿದಂಡೆಯ ಮಣ್ಣು ಇತ್ಯಾದಿಗಳಿಂದ ತಯಾರಿಸಿದವುಗಳನ್ನು ಕ್ಷಣಿಕ ಲಿಂಗಗಳೆಂದು ವಿಂಗಡಿಸುತ್ತಾರೆ. ಸ್ಥಾವರಲಿಂಗಗಳು ದೇವಸ್ಥಾನದ ಹೊರಗಡೆ ಇಲ್ಲವೇ ಗರ್ಭಗುಡಿಯಲ್ಲಿ ಆರಾಧಿಸುವ ಬೃಹತ್ತಾಕಾರದ ನಿರ್ಮಾಣಗಳಾಗಿರುತ್ತವೆ. ಇವುಗಳಲ್ಲಿಯೂ ಸ್ವಯಂಭು, ದೈವತ್ವ, ಗಣಪತ್ಯ, ಅಸುರ, ಬಾಣ ಇತ್ಯಾದಿ ನಮೂನೆಗಳನ್ನು ತಿಳಿಸುತ್ತಾರೆ.[೩]

ಹಂಪಿಯಲ್ಲಿಯ ಸರ್ವಾಂಗ ಮತ್ತು ಯೋಗಾಂಗ ಲಿಂಗಗಳು

ಉದ್ದಾನ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಮೂರು ಚಪ್ಪಟೆಯಾದ ಪಾರ್ಶ್ವಗಳಿಂದ ನಿರ್ಮಾಣಗೊಂಡಿರುವ ಸರ್ವಾಂಗಲಿಂಗವನ್ನು ಕಮಲಾಪುರ ಕೈಫಿಯತ್ತು "ಮುದ್ದು (> ಉದ್ದಾ) ವೀರಭದ್ರ ದೇವರ ಪ್ರತಿಷ್ಠೆ ಮಾಡಿ, ಗುಡಿಕಟ್ಟಿಸಿ ಆ ಗುಡಿವಳಗೆ ತ್ರಿಕೋಣಯಂತ್ರ ನಿರ್ಮಾಣ ಮಾಡಿಯಿದ್ದಾರೆ. ಅದೇ ಶಿಲೆಗೆ ಯೀಗ ಜನರು ಮೂರು ಮೂಲ (> ಲಿ) ಕಲ್ಲು, ಮುವತ್ತಾರುಲಿಂಗಾ[೪] ಎಂದು ಕರೆಯುವುದನ್ನು ದಾಖಲಿಸುತ್ತದೆ. ಪುರಾತತ್ತ್ವಶಾಸ್ತ್ರಜ್ಞರಾದ ಶ್ರೀ ಸಿ.ಟಿ.ಎಂ.ಕೊಟ್ರಯ್ಯನವರು "ಮೊದಲನೆಯ ಮುಖದಲ್ಲಿ ಆಧಾರ-ಸ್ವಾದಿಷ್ಠಾನ ಚಕ್ರಗಳು, ಎರಡನೆಯ ಮುಖದಲ್ಲಿ ಮಣಿಪೂರ-ಅನಾಹತ ಚಕ್ರಗಳು ಹಾಗೂ ಮೂರನೆಯ ಮುಖದಲ್ಲಿ ವಿಶುದ್ಧ-ಆಜ್ಞಾಚಕ್ರಗಳೆಂದು ತಿಳಿಸಿ ಈ ಆರು ಚಕ್ರಗಳಲ್ಲಿ ವೀರಶೈವ ಸಿದ್ಧಾಂತ ಪ್ರತಿಪಾದಿಸುವ ಆರು ಸೋಪಾನಗಳು ಚಿತ್ರಿತವಾಗಿರುವ ಸರ್ವಾಂಗಲಿಂಗವೆಂದು" ವಿವರಿಸಿದ್ದಾರೆ.[೫] ವಚನಕಾರ ಚನ್ನಬಸವಣ್ಣನು ತೊಂಭತ್ತಾರು ಸಕೀಲಗಳೆಂಬ ಇಷ್ಟಲಿಂಗ ರಹಸ್ಯವನ್ನು ಪರಿಚಯಿಸುವ ಸಾಹಿತ್ಯವನ್ನು ರಚಿಸಿದ್ದಾನೆ. ಕ್ರಿಯೆಗಳ ಸ್ವರೂಪ ಹಾಗೂ ಸಂಬಂಧವನ್ನು ಪರಿಚಯಿಸುವ ಉದ್ದೇಶದಿಂದ ಸಕೀಲಗಳು ನಿರ್ಮಾಣವಾಗಿರುವುದನ್ನು ಆತ ಅದರಲ್ಲಿ ವಿವರಿಸುತ್ತಾನೆ. ವಿಶೇಷವಾಗಿ ಅಂಗ-ಲಿಂಗಗಳ ಸಾಮರಸ್ಯದಲ್ಲಿ ಸಾಗಬೇಕೆನ್ನುವವರು ಲಿಂಗ ಸಕೀಲಗಳನ್ನು ತಿಳಿಯುವುದು ಅವಶ್ಯವಾಗಿದೆ. ಇದರಲ್ಲಿ ೨೧೬, ೧೦೮, ೯೬, ೬೬, ೪೮ ಹಾಗೂ ೩೬ ತೆರನಾದ ರಚನಾಕ್ರಮಗಳಿವೆ. ಈ ರಚನಾ ಕ್ರಮದಲ್ಲಿ ಇಷ್ಟಲಿಂಗದ ವೃತ್ತ, ಕಟಿ, ವರ್ತುಳ, ಗೋಮುಖ, ನಾಳ, ಗೋಳಕ ಎಂಬಂತಹ ಷಡ್ವಿಧ ಸಂಬಂಧಗಳನ್ನು ವಿವರಿಸಲಾಗುತ್ತಿದೆ. ಈ ಅಂಶವನ್ನು ೧೪೩೦ರಲ್ಲಿದ್ದ

ಅದೃಶ್ಯ (ಅದ್ರೀಶ) ಕವಿ ತನ್ನ ಪ್ರೌಢರಾಯನ ಕಾವ್ಯದ ೭ ಸಂಧಿ ೨೫ನೇ ಪದ್ಯದಲ್ಲಿ

ಆರು ಲಿಂಗದ ಭೇದವಾರು ಲಿಂಗಾರ್ಪಿತವ
ನಾರು ಲಿಂಗವನಾರು ಹಸ್ತಕೆ ನೆಲೆಗೊಳಿಸಿ
ಆರರಿಂ ಮತ್ತೆ ಮುವತ್ತಾರ ಮಾಡಿಯಿನ್ನೂರ ಹದಿನಾರ ತೋರಿ
ಬೇರಿಲ್ಲದಂತೆ ಎಲ್ಲವನು ಮೂರಕೆ ತಂದು
ಮೂರೆರಡ ಮಾಡಿಯೆರಡೊಂಡನುರೆ ಮಾಡುತ್ತ
ತಾರಕ ಬ್ರಹ್ಮವಿದು - - - - - - - - - -''

ಎಂದು ಐಕ್ಯದ (ಲಿಂಗಾಂಗ ಸಾಮರಸ್ಯದ) ಪರಿಣಾಮವನ್ನು ವಿವರಿಸುತ್ತಾನೆ.

ಅದೇ ದೇವಸ್ಥಾನದ ಪ್ರಾಕಾರದೊಳಗಿನ ದೀಪಸ್ತಂಭದಲ್ಲಿ ವೀರಭದ್ರ ಮೂರ್ತಿಗೆ ಅಭಿಮುಖವಾಗಿ ಲಿಂಗಕ್ಕೆ ಲಿಂಗವೇ ಪೀಠವಾಗಿರುವ ಉಬ್ಬುಶಿಲ್ಪವನ್ನು ಯೋಗಲಿಂಗವೆಂದು ವಿದ್ವಾಂಸರು ಗುರುತಿಸುತ್ತಾರೆ. ರಾಘವಾಂಕ ಕವಿಯ ಸಿದ್ಧರಾಮೇಶ್ವರ ಚರಿತ್ರೆಯ

ಮಂದೈಸಿ ಮಸಗಿ ಮುಸುಕಿದ ಮೋಡದಿಂದ ಮಿಂ
ಚಿಂದ ಮೊಳಗಿಂದ ಸಿಡಿಲಿಂದ ನೆರೆ ಬಿರುಗಾಳಿ
ಯಿಂದೆದ್ದ ಕತ್ತಲೆಯೊಳೊಗೆದು ಮಂದಾರದಡಿಯೊಳು ಲಿಂಗವಾಗಿರ್ದಪೆಂ ||
ಮುಂದೊಂದು ಲಿಂಗ ಪ್ರತಿಷ್ಠೆಗೈದೆನ್ನನಾ
ನಂದದಿಂದಾ ಲಿಂಗದುತ್ತ ಮಾಂಗದಲಿ ನಿಲಿ
ಸೆಂದೊಡೆ ಗಿರೀಶ ಲಿಂಗಕ್ಕೆ ಲಿಂಗಂ ಪೀಠವೇಕೆ ಕರುಣಿಪುದೆಂದನು ||
ಈ ಮಹಾಲಿಂಗಮಂ ಮೂರ್ತಿಗೊಳಿಸಿದ ಸಿದ್ಧ
ರಾಮಯ್ಯ ತನಗೆ ತಾನಾಧಾರವೇ ಸಲ್ಲ
ದೀ ಮಹಿಮೆ ಮರ್ತ್ಯರಂತಲ್ಲೆಂದು ಮುಂದೆ ಜನವರಿಯಬೇಕದು ಕಾರಣಂ
ಕ್ಷೇಮತರವಾಗಿ ಲಿಂಗದ ಮೇಲೆ ಲಿಂಗಮಂ
ಪ್ರೇಮದಿಂದಾ ಪ್ರತಿಷ್ಠಿಸು ಮಗನೆಂದೊಡೆಲೆ
ಸೋಮಾವತಂಸನೆ ಪ್ರತಿಷ್ಠೆಗಾಚಾರ್ಯರಾದಪರು ಹೇಳೆಂದನು ||

ಎಂಬ ೨೦ ಹಾಗೂ ೨೧ನೇ ಪದ್ಯಗಳಿಂದ ಪೀಠ ಮತ್ತು ಲಿಂಗ ಭಾಗಗಳು ಸೇರಿ ಅಖಂಡ ಶಿಲೆಯಲ್ಲಿ ನಿರ್ಮಿಸುವುದು ಯೋಗಲಿಂಗವೆಂಬುದು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ವಿದ್ವಾಂಸರಾದ ಶ್ರೀ ಸಿ.ಟಿ.ಎಂ.ಕೊಟ್ರಯ್ಯನವರು ಹಂಪೆಯ ತುಂಗಾಭದ್ರ ನದಿ ತೀರದ ಮತ್ತು ಪಾತ್ರದಲ್ಲಿ ಹುಟ್ಟು ಬಂಡೆಗಳ ಮೇಲೆ ಕಡೆದಿರುವ ಉಬ್ಬುಶಿಲ್ಪಗಳ ನೂರೆಂಟು ಲಿಂಗ ಹಾಗೂ ಕೋಟಿ ಲಿಂಗಗಳನ್ನು ಯೋಗಲಿಂಗದ ಗುಂಪಿಗೆ ಸೇರಿಸುತ್ತಾರೆ.

ಶಿವಲಿಂಗ ಉಲ್ಲೇಖಿತ ಹಂಪಿ ಶಾಸನಗಳು

ಹಂಪಿಯಲ್ಲಿ ಶಿವಲಿಂಗಗಳನ್ನು ಉಲ್ಲೇಖಿಸುವ ಹತ್ತು ಶಾಸನಗಳು ಲಭ್ಯವಾಗಿವೆ. ಅವುಗಳಲ್ಲಿ ರಾಮಲಿಂಗ, ಶ್ರೀ ಚಾಮುಂಡೇಶ್ವರಲಿಂಗ, ಗಂಗಾಧರಲಿಂಗ, ವೀರಭದ್ರಲಿಂಗ, ನಾಗಭೂಷಣಲಿಂಗ, ಶಿವಲಿಂಗ, ಮಹಾಲಿಂಗ, ಕೋಟಿಶಂಕರಲಿಂಗ, ಅಷ್ಟೋತ್ತರಲಿಂಗ (ನೂರೆಂಟು), ಕಾಳಹಸ್ತಿಲಿಂಗ ಕುರಿತಾಗಿ ಪ್ರಸ್ತಾಪಿಸಲಾಗಿದೆ.

೧. ವಿರೂಪಾಕ್ಷ ದೇವಸ್ಥಾನದ ಹಿಂದೆ ಇರುವ ಮಾವಿನತೋಪಿನ ಸಮೀಪದ ಹಾಳುಬಿದ್ದ ದೇವಸ್ಥಾನದ ದ್ವಾರಬಾಗಿಲ ಮೇಲೆ ಕ್ರಿ.ಶ. ೧೫೫೨ರ ಶಾಸನದಲ್ಲಿ "ಕಶ್ಯಾಪ ಗೋತ್ರದ, ಅಶ್ವಲಾಯನ ಸೂತ್ರದ ವಿಶ್ವನಾಥ ರಾಹುತರ ಮಕ್ಕಳಾದ ರಾಮಪ್ಪರಾವುತ, ಗೋಪಮ್ಮ, ಮಣತಾಯಮ್ಮ, ತಿಮ್ಮಾಜಯಮ್ಮ ಮತ್ತು ಅಣ್ಣಮ್ಮನವರು ತುಂಗಾ ನದಿಯ ದಂಡೆಯ ಮೇಲೆ ಭಾಸ್ಕರ ಕ್ಷೇತ್ರದಲ್ಲಿ ಮರಣ ಹೊಂದಿದರು.

ಇದರ ಸ್ಮರಣಾರ್ಥ ರಾಮಪ್ಪರಾಹುತ ಮತ್ತು ಗೋಪಮ್ಮ ದಂಪತಿಗಳ ಮಗನಾದ ಹರಿದಾಸರಾಹುತನು ಕಲ್ಲಿನಗುಡಿ ನಿರ್ಮಿಸಿ, ರಾಮಲಿಂಗದೇವರ ಪ್ರತಿಷ್ಠಾಪನೆ ಮಾಡಿ ದೀಪಸ್ತಂಭ, ಕಲ್ಲು ಬೃಂದಾವನ ಹಾಗೂ ಮರದ ತೋಪನ್ನು ನಿರ್ಮಿಸಿದ ಉಲ್ಲೇಖವಿದೆ.

೨. ವಿರೂಪಾಕ್ಷ ದೇವಸ್ಥಾನದ ವಾಯುವ್ಯ ದಿಕ್ಕಿನಲ್ಲಿ ತುಂಗಾಭದ್ರಾ ನದಿಯ ತೀರದ ಸ್ನಾನಘಟ್ಟದ ಸಮೀಪ ಕಲ್ಲುಮಂಟಪದ ಎದುರಿನ ಬಂಡೆಯಮೇಲೆ ಕ್ರಿ.ಶ. ೧೫-೧೬ನೇ ಶತಮಾನಕ್ಕೆ ಸೇರಬಹುದಾದ ಶಾಸನದಲ್ಲಿ 'ಶ್ರೀ ಚಾಮುಂಡೇಶ್ವರಲಿಂಗ' ಎಂಬ ಉಲ್ಲೇಖವಿದೆ. ಅಲ್ಲಿಯೇ ಲಿಂಗ ಮತ್ತು ನಂದಿ ಶಿಲ್ಪಗಳ ಮೇಲೆ "ಶ್ರೀ ವಿರೂಪಾಕ್ಷದೇವರ ಸನ್ನಿಧಿ ಗಂಗಾಧರಲಿಂಗ" ಮತ್ತು "ಶ್ರೀ ವೀರಭದ್ರಲಿಂಗ" ಎಂಬ ಉಲ್ಲೇಖವಿದೆ. ಹಾಸುಬಂಡೆಗಲ್ಲಿನ ಮೇಲೆ ಶಾಸನದ ಕೆಳಗೆ ಸಾಲಾಗಿ ಸರ್ಪ, ವೀರಭದ್ರ, ಗಣೇಶ, ಶಿವಲಿಂಗ, ನಂದಿಯ ಉಬ್ಬುಶಿಲ್ಪಗಳು ಇವೆ.

ಇದೇ ಸ್ಥಳದಲ್ಲಿ ಮತ್ತೊಂದು ಬಂಡೆಯ ಮೇಲೆ ಕ್ರಿ.ಶ. ೧೫೩೩ಕ್ಕೆ ಸಲ್ಲುವ ಶಾಸನವು ಬ್ರಾಹ್ಮಣದಲ್ಲಿಯ ತಿಮ್ಮಯ್ಯನು ನಾಗಭೂಷಣ ಲಿಂಗವನ್ನು ಪ್ರತಿಷ್ಠಾಪಿಸಿದ ವಿಚಾರವನ್ನು ತಿಳಿಸುತ್ತದೆ.

೩. ಕ್ರಿ.ಶ. ೧೪ನೇ ಶತಮಾನದ ಆರಂಭದಲ್ಲಿ ರಚನೆಯಾಗಿರುವ ಶಾಸನವೊಂದು ಹೇಮಕೂಟದ ಉತ್ತರಕ್ಕಿರುವ ದೇವಾಲಯದ ಕಂಬದಮೇಲೆ ಕೆತ್ತಲ್ಪಟ್ಟಿದೆ. ಇದರ ಪ್ರಕಾರ "ಸಂಗಮೇಶ್ವರದೇವರ ಪಾದಾರಾಧಕರಾದ ಮುಮ್ಮಡಿ ಸಿಂಗೆಯನಾಯಕನ ಮಗನಾದ ವೀರಕಂಪಿಲದೇವನು ತನ್ನ ತಾಯಿ ಮಾರನಾಯಕಿನಿ ತಂದೆ ಸಿಂಗೆಯನಾಯಕ ಮತ್ತು ಪೆರುಡಿನಾಯಕನ ಹೆಸರಿನಲ್ಲಿ ಮೂರು ಶಿವಲಿಂಗಗಳನ್ನು ಪ್ರತಿಷ್ಠೆಮಾಡಿಸಿ, ಶಿವಾಲಯ ನಿರ್ಮಿಸಿರುವುದು ತಿಳಿದುಬರುತ್ತದೆ.

೪. ಗಣೇಶ ದೇವಾಲಯದ ಮುಂದಿನ ಬಂಡೆಗಲ್ಲಿನ ಮೇಲೆ ಮಹಾಲಿಂಗದ ಉಲ್ಲೇಖ ಹಾಗೂ ಕೋಟಿ ಲಿಂಗಗಳ ಸಮುಚ್ಚಯ ಸ್ಥಳದಲ್ಲಿ ಬಂಡೆಗಳ ಮೇಲೆ "ಶ್ರೀ ಕೋಟಿಶಂಕರ ಸಹಸ್ರಲಿಂಗ", "ಶ್ರೀ ಕೋಟಿಶಂಕರ ಅಷ್ಟೋತ್ತರ ಲಿಂಗ"ಗಳೆಂಬ ಸ್ತುತಿಪರವಾದ ಶಾಸನಗಳಿವೆ. ಪ್ರಾಯಶ: "ಬ್ರಹ್ಮಂಗಭೇದ್ಯ ಕೋಟಿಶಂಕರೇಶ್ವರಂ" ಎಂಬ ಹರಿಹರ ಕವಿಯ ಪಂಪಾಕ್ಷೇತ್ರ ರಗಳೆಯ ಉದ್ಗಾರದ ಮಾತುಗಳು ಇವುಗಳನ್ನೇ ಕುರಿತು ಹೇಳಿದಂತಿದೆ. ವಿಸ್ತಾರವಾದ ಬಂಡೆಯಮೇಲೆ ಚಿಕ್ಕಚಿಕ್ಕ ಲಿಂಗಗಳ ಉಬ್ಬುಶಿಲ್ಪಗಳ ಮಧ್ಯ ಚೌಕಾಕಾರದ ಪಾನಪೀಠವನ್ನು ರಚಿಸಿ ಅದಕ್ಕೊಪ್ಪುವಂತೆ ಲಿಂಗವನ್ನು ಸ್ಥಾಪಿಸಲಾಗಿದೆ. ಇವು ನೂರಾಎಂಟು ಇದ್ದು 'ಅಷ್ಟೋತ್ತರ ಲಿಂಗ' ಎಂಬ ಶಾಸನೋಕ್ತ ಹೇಳಿಕೆಗೆ ನಿದರ್ಶನಗಳಾಗಿವೆ.

೫. ಕಮಲಾಪುರದ ಪೂರ್ವಕ್ಕಿರುವ ಹೆಚ್.ಪಿ.ಸಿ.ಕಾಲುವೆಯ ಉತ್ತರದಿಕ್ಕಿನ ದಂಡೆಯಕಲ್ಲು ಆಸರೆಯ ಗುಂಡಿನಮೇಲೆ "ಶ್ರೀಕಾಳಹಸ್ತಲಿಂಗ'ದ ಸೂಚನೆಯಿದೆ.

ಫಲಶ್ರುತಿ : ಇದುವರೆಗಿನ ಶಾಸನೋಕ್ತ ಉಲ್ಲೇಖದಿಂದ ಹರಿದಾಸರಾಹುತರ ರಾಮಲಿಂಗ ಪ್ರತಿಷ್ಠಾನೆ, ಮುಮ್ಮಡಿಸಿಂಗೆಯ ನಾಯಕನ ಮಗ ವೀರಕಂಪಿಲದೇವನ ಮೂರು ಶಿವಲಿಂಗಗಳ ರಚನೆ ಹಾಗೂ ಬ್ರಾಹ್ಮಣಪಲ್ಲಿ ತಿಮ್ಮಯ್ಯ ಪ್ರತಿಷ್ಠಾಪಿಸಿದ ನಾಗಭೂಷಣಲಿಂಗಗಳು ಮೂರ್ತಿಶಿಲ್ಪ ಸ್ವರೂಪದಲ್ಲಿರುವ ಸಾಧ್ಯತೆಗಳಿವೆ. ಉಳಿದಂತೆ ಬಂಡೆಗಲ್ಲುಗಳ ಮೇಲೆ ರಚನೆಗೊಂಡಿರುವ ಗಂಗಾಧರಲಿಂಗ, ಕೋಟಿಶಂಕರಲಿಂಗ ಮತ್ತು ಕಾಳಹಸ್ತಿ ಲಿಂಗಗಳು ಉಬ್ಬುಶಿಲ್ಪ ಹಾಗೂ ರೇಖಾವಿನ್ಯಾಸದಲ್ಲಿರುವ ಶಿವಲಿಂಗಗಳಾಗಿವೆ.

ಅಖಂಡಕಲ್ಲಿನಿಂದ ನಿರ್ಮಿಸಿರುವ ಲಿಂಗ ಹಾಗೂ ಪಾನಿಪೀಠಗಳ ರಚನೆ ಶಿವಯೋಗಿ ಸಿದ್ಧರಾಮನ ಕಾಲವಾದ ೧೧೬೦ರಲ್ಲಿ 'ಯೋಗಲಿಂಗ'ವೆಂಬ ವಿಶಿಷ್ಟ ಶೈಲಿಯಿಂದ ಆಚರಣೆಗೆ ಬಂದುದನ್ನು ಸಿದ್ಧರಾಮ ಚಾರಿತ್ರ್ಯ ಬರೆದ ಕವಿ ರಾಘವಾಂಕ ಹಂಪೆಯವನಾದ ಕಾರಣ ಕವಿಯ ಹಾಗೂ ಕಥಾನಾಯಕರ ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ನಂತರದ ಜನ ರೂಢಿಸಿಕೊಂಡು ಉಳಿಸಿಕೊಂಡು ಬಂದಂತಿದೆ. ಇದಕ್ಕೆ ಪ್ರತೀಕವಾಗಿ ತುಂಗಾಭದ್ರಾ ನದಿ ಪಾತ್ರದಲ್ಲಿಯ ಉಬ್ಬುಶಿಲ್ಪದ ಶಿವಲಿಂಗಗಳು, ಮೂರ್ತಿಶಿಲ್ಪ ಲಿಂಗಗಳು ತಲೆಎತ್ತಿವೆ.

"ಲಿಂಗ"ಭಾವದಲ್ಲಿ ಏಕತೆಯನ್ನು, ಭಾಷೆಯಲ್ಲಿ ವಿಭಿನ್ನತೆಯನ್ನು ಪಡೆದುಕೊಂಡಿದೆ; ಜನರ ಮನೋಭಾವದಲ್ಲಿ. ಹೀಗಾಗಿ ಅವರವರ ಭಾವಕ್ಕೆ ತೆರನಾಗಿ ರಾಮಲಿಂಗ, ಚಾಮುಂಡೇಶ್ವರಲಿಂಗ, ಗಂಗಾಧರಲಿಂಗ, ವೀರಭದ್ರಲಿಂಗ, ನಾಗಭೂಷಣಲಿಂಗ, ಮಹಾಲಿಂಗ, ಶಂಕರಲಿಂಗ, ಕಾಳಹಸ್ತಿಲಿಂಗ ಎಂಬ ಹೆಸರಿನಲ್ಲಿ ಅನುಷ್ಠಾನಗೊಂಡಿವೆ. ಆ ಕಾರಣವಾಗಿ ರಾಮಲಿಂಗ ಪ್ರತಿಷ್ಠಾಪನೆ ಮಾಡಿದ ಹರಿದಾಸರಾಹುತ ಹಾಗೂ ತಾಯಿ ಮಾರನಾಯಕಿ ತಂದೆ ಸಿಂಗೆಯನಾಯಕ ಮತ್ತು ಪೆರುಡಿನಾಯಕನ ಸ್ಮರಣಾರ್ಥ ಮೂರು ಶಿವಲಿಂಗಗಳನ್ನು ಪ್ರತಿಷ್ಠಾಪಿಸಿದ ವೀರಕಂಪಿಲದೇವರುಗಳನ್ನು ನೆನಪಿಸಿಕೊಂಡರೆ ಪಂಪಾಪುರವನ್ನು ಲಿಂಗ ನಿಸ್ಸೀಮೆಯನ್ನಾಗಿ ನಿರ್ಮಿಸುವಲ್ಲಿ ಸಕಲ ಧರ್ಮಿಯರ ಪಾತ್ರ ಬಹುಮುಖ್ಯವಾಗಿ ತೋರುತ್ತದೆ.

ವಿಜಯನಗರ ಸ್ಥಾಪನೆಯ ಪೂರ್ವ ಮತ್ತು ನಂತರದ ಸಮಯದಲ್ಲಿ ಹಾಗೂ ತನ್ನ ವೈಭವದ ಪರಮಾವಧಿಯನ್ನು ಸಾಧಿಸಿ ಮರೆಯಾದ ನಂತರವೂ ಹಂಪಿ ವೀರಶೈವಧರ್ಮ ಹಾಗೂ ಅದರ ವಿವಿಧ ವರ್ಗಗಳ ಅನುವರ್ತಿಗಳು ಕ್ರಿಯಾಶೀಲರಾಗಿದ್ದರು. ಅದರಂಗವಾಗಿ ನೀಡಿದ ಅನೇಕ ದಾನ-ದತ್ತಿಗಳು ಮುಂತಾದ ಸಾಲಿನಲ್ಲಿ ಶಿವಲಿಂಗ ಸ್ಥಾಪನೆ, ಜೀರ್ಣೋದ್ಧಾರ, ಆರಾಧನೆ-ಆಚರಣೆಗಳನ್ನು ಕುರಿತು ಅಧ್ಯಯನಗೈಯಲು ಪೂರಕವಾದ ಆಕರಗಳಾಗಿವೆ ಶಿವಲಿಂಗಗಳು. ಇದೇ ಜಾಡನ್ನು ಹಿಡಿದು ಶಿಲ್ಪದ ವಿಕಸನದಲ್ಲಾದ ವೈವಿಧ್ಯತೆಗಳನ್ನು ದಾಖಲಿಸುವ "ಕರ್ನಾಟಕದ ಶಿವಲಿಂಗಗಳು" ಎಂಬ ಪ್ರತ್ಯೇಕ ಅಧ್ಯಯನವೊಂದನ್ನು ಕೈಗೊಳ್ಳುವ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ವಿಶೇಷವಾಗಿ ವಿಜಯನಗರ ಕಾಲದ ಶಿವಲಿಂಗಗಳು ಎತ್ತರವಾಗಿರುವ ಕಾರಣ ಅವುಗಳನ್ನು ರಾಮಲಿಂಗವೆಂದು ಕರೆಯುವ ರೂಢಿಯಿದೆ. ಪ್ರಾಯಶ: ರಾಮಾಯಣ ಸಂಸ್ಕೃತಿ ಇಲ್ಲವೇ ಪರಂಪರೆ ಈ ಪ್ರದೇಶದಲ್ಲಿರುವುದು ಕಾರಣವಾಗಿರುವ ಸಾಧ್ಯತೆಯನ್ನು ಯೋಚಿಸಬೇಕಾಗಿದೆ.

"ಉಡಿಯಲಿಂಗವ ಬಿಟ್ಟು ಗುಡಿಯಲಿಂಗಕ್ಕೆ ಶರಣೆಂಬ ಗುಡಿಹಿಗಳ ನೇನೆಂಬೆನಯ್ಯಾ" ಎಂಬ ವಚನಕಾರ ಮಡಿವಾಳ ಮಾಚಯ್ಯನವರ ಮಾತಿನಂತೆ ೧೨ನೇ ಶತಮಾನದ ನಂತರದಲ್ಲಿ ಇಷ್ಟಲಿಂಗದ ಜಂಗಮತ್ವದಿಂದ ಪ್ರತಿಷ್ಠಾಪಿತ ಸ್ಥಾವರತ್ವದ ಕಡೆಗೆ ವಾಲುವುದರ ಮೂಲಕ ಹಂಪಿ ವೀರಶೈವದಿಂದ ವಿಮುಖವಾಗಿ ಶೈವ ಪರಂಪರೆಯ ಮರು ಆಚರಣೆಯನ್ನು ಅನುಷ್ಠಾನಗೊಳಿಸಿಕೊಂಡಂತಿದೆ. ಹೀಗಾಗಿ ಚಾಮರಸಕವಿ ಪ್ರಭುದೇವರ ಜೀವನ ಸಾಧನೆಯನ್ನು ಕಟ್ಟಿಕೊಡುವಲ್ಲಿ ಪ್ರಭುಲಿಂಗಲೀಲೆಯನ್ನಾಗಿ ರೂಪಿಸಿಕೊಂಡಿದ್ದು ಕಲ್ಲುಮಠದಪ್ರಭುದೇವ ಲಿಂಗಲೀಲಾವಿಲಾಸವನ್ನಾಗಿ ವಚನಗಳನ್ನು ವ್ಯಾಖ್ಯಾನಿಸಿದ್ದು, ಚೆನ್ನಬಸವಣ್ಣನನ್ನು ವಿರೂಪಾಕ್ಷಪಂಡಿತ ಪುರಾಣೀಕರಿಸಿದ್ದು ಜಕ್ಕಣಾರ್ಯ ಏಕೋತ್ತರ ಶತಸ್ಥಲದ ಮೂಲಕ ಸಂಸಾರಹೇಯ ಸ್ಥಲವೆಂಬುದಾಗಿ ತಿಳಿಸುತ್ತ ಮರ್ತ್ಯಲೋಕವನ್ನು ಮಲಿನವೆಂದು ಭಾವಿಸಿದ್ದು, ವಚನಕಾರರ ಮತ್ತು ವಚನ ಸಾಹಿತ್ಯದ ವೈಚಾರಿಕ ಅಧ್ಯಯನಕ್ಕೆ ಅಪವಾದವಾಗಿ ರಚನೆಗೊಂಡಂತಿವೆ. ಇದರಿಂದಾಗಿ ಜಂಗಮಸಾಧಕರಲ್ಲದ (ಸಮಾಜ ಸುಧಾರಕರಲ್ಲದ) ಇಲ್ಲಿಯ ಕೆಲವು ಕವಿಗಳು ಕಳವಳಿಸಿ ಹೋದರು, ವಿದ್ಯವಂತರು ಬುದ್ಧಿಗೆಟ್ಟು ತತ್ತ್ವಪ್ರತಿಪಾದಕರು ತಲ್ಲಣಿಸಿಹೋದರು, ಲಿಂಗಸಾಧಕರು ಭೂ ಭಾರವಾದರೆಂದು ಹೇಳಬೇಕೆನಿಸುತ್ತದೆ.

ಕೊನೆಯ ಟಿಪ್ಪಣಿಗಳು

೧. ಪಂಪಾಕ್ಷೇತ್ರ ರಗಳೆ ೧೦-೪೦

೨. ಹೆಚ್ಚಿನ ವಿವರಗಳಿಗಾಗಿ ನೋಡಿ 'ಶಿವಸಂಸ್ಕೃತಿಯ ವಿಕಸನ ನೆಲೆಗಳು', ಪ್ರೊ. ಎಂ.ಜಿ.ನಾಗರಾಜ, ಶ್ರೀ ಜ.ಸಾರಂಗಧರೇಶ್ವರ ಪ್ರಕಾಶನ ಶ್ರೀಶೈಲ, ೨೦೦೦

೩. ಹೆಚ್ಚಿನ ವಿವರಗಳಿಗಾಗಿ ನೋಡಿ "ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ - ೨, ಸಂ. ಡಾ. ಟಿ.ಎ.ಗೋಪಿನಾಥರಾವ್, ೧೯೯೮

೪. ಕರ್ನಾಟಕ ಕೈಫಿಯತ್ತುಗಳು, ಸಂ. ಡಾ. ಎಂ.ಎಂ.ಕಲಬುರ್ಗಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೪೩೨, ೧೯೯೪

೫. ಹೆಚ್ಚಿನ ವಿವರಣೆಗಾಗಿ ಶ್ರೀ ಅಗಡಿ ಸಂಗಣ್ಣನವರ ಅಭಿನಂದನ ಗ್ರಂಥ "ಎನಗಿಂತ ಕಿರಿಯರಿಲ್ಲ"ದಲ್ಲಿಯ "ಹಂಪೆಯ ವೀರಶೈವ ಪ್ರಾಚೀನ ಕುರುಹುಗಳು" ಎಂಬ ಸಿ.ಟಿ.ಎಂ.ಕೊಟ್ರಯ್ಯನವರ ಲೇಖನ ನೋಡಿ. ಸಂ. ಡಾ. ಬಸವರಾಜ ಮಲಶೆಟ್ಟಿ, ೧೯೯೪

❖ ❖

೨೦

ವಿಜಯನಗರದ ಅರಸರು ಮತ್ತು ಸಂತೇಬೆನ್ನೂರು ನಾಯಕರು

ಸಂತೇಬೆನ್ನೂರು ಸುಮತೀಂದ್ರ ನಾಡಿಗ್

ಹದಿನಾಲ್ಕನೇ ಶತಮಾನದ ಆದಿಯಲ್ಲಿ ಮುಸ್ಲಿಂ ಸೇನೆಗಳ ದಾಳಿಯಿಂದ ಕರ್ನಾಟಕದ ವಿವಿಧ ಭಾಗವನ್ನಾಳುತ್ತಿದ್ದ ಅನೇಕ ಹಿಂದೂ ರಾಜಮನೆತನಗಳು ಕಂಗೆಟ್ಟು, ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳಬೇಕಾಗಿ ಬಂತು. ಇಂತಹ ಸಂದರ್ಭದಲ್ಲಿ ಉದಯಿಸಿದ ವಿಜಯನಗರ ಸಾಮ್ರಾಜ್ಯ ಈ ಭಾಗದ ಪರಂಪರಾಗತ ಧರ್ಮ, ಜೀವನ ವಿಧಾನ ರಕ್ಷಿಸಿ, ಅವುಗಳ ಪ್ರಗತಿಗೆ ತನ್ನದೇ ಆದ ಕೊಡುಗೆಯನ್ನು ನೀಡಿ, ಇಡೀ ದಕ್ಷಿಣಭಾರತವನ್ನು ಏಕಛತ್ರ ದಡಿಗೆ ತಂದು ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಮತ್ತಿತರ ಕಲೆಗಳ ಕ್ಷೇತ್ರದಲ್ಲೂ ಅಮೂಲ್ಯ ಸಾಧನೆ ಮಾಡಿತು.

ಮೂರು ಶತಮಾನಗಳಿಗೂ ಅಧಿಕ ಕಾಲ ಆನೆಗೊಂದಿ, ಹಂಪಿ, ಪೆನಗೊಂಡ ಮುಂತಾದ ಕ್ಷೇತ್ರಗಳಿಂದ ಆಡಳಿತ ನಡೆಸಿದ ವಿಜಯನಗರದ ಸಂಗಮ, ಸಾಳುವ, ತುಳುವ, ಅರವೀಡು ರಾಜಮನೆತನಗಳು ತನ್ನ ಸಾಮ್ರಾಜ್ಯದ ಉಳುವಿಗಾಗಿ ಅನೇಕ ಶತ್ರುಗಳನ್ನು ಎದುರಿಸಬೇಕಾಯಿತು. ಇದಕ್ಕಾಗಿ ದೊಡ್ಡ ಸೈನಿಕ ಜಾಲವನ್ನೇ ಹೊಂದಬೇಕಾದಾಗ, ಸೈನಿಕರ ನಿರ್ವಹಣೆ, ತರಬೇತಿ ವ್ಯವಸ್ಥೆಗಾಗಿ ರಾಜ್ಯದಾದ್ಯಂತ ಅಲ್ಲಲ್ಲಿ ಒಂದೊಂದು ನೆಲೆಗಳನ್ನು ನಿರ್ಮಿಸಿ, ಅದಕ್ಕೋರ್ವ ನಾಯಕನನ್ನು ನೇಮಿಸಿ, ಅವನಿಗೆ ಆ ನೆಲೆಯ, ಪಾಳೆಯಪಟ್ಟಿನ ಸೈನಿಕರ ಉಸ್ತುವಾರಿ ಜೊತೆಗೆ ಪ್ರಾಂತೀಯ ಆಡಳಿತ ಕಂದಾಯವಸೂಲಾತಿ, ರಕ್ಷಣೆ ಇತ್ಯಾದಿ ಅಧಿಕಾರ ಕೊಟ್ಟಿತು. ರಾಜ್ಯವನ್ನು ರಾಜ್ಯ, ವೇಂಟೆ, ಸೀಮೆ, ನಾಡು ಎಂದು ವಿಭಾಗಿಸಿ ಸುವ್ಯವಸ್ಥಿತ ಆಡಳಿತ ಪದ್ಧತಿ ನಿರ್ವಹಿಸುವಂತೆ ಏರ್ಪಡಿಸಿತು. ಇಂತಹ ನೆಲೆ, ಪಾಳೆಯಗಳನ್ನು

ಪಾಳೇಯಪಟ್ಟುಗಳು ಎಂದು ಮುಂದೆ ಗುರಿತಸಲ್ಪಟ್ಟವು. ಇಂತಹ ಪಾಳೇಪಟ್ಟುಗಳಲ್ಲಿ ಮೈಸೂರು, ಬೆಂಗಳೂರು, ಕೆಳದಿ, ಚಿತ್ರದುರ್ಗ, ಹರಪನಹಳ್ಳಿ, ಹಾಗಲವಾಡಿ, ಸಂತೇಬೆನ್ನೂರು ಮುಂತಾದವು ಪ್ರಮುಖವಾದವು. ವಿಜಯನಗರದ ಅರಸರ ಸಂಪೂರ್ಣ ಅಧೀನರಾಗಿಯೇ ಕಾರ್ಯ ನಿರ್ವಹಿಸುತ್ತಿದ್ದ ಈ ನಾಯಕರು, ಈ ಸಾಮ್ರಾಜ್ಯದ ಪತನಾನಂತರ ಸ್ವತಂತ್ರವಾಗಿ ಕಾರ್ಯನಿರ್ವಹಿಸಿ ತಮ್ಮದೇ ಆಡಳಿತ ಮುಂದುವರೆಸಿಕೊಂಡು ಬಂದರು. ವಿಜಯನಗರದ ಮಾಂಡಲೀಕರಾಗಿಯೇ ಇದ್ದ ಈ ನಾಯಕರು ಮುಂದೆ ಪರಸ್ಪರ ಕಚ್ಚಾಡುವ ಶಕ್ತಿಗಳಾಗಿ ರೂಪಗೊಂಡಿದ್ದು ಒಂದು ವೈಪ್ಯರೀತ್ಯವೇ ಸರಿ.

ಈಗ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ಹೋಬಳಿ ಕೇಂದ್ರವಾಗಿರುವ ಸಂತೇಬೆನ್ನೂರು ಒಂದು ದೊಡ್ಡ ಗ್ರಾಮ. ಇದನ್ನು ರಾಜಧಾನಿಯಾಗಿ ಮಾಡಿಕೊಂಡು, ವಿಜಯನಗರ ಅರಸರ ಅಧೀನರಾಗಿ ಆಳಿದ ಒಂದು ರಾಜವಂಶವೇ ಸಂತೇಬೆನ್ನೂರು ನಾಯಕರು. ಕರ್ನಾಟಕದ ಈಗಿನ ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ತುಮಕೂರು, ಹಾವೇರಿ ಸೇರಿದಂತೆ ಏಳು ಜಿಲ್ಲಾ ವ್ಯಾಪ್ತಿಯ ಅನೇಕ ಭೂಭಾಗವನ್ನು ವಿಜಯನಗರದ ಮಾಂಡಲೀಕರಾಗಿ, ನಂತರ ಸ್ವತಂತ್ರರಾಗಿ ಅವರ ಆಡಳಿತ ಪದ್ಧತಿಯನ್ನೇ ಮುಂದುವರೆಸಿಕೊಂಡು ಸರಿಸುಮಾರಾಗಿ ಮೂರು ಶತಮಾನಗಳ ಕಾಲ ಆಡಳಿತ ನಡೆಸುತ್ತಿದ್ದುದಾಗಿ ಅವರು ಬರೆಯಿಸಿದ ಶಾಸನಗಳು, ಕೈಫಿಯತ್ತುಗಳು, ಸಮಕಾಲೀನ ದಾಖಲೆಗಳು, ಕಟ್ಟಿಸಿದ ದೇವಸ್ಥಾನಗಳು, ಕೋಟೆ, ಕೆರೆ, ಕೊಳ ಇತ್ಯಾದಿಗಳಿಂದ ತಿಳಿದುಬರುತ್ತಿದ್ದು, ಇವುಗಳಿಂದ ವಿಜಯನಗರ ಅರಸರಿಗೂ, ಸಂತೇಬೆನ್ನೂರು ನಾಯಕರಿಗೂ ಇದ್ದ ಮಧುರ ಬಾಂಧವ್ಯ, ರಾಜಕೀಯ ಸಂಬಂಧ, ವ್ಯವಹಾರ ಇತ್ಯಾದಿಗಳು ತಿಳಿದುಬರುತ್ತವೆ.

ಕರ್ನಲ್ ಮೆಕೆಂಜಿ ಸಂಗ್ರಹಿಸಿದ ಕೈಫಿಯತ್ತುಗಳು ಮತ್ತಿತರ ದಾಖಲೆಗಳಂತೆ ವಿಜಯನಗರದ ದಳಪತಿಯಾಗಿದ್ದ ಧೂಮರಾಜನೆಂಬುವನು ಸಂತೇಬೆನ್ನೂರು ಸಮೀಪದ ಬಸವಾಪಟ್ಟಣಕ್ಕೆ ಬಂದು ಅಲ್ಲಿನ ಹೆಣ್ಣುಮಗಳನ್ನು ವಿವಾಹವಾಗಿ ನೆಲೆನಿಂತು ಅಲ್ಲಿ ಒಂದು ಪಾಳೆಯಪಟ್ಟು ಪ್ರಾರಂಭಿಸಿದನೆಂತಲೂ, ಅವನ ಮಗ ಕೆಂಗಪ್ಪನಾಯಕನ ಮಗ ಹನುಮಪ್ಪನಾಯಕ ಉತ್ಸಂಗಿ ವೆಂಟಿಕೆ ಸಲ್ಲುವ ಸಂತೇಬೆನ್ನೂರನ್ನು ವಿಜಯನಗರದ ಅರಸು ಕೃಷ್ಣದೇವರಾಯನ ಅಳಿಯ ರಾಮರಾಯನಿಂದ ಅಮರ ಮಾಗಣೆಯಾಗಿ ಪಡೆದನೆಂತಲೂ, ಅವನು ಮತ್ತು ಅವನ ವಂಶಸ್ಥರು ಬಸವಾಪಟ್ಟಣ, ಸಂತೇಬೆನ್ನೂರು ಅನಂತರ ಚಿಕ್ಕಮಗಳೂರು ಜಿಲ್ಲೆ ತರೀಕೆರೆಯಿಂದಲೂ ರಾಜ್ಯಾಡಳಿತ ನಿರ್ವಹಿಸುತ್ತಿದ್ದುದಾಗಿ ತಿಳಿದುಬರುತ್ತದೆ. ಈ ನಾಯಕರು ಬರೆಯಿಸಿದ ೫೩ ಶಾಸನಗಳು ಈವರೆಗೆ ದೊರೆತಿದ್ದು, ಅವರು ಬಸವಾಪಟ್ಟಣ, ತರೀಕೆರೆಯಿಂದ ಆಡಳಿತ ನಡೆಸುತ್ತಿರುವಾಗಲೂ ಬರೆಯಿಸಿದ ಶಾಸನಗಳಲ್ಲಿ ತಮ್ಮನ್ನು ಸಂತೇಬೆನ್ನೂರು ನಾಯಕರೆಂದೇ ಗುರ್ತಿಸಿ, ಕರೆದುಕೊಂಡಿರುತ್ತಾರೆ. ಆದ್ದರಿಂದ ಇತಿಹಾಸದ ಈಗಿರುವ ಆಕರಗಳಲ್ಲಿ ಅವರನ್ನು ಸಂತೇಬೆನ್ನೂರು, ಬಸವಾಪಟ್ಟಣ,

ತರೀಕೆರೆ ಪಾಳೆಯಗಾರರು ಎಂದು ಕರೆಯುವುದರ ಬದಲು ಸಂತೇಬೆನ್ನೂರು ನಾಯಕರೆಂದೇ ಗುರುತಿಸಿ, ಕರೆಯುವುದು ಸಂಮಜಸವಾಗಿದೆ.

ಕ್ರಿ.ಶ. ೧೫೪೫ರಲ್ಲಿ ವಿಜಯನಗರ ಸೇನೆಯು ಮಹಮದೀಯರ ವಿರುದ್ಧ ಹೋರಾಡಿದಾಗ ಸಂತೇಬೆನ್ನೂರು ಹನುಮಪ್ಪನಾಯಕ ಸೇನಾಧಿಪತಿಯಾಗಿ ಕಾರ್ಯನಿರ್ವಹಿಸಿ ಪ್ರಾಮುಖ್ಯಕ್ಕೆ ಬಂದನೆಂದು ತಿಳಿದುಬಂದಿದ್ದು, ಕರ್ನಾಟಕ ಶಾಸನ ಪಿತಾಮಹ ಬಿ.ಎಲ್.ರೈಸರು ತಮ್ಮ ಶಿವಮೊಗ್ಗ, ಕಡೂರು, ತುಮಕೂರು ಶಾಸನ ಸಂಪುಟಗಳಲ್ಲಿ ವಿಜಯನಗರ ಅರಸರು ಮತ್ತು ಸಂತೇಬೆನ್ನೂರು ನಾಯಕರಿಗೆ ಸಂಬಂಧಿಸಿದಂತೆ ಐದು ಶಾಸನಗಳನ್ನು ದಾಖಲಿಸಿದ್ದು, ಇದು ಈ ಇರ್ವರ ನಡುವಿನ ಸಂಬಂಧಗಳನ್ನು ಇನ್ನಷ್ಟು ದೃಢೀಕರಿಸುತ್ತದೆ.

ರೈಸರು ದಾಖಲಿಸಿರುವ ಇರ್ವರಿಗೂ ಸಂಬಂಧಿಸಿದ ಶಾಸನಗಳು

೧. ಶಾಸನ ಸಂಪುಟ - ೭ (ಶಿವಮೊಗ್ಗ) ಚನ್ನಗಿರಿ - ೬೯ ಚಿಕ್ಕಗಂಗೂರು ಶಾಸನ

೨. ಶಾಸನ ಸಂಪುಟ - ೭ (ಶಿವಮೊಗ್ಗ) ಚನ್ನಗಿರಿ - ೬೨ ತಾಮ್ರಶಾಸನ

೩. ಶಾಸನ ಸಂಪುಟ - ೧೨ (ತುಮಕೂರು) ಚಿಕ್ಕನಾಯ್ಕನಹಳ್ಳಿ - ೧೯ ಗರಗ ಶಾಸನ

೪. ಶಾಸನ ಸಂಪುಟ - ೬ (ಕಡೂರು) ತರೀಕೆರೆ - ೨೧ ತಾಮ್ರಶಾಸನ

೫. ಶಾಸನ ಸಂಪುಟ - ೬ (ಕಡೂರು) ತರೀಕೆರೆ - ೨೪ ತಾಮ್ರಶಾಸನ

ಚನ್ನಗಿರಿ - ೬೯ ಚಿಕ್ಕಗಂಗೂರು ಶಾಸನ

ವಿಜಯನಗರದ ತುಳುವ ವಂಶದ ಅರಸನಾಗಿದ್ದ ವೀರಪ್ರತಾಪ ಸದಾಶಿವರಾಯರ ಆಳ್ವಿಕೆ ಕಾಲದಲ್ಲಿ ಕ್ರಿ.ಶ. ೧೫೬೩ರಲ್ಲಿ ಅವರ ಅಧೀನಕ್ಕೆ ಒಳಪಟ್ಟಿದ್ದ ಈಗಿನ ಚಿತ್ರದುರ್ಗ ಜಿಲ್ಲೆಯ ದುಂಮಿ ಸೀಮೆಯನ್ನು ಮಲುಕ ಒಡೆಯರೆಂಬುವರಿಗೆ (ಮಲ್ಲಿಕ್ ?) ಅಮರ ಮಾಗಣೆಯಾಗಿ ಕೊಟ್ಟಿದ್ದನೆಂದೂ, ಅವನು ಅಲ್ಲಿನ ಆಡಳಿತ ನಿರ್ವಹಿಸಲು ದಿಲಾವರ್ ಖಾನ್ ಎಂಬ ಠಾಣೇದಾರನನ್ನು ನೇಮಿಸಿದ್ದನೆಂದೂ, ಆ ಠಾಣೆದಾರ ಅಲ್ಲಿನ ಜನರಿಗೆ ತೊಂದರೆ ಕೊಡುತ್ತಿರುವ ವಿಚಾರವನ್ನು ಅಲ್ಲಿನ ಗಲುಡಯ್ಯನು ಮಲುಕ ಒಡೆಯರಿಗೆ ತಿಳಿಸಲು ಹೋಗುತ್ತಿರುವ ವಿಚಾರ ತಿಳಿದು, ದಿಲಾವರ್ ಖಾನ್ ಗಲುಡಯ್ಯನ ತಲೆ ತೆಗೆದನೆಂದೂ, ಈ ವಿಚಾರ ತಿಳಿದ ಮಲುಕ ಒಡೆಯ, ದಿಲಾವರನನ್ನು ಠಾಣೇದಾರನ ಸ್ಥಾನದಿಂದ ತೆಗೆದುಹಾಕಿ, ಅವನ ಬದಲಿಗೆ ಸಂತೇಬೆನ್ನೂರು ಪಿಲ್ಲಪ್ಪ ನಾಯಕನಿಗೆ ಆಸ್ಥಾನ ವಹಿಸಿದ್ದಲ್ಲದೆ ಕೊಲೆಗೀಡಾದ ಗಲುಡಯ್ಯನ ಮಕ್ಕಳಿಗೆ ನೆತ್ತುರುಡಿಗೆಯಾಗಿ ಭೂಮಿ ದಾನಕೊಟ್ಟ ವಿಚಾರ ಈ ಶಾಸನ ತಿಳಿಸುತ್ತದೆ.

ಎಲ್ಲರು ತಿಳಿದಿರುವಂತೆ ಹೆಸರಿಗೆ ಮಾತ್ರ ರಾಜನಾಗಿದ್ದ ಸದಾಶಿವರಾಯ ಕೃಷ್ಣದೇವರಾಯನ ಅಳಿಯ ರಾಮರಾಯನ ಕೈಗೊಂಬೆಯಾಗಿದ್ದು, ಎಲ್ಲಾ ಆಡಳಿತ

ನಿರ್ವಹಣೆ ರಾಮರಾಯನೇ ನಿರ್ವಹಿಸುತ್ತಿದ್ದ ರಾಮರಾಯ ಆದಿಲ್ ಷಾಹಿಗಳೊಡನೆ ಪ್ರಾರಂಭದಲ್ಲಿ ಮಧುರ ಭಾವನೆಗಳನ್ನಿಟ್ಟುಕೊಂಡಿದ್ದರ ಪರಿಣಾಮ, ಮೇಲ್ಕಂಡ ಅವರ ಅಧೀನದಲ್ಲಿದ್ದ ದುಂಮಿ ಸೀಮೆ, ಮುಸ್ಲಿಂ ಆಡಳಿತಕ್ಕೆ ವಹಿಸಿರಬಹುದು, ನಂತರ ಬದಲಾದ ಪರಿಸ್ಥಿತಿಯಿಂದ ಈ ಅವಕಾಶ ಉಪಯೋಗಿಸಿಕೊಂಡು ಅವರಿಂದ ಅದನ್ನು ತಪ್ಪಿಸಿ, ಹಿಂದೂ ನಾಯಕರಾದ ಸಂತೇಬೆನ್ನೂರು ಪಿಲ್ಲಪ್ಪನಾಯಕರಿಗೆ ಈ ಸೀಮೆ ಪಾಲಿಸಲು ಅನುಮತಿಸಿರಬೇಕೆಂದು ಈ ಶಾಸನದಿಂದ ತಿಳಿಯಬಹುದಾಗಿದೆ.

ಚನ್ನಗಿರಿ - ೬೨ ತಾಮ್ರಶಾಸನ

ಇದು ಕೃಷ್ಣದೇವರಾಯನ ಅಳಿಯ ವೀರರಾಮದೇವರು ಅವರ ಕಾರ್ಯಕರ್ತರಾಗಿದ್ದ ಸಂತೇಬೆನ್ನೂರು ಬಿಲ್ಲಪ್ಪನಾಯಕರು ಕೆಂಗಪ್ಪ ನಾಯಕರಿಗೆ ಕ್ರಿ.ಶ. ೧೫೬೫ರಲ್ಲಿ ಸಂತೇಬೆನ್ನೂರು ಸ್ಥಳದ ಶಾನುಬೋದಿಕೆ, ಜೋತಿಷ್ಯ, ಪುರೋಹಿತ್ಯ ಮುಂತಾದವುಗಳನ್ನು ಶ್ರೀವತ್ಸ ಗೋತ್ರದ ಲಿಂಗಣ್ಣ ಎಂಬುವರಿಗೆ ಅವರ ಪೂರ್ವಿಕರು ನಡೆಸಿಕೊಂಡು ಬಂದಂತೆ ಉಂಮಳಿ ವರ್ತನೆ, ಹೊಲಗದ್ದೆ ಬೆದ್ದಲು, ಕಾಡಾರಂಬ, ನಿರಾರಂಭ, ಆಯಸೌಮ್ಯ ಸುವರ್ಣಾದಾಯ, ಸರ್ವತೇಜ ಸ್ವಾಮ್ಯವನ್ನು ಅನುಭವಿಸಿಕೊಂಡು ಬರಲು ಬರೆಯಿಸಿಕೊಟ್ಟ ದಾನ ಶಾಸನವಾಗಿರುತ್ತದೆ.

ಇತರ ದಾಖಲೆಯನ್ನು ಪರಿಶೀಲಿಸಿದಾಗ ಚಿಕ್ಕಗಂಗೂರು ಶಾಸನದಲ್ಲಿ ಬರುವ ಪಿಲ್ಲಪ್ಪ, ಈ ಶಾಸನದಲ್ಲಿ ಪ್ರಸ್ತಾಪಿತವಾಗಿರುವ ಬಿಲ್ಲಪ್ಪ ಓರ್ವರೇ ಆಗಿದ್ದು, ಬಿಲ್ಲಪ್ಪನ ತಮ್ಮ ಕೆಂಗಪ್ಪನಾಯಕ ಎಂಬುವನು ಇದ್ದುದು, ಈ ಶಾಸನದಿಂದ ತಿಳಿಯಬಹುದಾಗಿದೆ. ಚಿಕ್ಕಗಂಗೂರು ಶಾಸನದಲ್ಲಿ ಸಂತೇಬೆನ್ನೂರು ಪಿಲ್ಲಪ್ಪ ಎಂದು ಬಂದಿರುವುದರಿಂದಲೂ, ಈ ಶಾಸನದಲ್ಲಿ ಪೂರ್ವದಂತೆ ಎಂದು ಪ್ರಸ್ತಾಪಿಸಿರುವುದರಿಂದಲೂ, ಸಂತೇಬೆನ್ನೂರು ನಾಯಕ ವಂಶದವರು ಕ್ರಿ.ಶ. ೧೫೬೩ಕ್ಕೆ ಪೂರ್ವದಲ್ಲೇ ವಿಜಯನಗರ ಅರಸರ ಅಧೀನರಾಗಿ ಆಡಳಿತ ನಡೆಸುತ್ತಿರಬಹುದೆಂಬುದನ್ನು ಸೂಚಿಸುತ್ತದೆ.

ಕ್ರಿ.ಶ. ೧೫೪೫ರಲ್ಲಿ ವಿಜಯನಗರ ಸೇನೆ ಮಹಮದೀಯರ ವಿರುದ್ಧ ಹೋರಾಡಿದಾಗ ಈ ವಂಶದ ಹನುಮಪ್ಪನಾಯಕ ಸೇನಾಧಿಪತಿಯಾಗಿ ಪ್ರಾಮುಖ್ಯಕ್ಕೆ ಬಂದು ಪ್ರಭುತ್ವ ಪಡೆದನೆಂಬ ದಾಖಲೆಗೆ ಇದು ಪುಷ್ಟಿಕೊಡುತ್ತದೆ. ಇಲ್ಲಿಗೆ ಸಮೀಪದ ದೇವರಹಳ್ಳಿ ಉಡಮರಡಿ ರಂಗನಾಥಸ್ವಾಮಿ ಸನ್ನಿಧಿಯಲ್ಲಿ ಕೃಷ್ಣದೇವರಾಯ ಕೇಶವ ಶಿಲ್ಪವನ್ನು ಪ್ರತಿಷ್ಠಾಪಿಸಿದ ಎನ್ನಲಾಗುತ್ತಿದ್ದು, ಆ ವೇಳೆಗಾಗಲೇ ಉತ್ತಮ ಯೋಧರಾಗಿದ್ದ ಸಂತೇಬೆನ್ನೂರು ನಾಯಕರು, ವಿಜಯನಗರ ಅರಸರ ಮೆಚ್ಚುಗೆಗೆ ಪಾತ್ರರಾಗಿರುವ ಸಂಭವವೂ ಇದೆ.

ಉಲ್ಲೇಖಿತ ಶಾಸನ ವಿದ್ಯಾನಗರಿಯ ಸಿಂಹಾಸನಕರ್ತರಾದ ಶ್ರೀ ಮದ್ರಾಜಾದಿರಾಜ ಪರಮೇಶ್ವರ ವೀರಪ್ರತಾಪ ಶ್ರೀ ವೀರರಾಮದೇವರಾಯ ಮಹಾರಾಜರು ರತ್ನಸಿಂಹಾಸನ

ರೂಢರಾಗಿ ಸುಖ ಸಂಕಥಿ ವಿನೋದದಿಂ ಪೃಥ್ವಿ ರಾಜ್ಯಂಗೆ ಯುತ್ತಿರಲು ಎಂದು ಪ್ರಸ್ತಾಪಿಸಲಾಗಿರುವುದರಿಂದ ಆಗ ನೆಪಮಾತ್ರ ಅರಸುಪಟ್ಟದಲ್ಲಿದ್ದ ತುಳುವ ವಂಶದ ಸದಾಶಿವರಾಯನನ್ನು ಬದಿಗೊತ್ತಿ ಅರವೀಡು ವಂಶದ ಈ ಅಳಿಯ ರಾಮರಾಯನೇ ಆಡಳಿತ ಚುಕ್ಕಾಣಿ ಹಿಡಿದಿರಬೇಕಂದು ಈ ಶಾಸನ ಹೇಳುತ್ತದೆ.

ಚಾರಿತ್ರಿಕ ದಾಖಲೆಗಳಂತೆ ತಾಳೀಕೋಟೆ (ರಕ್ಕತಂಗಡಿ) ಯುದ್ಧ ದಿನಾಂಕ ೨೩.೧.೧೫೬೫ರಲ್ಲಿ ನಡೆಯಿತೆಂದು ಹೇಳಲಾಗುತ್ತದೆ. ಎಫಿಮರೀಸ್ ದಾಖಲೆಯಂತೆ ಈ ಶಾಸನದ ಕಾಲ ದಿನಾಂಕ ೧೫.೧.೧೫೬೫. ವಿಜಯನಗರ ಸಾಮ್ರಾಜ್ಯವೇ ಪತನಗೊಂಡ ಈ ದೊಡ್ಡ ಯುದ್ಧದ ಬಿಸಿ, ಈ ಶಾಸನ ಬರೆಸಿದ ಕೇವಲ ೮ ದಿನ ಅಂತರದಲ್ಲಿ ಇರಲಿಲ್ಲವೆ? ಎಂಬ ಸಂಶಯಕ್ಕೆ ಎಡೆಮಾಡಿಕೊಡುತ್ತದೆ. ಬುಕಾನನ್ ಹೇಳುವಂತೆ ಅಳಿಯ ರಾಮರಾಯ ತಾಳೀಕೋಟೆ ಯುದ್ಧದಲ್ಲಿ ನಿಧನವಾದದ್ದು ಶಾಲಿವಾಹನ ಶಕ ೧೪೮೬ನೇ ರಕ್ತಾಕ್ಷಿ ಸಂ|| ದ ಮಾಘ ಕಾಗಣ ೧೪ ಬುಧವಾರ, ಇದನ್ನು ಕೆಳದಿನೃಪ ವಿಜಯವೂ ಪುಷ್ಟೀಕರಿಸುತ್ತದೆ. ಈ ಶಾಸನದ ಕಾಲವು ರಕ್ತಾಕ್ಷಿ ಸಂ|| ದ ಮಾಘ ಶುಕ್ಲ ೧೫ ಸೌಮ್ಯವಾರವಾಗಿದ್ದು, ಚಾರಿತ್ರಿಕ ದಾಖಲೆಯಿಂದ ಈ ಶಾಸನ ಮಹತ್ವ ಎನಿಸುತ್ತದೆ.

ಚಿಕ್ಕನಾಯ್ಕನಹಳ್ಳಿ - ೧೯ ಗರಗ ಶಾಸನ

ಈ ಶಾಸನ ಕ್ರಿ.ಶ. ೧೬೩೬ರಲ್ಲಿ ವಿಜಯನಗರದ ಶ್ರೀ ವೆಂಕಟಪತಿದೇವ ಮಹಾರಾಯರು ಪೆನಗೊಂಡ ಪಟ್ಟಣದಲ್ಲಿ ಸಿಂಹಾಸನಾರೂಢರಾಗಿದ್ದಾಗ ಸಂತೇಬೆನ್ನೂರು ನಿಚ್ಚಮದುವಣಿಗ ವೀರಹನುಮಪ್ಪ ನಾಯಕರಿಗೆ ಅಮರ ನಾಯಕತ್ವವನ್ನು ಕೊಟ್ಟು ಈಗಿನ ತುಮಕೂರು ಜಿಲ್ಲೆ ಮಗರನಾಡ ವೇಂಠೆಯ (ವಿ)ಭೂತಿಪುರ ಸೀಮೆ ಒಳಗಣ ಗರಗ ಗ್ರಾಮದ ಹನುಮಸಾಗರದಲ್ಲಿ ಪ್ರಧಾನಿ ಕಳಸಪ್ಪಯ್ಯ ಪ್ರತಿಷ್ಠಾಪಿಸಿದ ಸದಾಶಿವಸ್ವಾಮಿಯ ಅಂಗ, ರಂಗ, ವೈಭೋಗ, ನೈವೇದ್ಯ, ದೀಪ್ತಿ, ಮಂತ್ರ-ಪುಷ್ಪ ಮುಂತಾದ ಸಮಸ್ತ ವಿನಿಯೋಗಕ್ಕೆ ೫೦ ವರಾಹ ಭೂಮಿಯನ್ನು ದಾನವಾಗಿ ಕೊಟ್ಟ ವಿಚಾರ ತಿಳಿಸುತ್ತದೆ.

ಈ ಶಾಸನದಿಂದ ವಿಜಯನಗರ ಸಂಸ್ಥಾನದ ಅರವೀಡು ಮನೆತನ ಪೆನಗೊಂಡದಲ್ಲಿ ತನ್ನ ನೆಲೆ ಮುಂದುವರೆಸಿ ಸಂತೇಬೆನ್ನೂರು ನಾಯಕರಿಗೆ ಗರಗ ಸೀಮೆಯ ಅಮರ ನಾಯಕತ್ವ ಕೊಟ್ಟ ವಿಚಾರ ತಿಳಿಸುತ್ತದೆ.

ಸಂತೇಬೆನ್ನೂರು ನಾಯಕರು ಬಸವಾಪಟ್ಟಣ, ಸಂತೇಬೆನ್ನೂರು, ತರೀಕೆರೆಗಳಿಂದ ಆಡಳಿತ ನಡೆಸುತ್ತಿದ್ದು ದಾಖಲೆಗಳಿಂದ, ಶಾಸನಗಳಿಂದ ತಿಳಿದುಬಂದಿದ್ದರೆ ಈ ಶಾಸನ ಅವರ ಆಡಳಿತ ಈಗಿನ ತುಮಕೂರು ಜಿಲ್ಲಾ ವ್ಯಾಪ್ತಿವರೆಗೂ ವಿಸ್ತರಿಸಿತ್ತೆಂಬ ವಿಚಾರ ಸೂಚಿಸುತ್ತದೆ. ಇಲ್ಲಿ ಉಲ್ಲೇಖಿತ ಹನುಮಸಾಗರ ತುಮಕೂರು ಜಿಲ್ಲೆಯದೊ ಅಥವಾ ಬೇರೆ ಯಾವುದೋ ಸ್ಪಷ್ಟವಾಗುತ್ತಿಲ್ಲ. ಕರ್ನಾಟಕದಲ್ಲಿ ಒಟ್ಟು ೬ ಇದೇ ಹೆಸರಿನ 'ಹನುಮಸಾಗರ'ಗಳಿದ್ದು, ಅವುಗಳಲ್ಲಿ ಒಂದೂ ಈಗಿನ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಇಲ್ಲದಿರುವುದು

ನಿರ್ದಿಷ್ಟವಾಗಿ ಹೆಸರಿಸಲು ತೊಡಕುಂಟುಮಾಡಿದೆ. ಇದು ಈಗಿನ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲೂಕಿನಲ್ಲಿರುವ ಹನುಮಸಾಗರ ಆಗಿರಬಹುದೇ ಎಂಬುದು ಇನ್ನಷ್ಟು ಪರಿಶೀಲನೆಯಿಂದ ತಿಳಿಯಬೇಕಿದೆ.

ಈ ಶಾಸನದಲ್ಲಿ ಪ್ರಧಾನಿ ಕಳಸಪ್ಪಯ್ಯ ಎಂಬ ವ್ಯಕ್ತಿ ಉಲ್ಲೇಖ ಇರುವುದರಿಂದ ಈತ ವಿಜಯನಗರದ ವೆಂಕಟಪತಿದೇವ ಮಹಾರಾಯನ ಪ್ರಧಾನಿಯಾಗಿದ್ದಿರಬಹುದೆಂಬ ಯೋಚನೆ ಬರುತ್ತದೆ.

ಆಗ ಭೂಮಿ ಅಳತೆ ಮತ್ತು ನಾಣ್ಯಗಳನ್ನು ವರಾಹ ಹೆಸರಿನಿಂದ ಕರೆಯುತ್ತಿದ್ದುದು ಈ ಶಾಸನದಿಂದಲೂ ತಿಳಿಯಬಹುದಾಗಿದೆ.

ತರೀಕೆರೆ ೨೧-೨೪ ತಾಮ್ರ ಶಾಸನಗಳು

ಈ ಎರಡೂ ಶಾಸನಗಳೂ ತರೀಕೆರೆ ಶಾಮಾಜೋಯಿಸರಲ್ಲಿದ್ದವೆಂದು ರೈಸರು ದಾಖಲಿಸಿದ್ದಾರೆ. ಶಾಸನ ೨೧ರ ನಕಲುಪ್ರತಿಯೇ ಶಾಸನ ೨೪ ಆಗಿದೆ. ಶಾಸನ ೨೧ ಶುದ್ಧ ಪ್ರತಿಯಾಗಿದ್ದು, ಶಾಸನ ೨೪ ನಕಲುಪ್ರತಿಯಾಗಿದ್ದು ಇದರಲ್ಲಿ ಬಹಳ ತಪ್ಪುಗಳಿದ್ದು, ಯಾವುದೆ ಕಾರಣಕ್ಕೆ ನಕಲು ಮಾಡಿಟ್ಟುಕೊಂಡಿರಬಹುದು.

ಈ ಶಾಸನವನ್ನು ಮೊದಲು ಕ್ರಿ.ಶ. ೧೬೪೮ರಲ್ಲಿ ಪೆನುಗೊಂಡ ಪಟ್ಟಣದಿಂದ ಆಳುತ್ತಿದ್ದ ವಿಜಯನಗರದ ಅರಸ ವೆಂಕಟಪತಿ ದೇವರ ದಕ್ಷಿಣಭುಜ ದಂಡಾಧೀಶ್ವರರಾದ ಸಂತೇಬೆನ್ನೂರು ಪುವ್ವರಿ ಕೆಂಗಪ್ಪ ನಾಯಕರ ಪುತ್ರರಾದ ಹಿರೇ ಹನುಮಪ್ಪ ನಾಯಕರ ಸಹೋದರರಾದ ಬಾಲಗಿರಿ ನಾಯಕರು ಭಾರದ್ವಾಜ ಗೋತ್ರದ ಕೊನೇರಿ ಭಟ್ಟರಿಗೆ ಅವರ ರಾಜ್ಯಕ್ಕೆ ಸಲ್ಲುವ ಕಾತೂರು ಸೀಮೆಯಲ್ಲಿ ಅತಿಮೊಘ ಹೊಗ್ನಿಭಟ್ಟರ ದೇವರಭಟ್ಟರಿಗೆ ಸಲ್ಲುವ ಉಪಾಧ್ಯಕೆ ಜೋತಿಷ್ಯಕೆ ಸ್ವಾಸ್ತಿಯಿದ್ದ ಅವರ ವಂಶದ ಉಮ್ರುತ ನಷ್ಟವಾಗಿ, ಆ ದಾನ ಪಟ್ಟ ಶಿಥಿಲವಾದ ಸಂಬಂಧ ಯಿಮ್ಮಡಿ ಹನುಮಪ್ಪನಾಯಕರ ಪುತ್ರರಾದ, ನಿಚ್ಚಮದುವಣಿಗ ಹನುಮಪ್ಪ ನಾಯಕರ ಪುತ್ರ ಸರಜಾ ಹನುಮಪ್ಪನಾಯಕರು ಕೊನೇರಿಭಟ್ಟರ ಮಗ ತಿರುಮಲಭಟ್ಟರ ಪುತ್ರ ಜಕ್ಕಾಭಟ್ಟರಿಗೆ ಕ್ರಿ.ಶ. ೧೬೫೪ (ಆರುವರ್ಷಗಳ ನಂತರ) ಕಲ್ಲತ್ತಿ ವೀರಭದ್ರ ದೇವರ ಸನ್ನಿಧಿಯಲ್ಲಿ ಮತ್ತೆ ಅದನ್ನು ಮುಂದುವರೆಸಿಕೊಂಡು ಬರಲು ಒಪ್ಪಿಗೆ ಕೊಟ್ಟ ಜೀರ್ಣೋದ್ಧಾರ ದಾನ ಪತ್ರ ಇದಾಗಿರುತ್ತದೆ.

ಈ ಶಾಸನದಿಂದ ಸಂತೇಬೆನ್ನೂರು ನಾಯಕರು ವಿಜಯನಗರ ಅರಸೊತ್ತಿಗೆಯ 'ದಕ್ಷಿಣ ಭುಜ ದಂಡರಾದ' ಎಂದು ಕರೆಯಲ್ಪಟ್ಟಿರುವುದು, ಅಷ್ಟರಮಟ್ಟಿಗೆ ವಿಜಯನಗರದ ಅರಸರಿಗೂ, ಸಂತೇಬೆನ್ನೂರು ನಾಯಕರಿಗೂ ಇವರ ಮೇಲೆ ವಿಶ್ವಾಸ, ನಂಬಿಕೆ, ಪ್ರಭಾವ ಇರುವುದನ್ನು ತೋರಿಸುವುದಲ್ಲದೆ ಸಂತೇಬೆನ್ನೂರು ನಾಯಕರು ವಿಜಯನಗರದ ದಕ್ಷಿಣಭಾಗದಲ್ಲಿ ಶತ್ರುಗಳನ್ನು ತಡೆಯಲು ಸಮರ್ಥರಾಗಿದ್ದರೆಂದು ತಿಳಿಯಬಹುದು.

ಈ ಶಾಸನ ಸಂತೇಬೆನ್ನೂರು ನಾಯಕರ ವಂಶದ ವಂಶಾವಳಿಯ ಸಂಪೂರ್ಣ ಮಾಹಿತಿ ಒದಗಿಸುತ್ತದೆ.

ಈ ಶಾಸನ ಹಾಗೂ ಈ ಹಿಂದೆ ಪ್ರಸ್ತಾಪಿಸಿದ ಚನ್ನಗಿರಿ - ೬೨ ಶಾಸನ ವರಾಹ ಬಳೆಯಿಂದ ಬಂಧಿಸಲ್ಪಟ್ಟಿದ್ದು, ವಿಜಯನಗರ ಲಾಂಛನವನ್ನೆ ಸಂತೇಬೆನ್ನೂರು ನಾಯಕರು ಮುಂದುವರೆಸಿಕೊಂಡು ಬಂದಿರುವುದನ್ನು ಸೂಚಿಸುತ್ತದೆ. ಹಿಂದೆ ವಿಷ್ಣುವಿನ ದಶಾವತಾರ ಕಾಲದಲ್ಲಿ ಒಂದಾದ ಪವಿತ್ರ ವರಾಹ ಅವತಾರದಿಂದ ಸ್ವಾಮಿ ಪೃಥ್ವಿಯನ್ನು ಮೇಲಕ್ಕೆತ್ತಿದಂತೆ ವಿಜಯನಗರ ಅರಸರು ಹಿಂದಿನ ಅವ್ಯವಸ್ಥೆಯ ಪರಿಸ್ಥಿತಿಯನ್ನು ನಿರ್ಮೂಲಗೊಳಿಸಿ, ವ್ಯವಸ್ಥಿತ ಸರ್ಕಾರ ಸ್ಥಾಪಿಸಿದನ್ನು ಈ ಲಾಂಛನ ತೋರಿಸುತ್ತದೆ. ಇದನ್ನೇ ಚಾಳುಕ್ಯರೂ ಉಪಯೋಗಿಸುತ್ತಿದ್ದು ಅದೇ ಭಾವನೆಯಿಂದ ಸಂತೇಬೆನ್ನೂರು ನಾಯಕರೂ 'ವರಾಹ ಲಾಂಛನ' ಅನುಕರಿಸಿಕೊಂಡು ಬಂದಿರಬೇಕು.


ರಾಮಾರ್ಪಣ ಮಡಿ ಈ ದಾನ ಪತ್ರ ಬರೆದುಕೊಟ್ಟಿರುವುದಲ್ಲಿದೆ. 'ಶ್ರೀರಾಮ' ಎಂಬ ಅಂಕಿತ ಈ ದಾನ ಶಾಸನಗಳಲ್ಲಿ ಉಪಯೋಗಿಸಿರುವುದರಿಂದ ಸಂತೇಬೆನ್ನೂರು ನಾಯಕರ ಮನೆದೈವ ಶ್ರೀರಾಮಚಂದ್ರ ನೆಂದೂ, ಅವರು ತಮ್ಮ ಮೂಲನೆಲೆ ಸಂತೇಬೆನ್ನೂರಲ್ಲಿ ನಿರ್ಮಿಸಿದ್ದು ರಾಮಚಂದ್ರ ದೇವಾಲಯ. ಎಂದು ಸ್ಪಷ್ಟವಾಗುತ್ತದೆ. ಸರ್ಕಾರಿ ಗೆಜೆಟಿಯರ್‌ಗಳು, ವಿಷಯ ಕೋಶಗಳಲ್ಲಿ ನಮೂದಿಸಿರುವಂತೆ ಸಂತೇಬೆನ್ನೂರಲ್ಲಿ ಈ ನಾಯಕರು ನಿರ್ಮಿಸಿದ್ದು ರಂಗನಾಥ ದೇವಾಲಯ ಎಂಬುದು ತಪ್ಪು ಎಂಬುದು ಮೇಲಿನ ಶಾಸನಾಧಾರಗಳಿಂದ ಸ್ಪಷ್ಟವಾಗುತ್ತದೆ.

ಈ ಶಾಸನ ಸಂತೇಬೆನ್ನೂರು ರಾಮಚಂದ್ರ ದೇವರ ಪ್ರೀತಿಗಾಗಿ ಎಂದಲ್ಲದೆ ನಂಮ ಹಿರೇ ಹನುಮಪ್ಪನಾಯಕರಿಗೆ ಪುಣ್ಯಪ್ರಾಪ್ತಿ ಆಗಬೇಕೆಂಬ ಉದ್ದಿಶ್ಯದಿಂದ ರಾಮಾರ್ಪಣ ಮಾಡಿಕೊಟ್ಟಿದ್ದಾಗಿ ಹೇಳುತ್ತಿದ್ದು, ಇಲ್ಲಿ ಒಂದು ವಿಷಯ ಗಮನಿಸಬೇಕಾದ್ದುದು ಇದೆ. ಈ ಶಾಸನ ಬರೆದ ಕಾಲಕ್ಕಾಗಲೀ ಬಿಜಾಪುರದ ರಣದುಲ್ಲಾಖಾನ್ ಸಂತೇಬೆನ್ನೂರಲ್ಲಿ ಈ ನಾಯಕರು ನಿರ್ಮಿಸಿದ ಸುಂದರ ಪುಷ್ಕರಣಿ ದಡದಲ್ಲಿದ್ದ ರಾಮಚಂದ್ರ ದೇವಸ್ಥಾನವನ್ನು ಕೆಡವಿ, ಅಲ್ಲಿ ಮಸೀದಿ ಒಂದನ್ನು ನಿರ್ಮಿಸಿದ್ದನೆಂದು ಕೈಫಿಯತ್ತುಗಳಿಂದ ತಿಳಿದುಬರುತ್ತದೆ. ಆದ್ದಾಗ್ಯೂ ಈ ಶಾಸನದಲ್ಲಿ ಸಂತೇಬೆನ್ನೂರು ರಾಮಚಂದ್ರ ಪ್ರಿತ್ಯಾರ್ಥ ಎಂದು ಉಲ್ಲೇಖಿಸಿರುವುದು ಗಮನಾರ್ಹ.

ಸಂತೇಬೆನ್ನೂರು ನಾಯಕರಿಗೆ ಸರಜಾ ಎಂಬ ಬಿರುದು ಇರುವುದನ್ನು ಈ ಶಾಸನ ತಿಳಿಸುತ್ತದೆ. ಬಿಜಾಪುರದ ದಂಡನಾಯಕ ರಣದುಲ್ಲಾಖಾನ್ ಸಂತೇಬೆನ್ನೂರನ್ನು ಕ್ರಿ.ಶ. ೧೬೩೬ರಲ್ಲಿ ಕೈವಶ ಮಾಡಿಕೊಂಡು ಆಗ ಅಲ್ಲಿ ಆಡಳಿತ ನಡೆಸುತ್ತಿದ್ದ ಹಿರೇ ಕೆಂಗಾ ಹನುಮಪ್ಪ ನಾಯಕನನ್ನು ಕೈಸೆರೆ ಮಾಡಿಕೊಂಡು ಬಿಜಾಪುರಕ್ಕೆ ಕರೆದುಕೊಂಡು ಹೋದನೆಂದು ಈ ವಿಚಾರ ತಿಳಿದ ಆಗ ಬಾಣವರದಲ್ಲಿದ್ದ ಚಿಕ್ಕ ಕೆಂಗಾ ಹನುಮಪ್ಪನಾಯಕ ಬಿಜಾಪುರಕ್ಕೆ

ಹೋಗಿ ಸಮಯ ಕಾದು, ಅಲ್ಲಿನ ಸುಲ್ತಾನ ಏರ್ಪಡಿಸಿದ್ದ ಹುಲಿಯೊಡನೆ ಹೋರಾಡುವ ಪಂದ್ಯದಲ್ಲಿ ಭಾಗವಹಿಸಿ, ಅದನ್ನು ಕೊಂದು ಸುಲ್ತಾನನಿಂದ 'ಸರಜಾ' ಎಂಬ ಬಿರುದು ಪಡೆದನೆಂದೂ ಇತಿಹಾಸದ ದಾಖಲೆಗಳು ತಿಳಿಸುತ್ತವೆ. ಈಚಿನ ಸರ್ಕಾರದ ಕೆಲ ದಾಖಲೆಗಳಲ್ಲಿ 'ಸರಜಾ' ಎಂಬ ಬಿರುದು ಸಂತೇಬೆನ್ನೂರು ನಾಯಕರಿಗೆ ಟಿಪ್ಪು ಕೊಟ್ಟಿದ್ದು ಎಂದು ಉಲ್ಲೇಖಿಸಲಾಗಿದೆ. ಈ ಶಾಸನದ ಕಾಲದಂತೆ ಆ ಸರಜಾ ಬಿರುದು ಬಿಜಾಪುರ ಸುಲ್ತಾನ ಕೊಟ್ಟಿದ್ದೆ ಎಂಬ ಬಗ್ಗೆ ಸಂಶಯವಿಲ್ಲ. ಇದಲ್ಲದೆ ಸಂತೇಬೆನ್ನೂರು ನಾಯಕರಿಗೆ ಯಿಂಮಡಿ, ನಿಚ್ಚಮದುವಣಿಗ, ಕೆಂಗಾ ಎಂಬ ಬಿರುದುಗಳು ಇರುವುದು ತಿಳಿದುಬರುತ್ತದೆ.

ತಾಳೀಕೋಟೆ ಯುದ್ಧಾ ನಂತರ ಮುಸ್ಲಿಂರು ರಾಜಧಾನಿ ಹಂಪೆಯನ್ನು ಸಂಪೂರ್ಣ ಹಾಳುಗೆಡವಿ, ಲೂಟಿ ಮಾಡಿದ ಕಾರಣ ವಿಜಯನಗರ ಸಾಮ್ರಾಜ್ಯವೇ ಅಸ್ತಂಗತವಾಯಿತೆಂದು ಹೇಳಲ್ಪಟ್ಟರೂ, ಅನಂತರವೂ ೮೦ ವರ್ಷಗಳ ಕಾಲ ಈ ವಿಜಯನಗರ ಸಾಮ್ರಾಜ್ಯದ ಪರಂಪರೆ ಮುಂದುವರೆಸಿಕೊಂಡು ಬಂದ ಅರವೀಡು ಮನೆತನ ಚಂದ್ರಗಿರಿ, ವೆಲ್ಲೂರು, ಪೆನಗೊಂಡ, ಆನೆಗೊಂದಿಗಳಿಂದ ರಾಜ್ಯಾಡಳಿತ ಮುಂದುವರೆಸಿ, ಮುಸ್ಲಿಂರ ಪ್ರಬಲ ದಾಳಿ ಎದುರಿಸಿ, ಸಾಮ್ರಾಜ್ಯ ಮುನ್ನೆಡಿಸಿದರು. ಇವರ ಈ ಕಾರ್ಯದಲ್ಲಿ ಅವರ ಸಾಮಾಂತರೇ ಆಗಿದ್ದ ಸಂತೇಬೆನ್ನೂರು ನಾಯಕರು ವಿಜಯನಗರದ ಅರಸರಿಗೆ 'ದಕ್ಷಿಣ ಭುಜ'ಬಲರಾಗಿ ನಿಂತು ಸಾಮ್ರಾಜ್ಯದ ಉಳಿವಿಗಾಗಿ ದುಡಿದು ವಿಜಯನಗರ ಕೀರ್ತಿ ಪತಾಕೆ ಇನ್ನಷ್ಟು ಕಾಲ



ವಿಜಯನಗರದ ವಾಸ್ತುಶಿಲ್ಪವನ್ನು ಅನುಸರಿಸಿ ಸಂತೇಬೆನ್ನೂರು ನಾಯಕರು ನಿರ್ಮಿಸಿದ ಸಂತೇಬೆನ್ನೂರಿನ ಐತಿಹಾಸಿಕ ಪುಷ್ಕರಣಿ

ಹಾರಾಡಲು ಸಹಕಾರಿ ಆಗಿದ್ದಾರೆ. ಹೀಗೆ ವಿಜಯನಗರ ಅರಸರ, ಸಂತೇಬೆನ್ನೂರು ನಾಯಕರ ಸಂಬಂಧ ಇತಿಹಾಸ ಪುಟದಲ್ಲಿ ಬೆಸೆದಿರುವುದು ಕರ್ನಾಟಕ ಚರಿತ್ರೆಯಲ್ಲಿ ದಾಖಲಾಗಿ ಉಳಿದಿದೆ.

ಆಧಾರ ಗ್ರಂಥಗಳು

೧. ಎಪಿಗ್ರಾಫಿಯಾ ಕರ್ನಾಟಕ, ಸಂ. ೬, ೭, ೧೨ (ರೈಸ್ ಆವೃತ್ತಿ)

೨. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ

೩. ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ

೪. ಮೈಸೂರು ರಾಜ್ಯ ಗೆಜಟಿಯರ್ ಗಳು (ರೈಸ್ ಮತ್ತು ಹಯವದನರಾವ್)

೫. ಕರ್ನಾಟಕ ರಾಜ್ಯ ಗೆಜಟಿಯರ್ ಗಳು, ಸಂ. ಡಾ. ಸೂರ್ಯನಾಥ ಕಾಮತ್

೬. ಮಲೆ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ ವವಿದ್ಯಾಲಯ

೭. ತರೀಕೆರೆಯ ಪಾಳೆಯಗಾರರು, ಪಿ.ಅಬ್ದುಲ್ ಸತ್ತಾರ್

೮. ಕೆಳದಿ ನೃಪ ವಿಜಯಂ, ಸಂ. ಕೆಳದಿ ಗುಂಡಾ ಜೋಯಿಸ್

೯. ಕರ್ನಾಟಕ ಇತಿಹಾಸ ದರ್ಶನ, ಎಂ.ವಿ.ಕೃಷ್ಣರಾವ್

೧೦. A Journey from Madras through countries of Mysore. Francis Buchnan

೧೧. ಇತಿಹಾಸ ದರ್ಶನ ಸಂಪುಟಗಳು, ಕರ್ನಾಟಕ ಇತಿಹಾಸ ಅಕಾದೆಮಿ

೧೨. An Indian Ephemeries, L.D.Swamy Kanna Pillai

❖ ❖

೨೧

ಹಂಪಿ ಶ್ರೀ ವಿರೂಪಾಕ್ಷ ದೇವಾಲಯ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ

ಚಂದ್ರಶೇಖರ ವಿ. ಡಾವಣಗೇರಿ

"ಹಂಪೆ' ಎಂದಾಕ್ಷಣ ತಟ್ಟನೆ ಹೊರಬರುವ ಮೊದಲ ಮಾತು "ವಿರೂಪಾಕ್ಷ", 'ಹಂಪೆಯ ವಿರೂಪಾಕ್ಷ' ನಂತರದಲ್ಲಿ ಬರುವವು ಕಲ್ಲಿನ ತೇರು, ವಿಜಯ ವಿಠಲ ಮಂದಿರ, ವಿರೂಪಾಕ್ಷ ವಿದ್ಯಾರಣ್ಯ ಮಠ ಹೀಗೆ ವಿಜಯನಗರ ಕಾಲದ ದೇವಾಲಯ, ಅರಮನೆ, ಗುರುಮನೆ ಇತ್ಯಾದಿಗಳ ವಿಚಾರ, ಶ್ರೀ ವಿರೂಪಾಕ್ಷ ದೇವಾಲಯವು ಹಂಪೆಯಲ್ಲಿರುವ ದೇವಾಲಯಗಳಲ್ಲಿ ಅತ್ಯಂತ ಪ್ರಾಚೀನವಾದುದು. ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಅರಸರುಗಳಿಗೆ "ವಿರೂಪಾಕ್ಷ" ಆರಾಧ್ಯದೈವವಾಗಿದ್ದಾನೆ. "ವಿರೂಪಾಕ್ಷ" ಹೆಸರಿನಿಂದ ಹಕ್ಕ-ಬುಕ್ಕರ ಕಾಲದಲ್ಲಿ ಆಡಳಿತ ನಡೆಯುತ್ತಿದ್ದಿತೆಂಬ ಅಂಶವನ್ನು ವಿಜಯನಗರದ ಅರಸರ ತಾಮ್ರ ಶಾಸನಗಳಿಂದ ತಿಳಿಯುತ್ತೇವೆ. ವಿಜಯನಗರದ ಅರಸರ ಆಳ್ವಿಕೆಯ ಪೂರ್ವದಲ್ಲಿಯೇ ಈ ದೇವಾಲಯಕ್ಕೆ ರಾಜ-ಮಹಾರಾಜರುಗಳು ದತ್ತಿ ದಾನವನ್ನು ನೀಡಿರುವುದು ದೇವಾಲಯದ ಆವರಣದಲ್ಲಿರುವ ಹಾಗೂ ಇತರೆ ಕಡೆಯಲ್ಲಿ ಲಭ್ಯವಾಗಿರುವ ಶಾಸನಗಳಿಂದ ತಿಳಿದುಬರುತ್ತದೆ. ಮೇಲಿನ ಶಾಸನಗಳ ವಿಚಾರ ಗಮನಿಸಿದಾಗ ಶ್ರೀ ವಿರೂಪಾಕ್ಷ ದೇವಾಲಯವು ಏಕಕಾಲದಲ್ಲಿ ನಿರ್ಮಿತವಾದುದಲ್ಲ. ಕಾಲಕಾಲಕ್ಕೆ ನಿರ್ಮಿತವಾಗಿದ್ದು, ಹಳೆಯದರ ಜೀರ್ಣೋದ್ಧಾರ, ಹೊಸದರ ಸೇರ್ಪಡೆಯಾಗಿದೆ ಎಂಬುದನ್ನು ತಿಳಿಯಬಹುದಾಗಿರುತ್ತದೆ.

ವಿರೂಪಾಕ್ಷನ ಪ್ರಾಚೀನತೆಯ ಬಗ್ಗೆ ಅರಿಯ ಹೊರಟರೆ ಮಾನವ ಜೀವಿತಾರಂಭದ ದೇವರ ಕಲ್ಪನೆಯೊಂದಿಗೆ ಪ್ರಾರಂಭಿಸಬೇಕಾಗುತ್ತದೆ. ಪೌರಾಣಿಕ ಹಿನ್ನೆಲೆಯು ಹಾಗೂ

ಇತ್ತೀಚಿಗೆ ಹಂಪೆಯಲ್ಲಿ ದೊರೆತಿರುವ ಪುರಾತತ್ವ ಅವಶೇಷಗಳು ಹಾಗೂ (ಬ್ರಹ್ಮಿ) ಬ್ರಾಹ್ಮಿಲಿಪಿಯಲ್ಲಿ ಬರವಣಿಗೆಯು ಈ ಸ್ಥಳದ ಜನಜೀವನ ವಾಸ್ತವ್ಯದ ಬಗ್ಗೆ ಕ್ರಿ.ಶ. ೧-೨ನೇ ಶತಮಾನಕ್ಕೆ ಕೊಂಡೊಯ್ಯುತ್ತದೆ.

ಶ್ರೀ ವಿರೂಪಾಕ್ಷ ದೇವಸ್ಥಾನದ ವಾಯುವ್ಯ ದಿಕ್ಕಿಗಿರುವ ತುಂಗಭದ್ರಾ ನದಿಯ ದಂಡೆಯ ಮೇಲೆ ಹಳೆಯ ಸ್ನಾನಘಟ್ಟದ ಹತ್ತಿರವಿರುವ ಬಂಡೆ ಶಾಸನದಲ್ಲಿ "ವಿರೂಪಾಕ್ಷ ದೇವರ ಪಾದಗಳನ್ನು ಪೂಜೆ ಮಾಡದವರಿಗೆ ಶಾಪವನ್ನು ವಿಧಿಸಿರುವ" ವಿಷಯದ ಉಲ್ಲೇಖವಿದೆ. ಇಲ್ಲಿ "ಪಾದ" ಎಂಬುವ ಶಬ್ದವನ್ನು "ಗುಡಿ" ಎಂದು ಬಳಕೆಯಲ್ಲಿರುವುದನ್ನು ಕಾಣುತ್ತೇವೆ. ಮಾತಂಗ ಪರ್ವತದ ಮೇಲೆ ಶ್ರೀ ವೀರಭದ್ರ ದೇವಸ್ಥಾನದ ದಕ್ಷಿಣಕ್ಕೆ ಬಂಡೆಯ ಮೇಲಿರುವ ಶಾಸನದಲ್ಲಿ "ವಿರೂಪಾಕ್ಷ ದೇವರ ಶಿಖರಕ್ಕೆ ನಮಸ್ಕಾರ ಮಾಡಿ ಕೃತಾರ್ಥನಾದೆ." ಇನ್ನೊಂದು ಅಲ್ಲಿಯ ಶಾಸನದಲ್ಲಿ ".....ವಿರೂಪಾಕ್ಷ ದೇವರ ಕಳಸ ನೋಡಿ ನಮಸ್ಕಾರ" ಮಾಡಿದ ಉಲ್ಲೇಖ, ವಿರೂಪಾಕ್ಷ ದೇವರ ದರ್ಶನ ಭಾಗ್ಯದ ಮಾಹಿತಿ ತಿಳಿಯುವಲ್ಲಿ ಸಹಕಾರಿಯಾಗುತ್ತದೆ.

ಈ ರೀತಿ ಮಾತಂಗ, ಮಾಲ್ಯವಂತ, ಹೇಮಕೂಟ ಪರ್ವತದ ಮೇಲಿನಿಂದ ಶ್ರೀ ವಿರೂಪಾಕ್ಷಸ್ವಾಮಿ ದೇವಾಲಯದ ಗೋಪುರ ದರ್ಶನ ಮಾಡಿಕೊಂಡರೆ "ಪುನರ್ಜನ್ಮವಿಲ್ಲ ಅಂತಿಮವಾಗಿ ಮುಕ್ತಿ ದೊರೆಯುತ್ತದೆ" ಎಂಬ ಪೌರಾಣಿಕ ಹಿನ್ನೆಲೆಯು ವಿರೂಪಾಕ್ಷ ದೇವರ ಮಾಹಿತಿಯನ್ನು ತಿಳಿಸುತ್ತದೆ. ಶ್ರೀ ವಿರೂಪಾಕ್ಷ ದೇವಾಲಯದಲ್ಲಿಯ ಪೌರಾಣಿಕ ಹಿನ್ನೆಲೆ ಹಾಗೂ ರಾಜ-ಮಹಾರಾಜರುಗಳ ಕಾಲದಲ್ಲಿಯು ಪ್ರೋತ್ಸಾಹಿಸಿದ ಐತಿಹಾಸಿಕ ಮಾಹಿತಿ ವಿಷಯಗಳನ್ನು ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯನ್ನೊಳಗೊಂಡು ಇಲ್ಲಿ ವಿಜೃಂಭಣೆಯಿಂದ ನಡೆಯುತ್ತಿರುವ ಈ ಕ್ಷೇತ್ರದ ಉತ್ಸವಾದಿಗಳಲ್ಲಿ ಗತವೈಭವದ ಸ್ಮರಣೆಗಳನ್ನು, ದೇವಸ್ಥಾನದಲ್ಲಿ ನಡೆಯುತ್ತಿರುವ ಧಾರ್ಮಿಕ ಆಚರಣೆಯ ರೀತಿ-ರಿವಾಜುಗಳ ಹಿನ್ನೆಲೆಯಲ್ಲಿ ಪರಿಶೀಲಿಸುವುದೇ ಈ ಪ್ರಬಂಧದ ಉದ್ದೇಶ.

ಪೌರಾಣಿಕ ಹಿನ್ನೆಲೆ

"ಹಂಪೆ" ಪುರಾಣ ಕಾಲದಲ್ಲಿ "ಪಂಪಾಕ್ಷೇತ್ರ"ವೆಂದು ಪ್ರಸಿದ್ಧಿ ಪಡೆದಿದೆ. "ಪಂಪಾ" ಎನ್ನುವುದು ತುಂಗಭದ್ರೆಯ ಇನ್ನೊಂದು ಹೆಸರು. ಈ "ಪಂಪಾ" (ಪಂ-ಪ-ಆ) "ಪಂ" ಎಂದರೆ ಮೋಕ್ಷವನ್ನು ಕೊಡುವವಳು, "ಪ" ಎಂದರೆ ಆಶ್ರಿತರನ್ನು ಕಾಪಾಡುವವಳೆಂದು, "ಆ" ಎಂದರೆ ಸಂಪದ್ಭರಿತಳೆಂದು ಶಾಬ್ದಿಕ ಅರ್ಥದಲ್ಲಿ ವಿಶ್ಲೇಷಣೆ ಮಾಡಿರುವುದನ್ನು ನಾವು ಕಾಣುತ್ತೇವೆ. ಆದಿಮಾನವ ಜೀವನದ ಚಲನೆಗೆ ಸ್ಥಿರ ರೂಪ ಬಂದಿರುವುದು ನದೀ ತೀರದಲ್ಲಿ ಎಂಬುದನ್ನು ನದೀ ತೀರದ ನಾಗರೀಕತೆಯಿಂದ ಅರಿಯುತ್ತೇವೆ. ಮಾನವನ ಸುಖಃ ಸಂತೋಷ ಲಭ್ಯವಾಗಿರುವುದೇ ನದೀ ತೀರದಲ್ಲಿ ವಾಸ್ತವ್ಯ ಮಾಡಲು ತೊಡಗಿದಾಗಿನಿಂದ ಅಲೆಮಾರಿತನದ ಜೀವನಕ್ಕೆ ಕೊನೆಕಂಡಿರುವುದು ಈ ನದಿ ತೀರದಲ್ಲಿಯೇ ಎಂದಾಗ

ನದೀ ಜೀವನಕ್ಕೆ ಸೃಷ್ಟಿಯ ಮೂಲಕ ಚೇತನವನ್ನು ನೀಡಿರುತ್ತದೆ. ಜೀವ-ಭಾವ-ಅಭಿವ್ಯಕ್ತಿಗೆ ಚೈತನ್ಯದಾಯಕವಾಗಿರುವುದು.

ಭೌಗೋಳಿಕವಾಗಿ ಸುತ್ತಲು ಪರ್ವತ ಶ್ರೇಣಿ, ದಟ್ಟ ಅರಣ್ಯಗಳ ಮಧ್ಯ ಮೈದುಂಬಿ ಹರೆಯುವ ಪಂಪಾ ಕ್ಷೇತ್ರವು ಋಷಿ-ಮುನಿಗಳಿಗೆ ತಪೋನಿರತರಾಗಲು ಯೋಗ್ಯವಾದ ಸ್ಥಳ ಈ ಕ್ಷೇತ್ರವಾಗಿದ್ದರಿಂದ ಋಷಿ-ಮುನಿಗಳಿಗೆ ಆಕರ್ಷಣೀಯ ಧಾಮವಾಗಿ ಪಂಪಾ ಆಶ್ರಿತವಾಗಿದ್ದಾಳೆ. ಭಾರತೀಯ ಪೌರಾಣಿಕ ಹಿನ್ನೆಲೆಯಲ್ಲಿ ಉತ್ತರದ ಹಿಮಪರ್ವತಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಪ್ರಶಾಂತ ವಾತಾವರಣ, ಜೀವಿಸಲು ಅಗತ್ಯವಾಗಿರುವ ಸೌಲಭ್ಯಗಳ ಲಭ್ಯತೆ, ಋಷಿ ಮುನಿಗಳಿಗೆ ತಪೋನಿರತರಾಗಿರಲು ಅಲ್ಲದೆ "ಶಿವ" ಮತ್ತು ದೇವಾನುದೇವತೆಗಳ ವಾಸಸ್ಥಾನದ, ಕೈಲಾಸದ ಕಲ್ಪನೆಯನ್ನು ಹಿಮಾಲಯ ಪರ್ವತ ನೀಡಲಾಗಿರುತ್ತದೆ. ಇಂಥ ಪವಿತ್ರವಾದ ತಪೋನುಸ್ಠಾನದಲ್ಲಿದ್ದ ಸಪ್ತ ಋಷಿಗಳು ದಕ್ಷಿಣಕ್ಕೆ ಹೊರಟು ದೀರ್ಘ ಪ್ರಯಾಣದ ನಂತರ ಪಂಪಾಕ್ಷೇತ್ರಕ್ಕೆ ಬಂದು ಈ ಕ್ಷೇತ್ರ ಆದಿ ದೈವನಾದ ವಿರೂಪಾಕ್ಷನ ದರ್ಶನ ಭಾಗ್ಯದಿಂದ

"ವಿರೂಪಾಕ್ಷಸ್ತ ವಿಶ್ವೇಶ್ವಃ ತುಂಗಭದ್ರಾ ಜಾಹ್ನವಿಃ
ಪಂಪಾ ಕಾಶೀ ಸಮಾದಿನ್ಯಾ ಭುಕ್ತಿ, ಮುಕ್ತಿ ಪ್ರದಾಯಿನೀಃ

ಎಂದು ಉದ್ಗರಿಸಿರುವುದನ್ನು ಪುರಾಣದಲ್ಲಿ ಕಾಣುತ್ತೇವೆ.

ಈ ಸಪ್ತ ಋಷಿಗಳು ವೇದಾಂತಗಳ ಗಹನ ತತ್ವಗಳ ಸರಳ ಭಾಷೆಯ ಅಭಿವ್ಯಕ್ತಿಯು "ಪುರಾಣ" ಎಂಬ ಧಾರ್ಮಿಕ ಪರಂಪರೆಯ ನೆಲೆಗೆ ನಾಂದಿಯಾಯಿತು. ಈ ವೈದಿಕ ಪುರಾಣಗಳು ವೇದಾಗಮನಗಳಷ್ಟೇ ಮಾನ್ಯತೆಯನ್ನು ಹೊಂದಿದವುಗಳಾಗಿರುತ್ತವೆ. ವೈದಿಕ ಪುರಾಣಗಳು ಕರ್ತೃ ವ್ಯಾಸರೆಂಬುದಾಗಿದೆ. ಇಂಥ ಪುರಾಣಗಳು ಒಟ್ಟು ಹದಿನೆಂಟು ಎಂದು ಗುರುತಿಸಲಾಗಿರುತ್ತದೆ. ಈ ಪುರಾಣಗಳು "ಬ್ರಹ್ಮ, ವಿಷ್ಣು, ಶಿವ ಹಾಗೂ ವಿಷ್ಣುವಿನ ದಶಾವತಾರಗಳು ಅಲ್ಲದೆ ಅಗ್ನಿ, ವಾಯು, ಸೂರ್ಯ..... ಮುಂತಾದವುಗಳು."

"ಉಚ್ಚತಮ ಆಧ್ಯಾತ್ಮಿಕ ಹಾಗೂ ದಾರ್ಶನಿಕ ಸತ್ಯಗಳನ್ನು ಕಥೆ, ವ್ಯಾಖ್ಯಾನ, ಸಂಕೇತ, ಅಡ್ಡಕತೆ, ಪವಾಡ, ದೃಷ್ಟಾಂತಗಳ ಮೂಲಕ ಜನ ಸಾಮಾನ್ಯರಿಗೆ ತಿಳಿಯಪಡಿಸುವುದೇ ಈ ಪುರಾಣಗಳ ಗುರಿಯಾಗಿದೆ ಎಂದು ಅರವಿಂದರು ಅಭಿಪ್ರಾಯ ಪಡುತ್ತಾರೆ. ಕಳೆದುಹೋದ ಘಟನೆಗಳನ್ನೊಳಗೊಂಡಿರುವವು ಪುರಾಣಗಳೆಂದು" ಮತ್ಸ್ಯ ಪುರಾಣವು ಹೇಳುತ್ತದೆ. "ಪುರಾಭವಂ ಪುರಾಣಂ" ಎಂದು ಪಾಣಿನಿ ತಿಳಿಯಪಡಿಸುತ್ತಾನೆ. ಇಂಥಹ ಪುರಾಣಗಳು ಮುಂದೆ ಭಾರತೀಯ ಸಾಹಿತ್ಯದಲ್ಲಿ ಪ್ರಮುಖ ಸ್ಥಾನ ಪಡೆಯುತ್ತವೆ. ಹಾಗೆ ಜೈನ, ಬೌದ್ಧ, ವೀರಶೈವ ಪುರಾಣಗಳು ರಚನೆಯಾಗಿ ಪುರಾಣ ಸಾಹಿತ್ಯ ಸಂಪದ್ಭರಿತವಾಗುತ್ತದೆ.

ಪುರಾಣಗಳ ವಾಸ್ತು, ಸ್ಥಳ, ಶೈಲಿ, ತಂತ್ರ, ರೂಪ ರೇಷೆಗಳು ಬೇರೆ ಬೇರೆಯಾದರೂ ಎಲ್ಲ ಧಾರ್ಮಿಕ ಪುರಾಣಗಳ ಅಂತಃಸತ್ವ ಹಾಗೂ ತತ್ವ ಒಂದೇ ಆಗಿರುತ್ತದೆ. ಅದು

ಭಾರತೀಯ ಮಹೋನ್ನತಿ ಸಂಸ್ಕೃತಿಯ ನೆಲೆ ಮತ್ತು ಹಿನ್ನೆಲೆಯ ತತ್ತ್ವವಾಗಿರುತ್ತದೆ. ಇವುಗಳಲ್ಲಿ ಧಾರ್ಮಿಕ ಸಂಪ್ರದಾಯ, ಸಂಸ್ಕೃತಿ ಪರಂಪರೆಯ ಜೀವನ ಮೌಲ್ಯಗಳನ್ನು ಕಾಣಬಹುದು. ಪಂಪಾಕ್ಷೇತ್ರದ ಹಿನ್ನೆಲೆಯನ್ನು ಹರಿಹರನ ಗಿರಿಜಾ ಕಲ್ಯಾಣ, ಕುಮಾರ ಲಕ್ಕಣ್ಣ ದಂಡೇಶನ "ಶಿವತತ್ತ್ವ ಚಿಂತಾಮಣಿ"..... ಇತ್ಯಾದಿ ಪುರಾಣಗಳು ಪಂಪಾ ಕ್ಷೇತ್ರದ ಸ್ಥಳಪುರಾಣ ಅರಿಯಲು ಸಹಕಾರಿಯಾಗಿವೆ.

ಹೀಗೆ ವೈದೀಕ ಪುರಾಣ ಹರಿಹರ, ರಾಘವಾಂಕ, ಕುಮಾರ ಪದ್ಮರಸ, ಲಕ್ಕಣ್ಣ, ದಂಡೇಶ..... ಮುಂತಾದವರ ಕೃತಿಗಳಲ್ಲಿ ಈ ಕ್ಷೇತ್ರದ ವರ್ಣನೆಯನ್ನು ಕಾಣುತ್ತೇವೆ.

ಶ್ರೀ ವಿರೂಪಾಕ್ಷನು : ಮಾತಂಗೇಶ್ವರ, ವಾಣಭದ್ರೇಶ್ವರ, ಜಂಬುನಾಥೇಶ್ವರ, ವೀರಭದ್ರೇಶ್ವರ, ಮಾಲ್ಯವಂತೇಶ್ವರ ಎಂಬ ಪಂಚ ಮುಖಗಳಿಂದ ವಿರಾಜಿಸುತ್ತಾನೆ. ಶಿವನ ಹಿಂದೆ ಬರುವ ನಂದಿ ಈ ಕ್ಷೇತ್ರದಲ್ಲಿ ಸವ್ಯ ವೃಷಭ, ಮಹಾಕಾಯ ವೃಷಭ, ಮಹಾಶಯ ವೃಷಭ, ಮಹಾಶೃಂಗ ವೃಷಭ ಎಂಬ ನಾಲ್ಕು ರೂಪಗಳಿಂದ ಈ ಕ್ಷೇತ್ರದಲ್ಲಿ ನೆಲೆಯಾಗಿರುವನೆಂಬುದು ಪುರಾಣ ಹಿನ್ನೆಲೆಯಾಗಿದೆ.

ಈ ಪಂಪಾ ಕ್ಷೇತ್ರದಲ್ಲಿ ವಿರೂಪಾಕ್ಷನು ನೆಲೆಯಾಗಿ ನಿಂತು ಮುನ್ನೂರು ಕೃತ ಯುಗಗಳು ಕಳೆದವೆಂಬ ಅಂಶವನ್ನು ಸ್ಕಂದ ಪುರಾಣದ ಪಂಪಾ ಮಹಾತ್ಮೆಯಲ್ಲಿ ಉಲ್ಲೇಖಿಸಲಾಗಿದೆ. ತ್ರೇತಾಯುಗದಲ್ಲಿ "ಕಿಷ್ಕಿಂದ ಪಟ್ಟಣ" ಎಂಬ ಹೆಸರಿನಿಂದ ಈ ಕ್ಷೇತ್ರ ಪ್ರಸಿದ್ಧಿ ಹೊಂದಿರುವುದನ್ನು ಶ್ರೀ ವಾಲ್ಮೀಕಿ ವಿರಚಿತ ರಾಮಾಯಣದಲ್ಲಿ "ಕಿಷ್ಕಿಂದಾ ಖಂಡದಲ್ಲಿ" ವರ್ಣನೆಯನ್ನು ಕಾಣುತ್ತೇವೆ. ಶ್ರೀ ರಾಮಚಂದ್ರನ ಪತ್ನಿಯಾನ್ವೇಷಣೆಗೆ ವಾಲಿಯ ವಧೆ, ಸುಗ್ರೀವನ ಸಖ್ಯೆ ಚಾತುರ್ಮಾಸದ ಆಚರಣೆಯ ಬಗ್ಗೆ ವಿವರಗಳಿವೆ.

ದ್ವಾಪರ ಯುಗದಲ್ಲಿ ಅನೇಕ ಋಷಿ, ಮುನಿ, ಯಕ್ಷ, ಕಿನ್ನರರು, ಗಂಧರ್ವ, ಸಪ್ತ ಮಾತ್ರಿಕೆಯರು ತಪಸ್ಸು ಆಚರಿಸಿದ ಪಂಪಾಕ್ಷೇತ್ರದಲ್ಲಿ ಪಾಂಡವರು ತಮ್ಮ ಅಜ್ಞಾತವಾಸದಲ್ಲಿ "ದಂಡಕಾರಣ್ಯ"ವಾಗಿದ್ದ ಈ ಕ್ಷೇತ್ರದಲ್ಲಿ ಕಳೆದರೆಂಬ ಪ್ರತೀತಿಯನ್ನು ಕೇಳುತ್ತೇವೆ. ಶ್ರೀ ಪಂಪಾ ವಿರೂಪಾಕ್ಷ-ಭುವನೇಶ್ವರಿ ದೇವತೆಗಳನ್ನು ಆರಾಧಿಸಿದ ಬಗ್ಗೆ ಕೇಳುತ್ತೇವೆ. ಕಲಿಯುಗದಲ್ಲಿ ಆಳರಸರ ಹಾಗೂ ವಿದ್ಯಾರಣ್ಯರ ಪ್ರೇರಣೆಯಿಂದ ಪ್ರತಿಷ್ಠಾಪಿತವಾದ ವಿಜಯನಗರ ಅರಸರುಗಳ ಆರಾಧ್ಯದೈವನಾದ ಶ್ರೀ ವಿರೂಪಾಕ್ಷನ ಕೃಪಾಶೀರ್ವಾದ ಹಾಗೂ ದೈನಂದಿನ ಪೂಜೆ, ಉತ್ಸವ, ದೇವಾಲಯದ ಜೀರ್ಣೋದ್ಧಾರ, ಬೆಳವಣಿಗೆ, ಪ್ರತಿಷ್ಠಾಪನ ಕಾರ್ಯಗಳು ನಡೆದಿವೆ ಎಂಬುದನ್ನು ಶಾಸನಗಳ ಆಧಾರದಿಂದ ತಿಳಿಯುತ್ತೇವೆ.

ಒಟ್ಟಾರೆ ಪುರಾಣಗಳ ಹಿನ್ನೆಲೆಯಾಗಿ ಈ ಪಂಪಾಕ್ಷೇತ್ರದ ಆರಾಧ್ಯ ದೈವನಾದ ವಿರೂಪಾಕ್ಷನನ್ನು ವರಿಸಲು ಬ್ರಹ್ಮನ ಮಾನಸ ಪುತ್ರಿಯಾದ ಪಂಪಾ (ಪಾರ್ವತಿ) ಘೋರವಾದ ತಪಸ್ಸು ಆಚರಿಸಿ ಶಿವನನ್ನು ಒಲಿಸಿಕೊಂಡು ಕಲ್ಯಾಣೋತ್ಸವ ನಡೆದ ಸ್ಥಳ ಇದಾಗಿದೆ. ದೇವಾನು ದೇವತೆಗಳು, ಸಪ್ತ ಋಷಿಗಳು, ಸಪ್ತ ಮಾತ್ರಿಕೆಯರು, ಅಷ್ಟ ದಿಕ್‌ಪಾಲಕರು ಕ್ಷೇತ್ರ ಪಾಲಕರು..... ಇತ್ಯಾದಿ ಪುರಾಣ ಪುರುಷರ ತಾಣ ಇದಾಗಿದೆ. ಇನ್ನೊಂದು ಪ್ರಚಲಿತ

ಪುರಾಣ ಹಿನ್ನೆಲೆಯಾಗಿ ಮಾತಂಗ ಋಷಿಯು ಶಿವನನ್ನು ಕುರಿತು ಉಗ್ರ ತಪಸ್ಸು ಆಚರಿಸಿ ಶಿವನನ್ನು ಸಾಕ್ಷಾತ್ಕರಿಸಿಕೊಂಡು ಒಬ್ಬ ಮಗನನ್ನು ದಯಪಾಲಿಸಲು ಕೋರಿದಾಗ ಶಿವನು ಮೂಡನಾದ ಮಗನೊಬ್ಬನು ಹುಟ್ಟಲೆಂದು ಆಶೀರ್ವಧಿಸಲು ಅದಕ್ಕೆ ಒಪ್ಪದೆ ಪಾರ್ವತಿಯ ಅಂಶವಿರುವ ಸುಂದರಳಾದ ಮಗಳೊಬ್ಬಳನ್ನು ಕೇಳಿ ಆಕೆಗೆ ನೀನೇ ವರನಾಗಬೇಕೆಂದು ಭಿನ್ನವಿಸಲು ಶಿವನು ಅದಕ್ಕೆ ಒಪ್ಪಿ ಮಾತಂಗ ಋಷಿಯ ಕೋರಿಕೆಯಲ್ಲಿ ಈ ಕ್ಷೇತ್ರದಲ್ಲಿ ಕನ್ನೇಶ್ವರನಾಗಿ ಅವತರಿಸಿ ಪಾರ್ವತಿಯನ್ನು ವರಿಸುತ್ತಾರೆಂಬ ಐತಿಹ್ಯವಿದೆ.

ಪುರಾಣದಲ್ಲಿ ಉಲ್ಲೇಖಿಸಿದಂತೆ ಮಾತಂಗ, ಮಾಲ್ಯವಂತ, ಋಷ್ಯಮೂಕ, ಕಿಷ್ಕಿಂದ, ಅಂಜನಾದ್ರಿ, ಹೇಮಕೂಟ, ವಿಪ್ರಕೂಟ, ಗಂಧರ್ವಗಿರಿ, ಜಂಜುನಾಥಗಿರಿ, ವಾಣಭದ್ರೇಶ್ವರ ಪರ್ವತ, ಸೋಮಪರ್ವತ ಮುಂತಾದ ಪರ್ವತಗಳು, ಮನ್ಮಥ ತೀರ್ಥ, ಲೋಕಪಾವನ ತೀರ್ಥ (ಮಲಯಾಳ ಬ್ರಹ್ಮರ ವಾಸಸ್ಥಾನ) ಚಕ್ರತೀರ್ಥ, ಪಂಪಾತೀರ್ಥ..... ಮುಂತಾದ ತೀರ್ಥಗಳು ಪುರಾಣದಲ್ಲಿ ಉಲ್ಲೇಖಿತವಾದ ಪವಿತ್ರ ಸ್ಥಳಗಳು. ಪಂಪಾಬಿಕೆಯ ತಪ: ಪ್ರಭಾವಕ್ಕೆ ಮೆಚ್ಚಿ ಪರಮಶಿವನು ಶ್ರೀ ವಿರೂಪಾಕ್ಷ ನಾಮದಿಂದ ಅವಿರ್ಭವಿಸಿ ಪಂಪಾಂಬಿಕೆ (ಪಾರ್ವತಿ) ಯೊಂದಿಗೆ ಕಲ್ಯಾಣೋತ್ಸವ ನಡೆದು ಪತ್ನಿ ಸಮೇತನಾಗಿ ಶಿವಗಣ, ವಿಷ್ಣುಗಣ, ಬ್ರಹ್ಮಗಣ ದೇವತಾ ಸಮೂಹದೊಂದಿಗೆ ಈ ಕ್ಷೇತ್ರದಲ್ಲಿ ನೆಲೆಯಾಗಿರುವುದರಿಂದ, ಈ ಪಂಪಾ ಕ್ಷೇತ್ರಕ್ಕೆ ಧಾರ್ಮಿಕವಾಗಿ ಅತ್ಯಂತ ಮಹತ್ವ ಬಂದಿದೆ. "ಶಿವ ಪಾರ್ವತಿಯರ" ಕಲ್ಯಾಣೋತ್ಸವದ ವಿವರಗಳನ್ನು ಆನೆಗೊಂದಿಯಲ್ಲಿ ದೊರೆತ ತಾಮ್ರ ಪತ್ರ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಪರಿವಾರ ದೇವರುಗಳು : (ಆವರಣದ ದೇವರುಗಳು)

ಶ್ರೀ ವಿರೂಪಾಕ್ಷೇಶ್ವರ ಸ್ವಾಮಿ ನೆಲವೀಡಾದ ಪಂಪಾಕ್ಷೇತ್ರ ದೊಡ್ಡ ಗೋಪುರ ಇದಕ್ಕೆ ಹಿರಿಯ ಗೋಪುರವೆಂತಲೂ ಶಾಸನದಲ್ಲಿ ಉಲ್ಲೇಖವಿದೆ. ಸಾಮಾನ್ಯವಾಗಿ ಬಿಷ್ಟಪ್ಪಯ್ಯನ ಗೋಪುರವೆಂದು ಕರೆಯುತ್ತಾರೆ. ಹತ್ತು ಅಂತಸ್ತುಗಳ ಸುಮಾರು ೧೬೫ ಅಡಿ ಎತ್ತರದ ಈ ಗೋಪುರದ ನಿಲುವು ಭವ್ಯ ಆಕರ್ಷಣೀಯವಾಗಿದೆ. ತಳಪಾಯದ ಎರಡು ಅಂತಸ್ತುಗಳನ್ನು ಶಿಲೆ ಬಳಸಿ ಕಟ್ಟಿದ್ದು ಮೇಲ್ಭಾಗವನ್ನು ಇಟ್ಟಿಗೆ-ಗಾರೆಗಳಿಂದ ನಿರ್ಮಿಸಲಾಗಿದೆ. ಒಳಭಾಗ ಟೊಳ್ಳಾಗಿದೆ, ಹೊರಮಗ್ಗಲು ತಿಳಿಗಚ್ಚಿನ ಮೂರ್ತಿಗಳ ಮಂಟಪಗಳಿವೆ. ಈ ಗೋಪುರವನ್ನು ಕೃಷ್ಣದೇವರಾಯನು ಕ್ರಿ.ಶ. ೧೫೧೦ರಲ್ಲಿ ದುರಸ್ತಿಗೊಳಿಸಿದನೆಂದು ಶಾಸನದಲ್ಲಿ ಉಲ್ಲೇಖವಿದೆ.

ಈ ಗೋಪುರ ಶ್ರೀ ವಿರೂಪಾಕ್ಷೇಶ್ವರ ನೆಲೆವೀಡಾದ ಪಂಪಾಕ್ಷೇತ್ರವೆಂಬ ಕೈಲಾಸ ದ್ವಾರಬಾಗಿಲೆಂದೆ ನಾವು ಗ್ರಹಿಸಬಹುದಾಗಿದೆ. ಈ ಗೋಪುರದ ಬಲಭಾಗದಲ್ಲಿ ಶಿಲೆಯಲ್ಲಿ ಕೆಳಗಿನಿಂದ ಮೂರು ಶಿಲ್ಪ ಚಿತ್ರಗಳನ್ನು ಕಾಣುತ್ತೇವೆ. ಗಜಮರ್ಧನ ಮತ್ತೊಂದು ಚಿತ್ರದಲ್ಲಿ ಅಶ್ವಮರ್ಧನ ಮಾಡುತ್ತಿರುವಂಥ ಸನ್ನಿವೇಶದ ಚಿತ್ರ ಬಿಡಿಸಲಾಗಿದೆ. ಈ ಗೋಪುರ ಪ್ರವೇಶ

ದ್ವಾರದ ಹೊರಗೆ ನಮ್ಮಲ್ಲಿರುವ ಅಹಂಕಾರ, ಗರ್ವ, ಅಧಿಕಾರ, ಉನ್ಮತ್ತತೆಯನ್ನು ತೊರೆದು ಒಳಗೆ ಪ್ರವೇಶ ಮಾಡುವ ಸಂಕೇತ ನೀಡುವಂತಿದೆ. ಮೇಲಿನ ಚಿತ್ರದಲ್ಲಿ ಮಾರ್ಕಂಡೇಯನು ಶಿವಲಿಂಗವನ್ನು ಅಪ್ಪಿಕೊಂಡಿರುವ ಹಾಗೂ ಅದೇ ಶಿಲೆಯ ಇನ್ನೊಂದು ಚಿತ್ರ ಚಾಮುಂಡೇಶ್ವರಿ (ಶಕ್ತಿ) ದುಷ್ಟ ಸಂಹಾರ ಮಾಡುವ ಸನ್ನಿವೇಶವನ್ನು ಕಾಣಬಹುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯ ತಮ್ಮಲ್ಲಿಯ ಅಹಂಕಾರ, ಗರ್ವ ತೊರೆದು ಶಿವನನ್ನು ನಂಬಿದರೆ ನಮ್ಮಲ್ಲಿಯ ದುಷ್ಟಶಕ್ತಿಗಳು ಸಂಹಾರವಾಗಿ ಆರೋಗ್ಯ ಭಾಗ್ಯ ಲಭಿಸುವುದಲ್ಲದೇ ಸಂಕಲ್ಪಿಸಿದ ಕೆಲಸಗಳು ಸಿದ್ಧಿಯಾಗುತ್ತವೆಂಬ ವಿಚಾರವನ್ನು ನಾವು ಗಮಿಸಬಹುದು. ಅಲ್ಲದೇ ರಾಜಕೀಯ ಅಧಿಕಾರ ಹೊಂದಿದವರು ಸಹ ಈ ದೇವಾಲಯದ ಆವರಣದೊಳಗೇ ಬರಲು ಹಿಂದೇಟು ಹಾಕುತ್ತಾರೆ.

ಈ ಗೋಪುರದಲ್ಲಿರುವ "ಗೋಪುರದಮ್ಮನ" ಬಗ್ಗೆ ಒಂದು ಐತಿಹ್ಯವಿದೆ. ಈ ಗೋಪುರದ ನಿರ್ಮಾಣದ ಕಾಲಕ್ಕೆ ಎಷ್ಟೇ ಪ್ರಯತ್ನಿಸಿ ಕಾರ್ಯ ಆರಂಭಿಸಿದರು ಈ ಗೋಪುರದ ನಿರ್ಮಾಣದ ಕಾರ್ಯದಲ್ಲಿ ಪ್ರಗತಿ ಸಾಧಿಸದೇ ಕಟ್ಟಿದ ಕಟ್ಟಡ ಬೀಳುತ್ತಿತ್ತೆಂದು ಆಗ ಬಿಷ್ಟಪ್ಪಯ್ಯ ಈ ಬಗ್ಗೆ ಕಾರಣ ವಿಚಾರಿಸಲಾಗಿ ತುಂಬು ಗರ್ಭಿಣಿಯ ಬಲಿದಾನವಾದರೆ ಮಾತ್ರ ಈ ಗೋಪುರ ನಿಲ್ಲುವುದೆಂಬ ವಿಚಾರ ತಿಳಿಯಿತೆಂದು ಆಗ ಬಿಷ್ಟಪ್ಪಯ್ಯ ತನ್ನ ತುಂಬು ಗರ್ಭಿಣಿ ಹೆಂಡತಿಯಾದ ಶ್ರೀ ಲಕ್ಷ್ಮಾಂಬೆಯನ್ನು ಈ ಬಲಿದಾನಕ್ಕಾಗಿ ಸಿದ್ಧಪಡಿಸುತ್ತಾನೆ. ಶಾಸ್ತ್ರೋಕ್ತರವಾಗಿ ಈ ಬಲಿದಾನದ ಕಾರ್ಯ ನಡೆದು ಜೀವಂತವಾಗಿರುವ ಶ್ರೀ ಲಕ್ಷ್ಮಾಂಬೆಕೆಯನ್ನು ಸಮಾಧಿಮಾಡಿ ಕೆಲಸ ಪ್ರಾರಂಭಿಸಲು ಗೋಪುರದ ಕೆಲಸ ಸರಳವಾಗಿ ನಡೆಯಿತೆಂದು ಗೋಪುರದ ಕೆಲಸ ಪೂರ್ಣಗೊಂಡ ಮೇಲೆ ಈ ಗೋಪುರಧಲ್ಲಿಯ ಸಮಾಧಿಸ್ಥಳದಿಂದ ಮಗುವಿನ ಅಳುವ ಶಬ್ಧ ಕೇಳಿಬರತೊಡಗಿತೆಂದು ಈ ಬಗ್ಗೆ ವಿಚಾರಿಸಲಾಗಿ ಶ್ರೀ ವಿರೂಪಾಕ್ಷನ ಮೊರೆಹೋಗಲು ತಿಳಿಸಲಾಗಿ ಬಿಷ್ಟಪ್ಪಯ್ಯ ಪೂಜಾಧಿ ಕಾರ್ಯಗಳ್ನು ಮುಗಿದ ಮೇಲೆ ಅಳು ನಿಂತಿತೆಂದು ಕೇಳುತ್ತೇವೆ. ಈ ಭಾಗದಲ್ಲಿ ಮಕ್ಕಳು ಅಳುನಿಲ್ಲದೆ ಒಂದೇ ಸಮನೆ ಅಳುತ್ತಿದ್ದರೆ ಈ ಗೋಪುರದಮ್ಮನ ಪೂಜೆ ಮಾಡಿದರೆ ಅಳು ನಿಲ್ಲಿಸುತ್ತವೆಂದು ಈಗಲೂ ಈ ಪದ್ಧತಿಯನ್ನು ಅನುಸರಿಸಲಾಗುತ್ತಿದೆ ಎಂಬ ಐತಿಹ್ಯವಿದೆ.

ಈ ಹಿರಿಯ ಗೋಪುರವನ್ನು ದಾಟಿ ಮುಂದೆ ಬಂದಾಗ ವಿಶಾಲವಾದ ಪ್ರಥಮ ಪ್ರಾಂಗಣವನ್ನು ಕಾಣುತ್ತೇವೆ. ಸದಾ ಹರಿಯುತ್ತಿರುವ ಕಾಲುವೆಯನ್ನು ಈ ಭಾಗದಲ್ಲಿ ನೋಡುತ್ತೇವೆ. ಈ ಪ್ರಾಂಗಣದಲ್ಲಿ ವೈಶಿಷ್ಟ ಪೂರ್ಣವಾದ ಭೋಜನ ಶಾಲೆಯಿದೆ. ಈ ಭೋಜನಾಲಯದಲ್ಲಿ ಸದಾ ಕಾಲುವೆಯ ನೀರು ಹರಿಯುತ್ತದೆ. ಎರಡನೆಯ ಗೋಪುರದ ಹತ್ತಿರ ಬಂದಾಗ ನಮಗೆ ಈ ಗೋಪುರದ ದ್ವಾರಪಾಲಕರಾದ "ನಂದಾ", "ಸುನಂದಾ"ರನ್ನು ಕಾಣುತ್ತೇವೆ. ಈ ಗೋಪುರಕ್ಕೆ ರಾಯರ ಗೋಪುರವೆಂದು ಕರೆಯಲಾಗುತ್ತಿದೆ. ಕ್ರಿ.ಶ. ೧೫೧೦ರಲ್ಲಿ ಕೃಷ್ಣದೇವರಾಯನು ಕಟ್ಟಿಸಿದನೆಂಬುದು ಶಿಲಾ ಶಾಸನದಲ್ಲಿ ಉಲ್ಲೇಖವಿದೆ. ಈ ದ್ವಾರದ ಅಕ್ಕಪಕ್ಕದಲ್ಲಿ ವರಸಿದ್ಧಿ ಮತ್ತು ಷಣ್ಮುಖ (ಕುಮಾರಸ್ವಾಮಿ) ದೇವಸ್ಥಾನಗಳಿವೆ.

ಈ ಗೋಪುರವನ್ನು ದಾಟಿ ಸೂರ್ಯದೇವರ ದೇವಸ್ಥಾನದ ಹತ್ತಿರದಲ್ಲಿರುವ ಹಾಸುಗಲ್ಲಿನ ಮೇಲೆ "ಪಂಚಶಿಖರ" ಎಂದು ಬರೆದ ಸ್ಥಳದಿಂದ ವಿರೂಪಾಕ್ಷ ದೇವಸ್ಥಾನದ ಮೇಲಿನ ಗೋಪುರ ನೋಡಿದಾಗ "ಪಂಚ ಶಿಖರ ಕಳಸಗಳು" ಕಾಣುತ್ತೇವೆ. ಅದೇ ನಿಂತ ನಿಲುವಿನಿಂದ ನಾಲ್ಕಾರು ಹೆಜ್ಜೆ ಮುಂದೆ ಬಂದಾಗ "ಏಕಶಿಖರ" ಎಂದು ಬರೆದ ಹಾಸುಗಲ್ಲಿನ ಮೇಲೆ ನಿಂತು ಮೊದಲು ನೋಡಿದಂತೆ ನೋಡಿದರೆ ಒಂದೇ ಶಿಖರ ಕಳಸ ಕಾಣುತ್ತದೆ. ಈ ರೀತಿ ಹಾಸುಗಲ್ಲಿನ ಮೇಲೆ ವಿವಿಧ ಸ್ಥಳದಲ್ಲಿ ನಿಂತು ನೋಡುವ ಒಂದೊಂದು ಐದು ಹಾಸುಗಲ್ಲುಗಳಿರಬೇಕು ಎಂಬುದರ ಬಗ್ಗೆ ಅಭಿಪ್ರಾಯ ಪಡಬೇಕಾಗಿದೆ. ಏಕಶಿಖರದ ಹಾಸುಗಲ್ಲು ದಾಟಿ ನಾಲ್ಕಾರು ಹೆಜ್ಜೆ ಮುಂದೆ ಬಂದಾಗ ನಮಸ್ಕಾರ ಮಾಡುತ್ತಿರುವ ಬಂಗಿಯ ಚಿತ್ರಗಳಿದ್ದು ಹಾಸುಗಲ್ಲುಗಳಿವೆ. ಅಲ್ಲಿ ನಿಂತು ನಮಸ್ಕಾರ ಇಲ್ಲವೇ ಸಾಷ್ಟಾಂಗ ನಮಸ್ಕಾರ ಮಾಡಿದರೆ ಒಳ್ಳೆಯದಾಗುತ್ತದೆಂಬ ನಂಬಿಕೆ ಪುರಾತನದ್ದಾಗಿದೆ. ಕೆಲವರು ಇವು ದೇವನಾರಿಯರ ಚಿತ್ರಗಳಿರಬಹುದೆಂದು ಹೇಳುತ್ತಾರೆ. ಅದು ಹಾಗಾಗಲಾರದು ನಮಸ್ಕರಿಸುವ ಚಿತ್ರ ಓದು ಬರಹ ಇಲ್ಲದವರಿಗೆ ಚಿತ್ರಗಳ ಮೂಲಕ ನಮಸ್ಕಾರ ಮಾಡಿ ಮುಂದೆ ಹೋಗಬೇಕೆಂದು ಸೂಚಿಸುವ ಸ್ಥಳಗಳಿರಬೇಕು.

ರಾಯರ ಗೋಪುರ ದಾಟಿ ಒಳಗೆ ಬಂದಾಗ ಇನ್ನೊಂದು ಎರಡನೆಯ ಪ್ರಾಂಗಣ ಕಾಣುತ್ತೇವೆ. ಈ ಪ್ರಾಂಗಣದಲ್ಲಿ ದೇವಾನು ದೇವತೆಗಳ ವಾಸದ ತಾಣವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಈ ದೇವತೆಗಳಿಗೆ ಆವರಣ ದೇವತೆಗಳೆಂದು ಕರೆಯುತ್ತಾರೆ. ಈ ದೇವಾನು ದೇವತೆಗಳು ಶಿವನೊಂದಿಗೆ ಇಲ್ಲಿ ನೆಲೆಯಾಗಿದ್ದು ಪ್ರತಿಯೊಂದು ದೇವಾನು ದೇವತೆಗಳ ಹಿನ್ನಲೆಯಾಗಿ ಪೌರಾಣಿಕ ಕತೆಗಳನ್ನು ಪಂಪಾ ಮಹಾತ್ಮೆಯಲ್ಲಿ ಕಾಣುತ್ತೇವೆ. ಈ ದೇವಾನುದೇವತೆಗಳ ವಾಸ್ತವ್ಯದ ಕುರಿತಾಗಿ ಆದಿ ಶಂಕರಾಚಾರ್ಯರು ಈ ಸ್ಥಳ "ಶಿವ ಪಂಚಾಯತನ" ಎಂಬ ವಿಶಿಷ್ಟ ಪೂಜೆ, ಆರಾಧನೆಗೆ ಸೂಕ್ತವಾದ ಸ್ಥಳ ಇದಾಗಿದೆಂಬುದಕ್ಕೆ ಈ ಕೆಳಗಿನಂತೆ ಕ್ಷೇತ್ರ ದರ್ಶನ ಮಾಡಿಸುತ್ತಾರೆ. ಈ ಪ್ರಾಂಗಣದ ಮಧ್ಯದಲ್ಲಿ ವಿರೂಪಾಕ್ಷ (ಈಶ್ವರ ಲಿಂಗ) ಆಗ್ನೇಯ ದಿಕ್ಕಿಗೆ ಸೂರ್ಯದೇವ (ಆದಿತ್ಯ), ಈಶಾನ್ಯಕ್ಕೆ ಶ್ರೀ ಲಕ್ಷ್ಮಿ ವೆಂಕಟೇಶ್ವರ (ವಿಷ್ಣು, ವಾಯುವ್ಯಕ್ಕೆ ಪಂಪಾಬಿಕೆ, ನೈರುತ್ಯಕ್ಕೆ ಗಣಪತಿ, ಬಲಗಡೆ ಶಾರದೆ ಈ ರೀತಿ ದೇವಾನುದೇವತೆಗಳ ವಾಸ್ತವ್ಯದ ಸ್ಥಳದಲ್ಲಿ ಸಂಕಲ್ಪ ಸಿದ್ಧಿ ದೊರೆಯುತ್ತದೆಂಬುದಾಗಿದೆ.

ಇನ್ನೊಂದು ಮೂಲದ ಪ್ರಕಾರ ಈ ಪ್ರಾಂಗಣ ತುಂಬಾ ಶ್ರೇಷ್ಠವಾದುದು. ಯಾಕೆಂದರೆ ಇಲ್ಲಿ ನೈರುತ್ಯಕ್ಕೆ ಗಣೇಶ, ಬಲಕ್ಕೆ ಶಾರದೆ, ಈಶಾನ್ಯಕ್ಕೆ ಶ್ರೀ ಲಕ್ಷ್ಮಿ ವೆಂಕಟೇಶ್ವರ, ಪಶ್ಚಿಮದಲ್ಲಿ ಮಹಿಶಾಸುರ ಮರ್ಧಿನಿ, ಉತ್ತರದಲ್ಲಿ ಚಾಮುಂಡೇಶ್ವರಿ, ವಾಯುವ್ಯದಲ್ಲಿ ಪಂಪಾಂಬಿಕಾ, ಭುವನೇಶ್ವರಿ, ಗರ್ಭಗುಡಿಯಲ್ಲಿ ಶ್ರೀ ಚಕ್ರ ಈ ರೀತಿ ದೇವಾನುದೇವತೆಗಳ ವಾಸ್ತವ್ಯದ ಸ್ಥಳ ಅಪರೂಪ ಇಂಥಹ ಸ್ಥಳದಲ್ಲಿ ಪ್ರಾರ್ಥಿಸಿಕೊಂಡ ಇಷ್ಟಾರ್ಥಗಳು ನೆರವೇರುತ್ತವೆಂಬ ನಂಬುಗೆಯಿದೆ.

ಹೀಗೆ ಈ ಪ್ರಾಂಗಣದಲ್ಲಿ ನವದುರ್ಗೆಯರು (ಸರ್ವಮಂಗಳೇ ಸಪ್ತ ಮಾತ್ರಿಕೆಯ) ಬ್ರಾಹ್ಮಿ, ಮಹೇಶ್ವರಿ, ಕೈಮಾರಿ, ವೈಷ್ಣವಿ, ವರಾಹಿದುರ್ಗಾ, ಇಂದ್ರಾಣಿ, ಚಾಮುಂಡಿ ವಿಭಿನ್ನ ಹೆಸರುಗಳಿಂದ ನೆಲೆಸಿದ್ದಾರೆ. ದೇವಾನುದೇವರಾದ ಶ್ರೀ ಮುಕ್ತಿನರಸಿಂಹ, ಬಸ್ಮೇಶ್ವರ, ಕುಭೇಶ್ವರ, ಯೊಮೇಶ್ವರ, ಸುಧಮೇಶ್ವರ, ದಕ್ಷಿಣಾಮೂರ್ತಿ, ಕಾಲಭೈರವೇಶ್ವರ ಹೀಗೆ ೪೨ ಕ್ಕೂ ಹೆಚ್ಚಿನ ದೇವಾನುದೇವತೆಗಳು ಈ ಪ್ರಾಂಗಣದಲ್ಲಿವೆ. ಈ ಪ್ರಾಂಗಣದ ಮಧ್ಯದಲ್ಲಿರುವ ಶ್ರೀ ವಿರೂಪಾಕ್ಷೇಶ್ವರ ಉದ್ಭವಲಿಂಗದ ದೇವಾಲಯದ ಮುಂಭಾಗದ ದೀಪಸ್ತಂಭ, ಬಲಿಪೀಠದ ನಂದಿ ಮಂಟಪದ ಕಟ್ಟೆಯ ಮೇಲೆ ನಂದೀಶನು, ಮಹಾಶಯ, ವೃಷಭ, ಮಹಾಶೃಂಗ ವೃಷಭ, ಮಹಾಬಲ ವೃಷಭ, ಕಟ್ಟೆಯ ಕೆಳಗೆ ಸವ್ಯೆ ವೃಷಭ ಎಂಬ ನಾಲ್ಕು ಅವತಾರಗಳಲ್ಲಿ ನಂದಿಯನ್ನು ಕಾಣಬಹುದು.

ಈ ದೇವಾನು ದೇವತೆಗಳ ದರ್ಶನದೊಂದಿಗೆ ಈ ಕ್ಷೇತ್ರದ ಆರಾಧ್ಯ ದೈವವಾದ ಶ್ರೀ ವಿರೂಪಾಕ್ಷ ಲಿಂಗವಿರುವ ದೇವಸ್ಥಾನಕ್ಕೆ ಉತ್ತರ, ದಕ್ಷಿಣ, ಪೂರ್ವ ಈ ಮೂರು ದಿಕ್ಕುಗಳ ಮೂಲಕ ಶ್ರೀ ಸ್ವಾಮಿದರ್ಶನ ಪಡೆಯಲು ಅವಕಾಶವಿದ್ದರೆ ಪೂರ್ವದ ಬಾಗಿಲಿನ ಮೂಲಕ ಭಕ್ತಾಧಿಗಳ ಪ್ರವೇಶಕ್ಕೆ ಅವಕಾಶವಿಲ್ಲ. ಈ ದ್ವಾರದಲ್ಲಿ ದೇವರ ಉತ್ಸವ ಮತ್ತು ರಾಜವಂಶಸ್ಥರಿಗೆ ಮಾತ್ರ ಪ್ರವೇಶಕ್ಕೆ ಅವಕಾಶವಿರುತ್ತದೆ. ಈ ದೇವಾಲಯಕ್ಕೆ ಮುಖಮಂಟಪ, ನವರಂಗ ಸುಕನಾಸಿ ನಂತರದಲ್ಲಿರುವುದು "ಗರ್ಭಗೃಹ" ಈ ಗರ್ಭಗೃಹದಲ್ಲಿ ಶ್ರೀ ವಿರೂಪಾಕ್ಷ ಲಿಂಗದ ಉದ್ಭವ ಲಿಂಗವಿದೆ.

ಈ ದೇವಾಲಯದ ಮುಖಮಂಟಪ (ಕಲ್ಯಾಣ ಮಂಟಪ) ಹಲವಾರು ವೈಶಿಷ್ಟ್ಯಗಳಿಂದ ಒಳಗೊಂಡಿದೆ. ಈ ಮಂಟಪದ ಪ್ರತಿಯೊಂದು ಕಂಬಗಳಲ್ಲಿ ಹಾಗೂ ಶಿವನ ಭಕ್ತಿಯ ಭಕ್ತರ ಸನ್ನಿವೇಶಗಳ ಪೌರಾಣಿಕ ಹಿನ್ನೆಲೆಯ ಭಕ್ತಿರಸದ ಸನ್ನಿವೇಶಗಳನ್ನು ಬಿಡಿಸಲಾಗಿದೆ. ವಿಜಯನಗರದ ಶಿಲ್ಪ ಶೈಲಿಯ ಎಲ್ಲಾ ಆಯಾಮಗಳನ್ನು ಹೊಂದಿದೆ. ಈ ಮಂಟಪದಲ್ಲಿ ಮುಂಗಾಲು ಎತ್ತಿ ಹಿಂಗಾಲ ಮೇಲೆ ನಿಂತಿರುವ ಸಿಂಹಗಳು, ವಿಜಯೋನ್ಮತ್ತ ಮೂರ್ತಿಗಳಾಗಿವೆ. ಎತ್ತರಿಸಿದ ಮುಂಗಾಲುಗಳಲ್ಲಿ ಹಣತೆಗಳನ್ನು ಹಿಡಿದುಕೊಂಡಿವೆ. (ಸದ್ಯಕ್ಕೆ ಅವು ಭಂಗ ಹೊಂದಿವೆ) ಈ ಮಂಟಪದ ಕಂಬಗಳಲ್ಲಿ ಪುರಾಣ ಪುರುಷರು, ಶಿವಭಕ್ತರ ಭಕ್ತಿ ನಿರೂಪಣೆಯ ವೈವಿಧ್ಯಮಯವಾದ ಸನ್ನಿವೇಶಗಳ ಚಿತ್ರಗಳಿವೆ. ವಿವಿಧ ನೃತ್ಯಭಂಗಿಗಳು, ವಾದ್ಯಬಾರಿಸುವ ವಿವಿಧ ಭಂಗಿ, ಅಂದರೆ ತಂತಿವಾದ್ಯ, ಲೋಹದ ವಾದ್ಯ, ಗಾಳಿವಾದ್ಯ, ಚರ್ಮವಾದ್ಯಗಳ ಚಿತ್ರಗಳಿವೆ. ಮಧ್ಯ ಮಂಟಪದ ಮೇಲ್ಛಾವಣಿಯಲ್ಲಿ ವಿಜಯನಗರದ ಅರಸರ ಕಾಲದ ಅಪರೂಪ ವರ್ಣರಂಜಿತ ಭಿತ್ತಿ ಚಿತ್ರಗಳಿವೆ. ಈ ಚಿತ್ರದಲ್ಲಿ ತ್ರಿಪುರ ಸಂಹಾರ, ಗಿರಿಜಾ ಕಲ್ಯಾಣ, ತ್ರಿಮೂರ್ತಿಗಳು, ವಿದ್ಯಾರಣ್ಯರ ಚಿತ್ರಗಳನ್ನು ಬಿಡಿಸಲಾಗಿದೆ. ಈ ಮಂಟಪಗಳಿಂದ ಇಳಿಯಲು ಪೂರ್ವ-ಉತ್ತರ-ದಕ್ಷಿಣದಲ್ಲಿ ಮೆಟ್ಟಿಲುಗಳಿವೆ. ಈ ಮಂಟಪವನ್ನು ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕದ ಸವಿ ನೆನಪಿಗಾಗಿ ಕ್ರಿ.ಶ. ೧೫೧೦ರಲ್ಲಿ ಮುಖಮಂಪಟ ಕಟ್ಟಿಸಿದನೆಂಬ ಬಗ್ಗೆ ಶಿಲಾಶಾಸನಗಳ ಉಲ್ಲೇಖವಿದೆ.

ಈ ದೇವಸ್ಥಾನದ ಉತ್ತರ ಬಾಗಿಲಿನಿಂದ ಹೊರಬಂದಾಗ ಕಾಣುವುದು ದಕ್ಷಿಣ ಮುಖವಾಗಿ ಪ್ರತಿಷ್ಠಾಪಿಸಿದ ಭುವನೇಶ್ವರಿ ದೇವಿ ದೇವಾಲಯದ ಪ್ರಾಂಗಣದ ವಾಯುವ್ಯಕ್ಕೆ ಪಂಪಾದೇವಿಯು ಪೂರ್ವಕ್ಕೆ ಮುಖ ಮಾಡಿಕೊಂಡಿರುವುದನ್ನು ಕಾಣುತ್ತೇವೆ. "ಗುಲಗಂಜಿ ಮಾಧವ" (ಗುಂಜಿಮಾಧವ) ಒಂದು ವಿಧದ ಗುಹಾ ದೇವಾಲಯವಿದ್ದಂತಿದೆ. ಇಲ್ಲಿ 'ಹರಿ-ಹರರ' ದರ್ಶನ ಪಡೆಯುತ್ತೇವೆ. ಈ ದೇವಾಲಯದ ಮುಂಭಾಗದಲ್ಲಿ ವಿರೂಪಾಕ್ಷ ಲಿಂಗದ ಉತ್ತರಕ್ಕೆ ಚಂಡಿಕೇಶ್ವರ ದೇವಸ್ಥಾನವಿದೆ. ಈ ಚಂಡಿಕೇಶ್ವರನ ಪೂಜೆಯು ತುಂಬಾ ವೈಶಿಷ್ಟ್ಯ ಪೂರ್ಣವಾಗಿದೆ. ಈ ಚಂಡಿಕೇಶ್ವರನ ಪೂಜೆಯು ತುಂಬಾ "ಉತ್ತರತ ಚಂಡಿಶ್ವರಾಯ ನಮಃ ನಿರ್ಮಾಲ್ಯಂ ವಿಸೃಜ್ಯಃ" ಎನ್ನುವಂತೆ ವಿರೂಪಾಕ್ಷ ಲಿಂಗದ ಪೂಜೆಯ ನಂತರ ತೆಗೆದ ಪೂಜಾ ವಸ್ತುಗಳಿಂದ ಈ ದೇವರನ್ನು ಪೂಜಿಸಲಾಗುತ್ತಿದೆ. ಈ ಚಂಡಿಕೇಶ್ವರ ಸಧಾ ಶಿವಧ್ಯಾನಾಸಕ್ತನಾಗಿರುತ್ತಾನೆ. "ಶ್ರೀ ವಿರೂಪಾಕ್ಷೇಶ್ವರನ ದರ್ಶನ ಮಾಡಿದಷ್ಟು ಪುಣ್ಯವು ಚಂಡಿಕೇಶ್ವರನ ದರ್ಶನದಿಂದ ಲಭಿಸುತ್ತದೆ" ಎಂಬ ವರ ಈತನಿಗಿರುವುದರಿಂದ ಚಂಡಿಕೇಶ್ವರ ದರ್ಶನ ಪಡೆಯುವವರ ಸಂಖ್ಯೆ ಹೆಚ್ಚಿದೆ. ಈ ದೇವರ ಬಗ್ಗೆ ಇರುವ ಇನ್ನೊಂದು ಐತಿಹ್ಯವೇನೆಂದರೆ, ಈ ದೇವರಿಗೆ ಕಿವಿ ಕೇಳಿಸುವುದಿಲ್ಲವೆಂದು ಚಪ್ಪಾಳೆ ತಟ್ಟಿ ಎಬ್ಬಿಸಿ ದರ್ಶನ ಪಡೆಯುತ್ತಾರೆಂಬುದು ಒಂದೆಡೆಯಾದರೆ, ಶಿವಧ್ಯಾನಾಸಕ್ತನಾದ ಚಂಡಿಕೇಶ್ವರನು ಶಿವಧ್ಯಾನದಿಂದ ಹೊರಬರಲು ಚಪ್ಪಾಳೆ ತಟ್ಟಲಾಗುತ್ತದೆಂಬ ಇನ್ನೊಂದು ಐತಿಹ್ಯವಿದೆ. ಹಂಪಿಗೆ ಬಂದವರು ಚಂಡಿಕೇಶ್ವರ ದರ್ಶನ ಮಾಡುತ್ತಾರೆ. ಇದೊಂದು ವಿರೂಪಾಕ್ಷನ ಭಕ್ತರದರ್ಶನ ಪಡೆದ ಭಕ್ತಾಧಿಗಳ "ಹಾಜರಿ ಪುಸ್ತಕ" ಎಂತಲೂ ವಾಡಿಕೆಯಲ್ಲಿ ಕರೆಯುತ್ತಾರೆ. ಈ ಆವರಣದಲ್ಲಿರುವ ೩೨ ಬಲಿಪೀಠಗಳಾದ ನಂದಿ, ಭೃಂಗಿ, ರಿತಾದಾಯ, ಸದಾಶಿವ, ವಾಮದೇವ, ಜೇಷ್ಠ, ಶ್ರೇಷ್ಠ, ರುದ್ರ, ಕಾಲ, ಕಲವಿಕರಣ, ಬಲಾಯ, ಬಲವಿಕರಣಾಯ, ಸರ್ವಭೂತ ಮನೊನಂಯ..... ಹೀಗೆ ಒಂದಿಲ್ಲೊಂದು ಕರ್ತವ್ಯದಲ್ಲಿ ದೇವಾನುದೇವತೆಗಳಿರುತ್ತವೆ. ಅಷ್ಟ ದಿಕ್ಪಾಲಕರಾದ ಇಂದ್ರ, ಅಗ್ನಿ, ಯಮ, ನೈರುತ್ಯ, ವರುಣ, ವಾಯುವ್ಯ, ಕುಭೇರ, ಈಶಾನ್ಯ ಇಡೀ ಕ್ಷೇತ್ರಪಾಲಕನಾಗಿ "ಮಳೆಯಾಳಬ್ರಹ್ಮ" ಲೋಕಪಾಲ ತೀರ್ಥದಲ್ಲಿ ವಾಸ್ತವ್ಯ ಮಾಡಿರುತ್ತಾನೆ. ಧರ್ಮಸ್ಥಳದ ಅಣ್ಣಪ್ಪದೇವರು ನಿರ್ವಹಿಸುತ್ತಿರುವ ಪಾತ್ರಗಳನ್ನು ಈ "ಮಳಿಯಾಳಬ್ರಹ್ಮ" ನಿರ್ವಹಿಸುತ್ತಿದ್ದಾನೆಂದು ಪ್ರತೀತಿ ಇದೆ. ವೈಶಾಖ ಶುದ್ಧ ಹುಣ್ಣಿಮೆಯಂದು ನಡೆಯುವ ಈ ಕ್ಷೇತ್ರದ "ಗಿರಿ ಪ್ರದಕ್ಷಿಣೆ" ಉತ್ಸವದಲ್ಲಿ ಸುಮಾರು ೭೫ ದಕ್ಕಿಂತಲೂ ಹೆಚ್ಚಿನ ಸ್ಥಳದಲ್ಲಿ ಪ್ರದಕ್ಷಿಣೆ ಪೂಜೆಗಳು ನಡೆಯುತ್ತವೆ. ಈ ದೇವಾಲಯದ ಆವರಣದ ಪಶ್ಚಿಮ ದ್ವಾರದ ಪಕ್ಕದಲ್ಲಿ "ಹಿರಿಯ ಗೋಪುರದ ಛಾಯೆಯು ತಲೆಕೆಳಗಾಗಿ ಕಾಣುವುದು." ಛಾಯಾಚಿತ್ರದರ್ಶನ ಈ ಕ್ಷೇತ್ರ ವಾಸ್ತುವಿನ ಹಾಗೂ ವೈಜ್ಞಾನಿಕ, ತಾಂತ್ರಿಕತೆಯ ಜ್ಞಾನವನ್ನು ಬಳಸಿರುವುದನ್ನು ಕಾಣಬಹುದಾಗಿದೆ. ಈ ಆವರಣ ದೇವಾಲಯದ ದೇವರ ಮೂರ್ತಿಗಳನ್ನು ಗಮನಿಸಿದಾಗ, ಶಿಲ್ಪಶಾಸ್ತ್ರದ ಎಲ್ಲಾ ಆಯಾಮಗಳ ಅಭಿವ್ಯಕ್ತಿಯನ್ನು ಕಾಣಬಹುದು.

ಈ ದೇವಾಲಯದ ಆವರಣದ ಉತ್ತರ ದಿಕ್ಕಿಗಿರುವ "ಕನಕಗಿರಿ" ಗೋಪುರ ಅಷ್ಟೇ ಪ್ರಾಮುಖ್ಯವಾಗಿದೆ. ಈ ಗೋಪುರ ಬಳಸಿ ಹೊರನಡೆದ ಪಂಪಾ ಮಹಾತ್ಮೆಯ "ಮನ್ಮಥತೀರ್ಥ" ಸಿಕ್ಕುವುದು. ಈ ತೀರ್ಥದ ದಡದ ಮೇಲೆ ಚಾಲುಕ್ಯರ ಕಾಲದವುಗಳೆಂದು ಹೇಳಲಾದ ದೇವಾಲಯಗಳಿವೆ. ಮುಂದೆ ಸಾಗಿದರೆ ತುಂಗಭದ್ರಾ ನದಿ ಹರಿಯುತ್ತದೆ. ಈ ವಿರೂಪಾಕ್ಷ ಲಿಂಗದ ದರ್ಶನ ಮಾಡಿಕೊಂಡು ಮರಳಿ ಹೊರಬರುವಾಗ ಹಿರಿಯ ಗೋಪುರದ ಕೆಳಗಡೆ ಇರುವ "ತ್ರಿಕಾಲ ನಂದಿ" ದರ್ಶನ ಪಡೆಯಬಹುದು. ಈ ನಂದಿ ತ್ರಿಕಾಲದಿಂದಲೂ ಈ ಕ್ಷೇತ್ರದ ಮಹಿಮೆಯನ್ನು ತಿಳಿಸುವಂತಿದೆ. ನಂಬಿ ಬಂದ ಭಕ್ತರಿಗೆ ತ್ರಿಕಾಲದಿಂದಲೂ ಶ್ರೀ ವಿರೂಪಾಕ್ಷ ಅಭಯವನ್ನು ನೀಡತ್ತಾ ಬಂದಿದ್ದಾನೆಂಬ ಸಂದೇಶ ಸಾರುವಂತಿದೆ.

ಪೂಜಾ ವಿಧಾನ ಹಾಗೂ ನೈವೇದ್ಯ

ಶ್ರೀ ವಿರೂಪಾಕ್ಷ ದೇವಸ್ಥಾನದಲ್ಲಿ ಶೈವಾಗಮನ ರೀತಿಯಿಂದ ದೈನಂದಿನ ಪೂಜಾ ಕೈಂಕರ್ಯ ನಡೆಯುತ್ತದೆ. ನಿತ್ಯ ತ್ರಿಕಾಲ ಪೂಜೆ ನಡೆಯುತ್ತಿದೆ. ಪ್ರತಿನಿತ್ಯ ಅರುಣೋದಯ ಕಾಲಕ್ಕೆ ಸುಪ್ರಭಾತ ಸೇವೆಯೊಂದಿಗೆ ಪೂಜಾ ಕೈಂಕರ್ಯಗಳು ಪ್ರಾರಂಭವಾಗುತ್ತಿವೆ. ಗಂಗಾಪೂಜೆ ಲಘುಪುಣ್ಯಾಹ ಮಾಡಿ ಆ ನೀರನ್ನು ದೇವಾಲಯದ ಎಲ್ಲಾ ಕಡೆಯೂ ಪ್ರೋಕ್ಷಿಸಿ ಮೂಲ ಸ್ವಾಮಿಯ ಸನ್ನಿಧಿಯಲ್ಲಿ ಪಂಚಾಂಗ ಶ್ರವಣದೊಂದಿಗೆ ಪೂಜೆ ಪ್ರಾರಂಭವಾಗುತ್ತದೆ. ಲಘುನ್ಯಾಸ ಪೂರ್ವಕ ರುದ್ರಾಭಿಷೇಕ ಪ್ರಾರಂಭಿಸುತ್ತಾ ಷೋಡಶೋಪಚಾರ ನಡೆದು ಈ ಕಾಲದಲ್ಲಿ ಭಕ್ತಾಧಿಗಳ "ಪುಡವಟ್ಟು" ಸೇವೆ ಹಾಗೂ ಇತರೆ ಸೇವಾ ಪೂಜೆ ಮಾಡಿಸಲು ಅವಕಾಶ ಕಲ್ಪಿಸಲಾಗುತ್ತಿದೆ. ನೈವೇಧ್ಯ ಅಂದರೆ ಎಡೆಯನ್ನು ಸಮರ್ಪಿಸಿದ ನಂತರ ಬಲಿಹರಣ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಬಲಿಹರಣದಲ್ಲಿ ಅಂತರಾವರಣ ಮತ್ತು ಬಹಿರಾವರಣ ಎಂಬ ಎರಡು ವಿಧದ ಬಲಿಹರಣಗಳು ನಡೆಯುತ್ತಿದ್ದು, ಅಂತರಾವರಣದ ಕಾಲದಲ್ಲಿ ಗರ್ಭಗುಡಿಗೆ ಭಕ್ತಾಧಿಗಳಾಗಲಿ ಇನ್ಯಾರೇ ಆಗಲಿ (ಪೂಜಾರಿ ಹೊರತು) ಒಳಗೆ ಬರದಂತೆ ಉತ್ತರ-ದಕ್ಷಿಣ-ಪೂರ್ವ ಬಾಗಿಲುಗಳನ್ನು ಹಾಕಿ ಮಂಗಳಾವಾಧ್ಯಸೇವೆ ನಡೆಯುತ್ತಿರುತ್ತದೆ. ಈ ಅಂತರಾವರಣ ಸೇವೆ ದೇವಾಲಯದ ಗರ್ಭಗುಡಿಯ ಮರೆಯಲ್ಲಿ ನಡೆಯುತ್ತದೆ. ನಂತರ ಆಗಮಶಾಸ್ತ್ರದನ್ವಯ ಗರ್ಭಗುಡಿಯ ಮುಂಭಾಗದಲ್ಲಿರುವ ಕಂಚಿನ ನಂದಿಯ ಹಾಗೂ ಚತುರ್ದಿಕ್ಕುಗಳಲ್ಲಿ ಮೂರು ಸಾರಿ ಬಲಿಪ್ರಧಾನ ಮಾಡಿ ಉತ್ತರ ದಿಕ್ಕಿನಿಂದ ಹೊರಬಂದು ಬಹಿರಾವರಣ ಬಲಿಹರಣವು ನಾಲ್ಕು ದಿಕ್ಕುಗಳಿಗೆ ಆಗಮಶಾಸ್ತ್ರದನ್ವಯ ಹಾಕಿದ ಬಳಿಕ ಪೂರ್ವದ್ವಾರದಲ್ಲಿ ದ್ವಾರಪಾಲಕರ ಎದುರಿಗೆ ಇರುವ ನಂದಿತ್ರಿತಯ ಸನ್ನಿಧಿಯಲ್ಲೂ, ಧ್ವಜಸ್ತಂಭದ ಪೂರ್ವೋತ್ತರ, ದಕ್ಷಿಣ ದಿಕ್ಕುಗಳಲ್ಲೂ, ರಂಗಮಂಪಟದ ಆಗ್ನೇಯ, ನೈರುತ್ಯ, ದಕ್ಷಿಣ, ಪಶ್ಚಿಮ, ವಾಯುವ್ಯ ದಿಕ್ಕುಗಳಲ್ಲಿರುವ ಬಲಿಕಲ್ಲುಗಳ ಮೇಲೂ ಪ್ರದಕ್ಷಿಣಾಕಾರವಾಗಿ ಬಲಿಹಾಕಿ, ದ್ವಜಸ್ತಂಭ ಸನ್ನಿಧಿಗೆ ಪೂರ್ವದಿಕ್ಕಿನಲ್ಲಿರುವ ಕ್ಷೇತ್ರಪಾಲಕ ವೇದಿಕೆಯ ಮೇಲೆ ಶೇಷಾನ್ನವನ್ನು ಹಾಕಬೇಕು. ಅನಂತರ ಆಗಮಿಕರು ಪಾದಪ್ರಕ್ಷಾಳನ ಮಾಡಿಕೊಂಡು ಪೂರ್ವದ್ವಾರದಿಂದ ಒಳಗಡೆ ಪ್ರವೇಶಿಸಬೇಕು.

ಈ ಬಹಿರಾವರಣ ಬಲಿಹರಣ ಕಾರ್ಯವು ಮುಗಿಯುವವರೆಗೂ ಅಡಿಗೆಯವರು ಕಾರ್ಯಕ್ರಮದ ಉದ್ದಕ್ಕೂ ಗಂಟೆ ಬಾರಿಸುತ್ತಲೂ, ಕಾವಲುಗಾರರಿಬ್ಬರು ಹಪ್ಪಗಿರಿ ದೀವಟಿಗೆಗಳನ್ನು ಹಿಡಿದುಕೊಂಡಿರಬೇಕು, ಬಜಂತ್ರಿಯವರು ಮುಂದೆ ಮುಂದೆ ವಾದ್ಯಮಾಡುತ್ತಲೂ ಇರಬೇಕು. ಈ ಬಹಿರಾವರಣ ಬಲಿಹರಣವಾದ ನಂತರ ಪಾದುಕಾ ಪ್ರದಕ್ಷಿಣೆ ಕಾರ್ಯಕ್ರಮ ಮೇಲೆ ತಿಳಿಸಿದ ಗೌರವಗಳೊಂದಿಗೆ ಮೂರು ಆವರ್ತಿ ಪ್ರದಕ್ಷಿಣೆಯನ್ನು ಮುಖಮಂಪಟದಲ್ಲಿ ನಡೆಸುತ್ತಾ ಪೂಜಾರರು ಸ್ವಸ್ತಿ ಹೇಳುತ್ತಾ ನಡೆಯುತ್ತಿರಬೇಕು. ಕಡೆಯ (ಮೂರನೆಯ) ಪ್ರದಕ್ಷಿಣೇ ಧ್ವಜಸ್ತಂಭದ ಹತ್ತಿರ ಬರುತ್ತಲೇ ಮುಖ್ಯ ಮಂಟಪದವರೆಗೂ ನಿಶ್ಯಬ್ಧವಾಗಿ ಬಂದು ನಿಂತುಕೊಂಡಿರಬೇಕು. ಅಷ್ಟರಲ್ಲಿ ಗರ್ಭಗುಡಿ ಒಳಹೋಗಿ ಕುಂಭಾರತಿಯನ್ನು ಹತ್ತಿಕೊಂಡು ಬಂದು ಪೂಜಾರರಿಂದ ಕುಂಬಾರತಿಯಾದ ನಂತರ ಪಾದುಕೆಗಳನ್ನು ಯಥಾಸ್ಥಾನವಾಗಿ ಗುಡಿಯ ಒಳಗಡೆ ತೆಗೆದುಕೊಂಡು ಹೋಗುವುದರೊಂದಿಗೆ ಒಳಗಿನ ಏಕಕಾಲ ಪೂಜಾ ಕ್ರಮ ಮುಗಿಯುತ್ತಾ ಭಕ್ತಾಧಿಗಳಿಗೆ ಪ್ರವೇಶ ದ್ವಾರಗಳ ಮೂಲಕ ದರ್ಶನಕ್ಕೆ ಅವಕಾಶ ದೊರೆಯುತ್ತದೆ.

ದ್ವಿಕಾಲ ಪೂಜೆ

ಏಕಕಾಲದ ಪೂಜೆಯಲ್ಲಿ ನಡೆದ ಕ್ರಮದಲ್ಲಿಯೇ ದ್ವಿಕಾಲ (ಮಧ್ಯಾಹ್ನದ) ಪೂಜಾ ಕ್ರಮ ನಡೆಯುತ್ತದೆ. ಆದರೆ ಪಾದುಕೆ ಸೇವೆ ಮಾತ್ರ ಇರುವುದಿಲ್ಲ.

ತ್ರಿಕಾಲ ಪೂಜೆ (ಸಾಯಂಕಾಲ)

ಪ್ರಾತ:ಕಾಲದ ಏಕಕಾಲ ಪೂಜೆ ಪೂಜೆಯ ಕ್ರಮದಂತೆ ಸಾಯಂಕಾಲದಲ್ಲಿಯೂ ಕೂಡಾ ಪೂಜಾ ಕೃತ್ಯಗಳು ಜರುಗಿಸಿ ಯಥಾವಿಧಿಯಾಗಿ ಬಲಿಹರಣ ಪಾದುಕಾ ಪ್ರದಕ್ಷಿಣೆಯನ್ನು ಮಾಡಲಾಗುತ್ತದೆ.

ಸಾಯಂಕಾಲದ ಪೂಜೆ ಪ್ರಾರಂಭಕ್ಕೆ ಮೊದಲು ದೀವಟಿಗೆ, ವಾದ್ಯದೊಂದಿಗೆ ಪಂಪಾಪತಿ, ವಿದ್ಯಾರಣ್ಯಸ್ವಾಮಿ, ಪಾರ್ವತೀ, ಭುವನೇಶ್ವರಿ ಮೊದಲಾದ ಎಲ್ಲಾ ಆವರಣ ದೇವತೆಗಳಿಗೂ ದೀವಟಿಗೆಯಿಂದ ನಮಸ್ಕಾರ ಮಾಡುವ ಪದ್ಧತಿ ಇದೆ. ಸಾಯಂಕಾಲದ ಪೂಜಾಧಿ ಕ್ರಮಗಳು ಮುಗಿದ ನಂತರ ಏಕಾಂತ ಸೇವೆಯ ಕಾರ್ಯಕ್ರಮ ಸಕಲ ಮರ್ಯಾದೆಯೊಂದಿಗೆ ದೇವಸ್ಥಾನದ ಪೂರ್ವ ಬಾಗಿಲಿನಿಂದ ಶಿವ-ಪಾರ್ವತಿಯರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಧ್ವಜಸ್ತಂಭ ಪ್ರದಕ್ಷಿಣೆಯೊಂದಿಗೆ ದೇವಾಲಯದ ದಕ್ಷಿಣಭಾಗದ ಮುಂಭಾಗದ ಮಾರ್ಗದ ಮೂಲಕ ಏಕಾಂತ ಸೇವಾ ಸ್ಥಳಕ್ಕೆ ಉತ್ಸವಮೂರ್ತಿ ಬಂದ ನಂತರ ಏಕಾಂತ ಸೇವಾ ಸ್ಥಳದಲ್ಲಿ ಮರೆಯಲ್ಲಿ (ಪರದೆ) ಷೋಡಶೋಪಚಾರಗಳನ್ನು ಮಾಡಿ ನಾರಿಕೇಳ (ತೆಂಗಿನಕಾಯಿ) ನೈವೇಧ್ಯ ಮಾಡಿಸಿ, ಮಂಗಳಾರತಿ, ಪುಷ್ಪಾಂಜಲಿಗಳಿಂದ ತದನಂತರ ಋಗ್ಯಜು: ಸಾಮಾರ್ಥವೇದೋಷ, ನಿಷತ್ಪಂಚಾಂಗ ಶಾಸ್ತ್ರ, ಪುರಾಣೇತಿಹಾಸ, ಗೀತನರ್ತನ

ಪ್ರಮುಖೋಪಚಾರ ನಂತರ ಮಂಗಳಾರತಿ ಮಾಡಿ ಕುಭಾರತಿ ಸೇವೆಯಾದ ನಂತರ ತಾಂಬೂಲ ತಟ್ಟೆಯನ್ನು ಏಕಾಂತ ಸೇವಾ ಮಂದಿರದಲ್ಲಿ ಇಡಲಾಗುತ್ತದೆ. ತೀರ್ಥ ಪ್ರಸಾದ ಸ್ವೀಕಾರ ವಾದನಂತರ ಜಲಪೂರಿತ ಕಲಶವನ್ನು ಶಯನ ಗೃಹದಲ್ಲಿಟ್ಟು ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಏಕಾಂತ ಸೇವಾ ಗೃಹದಲ್ಲಿರುವ ಮಂಚದ ಮೇಲೆ ಉತ್ಸವ ಮೂರ್ತಿಗಳನ್ನು ಮಲಗಿಸಿಟ್ಟು ಮೇಲು ಹೊದಿಕೆಯನ್ನು ಹೊಚ್ಚಿ ಏಕಾಂತ ಸೇವಾ ಗೃಹದ ಬಾಗಿಲು ಹಾಕಿಕೊಂಡು ಬರುವುದರೊಂದಿಗೆ ನಿತ್ಯದ ತ್ರಿಕಾಲ ಪೂಜೆ ಮುಗಿಯುತ್ತದೆ.

ಸೋಮವಾರ, ಶುಕ್ರವಾರ, ಅಮಾವಾಸ್ಯೆ, ಹುಣ್ಣಿಮೆ, ಕಾರ್ತಿಕಮಾಸ ಪೂರ್ತಿ ತೊಟ್ಟಿಲು ಸೇವೆ ಇದಕ್ಕೆ ಉಯ್ಯಾಲೆ ಸೇವೆ ಎಂತಲೂ ಕರೆಯಲಾಗುತ್ತದೆ. ಈ ಸೇವೆಯನ್ನು ಏಕಾಂತಸೇವೆ ಮಾಡುವ ಪೂರ್ವದಲ್ಲಿ ನಡೆಸಲಾಗುತ್ತಿದ್ದು ದೇವಾಲಯದ ಮುಖಮಂಟಪದಲ್ಲಿ ನಡೆಯುತ್ತದೆ. ಆಗಮಿಕಶಾಸ್ತ್ರ ರೀತ್ಯಾ ಪೂಜಾ ವಿಧಾನಗಳು ನಡೆಯುತ್ತಿದ್ದು, ಈ ಕಾರ್ಯಕ್ರಮದಲ್ಲಿ "ಪಂಚಾರತಿ" ಅಂದರೆ ಏಕ, ದ್ವಿತೀಯ, ತೃತೀಯ, ಚರ್ತು, ಪಂಚಮ ಆರತಿಗಳ ಸೇವೆ ನಡೆಯುತ್ತದೆ. ಈ ಉಯ್ಯಾಲೆ ಸೇವೆ ನಡೆದ ನಂತರ ಕ್ರಮ ದೈನಂದಿನ ಕ್ರಮದಂತೆ ಏಕಾಂತ ಸೇವೆ ನಡೆಯುತ್ತದೆ.

ಈ ದೈನಂದಿನ ಪೂಜಾ ಕೈಂಕರ್ಯದಲ್ಲಿ ತೊಡಗಿದ ಸಿಬ್ಬಂದಿಯವರಿಗೆ ಅವರು ಮಾಡಬೇಕಾದ ಕರ್ತವ್ಯಗಳನ್ನು ದೇವಾಲಯದ ರೀತಿ ರಿವಾಜಿನಂತೆ ನಿಗದಿಪಡಿಸಲಾಗಿರುತ್ತದೆ. ಪ್ರಥಮ ಪೂಜಾರಿ, ದ್ವಿತೀಯ ಪೂಜಾರಿ (ಅಸಿಸ್ಟೆಂಟ್) ಆಗಮಿಕರು, ಮಂತ್ರ ಪುಷ್ಪದವರು, ಜೋಯಿಸರು, ಉಗ್ರಾಣೀಕರು, ಬಲಿಕಲ್ಲು ತೊಳೆಯುವವರು, ಬಿಂದಿಗೆ ಸೇವೆಯವರು, ಅಡಿಗೆಯವರು, ಅಖಂಡದವರು, ಆವರಣದೇವತೆಗಳ ಪೂಜಾರರು, ಕಾವಲುಗಾರರು, ಕಸ ತೆಗೆಯುವವರು, ಬಜಂತ್ರಿಗಳು ಬಿಲ್ವಪತ್ರೆ ತರುವವರು, ಅಂಗ ಜಾಲಿಕರು (ನೀರು ಕಟ್ಟುವರು), ಕಾಮಾಟಿಗರು ಹೀಗೆ ದೇವಾಲಯದ ಬಾಗಿಲುಗಳನ್ನು ಹಾಕಿ ಅರಗಿನ ಮುದ್ರೆ ಯೊತ್ತಿ ಬೆಳಿಗ್ಗೆ ದೇವಾಲಯದ ಬಾಗಿಲಿನ ಅರಗಿನ ಮುದ್ರೆ ತೆಗೆಯುವ ಕೆಲಸ ವೇಳೆಗೆ ಸರಿಯಾಗಿ ನಡೆಯುತ್ತದೆ. ಈ ದೇವಾಲಯದ ಸಿಬ್ಬಂದಿಗಳನ್ನು ಒಳ ಸಿಬ್ಬಂದಿ, ಹೊರ ಸಿಬ್ಬಂದಿಯವರೆಂದು ಅವರವರ ಕೆಲಸಗಳನ್ನು ನಿಗದಿಪಡಿಸಲಾಗಿದ್ದು, ದೇವಾಲಯದಲ್ಲಿ ಮುಖ್ಯ ಅರ್ಚಕರು ದೇವಾಲಯದಲ್ಲಿರುವ ಕರ್ತವ್ಯದ ಗಂಟೆಯನ್ನು ಬಾರಿಸಿದಾಗ ಸಂಬಂಧಿಸಿದ ಒಳ ಸೇವಾ ಸಿಬ್ಬಂದಿ ಕೆಲಸ ಪ್ರಾರಂಭವಾಗುತ್ತದೆ. ತಮ್ಮ ತಮ್ಮ ಕರ್ತವ್ಯಗಳಲ್ಲಿ ತೊಡಗುತ್ತಾರೆ. ಉತ್ಸವಾದಿಗಳ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ವೇಳೆಗೆ ಸರಿಯಾಗಿ ನಡೆಯುತ್ತವೆ.

ಈ ಮೇಲಿನ ಕಾರ್ಯಕ್ರಮಗಳಲ್ಲಿ ದೈನಂದಿಕವಾಗಿ ನಡೆಯುವ ಪೂಜಾ ಕಾರ್ಯಕ್ರಮಗಳಿಗೆ "ನಿತ್ಯಗಟ್ಲೆ" ಎಂದೂ "ಹೆಚ್ಚುಗಟ್ಲೆ" ಕಾರ್ಯಕ್ರಮದಲ್ಲಿ ಪ್ರತಿಕಾಲಾರ್ಚನೆ, ಮಹಾ ಶಿವರಾತ್ರಿ, ಪಕ್ಷೋತ್ಸವ, ಮಾಸೋತ್ಸವ, ಪಣಿಮಾನೋತ್ಸವ, ಸಂವತ್ಸರೋತ್ಸವ, ಗಿರಿ ಪ್ರದಕ್ಷಿಣಾ ಉತ್ಸವ, ತೆಪ್ಪೋತ್ಸವ, ರಥೋತ್ಸವ ಇವುಗಳಲ್ಲಿ

"ಉರಿ" ಕಾರ್ತಿಕ ಮಾಸದ ಶುದ್ಧ ಹುಣ್ಣಿಮೆಯೆಂದು ಚೊಕ್ಕದಹನೋತ್ಸವ, "ಸಿರಿ" ಮಾರ್ಗಶಿರ ಬಹುಳ ಬಿದಿಗೆಯಂದು "ಫಲಪೂಜಾ ಉತ್ಸವ", "ಸಂಪತ್ತು" ಚೈತ್ರಶುದ್ಧ ತ್ರಯೋದಶಿ ಮತ್ತು ಹುಣ್ಣಿಮೆಯಂದು ಶ್ರೀ ವಿರೂಪಾಕ್ಷಸ್ವಾಮಿಯ ಕಲ್ಯಾಣೋತ್ಸವ ಮತ್ತು ಬ್ರಹ್ಮ ರಥೋತ್ಸವಗಳು ಈ ಕ್ಷೇತ್ರದಲ್ಲಿ ನಡೆಯುವ ಪ್ರಾಮುಖ್ಯವಾದ ಉತ್ಸವಗಳಾಗಿವೆ.

ನೈವೇದ್ಯ

ನಿತ್ಯೋತ್ಸವದ ಪೂಜಾ ಕಾಲದಲ್ಲಿ "ಪೂಜಾಂಗಹೋಮ"ದೊಂದಿಗೆ ನೈವೇದ್ಯ ಸಿದ್ಧಪಡಿಸಲಾಗುತ್ತಿದೆ. ತ್ರಿಕಾಲ ಪೂಜೆಯಲ್ಲಿ ಏಕಕಾಲದ ಪೂಜೆಗೆ (ಬೆಳಿಗ್ಗೆ) ಅನ್ನ ನೈವೇದ್ಯ ಇದನ್ನೇ ಬಲಿಹರಣಕ್ಕಾಗಿ ಉಪಯೋಗಿಸಲಾಗುತ್ತಿದೆ. ದ್ವಿಕಾಲದ ಪೂಜೆಯ (ಮಧ್ಯಾಹ್ನ) ನೈವೇದ್ಯಕ್ಕೆ ಅನ್ನ, ಸಾರು, ಹೋಳಿಗೆ, ಪಾಯಿಸ, ಚಿತ್ರಾನ್ನ, ಕೋಸಂಬರಿ, ಬಲಿಹರಣ ಕಾರ್ಯಕ್ಕೆ ಅನ್ನವನ್ನು ಬಳಸಲಾಗುತ್ತದೆ. ತ್ರಿಕಾಲ ಪೂಜೆಯಲ್ಲಿ (ಸಾಯಂಕಾಲ) ಅನ್ನವನ್ನು ನೈವೇದ್ಯವಾಗಿ ಬಳಸಲಾಗುತ್ತದೆ. ಶುಕ್ರವಾರ ಅಮ್ಮನವರಿಗೆ ಉದ್ದಿನವಡೆ ನೈವೇದ್ಯ ವಿಶೇಷವಾಗಿರುತ್ತದೆ. ಜೊತೆಗೆ ಸೋಮವಾರ ಮತ್ತು ಶುಕ್ರವಾರದ ಏಕಾಂತ ಸೇವೆಯ ಕಾಲಕ್ಕೆ ಕೋಸಂಬರಿ ಉಪಯೋಗಿಸಲಾಗುತ್ತದೆ. ಉಳಿದ ಉತ್ಸವಾದಿಗಳ ಕಾಲಕ್ಕೆ ಫಲ-ನಾರಿಕೇಳ, ತಾಂಬೂಲಗಳನ್ನು ಬಳಸುವ ಕ್ರಮವನ್ನು ದೇವಾಲಯದ "ಡಿಟ್ಟಂ" ಪ್ರಕಾರ ನಿಗದಿಪಡಿಸಲಾಗುತ್ತದೆ. ದೇವಾಲಯದ ರೀತಿ-ರಿವಾಜುಗಳನ್ವಯ ಈ ಪ್ರಸಾದದ ಸ್ವೀಕಾರ ಸೇವನೆಗಳ ಬಗ್ಗೆ ನಿಗದಿಪಡಿಸಲಾಗುತ್ತಿದೆ. ವಿಶೇಷ ಉತ್ಸವಾದಿಗಳಲ್ಲಿ ಹೆಚ್ಚುಕಟ್ಟೆಯಾಗಿ ದೇವಾಲಯದ "ಡಿಟ್ಟಂ" ಪ್ರಕಾರ ನೈವೇದ್ಯದ ವ್ಯವಸ್ಥೆ ಮಾಡಲಾಗುತ್ತದೆ.

ಐತಿಹಾಸಿಕ ಹಿನ್ನೆಲೆ

"ಪಂಪಾಕ್ಷೇತ್ರ"ವೆಂದು ಪೌರಾಣಿಕ ಹಿನ್ನೆಲೆಯಲ್ಲಿ ಆಧ್ಯಾತ್ಮಿಕ ಪವಿತ್ರ ಸ್ಥಳವೆಂದು ಋಷಿಮುನಿಗಳ ದೇವಾನು-ದೇವತೆಗಳ ವಾಸಸ್ಥಾನವೆಂದು ಪ್ರಖ್ಯಾತಿ ಪಡೆದ ಈ ಕ್ಷೇತ್ರ ಮುಂದೆ "ವಿರೂಪಾಕ್ಷ ಪಾದ", "ವಿರೂಪಾಕ್ಷ ತೀರ್ಥ", "ವಿರೂಪಾಕ್ಷ ಪಟ್ಟಣ", "ಹೊಸಪಟ್ಟಣ", "ವಿದ್ಯಾನಗರ", "ವಿಜಯನಗರ" ಹೀಗೆ ಹಲವಾರು ಹೆಸರುಗಳಿಂದ ಐತಿಹಾಸಿಕವಾಗಿ ಪ್ರಾಮುಖ್ಯತೆಯನ್ನು ಪಡೆದು ಈ "ಹಂಪಿ" ಇಂದು ವಿಶ್ವಪಂಪರೆಯಲ್ಲಿ ಸ್ಥಾನ ಹೊಂದಿ ಜಗತ್ತಿನ ರಾಷ್ಟ್ರಗಳ ಗಮನ ಸೆಳೆದಿದೆ.

"ಹಂಪಿ" ಈ ಹೆಸರು ಸಾವಿರಾರು ವರ್ಷಗಳ ಹಿಂದಿನ ಶಾಸನಗಳಲ್ಲಿ ಉಲ್ಲೇಖಿತವಾದುದನ್ನು ಕಾಣಬಹುದು. ಬಾದಾಮಿ ಚಾಲುಕ್ಯರು ವಿನಯಾದಿತ್ಯನು ಹಂಪೆಗೆ ಬಂದಿರುವ ಸಂಗತಿಯನ್ನು ಕ್ರಿ.ಶ. ೬೯೧ರ ತೇಗರ್ಚೇಡು ತಾಮ್ರ ಶಾಸನದಲ್ಲಿರುವುದು ತಿಳಿಯುತ್ತದೆ. ಪಲ್ಲವರ ಮಹಾರಾಣಿಯೊಬ್ಬಳು ಪಂಪಾಪತಿಗೆ ಭೂದಾನ ನೀಡಿದ ವಿಷಯ ಕ್ರಿ.ಶ. ೧೧೧೩ರ ಗೋಣಿಹಾಳು ಶಾಸನದಲ್ಲಿದೆ. ವಿರೂಪಾಕ್ಷ ದೇವಾಲಯದಲ್ಲಿರುವ ಒಂದು

ಶಾಸನವು (ಕ್ರಿ.ಶ. ೧೧೯೯) ವಿರೂಪಾಕ್ಷ ಮತ್ತು ಪಂಪಾದೇವಿಯವರಿಗೆ ದಾನ ನೀಡಿದ ಸಂಗತಿಯನ್ನು ತಿಳಿಸುತ್ತದೆ. ವಿರೂಪಾಕ್ಷ ದೇವಾಲಯದ ಉತ್ತರ ದಿಕ್ಕಿನ ಗೋಪುರದಲ್ಲಿಯ ಶಾಸನ (ಕ್ರಿ.ಶ. ೧೨೩೭) ಹೊಯ್ಸಳರು ಕಲ್ಯಾಣದ ಚಾಲುಕ್ಯರ ಆಡಳಿತದ ಬಗ್ಗೆ ತಿಳಿಸುತ್ತದೆ. ವಿರೂಪಾಕ್ಷನ ನಿಷ್ಠಾವಂತ ಭಕ್ತರಾದ ಹರಿಹರ-ರಾಘವಾಂಕನು ಹಂಪೆಯಲ್ಲಿ ವಾಸವಾಗಿದ್ದು ತಮ್ಮ ಕಾವ್ಯಕೃತಿಗಳನ್ನು ರಚಿಸಿದ್ದು ಈ ಎಲ್ಲಾ ಅಂಶಗಳು ವಿಜಯನಗರದ ಸ್ಥಾಪನೆಯ ಪೂರ್ವದಲ್ಲಿಯೇ ಈ "ಹಂಪೆ" ಒಂದು ಪ್ರಸಿದ್ಧ ಪುಣ್ಯಕ್ಷೇತ್ರವಾಗಿತ್ತೆಂಬುದನ್ನು ತಿಳಿಸುತ್ತದೆ.

ಕ್ರಿ.ಶ. ೧೩೩೬ರಲ್ಲಿ ವಿದ್ಯಾರಣ್ಯರ ಪ್ರೇರಣೆಯಿಂದ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯವು ಸಂಗಮವಂಶ, ಸಾಳ್ವವಂಶ, ತುಳುವಂಶ, ಅರವೀಡು ವಂಶಗಳ ಆಳ್ವಿಕೆಯಲ್ಲಿ ಈ ಕ್ಷೇತ್ರದ ಬೆಳವಣಿಗೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿರುವುದನ್ನು ಕಾಣುತ್ತೇವೆ. ಕೃಷ್ಣದೇವರಾಯನ ಕಾಲದಲ್ಲಿ ಕ್ರಿ.ಶ. ೧೫೧೦ರಲ್ಲಿ ಅಂದರೆ ತನ್ನ ಪಟ್ಟಾಭಿಷೇಕದ ಸವಿನೆನಪಿಗಾಗಿ ಕಟ್ಟಿಸಿದ ದೇವಾಲಯದ ಮುಖಮಂಟಪ ಇಂದು ಹಲವಾರು ವಿಜಯನಗರದ ಕಾಲದ ಶಿಲ್ಪಕಲೆಯ ಆಯಾಮಗಳನ್ನು ತಿಳಿಸಲು ಸಹಾಯಕವಾಗಿದೆ. ಇದೇ ವೇಳೆಗೆ "ರಾಯರ ಗೋಪುರ" ಕಟ್ಟಿಸಿದ್ದು, ಹಿರಿಯ ಗೋಪುರ ಜೀರ್ಣೋದ್ಧಾರಗೊಳಿಸಿದ್ದು ವಿಜಯನಗರದ ಅರಸರು ಶ್ರೀ ವಿರೂಪಾಕ್ಷೇಶ್ವರನ ಮೇಲಿರುವ ಅನನ್ಯ ಭಕ್ತಿಯನ್ನು ಶ್ರದ್ಧೆಯನ್ನು ತೋರಿಸುತ್ತದೆ. ವಿದೇಶಿ ಯಾತ್ರಿಕರಾದ ನಿಕೊಲೊಕೊಂತಿ, ಅಬ್ದುಲ್ ರಜಾಕ್, ಪಾಯೋಸ್..... ಇತ್ಯಾದಿ ಇವರು ವಿಜಯನಗರ ವೈಭವದ ಬಗ್ಗೆ ವರ್ಣಿಸಿರುವ ಹೆಸರು ದಾಖಲೆಗಳಿಂದಲೂ ಅರಿಯಬಹುದಾಗಿದೆ.

ಈ ದೇವಾಲಯದ ದೈನಂದಿನ ಪೂಜಾ ಹಾಗೂ ಉತ್ಸವಾದಿಗಳ ವ್ಯವಸ್ಥೆಗಾಗಿ ದಾನ-ಧರ್ಮ-ದತ್ತಿಗಳನ್ನು ನೀಡಿರುವುದನ್ನು ಕಾಣುತ್ತೇವೆ. ಇಂದಿಗೂ ಉತ್ಸವಾದಿಗಳಲ್ಲಿ ಹಾಗೂ ವಿಶೇಷ ಸಂದರ್ಭಗಳಲ್ಲಿ ಬಳಸಲಾಗುತ್ತಿರುವ ಶ್ರೀ ವಿರೂಪಾಕ್ಷನ ಸುವರ್ಣ ಮುಖವಾಡ, ಕಲಿ ತುರಾಯಿ, ಛತ್ರಿಯಿಂದ ಒಳಗೊಂಡಿರುವುದನ್ನು ಕೃಷ್ಣದೇವರಾಯನು ಮಾಡಿಸಿಕೊಟ್ಟಿದ್ದೆಂಬುದನ್ನು ಹಾಗೂ ವಿಜಯನಗರದ ಸಾಮ್ರಾಜ್ಯದ ಪ್ರಪ್ರಥಮ ಮಹಾರಾಜರುಗಳಾದ (ಸಂಗಮ ವಂಶ) ಶ್ರೀ ಕೃಷ್ಣದೇವರಾಯರು ಶ್ರೀ ಬುಕ್ಕದೇವರಾಯರು ತಮ್ಮ ರಾಜಗುರುಗಳಾಗಿದ್ದ ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳವರಿಗೆ ಅರ್ಪಿಸಿದ ನವರತ್ನ ಖಚಿತವಾದ ಕರ್ಣಕುಂಡಲಗಳ ಸಹಿತವೂ ಶ್ರೀ ರಾಮ ಪಂಚಾಯತನವು, ಎರಡು ಮಯೂರ ಚಿಹ್ನೆಯುಳ್ಳ ಸುವರ್ಣ ಮುಕುಟ ಚಿನ್ನದ ಮಂಟಪ, ಚಿನ್ನದ ಪಾದುಕೆಗಳು, ಸ್ಫಟಿಕಮಾಲೆ, ಮುತ್ತಿನ ಸರ, ಅವಲಕ್ಕಿ ಸರ, ನಾಗಾಭರಣಯುಕ್ತವಾದ ವಿದ್ಯಾಶಂಕರ ಸ್ಪಟಿಕ ಲಿಂಗದ ಕವಚ ಇನ್ನಿತರ ಆಭರಣಗಳು ಮತ್ತು ಬೆಳ್ಳಿಯವಿಗ್ರಹ, ಪಾತ್ರೆಗಳು ಇಂದಿಗೂ ನಡೆಯುವ ಉತ್ಸವಾದಿಗಳಲ್ಲಿ ಹಾಗೂ ಬ್ರಹ್ಮ ರಥೋತ್ಸವಗಳಲ್ಲಿ ಶ್ರೀಗಳು ಗತವೈಭವ ರಾಜ ಮರ್ಯಾದೆ, ಬಹುಪರಾಕಿನೊಂದಿಗೆ ವಿಜಯನಗರದ ಅರಸರ ಕೊಡಮಾಡಿದ ಐತಿಹಾಸಿಕ ಆಭರಣಗಳೊಂದಿಗೆ ಭಕ್ತಾದಿಗಳಿಗೆ ದರ್ಶನ ನೀಡುತ್ತಿದ್ದಾರೆ.

ಹೈದರಾಬಾದಿನ ನಿಜಾಮ ದೊರೆಗಳು ಶ್ರೀ ವಿರೂಪಾಕ್ಷ ವಿದ್ಯಾರಣ್ಯ ಮಹಾಪೀಠಾದೀಶ್ವರರಿಗೆ ನೀಡಿರುವ ಬೆಳ್ಳಿಯ ಕಲಾಪತ್ತಿನ ಕುಸುರಿನ ಕೆಲಸದ ನಿಲುವಂಗಿ ಹಾಗೂ ಇಸ್ಲಾಂ ಮತದ ಮುಸಲ್ಮಾನರಿಗೂ ಶ್ರೀ ವಿರೂಪಾಕ್ಷ ವಿದ್ಯಾರಣ್ಯರ ಮೇಲಿನ ಪ್ರಭಾವ-ಭಕ್ತಿಯನ್ನು ತೋರಿಸುತ್ತದೆ. ಈ ಮೇಲಿನ ಚಿನ್ನಾಭರಣ ಮತ್ತು ನಿಜಾಮದೊರೆಯ ಕಾಣಿಕೆಗಳು ಸರ್ಕಾರದ ರಕ್ಷಣೆಯಲ್ಲಿವೆ.

ಇಂದಿಗೂ ಈ ಕ್ಷೇತ್ರದಲ್ಲಿ ನಡೆಯುವ "ಉರಿ ಸಿರಿ ಸಂಪತ್ತು" ಎನ್ನುವ ಧಾರ್ಮಿಕ ಉತ್ಸವದಲ್ಲಿ ಪಂಪಾಕ್ಷೇತ್ರ ಪೌರಾಣಿಕ ಹಿನ್ನೆಲೆಯಲ್ಲಿ ಹಾಗೂ ಐತಿಹಾಸಿಕ ಮಹತ್ವದೊಂದಿಗೆ ಅತೀ ವೈಭವ, ವಿಜೃಂಭಣೆಯಿಂದ ಜರುಗುತ್ತವೆ. "ಉರಿ" ಇದು ಕಾರ್ತೀಕ ಶುದ್ಧ ಹುಣ್ಣಿಮೆಯಂದು ಚೊಕ್ಕದಹನ ಕಾರ್ಯಕ್ರಮವೆಂದು, "ಸಿರಿ" ಎಂಬುದು ಮಾರ್ಗಶಿರ ಬಹುಳ ಬಿದಿಗೆಯೆಂದು "ಶಿವ ಪಾರ್ವತಿಯರ" ನಿಷ್ಕರ್ಷ (ನಿಶ್ಚಿತಾರ್ಥ) ಕಾರ್ಯಕ್ರಮವೆಂದು "ಫಲಪೂಜಾ" ಹೆಸರಿನಲ್ಲಿ ನಡೆಯುತ್ತದೆ. ಈ ಕ್ಷೇತ್ರದ ಅತ್ಯಂತ ಮಹತ್ವದ ಉತ್ಸವಾದಿಗಳಲ್ಲಿಯೇ ಉತ್ಸವ ರಾಜನೆಂಬ ಖ್ಯಾತಿಯು "ಸಂಪತ್ತು" ಚೈತ್ರ ಶುದ್ಧ ತ್ರಯೋದಶಿ ಮತ್ತು ಹುಣ್ಣಿಮೆಯಂದು ಶ್ರೀ ವಿರೂಪಾಕ್ಷ ಕಲ್ಯಾಣೋತ್ಸವ ಮತ್ತು ಬ್ರಹ್ಮ ರಥೋತ್ಸವ ಅತ್ಯಂತ ಅದ್ದೂರಿಯಿಂದ ಪೌರಾಣಿಕ ಹಾಗೂ ಐತಿಹಾಸಿಕವಾದ "ಸಂಪತ್ತು"ಗಳ ಹಿನ್ನೆಲೆಯಲ್ಲಿ "ಹಂಪಿ ಬಜಾರದ" ಅಂದರೆ ದೇವಸ್ಥಾನದ ಮುಂಭಾಗದ ವಿಶಾಲವಾದ ರಸ್ತೆಯಲ್ಲಿ ಎರಡು ರಥೋತ್ಸವಗಳು ನಡೆಯುತ್ತಿದ್ದು "ಗತವೈಭವದ" ಚಿರಸ್ಮರಣೆಗಳನ್ನು ನೀಡುತ್ತದೆ. ಈ ಉತ್ಸವಾದಿಗಳ ಬಗ್ಗೆ ಅಹೋಬಲ ಕವಿಯು ಕಣ್ಣಾರೆ ಕಂಡದ್ದನ್ನು ಯಥಾವತ್ತಾಗಿ ತನ್ನ ವಿರೂಪಾಕ್ಷ ವಸಂತೋತ್ಸವ ಚಂಪೂ ಕಾವ್ಯದಲ್ಲಿ ಸಂಸ್ಕೃತ ಶ್ಲೋಕ ಗದ್ಯವ್ಯಾಖ್ಯಾನ ಸಹಿತವಾಗಿ ರಚಿಸಿರುವುದು ಈ ಉತ್ಸವಾದಿಗಳ ಮಾಹಿತಿಯನ್ನು ಅರಿಯಲು ಸಹಕಾರಿಯಾಗಿರುತ್ತದೆ.

ಉಪಸಂಹಾರ

ಹಂಪಿ ಶ್ರೀ ವಿರೂಪಾಕ್ಷ ದೇವಾಲಯದಲ್ಲಿ ನಡೆಯುವ ದೈನಂದಿನ ಪೂಜಾ ಕೈಂಕರ್ಯದ ಕಾಲಕ್ಕೆ ಬಾರಿಸುವ ದೊಡ್ಡ ಘಂಟೆ ಹಾಗೂ ವಾದ್ಯಗಳ ಶಬ್ದ ನಿಶಬ್ಧವಾಗಿರುವ ಪಂಪಾಕ್ಷೇತ್ರದಲ್ಲಿ ಪಸರಿಸಿ, ಭಾರತೀಯ ಆಧ್ಯಾತ್ಮಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಬಿಂಬಗಳನ್ನು ಒಟ್ಟಾರೆಯಾಗಿರಿಸಿರುವ "ಜೇನುಗೂಡ"ನ್ನು ಕದಡಿ ಝೇಂಕಾರದೊಂದಿಗೆ ಜೀವಂತವಾಗಿರುವ ಪಾರಂಪರಿಕ ಪರಿಸರವನ್ನು ನಿರ್ಮಾಣ ಮಾಡುತ್ತದೆ. ದಕ್ಷಿಣದ ಭಾರತೀಯ ಉತ್ಕೃಷ್ಟವಾದ ಧರ್ಮಸಂಸ್ಕೃತಿ ಪರಂಪರೆಗಳ ಸಂಪನ್ಮೂಲಗಳ ಆಗರವಾಗಿರುವ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ ಹೊಂದಿದ ಈ ಕ್ಷೇತ್ರವು ವಿಶ್ವಪರಂಪರೆಗೆ ಸೇರಿ ವಿಶ್ವದ ಜನತೆಯನ್ನು ತನ್ನತ್ತ ಆಕರ್ಷಿಸುತ್ತಿದೆ.

ಗ್ರಂಥಋಣ

೧. ಡಾ. ಪಾಟೀಲ ಚೆನ್ನಬಸಪ್ಪ ಎನ್ ಮತ್ತು ವಿನೋದಾ ಪಾಟೀಲ, ೧೯೯೬, "ವಿಜಯನಗರದ (ಹಂಪೆಯ) ಶಾಸನಗಳು", ಮೈಸೂರು, ವಿರೂಪಾಕ್ಷ ವಿದ್ಯಾರಣ್ಯರು (ಸಂಗ್ರಹ) ಶ್ರೀ ಪಂಪಾ ಮಹಾತ್ಮೆ, ಹಂಪಿ, ೧೯೯೨

೨. ಮಲಶೆಟ್ಟಿ ಬಸವರಾಜ, "ಹಂಪೆಯ ಒಂದು ಪರಿಚಯ", ಜಗದ್ಗುರು ಕೊಟ್ಟೂರು ಮಠ, ಹೊಸಪೇಟೆ, ಹಂಪಿ, ೧೯೮೧

೩. ಡಾ. ಸೋಮಶೇಖರ ಎನ್.ವೈ. "ಹಂಪೆಯ ಬಜಾರಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ದೇವರಕೊಂಡಾರೆಡ್ಡಿ, "ಪಂಪಾತೀರ್ಥ" ವಿಜಯನಗರ ಅಧ್ಯಯನ ಸಂಪುಟ-೩, ಹಂಪಿ ಉತ್ಸವ, ೧೯೯೭

೪. ದಾವಣಗೇರಿ ಚಂದ್ರಶೇಖರ ವಿ. "ಭಾರತದ ಹಬ್ಬಗಳ ಮಹತ್ವ", "ದಿಕ್ಸೂಚಿ" ಮಾಸಪತ್ರಿಕೆಯ ೬೩ನೇ ಬಹುಮಾನಿತ ಪ್ರಬಂಧ, ಡಿಸೆಂಬರ್, ೧೯೯೭

೫. ದಾವಣಗೇರಿ ಚಂದ್ರಶೇಖರ ವಿ. "ಧಾರ್ಮಿಕ ಉತ್ಸವಾದಿಗಳು", "ಸಿರಿಗನ್ನಡ" ದ್ವಿ ಮಾಸಿತ ಪತ್ರಿಕೆ, ಮೇ, ಜೂನ್, ೧೯೯೯

೬. ದಾವಣಗೇರಿ ಸಿಂದೂರಾಣಿ ಸಿ. "ತುಂಗಭದ್ರ ತೀರದಲ್ಲಿ", "ಸಿರಿಸಂಪದ" ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ, ರಾಣೆಬೆನ್ನೂರು, ೨೦೦೦

೭. ದಾವಣಗೇರಿ ಚಂದ್ರಶೇಖರ ವಿ. "ಧಾರ್ಮಿಕ ಉತ್ಸವಾದಿಗಳನ್ನು ಸಾರ್ವತ್ರಿಕವಾಗಿ ಆಚರಿಸುವುದು ಅವಶ್ಯವೇ?", "ಸತ್ಯ ಶುದ್ಧ ಕಾಯಕ" ಬೃಹನ್ಮಠ, ಚಿತ್ರದುರ್ಗ, ೧೯೯೨

❖ ❖

೨೨

ವಿಜಯನಗರ ಕಾಲದಲ್ಲಿ ಕೆಪ್ಪಿಲಿ-ಕಲುವಳಿ-ಕೆಳಲೆ ನಾಡಿನ ಶಾಸನೋಕ್ತ ಪಾಳೆಯಪಟ್ಟುಗಳು

ಎಂ.ಜಿ.ನಾಗರಾಜ್

ಪಾಳೆಯಗಾರನ ನೆಲವೀಡು ಅವನ ಪಾಳೆಯಪಟ್ಟು ಎನಿಸಿಕೊಳ್ಳುತ್ತದೆ. ಪಾಳೆ ಎಂದರೆ ರೈತನು ಭೂ ಒಡೆಯನಿಗೆ ಕೊಡುವ ಹಣ ಎಂದಾಗಿದೆ. ಅಂದರೆ ಅದು ಕಂದಾಯವೆ. ಪಾಳೆಯ ಎಂದರೂ ಪಾಳೆ, ಪಡೆ, ದಂಡಿನರಾಣ್ಯ ಎಂಬ ಅರ್ಥಗಳಿವೆ. ಕ್ರಿ.ಶ. ೧೧೩೫ರ ಶಾಸನವೊಂದು 'ಗುತ್ತಿಯ ದಣ್ಡನಾಯಕಂ ಸಂಬುದೇವನಂ ಪಾಳೆಯದ ಸಾವಾಸಿ ಆನನ್ದ ಭಟ್ಟನುಂ... ಇನ್ತಿನಿಬರುವಿರ್ದು' ಎಂದಿದೆ. ಈ ದೃಷ್ಟಿಯಿಂದ ಕಂದಾಯಪಡೆಯ, ಸೈನ್ಯ ನಿರ್ವಹಿಸುವ ಒಂದು ಚಿಕ್ಕ ಸೀಮೆಯ ಅಥವಾ ನಾಡಿನ ಅಧಿಪತಿ, ತುಂಡುನಾಯಕ, ತುಂಡರಸ, ಸಣ್ಣ ಮಾಂಡಲಿಕ ಎಂಬೆಲ್ಲ ಅರ್ಥಗಳನ್ನು ಹೇಳಬಹುದು.

ಇವುಗಳಲ್ಲಿ ವಿವಿಧ ವಿಭಾಗಗಳಿದ್ದು, ಸೇನಾಯಕರೆನಿಸಿ ನಾಡಿನ ಸಾಮ್ರಾಜ್ಯದ ದೊರೆ, ಚಕ್ರವರ್ತಿಯಿಂದ 'ಅಮರಂ' ಪಡೆದು ನೆರವಾಗುತ್ತಿದ್ದ ನಾಯಕರು ವಿಜಯನಗರ ಕಾಲದಲ್ಲಿ ಅಮರನಾಯಕರೆನಿಸಿದರು. ಅದಾಗಿ ಕರ್ನಾಟಕದಲ್ಲಿ ಪಾಳೇಗಾರ ವ್ಯವಸ್ಥೆ ಅಂದರೆ ಪಾಳೆಯ ಪಟ್ಟು, ಪಾಳೆಯಗಾರ ವಂಶಗಳು ವಿಜಯನಗರ ಕಾಲದಲ್ಲಿ ರೂಪುಗೊಂಡವು. ಇವಕ್ಕೆ ಹಕ್ಕಬುಕ್ಕರು ಕಾಕತೀಯ ನಾಯಂಕಾರ ವ್ಯವಸ್ಥೆಯಿಂದ ಪ್ರೇರಣೆ ಪಡೆದು ಅಳವಡಿಸಿಕೊಂಡರು ಎಂದೆಲ್ಲ ಹೇಳಲಾಗಿದೆ. ಕಾಕತೀಯ ಗಣಪತಿದೇವನ (೧೧೯೯-೧೨೬೨) ಮರಿಮೊಮ್ಮಗ (೧೨೮೯-೧೩೨೩) ಇಮ್ಮಡಿ ಪ್ರತಾಪರುದ್ರ ತನ್ನ ಕಾಲದ ಪ್ರಬಲ 'ಪದ್ಮನಾಯಕ' ಕುಲಕ್ಕೆ ಸೇರಿದ ೭೭ ನಾಯಕ ಸಮೂಹದ ನೆರವಿನಿಂದ ಆಡಳಿತ ನಡೆಸಿದ ಬಗ್ಗೆ ಮೆಕೆಂಜಿ ಸಂಗ್ರಹವು ಹೇಳುತ್ತದೆ.[೧] ಸಂಗಮಪುತ್ರರಾದ ಹಕ್ಕಬುಕ್ಕರು ಕಾಕತೀಯರಲ್ಲಿ ಭಂಡಾರಿಗಳಾಗಿದ್ದ ಬಗ್ಗೆ

ಕೊಡಮೂರಿನ ಶಾಸನದ ಸೂಚನೆಯನ್ನನುಸರಿಸಿ ಡಾ. ಜಿ.ಎಸ್.ದೀಕ್ಷಿತ್ ಅವರು ಖಚಿತಗೊಳಿಸುತ್ತಾರೆ.[೨] ಅದಾಗಿ ಮೇಲ್ಸೂಚಿತ ಅಳವಡಿಕೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ನಂತರ ಅಳವಡಿಸಿಕೊಂಡರೆನ್ನುವುದಕ್ಕೆ ಪೋಷಣೆ ಇದರಿಂದ ದೊರೆಯಬಹುದು ಸರಿ. ಆದರೆ ಕಾಕತೀಯ ನಾಯಂಕಾರ ವ್ಯವಸ್ಥೆಯ ತದ್ರೂಪ ವಿಜಯನಗರದವರಲ್ಲಿ ಕಾಣದೆ ಬೇರೆ ಆಯಾಮಗಳನ್ನು ಹೊಂದಿತ್ತೆನ್ನಬೇಕು. ಇದಕ್ಕೆ ಪಾರಂಪರಿಕವಾಗಿ ಕರ್ನಾಟಕದಲ್ಲಿ ಪಾಳೆಯಪಟ್ಟು-ನಾಯಕತನ ಆಯಾ ಕಾಲದ ಅಗತ್ಯಕ್ಕನುಗುಣವಾಗಿ ಬೇರೆ ಬೇರೆ ಹೆಸರುಗಳಲ್ಲಿ ಕಾಣಬರುವುದುಂಟು. ಮುಖ್ಯವಾಗಿ ವಿಜಯನಗರದ ಅರಸರಿಗೆ ಪ್ರೇರಣೆ ದೊರಕಿದ್ದು ಹೊಯ್ಸಳರ ಕಾಲದ ಪಾಳೆಯಪಟ್ಟಿನ ವ್ಯವಸ್ಥೆಯ ಕಾರಣವಾಗಿದೆ. ಜೊತೆಗೆ ಕಾಕತೀಯರದನ್ನು ಗಮನಿಸಿ ತಮ್ಮ ಸಂದರ್ಭಕ್ಕೆ ಅಳವಡಿಸಿಕೊಂಡರೆನ್ನುವುದುಚಿತ. ಇದಕ್ಕೆ ಸ್ಪಷ್ಟವಾಗಿ ಹೊಯ್ಸಳರ ಕಾಲದ ಗುಮ್ಮನಾಯಕಪಾಳ್ಯ ಸಂಸ್ಥಾನ ಕ್ರಿ.ಶ. ೧೨೪೨ ರಲ್ಲಿಯೇ ಅಂದರೆ ವಿಜಯನಗರದ ಸಂಸ್ಥಾಪನೆಯ ನೂರು ವರ್ಷ ಪೂರ್ವದಲ್ಲಿಯೇ ಆರಂಭವಾಯಿತು ಎಂದು ಎಂ.ಎಸ್.ಪುಟ್ಟಣ್ಣನವರ 'ಪಾಳೆಯಗಾರರ ಚರಿತ್ರೆ ಸರಣಿ'ಯನ್ನು ಅನುಸರಿಸಿ ಡಾ. ಎಂ.ಪಿ.ಕೃಷ್ಣರಾವ್ ಹೇಳಿದ್ದಾರೆ. ಇಂದಿನ ರಾಜ್ಯಾಡಳಿತ, ಪೌರನೀತಿ, ಸಾಮಾಜಿಕ ಜೀವನಕ್ಕೆ ಗೌಡದೊರೆಗಳು (ವಿಜಯನಗರದ ಅಧೀನರಾಗಿದ್ದ) ಕಾಲದ ಆಡಳಿತವೇ ಮೂಲವಸ್ತು ಎಂದಿದ್ದಾರೆ. ವಿಜಯನಗರಕಾಲದ ಪಾಳೆಯಪಟ್ಟು ಅಮರನಾಯಕ ವ್ಯವಸ್ಥೆ ಎನಿಸಿ ಮೂರುವರ್ಗವನ್ನು ಹೊಂದಿತ್ತು. ಈ ನಾಯಕರ ಪ್ರಾಮುಖ್ಯವು, ಭೌಗೋಳಿಕ ಸ್ಥಾನ, ಗಾತ್ರ, ಸಂಪನ್ಮೂಲವನ್ನವಲಂಬಿಸಿತ್ತು. ವಿಜಯನಗರ ಸಮಗ್ರತೆ, ಪ್ರಭುತ್ವ ರಕ್ಷಣೆಗಾಗಿ ಅವರು ಸದಾ ಎಚ್ಚರದಿಂದಿರುವ ಸೈನ್ಯ ಹಾಗೂ ರೈತರ ನೆರವು ಮತ್ತು ಆರ್ಥಿಕ ಸಂಪನ್ಮೂಲರಾಗಿ ಬೆಂಬಲ ಕೊಡುವ ಅವಶ್ಯಕತೆ ಇತ್ತು. ಆದರೆ ಇವರೇ ಮುಂದೆ ವಿಜಯನಗರ ಪತನಾನಂತರ ಸ್ವತಂತ್ರ ಪಾಳೆಪಟ್ಟನ್ನು ಹೊಂದಿ ತಮ್ಮ ಅರಸು ವಂಶವನ್ನು ರೂಪಿಸಿಕೊಂಡರು.

ಅಮರನಾಯಕರಲ್ಲಿ ಮೊದಲ ವರ್ಗದವರಿಗೆ, ಡೋಲಿ, ಪಲ್ಲಕ್ಕಿ, ರಾತ್ರಿ ಪಂಜುಗಳನ್ನು ನಿಗದಿತವಾಗಿ ಉರಿಸುವ ಅವಕಾಶವಿತ್ತು. ಇಟ್ಟುಕೊಳ್ಳಬೇಕಾದ ಸೈನ್ಯದ ಪ್ರಮಾಣ ವರಮಾನ ಆಧಾರಿತವಾಗಿತ್ತು; ರಾಜನಿಗೆ ಸಲ್ಲಿಸಬೇಕಾದ ವಾರ್ಷಿಕ ಹಣ ಹಾಗೂ ಅದಕ್ಕೆ ಅನುಗುಣವಾಗಿ ಹೊರಬೇಕಾದ ಹೊಣೆ ಇತ್ತು ಎಂದು ನ್ಯೂನಿಜ್ ಹೇಳಿದ್ದಾನೆ (ಉದಾ: ಬಂಕಾಪುರ, ಬೂದಿಹಾಳು, ಕಳಲೆ, ಮಂಗಳೂರಿನ ಪಾಳೆಯಪಟ್ಟುಗಳು). ಇದರ ಜೊತೆ ಪಂಚವಾದ್ಯಗಳ ಬಳಕೆಯ ಅರ್ಹತೆ, ಸಾಮಂತ ಸಿಂಹಾಸನ, ಚಾಮರ, ಪಲ್ಲಕ್ಕಿ, ಅಶ್ವಾರೋಹಿಪಡೆ, ಆನೆಗಳನ್ನಿಟ್ಟುಕೊಳ್ಳಬಹುದಾಗಿತ್ತು ಎಂದು ಸಿವೆಲ್ ಹೇಳಿದ್ದಾನೆ. ಚಕ್ರವರ್ತಿಯ ಅನುಮತಿ ಬೇಡದೆ ಗ್ರಾಮದಾನ ಮಾಡುವ ಅಧಿಕಾರ, ತಾವು ಸೇನಾ ನಾಯಕರಾಗಿ ಅಧೀನ ನಾಯಕರನ್ನು ನೇಮಿಸಿಕೊಳ್ಳುವ (ನಿರ್ಮಿಸಿಕೊಳ್ಳುವ) ಅಧಿಕಾರ, ಕೋಟೆ, ಸೇನಾ ನಿರ್ವಹಣೆ, ಸ್ವಂತ ನಾಣ್ಯ ಚಲಾವಣೆ (ಲಕ್ಕಣ್ಣ ದಂಡನಾಯಕ: ಒಂದು ಉದಾ) ಇತ್ಯಾದಿ ಅಧಿಕಾರಗಳಿದ್ದವು.

ಎರಡನೇ ವರ್ಗದ ಅಮರನಾಯಕರಿಗೆ ಚಕ್ರವರ್ತಿಯ ಹೆಸರನ್ನು ಉಲ್ಲೇಖಿಸದೆ ಭೂಮಿಯನ್ನು ದಾನಮಾಡುವ ಅಧಿಕಾರವಿರಲಿಲ್ಲ. (ಸಾಳುವ ನರಸಿಂಹನ ಕಾಲದಲ್ಲಿ ಚನ್ನಪಟ್ಟಣದ ದೊರೆ ಚಕ್ಕಲೂರು ಗ್ರಾಮದ ದೊಡ್ಡಯ್ಯನಿಗೆ ತೆರಿಗೆ ಮನ್ನಾ ಮಾಡಿ ದಾನ ನೀಡುವಲ್ಲಿ ಆ ವಿಜಯನಗರದರಸನ ನಾಮೋಲ್ಲೇಖ ಮಾಡಿ ನೀಡಲಾಗಿದೆ; ಕೃಷ್ಣದೇವರಾಯನ ಕಾಲದಲ್ಲಿ ಚನ್ನಪಟ್ಟಣ ಸೀಮೆಯ ಅಮರನಾಯಕನಾದ ಕೆಂಚ ಸೋಮಣ್ಣ ಕೂಡಲೂರಿನ ಕೆರೆ ದುರಸ್ತಿ ಸಂದರ್ಭದಲ್ಲಿ ಪ್ರಭುವಿನ ಹೆಸರನ್ನು ಅಭ್ಯುದಯ ಕೋರುವ ಮೂಲಕ ಉಲ್ಲೇಖ ಮಾಡಿದ್ದಾನೆ) ಈ ವರ್ಗಕ್ಕೆ ಸೇರಿದವರಿಗೆ ಕೆಲವಾರು ಹಳ್ಳಿಗಳು ಮಾತ್ರ ವಶಕ್ಕಿದ್ದು, ಚಿಕ್ಕಸೈನ್ಯದ ತುಕಡಿ ನಿರ್ವಹಣೆಯ ಅಧಿಕಾರವಿತ್ತು ಮತ್ತು ಸಂಪನ್ಮೂಲದ ಮಿತಿ ಇತ್ತು.

ಮೂರನೇ ವರ್ಗದ ಅಮರನಾಯಕರು ಚಕ್ರವರ್ತಿಯ ನೇರ ನಿಯಂತ್ರಣ ಅಥವಾ ಅಧೀನ ರಾಜನ ಹತೋಟಿಯಲ್ಲಿರುತ್ತಿದ್ದರು. ಭೂದಾನ ಮಾಡಲು ಪೂರ್ವಾನುಮತಿ ಪಡೆಯಬೇಕಾಗಿತ್ತು (ಹೊಳಲ್ಕೆರೆ ಹಡಪದ ಬೈಯಪೇಂದ್ರ ಬ್ರಾಹ್ಮಣ ವಿದ್ವಾಂಸರಿಗೆ ಈ ರೀತಿ ಭೂಮಿ ನೀಡಲು ಚಕ್ರವರ್ತಿಯ ಪೂರ್ವಾನುಮತಿ ಕೋರಿದ್ದ).

ಒಂದನೇ ವರ್ಗದ ಅಮರನಾಯಕರು ಯುದ್ಧಗಳಲ್ಲಿ ಸೇನೆಯನ್ನು ನಡೆಸುತ್ತಿದ್ದರು. ಎರಡನೇ ವರ್ಗದ ನಾಯಕರಲ್ಲಿ ಅನೇಕರು ದಂಡನಾಯಕರಾಗಿದ್ದರು. ಮೂರನೇ ವರ್ಗದ ನಾಯಕರಲ್ಲಿ ಅನೇಕ ಸಣ್ಣನಾಯಕರುಗಳಿದ್ದು, ಯುದ್ಧ, ದಂಡಯಾತ್ರೆ, ಸಾಮ್ರಾಜ್ಯ ಸಂಘಟನೆಯಲ್ಲಿ ಚಕ್ರವರ್ತಿಯ ಸೈನ್ಯಗಳಲ್ಲಿ ಸೇರಿ ಕಾರ್ಯಪ್ರವೃತ್ತರಾಗುತ್ತಿದ್ದರು. ಈ ಅಮರನಾಯಕರಲ್ಲಿ ಅನೇಕರು ಮಹಾಮಂಡಲೇಶ್ವರರ ಅಧೀನದಲ್ಲಿರುತ್ತಿದ್ದರು. (ಸದಾಶಿವರಾಯನ ಕಾಲದಲ್ಲಿ ಕೊಂಡರಾಜಯ ಮಹಾಮಂಡಲೇಶ್ವರನಿಗೆ ಅಮರನಾಯಕನಾಗಿ ಕೊಂಡಮನಾಯಕ ಇದೆ). ವಿಜಯನಗರ ಕಾಲದ ನಂತರವೂ ಈ ವ್ಯವಸ್ಥೆ ತನ್ನದೇ ಆದ ಪ್ರಭಾವ ಯಾತ್ರೆ ಚೌಕಟ್ಟಿನ ಆಡಳಿತಕ್ಕೂ ನಾಂದಿ ಆಗಿತ್ತೆನ್ನಬೇಕು.

ಈ ಪಾಳೆಯಗಾರರು ಸಾಮಾನ್ಯವಾಗಿ ವಿಜಯನಗರ ಆಡಳಿತ ಪದ್ಧತಿಯನ್ನು ಮುಂದುವರಿಸಿದರು. ಸ್ಥಳೀಯ ಅಗತ್ಯ, ರಾಜಕೀಯ ಪರಿಸ್ಥಿತಿಗನುಗುಣವಾಗಿ ಆಡಳಿತ ವ್ಯವಸ್ಥೆಯಲ್ಲಿ ಹಲವಾರು ಮಾರ್ಪಾಟುಗಳನ್ನು ಮಾಡಿಕೊಂಡರು. ಅಂದರೆ ವಿಜಯನಗರ ಸಾಮ್ರಾಜ್ಯದ ಕೇಂದ್ರೀಕೃತ ಪದ್ಧತಿಯನ್ನು ಸರಳಗೊಳಿಸಿದರು. ಜನಸಾಮಾನ್ಯರಿಂದ ಎದ್ದುಬಂದು ಅವರಿಗೆ ಸಮೀಪವಿದ್ದರು. ದೊಡ್ಡ ರಾಜಮನೆತನದವರಂತೆ ದೈವೀಕರಣಕ್ಕೆಳೆಸಿಕೊಳ್ಳದೆ ಜನರೊಡನೆ ಬೆರೆತು ನಿಕಟಗೊಂಡಿದ್ದರು. ಹೀಗಾಗಿ ಹೆಚ್ಚಿನ ವೈಭವ, ಅಟ್ಟಹಾಸ, ದರ್ಪವನ್ನು ತೋರಲಿಲ್ಲ. ಜನತೆಯ ಕಷ್ಟ ನಿಷ್ಠುರಗಳಲ್ಲಿ ಭಾಗಿಗಳಾಗಿದ್ದರು. ಅದು ಜನ ಮಿಳಿತವಾದದ್ದಾಗಿ ಸಾಮ್ರಾಜ್ಯಾಡಳಿತಕ್ಕಿಂತ ಬೇರೆ ಎನಿಸಿತು. ವಿಜಯನಗರೋತ್ತರದಲ್ಲಿ ಅರಾಜಕತೆಯ ಭೀತಿಯು ದಕ್ಷಿಣಭಾರತದ ಜನತೆಗೆ ರಾಜಕೀಯ ಭದ್ರತೆಯನ್ನು ಕೊಟ್ಟಿದ್ದು ಈ ವ್ಯವಸ್ಥೆಯ ಹಿರಿಮೆ. ಪಾಳೆಗಾರರು ನಿಂತ ನೆಲೆಯಲ್ಲಿ

ಭದ್ರವಾದ ಕೋಟೆ ಕೊತ್ತಲು ಕಟ್ಟಿ ಜನರಿಗೆ ರಕ್ಷಣೆ, ನೆಮ್ಮದಿ ಒದಗಿಸಿದರು. ಸೈನ್ಯ ವ್ಯವಸ್ಥೆ ಅಚ್ಚುಕಟ್ಟಾಗಿತ್ತು. ಪಾಳೇಗಾರ ಸೈನಿಕರು ಶಿಸ್ತಿನ ಸ್ವಾಮಿ ನಿಷ್ಠರಾಗಿದ್ದರು. ಪಾಳೇಗಾರರ ನೆರವು ವಿಜಯನಗರದ ದೊರೆಗಳಿಗೆ ಮೊದಲಿನಿಂದಲೂ ಇತ್ತು. ಗುಲ್ಬರ್ಗಾದ ಕೋಟೆ ಗೆಲ್ಲಲು ಕಷ್ಟವಾದಾಗ ಅಸಾಮಾನ್ಯ ವೀರ ಚಿತ್ರದುರ್ಗದ ಮತ್ತಿ ತಿಮ್ಮಣ್ಣನಾಯಕನನ್ನು ದೊರೆಗಳು ಕೇಳಿಕೊಂಡಾಗ ಸಾಧಿಸಿಕೊಟ್ಟ. ಬಿಜಾಪುರದ ನವಾಬನ ಸೈನ್ಯವನ್ನು ರಾಮರಾಯನ ನಿರೂಪದಂತೆ ಕೆಳದಿಯ ಮೂರನೇ ಅರಸ ಸದಾಶಿವನಾಯಕನು ಸೋಲಿಸಿ, ಕಲ್ಬುರ್ಗಿ ಕಲ್ಯಾಣದುರ್ಗವನ್ನು ವಶಪಡಿಸಿಕೊಂಡ. ನವಾಬನನ್ನು ಕೈಸೆರೆಹಿಡಿದು ಚಕ್ರವರ್ತಿಗೊಪ್ಪಿಸಿದ.[೩] ಒಟ್ಟಾರೆ ವಿಜಯನಗರದಂಥ ಬೃಹತ್ ಸಾಮ್ರಾಜ್ಯದ ನಿರ್ವಹಣೆಗಾಗಿ, ಕಾನೂನುವ್ಯವಸ್ಥೆಯ ಪಾಲನೆಗಾಗಿ, ಸೈನ್ಯಗಳ ನೆರವಿನಿಂದ ಸಾಮ್ರಾಜ್ಯ ವಿಸ್ತರಣೆಗಾಗಿ ಜನತೆ ಹಾಗೂ ಚಕ್ರವರ್ತಿಗಳ ನಡುವಣ ಕೊಂಡಿಯಾಗಿ ಈ ಅಮರನಾಯಕನ ವ್ಯವಸ್ಥೆ ಕೆಲಸ ಮಾಡುತ್ತಿತ್ತು. ಆದರೆ ಚಕ್ರವರ್ತಿಯ ಹತೋಟಿ ಪ್ರಬಲರ ಮೇಲೆ ಸಮರ್ಥವಿದ್ದಷ್ಟೂ ಈ ವ್ಯವಸ್ಥೆ ಕೆಲಸ ಮಾಡಿತು. ತಾಳಿಕೋಟೆ ಯುದ್ಧಾನಂತರ ಸಾಮ್ರಾಜ್ಯ ಶಿಥಿಲವಾಗಿ ಅಮರನಾಯಕರು ಸ್ವತಂತ್ರ ನಾಯಕರಾಗಿ ಬೆಳೆದರು.[೪]

'ಅಮರನಾಯಕರು' ಹೆಸರಿನ ವರ್ಗವಲ್ಲದೆ ಮಹಾಮಂಡಲೇಶ್ವರ, ಮಹಾನಾಯಕಾಚಾರ್ಯ (ಗುಮ್ಮನಾಯಕನ ಪಾಳೆಪಟ್ಟು), ಮಹಾಸಾಮಂತಾಧಿಪತಿ (ಮೊಯಿಲೆನಾಯಕ ಚನ್ನಪಟ್ಟಣ ೧೬ ಐಜೂರು, ಕ್ರಿ.ಶ. ೧೩೫೧; ಶಾಂಬೈಯ್ಯ ನಾಯಕ ಕೋಲಾರ ೩೫-೩೭ ಶೀತೆಬೆಟ್ಟ), ಮಹಾ ಅರಸು (ನರಸಯದೇವ: ಕೋಲಾರ ೩೪, ಶೀತಿಬೆಟ್ಟ ಕ್ರಿ.ಶ. ೧೪೯೨), ವರ್ಗಪಾಲಕರು (ಇಮ್ಮಡಿ ಬೈಚೇಗೌಡ ಆವತಿನಾಡ ಪ್ರಭು, ಕ್ರಿ.ಶ. ೧೬೫೧, ವೆಂಕಟಪತಿದೇವರಾಯ, ಶಿಡ್ಲಘಟ್ಟ ೩೧, ಬೂದಿಹಾಳು ಶಾಸನ), ಮಹಾಪ್ರಭು (ಮಳಲೂರು, ಚ.ಪ. ೧೪೮, ಮಹಾಪ್ರಭು ಕತ್ತಿಗೌಡ ಕ್ರಿ.ಶ. ೧೪೧೪) ಇತ್ಯಾದಿ ಸ್ಥಾನೋನ್ನತ ನಾಮ ಸಹಿತವಾದ ವರ್ಗದ ನಾಯಕ ವಿಂಗಡನೆಯೂ ಇತ್ತು.

ಈ ಪಾಳೆಯಪಟ್ಟುಗಳು ಒಂದು ರೀತಿಯಲ್ಲಿ ಒಂದು ಸಾಮ್ರಾಜ್ಯ ಅಥವಾ ರಾಜ್ಯಾಡಳಿತದ ಜನಪದಮುಖಿಯಾಗಿ ತಮ್ಮ ಸಾಂಸ್ಕೃತಿಕ ಮಣಿಹವನ್ನು ಮುಂದುವರಿಸಿದವು. ಒಂದು ಬಗೆಯ Normal Curvature ಅವುಗಳ ಬೆಳವಣಿಗೆಯಲ್ಲಿ ಕಾಣುತ್ತದೆ. ಜನಪದ-ಬುಡಕಟ್ಟು ಮೂಲದಿಂದ ಹುಟ್ಟಿ ಶಿಷ್ಟೀಕರಣದ ಮೂಲವನ್ನು ಕಾಲಾಂತರದಲ್ಲಿ ಆರೋಪಿಸಿಕೊಂಡು, ರಾಜ್ಯ ಕಟ್ಟಿ ಸಡಗರಗೊಂಡು ಮತ್ತೆ ಇಳಿಗಾಲ ಕಂಡು ಸಾಮಾನ್ಯ ಪಾಳೆಪಟ್ಟಾಗಿ ಮುಕ್ತಾಯಗೊಳ್ಳುವ ಬಗೆ ಕಾಣುತ್ತದೆ. (ಗಂಗ, ಚಾಲುಕ್ಯ, ಕಂದಬ, ಹೊಯ್ಸಳ, ವಿಜಯನಗರ, ಕೆಳದಿ, ಚಿತ್ರದುರ್ಗ, ಚಂಗಾಳ್ವ, ಕೊಂಗಾಳ್ವ ಇತ್ಯಾದಿ)

ಎಂ.ಎಸ್.ಪುಟ್ಟಣ್ಣನವರು ಹೇಳುವಂತೆ ಪಾಳೆಯಗಾರರೆಂದರೆ 'ದಂಡಿನೊಡನೆ ಪಾಳೆಯವನ್ನು ಹಾಕಿ ಇಳಿದುಕೊಂಡು ಕದನಕ್ಕೆ ಸಿದ್ಧನಾದವ' ಎಂಬ ಸಾಮಾನ್ಯ ಅರ್ಥ ಮೀರಿ ವಿಜಯನಗರಕಾಲದ ಅಮರನಾಯಕರು ಕಾಣಿಸಿಕೊಳ್ಳುತ್ತಾರೆ. ಅವರೇ ಹೇಳುವಂತೆ

ಇಂದಿನ ರಾಜ್ಯಾಡಳಿತ ಪೌರನೀತಿ, ಸಾಮಾಜಿಕ ಜೀವನಕ್ಕೆ ಗುಮ್ಮನಾಯಕನ ಪಾಳೆಪಟ್ಟಿನಂಥ ಹೊಯ್ಸಳರ ಕಾಲದ ಪಾಳೆಪಟ್ಟಿನ ವ್ಯವಸ್ಥೆ ಕರ್ನಾಟಕದಲ್ಲಿದ್ದು ಪ್ರೇರಣೆ ನೀಡಿವೆ. ಅದಕ್ಕೂ ಮುಂಚೆ ಕೆಲವು ಚಿಕ್ಕ ಪಾಳೆಪಟ್ಟಿನವರು ಇದ್ದಂತೆ ಕಾಣುವುದು ಎಂದಿದ್ದಾರೆ.[೫] ಈ ಬಗ್ಗೆ ದಾನಿವಾಸದ ಪಾಳೆಗಾರರ ಉಗಮದ ಬಗ್ಗೆ ಶಾಸನದ ಸಾಕ್ಷ್ಯವೊಂದು ಗಮನಾರ್ಹವಾಗಿದೆ. ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ ತಾ. ಬಾಳೆಹೊನ್ನೂರು ಹೋಬಳಿ ಲಿಂಗಾಪುರ ಶಾಸನದ ರೀತ್ಯಾ (ನರಸಿಂಹರಾಜ, ಪುಟ ೩೬, ಕ್ರಿ.ಶ. ೧೫೫೩) ವಿಜಯನಗರದ ಸದಾಶಿವರಾಯನ ಕಾಲದಲ್ಲಿ ದಾನಿವಾಸದ ವಿರೂಪಾಕ್ಷ ಅರಸರ ಮಗನಾದ ಚಂನರಾಯವೊಡೆಯರ ಮಗ ಲಿಂಗಣನಾಯಕ ದಾನಿವಾಸದ ಕೆರೆಯಮೇಲೆ ವಿರೂಪಾಕ್ಷದೇವರನ್ನು ಪ್ರತಿಷ್ಠಾಪಿಸಿ ಶಾಸನೋಕ್ತವಾಗಿ ದಾನಾದಿಗಳನ್ನು ನೀಡಿದ. ಆ ಶಾಸನದಲ್ಲಿ 'ಹಳೇಬೀಡ ಶ್ರೀ ವೀರ ಹೊಯಿಸಳ ಬಲ್ಲಾಳ ಮಹಾರಾಯರು ನಮಗೆ ವಂಶಾನ್ವಯವಾಗಿ ನಾಯಕತನಕೆ ಪಾಲಿಸಿದ ದಾನಿವಾಸದ ಸೀಮೆ'ಯೊಳಗೆ ದಾನಿವಾಸದ ಪಟ್ಟಣಸ್ಥಳಕೆ ಎಂದಿದ್ದು, 'ನಾಯಕತನಕೆ' ಎಂಬ ಶಬ್ದ ಗಮನಾರ್ಹವಾಗಿದೆ. ಅಂದರೆ ವಿಜಯನಗರ ಪೂರ್ವದ ಹೊಯ್ಸಳರ ಕಾಲದಲ್ಲಿಯೆ ಪಾಳೆಪಟ್ಟು ನಾಯಕತನದ ವ್ಯವಸ್ಥೆ ಇಲ್ಲಿದ್ದ ಬಗ್ಗೆ ತಿಳಿಯುತ್ತದೆ. ಹೀಗೆಯೇ ಚನ್ನಪಟ್ಟಣ ತಾ ಬೇವೂರಿನ ಅರ್ಕೇಶ್ವರ ದೇಗುಲ ನೆರೆಗಿದ್ದ ಕೆರೆಯ ಅಂಗಳದಲ್ಲಿ ಇರುವ ಶಾಸನದಲ್ಲಿ (ಎ.ಕ. ೯- ಅನುಬಂಧ, ಶಾಸನ ಸಂಖ್ಯೆ ೨೧೦; ಕ್ರಿ.ಶ.ಸು. ೯೮೫) 'ಜಿತಂ ಭಗವತೀ ಲಾಂಛನ ಲಾಂಬಿತಂ ... ಇರುವ ಬೆಡಂಗಂ ಚಳಿತಸಗರನುಂ ಶ್ರೀ ಬೀರಮಣಲೇರನ ಪಾದಪಂಕಜ ಜೀವಿಸಮಸ್ತ ರಾಜ್ಯಭರನಿಣ ಸಮ್ಪನ್ನಂ... ಪರಮ ಮಾಹೇಶ್ವರ... ಶ್ರೀ ಪೆರ್ಗ್ಗಡೆ ಶಂಕಯ್ಯನುಂ ಲೇವೂರಗಾವುತಿಯ ಗಂಗಮೂವಡಿ ಬೀರಮಣಲೇರನ ಅನುಮತದೊಳೀತ ಸಂವಂತ್ಸರ ಶತಂಗ ೯೦೭ ರನೆಯ ಪಾರ್ತ್ಥಿವ ಸಂವತ್ಸರ... ಬೆಂಪೂರ ಪರಿಯಕೆರಿಗೆ ಬಿತ್ತುವತ್ತುಂ...'

ಹೀಗೆ ಬರುವ ಸಾಲುಗಳಲ್ಲಿ ಅರಸ ಬೀರಮಣಲೇರನ ಅನುಮತಿಯಿಂದ ಪೆರ್ಗ್ಗಡೆ ಶಂಕಯ್ಯನು ಬಿತ್ತುವಟ್ಟವನ್ನು ದಾನ ನೀಡಿರುವ ಸಂಗತಿ ಸೂಚಿತವಿದೆ. ಅಂದರೆ ಇದೊಂದು ರೀತಿ ಮೂರನೆವರ್ಗದ ಅಮರನಾಯಕರಂತೆ ಅನುಮತಿ ಪಡೆದು, ದೊರೆಯ ಹೆಸರನ್ನು ಶಾಸನೋಕ್ತ ಮಾಡಿ ದಾನ ನೀಡುವ ಸಂಗತಿಯಾಗಿದೆ. ಹೀಗಾಗಿ ಗಂಗರ ಕಾಲದಲ್ಲಿಯೇ ವಿಜಯನಗರದ ಪಾಳೆಯಪಟ್ಟಿನ ನಾಯಕರಂಥ ಪೂರ್ವ ಮಾದರಿಯೊಂದು ಕಾಣಸಿಗುತ್ತದೆ. ಅಂದರೆ ಇಂಥ ಒಂದು ಪರಂಪರೆ ಕರ್ನಾಟಕದಲ್ಲಿಯೇ ಇದ್ದು, ಕೊನೆಗೆ ಅದನ್ನು ಪಾಲಿಸದ ಹೊಯ್ಸಳರ ಮೂಲಕ ವಿಜಯನಗರದರಸರಿಗೆ ಪೂರ್ವ ಮಾದರಿಯೂ, ಪ್ರೇರಣೆ ಒದಗಿಸಿರಲೂ ಸಾಕು.

ಆಂಧ್ರದಲ್ಲಿ ಗಣಪತಿದೇವನ ಕಾಲದಿಂದ ರೂಢಿಗೆಬಂದು ಹದಗೆಟ್ಟಿದ್ದ 'ನಾಯಂಕಾರ' ವ್ಯವಸ್ಥೆಯನ್ನು ಪದ್ಮ (ಪೆದ್ದ!) ನಾಯಕ ವೇಲಮ ಜನಾಂಗದಿಮದ ೭೭ ನಾಯಕರನ್ನು ಪುನರ್ ರೂಪಿಸಿ ಈ ಎಲ್ಲ ನಾಯಕರನ್ನು ಲೆಂಕರನ್ನು ಮಂತ್ರಿಗಳನ್ನು ಕುಲಭೇದವಿಲ್ಲದೆ

ತನ್ನೊಡನೆ ಸಹಪಂಕ್ತಿ ಭೋಜನಕ್ಕೆ ೨ನೆಯ ಕಾಕತೀಯ ಪ್ರತಾಪರುದ್ರ ಆಹ್ವಾನಿಸಿದ; ಹೀಗಾಗಿ ನಾಯಂಕಾರ ವ್ಯವಸ್ಥೆ ಪ್ರಜಾಸತ್ತಾತ್ಮಕವಾಗಿ ಬೆಳೆಯಲನುಕೂಲವಾಯಿತು.[೬] ಈ ವ್ಯವಸ್ಥೆಗೆ ಪ್ರತಾಪರುದ್ರನು ಒಳಪಡಿಸಿದವರಲ್ಲಿ ೨೦೦ ನಾಯಕರು, ೭೪ ಕುಟುಂಬಗಳಿಗೆ ಸೇರಿದ ಮುಖ್ಯರಿದ್ದರು. ಈ ಪದ್ಮನಾಯಕರನ್ನು ಸನ್ಮಾನಿಸಿ ನಾಯಕತ್ವಕ್ಕೆ ಆರಿಸಿ ಒಂದೊಂದು ಕೊತ್ತಳಕ್ಕೆ ಒಬ್ಬೊಬ್ಬರನ್ನು ನೇಮಿಸಿ ಸರ್ವ ಸಂಪನ್ನಭರಿತರನ್ನಾಗಿಸಿ, ಧನಕನಕ ವಾಹನ ಚಿನ್ನ ವಸ್ತ್ರಾಲಂಕಾರ, ಛತ್ರ ಚಾಮರ ಸಹಿತವಾಗಿ ಬಿರುದುಗಳನ್ನು ನೀಡಿದ. ೭೭ ಗೋತ್ರ, ೭೭ ಜನ ಬಹುಮಾನಿತ ೭೭ ಕೊತ್ತಳ ಅವಕ್ಕೆ ೭೭ ನಾಯಕರು ಇರುವಂತೆ ಒಂದೊಂದು ಭಾಗವನ್ನು ಹಂಚಿದ್ದ.

ವಿಜಯನಗರದರಸರಿಗೆ ಹೀಗೆ ಹೊಯ್ಸಳ ಹಾಗೂ ಕಾಕತೀಯರ ನಾಯಕ ವ್ಯವಸ್ಥೆಯ ಪರಿಚಯ, ಹಿನ್ನೆಲೆ ತಿಳಿದಿತ್ತು. ಅದಾಗಿ ಕರ್ನಾಟಕದ ಮೂಲಪದ್ಧತಿಗೆ, ಆಂಧ್ರದ ವ್ಯವಸ್ಥೆಯ ಅಂಗವನ್ನು ಬಳಸಿಕೊಂಡು ತಮ್ಮ ಪರಿಷ್ಕಾರ, ಆವಿಷ್ಕಾರಗಳನ್ನು ಒದಗಿಸಿಕೊಂಡರು. ಆದರೆ ವಿಜಯನಗರ ಕಾಲದ ನಿಖರವರ್ಗೀಕರಣದ ನಾಯಕ ವ್ಯವಸ್ಥೆಗೆ ಕಾಕತೀಯ ಪ್ರಭಾವ ಎಂಬ ಮಾತಿಗೆ ಒತ್ತು ಸಿಕ್ಕಿ, ಹಿಂದಿನ ಕರ್ನಾಟಕದ ಪಾಳೆಯಪಟ್ಟುಗಳ ಅಧ್ಯಯನ ಸಮಗ್ರವಾಗಿ ನಡೆಯದ ಕಾರಣ, ಆ ಮಾತಿಗೆ ಪ್ರಚಾರಗೊಂಡಿರುವಂತಿದೆ. ಈ ದೃಷ್ಟಿಯಿಂದ ಬೆಂಗಳೂರು ಜಿಲ್ಲೆಯ ಶಾಸನೋಕ್ತ ಕೆಮ್ಗಿಲಿ (= ಕೆಳಲೆ) ನಾಡಿನ ವಿಜಯನಗರ ಪೂರ್ವ ಹಾಗೂ ವಿಜಯನಗರ ಕಾಲದ ಪಾಳೆಯಪಟ್ಟುಗಳನ್ನು ಸದ್ಯ ಗಮನಿಸಲಾಗಿದೆ. ಈ ಪಾಳೆಯಪಟ್ಟುಗಳು ಇಂದಿನ ರಾಮನಗರ, ಚನ್ನಪಟ್ಟಣ ಹಾಗೂ ಮದ್ದೂರು ತಾಲೂಕಿನ ಕೆಲ ಭಾಗಗಳಲ್ಲಿ ಹರಡಿಕೊಂಡಿದ್ದವು. ಹೊಯ್ಸಳ, ವಿಜಯನಗರ ಅರಸರಲ್ಲಿ ಪಾಳೆಯಪಟ್ಟುಗಳು ಪ್ರಚಲಿತವಾಗುವ ವೇಳೆಗೆ 'ಕೆಮ್ಗಿಲಿನಾಡು' ಎಂಬ ಹೆಸರೂ ರೂಪಾಂತರಗೊಂಡಿರುವುದೂ ಕಾಣಬರುತ್ತದೆ.

ಕೆಮ್ಗಿಲಿನಾಡು ಪ್ರದೇಶದ ಗ್ರಾನೈಟ್ ಬಂಡೆಗಳು ೨ ಬಿಲಿಯನ್ ವರ್ಷದಷ್ಟು ಹಳೆಯವು. ನವ ಹಾಗೂ ಬೃಹತ್ ಶಿಲಾಯುಗದ ಪ್ರಾಗೈತಿಹಾಸಿಕ ಜನರ ವಾಸ್ತವ್ಯವಿದ್ದ ನೆಲೆ. 'ಕೆಮ್ಗಿಲಿ ನಾಡು' ಎಂಬ ಶಬ್ದ (ಸ್ಥಳನಾಮ) ಐತಿಹಾಸಿಕವಾಗಿ ಕ್ರಿ.ಶ.ಸು. ೭೬೮ರ ರಾಮನಗರದ (ಬೆಂಗಳೂರು ಜಿಲ್ಲೆ) ಐಜೂರಿನ ರಣಪಾರನ ಹೊಸ ಶಾಸನದಲ್ಲಿ ಮೊಟ್ಟಮೊದಲಿಗೆ ಕಂಡುಬರುತ್ತದೆ.[೭] ಆನಂತರದ ಕಾಲದ ಬೇರೆ ಬೇರೆ ಶಾಸನಗಳಲ್ಲಿ ಕೆಳಲು ಕವಿಲೆ ಕೆಳ=ರೆ, ಕೈಲ, ಕೆಲಲೆ, ಕೆಳಲೆ, ಕಲೆಳ, ಕಲುವಳಿ, ಕಲುವೊಳೆ, ಕೆಳವಲನಾಡು, ಕೆಲುವಳಿನಾಡು, ಕಲುವರೆನಾಡು ಹಾಗೂ ತಮಿಳು ಪ್ರಭಾವಿತ ಸ್ಥಳನಾಮವಾಗಿ ಕಿಳಲೈ, ಕಿವಿಲೈನಾಡು, ಕಿವಿಲೈನಾಟ್ಟು ಎಂದೆಲ್ಲ ಕಂಡುಬರುತ್ತದೆ.'[೮] ಇದು ಬೆಂಗಳೂರು ಜಿಲ್ಲೆಯ ಶಾಸನಗಳಲ್ಲಿ ಕಂಡುಬಂದರೆ ಮಂಡ್ಯಜಿಲ್ಲೆ, ಮದ್ದೂರು ತಾಲೂಕು ಶಾಸನಗಳಲ್ಲಿ ಕೆಳಲಿ, ಕೆವಿಲೆ, ಕೆಲಲೆ, ಕೆಳಲೆನಾಡು, ಕೆಳಲೆನಾಡ ವಿಷಯ ಕಿವಿಲೈನಾಟ್ಟು, ಕೆಳನಾಡು ವಿಷಯ, ಕೆಳಲೆಯ ಹಳೆಸೀಮೆ ಎಂದೆಲ್ಲ ಕಾಣಿಸಿಕೊಂಡಿವೆ.[೯] ಚನ್ನಪಟ್ಟಣ ತಾಲೂಕು ಕೂಡ್ಲೂರು ಹಾಗೂ ಮಳೂರು

ಶಾಸನಗಳಲ್ಲಿ 'ಕಿವಿಲೈನಾಡು, ಕೆಳಲೆನಾಡು' ಎಂಬ ಪ್ರಯೋಗಗಳು ಕಾಣಬರುತ್ತವೆ. ರಾಮನಗರ ತಾಲೂಕು ಶಾಸನಗಳಲ್ಲಿ ಕೆಲಳಿ, ಕೆಳಲೆ, ಕಲುವೊಳೆ, ಕಲುವಳಿನಾಡು ಎಂಬ ರೂಪಗಳು ಕಾಣಿಸಿಕೊಳ್ಳುತ್ತವೆ. ದೊಡ್ಡಬಳ್ಳಾಪುರ ತಾ. ಮಲ್ಲೋಹಳ್ಳಿ ತಾಮ್ರ ಶಾಸನದಲ್ಲಿ 'ಕೆವಿಲೆ' ಎಂಬ ಸ್ಥಾನನಾಮವಿದೆ. ಕ್ರಿ.ಶ. ೫೧೭ರ (ದುರ್ವಿನೀತ) ಅಂದರೆ ಗಂಗರ ಕಾಲದಲ್ಲಿಯೂ ಕೆಳಗಣ ಭೂಪ್ರದೇಶಗಳಿಗೆ 'ಕೆವಿಲೆ' ಎಂಬ ಸ್ಥಾನನಾಮ ವಿಶೇಷಣದ ಬಳಕೆ ಇದ್ದಂತೆ ಸೂಚನೆ ದೊರೆಯುತ್ತದೆ. ಚನ್ನಪಟ್ಟಣ (ಶಾಸನ ೫೨, ೫೩) ತಾ. ಕೋಡಂಬಳ್ಳಿಯ ವಿಜಯನಗರಕಾಲದ ಶಾಸನಗಳಲ್ಲಿ ಈ ಪ್ರದೇಶವನ್ನು ಹೊಯಿಸಣನಾಡು ಎಂದೂ ಕರೆಯಲಾಗಿದೆ.

ಕೆಳಲೆನಾಡಿಗೆ ಹಿರಿಯಮಳೂರು ಸ್ಥಳವು ಮುಖ್ಯವಾದ ಸ್ಥಳ ಆಗಿ ವಿಜಯನಗರ ಕಾಲದಲ್ಲಿತ್ತು. ಕೆಳಲೆನಾಡು ಎಂಬುದರ ತಮಿಳೀಕರಣ ಶಬ್ದರೂಪವಾದ 'ಕಿವಿಲೈನಾಡು' ಚನ್ನಪಟ್ಟಣ ತಾ. ಹೆಚ್ಚಾಗಿ ಕೂಡ್ಲೂರು, ಮಳೂರು ಹಾಗೂ ಕ್ವಚಿತ್ತಾಗಿ ರಾಮನಗರ ತಾ. ತಾಳವಾಡಿ ತಮಿಳು ಶಾಸನಗಳಲ್ಲಿ ಕಾಣಬರುತ್ತದೆ. ಆ ಶಬ್ದದ ಅತ್ಯಂತ ಪ್ರಾಚೀನ ಉಕ್ತ ಕಾಲ ಕ್ರಿ.ಶ. ೧೦೦೭. ಅಂದರೆ ಚೋಳರು ಗಂಗವಾಡಿಯನ್ನು ಆಕ್ರಮಿಸಿದ ಕಾಲದಿಂದ ಪ್ರಚಲಿತ. ಅಲ್ಲಿಂದ ಕ್ರಿ.ಶ. ೧೨೬೦ರ ವರೆಗೆ ಚ.ಪ.ತಾಲೂಕು ರಾಮನಗರ ತಾಲೂಕು ಸೇರಿದಂತೆ ಕಾಣಿಸಿಕೊಳ್ಳುತ್ತದೆ. ಅಂದರೆ ಗಂಗವಾಡಿಯೊಳಗಣ ಕಿವಿಲೈನಾಡು (Kilalai Nadu), ಚೋಳರು ಬರುವ ಮುನ್ನ 'ಕೆಳಲೆ'ನಾಡಾಗಿ ಗಂಗವಾಡಿಯ ಒಂದು ಮುಖ್ಯಭಾಗವೇ ಆಗಿತ್ತು. ಚೋಳರ ತಮಿಳು ಶಾಸನಗಳು ಮುಡಿಗುಂದ ಚೋಳಮಂಡಲದ ರಾಜೇಂದ್ರ ವಳನಾಡಿನ ಕಿವಿಲೈನಾಡು ಎಂದು ದಾಖಲಿಸಿಕೊಂಡಿವೆ. ಕ್ರಿ.ಶ. ೧೨೦೦ ಕೂಡ್ಲೂರು ಶಾಸನದಲ್ಲಿ 'ಕಿವಿಲಾದಿರಾಜ' ಎಂದು ರಾಜನೊಬ್ಬನಿಗೆ ಅನ್ವಯಿಸಿಕೊಂಡು ಪ್ರಸಿದ್ಧಗೊಂಡಿರುವುದೂ ಸೂಚಿತವಾಗಿದೆ.

ಟಿ.ನರಸೀಪುರದ ಶಾಸನವೊಂದು೧೦ ೯ನೇ ಶತಮಾನಲ್ಲಿ ಗಂಗರ ಶಿವಮಾರನ ಕಾಲದಲ್ಲಿ 'ಕೂಮ್ಬಡಿ ಕಿವಿಲೆನಾಡ'ನು ಮಣಲೆ ಅರಸ ಎಂಬುವನು ಆಳುತ್ತಿದ್ದ ವಿಷಯವನ್ನು ತಿಳಿಸುತ್ತದೆ. ಗಂಗರ ಎರೆಯಪ್ಪನ ಕಾಲದಲ್ಲಿ ಕಿವಿಲೆನಾಡನ್ನು ರಣಪಾರರಸ ಮತ್ತು ಮಣಲೆ ಅರಸರು ಆಳುತ್ತಿದ್ದರು.[೧೧] ಬಹುಶಃ ಬಾದಾಮಿ ಚಾಲುಕ್ಯ ವಂಶಿಕ ಶಾಖೆಯ ಈ ಅರಸರು ಈ ಪ್ರದೇಶದಲ್ಲಿ ಸಾಮಂತರಾಗಿ ಆಳುತ್ತಿದ್ದರೆನ್ನಬೇಕು. ರಾಮನಗರದ ಐಜೂರಿನ ಕ್ರಿ.ಶ.ಸು. ೭೬೮ರ ಹೊಸ ಶಾಸನದಲ್ಲಿ ರಣಪಾರರಸನ ಕೆಪ್ಗಿಲೆ ನಾಡಿನ ಆಳ್ವಿಕೆಯ ವಿಷಯವಿರುವಲ್ಲಿ ಕೆಳಲೆನಾಡು-ಕೆಪ್ಗಿಲಿ ನಾಡುಗಳು ಗಂಗವಾಡಿಯ ಭಾಗವಾಗಿ ಚೋಳರ ಮುನ್ನವೆ ಇದ್ದುವೆಂದಾಗುತ್ತದೆ. ರಾಮನಗರ-ಚನ್ನಪಟ್ಟಣ ಹಾಗೂ ನೆರೆ ತಾಲೂಕು ಪ್ರದೇಶಗಳಲ್ಲಿ ಶಾಸನೋಕ್ತ ರೂಢಿಗಿರುವ ಕೆಳೆಲೆ, ಕಲುವಳಿ, ಕೈಲನಾಡು ಇತ್ಯಾದಿ ಶಬ್ದ ಸ್ವರೂಪಗಳನ್ನು ಗಮನಿಸಿದರೆ ಅತ್ಯಂತ ಪ್ರಾಚೀನ ಶಬ್ದ ಪ್ರಯೋಗವಾಗಿ 'ಕೆಪ್ಗಿಲಿ ನಾಡು' (ಕಮ್ಗಿಲಿ!), ರಾಮನಗರದ ಐಜೂರು ರಣಪಾರನ ಶಾಸನದಲ್ಲಿ ಕಂಡುಬರುತ್ತದೆ. ಶಾಸನದಲ್ಲಿ

‘ಕೆವ್ಗಿಲಿನಾಡಗ್ಗ್ರ್ಲಲ್ಲೂರಾ’ ಎಂದಿದೆ. ಐಜೂರು, ಕಲ್ಲುಗುಡ್ಡಗಳ ಪರಿಸರದಿಂದ ಆವೃತವಾದ ಐದು ಊರುಗಳ ಸಂಯುಕ್ತ ಊರಾಗಿತ್ತು. ಹೀಗಾಗಿ ಶಾಸನದಲ್ಲಿನ ಕಲ್ಲೂರು ಕೆವ್ಗಿಲಿನಾಡಿನ ಭಾಗವಾಗಿ ಕ್ರಿ.ಶ. ೮ನೇ ಶತಮಾನದಲ್ಲಿ (ಕ್ರಿ.ಶ.ಸು. ೭೬೮) ಇತ್ತು. ಇಲ್ಲಿ ರಣಪಾರನ ಆಳ್ವಿಕೆ (ಸಾಮಂತ) ಮಾರಸಿಂಹ ಎರೆಯಪ್ಪನ ಕಾಲದಿಂದಲೂ ಇದ್ದಿರುವ ಸೂಚನೆಯ ಕಾರಣ ಗಂಗರ ಕಾಲದ ಒಂದು ಪಾಳೆಯಪಟ್ಟು ಕೆವ್ಗಿಲಿನಾಡಿನ ‘ಕಲ್ಲೂರು’ ಆಗಿದ್ದಿರುವ ಸಾಧ್ಯತೆ ಇದೆ. ‘ರಣಪಾರ ಮತ್ತು ಮಗಚ್ಚವರ್ ’ರ ಹೆಸರು ಬಂದಿರುವ ಕಾರ ರಣಪಾರ ಆ ಕಾಲದ ಗಂಗರ ‘ಮೊದಲವರ್ಗದ ಅಮರನಾಯಕ’ನಂತೆಯೋ ಮಹಾಮಂಡಲೇಶ್ವರನಂತೆಯೋ ಇದ್ದಿರಬಹುದು. ಆದರೆ ಸ್ಥಾನೋಲ್ಲೇಖ ನಿರ್ದೇಶನ ಮಾತ್ರ ಕಾಣದಿರಬಹುದು. ಈ ಕೆವ್ಗಿಲಿ ಅಥವಾ ಕೆವ್ಗಿಲಿನಾಡು-ಕಲುವಳಿನಾಡು, ಕೆಳಲೆನಾಡು (ಚೋಳ ಪ್ರಭಾವದಲ್ಲಿ ಕೆರುವಲಿ, ಕಿಳಲೈನಾಡು) ಎಂಬ ಹೆಸರುಗಳು ಕಾಲಾಂತರದಲ್ಲಿ ಒದಗಿ ಎರಡು ಪ್ರದೇಶಗಳಾಗಿ ವಿಂಗಡನೆ ಆಗಿರುವಂತಿದೆ. ‘ಕೆಳಲೆನಾಡು’, ‘ಕೆವ್ಗಿಲಿ ನಾಡು’ ಎಂಬ ಶಾಸನೋಕ್ತ ಪ್ರದೇಶದ ಇಬ್ಬದಿಯ ಊರು-ಗ್ರಾಮ ಪ್ರದೇಶಗಳಿಗೂ ಶಾಸನೋಕ್ತ ಅನ್ವಯವಿರುವ ಕಾರಣ ಈ ಮೇಲಿನಂತೆ ಹೇಳಬೇಕಾಗುತ್ತದೆ.

ಈ ಗಂಗವಾಡಿ ಪ್ರದೇಶದ ‘ಕೂಮ್ಬಡಿ ಪ್ರದೇಶ’ವಾಗಿ ಅಂದರೆ ತೀರ ತಗ್ಗಾದ ಪ್ರದೇಶವಾಗಿ ಟಿ.ನರಸೀಪುರ, ತಲಕಾಡಿನವರೆಗೆ ವಿಸ್ತಾರಗೊಂಡಿತ್ತು ಎನ್ನಬಹುದು. ಕೆವ್ಗಿಲಿ ಅಥವಾ ಕೆಮ್ಗಿಲಿ (ಕೆಮ್ಗಿವಿ) ಪ್ರದೇಶವು ಕೆಳಲೆ ಹಾಗೂ ತೀರ ತಗ್ಗು ಅದ ಕೂಮ್ಯಡಿ ಪ್ರದೇಶದವರೆಗೆ ಚಾಚಿದ್ದಿರಬೇಕು. ಕೆವ್ಗಿಲಿ ನಾಡಿನ ಇಬ್ಬದಿಯಲ್ಲಿ ಮುಂಬದಿ ದಕ್ಷಿಣದಲ್ಲಿ ಕಲವೊಳನಾಡು, ಕೆಳಲೆನಾಡು ಅಂದರೆ ಪ್ರಮುಖವಾಗಿ ರಾಮನಗರ, ಚನ್ನಪಟ್ಟಣ ತಾಲೂಕಿನಲ್ಲಿ ಶಾಸನೋಕ್ತವಾಗಿ ಕಾಣುತ್ತದೆ. ಮದ್ದೂರು, ಮಳವಳ್ಳಿ ತಾಲೂಕು ಪ್ರದೇಶದಲ್ಲಿ ‘ಕೆಳಲೆನಾಡು’ ಎಂಬುದೇ ಹೆಚ್ಚು ಪ್ರಚಲಿತವಾಗಿದೆ. ಈ ದೃಷ್ಟಿಯಿಂದ ಕೆವ್ಗಿಲಿ, ಕೈಲ, ಕೂಮ್ಬಡಿ ಇತ್ಯಾದಿ ಶಬ್ದಗಳ ಸ್ಥಳನಾಮ ನಿಷ್ಪತ್ತಿಯನ್ನು ಗಮನಿಸಬೇಕಾಗುತ್ತದೆ.

‘ಕೆವ್ಗಿಲಿ’ ಶಬ್ದವು ಕೆಮ್ಗಿಳಿ, ಕೆಳ್ಗುಮಿ ಅಥ್ವಾ ಕೆಮ್ಗುಮಿ ಶಬ್ದಗಳಿಂದ ರೂಪುಗೊಂಡಿರಬಹುದು ಅಥವಾ ‘ಕೆವ್ಗಿಲಿ’ ಶಬ್ದದಿಂದಲೇ ಅವು ಮೂಡಿರಬಹುದು. ಈಗ ಅದರ ಪರಿಶೀಲನೆ.

ಕೆಮ್ + ಉಮಿ = ಕೆಳ್ + ಉ ಮಿ ಆಗಿರಬಹುದು.

ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಶಬ್ದಪ್ರಯೋಗಕ್ಕೆ ೩೩ನೇ ಪದ್ಯದಲ್ಲಿ ಉದಾಹರಣೆ ಆಗಿ ನೀಡಿರುವ ಸಾಲು ‘ಸ್ಥಾನ ವ್ಯಕ್ತಿಯಂ ಪೇಳ್ವೊಡೆ ಉಮಿ’ ಎಂದಿದೆ; ಕಾವ್ಯಾವಲೋಕನದಲ್ಲಿ ‘ದೊರೆಕೊಳ್ಗುಂ ವಾ ದೇಶಮದರೆ ಉಮ್ಮಿ ವಾಕ್ಯದೊಳಮ ನ್ವಿತಾರ್ಥದೊಳಕ್ಕು’ ಎಂದಿದೆ. ಹೀಗಾಗಿ ‘ಉಮಿ’ ಎಂದರೆ ‘ಸ್ಥಳ’ ಎಂಬರ್ಥ ದ್ರಾವಿಡಭಾಷೆಯಲ್ಲಿದೆ. ಕಿಟೆಲ್ ನಿಘಂಟುವಿನಲ್ಲಿ ಕೆಳ=ಕಿಮಿ=ಕೆಳಗು=ಕೆಳಗಣ ಪರ್ವತ ಸನಿಹದ ಕೆಳಗಣ ಭೂಮಿ ಎಂದಿದೆ; ಕೆಲ ಎಂದರೆ Side, Vicinity, ಮಗ್ಗುಲು (ಕೆಲದ

ಕಿರುಬೆಟ್ಟಂ) ರಾಜಧಾನಿಯ ಕೆಲಬೀಡು (ಉಪನಗರ) ಎಂಬರ್ಥವಿದೆ. ತಮಿಳಿನಲ್ಲಿ 'ಕೆಲ' ಶಬ್ದ 'ಕಿಲ' ಆಗುತ್ತದೆ. 'ಕಿಲ'ವು ಕಿಮಿ ಅಂದರೆ ತಗ್ಗಿನ ಎಂಬಂಥದಲ್ಲಿ ಪ್ರಯೋಗವಾಗುತ್ತದೆ; ಕಿಟೆಲ್ ನಿಘಂಟು 'ಕ' ಎಂದರೆ ನೀರು, ಗಾಳಿ, ಸೂರ್ಯ ಎಂದೂ, ಇಳೆ=ಇಲೆ, ಎಳೆ=ಭೂಮಿ, ನಿಶ್ಚಲ, ರಸದ್ರವ್ಯ ಇತ್ಯಾದಿ ಅರ್ಥಗಳನ್ನು ನೀಡಿದೆ. ಅಂದರೆ ನೀರು ಇರುವ ನಿಶ್ಚಲ ಶಾಶ್ವತ ಫಲಭರಿತ ಪ್ರದೇಶವೆಂದರ್ಥ ಒದಗಬಹುದು. ಡಾ. ಶ್ರೀ ಜಚನಿ ಅವರು 'ಕೈಲಾಸ' ಎಂಬ ಶಬ್ದಕ್ಕೆ ಕ (=ನೀರು), ಇಲಾ (=ಭೂಮಿ), ಅಸ (=ಒಡೆಯ) ಎಂದು ಅರ್ಥೈಸಿರುವ ಹಿನ್ನೆಲೆಯಲ್ಲಿ, ನಿಘಂಟುವಿನಲ್ಲಿ ಅರ್ಥದ ಹಿನ್ನೆಲೆಯಲ್ಲಿ ಮಳೂರು ತಾಮ್ರ ಶಾಸನದಲ್ಲಿ (ಕ್ರಿ.ಶ. ೧೫೫೮) ಕೆಳಲೆನಾಡಿಗೆ ಬಳಸಿರುವ 'ಕೈಲನಾಡು' ಎಂಬ ಸಂಸ್ಕೃತಾರೋಪ ಶಬ್ದಕ್ಕೆ ಕೈಲ = ಕ + ಇಲಾ ಎಂದಾಗಿ ಜಲಸಮೃದ್ಧಿಯ ಫಲಭರಿತ ಭೂಮಿ ಎಂದಾಗುತ್ತದೆ. ಇದಕ್ಕೆ ಪೋಷಕವಾಗಿ ರಾಮನಗರ, ಚನ್ನಪಟ್ಟಣ, ಮದ್ದೂರು ಪ್ರದೇಶದ ಕೆಳಲೆನಾಡು, ಕಣ್ವ, ಅರ್ಕೆ, ಶಿಂಷಾ ನದಿಗಳ ಸಹಿತವಾಗಿ ಬೆಟ್ಟಗುಡ್ಡಗಳ ತಗ್ಗುಪ್ರದೇಶಗಳಲ್ಲಿ ಹರಡಿಕೊಂಡಿವೆ. ಆದರೆ ರಾಮನಗರ ತೀರ ಬೆಟ್ಟದ ಬದಿಯಾನಡು, ಆವೃತನಾಡು. ಇಂದಿನ ಐಜೂರು ಸುತ್ತಲೆಲ್ಲ ಬೆಟ್ಟ ಶ್ರೇಣಿಯಿಂದ ಹಾಗೂ ಬದಿಯ ಕಲ್ಲುಗುಡ್ಡೆಗಳ ಕಾರಣ 'ಕಲ್ಲೂರು' ಎನಿಸಿದ್ದುದು ಸಹಜ. ೧೧ನೇ ಶತಮಾನದಲ್ಲಿ ಶಾಸನೋಕ್ತವಾಗಿ ಆಯಿದೂರು (=ಆಯಿಜೂರು) ಎನಿಸಲು ಈ ಬೆಟ್ಟಗಳ ಆವೃತದ ಐದು ಊರುಗಳ ಕಾರಣವಾಗಿ ಬಹುಶ: ಕಿರುಪಾಳೆಯ ಪಟ್ಟುಗಳ ಸಮೂಹವಾಗಿ ಹೆಸರುಗೊಂಡಿರಬೇಕು. ರಣಪಾರನ ಕಾಲದಲ್ಲಿ ಈ ಕೆವ್ಗಿಲಿನಾಡಿನ ಕಲ್ಲೂರು ರಾಜಧಾನಿಯ ಕೆಲಬೀಡು ಅರ್ಥಾತ್ ('ಕಿರುಪೆರ್ನಗರ' ಗಮನಿಸಿ) ಉಪನಗರವಾಗಿದ್ದಿರಬೇಕು. ಈ ಹಿನ್ನೆಲೆಯಲ್ಲಿ

i. ಕೆವ್ಗಿಲಿ (ಕೆಮ್ಮಿರೆ೧೨) - ಕೆಟುಗಲಿ - ಕೆಟಲಿ - ಕೆಟಲೆ - ಕೆಳಲೆನಾಡು

ii. ಕೆವ್ಗಿಲಿ (ಕೆಮ್ಮಿಗಳಿ) - ಕೆಟುವಲಿ - ಕೆಳುವಲ - ಕೆಳವಳ್ - ಕಲುವೊಳೆನಾಡು

ಎಂಬ ಎರಡು ಸಾಧ್ಯತೆಗಳನ್ನು ಗಮನಿಸಬೇಕು. ಅಂದರೆ ಕೆವ್ಗಿಲಿನಾಡು - ಕೆಮ್ಮಿಮಿನಾಡು ಎಂದು ರೂಪಾಂತರವಾಗಿ ಅದರ ಭಾಗಗಳಾಗಿ ಕೆಳಲೆನಾಡು ಕಲುವೊಳೆನಾಡು ಇದ್ದುವೆನ್ನಬೇಕು. ಕ್ರಿ.ಶ. ೧೦೦೭ರಲ್ಲಿ ರಾಜರಾಜ ಚೋಳನ ಕಾಲದಲ್ಲಿ Kilalainadu of Gangapadi ಎಂದಿದ್ದು[೧೩] ಕ್ರಿ.ಶ. ೧೦೧೦ರ ವೇಳೆಗೆ 'ರಾಜೇಂದ್ರಚೋಳ ವೊಳನಾಡಿನ ಕಿವಿಲ್ಯೆನಾಡು' ಎಂದಾಗಿರುವುದು.[೧೪] ಈ ನಾಡು ವಿಭಾಗಗಳಿಗೆಡೆಯಾದುದರ ಸೂಚನೆ ಆಗಿದೆ. ಕೆವ್ಗಿಲಿನಾಡಿನ ಇಬ್ಬದಿಯಲ್ಲೂ 'ಕೆಳಲೆನಾಡು' ಇರುವ ಕಾರಣ ಕೆವ್ಗಿಲಿನಾಡಿನ ರೂಪಾಂತರ ಶಬ್ದಗಳು ವಿಂಗಡನೆಗೂ ಹಾದಿ ಮಾಡಿದುವೆನ್ನಬೇಕು.

ರಾಮನಗರ ಪ್ರದೇಶಕ್ಕೆ ಅರಕ್ಕಿರೈ (ಅರಕ್ಕಿರೈ) ನಾಡು ಎಂದು ಕರೆದಿರುವಲ್ಲಿ ಬಂಡೆಗಳ ಮರೆಗಿರುವ ನಾಡು (ಇಬ್ಬದಿಗೂ ಆಗಬಹುದಲ್ಲ!) ಅದಾಗಿದ್ದು ಚೋಳರ ಕಾಲದಲ್ಲಿ ಮೊದಲೇ ರೂಢಿಗಿದ್ದ 'ಕೆಳಲೆನಾಡು', 'ಕಿವಿಲ್ಯೆನಾಡು' ಎನಿಸಿ ಕೆಲವೊಳನಾಡು (ಅರಕ್ಕಿರೈನಾಡು) ಎಂದು ವಿಭಾಗಿಸಿರುವಂತೆ ತೋರುತ್ತದೆ. ಗಂಗವಾಡಿಯ 'ಕಿಳೆಲೈನಾಡು'

ಎಂದು ಅವರಲ್ಲಿ ಶಾಸನೋಕ್ತವಿರುವುದು ಇದಕ್ಕೆ ಪೋಷಕವಾಗಿದೆ. ರಾಮನಗರ ಕಲುವೊಳನಾಡು, ಕೆಳಲೆನಾಡು ಎನಿಸಿದರೆ, ಚನ್ನಪಟ್ಟಣ ಕೆಳವಳನಾಡು, ಕೆಳಲೆನಾಡು ಎಂದೂ ಕರೆಸಿಕೊಂಡಿತ್ತು.

ರಾಮನಗರ ಪ್ರದೇಶದಲ್ಲಿ ಸುತ್ತಲ ಬೆಟ್ಟದ ಶ್ರೇಣಿಯಲ್ಲಿ ಐಜೂರು ಕಲ್ಲುಗುಡ್ಡ, ದಾಸ್ತಿಗವಿ, ಚಲುವರಾಯಸ್ವಾಮಿ ಬೆಟ್ಟ, ರಾಮದೇವರ ಬೆಟ್ಟ, ಶಿವನಗಿರಿ ಬೆಟ್ಟ, ಜಲಸಿದ್ದೇಶ್ವರ ಬೆಟ್ಟ, ಕೋಣನಕಲ್ಲು ಬೆಟ್ಟ, ಹಂದಿಗೊಂದಿ ಬೆಟ್ಟ, ಸೋಮೇದೇವರ ಬೆಟ್ಟ, ಕೂಟಗಲ್ಲು, ಕೂನಗಲ್ಲು ಬೆಟ್ಟ, ರೇವಣಸಿದ್ದೇಶ್ವರ ಬೆಟ್ಟ, ಅಚ್ಚಲುದುರ್ಗ ಕೂಟಗಲ್ಲು ತಿಮ್ಮಪ್ಪನ ಬೆಟ್ಟ, ಅಣ್ಣಪ್ಪನ ದುರ್ಗ (ಜಾಲಮಂಗಲ) ಇತ್ಯಾದಿಗಳಿವೆ. ರಾಮನಗರ ಪ್ರದೇಶದ ಎತ್ತರ ಸಮುದ್ರ ಮಟ್ಟದಿಂದ ಸುಮಾರು ೯೦೦ ಮೀಟರುಗಳಿದ್ದು, ಮಳವಳ್ಳಿ ಮದ್ದೂರು ಕಡೆ ಸಾಗಿದಂತೆ ಆ ಎತ್ತರ ೨೦೦ ಮೀಟರುಗಳಷ್ಟು ತಗ್ಗಾಗುತ್ತ ಹೋಗಿರುವುದು ತಿಳಿಯುತ್ತದೆ. ಕಣ್ಣನದಿ, ಅರ್ಕಾವತಿ ನದಿ ಹರಿಯುವ ರಾಮನಗರ, ಚನ್ನಪಟ್ಟಣ ಪ್ರದೇಶಗಳಲ್ಲಿ ಕೆಳಲೆ, ಕಲುವಳಿ (ಕಲುವೊಳ) ನಾಡಿನ ಭಾಗಗಳು ಕಾಣಬರುವುದರಿಂದ ನಿಸರ್ಗವಾಚಿ ಸ್ಥಳನಾಮಗಳಾಗಿ ಕೆವ್ಗಲಿನಾಡು ಅಥವಾ ಕೆಮ್ಗಿಮಿನಾಡು ವಿಂಗಡನೆಗೊಂಡು ಚೋಳರ ಕಾಲದಿಂದ ಹೊಯ್ಸಳರ ಕಾಲದವರೆಗೆ ಅದು ಮತ್ತಷ್ಟು ನಿಖರ ವಿಂಗಡನೆಗೊಳ್ಳುತ್ತ ಹೋಯಿತು. ವಿಜಯನಗರ ಕಾಲದಲ್ಲಿ ಕಲುವೊಳೆ - ಕೈಲ - ಕೆಳಲೆ ನಾಡುಗಳು ನೆರೆ ನೆರೆಗಿದ್ದು ಮತ್ತಷ್ಟು ನಿಖರಗೊಂಡವು. ಕೆಳಲೆನಾಡಿನ ಭಾಗವಾಗಿ ಚನ್ನಪಟ್ಟಣ ತಾಲೂಕು ಮಾಕಳಿ, ಅಬ್ಬೂರ ಗ್ರಾಮಗಳೂ ಕಲುವೊಳೆನಾಡಿನ ರಾಮನಗರ ತಾಲೂಕಿನ ಶಾನುಭೋಗನ ಹಳ್ಳಿಗೆ ೩-೪ ಮೈಲಿಗಳ ಫಾಸಲೆಯಲ್ಲಿವೆ. ಇವೆಲ್ಲ ರಾಮನಗರದ ಪಶ್ಚಿಮಕ್ಕಿರುವ ಗ್ರಾಮಗಳಾಗಿವೆ.

ದೊಡ್ಡಬಳ್ಳಾಪುರ ತಾಲೂಕು (ಮಲ್ಲೋಹಳ್ಳಿ ತಾಮ್ರಶಾಸನ ಕ್ರಿ.ಶ. ೫೯೭೭) 'ಕೆವಿಲೆನಾಮ್ನ ಬೆಮ್ಬುರೀಶ್ವರ ಸ್ಥಾನ'ವು ಬೆಂಗಳೂರು ತಾಲೂಕಿನ ಬೆಂಪೂರು (ಇಂದಿನ ಬೇಗೂರು) ವಿಗೆ ಅನ್ವಯವಿರಬಹುದೆಂದರೂ ಕೆಳಲೆ (ಕೆವಿಲೆ)ನಾಡು ಶಬ್ದದ ಅರ್ಥಾನ್ವಯ ಅದಕ್ಕೂ ಆಗಬಹುದು. ಅದು ಅಲ್ಲಿನ ನಿಸರ್ಗವಾಚಿ ನಿಷ್ಪತ್ತಿಯಾಗಿರಬಹುದು. ಅಥವಾ ರಾಮನಗರ, ಚನ್ನಪಟ್ಟಣ ಸಂಬಂಧದ ನಾಡಿನ ವಿಸ್ತಾರವನ್ನು ಅಲ್ಲಿಯವರೆಗೆ ವಿಸ್ತರಿಸಬಹುದೇ ಎನ್ನುವ ಅನುಮಾನವೂ ಒದಗುತ್ತದೆ. ಅರ್ಕಾವತಿ ಪರಿಸರದ ಕೆಲವು ಕೆಳ ಪ್ರದೇಶಗಳಿಗೆ ಕಲ್ಲುಗುಡ್ಡದ ಅಂಚಿನ ಜಲದಾಸರೆಯ ತಗ್ಗು ಪ್ರದೇಶ ಇಂಥ ಹೆಸರುಗಳು ಸಾಮಾನ್ಯವಾಗಿದ್ದುವೇ? ಎಂಬ ಅನುಮಾನವೂ ಒದಗುತ್ತದೆ. ಅದೇನೇ ಇರಲಿ ನಮಗೆ ನಿಖರ ವಿಭಾಗದ ನಾಡಾಗಿ ಕಾಣುವುದು ರಾಮನಗರ, ಚನ್ನಪಟ್ಟಣ ಪ್ರದೇಶದಿಂದಲೇ ಆಗಿದೆ. ಇನ್ನು ೮ನೇ ಶತಮಾನದ ಮಣಲೆ ಅರಸನ ಶಾಸನದಲ್ಲಿನ 'ಕೂಮ್ಬಡಿ ಕಿವಿಲೆ ನಾಡ' ಎಂಬಲ್ಲಿ ಕೊಂಬು-ಕೂಂಬು-ಕುಂಬು ಎಂಬ ರೂಪಾಂತರ ಹೊಂದಿದಾಗ ಎತ್ತರದ ಪ್ರದೇಶ ಎಂದು ಸೂಚನೆ ಒದಗುತ್ತದೆ. ಕೂಂಬಡಿ-ಕೊಂಬು+ಅಡಿ ಅಂದರೆ ಬೆಟ್ಟದ ಅಥವಾ ಎತ್ತರದ ಕಲ್ಲುಗುಡ್ಡಗಳಿಗೆ ತೀರ

ತಗ್ಗಾದ ಪ್ರದೇಶ ಎಂಬರ್ಥ ಒದಗುತ್ತದೆ. ಹೀಗಾಗಿ ಮದ್ದೂರು, ಟಿ.ನರಸೀಪುರ ಪ್ರದೇಶಗಳು ರಾಮನಗರ, ಚನ್ನಪಟ್ಟಣದ ಎತ್ತರ ಪ್ರದೇಶಕ್ಕೆ ಹೋಲಿಸಿದರೆ ಕೂಮ್ಮಡಿ (ಕೂಮ್ಮಡಿ!) ಕೆಳಲೆನಾಡೆನಿಸುತ್ತವೆ. ಇದು ಗಂಗರ ಕಾಲದಲ್ಲೇ ಪ್ರಚಲಿತವಾಗಿದ್ದುದು ಗಮನಾರ್ಹ. ಹೀಗಾಗಿ ಕೆಪ್ಗಿಲಿನಾಡು ವಿಂಗಡನೆಗೊಂಡ ಬಗೆಯನ್ನು ಈ ಮುಂದಿನಂತೆ ಸೂಚಿಸಬಹುದು.

ಶಾಸನೋಕ್ತ ಪ್ರಸ್ತಾಪಗಳು

ಕೆಬ್ಗಿಲನಾಡು (ಕೆಮ್ಗಿಲಿ, ಕೆಮ್ಗಿಮಿನಾಡು!)

ಕಲುವಳನಾಡು, ಕಲೆಳಿನಾಡು
(ರಾಮನಗರ ತಾ.)

ಕಲುವೊಳೆ ನಾಡು
ಕಲುವಳಿನಾಡು
ಕೆಳಲೆನಾಡು
ಅರಕ್ಕಿದ್ದೆನಾಡು
(ರಾಮನಗರ ತಾ.)

(ಕ್ರಿ.ಶ. ೧೦೦೦)ಕೆಳಲೆನಾಡು-ಕಿಳಲೈನಾಡು-ಕೆಳವಳನಾಡು
(ಚನ್ನಪಟ್ಟಣ ಮತ್ತು ರಾಮನಗರ ತಾ.)

(ಹೊಯಿಸಣನಾಡು) ಕೆಳವಲನಾಡು,
ಕೆಳಲೆನಾಡು (ಚನ್ನಪಟ್ಟಣ ತಾ.)

ಗಂಗರ ಕಾಲದ ಕಿಪ್ಗಿಲಿನಾಡು ಅವರ ಕಾಲದಲ್ಲಿಯೆ (ಅಂತ್ಯದ ವೇಳೆಗೆ) 'ಕೆಳಲೆನಾಡು' ಎಂಬ ವಿಭಾಗವಾಗಿ ಮುಂದೆ ಹೊಯ್ಸಳರ ಕಾಲಕ್ಕೆ ಇನ್ನೊಂದು ಘಟ್ಟದ ವಿಂಗಡನೆಯಾದರೂ ಅದು ವಿಜಯನಗರ ಕಾಲಕ್ಕೂ ಹಾಗೆಯೇ ಮುಂದುವರಿಯಿತು. ಜೊತೆಗೆ 'ಹೊಯಿಸಣನಾಡು' ಎಂಬ ಹೆಸರಿನಲ್ಲೂ ಈ ಪ್ರದೇಶವು ರೂಢಿಗೊಂಡಿತ್ತು. ಒಟ್ಟಾರೆ ಈ ತಾಲೂಕುಗಳ ಪರಿಸರದಲ್ಲಿ ಅರಳಿಬಂದ ಪಾಳೆಯಪಟ್ಟುಗಳ ಇತಿಹಾಸದತ್ತ ಗಮನಿಸಿದರೆ ಒಂದು ಪ್ರಾದೇಶಿಕ ಸಂಸ್ಕೃತಿಯ ಇತಿಹಾಸವು ತಿಳಿಯುವಂತಾಗುತ್ತದೆ. ವಿಜಯನಗರ ಸಂಸ್ಕೃತಿಗೆ ದೇಣಿಗೆ ನೀಡಿದ್ದೂ ತಿಳಿಯುತ್ತದೆ.

ಕ್ರಿ.ಶ.ಸು. ೭೬೮ರ ಐಜೂರು ರಣಪಾರನ ಹೊಸ ಶಾಸನದಲ್ಲಿ ಪಾಠವು ಹೀಗಿದೆ.[೧೫]

೧. ಸ್ವ-ಸ್ತಿ ಶ್ರೀ ರ
೨. ಣ=ಪಾರರ್ಕ್ಕೆ
೩. ಪ್ಗಿ ಲಿ ನಾ
೪. ಡರ್ಗ್ಗ
೫. ಲ್ಲೂರಾ ಮಗ

೬. ಚ್ಚವರ್ ಕೆ(ಕ)ಣ
೭. ಕುಪ್ಪೆ ಏ ರಿ
೮. ನುಡ್ಡೆರಿದು ವಿ
೯. ಮ್ದೀರ್

ಕೂಡಲೂರು ಶಾಸನ, ತಲಕಾಡು ವಿಜಯಪುರಕೋಟೆ ಶಾಸನಗಳ ರೀತ್ಯಾ ರಣಪಾರನು ಎರೆಯಪ್ಪನ ಕಾಲದಲ್ಲಿ ಕಿಳಲೆನಾಡನ್ನು ಆಳುತ್ತಿದ್ದ ಬಗ್ಗೆ ಉಕ್ತವಾಗಿದೆ. ಅಂದರೆ 'ರಣಪಾರ'ನು ವಿಶಾಲವಾದ ಈ ಪ್ರದೇಶದ ಅಧಿಪತಿಯಾಗಿ ರಾಮನಗರ, ಚನ್ನಪಟ್ಟಣ ಪ್ರದೇಶವನ್ನು ಆಳುತ್ತಿದ್ದಾಗ ಕಲ್ಲೂರಿನಲ್ಲಿ (ಐಜೂರು!) ಮಗಚ್ಚವರ್, ಗಂಗ ಎರೆಯಪ್ಪನ ಕಾಲದಲ್ಲಿ, ರಣಪಾರನ ಅಧೀನನಾಗಿ ಆಳುತ್ತಿದ್ದಿರಬೇಕು. ಬಹುಶಃ ರಣಪಾರನ ಅಚ್ಚೆಯವರಾದ (ಮುದ್ದಿನ) ಮಗ, ಮಗಚ್ಚವರ್ ಆಗಿದ್ದು[೧೬] ಕಲ್ಲೂರಿನ ಪಾಳೆಯಪಟ್ಟಿನಲ್ಲಿ 'ಕುಮಾರವೃತ್ತಿ'ಯ ಮಾದರಿಯಲ್ಲಿ ಆಳುತ್ತಿದ್ದಿರಬಹುದು. ಶಾಸನ ಶಿಲ್ಪದಲ್ಲಿರುವ ಕುದುರೆ ಹಾಗೂ ಕೊಡೆ ಹಿಡಿದ ಪದಾತಿಯಿಂದ ಇದು ಸೂಚನೆಗೊಳ್ಳುತ್ತದೆ. ರಣಪಾರರಸನ ಮಗನೊಬ್ಬ ಒಂದು ಚಿಕ್ಕ ಪಾಳೆಯಪಟ್ಟು ಹೊಂದಿದ್ದ ಸೂಚನೆ ಇದಾಗುತ್ತದೆ. ಅಂದರೆ ರಣಪಾರಸನ ಜೊತೆಯಲ್ಲಿ ಆಳಿದವನಾದ ಮಣಲೆಯರಸ, ಅವನ ಸೋದರನೋ ಅಥವಾ ಸಂಬಂಧಿಯೋ ಆಗಿದ್ದ. ಆದರೆ ಅವನು ಮಣಲೆ ವಂಶದವ ಎಂದು ಶಾಸನ ಸಂಪುಟವು ಹೇಳುವುದನ್ನು ಒಪ್ಪುವುದು ಕಷ್ಟ. ಕಾರಣ ಅದು ವ್ಯಕ್ತಿನಾಮವಾಗಿ ಕಾಣುವುದೇ ವಿನಾ ವಂಶನಾಮವಾಗಿಲಿಲ್ಲ. ಇರಲಿ. ಎರೆಯಪ್ಪನ ಕಾಲದಲ್ಲಿ ಈ ಈರ್ವ ಅರಸರ ಅಪ್ಪಣೆ ಪಡೆದು ಅನುಮತಿ ಪಡೆದು ಭೂದಾನ ಕೊಡಬೇಕಿದ್ದ ಸಂಗತಿ 'ಶೌಚ ಮಣಲೆಯರು ಹಾಗೂ ನನ್ನಿ ಮಳೆಲೂರು ಅವರಿಗೆ ಅನ್ವಯವಿತ್ತು. ಕೂಡ್ಲೂರು ಶಾಸನದಲ್ಲಿ ಬಸದಿಗೆ ತೋಟದ ದಾನವನ್ನು ನೀಡುವಾಗ 'ರಣಪಾರರಸಾಳೆ' ಎಂದು ಉಕ್ತವಾಗಿದೆ. ಈ ಹಿನ್ನೆಲೆಗಳಲ್ಲಿ ಅವನ ಸ್ಥಾನಾಧಿಪತ್ಯ, ರಾಜ್ಯಾಧಿಪತ್ಯ (ರಾಜ್ಯಾಧಿಪತಿ) ಅಂದರೆ ವಿಜಯನಗರ ಕಾಲದ ೧ನೇ ವರ್ಗದ ಅಮರನಾಯಕರಂತೆಯೇ ಆ ಕಾಲದ ಪೂರ್ವ ಮಾದರಿಯಾಗಿ ಗೋಚರವಾಗುತ್ತದೆ. ಐಜೂರು, ಕೂಡ್ಲೂರು ಶಾಸನಗಳಲ್ಲಿ ರಣಪಾರರಸ ಮಾತ್ರ ಅಧಿಕಾರದ ನೆಲೆಯಲ್ಲಿ ಸೂಚಿತನಾಗಿದ್ದಾನೆ. ಅದೇ ವಿಜಯಪುರ (ತಲಕಾಡು) ಕೋಟೆ ಶಾಸನದಲ್ಲಿ ಗಂಗಚಕ್ರವರ್ತಿಯ ಹೆಸರೂ ಅವನ ಸಾರ್ವಭೌಮನಂತೆ ಉಕ್ತವಾಗಿದೆ. ಅಂದರೆ ರಣಪಾರರಸ ಗಂಗರ ಮಹಾಸಾಮಂತನಾಗಿಯೋ, ಮಹಾಮಂಡಲೇಶ್ವರನಂತೆಯೇ ಅಧೀನ ನಾಯಕನಾಗಿ ೮ನೇ ಶತಮಾನದಲ್ಲಿ ಆಳಿದಂತಿದೆ. ಬಹುಶ: ಕೂಮ್ಬಡಿ ಕಿವಿಲ್ಯೆನಾಡನ್ನು (ಕೆಬ್ಗಿಲಿನಾಡಿನ ಕೆಳಭಾಗ) ಮಣಲೆಯರಸ ಆಳುತ್ತಿದ್ದು, ಕೆಬ್ಗಿಲಿನಾಡಿನ ಮೇಲ್ಭಾಗವನ್ನು ರಣಪಾರರಸ ಆಳುತ್ತಿದ್ದಿರಬೇಕು.

ರಾಮನಗರದ ತ್ರುಟಿತ ಶಾಸನವೊಂದು ಕ್ರಿ.ಶ.ಸು. ೮೬೯ರ ಗಂಗರ ನೀತಿಮಾರ್ಗ ವೀರಸ್ವರ್ಗವೇರಿದ ವಿಷಯ ತಿಳಿಸುತ್ತ (ಆಯಿ) ದೂರ ಎಂಬ ಊಹಾತ್ಮಕ ಐಜೂರನ್ನು

ಉಕ್ತ ಮಾಡಿರುವಂತಿದೆ.[೧೭] ಆದರೆ ಈಚಿನ ವರ್ಷದಲ್ಲಿ ಕಂಡುಬಂದ ಹೊಸ ಶಾಸನದಲ್ಲಿ 'ಅಯಿಜೂರು' (ಐಜೂರು) ಹೆಸರು ಸ್ಪಷ್ಟವಿದ್ದು ಬಹುಶಃ ನಾಗತಿ ಎಂಬುವನು ಊರನಾಯಕನಾಗಿದ್ದ ಸೂಚನೆ ದೊರೆಯುತ್ತದೆ ಹಾಗೂ ಇದೇ ರಾಮನಗರ ತಾಲೂಕಿನ ಮಿರೆಳೀ (ಮೆಳೆಹಳ್ಳಿ)ಯಲ್ಲಿ ರಾಣಮಯ್ಯ ಎಂಬುವನು ನಾಯಕನಾಗಿದ್ದು ಅವರಿಬ್ಬರೂ ಕಾದಾಡಿದ ವಿಷಯವನ್ನು ತಿಳಿಸುತ್ತದೆ.[೧೮] ಅಂದರೆ ೧೧ನೇ ಶತಮಾನದ ಈ ಕೆಬ್ಬಿಲಿನಾಡಿನ ಪಾಳೆಯಪಟ್ಟುಗಳನ್ನು ಅದು ಸೂಚಿಸುವಂತಿದೆ. ಕ್ರಿ.ಶ. ೧೨೦೦ರ ಕೂಡ್ಲೂರು ಶಾಸನದಲ್ಲಿ 'ಕಿವಿಲಾದಿರಾಯ' ಎಂದು ಕಿವಿಲ್ಯೆನಾಡಿನ ಹೆಸರಿಗನ್ವಯವೆಂಬಂತೆ ಇರುವ ಹೆಸರಿನ ಅರಸನನ್ನು ಗಮನಿಸಿದರೆ ಅವನು ಆ ಪ್ರದೇಶದ ನಾಯಕನೊಬ್ಬನಾಗಿರುವಂತಿದೆ.

ಕ್ರಿ.ಶ. ೧೩೧೮ರ ಮಾಗೇನಹಳ್ಳಿ ಶಾಸನದ ರೀತ್ಯಾ[೧೯] ವೀರಬಲ್ಲಾಳ ದೇವರಸನ ಕಾಲದಲ್ಲಿ ಚನ್ನಪಟ್ಟಣ ಸೀಮೆಯ 'ಕೆಳವಲನಾಡು'ವಿನಲ್ಲಿ ಮಹಾಪ್ರಧಾನ ಮಹಾಮಂಡಲೇಶ್ವರ ಸೋಮರಸನ ಆಳ್ವಿಕೆ ಇದ್ದು, ಅವನು ಕೆಳವಳನಾಡೊಳಗಣ ಮಗುವನಹಳ್ಳಿಯನ್ನು ಚಿಟ್ಟಾರೆಸೆಟ್ಟಿ, ಮಸಣಸೆಟ್ಟಿಯವರುಗಳಿಗೆ ದಾನ ನೀಡಿದ ಬಗ್ಗೆ ಇದೆ; ಮಗುವನಹಳ್ಳಿಯ ಸಾಂಸ್ಕೃತಿಕ ಚರ್ಯೆಯೊಂದನ್ನು ಅದು 'ತಮ್ಮಡಿ'ಗಳ ವಿಷಯದಲ್ಲಿ ದಾಖಲಿಸಿದೆ. ತಮ್ಮಡಿಯಾಗುವವನಿಗೆ (ಶುದ್ಧ ಶೈವಾರ್ಚಕ) ಇದ್ದ ನಿಯಮಗಳಿವು: 'ತಮ್ಮಡಿಯಾದಡೆ ಅವನ ಆಸ್ತಿಯು ಸೋದರರಿಗೆ, ತಪ್ಪಿದರೆ ಹೆಣ್ಣು ತೊತ್ತಿನ ಮಕ್ಕಳಿಗೆ, ಇಲ್ಲವೆ ದೇವಾಲಯಕ್ಕೆ ಮುಗಳನಹಟ್ಟಿ ಪಟ್ಟಣಸಂತೆ ಕಟ್ಟಿಸಿ ನಾನಾ ದೇಸೀಯರೊಡನೆ ವ್ಯವಹಾರ ಸಾಗಿಸುವುದು ಎಂದಿದೆ. ವಿಜಯನಗರ ಕಾಲದಲ್ಲಿ ಸಂತೆಗಳ ಕಟ್ಟುವಿಕೆ ಬಹಳ ಪ್ರಚಲಿತವಾಯಿತು. ಹೀಗಾಗಿ ಮುಗಳನಹಳ್ಳಿಯಲ್ಲಿ ಹೊಯ್ಸಳರ ಕಾಲದಲ್ಲಿ ಧಾರ್ಮಿಕ ದೀಕ್ಷೆಯನಂತರ ವ್ಯಕ್ತಿಗಿದ್ದ ನೀತಿ ನಿಯಮಗಳು ಹಾಗೂ ಆರ್ಥಿಕ ಚಟುವಟಿಕೆಗಳನ್ನು ನಡೆಸಬೇಕಾದ ಹೊಣೆ ಮಹಾಮಂಡಲೇಶ್ವರರಿಗಲ್ಲದೆ ಅವರ ಅಧೀನ ನಾಯಕ ಸಮಾನ ಸ್ಥಾನಮಾನವಿದ್ದಿರಬಹುದಾದ ಚಿಟ್ಟಾರಿಸೆಟ್ಟಿ ಹಾಗೂ ಮಸಣಸೆಟ್ಟಿಯರಿಗೂ ಹೊಣೆ ಹೊರಿಸಿದ ಸೂಚನೆ ಇಲ್ಲಿ ಕಾಣುತ್ತದೆ. ಇದು ಪಾಳೆಯಪಟ್ಟುಗಳಲ್ಲಿ ಹೆಚ್ಚಿನ ಜನಸಂಪರ್ಕದ ಕೇಂದ್ರವ್ಯವಸ್ಥೆಯ ಕುರುಹೆನ್ನಬಹುದು. ಹೀಗೆಯೇ ಕ್ರಿ.ಶ. ೧೩೧೮ರ ಸುಗ್ಗನಹಳ್ಳಿ ಶಾಸನದಲ್ಲಿ[೨೦] ವೀರಬಲ್ಲಾಳನ ಕಾಲದಲ್ಲಿ ಸಿಂಗೆಯ ದಂಣ್ನಾಯಕನ ಅನುಮತಿಯಿಂದ ಕೆಳ್ಗಲಿನಾಡ ಕಲುವೊಳೆನಾಡಿನ ಗ್ರಾಮಗಳನ್ನು ನಾಡುಪ್ರಭುಗಳಾದ ಸುಗನಹಳ್ಳಿಯ ಸಾಕಂಣ, ಹಾಗಲಹಳ್ಳಿ ಮಾರಗೌಡ ಸೇರಿ ದಾನ ನೀಡಿರುವ ವಿಷಯ ಸೂಚಿತವಿದೆ. ಅಂದರೆ ಇವರೆಲ್ಲ ಹೊಯ್ಸಳರ ಧೀನರಾದ ತುಂಡುನಾಯಕರಾಗಿ ಅರ್ಥಾತ್ ಪಾಳೆಪಟ್ಟಿನ ಒಡೆಯರಂತೆ ಕೆಲಸ ನಿರ್ವಹಿಸಿರುವುದು ಗಮನಕ್ಕೆ ಬರುತ್ತದೆ. ಕ್ರಿ.ಶ. ೧೩೧೯ರ ಚನ್ನಮಾನಹಳ್ಳಿ ಶಾಸನದ ರೀತ್ಯಾ (ಚನ್ನಪಟ್ಟಣ ೧೨, ರಾಮನಗರ ತಾ. ಚನ್ನಮಾನಹಳ್ಳಿ) ವೀರಬಲ್ಲಾಳನ ಆಳ್ವಿಕೆಯ ಸಮಯದಲ್ಲಿ ಮಹಾಮಂಡಲೇಶ್ವರ ಬೊಂಬೆಯ ದಂಡನಾಯಕರ ಚಿಕ್ಕೆಯ ಸಾಹಣಿಯರ ಕುಮಾರ ಸಿಂಗೆಯ ದಂಡನಾಯಕರ ಕಾಲದಲ್ಲಿ (ಕಲು)ವಳಿ ನಾಡೊಳಗಣ ಚಂದಿಮಾದಿಯ

ಹಳ್ಳಿಯನು ಗುಡಿಸಿ ಪಟ್ಟಣವ ಮಾಡಿ ನಾಡ ಸಮಸ್ತ ಪ್ರಜೆಗವುಡುಗಳನ್ನು ಮುಂದಿಟ್ಟುಕೊಂಡು, ಪಟ್ಟಣದಾನ, ಭೂದಾನ ಮಂಡಗುಟ್ಟೆ ವೀರಂಗಣೆಗರಳ್ಳಿ ಗ್ರಾಮೋತ್ಸನ್ನ ಹಾಗೂ ದೇವದಾನ, ತೊತ್ತುಗಳ ಹಕ್ಕು ಆಸ್ತಿ ವಿಲೇವಾರಿ, ಪಟ್ಟಣದ ಸಂತೆಯನ್ನು ಕಟ್ಟಿಸುವುದು ಇತ್ಯಾದಿಗಳನ್ನು 'ಎಳ್.ಬಿ.ನಾಯಕನು ಮಾಡಿಸಿದ ಸಂಗತಿ ಇದೆ. ಇಲ್ಲಿ ಗ್ರಾಮ ಜೀರ್ಣೋದ್ಧಾರ ನಗರೀಕರಣ ಆರ್ಥಿಕ ಚಟುವಟಿಕೆ, ದೇಗುಲ ನಿರ್ಮಾಣ ಇತ್ಯಾದಿ ಕಾರ್ಯಗಳನ್ನು ಪ್ರಜಾಜೀವನದ ನೇರ್ಪುಗಾರಿಕೆ ಸಹಿತವಾಗಿ ಪಾಳೆಪಟ್ಟಿನ ನಾಯಕನ ಹೊಣೆಗಾರಿಕೆಯಲ್ಲಿ ನಡೆಸಿದ ಚಿತ್ರವಿದೆ. ಸಾಂಸ್ಕೃತಿಕ ಜೀವನದ ಚೌಕಟ್ಟನ್ನು ನೀಡಿ ಅಂದಿನ ಅಧೀನ ನಾಯಕರು ನಿರ್ವಹಿಸುತ್ತಿದ್ದ ಕಾರ್ಯಗಳ ಚಿತ್ರ ಇಲ್ಲಿದೆ. ಈ ಶಾಸನದಲ್ಲಿ ಬರುವ ವೀರಂಣಿಗರ ಹಳ್ಳಿ ಬಹುಶಃ ಸನಿಹದ ಇಂದಿನ ಅರ್ಚಕರಹಳ್ಳಿಗೆ ಇದ್ದ ಪ್ರಾಚೀನ ಹೆಸರಾಗಿದ್ದು ಈ 'ಎಳ್.ಬಿ.ನಾಯಕ'ನ ಆಳ್ವಿಕೆಗೆ ಸೇರಿತ್ತೆನ್ನಬೇಕು. ಕ್ರಿ.ಶ. ೧೩೩೪ರ ಹಾಗಲಹಳ್ಳಿ ಶಾಸನದ ರೀತ್ಯಾ[೨೧] ಸಾಮಂತಾಧಿಪತಿ ಮೊಯಿಲೆ ನಾಯಕನು ರಾಜ್ಯ ಮಾಡುವಲ್ಲಿ, ಹಾಗಲಹಳ್ಳಿಯನ್ನು ಅವನ ಅಧೀನ ನಾಯಕ ಕಲನಾಡಪ್ರಭು ಕಿತ್ತನೆಲೆಯ ಹೊಂನಗವುಡನ ಮಗ ಬೀರಂಣಗೆ ಸರ್ವಮಾನ್ಯ ಕೊಡುಗೆಯಾಗಿ ನೀಡಿದ ಅಂಶವಿದೆ. ಈ ಅಂಶಗಳಿಂದ ವಿಜಯನಗರ ಪೂರ್ವದಲ್ಲಿಯೆ ಹೊಯ್ಸಳರಲ್ಲಿದ್ದ ಒಂದು ಮಾದರಿಯ ನಾಯಕರ ಆಡಳಿತ ವ್ಯವಸ್ಥೆಯು ವಿಜಯನಗರದ ಸಂಗಮ ಅರಸರಿಗೆ ಅಮರನಾಯಕರ ಪಾಳೆಪಟ್ಟಣ ವ್ಯವಸ್ಥೆಗೆ ಪೂರಕ ಪೂರ್ವ ಮಾದರಿಯಂತೆ ಪ್ರೇರಣೆ ನೀಡಿರಬೇಕೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಕೆಪ್ಪಿಲಿ, ಕೆಳಲೆ, ಕಲುವಳನಾಡಿನ ವಿಜಯನಗರ ಕಾಲದ ಪಾಳೆಯಪಟ್ಟುಗಳನ್ನು ಗಮನಿಸಬಹುದು.

ಕ್ರಿ.ಶ. ೧೩೫೧ರ ಐಜೂರು ಶಾಸನ[೨೨]ವು ಬುಕ್ಕನು ಮಹಾಮಂಡಲೇಶ್ವರನಾಗಿದ್ದ ಸಮಯದ ಗ್ರಾಮೀಣ ಪಾಳೆಯಪಟ್ಟಿನ ವಿಷಯವೊಂದನ್ನು ತಿಳಿಸುತ್ತದೆ. ಅಂದಿನ ಕಲುವಳಿನಾಡಿನ ಪ್ರಭುಗಳು ಆ ನಾಡಿಗೆ ಸೇರಿದ್ದ ತಾಳವಾಡಿಯ ಬಂಮಣ್ಣ ಗಂಗವಾಡಿಯ ಮಾದಣ್ಣ, ಮಿಳೆಹಳ್ಳಿಯ ಅಂಕಣ್ಣ ಒಡೆಯ ಮಾಡಬಾಳಿನ ಬೊಲಗಲುಂಡ ಬೆಟ್ಟದ ಬೊಂಮ್ಮಯನಾಯಕ, ಜೀಯಗಲುಂಡಹಳ್ಳಿಯ ಇರಾಮಗವುಂಡ, ಅರೆಗೊಳಲ ಚೆಲುವಣ್ಣ ಇವರಲ್ಲದೆ ಸೇನಬೋವ ಚೂಡಪ್ಪ ಹಾಗೂ ಸಮಸ್ತ ಪ್ರಜೆಗೌಡರು ಮಹಾಸಾಮಂತ ಮೊಯಿಲೆನಾಯಕರ ತಮ್ಮ ಕಲುವಳಿನಾಡಿನಾಡಿನ ವಯಿಜೂರನ್ನು ಕೊಡುಗೆಯಾಗಿ ಕೊಟ್ಟ ವಿಷಯವನ್ನು ಹೇಳುತ್ತದೆ. ಅಲ್ಲದೆ ಈ ಕೊಡುಗೆಗೆ ಯಾವೊಂದು ರೀತಿಯ ಅಪಾಯ ಒದಗಿದರೂ ಇಡೀ ನಾಡು ಪರಿಹರಿಸಿ ಕೊಡಬೇಕು ಎಂದಿದೆ.

ಶಾಸನದಲ್ಲಿ ಬರುವ ಮೊಯಿಲೆನಾಯಕ ಕುಕ್ಕಲನಾಡ (ನೆಲಮಂಗಲ ಪ್ರದೇಶ) ಅಧಿಪತಿಯಾಗಿ, ಹೊಯ್ಸಳರ ಕಾಲದಿಂದಲೂ ಇದ್ದವು. ಅವನ ತಮ್ಮನಿಗೆ ಐಜೂರನ್ನು ಆಳಿಕೊಳ್ಳಲು ಕೊಟ್ಟಿರುವ ಸೂಚನೆ ಇಲ್ಲಿದೆ. ಈ ಐಜೂರು ಐದು ಊರುಗಳ ಸಮೂಹದ ಸಂಯುಕ್ತ ಊರಾಗಿತ್ತು. ಚನ್ನಯ್ಯನಾಯಕನು ಸಾಧಿಸಿದ ಯಾವುದೋ ಒಂದು ಶೌರ್ಯ ಸಾಹಸದ ಕಾರ್ಯಕ್ಕೆ (ಶಾಸನದಲ್ಲಿ ನೇರವಾಗಿ ಹೇಳಿಲ್ಲ) ಈ ಊರಿನ ಕೊಡುಗೆ

ಒದಗಿರಬೇಕು. ಅಲ್ಲದೆ ಹೊಯ್ಸಳರ ಕಾಲದ ನಾಯಕರ ವಂಶದ (ಸಾಮಂತರು) ವರು ವಿಜಯನಗರ ಕಾಲದಲ್ಲೂ ಅಮರನಾಯಕರಾಗಿ ಮುಂದುವರಿದ ಉದಾಹರಣೆ ಇದಾಗಿದೆ. ಈ ಮನೆತನದ ಸೋದರರೂ ಪಾಳೆಪಟ್ಟುಗಳ ಒಡೆಯರಾದುದು ಕಾಣಬರುತ್ತದೆ. ಶಾಸನವು ಆ ಕಾಲದ ಕಲುವಳಿನಾಡಿನ ಉಪಪಾಳೆಯಪಟ್ಟುಗಳು ಹಾಗೂ ಅಲ್ಲಿನ ನಾಯಕರ ಪಟ್ಟಿಯನ್ನೂ ನೀಡಿದೆ; ಅವರಿಗಿದ್ದ ಸ್ಥಾನ ಗೌರವವನ್ನೂ ಸೂಚಿಸಿದೆ. ಪಾಳೆಯಪಟ್ಟಾಗಿ ಪರಿವರ್ತಿಸಿ ಕೊಡುಗೆಯಾಗಿ ಕೊಡುವ ಕಾಲಕ್ಕೆ ನಾಡಿನ ಉಪಪಾಳೆಯಪಟ್ಟಿನ ಒಡೆಯರೆಲ್ಲರ ಸಾಕ್ಷ್ಯ ಸಮಕ್ಷ್ಯವಿರಬೇಕಾಗಿದ್ದುದೂ ಗಮನಾರ್ಹ. ಇಂದಿಗೂ ಈ ಮೇಲ್ಸುಚಿತ ಗ್ರಾಮಗಳು ರಾಮನಗರ ತಾಲೂಕಿನಲ್ಲಿವೆ. ಚೆನ್ನಯ್ಯ ನಾಯಕನ ಶಿಲ್ಪವೂ, ಶಿರವೊಂದನ್ನು ಎಡಗೈಯಲ್ಲಿ ಹಿಡಿದುನಿಂತ ವೀರಶಿಲ್ಪವಾಗಿ ಇತ್ತು. ಇಂದು ಕಾಣೆಯಾಗಿದೆ ಅಥವಾ ಜೀರ್ಣೋದ್ಧಾರಿತ ಐಜೂರು ಮಾರೆಮ್ಮನ ಗುಡಿಯ ಆವರಣದಲ್ಲಿರುವ ಈ ಶಾಸನದ ತಳದಲ್ಲಿ ಹೂತುಹೋಗಿರುವಂತಿದೆ. ಇದರಲ್ಲಿ 'ಬೆಟ್ಟದ ಬೊಮ್ಮಯ್ಯ ನಾಯಕ' ಎನ್ನುವಲ್ಲಿ ಇಂದಿನ ರಾಮದೇವರಬೆಟ್ಟ, ಬೊಮ್ಮಯ್ಯನಾಯಕನ ಗಿರಿದುರ್ಗವಾಗಿ ಪಾಳೆಪಟ್ಟು ಆಗಿತ್ತು ಎಂದು ಅದರ ಪ್ರಸಿದ್ಧಿ ಹಾಗೂ ಆಯಕಟ್ಟಿನ ಕಾರಣ ತಿಳಿಯುತ್ತದೆ. ಇನ್ನೂ ಪಾಳೆಯಪಟ್ಟಿನ ರಕ್ಷಣೆಗೆ ಜನಸಾಮಾನ್ಯರೂ ಸೇರಿದಂತೆ ನಿರ್ವಹಿಸಬೇಕಾದ ಪಾತ್ರವನ್ನು ಈ ಶಾಸನ ತಿಳಿಸುತ್ತದೆ.

ಇಮ್ಮಡಿ ಹರಿಹರನ ಮಹಾಪ್ರಧಾನಿ ಗುಂಡಪ ದಂಡನಾಯಕನ ಆಳ್ವಿಕೆಗೆ ಸೇರಿದ್ದುದು ಕೆಳಲೆನಾಡಿನ ಮುಖ್ಯ ಸ್ಥಳ ಹಿರಿಯ ಮಳಉರು. ಆ ಸ್ಥಳದ ಚತುಸ್ಸೀಮೆಯೊಳಗಿನ ಹಿರಿಯೂರು ವಿಜಯದಂಣಾಯಕ ಪಟ್ಟಣದ ಷೊರಪಟ್ಟಣಗಿರಿಯಲ್ಲಿ ಮಹಾ ಮುಖ್ಯ ವಡ್ಡ ವ್ಯವಹಾರಿ ಆಗಿದ್ದವನು ಸಿಂಧವಕುಲದ ಪಟ್ಟಣಸ್ವಾಮಿ ಕೇತಿಶೆಟ್ಟಿ. ಅವನ ಮಗ ಕಾಳಿಕಪ್ಪ ಶೆಟ್ಟಿಗೆ ಹದಿನೆಂಟು ಸೀಮೆಯ ವ್ಯವಹಾರವನ್ನು (ಬಹುಶ: ವ್ಯಾಪಾರ ವಹಿವಾಟು) ಸಂಸ್ತಾ ಶಾಸನ ಮಾಡಿ ಅಂದರೆ ಲಿಖಿತ ರಾಜಶಾಸನ ಹೊರಡಿಸಿ ನೀಡಲಾದ ವಿಷಯವಿದೆ. ಚನ್ನಪಟ್ಟಣ ಹೋಬಳಿಗೆ ಸೇರಿದ ಹರೂರುವಿನಲ್ಲಿ ಈ ಶಾಸನವಿದೆ. ಕ್ರಿ.ಶ. ೧೩೭೪ರ ಈ ಶಾಸನವನ್ನು ಗಮನಿಸಿದರೆ[೨೨] ಹರೂರು ಹಿಂದೆ ಹಿರಿಯೂರು ವಿಜಯದ ದಂಣಾಯಕ ಪಟ್ಟಣವೆನಿಸಿ ಆರ್ಥಿಕ ವ್ಯವಹಾರಗಳಿಗೆ ಮುಖ್ಯ ನೆಲೆಯಾಗಿತ್ತು. ಕೆಳಲೆನಾಡಿನ ಮುಖ್ಯ ವ್ಯಾಪಾರ ಸ್ಥಳವಾಗಿತ್ತು. ನಗರೀಕರಣಗೊಂಡಿತ್ತು ಎಂದು ತಿಳಿಯುತ್ತದೆ. ಸಂಸ್ತಾ ಶಾಸನ ನೀಡಿರುವ ಕಾರಣ ೧ನೇ ವರ್ಗದ ಅಮರನಾಯಕರ ಅಧೀನದಲ್ಲಿ ಪಟ್ಟಣಸ್ವಾಮಿಗಳೂ ಪಾಳೆಯಪಟ್ಟಿನ ಆರ್ಥಿಕ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸೂಚನೆ ಒದಗುತ್ತದೆ. ಒಂದು ರೀತಿಯಲ್ಲಿ ಪಾಳೆಯಪಟ್ಟಿನ ವಿತ್ತ ಸಚಿವರಂತೆ ಅವರಿದ್ದರೆನ್ನಬಹುದು.

ಕ್ರಿ.ಶ. ೧೩೬೯ ಬುಕ್ಕನ ವಿಜಯನಗರ ಸಾಮ್ರಾಜ್ಯದಾಳಿಕೆಯ ಸಮಯ. ಆಗ ಕೊಂಗುನಾಡ ಮಧ್ಯದ ಕುಂದಊರದುರ್ಗದಲ್ಲಿ ಇದ್ದ ರಾಯನಾಯಕ ಆಳುತ್ತಿದ್ದ. ಆ ರಾಯನಾಯಕನ ಗೋವಿನ ಹಿಂಡು ಕಾವೇರಿ ತೀರದಲ್ಲಿ ಸಂರಕ್ಷಣೆಗಿತ್ತು. ಆ ಗೋವಿನ

ಹಿಂಡನ್ನು ತಿರುವಣಂಬಿಯ ಕಂಪೂಂಣೋಡೆಯರಸನ ಕಡೆಯವರು ಹಿಡಿದುಹೋಗಿ ತಮ್ಮ ರಹಸ್ಯ ಗೋಮಾಳದಲ್ಲಿಟ್ಟುಕೊಂಡರು. ಆ ಸಮಯದಲ್ಲಿ ಕೆಳಲೆನಾಡಿನ ಮಹಾಪ್ರಭು ಮಳಲೂರು ಪಟ್ಟಣದ ಯೆರಿಯಂಗ ಕುಲೋದ್ಧಾರ ಬೊಮ್ಮಗೌಡ ಆಗಿದ್ದ. ಅವನ ಮಗ ವಿಜಯಂಣ, ತಮ್ಮನಾಳುವ ಒಡೆಯ ರಾಯನಾಯಕನ ನಿರೂಪದಂತೆ ಗೋವುಗಳನ್ನು ಮರಳಿ ಬಿಡಿಸಿಕೊಂಡು ಬಂದ. ಹಾಗೆ ಬರುವಲ್ಲಿ ಕಾದು ವೀರಸ್ವರ್ಗವೇರಿದ ಸಂಗತಿಯನ್ನು ಅಬ್ಬೂರು ಶಾಸನವು ಹೇಳುತ್ತದೆ.[೨೪] ಇಲ್ಲಿ 'ಕೊಂಗುನಾಡ ಮಧ್ಯದ ಕುಂದಊರದುರ್ಗ' ಹಾಗೂ 'ಕಾವೇರಿ ತೀರ'ದ ಪ್ರಸ್ತಾಪವಿದೆ. ಕೊಂಗುನಾಡು ಕಾವೇರಿ ಪ್ರದೇಶವನ್ನು ಒಳಗೊಂಡಂತೆ ಕೊಡಗನ್ನು ಕೊಂಗಾಳ್ವರ ಕಾಲದಲ್ಲಿ ಒಳಗೊಂಡಿತ್ತು.[೨೫] ಮಡಿಕೇರಿಗೆ 'ಶೃಂಗಕುಂದ (ಸೇಗುಂದ)' ಎಂಬ ಜನಪದೀಯ ಹೆಸರೂ ಇದ್ದು, ಕೊಡಗಿನಲ್ಲಿರುವ ಕುಂದಗಿರಿ, ಕುಂದಕುಕ್ಕೂರು, ಗ್ರಾಮಗಳಲ್ಲಿ ಯಾವ ಗಿರಿದುರ್ಗದ ಚಹರೆ ಇಲ್ಲದಿರುವ ಕಾರಣ, ಬಹುಶಃ ರಾಯನಾಯಕ ಮಡಿಕೇರಿಯಂಥ ಎತ್ತರ ಪ್ರದೇಶದಲ್ಲಿ ದುರ್ಗವೊಂದನ್ನು ಕಟ್ಟಿಕೊಂಡಿದ್ದಿರಬಹುದೇ? ಎನಿಸುತ್ತದೆ. ವಿಜಯನಗರ ಕಾಲದ ಪಾಳೆಯಪಟ್ಟು ಉತ್ತರ ಕೊಡಗಿನ ಆ ಭಾಗದಲ್ಲಿದ್ದು, ಗೋರಕ್ಷಣೆಗೆ ನೆರವಾಗಿದ್ದಿರಬಹುದೆ ಎನಿಸುತ್ತದೆ. ಅಂಥವನ ಅಧೀನದಲ್ಲಿ ಕೆಳಲೆನಾಡ ಮಳೂರುಪಟ್ಟಣ ಒಂದು ಉಪಪಾಳೆಯಪಟ್ಟಾಗಿ ವಿಜಯನಗರ ಕಾಲದಲ್ಲಿ ಇದ್ದ ಬಗ್ಗೆ ಸೂಚಿತವಾಗುತ್ತದೆ. ಅಲ್ಲದೆ 'ರಾಯನಾಯಕನ ನಿರೂಪದಿಂದ' ಎಂದಿರುವಲ್ಲಿ, ಅಮರನಾಯಕರಿಗೆ ಒದಗಿದ ತುರುಗೋಳ ಕಾಳಗ ಸಂದರ್ಭದಲ್ಲಿ ಸೈನಿಕಸೇವೆ ಒದಗಿಸಬೇಕಾದ ಹೊಣೆಯಂತೆ ಇಲ್ಲಿ ಯರಿಯಂಗ ಕುಲೋದ್ಧಾರ ಬೊಮ್ಮಗೌಡ ಒದಗಿಸಿದ್ದಾರೆ. ಇಲ್ಲಿ ಚಕ್ರವರ್ತಿ ಹಾಗೂ ೧ ಮತ್ತು ೨ನೇ ವರ್ಗದ ಅಮರನಾಯಕರ ಸಂದರ್ಭವನ್ನು ಹೇಳಿದಂತಿದೆ. ಗಂಗವಂಶದ ಪ್ರಭಾವವೂ 'ಯೆರಯಂಗ ಕುಲೋದ್ಧಾರ'ನಲ್ಲಿ ಕಾಣುತ್ತದೆ. ಬಹುಶಃ ವಂಶಿಕ ಶಾಖೆಯವರು ಪಾಳೆಯಪಟ್ಟಿನ ಒಡೆಯರಾಗಿದ್ದ ಸಂದರ್ಭಸೂಚಿ ಇಲ್ಲಿ ಕಾಣಬರುವಂತಿದೆ. ಪಾಳೆಪಟ್ಟುಗಳ ಹೊಣೆಯಲ್ಲಿ ಗೋರಕ್ಷಣೆಯ ಕಾರ್ಯದ ವ್ಯಾಪ್ತಿಯೂ ಇಲ್ಲಿ ಸೂಚಿತವಾಗಿದೆ. ಇದಲ್ಲದೆ ಕೊಂಗಾಳ್ವರ ನಂತರ ಮಧ್ಯಂತರ ಚಂಗಾಳ್ವರ ಕೊಡಗಿನ ಭಾಗದಾಳ್ವಿಕೆಯ ಅನಿಶ್ಚಿತ ಘಟ್ಟಗಳಲ್ಲಿ ರಾಯನಾಯಕನು ವಿಜಯನಗರ ಕಾಲದ ಕೊಡಗಿನ ಭಾಗವೊಂದರ ಪಾಳೆಪಟ್ಟಿನ ಅಸ್ತಿತ್ವವನ್ನೂ ತೋರಿದಂಥವನಾಗಿರಬಹುದೆನಿಸುತ್ತದೆ. ಕಾರಣ ಈ ಹೊತ್ತಿಗೆ ಚಂಗಾಳ್ವ ವಂಶಿಕರು ಉತ್ತರ ಕೊಡಗಿನ ಕೆಲವು ಭಾಗಗಳಲ್ಲಷ್ಟೆ ಚದುರಿಕೊಂಡು, ದಕ್ಷಿಣಕೊಡಗಿನಲ್ಲಿ ಪಾಳೆಯಪಟ್ಟು ಹೊಂದಿದ್ದರು. ಪಾಲ್ವರೆ, ಕುಂತೂರು ಅದಕ್ಕೆ ಉದಾಹರಣೆ ಎನ್ನಬೇಕು. ಕ್ರಿ.ಶ. ೧೩೭೧ರಲ್ಲಿ ಈ ಹಿನ್ನೆಲೆಯಲ್ಲಿ ತಾವು ನಾಡು (ಭಾಗಮಂಡಲ ಪ್ರದೇಶ) ಮಲೆಯಾಳದ ಮೇಲ್ಪಂಡಿ ಕುಂಞ ಅರಸನ ಪಾಳೆಪಟ್ಟಾಗಿ ಅವನು ಬುಕ್ಕನ ಅಧೀನ ಅಮರನಾಯಕನಾಗಿದ್ದಂತೆ ಕಾಣುತ್ತದೆ. ಕ್ರಿ.ಶ. ೧೩೫೭ರ ಅರಕಲಗೂಡು ಶಾಸನದ ರೀತ್ಯಾ (ಎ.ಕ.ಸಂ. ೮, ಸಂಖ್ಯೆ ೧೦೭) ಚಂಗನಾಡಿನ ಹೊಣೆ ಬುಕ್ಕನಿಗೆ ಇತ್ತು. ಕೊಂಗಾಳ್ವರ ಆಳ್ವಿಕೆ ಕಾರಣ ಉತ್ತರಕೊಡಗಿನ

ಭಾಗಗಳು ಕೊಂಗನಾಡೆನಿಸಿದ್ದು, ಮಡಿಕೇರಿ ಪ್ರದೇಶ ಆ ಕಾಲಕ್ಕೆ 'ಶೃಂಗಕುಂದೆ' ಎನಿಸಿ ಬುಕ್ಕನ ಅಧೀನದ ಕೊಂಗನಾಡಿನ ಭಾಗವೆಂದು ಚಾಲ್ತಿ ಮುಂದುವರಿದದ್ದು ಹೊರಗಿನ ಶಾಸನಕಾರರಿಗೆ ಹಾಗೆಯೇ ರೂಢಿ ಇದ್ದುದರ ಕಾರಣವಾಗಿರಬೇಕು. ಅದಾಗಿ ರಾಯನಾಯಕನ ಪಾಳೆಯಪಟ್ಟೊಂದಾಗಿ, ಬುಕ್ಕನ ಕಾಲದಲ್ಲಿ 'ಶೃಂಗಕುಂದ' ಇದ್ದಿರುವ ಸಾಧ್ಯತೆ ಇದೆ. ಆ ವೇಳೆಗೆ 'ಚಂಗನಾಡಾಗಿ' ಬುಕ್ಕನ ಅಧೀನಕ್ಕಿದ್ದರೂ ಚನ್ನಪಟ್ಟಣದಂಥ ತಮಿಳು ಆಳ್ವಿಕೆಯ ಪ್ರಭಾವದ ಹಿನ್ನೆಲೆಯಲ್ಲಿ ತಮಿಳರ ರಾಜಕೇಸರಿವರ್ಮನಿಂದಾಗಿ 'ಕೊಂಗಾಳ್ವ ಮನಿಜ' ಪ್ರತಿಷ್ಠಾಪಿತನಾಗಿ ಅವನ ವಂಶವು ಕ್ರಿ.ಶ. ೧೧೭೬ ರವರೆಗೆ ಕೊಡಗಿನಲ್ಲಿ ಆಳಿದುದರ ಸ್ಮರಣೆಯ ಪಳೆಯುಳಿಕೆಯಾಗಿ ಚನ್ನಪಟ್ಟಣದ 'ಕೊಂಗನಾಡು ಮಧ್ಯದ' ಎಂಬ ಪದ ಕಾಣಿಸಿರುವಂತಿದೆ. ಆದರೆ ಅಷ್ಟುದೂರ ಇದ್ದವನಿಗೆ ಚನ್ನಪಟ್ಟಣದ ಸೀಮೆಯ ಪಾಳೆಯಪಟ್ಟೊಂದರ ಮೇಲೆ ಹಿಡಿತ ದತ್ತವಾಗಿತ್ತೇ ಎಂಬ ಅನುಮಾನವೂ ಏಳುತ್ತದೆ. ಬಹುಶಃ ಒಂದನೇ ವರ್ಗದ ಅಮರನಾಯಕನಾಗಿ ಅವನಿಗೆ ಬಡ್ತಿ ಒದಗಿದರೂ ಇಲ್ಲಿನ ಹೊಣೆ ಹೊರಿಸಲಾಗಿತ್ತು ಎಂದರೆ ಅಮರನಾಯಕರಲ್ಲಿ ವರ್ಗಾವಣೆ ಪದ್ಧತಿಯೂ ಇದ್ದಿರಬಹುದು ಎಂಬುದಕ್ಕೂ ಎಡೆಯಾಗುತ್ತದೆ.

ಕ್ರಿ.ಶ. ೧೪೧೪ರ ದೇವರಾಯ ಒಡೆಯನ ಕಾಲದಲ್ಲಿ ಕೆಳಲೆನಾಡಿನ ಮಹಾಪ್ರಭು ಮಳಲೂರು ಪಟ್ಟಣದ ಕಿತ್ತಿಗೌಡನ ಮಕ್ಕಳಾದ ಮಂಜಪ್ಪ, ದೇವಗಉಡಗಳು ಎಲೆಕೇರಿಯಲ್ಲಿ ಕ್ರಿ.ಶ. ೧೪೩೭ರಲ್ಲಿ ಅದೇ ದೇವರಾಯನ ಕಾಲದಲ್ಲಿ ಕೆಳಲೆನಾಡ ಮಳೂರು ಪಟ್ಟಣದ ಗವುಡ ದೊಡಿಸೆಟ್ಟಿಯ ಮಗ ತಿರುಮಲೈಯ ಹೊಂಗನೂರಿನ ಹುಯಿಲಿನಲ್ಲಿ ಕಾದಿ ವೀರಸ್ವರ್ಗವೇರಿದ ವಿಷಯ ಶಾಸನೋಕ್ತ[೨೬] ಪಾಳೆಯಪಟ್ಟಿನ ಒಡೆಯರನ್ನು ಆಗಾಗ ಬದಲಾಯಿಸುತ್ತಿದ್ದ ಸೂಚನೆ ಅಂದರೆ ಒಂದೇ ನೆಲೆಯಲ್ಲಿ ವಂಶಪಾರಂಪರ್ಯವಾಗಿ ಒಂದೇ ಕುಟುಂಬದ ಅಮರನಾಯಕರನ್ನು ಇರಿಸುವ ಅಗತ್ಯವಿದ್ದಂಥ ನಿಯಮವೇನೂ ಇರಲಿಲ್ಲ ಎಂಬ ಸೂಚನೆ ಇಲ್ಲಿದೆ. ಹಾಗೂ ಪಾಳೆಯಪಟ್ಟಿನ ನಾಯಕರಲ್ಲಿ ಕುಟುಂಬದ ವೀರರೆಲ್ಲ ಸೈನಿಕಸೇವೆ ಸಲ್ಲಿಸುತ್ತಿದ್ದ ಸಂಗತಿಯೂ ಇಲ್ಲಿ ಕಾಣುತ್ತದೆ.

ವೀರಪ್ರತಾಪ ದೇವರಾಯನ ಕಾಲದಲ್ಲಿ ಮಾಕಳಿಗ್ರಾಮದ ನಾಯಕತನವು ಮೂರಿರಾಯರಗಂಡ ರಾಯಡೆನಾಗೆಯ ನಾಯಕರ ಮಗ ಗೋಪಿನಾಯಕನಿಗಿತ್ತು. ಅವನು ತನ್ನ ನಾಯಕತನಕ್ಕೆ ಸಲ್ಲುವ ಮಾಕಳಿಯ ಕಾಲುವಳ್ಳಿ (ಉಪಗ್ರಾಮ)ಯನ್ನು ಗೋಪಸಮುದ್ರವೆಂದು ಹೆಸರಿಟ್ಟು ಕೇತ್ ಗೌಡನಿಗೆ 'ತವಿಗಉಡಗೆ'ಯಾಗಿ ಹೊಸದಾಗಿ ಊರುಕಟ್ಟಿ, ಕರುವನಿಕ್ಕಿ (ಊರು ಸ್ಥಾಪನೆಯಕಲ್ಲು), ಹೊಸಕೆರೆ ಕಟ್ಟಿ ಕಟ್ಟುಗುತ್ತಿಗೆಯಾಗಿ ಗಲುಡುಕೊಡಿಗೆಯಾಗಿ ಬೀಜವರಿ ಖಂಡುಗ ಗದ್ದೆ, ಹೊಲ ಇತ್ಯಾದಿಗಳನ್ನು ಸರ್ವಮಾನ್ಯವಾಗಿ ಕೊಡುತ್ತಾನೆ. ಇದಕ್ಕೆ ಅವನ ಸತಿ(ನಾಯಿಕಿತಿ) ಪುತ್ರರು ಸಹಸಮ್ಮತಿಯಿಂದ ಒಡಂಬಟ್ಟು ಕೊಟ್ಟಿದ್ದಾರೆ. ಇಲ್ಲಿ ಒಂದು ಉಪಪಾಳೆಯಪಟ್ಟನ್ನು ಸ್ಥಾಪಿಸುವಲ್ಲಿ, ಚಕ್ರವರ್ತಿಯ ಹೆಸರಿನ ನಮೂದನೆ, ಊರು ಸ್ಥಾಪನೆಕಲ್ಲು 'ಸಮುದ್ರ' ಎಂಬ

ಹೆಸರಿಗನುಗುಣವಾಗಿ ಹೊಸಕೆರೆಯ ನಿರ್ಮಾಣ, ಕೊಡುಗೆಯನ್ನು ವಿವಿಧ ಬಗೆಯಾಗಿ ನೀಡಿ ಪಾಳೆಪಟ್ಟಿನ ನಿರ್ವಹಣೆಗೆ ಒಂದು ಭದ್ರವಾದ ಅಸ್ತಿತ್ವ ಕಲ್ಪಿಸಿಕೊಡುತ್ತಿದ್ದ ಸೂಚನೆ ಇದೆ. ಅಲ್ಲದೆ ನಾಯಕನು ತನ್ನ ಕುಟುಂಬದವರ (ಬಹುಶಃ ಅವರ ಹೆಸರಿನಲ್ಲಿ ಸ್ಥಿರಾಸ್ತಿ ಇದ್ದಿರುವ ಜಾಗವಾದ ಕಾರಣ) ಸಮ್ಮತಿಯನ್ನು ಅಂದರೆ ಸಕುಂಟುಬ ಸಮ್ಮತಿಯಿಂದಲೂ ಪಾಳೆಯಪಟ್ಟುಗಳನ್ನು ರೂಪಿಸಲು ಮುಂದಾಗುತ್ತಿದ್ದ ಚಿತ್ರವಿಲ್ಲದೆ 'ತವಿಗೌಡಿಕೆ' ಬಹುಶ: ಊರು ಕಟ್ಟಿದ ಮೇಲೆ ಕೊಡುವ ಮೊದಲ ಗೌಡಿಕೆ ಆಗಿರಬೇಕು. ಅದೊಂದು ರೀತಿ ಆಧಾರ ಗೌಡಿಕೆ, ಅಸ್ತಿತ್ವ ಗೌಡಿಕೆ, ಪಾಳೆಯಪಟ್ಟು ನಿರ್ವಹಿಸಲು ಕೊಟ್ಟ ಮೊದಲ ಅಧಿಕಾರವೆನ್ನಬೇಕು. ಹೀಗೆ ಗ್ರಾಮಾಭಿವೃದ್ಧಿಯ ಹೊಣೆ ನಾಯಕರಿಗಿದ್ದು, ಜನರೊಡನೆ ಆತ್ಮೀಯವಾಗಿ ಬೆರೆತು ವಿಜಯನಗರ ಸಾಮ್ರಾಜ್ಯದ ಬೇರುಗಳನ್ನು ಗಟ್ಟಿ ಮಾಡಿದ್ದರು. ಹಾಗೂ ಸಾಮ್ರಾಜ್ಯ ಮತ್ತು ಜನತೆಯ ನಡುವಣ ಸೇತುವಾಗಿದ್ದರು; ಅದು ನಾಯಕರ ಇಡೀ ಕುಟುಂಬದ ನಿಷ್ಠಾವಂತ ಹೊಣೆಯೂ ಆಗಿತ್ತೆನ್ನಬೇಕು. ಇದನ್ನೆಲ್ಲ ಕ್ರಿ.ಶ. ೧೪೧೯ರ ಮಾಕಳಿ ಶಾಸನದಿಂದ[೨೨] ಹೆಕ್ಕಬಹುದಾಗಿದೆ.

ಕ್ರಿ.ಶ. ೧೪೩೨ರ ಕೆಳಲೆನಾಡಿನ ಮಳೂರು ಪಟ್ಟಣದ ಗೌಡಪ್ರಭು ಮಾಯಿದೇವನ ಮಗ ಮಾಯಿತಂಮ ಊರಿನ ವ್ಯವಹಾರಗಳನ್ನು ಸುಖವಾಗಿ ನಿರ್ವಹಿಸುತ್ತಿದ್ದ. ಊರಿನಲ್ಲಿ ಮಲ್ಲಯ್ಯದೇವರ ಬನವಿತ್ತು. ಶಿವರಾತ್ರಿಯ ದಿನ ಉಪವಾಸವಿದ್ದು ಜಾಗರದಿಂದ ಮಲ್ಲಯ್ಯದೇವರ ಬನದ ದೇಗುಲವನ್ನು ಕಾಯುತ್ತಿದ್ದ. ಆದರೆ ಶಿವರಾತ್ರಿಯ ದಿನವೇ ಬಹುಶ: ಪರಸಮಯಿ ಕಳ್ಳರ ಪಿತೂರಿಯ ವಿಷಯ ತಿಳಿದು ಜಾಗರಣೆ ಇದ್ದು ಕಾಯುತ್ತಿದ್ದಾಗ ದೇಗುಲ ಮುತ್ತಲು ಬಂದ ಅವರನ್ನೆಲ್ಲ ಘಾಯಗೊಳಿಸಿ ಓಡಿಸಿ ತಾನೂ ಗಾಯಗೊಂಡು ವೀರಸ್ವರ್ಗವೇರಿದ ಸಂಗತಿ ಪ್ರೌಢದೇವರಾಯ ಒಡೆಯನ ಕಾಲದ ಶಾಸನದಲ್ಲಿದೆ.[೨೩] ಇದೊಂದು ರೀತಿಯಲ್ಲಿ ಶೈವ ವೈಷ್ಣವ ಸಂಘರ್ಷದ ಸೂಚನೆ ಎನ್ನುವಂತಿದೆ. ಕಾರಣ ಮಳೂರು ಪ್ರಬಲ ವೈಷ್ಣವ ಕೇಂದ್ರವೂ ಆಗಿತ್ತಲ್ಲ! ಇನ್ನು ಮಲ್ಲಯ್ಯ ದೇವರಿಗೆ ಶಿವ ದೇವರಕಾಡು ಬೆಳೆಸಿರುವ ಉದಾಹರಣೆ ಇದೆ. ಅರ್ಥಾತ್ ದೇಗುಲಕ್ಕೆ ಮೀಸಲಾದ ದೇವರಕಾಡುಗಳು ವಿಜಯನಗರ ಕಾಲದಲ್ಲಿ ಪಾಳೆಯಪಟ್ಟುಗಳ ನಿರ್ವಹಣೆಗಿದ್ದವು ಎಂದೂ ತಿಳಿಯುತ್ತದೆ. ಇದೊಂದು ರೀತಿ ಧಾರ್ಮಿಕ ಅಂಗಳದಲ್ಲಿ ವಿಕಸಿಸಿದ್ದ ಪರಿಸರಪ್ರಜ್ಞೆ ಎನ್ನಬೇಕು. ಕೊಡಗಿನಲ್ಲಿ ಇಂಥ ನಿರ್ವಹಣೆ ಪ್ರತಿ ಗ್ರಾಮದಲ್ಲಿ ಪಾರಂಪರಿಕವಾಗಿದೆ. ಆದರೆ ಬಯಲುಸೀಮೆಯಲ್ಲಿ ಇಂಥ ವೃಕ್ಷ ನಿರ್ವಹಣೆ ವಿಜಯನಗರ ಕಾಲದ ಒಂದು ವಿಶೇಷ.

ಕ್ರಿ.ಶ. ೧೪೭೮ರ ಸಮಯ. ಶ್ರೀ ಮನ್ಮಹಾಮಂಡಲೇಶ್ವರ ಕಠಾರಿ ಸಾಳುವ ನರಸಿಂಹರಾಜ ಒಡೆಯನ ಆಳ್ವಿಕೆಯ ಸಂದರ್ಭ. ಅವನಿಗೆ ಧರ್ಮಶ್ರೇಯವನ್ನು ಬಯಸಿ ಕೆಳಲೆನಾಡಿನಲ್ಲಿ ತನ್ನ ನಾಯಕತನಕ್ಕೆ ಸಲ್ಲುವ ಚಾವಡಿಗೆ ಸೇರಿದ ಚಕ್ಕಲೂರು ಗ್ರಾಮವನ್ನು ಶ್ರೀಮತು ವರದರಾಜದೇವನು ಪುರಮಠ-ಪುರಧರ್ಮ ಸಾಧನವಾಗಿ ದಾನ ಕೊಡುತ್ತಾನೆ. ದಾನಪಡೆದವನು ಗೌಡಹಳ್ಳಿಯ ಮುದಿರಾಜವೊಡೆಯರ ಮಕ್ಕಳಾದ ದೊಡ್ಡಯ್ಯ ಒಡೆಯ.

ಈ ಪುರಧರ್ಮ ಶಾಸನದ ಕ್ರಮವಾದರೋ, ಆ ಗ್ರಾಮಕ್ಕೆ ಸಲ್ಲುವ ಗದ್ದೆ ಬೆದ್ದಲು ತೋಟ ತುಡಿಕ ಅಣೆ ಅಚ್ಚುಕಟ್ಟು ಕಿರುಕುಳ ಗುಳಿಗುಯ್ಯಲು ಸುವರ್ನಾದಾಯ ಸುಂಕ ಮಗ್ಗ (ದೆರೆ) ನಿಧಿ ನಿಕ್ಷೇಪ ಇತ್ಯಾದಿಯಾಗಿ ಸರ್ವಮಾನ್ಯಪುರವಾಗಿ ವಂಶಪಾರಂಪರ್ಯ ಅನುಭೋಗಿಕೆಗೆ ನೀಡಿರುವುದಾಗಿದೆ; ಹಾಗೂ ನಾಯಕ ವರದರಾಜದೇವನ ಇಷ್ಟ ದೈವವಾದ ವರದರಾಜದೇವರ ಮುಂದಿಟ್ಟು ಸಾಕ್ಷಿಯಾಗಿ ತನ್ನ ನಾಯಕಿ ಹಾಗೂ ಪುತ್ರರು, ದಾಯಾದಿಗಳು ಅನುಮತಿ-ಸಮ್ಮತಿ ಸಹಿತವಾಗಿ ಧಾರಾಪೂರ್ವಕವಾಗಿ ದಾನವನ್ನು ನೀಡಲಾಗಿದೆ. ವಿಶೇಷವೆಂದರೆ ಎಂದಿನ ಶಾಪಾಶಯಗಳ ಜೊತೆಗೆ 'ವಿಭೂತಿ ರುದ್ರಾಕ್ಷಿ ಪಾದತೀರ್ಥ ಪ್ರಸಾದ ಪಂಚಾಕ್ಷರಿಗೆ ಹೊರಗು' ಎಂಬ ಶಾಪಾಶಯವೂ ಇದ್ದು ವೀರಶೈವ ತಾಂತ್ರಿಕ ಶಬ್ದಗಳ ಸೈದ್ಧಾಂತಿಕ ನಿಲುಮೆಯಲ್ಲಿ ಹೇಳಿರುವುದಾಗಿದೆ. ಬಹುಶ: ದೊಡ್ಡಯ್ಯವೊಡೆಯರು ಪಟ್ಟದ ದೇವರಾಗಿ ಮಠದ ಒಡೆಯರಾಗಿದ್ದಿರಬೇಕು. ಅವರಿಗೆ ಪುರಮಠ, ಪುರಧರ್ಮ ಶಾಸನ ಹಾಕಿಕೊಟ್ಟಿರುವಲ್ಲಿ ಮಹಾಮಂಡಲೇಶ್ವರ ಹಾಗೂ ನಾಯಕನ ಆಳ್ವಿಕೆಯ ಸಂದರ್ಭಗಳು ವರದರಾಜದೇವನು ಎರಡನೇ ವರ್ಗದ ಅಮರನಾಯಕನಾಗಿ ದಾನ ನೀಡಿದುದನ್ನು ಹೇಳಿದಂತಿದೆ. ಅಲ್ಲದೆ ಇದೊಂದು ರೀತಿ ಧಾರ್ಮಿಕ ಪಾಳೆಯಪಟ್ಟಿನ ಸ್ವರೂಪದಂತೆಯೆ ಕಾಣುತ್ತದೆ. ಒಂದು ಮಠ ಇಡೀ ಗ್ರಾಮವನ್ನು ನಿರ್ವಹಿಸಬೇಕಾದ (ವಂಶಪಾರಂಪರ್ಯ) ಕ್ರಮವನ್ನು ಶಾಸನವು ಹೇಳಿದಂತಿದೆ. ಚನ್ನಪಟ್ಟಣ ತಾ. ಮುದುಗೆರೆ ಹೋಬಳಿ ಚಿಕ್ಕಊರು ಗ್ರಾಮದ ಬಸವನಗುಡಿಯ ಬಳಿಯ ಶಾಸನವಿದು[೨೯] ವಿಜಯನಗರ ಕಾಲದ ಪುರಮಠ-ಪುರಧರ್ಮ ಸಾಧನದಂಥ ಸಾಂಸ್ಕೃತಿಕ ಚರ್ಯೆಯನ್ನು ಪರಿಚಯಮಾಡಿ ಕೊಡುತ್ತದೆ. ಪರಸಮಯ ಸಹಿಷ್ಣುತೆಯ ಚಿತ್ರ ನೀಡುತ್ತದೆ.

ವಿಜಯನಗರದಲ್ಲಿ ಕೃಷ್ಣದೇವರಾಯ ಆಳುತ್ತಿದ್ದ ಕಾಲ. ದೇವರಾಯಪಟ್ಟಣದ ತಿಂವೊಡೆಯರ ಮಕ್ಕಳು ಕೆಂಚಸೋಮಣ್ಣವೊಡೆಯರ ನಾಯಕತನಕ್ಕೆ ಪಾಲಿಸಲು ಚೆಂನಪಟ್ಟಣ ಸೀಮೆಯನ್ನು ಕ್ರಿ.ಶ. ೧೫೧೩ರ ಸಮಯದಲ್ಲಿ ಕೃಷ್ಣದೇವರಾಯ ನೀಡಿದ್ದ ಆ ಸೀಮೆಯ ಕೂಡ್ಲೂರಿನ ಹಿರಿಯಕೆರೆ ಖಿಲವಾಗಿತ್ತು. ಅದರ ಜೀರ್ಣೋದ್ಧಾರ ಮಾಡುವಲ್ಲಿ ಕೃಷ್ಣದೇವರಾಯನಿಗೆ ಧರ್ಮವಾಗಬೇಕೆಂದು ಕೂಡ್ಲೂರಿನ ಮಂಗಲೇಶ್ವರ ಸನ್ನಿಧಿಯಲ್ಲಿ ಪುಣ್ಯದ ಕಾರ್ಯವೆಂದು ಕೆಂಚಸೋಮಣ್ಣವೊಡೆಯ ಕೂಡಊರು ಸ್ಥಳದ ಮೇಲಣ ಹೊಸಳ್ಳಿ ಗ್ರಾಮದ ಸರ್ವಾದಾಯವನ್ನು ದಾನ ನೀಡುವ ಶಾಸನ ಹಾಕಿಸಿದ್ದಾನೆ.[೩೦] ಆ ಗ್ರಾಮ ದಾನವಾದರೋ ಕೂಡಊರು ಕೆರೆ ಹಾಗೂ ಮೊಗೆಹಳ್ಳಿ ಕೆರೆಗೆ ಪ್ರತಿವರ್ಷ ಬಂಡಿ ಮಣ್ಣು ಹಾಕಿಸುವ ವ್ಯವಸ್ಥೆಗಾಗಿ ಇತ್ತು. ಅದು ಕೆರೆಗಳ ದುರಸ್ತಿಗಾಗಿ ಅಂಥ ಪ್ರಯತ್ನಗಳು ಕೆರೆ ಏರಿ ಎತ್ತರಿಸುವಲ್ಲಿ ಸಬಲಗೊಳಿಸುವಲ್ಲಿ, ಬಿರುಕುಬಿಡುವಿಕೆ ತಪ್ಪಿಸುವಲ್ಲಿ ಪ್ರತಿವರ್ಷ ನಡೆಯುತ್ತಿದ್ದುದರ ಸೂಚನೆಯೆ. ಅಂದರೆ ೨ನೇ ವರ್ಗದ ಅಮರನಾಯಕರ ಆಳ್ವಿಕೆಯ ಅಳವಿನಲ್ಲಿ ಗ್ರಾಮೀಣಭಿವೃದ್ಧಿ ಕೆರೆಯ ಸೂಕ್ತ ನಿರ್ವಹಣೆಯಿಂದ ಕೃಷಿಗೆ ಕುಡಿವ ನೀರಿನ ವ್ಯವಸ್ಥೆ ನೇರ್ಪು ಆಗುತ್ತಿದ್ದುದರ ಸೂಚನೆ ಹೀಗೆ ಸಿಗುತ್ತದೆ. ಆದರೂ ಇವೆಲ್ಲ ಚಕ್ರವರ್ತಿಗೆ

ಧರ್ಮವಾಗಲೆಂದು ಹೆಸರನ್ನೂ ಸ್ಮರಿಸಿ ದಾನ ನೀಡುವಲ್ಲಿ ಗ್ರಾಮೀಣ ಜನರ ಮನಸ್ಸಿನಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರಜಾಕ್ಷೇಮದ ದೃಷ್ಟಿಯನ್ನೂ ಬಿತ್ತುವುದೇ ಆಗಿತ್ತೆನ್ನಬೇಕು ಅಂತಾಗಿ ಈ ಅಮರನಾಯಕರು ಜನತೆ ಹಾಗೂ ಚಕ್ರವರ್ತಿಗಳ ನಡುವಣ ಸಂಪರ್ಕ ಸೇತುವಾಗಿದ್ದರು; ಸಾಮ್ರಾಜ್ಯದ ಧ್ಯೇಯೋದ್ದೇಶಗಳ ಸಂವಹನಕಾರರೂ ಆಗಿದ್ದರೆನ್ನಬೇಕು. ಪಾಳೆಪಟ್ಟು ಹೀಗಾಗಿ ಜನಪ್ರಿಯವೂ ಆಗಿದ್ದವು. ದೊರೆಪ್ರಿಯವೂ ಆಗಿದ್ದವು.

ಕ್ರಿ.ಶ. ೧೫೨೭ರಲ್ಲಿ ಕೂನಗಲ್ಲು ಹೋಬಳಿ (ಕೋಟ) ಹಳ್ಳಿಯು ತಿಂಪಣ್ಣೆಯ ಒಡೆಯನ ಅಧೀನಕ್ಕಿತ್ತು. ಬಹುಶ: ನಾಯಕತನಕ್ಕೆ ಇತ್ತು. ಕೃಷ್ಣದೇವರಾಯನಿಗೆ ಪುಣ್ಯ ಬಯಸಿ ಧರ್ಮ ಸಾಧನವಾಗಿ, ನಿರೂಪ ಬಂದ ಕಾರಣ, ಕೋಟಹಳ್ಳಿಯ ಸಬಕೆರಿಯನ್ನು ರಾಮೇಶ್ವರ ದೇವರ ಅಮೃತಪಡಿ ಅಂಗರಂಗಭೋಗಕ್ಕೆ ದಾನ ನೀಡಲಾದ ಶಾಸನೋಕ್ತ ವಿಷಯವಿದೆ.[೩೧] ಇಲ್ಲಿ ದೊರೆಯ ನಿರೂಪ ಬಂದಿರುವಲ್ಲಿ ಆಣತಿ ಪಡೆದು ದೇವರಿಗೆ ದಾನ ಮಾಡಿರುವ ಸಂದರ್ಭವಿರುವ ಕಾರಣ ಮೂರನೆವರ್ಗದ ಅಮರನಾಯಕನಾಗಿ ತಿಂಪಣ್ಣೆಯ ಒಡೆಯನು ರಾಮನಗರ ತಾಲೂಕು, ಅಂದರೆ ಕಲೆಳಿ ನಾಡಿನ ಭಾಗದ ಕೋಟಹಳ್ಳಿಯ ಸಬಕೆರೆಯ ಉತ್ಪನ್ನವನ್ನು ದೇವದಾನಕ್ಕೆ ನೀಡಲಾದ ವಿಷಯವಾಗಿದೆ. ದೊರೆಯ ಹಿತಕ್ಕಾಗಿ ಪಾಳೆಯಪಟ್ಟಿನವರು ತೋರಿದ ಶ್ರದ್ಧೆಯ ಬಗೆ ಇಲ್ಲಿ ಕಾಣಬರುತ್ತದೆ.

ರಾಮನಗರ ತಾ. ಕಲೆಳನಾಡಿನ ಕೂಟಗಲ್ಲು ಗ್ರಾಮದ ಕ್ರಿ.ಶ. ೧೫೩೦ರ ಶಾಸನದಲ್ಲಿ[೩೨] ರಾಜ್ಯಾಧಿಪತಿ ತಿಂಮಪ್ಪ ನಾಯಕರು ಹಾಗೂ ಲಿಂಗರಸಯನು ಸೇರಿ ಪಿಳೇನಹಳ್ಳಿಯನ್ನು ದೇವದಾನವಾಗಿ ಕಲೆಳಿನಾಡ ಯಿಬ್ಬೆಳರಿಹಳ್ಳಿ ಸೋಮೇಶ್ವರ ದೇವರಿಗೆ ಅಮೃತಪಡಿಗಾಗಿ ಕೊಟ್ಟ ವಿಷಯವಿದೆ. ಈ ಶಾಸನದಲ್ಲಿ ರಾಜ್ಯಾಧಿಪತಿ ಎಂದಿರುವಲ್ಲಿ ವಿಜಯನಗರದರಸರ ಹೆಸರು ಹೇಳದೆ ಅಮೃತಪಡಿಗೆ ಸೋಮೇಶ್ವರ ದೇವರಿಗೆ ಪಿಳೇನಹಳ್ಳಿ ಗ್ರಾಮದಾನವನ್ನು ತಿಂಮಪ್ಪನಾಯಕರು ನೀಡಿರುವಲ್ಲಿ ಒಂದನೇ ವರ್ಗದ ಅಮರನಾಯಕರಾಗಿದ್ದರೆನಿಸುತ್ತದೆ.

ಅಚ್ಯುತರಾಯನ ಭಂಡಾರಕ್ಕೆ ಕಾರ್ಯಕರ್ತನಾಗಿದ್ದವ ತಿಂಮಪ್ಪಯ್ಯ ಒಡೆಯ ಕ್ರಿ.ಶ. ೧೫೩೦ರ ಈ ಕೂಟಗಲ್ಲು ಗ್ರಾಮದ ಶಾಸನದಲ್ಲಿ 'ರಾಜ್ಯಾಧಿಪತಿ ತಿಂಮಪ್ಪನಾಯಕರು ಲಿಂಗರಸಯ್ಯನು' ಎಂದಿರುವಲ್ಲಿ ಆ ತಿಂಮಪ್ಪ ಒಡೆಯನೆ 'ರಾಜ್ಯಾಧಿಪತಿ ತಿಂಮಪ್ಪನಾಯಕ'ನೆನಿಸಿ ಪಾಳೆಯಪಟ್ಟಿನ ೧ನೇ ವರ್ಗದ ಅಮರನಾಯಕನೆನಿಸ ಬಡ್ತಿ ಪಡೆದನೆ? ಎಂಬ ಹೊಳಹೂ ಸಿಗುತ್ತದೆ. 'ಲಿಂಗರಸಯ್ಯ', 'ತಿಂಮಪ್ಪಯ್ಯ ಒಡೆಯ' ಈ ಶಬ್ದಗಳು ನಿಕಟವಾಗುವಂಥವು. ಆದರೆ 'ಒಡೆಯ' ಬಡ್ತಿ ಪಡೆದಾಗ 'ನಾಯಕ'ನಾಗುವ ಸಂದರ್ಭವೂ ಇದರಿಂದ ಗೋಚರವಾಗಬಹುದು. ವಿಜಯನಗರಸರ ಹೆಸರಿನ ನಮೂದು ಇಲ್ಲದೆಯೆ ದೇವದಾನವಾಗಿರುವಲ್ಲಿ ೧ನೇ ವರ್ಗದ ಅಮರನಾಯಕರಲ್ಲಿ 'ರಾಜ್ಯಾಧಿಪತಿ'ಗಳೂ ಇರುತ್ತಿದ್ದರೆನ್ನಬೇಕಾಗುತ್ತದೆ. 'ಇಬ್ಬೆಳಕಿ'-ಹಳ್ಳಿಯು 'ಇಬ್ಬಳಿಕೆ' (೨೦ ಸೇರುಧಾನ್ಯದ ಅಳತೆಮಾನ_ ಎಂಬ ಶಬ್ದದ ಅಪಲಿಖಿತವೆಂದರೆ, ಈ ಗ್ರಾಮೀಣ ಪ್ರದೇಶವು ಕೃಷಿಸಂಪನ್ನವಾಗಿದ್ದುದರ ತತ್ಫಲವಾಗಿ 'ರಾಜ್ಯಾಧಿಪತಿ'ಯ ಪಾಳೆಪಟ್ಟಾಗಿ ಪ್ರಸಿದ್ಧಿಗೊಂಡಿತ್ತು

ಎಂಬುದಾಗುತ್ತದೆ. ಇಂದಿಗೂ ಈ ಇಬ್ಬಳಿಕಿಹಳ್ಳಿ ಪ್ರದೇಶ ತೊರೆಗಳು ಹರಿವ ಕೃಷಿಸಂಪದ್ಭರಿತ ಹಾಗೂ ಬೆಟ್ಟದ (ಜಲಾನಯನ) ಬುಡದ ಪ್ರದೇಶವಾಗಿದೆ. ಹಾಗಾಗಿ 'ಕಲೆಳಿನಾಡ' ಭಾಗವಾಗಿಯೂ ಕಾಣುತ್ತದೆ. ಇದೇ ಅಚ್ಯುತದೇವರಾಯನ ಕಾಲದಲ್ಲಿ (ಕ್ರಿ.ಶ. ೧೫೩೨) ಕಲುವಳಿನಾಡಿನ ಹುಲ್ಲುಕೆರೆ ಗುಂನೂರು ಗ್ರಾಮದ ಅಧಿಕಾರ ಅಮರನಾಯಕ ಚಾವಪ್ಪನಾಯಕನ ಅಂಕಿತಕ್ಕಿದ್ದು, ಅವನ ಕಾರ್ಯಕರ್ತನ ಮೂಲಕ ಧಾರ್ಮಿಕ ಕಾರ್ಯವೊಂದಕ್ಕೆ ಚಾಲನೆ ನೀಡಿದ ಸೂಚನೆ ಇದೆ.[೩೩] ಅದು ಬಹುಶಃ ಅಲ್ಲಿಯ ರೇವಣಸಿದ್ದೇಶ್ವರ ಬೆಟ್ಟದ ತೇರುಬೀದಿಯಲ್ಲಿ ನಡೆದ ಘಟನೆ ಆಗಿರುವಂತಿದೆ.

ಚನ್ನಪಟ್ಟಣ ತಾ. ಕೋಡಂಬಳ್ಳಿ ಸೀಮೆಯ ನಾಯಕತನ ವೀರಂಮರಸನಿಗಿತ್ತು. ಸಾಳುವ ಇಮ್ಮಡಿ ನರಸಿಂಗರಾಯ ವಿಜಯನಗರವನ್ನು ಆಳುತ್ತಿದ್ದ ಕ್ರಿ.ಶ. ೧೪೯೯ರ ಸಮಯವದು. ಅವನ ಕಾರ್ಯಕರ್ತ ನರಸಂಣನಾಯಕ ವಡೆಯ 'ಪ್ರಿತುವೀ ರಾಜ್ಯ ಗೆಲುತಯಿರಲು' ಅಂದರೆ ಮಹಾಮಂಡಲೇಶ್ವರನಾಗಿದ್ದ ಸೂಚನೆ ಆಗುವಂತಿದೆ. ಈ ಸಂದರ್ಭದಲ್ಲಿ ಪೆನಗೊಂಡೆಯ ಸ್ಥಳವೊಂದರ ಅರಸರ ಮಂಮಡಿದೇವರ ಮಕ್ಕಳಾದ ತಿಂಮರಸರು ಹೊಯಿಸಣನಾಡಿನ ಚಂನಪಟ್ಟಣದ ಕೋಡಂಬಳ್ಳಿಯ ಶಿವಾಲಯದ ಮಳಲೇಶ್ವರ ದೇವರಿಗೆ ವೀರಂಮರಸನ ನಾಯಕತನಕ್ಕೆ ಸಲ್ಲುವ ಕೋಡಂಬಳ್ಳಿಸೀಮೆಯ ನಿಟ್ಟೂರ ಭಟವೃತ್ತಿಯ ಸ್ತಳದ ಎಳಸಿಗೆ ಗ್ರಾಮವನ್ನು, ಅಮೃತಪಡಿ ನೈವೇದ್ಯ, ಅಂಗವೈಭವ, ಪ್ರತಿ ವಾರ್ಷಿಕ ಮಾಸೋತ್ಸವಕ್ಕಾಗಿ ನೀಡಿದ ವಿಷಯವಿದೆ.[೩೪] ಇಲ್ಲಿ ಸಾಮ್ರಾಜ್ಯದ ಅರಸ ಮಹಾಮಂಡಲೇಶ್ವರನ ಹೆಸರು ನಮೂದಿತವಾಗಿದೆ. ಬಹುಶಃ ಮಳಲೇಶ್ವರದೇವರ ಒಕ್ಕಲಾಗಿದ್ದ ತಿಂಮರಸ ಪೆನುಗೊಂಡೆ ಸ್ಥಳವೊಂದರಲ್ಲಿ ಪಾಳೆಯಪಟ್ಟು ಹೊಂದಿದ್ದು, ಮಹಾಮಂಡಲೇಶ್ವರನ ಅನುಮತಿ ಪಡೆದು, ವೀರಂಮರಸನ ನಾಯಕತನವನ್ನು ಸೂಚಿಸಿ ದೇವದಾನ ನೀಡಿದಂತಿದೆ. ಈ ಹಿನ್ನೆಲೆಯಲ್ಲಿ ಕೋಡಂಬಳ್ಳಿ ಸೀಮೆಯ ವೀರಂಮರಸ ಮೂರನೇವರ್ಗದ ಅಮರನಾಯಕನಾಗಿ ಪಾಳೆಪಟ್ಟು ಹೊಂದಿದ್ದುದು ಸೂಚಿತವಾಗುತ್ತದೆ; ಹಾಗೂ ಆ ಸೀಮೆ ಹೊಯಿಸಣನಾಡ ಪ್ರಸಿದ್ಧ ಸೀಮೆಯಾಗಿ ಮಳಲೇಶ್ವರ ದೇವರ ದೇಗುಲವನ್ನು ಹೊಂದಿತ್ತೆನ್ನುವುದಾಗುತ್ತದೆ. ಕಿವಿಲೆನಾಡು-ಕಿಳಲೈನಾಡು ಎಂಬುದರ ಬದಲು 'ಹೊಯಿಸನಾಡು' ಎಂದು ತಮಿಳು ಪ್ರಭಾವ ಕಳಚಿಕೊಂಡು ನಾಡಿನ ಹೆಸರು ಉಕ್ತವಾಗಿರುವುದು ಗಮನಾರ್ಹ ಹಾಗೂ ವಿಜಯನಗರ ಕಾಲದಲ್ಲಿ ಹೊಯ್ಸಳ ಸ್ಮರಣೆಯಾಗಿರುವುದೂ ಗೌರವದ ಸಂಕೇತ. ಹೀಗೆಯೇ ಕ್ರಿ.ಶ. ೧೫೩೪ರಲ್ಲಿ ಹೊಯಿಸಣನಾಡ ಚಂನಪಟ್ಟಣದ ಸೀಮೆ ಕೋಡಂಬಳ್ಳಿಯ ಈ ಪ್ರಸಿದ್ಧ ಮಳಲೇಶ್ವರ ದೇಗುಲಕ್ಕೆ ಅಚ್ಯುತ ದೇವರಾಯನ ಕಾಲದಲ್ಲಿ ಅವನಿಗೆ ಧಮ್ರ್ಮವಾಗಲೆಂದು ಪುಡುವಂಟ (ಪುದುವಟ್ಟು) ಕೊಟ್ಟು ಭೂದಾನವಾಗಿದೆ. ಹೀಗೆ ಕೊಟ್ಟಾತ ಪೆನುಗೊಂಡೆ ಸೀಮೆಯ ಆದ್ಯದ ವಾರಣಾಶಿ ಸೂರಪ್ಪನ ಮಗ ಮಾದರಸ, ಬಹುಶ: ಈ ದೇವರ ಒಕ್ಕಲಾಗಿದ್ದು, ಪೆನುಗೊಂಡೆಯಲ್ಲಿ ಉದ್ಯೋಗ ನಿಮಿತ್ತನಾಗಿ ಉಪಪಾಳೆಯಪಟ್ಟಿನ ಒಡೆಯ ನಾಗಿದ್ದಂತೆ ತೋರುತ್ತದೆ. ಕಾರಣ 'ನಂಮ ವೊಡೆಯಂದಿರು ಭಂಡಾರದ ತಿಂಮಪ್ಪಯ್ಯನವರ

ನಾಯಕತನಕ್ಕೆ ಸಲುವ ಚಂನಪಟ್ಟಣ ರಾಜ್ಯದ ಕೋಡಂಬಳ್ಳಿ ಸೀಮೆಯ ನಿಟ್ಟೂರು ಭಟವಿತ್ತಿಯ ಸ್ಥಳದ ಸರಗೂರು ಗ್ರಾಮ'ವನ್ನು ಗಡಿ ಸೀಮೆಯ ಪೂರ್ಣ ವಿವರ ನೀಡಿ ಮಳಲೇಶ್ವರ ದೇವರ ಅಂಗವೈಭವ, ತೇರು, ತಿರುನಾಳ ತಿರುಪಣಿ, ಮಾಸೋತ್ಸವ, ಪಲ್ಲಕ್ಕಿಸೇವೆ ಇತ್ಯಾದಿಗಳ ನಿರ್ವಹಣೆಗಾಗಿ ನೀಡಲಾಗಿದೆ. ಹಾಗೂ ವಿವಿಧ ಸಣ್ಣಗ್ರಾಮಗಳನ್ನೂ ಕಲ್ಲುನೆಟ್ಟು ಗಡಿ ಗುರುತಿಸಿ ದಿಕ್ಕುದೆಸೆ ನಮೂದಿಸಿ ಕೊಡಲಾಗಿದೆ. 'ಗಣಾಚಾರ'ದ ಪ್ರಸ್ತಾಪ ಮಾಡಲಾಗಿದೆ. ದೇಗುಲದ ಸ್ಥಾನಿಕ ಚಂದ್ರಶೇಖರನಿಗೆ ಗದ್ದೆ ಹತ್ತು ಕೊಳಗ ಬೆಳೆ ಬೆಳೆಯುವಂಥದ್ದು, ಖಂಡುಗ ಬೆಳೆ ಬೆಳೆಯುವ ಹೊಲದ ದಾನ ನೀಡಲಾಗಿದೆ.

ಇಲ್ಲಿ ಗಮನಾರ್ಹ ವಿಷಯವೆಂದರೆ ಕ್ರಿ.ಶ. ೧೪೯೯ರಲ್ಲಿ ಕೋಡಂಬಳ್ಳಿ ಸೀಮೆಯ (ನಿಟ್ಟೂರು ಭಟವಿತ್ತಿ ಸ್ಥಳ ಸಹಿತ) ನಾಯಕತನ ವೀರಂಮರಸನಿಗಿತ್ತು. ಆಗ ಪೆನಗೊಂಡೆಯ ತಿಂಮರಸನು ದೇವದಾನ ನೀಡಿದ್ದು ಇದೆ. ೧೫೩೪ರಲ್ಲಿ ಭಂಡಾರದ ತಿಂಮಪ್ಪಯ್ಯನ ನಾಯಕತನವಿದ್ದು ಪೆನುಗೊಂಡೆಯ ಮಾದರಸ ಮಳಲೇಶ್ವರನಿಗೆ ಪೂರ್ವ ಮಾದರಿಯಂತೆಯೆ ದಾನ ನೀಡಿ ಪುದುವಟ್ಟು ಕೊಟ್ಟು ಮಳಲೇಶ್ವರ ದೇಗುಲಾಚಾರ ಉತ್ಸವ ವೈಭವಗಳನ್ನು ವಿಸ್ತರಿಸಿದ್ದಾನೆ. ಹೀಗಾಗಿ ಪಾಳೆಪಟ್ಟು ನಾಯಕತನ ವಿವಿಧ ಕಾಲಗಳಲ್ಲಿ ಬೇರೆ ಬೇರೆ ನಾಯಕರಿಗೆ ವರ್ಗಾವಣೆ ಆಗುತ್ತಿತ್ತು ಎಂಬುದು ಸೂಚಿತವಾಗುತ್ತದೆ. ಭಟವೃತ್ತಿಯವರು ಬೇರೆ ಬೇರೆ ಕಡೆ ಸ್ಥಾನ ಪಡೆದು ಉಪ ಪಾಳೆಯಪಟ್ಟಿನ ಒಡೆಯರಂತೆಯೆ ಇರುತ್ತಿದ್ದ ಸಂದರ್ಭವೂ ಗೋಚರವಾಗುತ್ತದೆ. ಇಲ್ಲಿ ಬಹುಶಃ ಮಾದರಸ ಹಾಗೂ ವೀರಂಮರಸ ವಂಶಿಕ ಬಾಂಧವ್ಯ ಹೊಂದಿದವರಾಗಿದ್ದು ಮಳಲೇಶ್ವರನ ಒಕ್ಕಲಾಗಿದ್ದರೆನ್ನಬೇಕು. ವೀರಂಮರಸನಿಗೆ ನಾಯಕತನವೂ ಇತ್ತಲ್ಲ! ಹೊಯಿಸಣ ನಾಡಿನ ಸ್ಮರಣೆ, ದೇವೋತ್ಸವ ವೈಭವ, ಸ್ಥಾನಿಕ ಮರ್ಯಾದೆ ಇವೆಲ್ಲ ವಿಜಯನಗರದ ಕಾಲದ ಪಾಳೆಯಪಟ್ಟುಗಳ ಇಲ್ಲಿನ ಸಾಂಸ್ಕೃತಿಕ ವ್ಯವಹಾರವಾಗಿ ಕಾಣಬರುತ್ತವೆ. 'ಗಣಾಚಾರ' ಎಂಬ ಶಬ್ದ ವೀರಶೈವ ಪಾರಿಭಾಷಿಕವಾಗಿದ್ದು ಬಹುಶಃ ಮಾದರಸ ನೀಡಿದ ನಿಟ್ಟೂರು ಭಟವಿತ್ತಿ ಸ್ಥಳದ ಸರಗೂರು ಗ್ರಾಮ ಶಿವ ಅಗ್ರಹಾರವಾಗಿ ಶಿವಪುರಿಯಾಗಿ ಮತಪುರವಾಗಿದ್ದುದರ ಸೂಚನೆ ಸಿಗುತ್ತದೆ. ವಿಜಯನಗರ ಕಾಲದಲ್ಲಿ 'ಮಠಪುರ' ಗ್ರಾಮಗಳು ಪಾಳೆಯಪಟ್ಟುಗಳಲ್ಲಿ ರೂಪುಗೊಳ್ಳುತ್ತಿದ್ದುದು ಶಾಸನೋಕ್ತವಾಗಿವೆ. ಪುದುವಟ್ಟು ಭೂದಾನ ಗ್ರಾಮವಾಗಿ ನೀಡಿರುವುದು ಮಾದರಸನಿಗೆ ಈ ಕೋಡಂಬಳ್ಳಿ ಸ್ಥಳದ ಮೇಲಿದ್ದ ವಂಶಿಕನೆಲೆಯ ಹಕ್ಕು ಸೂಚಿತವಾದರೂ 'ನಂಮ ವೊಡೆಯಂದಿರು ಭಂಡಾರದ ತಿಂಮಪ್ಪಯ್ಯ' ಎಂದಿರುವ ಕಾರಣ - - - ಎರಡು ಮತ್ತು ಮೂರನೇ ವರ್ಗದ ಅಮರನಾಯಕರ ಹಾಗೂ ವಿಜಯನಗರದ ಅಧಿಕಾರಿಯೊಬ್ಬರ ಅಮರನಾಯಕತನದ ಸೂಚನೆ ಈ ಗುಡಿಯ ಶಾಸನದಲ್ಲಿ[೩೫] ಸೂಚಿತವೆನ್ನುವಂತಿದೆ.

ಅಚ್ಯುತ ದೇವರಾಯನ ಕಾಲದಲ್ಲಿ ಮುಗುಳನಹಳ್ಳಿ (ಈಗ ಮಾಗೇನಹಳ್ಳಿ) ನಂಜುಂಡೇಶ್ವರ ದೇವರಿಗೆ ಅಮೃತಪಡಿಗೆ ಮುಗುಳನಹಳ್ಳಿ, ಗೌಡಿಗೆರೆ, ಹೊಸಹಳ್ಳಿ

ಗ್ರಾಮಗಳಿಂದ ಪೂರ್ವ ಮೊದಲಾಗಿ (ಪೂರ್ವದಿಂದಲೂ) ಸುಂಕವು ಭಂಡಾರಕ್ಕೆ ಬರುತ್ತಿತ್ತು. ಆ ಭಂಡಾರದ ಅಧಿಕಾರಿ ಹಿರಿಯ ತಿಂಮಪ್ಪಯ್ಯ ಆಗಿದ್ದ. ಬಹುಶಃ ಅವನ ಅಧೀನ ನಾಯಕನಾಗಿದ್ದ ಕೆಂಪದೇವರಸನ ಕಿರಿಯಸೋದರ ಬೊಂಮರಾಜನು ಮುಗಳನಹಳ್ಳಿ ನಂಜುಂಡೇಶ್ವರ ದೇವರ ಅಮೃತಪಡಿಗೆ ಸುಂಕವನ್ನು ಅಚ್ಯುತದೇವರಾಯನಿಗೆ ಧರ್ಮವಾಗಲೆಂದು ಸಲ್ಲಿಸಿದ ಸಂದರ್ಭವನ್ನು ಮಳೂರು ಹೋಬಳಿ ಮಾಗೇನಹಳ್ಳಿ ಶಾಸನವು ಹೇಳಿದೆ.[೩೬] ಇದಕ್ಕೆ ಪೂರಕವಾಗಿ ಹೊಂಗನೂರು ಹೋಬಳಿ ಮಾಗೇನಹಳ್ಳಿ ಗ್ರಾಮದ ಕ್ರಿ.ಶ. ೧೫೩೫ರ ಶಾಸನದಲ್ಲಿ[೩೭] ಯೂ ನಂಜುಂಡೇಶ್ವರ ದೇವರಿಗೆ ಮಾಗೇನಹಳ್ಳಿಯ ಸುಂಕವು ಭಂಡಾರಕ್ಕೆ ದೇವರಸೇವೆಗಾಗಿ ಮೀಸಲಿತ್ತು. ಪೂರ್ವದಿಂದ ಬಂದ ಭಕ್ತಿ ಮರ್ಯಾದೆ ಇದು. ಹಳೆಯ ದಾನವನ್ನು ಮುಂದುವರಿಸುವಂತೆ ಅಂಗದ ರಾಯನ ಮೂಲಕ ಅಚ್ಯುತರಾಯನ ಆಜ್ಞೆ ಬರಲಾಗಿ ಬೊಂಮರಾಜ ಅದರಂತೆ ನಡೆದುಕೊಂಡಿದ್ದಾನೆ. ಆದರೆ ನಂಜುಂಡೇಶ್ವರ ದೇವರಿಗೆ ಹೊಗೆಸಂಬೆ ಕೆಂಪಬೊಮ್ಮರಾಜ ಸುಂಕವನ್ನು ಬಿಟ್ಟ ಬಗ್ಗೆ ಈ ಶಾಸನವು ಹೇಳುತ್ತದೆ. ಈ ಕೆಂಪಬೊಂಮರಾಜ, ಕೆಂಪದೇವರಸ ಹಾಗೂ ಬೊಂಮರಾಜನ ತಂದೆಯೋ ಅಥವಾ ಬೊಂಮರಾಜನ ಪುತ್ರನೋ ಎಂಬುದು ಸ್ಪಷ್ಟವಿಲ್ಲ. ಎರಡೂ ಸಂದರ್ಭಗಳಲ್ಲಿ 'ಬೊಂಮರಾಜ'ನ ಪ್ರಸ್ತಾಪವಿರುವಲ್ಲಿ ಬಹುಶಃ ಬೊಮ್ಮರಾಜನ ಪುತ್ರನಾಗಿ, ದೊಡ್ಡಪ್ಪನ ಹೆಸರಿನ ಭಾಗವೂ (ತಾತನ ಹೆಸರಿನಲ್ಲಿಯೂ 'ಕೆಂಪ' ಎಂಬ ಶಬ್ದ ಭಾಗವಿದ್ದಿರಬಹುದು) ತನ್ನ ಹೆಸರಿನಲ್ಲಿಯ ಅಳವಡಿಕೆ ಇದ್ದವನಾಗಿರಬಹುದು; ಹಾಗೂ 'ಕುಮಾರವೃತ್ತಿ'ಯ ಮಾದರಿಯಲ್ಲಿ ಬೊಮ್ಮರಾಜನ ಅಧೀನದಲ್ಲಿ ಉಪಪಾಳೆಯಪಟ್ಟಿನ ಒಡೆಯನಾಗಿದ್ದಿರಬೇಕು; ಸುಂಕದ ಆದಾಯವನ್ನು ದೇವರಿಗೆ ನೀಡಲು ಆಜ್ಞಾಪಿತನಾಗಿರಬೇಕು. ಇದೊಂದು ರೀತಿ ಮೇಲಿನಿಂದ ವರ್ಗವಾಗುತ್ತ ಬಂದ ಆಜ್ಞಾಪಾಲನ ಬಗೆಯಾಗಿ ಕಾಣುತ್ತದೆ.

ಹೊಂಗನೂರು ಹೋಬಳಿಯಲ್ಲಿ 'ಮೊಗೇನಹಳ್ಳಿ' ಎಂದಿದ್ದು, ಮಳೂರು ಹೋಬಳಿಯಲ್ಲಿ ಮಾಗೇನಹಳ್ಳಿ ಎಂದಿದ್ದು, ನಂಜುಂಡೇಶ್ವರ ಗುಡಿಯ ಪ್ರಸ್ತಾಪ ಎರಡೂ ಸಂದರ್ಭದಲ್ಲಿ ಬಂದಿದ್ದು, ಎರಡೂ ಕಡೆ ಪ್ರತ್ಯೇಕ ನಂಜುಂಡೇಶ್ವರ ಗುಡಿಗಳಿದ್ದುವೇ? ಎಂಬ ಅನುಮಾನ ಉಂಟಾಗುತ್ತದೆ. ಮೋಗೇನಹಳ್ಳಿ ಶಾಸನದಲ್ಲಿ 'ನಂಜುಂಡೇಶ್ವರ ದೇವರ' ಪ್ರಸ್ತಾಪ ವಿಶೇಷಣವಿಲ್ಲದೆ ಪ್ರಸ್ತಾಪವಾಗಿದ್ದರೆ ಮಾಗೇನಹಳ್ಳಿ ಶಾಸನದಲ್ಲಿ '(ಮು)ಗುಳನಹಳ್ಳಿ ನಂಜುಂಡೇಶ್ವರ ದೇವರು' ಎಂದು ನಿಖರವಾಗಿ ಹೇಳಿರುವ ಕಾರಣ[೩೮] ಎರಡೂ ಶಾಸನಗಳ ಸಂದರ್ಭವನ್ನು 'ಮುಗುಳನಹಳ್ಳಿ ನಂಜುಂಡೇಶ್ವರ ದೇವರಿಗೆ' ಅನ್ವಯ ಮಾಡಿಕೊಳ್ಳುವುದುಚಿತವಾಗುತ್ತದೆ. ಇದಲ್ಲದೆ ಮೋಗೇನಹಳ್ಳಿ ಶಾಸನದಲ್ಲಿ ಕ್ರಿ.ಶ. ೧೦೦೦ರ ಸಮಯದಲ್ಲಿಯೆ 'ಕೆಳಲೆನಾಡ ಪುಜ್ಞನೂರ' ಎಂದು ಹೊಂಗನೂರಿಗೆ ಹೇಳಿರುವಲ್ಲಿ ಚೋಳರಿಗೆ ಮುನ್ನವೆ ಗಂಗರ ಕಾಲದಲ್ಲಿ 'ಕೆಳಲೆನಾಡು' ಅಸ್ತಿತ್ವಗೊಂಡಿದ್ದ ಬಗ್ಗೆ ತಿಳಿಯುತ್ತದೆ. ಉಪಪಾಳೆಯ ಪಟ್ಟುಗಳಲ್ಲಿ ಕುಮಾರವೃತ್ತಿ ಅಥವಾ ಬೀಳಾನುವೃತ್ತಿ


ಮಾದರಿಯಲ್ಲಿ ಮುಖ್ಯಪಾಳೆಯಪಟ್ಟಿನ ನಾಯಕರ ಕುಟುಂಬದವರೋ, ವಂಶಿಕರೋ, ಹತ್ತಿರದ ಸಂಬಂಧಿಗಳೋ ಇರುತ್ತಿದ್ದ ಸೂಚನೆ ವಿಜಯನಗರಕಾಲದ ಮೇಲಿನೆರಡು ಶಾಸನಗಳಿಂದ ದೊರೆಯುತ್ತದೆ. ಸಾಮ್ರಾಜ್ಯದ ಚಕ್ರವರ್ತಿಯಿಂದ ಪಾಳೆಯಪಟ್ಟಿನ ಕೊನೆಯ ಹಂತದ ಆಣತಿಗಳು ಅನುಕ್ರಮವಾಗಿ ತಲುಪುತ್ತಿದ್ದ ಆಡಳಿತ ವ್ಯವಸ್ಥೆಯ ಕ್ರಮವೂ ತಿಳಿಯುತ್ತದೆ. ಈ ಎರಡು ಶಾಸನಗಳಿಂದ ವಿಜಯನಗರಕಾಲದ ೨ ಮತ್ತು ೩ನೇ ವರ್ಗದ ಅಮರನಾಯಕರ ಹಾಗೂ ಉಪಪಾಳೆಯಪಟ್ಟಿನ ನಾಯಕರ ಸಾಂಸ್ಕೃತಿಕ ಹೊಣೆಗಾರಿಕೆಯ ಚಿತ್ರ ಸಿಗುತ್ತದೆ. ಸಾಮಾನ್ಯವಾಗಿ ವಿಜಯನಗರಕಾಲದಲ್ಲಿ ನಂಜುಂಡೇಶ್ವರ ದೇಗುಲಗಳ ಅರ್ಚಕರಾಗಿ, ಸ್ಥಾನಿಕರಾಗಿ 'ತಮ್ಮಡಿ'ಗಳಿರುತ್ತಿದ್ದರು. ಕೋಡಂಬಳ್ಳಿಯ ಮಳಲೇಶ್ವರನಿಗಿದ್ದಂತೆ ಸ್ಥಾನಿಕರು ನಂಜುಂಡೇಶ್ವರ ದೇವರಿಗೂ ಇದ್ದು ತಮ್ಮಡಿಗಳು ಅರ್ಚಕರಾಗಿದ್ದಿರಬೇಕು. ಈ ಗ್ರಾಮಗಳ ನೆರೆಹೊರೆ ಪ್ರದೇಶಗಳಲ್ಲಿ ಇಂದಿಗೂ ತಮ್ಮಡಿಗಳ ಜನಾಂಗವಿದ್ದು ಅರ್ಚಕ ವೃತ್ತಿಯಲ್ಲಿರುವುದು ಕಾಣಬರುತ್ತದೆ.

ಈ ಮೇಲಿನ ವಿವೇಚನೆಯಿಂದ ವಿಜಯನಗರಕಾಲದ ಪಾಳೆಯಪಟ್ಟುಗಳ ವಿವಿಧ ಕಾರ್ಯವ್ಯವಸ್ಥೆಯ ಬಗ್ಗೆ ತಿಳಿಯುತ್ತದೆ. ವಿಜಯನಗರ ಪತನಾನಂತರ (ರಾಮರಾಜನ ನಂತರ) ರಾಜಧಾನಿಯನ್ನು ಪೆನುಗೊಂಡೆ, ಅಲ್ಲಿಂದ ಚಂದ್ರಗಿರಿ ಆ ನಂತರ ವೆಲ್ಲೂರಿಗೂ ಒಯ್ದು ೮೦ ವರ್ಷಗಳ ಕಾಲ ವಿಜಯನಗರದರಸರು ಮುಸ್ಲಿಂ ಶಕ್ತಿ ಎದುರು ಸೆಣಸಿದ್ದರು. ಈ ಅವಧಿಯಲ್ಲಿ ೨ನೇ ವೆಂಕಟಪತಿದೇವನ (ಕ್ರಿ.ಶ. ೧೬೦೬-೧೬೧೫) ಆಳ್ವಿಕೆಯು ಯಶಸ್ವಿಯಾಗಿತ್ತು. ದಂಡಯಾತ್ರೆಗೆ ಹೋಗಿ ಮುಸ್ಲಿಂ ಆಕ್ರಮಣವನ್ನು ತಡೆದ. ವಿಜಯನಗರದ ಆಸ್ಥಾನಕ್ಕೆ ಆದಿಲ್ ಶಾಹಿಗಳು ರಾಯಭಾರ ಕಳುಹಿಸುವಂತೆ ಮಾಡಿದ. ವಿಜಯನಗರದ ಕೊನೆ ಅರಸ ಆರನೆಯ ಶ್ರೀರಂಗರಾಯನು (ಕ್ರಿ.ಶ. ೧೬೪೩-೧೬೪೬) ಚಂದ್ರಗಿರಿಯ ಪತನವಾದ ನಂತರ ಇಕ್ಕೇರಿ ಶಿವಪ್ಪನಾಯಕನಲ್ಲಿ (ಕ್ರಿ.ಶ. ೧೬೪೬) ಹೋಗಿ ಆಸರೆ ಪಡೆದ. ಅವನ ಸಂತತಿಯವರು ಆನೆಗೊಂದಿಗೆ ಹೋಗಿ ನೆಲಸಿದರು.[೩೯] ವಿಜಯನಗರ ಪತನಾನಂತರ ಸ್ವತಂತ್ರವಾದ ಪಾಳೆಯಪಟ್ಟುಗಳು, ವಿಜಯಗರಕಾಲದ ಆಡಳಿತ ವ್ಯವಸ್ಥೆಯನ್ನು ಮುಂದುವರಿಸಿದವು. ಧರ್ಮ-ಸಂಸ್ಕೃತಿ ಸಂರಕ್ಷಣಾ ಕಾರ್ಯವನ್ನು ಕೈಗೊಂಡವು. ಇಷ್ಟು ಪ್ರಭಾವ ಬೀರಿದ್ದ ಪ್ರಬಲ ಪಾಳೆಯಪಟ್ಟಿನ ವ್ಯವಸ್ಥೆ ವಿಜಯನಗರ ಪತನವನ್ನು ತಡೆಯಲು ಸಾಧ್ಯವಾಗಲಿಲ್ಲವೇಕೆ? ಎಂಬುದೂ ಇದೆ.


ವಿಜಯನಗರದ ಅಮರನಾಯಕ ವ್ಯವಸ್ಥೆಯು ಚಕ್ರವರ್ತಿ ಪ್ರಬಲನಾಗಿದ್ದು ನಾಯಕರನ್ನು ಹತೋಟಿಯಲ್ಲಿಟ್ಟಿದ್ದವರೆಗೆ ಚೆನ್ನಾಗಿ ಕೆಲಸ ಮಾಡಿತು; ಆದರೆ ದುರ್ಬಲರಾಜ ಬಂದಾಗ ಅಮರನಾಯಕರು ಸ್ವತಂತ್ರರಾಗಿ ಅನುವಂಶಿಕವಾಗಿ, ಒಬ್ಬನ ನಾಯಕನ ಅಮರಂಭೂಮಿ ಅನ್ಯರಿಗಾಗಲಿ ಹಿಂದಕ್ಕಾಗಲಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಅಮರನಾಯಕರ ಜನಸಂಪರ್ಕದ ಕಾರಣ ಜನರ ನಿಷ್ಠೆ ಮೊದಲು ಅಮರನಾಯಕರಿಗೆ ಸಂದಾಯವಾಯಿತು; ಇನ್ನು ಅಮರನಾಯಕ ವ್ಯವಸ್ಥೆಯಲ್ಲಿ ಮಧ್ಯಕಾಲೀನ ಯುರೋಪಿನ ಫ್ಯೂಡಲಿಸಂ ರೀತಿಯ

ಊಳಿಗಮಾನ್ಯ ಪದ್ಧತಿಯ ಸ್ಥೂಲ ಹೋಲಿಕೆ ಇತ್ತು. ಉಪ ಊಳಿಗಮಾನ್ಯಕ್ಕೆ ಅವಕಾಶವಿತ್ತು. ಯುರೋಪಿನಲ್ಲಿ ಇಡೀ ಸಮಾಜವೇ ಫ್ಯೂಡಲಿಸಂ ಪ್ರಭಾವಕ್ಕೆ ಸಿಲುಕಿತ್ತು. ಆದರೆ ವಿಜಯನಗರದಲ್ಲಿ ಊಳಿಗಮಾನ್ಯ ಪದ್ಧತಿ-ಅಮರನಾಯಕ ವ್ಯವಸ್ಥೆ ಹಾಗೂ ಕೆಲವು ಧಾರ್ಮಿಕ ಸಂಸ್ಥೆಗಳಲ್ಲಿ ಮಾತ್ರ ಅನ್ವಯವಿತ್ತು. ಅದು ಯುರೋಪಿನಲ್ಲಿದ್ದಂತೆ ನ್ಯಾಯಾಂಗವನ್ನು ಆಕ್ರಮಿಸಿರಲಿಲ್ಲ. ಅಲ್ಲದೆ ಊಳಿಗಮಾನ್ಯ ತತ್ತ್ವಗಳು ಅಮರನಾಯಕ ವ್ಯವಸ್ಥೆಯಲ್ಲಿ ಆಳವಾಗಿ ಬೇರು ಬಿಟ್ಟಿರಲಿಲ್ಲ. ಕಾರಣ ಈ ವ್ಯವಸ್ಥೆ ವಿವಿಧ ಸನ್ನಿವೇಶಗಳಲ್ಲಿ ದೂರ ದೂರದ ಸ್ಥಳಗಳಲ್ಲಿ ಕೆಲಸ ಮಾಡುತ್ತಿತ್ತು. ಯುರೋಪಿನಂತೆ ಇಡೀ ಸಮಾಜ ಅದಕ್ಕೆ ಒಳಪಟ್ಟು, ಕ್ಷೇಮ ಹಾಗೂ ಭದ್ರತೆಗೆಂದು ರಾಜನಿಗೆ ಹಿಡುವಳಿ ಜಮೀನನ್ನು ವಹಿಸಿ ಅವನಿಂದ ಉಂಬಳಿ ಪಡೆಯುವ ಅವಲಂಬನೆ ಇಲ್ಲಿರಲಿಲ್ಲ. ಇಲ್ಲಿ ಅದೆಲ್ಲ ತಮ್ಮದು ಎಂಬ ಭಾವವಿತ್ತು. ಒಂದು ಐತಿಹಾಸಿಕ ಅಗತ್ಯವಾಗಿ ವಿಜಯನಗರ ಕಾಲದ ಆಡಳಿತದಲ್ಲಿ ಅಮರನಾಯಕ ವ್ಯವಸ್ಥೆ ಅದರ ಅಂಗವಾಗಿತ್ತು[೮೦] ಎಂಬ ವಿಶ್ಲೇಷಣೆಯೂ ಇದೆ.

ಮೂಲಭೂತವಾಗಿ ಅಮರನಾಯಕ ವ್ಯವಸ್ಥೆಯ ಪಾಳೆಯಪಟ್ಟುಗಳು ಸಾಮಾನ್ಯ ಪ್ರಜೆಗಳ ಸತತ ಸಂಪರ್ಕದಲ್ಲಿದ್ದು, ಸಾಮ್ರಾಜ್ಯದ ಬಗ್ಗೆ ನಿಷ್ಠೆ ಬೆಳೆಸಿದ್ದವು. ವಿಶೇಷತಃ ಕೆಳ್ಗಿಲೆನಾಡಿನ-ಕೆಳಲೆನಾಡು, ಕಲುವಳಿನಾಡಿನ ಪಾಳೆಯಪಟ್ಟುಗಳನ್ನು ಗಮನಿಸಿದರೆ, ಭೌಗೋಳಿಕ, ರಾಜಕೀಯ, ಗ್ರಾಮೀಣ ಸಾಂಸ್ಕೃತಿಕ ಬದುಕನ್ನು, ಪರಂಪರೆಯನ್ನು ಮನ್ನಿಸಿ ಹದುಳವಾಗಿ ಕಟ್ಟಿಕೊಟ್ಟಿರುವುದು ಕಾಣಬರುತ್ತದೆ. ಗ್ರಾಮೀಣ ಬದುಕನ್ನು ಹಸನುಗೊಳಿಸುವ, ಅಭಿವೃದ್ಧಿಗೊಳಿಸುವ ಬಗೆಯನ್ನು ಆ ಕಾಲದ ಶಾಸನಗಳೂ ದಟ್ಟವಾಗಿ ಚಿತ್ರಿಸಿವೆ. ಧಾರ್ಮಿಕ, ಆರ್ಥಿಕ, ವಾಣಿಜ್ಯ ಉದ್ದೇಶಗಳು ಕೃಷಿ ನೀರಾವರಿಗಿದ್ದ ಆದ್ಯತೆಯ ಬಗ್ಗೆಯೂ ಈ ಭಾಗದ ಪಾಳೆಪಟ್ಟಿನ ನಿರ್ವಹಣೆಯಲ್ಲಿ ಕಾಣಬರುತ್ತವೆ. ಪಾಳೆಯಪಟ್ಟುಗಳು, ಉಪಪಾಳೆಯಪಟ್ಟುಗಳು ವಿಕಸಿಸಿರುವ ಬಗೆಯಲ್ಲಿ 'ಊಳಿಗಮಾನ್ಯ' ದೃಷ್ಟಿಗಿಂತ ಗ್ರಾಮೀಣಭಿವೃದ್ಧಿಯ ಸ್ತರಗಳು ಕಾಣಬರುತ್ತವೆ. ಪರಸ್ಪರ ಕಚ್ಚಾಟದಂಥ ಘಟನೆಗಳಿದ್ದರೂ ಅವು ಇಲ್ಲಿ ಎದ್ದುಕಾಣುವುದಿಲ್ಲ. ವಿಜಯನಗರ ಸಾಮ್ರಾಜ್ಯದ ಬೀಳಿಗೆ ಸಾಮಾನ್ಯ ಜನರು ಸೈನಿಕ ಕಾರ್ಯಾಚರಣೆಯಲ್ಲಿ ಸಹಯೋಗಗೊಡದೆ ದೂರನಿಂತು ರಾಜನ ಹೊಣೆಗೆ ಯುದ್ಧ ಕಾರಣವನ್ನು ಬಿಟ್ಟಿದ್ದು ಕಾರಣವಾಗಿರಬಹುದು. ಆ ಮಟ್ಟಿಗೆ ಪಾಳೆಯಪಟ್ಟಿನ ನಾಯಕರಲ್ಲಿ ಲೋಪವಿರಬಹುದು. ಆದರೆ ಪಾಳೆಪಟ್ಟುಗಳು ಸ್ವತಂತ್ರವಾಗಿ ವಿಜಯನಗರಾನಂತರವೂ ಬಾಳಿ ಜನಕ್ಷೇಮಕ್ಕಾಗಿ ಶ್ರಮಿಸಿದುದರ ಉದಾಹರಣೆಗಳಿಗೆ ಕೊರತೆ ಇಲ್ಲ. ಕೆಳ್ಗಿಲಿ ನಾಡಿನ ವಿಜಯನಗರ ಕಾಲದ ಪಾಳೆಯಪಟ್ಟುಗಳು ಈ ಹಿನ್ನೆಲೆಯಲ್ಲಿ ವಿಶಿಷ್ಟವಾಗಿ ಕಾಣಿಸುತ್ತವೆ.



ಕ್ರಿ.ಶ. ೧೩೫೧ರ ಐಜೂರು ಚೆನ್ನಯ್ಯ ನಾಯಕನ ಶಾಸನ



ಕ್ರಿ.ಶ. ೧೩೫೧ರ ಐಜೂರು ಚೆನ್ನಯ್ಯ ನಾಯಕನ ಶಾಸನದ ಹಿಂಬದಿ



ಐಜೂರು ಚೆನ್ನಯ್ಯ ನಾಯಕನ ಶೌರ್ಯೋತ್ಸಾಹದ ಜಯಶಿಲೆ !



ಕೆಪ್ಪಿಲಿನಾಡಿನ ಐಜೂರು ಗುಡ್ಡಗಳ ಒಂದು ನೋಟ




ಕೆವ್ಗಿಲಿನಾಡಿನ ಪ್ರಾಗಿತಿಹಾಸ ಕಾಲದ ಬೃಹತ್ ಶಿಲಾಯುಗ ಸಮಾಧಿ ಹಾಗೂ ಗಿರಿಶ್ರೇಣಿಯ ಕಲ್ಲುಗುಡ್ಡೆಗಳು; ಬೆಟ್ಟದ ಬೊಮ್ಮಯ್ಯನಾಯಕ ಹಾಗೂ ಹಿರಿಯ ಕೆಂಪೇಗೌಡನ ಪಾಳೆಪಟ್ಟಿನ ಗಿರಿದುರ್ಗ ಪರಿಸರ




ಕೆವ್ವಿಲಿನಾಡಿನ (ಕಲ್ಲೂರು)ರಣಪಾರರಸನ ಶಾಸನ




ಚನ್ನಪಟ್ಟಣ ತಾ. ಕೆಳಲೆನಾಡಿನ ಪರಿಸರದ ಮಾಕುಂದ ಪಾಳೆಪಟ್ಟಿನ ಸನಿಹದ ಗಿರಿಶ್ರೇಣಿ ಹಾಗೂ ಜಲಾನಯನ ಪ್ರದೇಶ



ಶಿವನಗಿರಿ : ಕವ್ಗಿಲಿನಾಡಿನ ವಿಜಯನಗರ ಕಾಲದ ಒಂದು ಪಾಳೆಯಪಟ್ಟು.
ಮೊದಲಿಗೆ ಹರಹರಿ ಪಾಳೆಯಗಾರರಿದ್ದ ಗಿರಿದುರ್ಗ



ಕೆಪ್ಪಿಲಿನಾಡಿನ ಗಿರಿಶ್ರೇಣಿಗಳು ಹಾಗು ವಿಜಯನಗರ ಕಾಲದ ಪಾಳೆಯಪಟ್ಟು ಪ್ರದೇಶಗಳು



ಕವ್ವಲಿನಾಡಿನ ರಾಮಗಿರಿ ಗಿರಿಶ್ರೇಣಿಯಲ್ಲಿನ ವಿಜಯನಗರ ಕಾಲದ ಪಾಳೆಯಪಟ್ಟಿನ ಗಿರಿದುರ್ಗದ ಪರಿಸರ

ಅಡಿಟಿಪ್ಪಣಿಗಳು

೧. ಲಕ್ಷ್ಮಣ್ ತೆಲಗಾವಿ, 'ಎಪ್ಪತ್ತೇಳು ಪಾಳೆಯಗಾರರು', ಇತಿಹಾಸ ದರ್ಶನ, ಸಂ. ೩, ಸಂ. ೧, ೧೯೮೮, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ii. ಮೆಕೆಂಜಿ ಸಂಗ್ರಹಿಸಿದ ಅರಸರಿಗೆ ಸಂಬಂಧಿಸಿದ ಹಸ್ತಪ್ರತಿ

೨. i. Early Vijayanagara Studies in History and Culture, ೧೯೮೮, (Ed) Dr. G.S.Dikshit, P. ೨೪

ii. ಡಾ. ಜಿ.ಎಸ್.ದೀಕ್ಷಿತ್, 'ವಿಜಯನಗರ ಸಾಮ್ರಾಜ್ಯ ಸ್ಥಾಪನೆ', ನಾಗಾಭಿನಂದನ (ಎಂ.ಜಿ.ನಾಗರಾಜ್ ಅಭಿನಂದನ ಗ್ರಂಥ), ೧೯೯೪, (ಸಂ) ಡಾ. ಎಚ್.ಎಸ್.ಗೋಪಾಲರಾವ್

೩. ಡಾ. ಎಂ.ವಿ.ಶ್ರೀನಿವಾಸ್, 'ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಪಾಳೆಯಗಾರರ ಪಾತ್ರ', ನಾಗಾಭಿನಂದನ, ಅದೇ, ಪು. ೧೪೭

೪. ಕರ್ನಾಟಕ ಚರಿತ್ರೆ, ಸಂಪುಟ ೩, (ವಿಜಯನಗರ ಕಾಲದ ಅಮರನಾಯಕರು), ೧೯೯೭, (ಪ್ರ.ಸಂ.) ಪ್ರೊ. ಬಿ.ಷೇಕ್ ಅಲಿ, (ಸಂ) ಕೆ.ಎಸ್.ಶಿವಣ್ಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೬೨

೫. ಎಂ.ವಿ.ಕೃಷ್ಣರಾವ್, ೧೯೬೪, ಬೆಂಗಳೂರು ಕೆಂಪೇಗೌಡ, ಪು. ೧೩೩-೧೩೭

೫. ಅ. ಎ.ಕ.ಸಂ. ೧೨ (ಹೊಸತು), ೨೦೦೩, ಚಿಕ್ಕಮಗಳೂರು ಜಿಲ್ಲೆ, ನರಸಿಂಹರಾಜಪುರ ೩೬ (ಲಿಂಗಾಪುರ, ಕ್ರಿ.ಶ. ೧೫೫೩), ಮೈಸೂರು ವಿಶ್ವವಿದ್ಯಾಲಯ

೬. i. N.G.Ranga, ೧೯೭೧, Kakatiya Nayaks, Nidubrolu, Pp. ೨೧ and ೩೬

ii. Andrapradesh District Gazetteer (Warangal), ೧೯೭೬, (Ed) M.V.Rajagopal Hyderabad, P. ೩೭

iii. V.Yashodadevi, After the Kakatiyas, Andrapradesh Sahity Academi, Hyderabad, Pp. ೪-೬

೭. ಎಂ.ಜಿ.ನಾಗರಾಜ್, 'ರಾಮನಗರದ ಶಾಸನ: ಪೂರ್ವ ಹಳಗನ್ನಡ ಭಾಷೆ-ಲಿಪಿಗಳಿಗೆ ಒಂದು ಕೊಡುಗೆ', ಸಾಪ್ತಾಹಿಕ ಉದಯವಾಣಿ ಮಾಗಸಿನ್ ವಿಭಾಗ, ೩೧.೮.೧೯೮೦, ಐಜೂರು (ರಾಮನಗರದ ವಿಸ್ತರಣ)ವಿನಲ್ಲಿ ೨೦.೩.೧೯೭೭ ರಂದು ಶ್ರೀ. ವಿ.ಪಿ.ಗುರುಮೂರ್ತಿಯವರೊಡನೆ ಹೋಗಿ ಈ ಶಾಸನವನ್ನು ಕಂಡುಹಿಡಿಯಲಾಯಿತು. ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ಇ.ಎಸ್.ಐ. ಆಶ್ರಯದಲ್ಲಿ ನಡೆದ ಶಾಸನತಜ್ಞರ ಸಮ್ಮೇಳನದಲ್ಲಿ ಈ ಶಾಸನವನ್ನು ಮಂಡಿಸಲಾಯಿತು.

೮-೯. ಎ.ಕ.ಸಂ. ೯ (ರೈಸ್ ಆವೃತ್ತಿ) ಮತ್ತು ಅನುಬಂಧ, ಬೆಂಗಳೂರು ಜಿಲ್ಲೆ, ಚ.ಪ. ೧೮೦ (ಕೆಳಲು; ಹೊಯ್ಸಳ ಕ್ರಿ.ಶ. ೧೨೯೦), ದೊ.ಬ.-೬೮, (ಮಲ್ಲೋಹಳ್ಳಿ ತಾಮ್ರಶಾಸನ ಕ್ರಿ.ಶ. ೫೧೭ (ದುರ್ವಿನೀತ ಕಾಲ, ಕೆವಿಲೆ ನಾಮ್ನ ಬೆಮ್ಮುರೀಶ್ವರ ಸ್ಥಾನಂ), ಎ.ಕ.ಸಂ.೭ ಮಂಡ್ಯ ಜಿಲ್ಲೆ, ಮದ್ದೂರು ೪೨ (ಆತಕೂರು, ಕ್ರಿ.ಶ. ೯೫೦, ಕೆವಿಲೆನಾಡು), ಚ.ಪ. ೧೯೩ (ರಾಮಪುರ ಹೊಯ್ಸಳರ ಕಾಲ ಕ್ರಿ.ಶ. ೧೨೯೬ ಕೆಳಲೆನಾಡು), ಚ.ಪ. ೧೮೬ (ಮಳೂರು ತಾಮ್ರಶಾಸನ

- ಕ್ರಿ.ಶ. ೧೫೫೮ - ಕೈಲನಾಡು), ಮದ್ದೂರು ೬೮ (ಎ.ಕ.ಸಂ. ೭, ವೈದ್ಯನಾಥಪುರ, ಕ್ರಿ.ಶ. ೧೧೩೨, ಕೆಲಲೆನಾಡು), ಮದ್ದೂರು ೬೯ (ಕ್ರಿ.ಶ. ೧೨೬೧), ೩೯ (ಕ್ರಿ.ಶ. ೧೪೫೯) - ಕೆಳಲೆನಾಡು, ಮದ್ದೂರು ೯೮ (ಬೆಲ್ಲೂರು, ಕ್ರಿ.ಶ. ೧೨೦೦ - ಕೆಳಲೆನಾಡ ವಿಷಯ, ಮದ್ದೂರು ೧೧೫ (ಬೊಪ್ಪಸಂದ್ರ : ಕ್ರಿ.ಶ. ೧೧೯೮), ಮದ್ದೂರು ೧೦೮ (ಹೊಂದಲಗೆರೆ), ಕೆಳಲೆನಾಡು, ಮದ್ದೂರು ೨೩ (ಕೆಳಲೆಯಹಳಿ ಸಿಮೆ), ಮಳವಳ್ಳಿ ೩೬ (ಹುಲ್ಲೇಗಾಲ, ಕ್ರಿ.ಶ. ೧೨೧೯), ಮಳವಳ್ಳಿ ೩೯ (ಹುಲ್ಲೇಗಾಲ) ಕೆಳಲೆನಾಡು, ಎ.ಕ.೯ (ರೈಸ್ ಆವೃತ್ತಿ) ಚ.ಪ. ೨೬ (ರಾಮನಗರ ತಾ. ಕೂನಗಲ್ಲು, ಕ್ರಿ.ಶ. ೧೬೫೧, ಚನ್ನಪಟ್ಟಣ ೩೭ (ಕ್ರಿ.ಶ. ೧೩೯೫), ಚ.ಪ. ೧೪೭-೧೪೮ (ಮಳೂರು, ಕ್ರಿ.ಶ. ೧೪೩೭, ೧೪೧೪), ಚ.ಪ. ೧೪೯ (ಕ್ರಿ.ಶ. ೧೪೩೨), ಚ.ಪ. ೧೫೫ (ಚಕ್ಕರೆ, ಕ್ರಿ.ಶ. ೧೫೩೪) ಕೆಳಲೆನಾಡು, ಚ.ಪ. ೧೫೩ (ಅಬ್ಬೂರು - ಕೆಳಲೇ ಸಂಜ್ಞನಾಡೇ, ಚ.ಪ. ೧೮೧ (ರಾ.ನ.ತಾ. ಕ್ರಿ.ಶ. ೧೫೩೦) ಕಲೆಳಿನಾಡು; ಚ.ಪ. ೧೬ (ಐಜೂರು, ಕ್ರಿ.ಶ. ೧೩೫೧), ಚ.ಪ. ೧೦ (ರಾ. ತಾ. ಸುಗ್ಗನಹಳ್ಳಿ, ಕ್ರಿ.ಶ. ೧೩೧೮) ಕಲುವಳಿನಾಡು, ಚ.ಪ. ೧೭೮ (ರಾ.ನ.ತಾ. ವಡವಟ್ಟ, ಕ್ರಿ.ಶ. ೧೩೧೪) ಕಲುವೊಳೆನಾಡು, ಚ.ಪ. ೨೨೫ (ಕೃಷ್ಣಾಪುರ, ಕ್ರಿ.ಶ. ೧೧೭೮) ಕೆಳಲೆನಾಡು, ಚ.ಪ. ೭೩ (ಮಾಗೇನಹಳ್ಳಿ, ಕ್ರಿ.ಶ. ೧೩೧೮) - ಕೆಳವಲನಾಡು, ಚ.ಪ.೧೭೨ (ಕಂನಮಂಗಲ, ಕ್ರಿ.ಶ. ೧೧೮೦) - ಕಲುವರಿನಾಡು, ಚ.ಪ. ೧೮೫ (ರಾ.ನ.ತಾ. ಅಕ್ಕೂರು, ಕ್ರಿ.ಶ. ೧೩೪೧) - ಕೆಲುವಳಿನಾಡು, ಎ.ಕ.ಸಂ. ೭ (ಮಂಡ್ಯಜಿಲ್ಲೆ) ಮದ್ದೂರು ೩೪ (ಕಾಡ್ಲೆ ಕ್ರಿ.ಶ. ೧೬೬೩) - ಕೆಳಲಿನಾಡು, ಎ.ಕ. ೯ (ರೈಸ್) ಬೆಂಗಳೂರು ಜಿಲ್ಲೆ, ಚ.ಪ. ೧೨೭, ೧೩೦ (ಕ್ರಿ.ಶ. ೧೦೦೭-ಮಳೂರು), ಚ.ಪ. ೭೭ (ಕ್ರಿ.ಶ. ೧೦೮೬), ಚ.ಪ. ೮೨-೮೩ (ಕ್ರಿ.ಶ. ೧೦೩೬), ಚ.ಪ. ೮೪ (ಕ್ರಿ.ಶ. ೧೦೨೪), ಚ.ಪ. ೮೭ (ಕ್ರಿ.ಶ. ೧೦೧೦), ಚ.ಪ. ೯೧ (ಕ್ರಿ.ಶ. ೧೦೨೯), ಚ.ಪ. ೮೬ (ಕ್ರಿ.ಶ. ೧೨೦೦) ಮಳೂರು ಹಾಗೂ ಚ.ಪ. ೧೦೯ (ಕ್ರಿ.ಶ. ೧೧೮೦), ಚ.ಪ. ೧೧೨ (ಕ್ರಿ.ಶ. ೧೨೧೩), ಚ.ಪ. ೧೨೦ (ಕ್ರಿ.ಶ. ೧೨೦೦) ಚ. ೧೨೭ (ಕ್ರಿ.ಶ. ೧೦೧೪), ಚ.ಪ. ೧೨೮ (ಕ್ರಿ.ಶ. ೧೦೦೭), ಚ.ಪ. ೧೨೯ (ಕ್ರಿ.ಶ. ೧೦೧೪), ಕೂಡಲೂರು, ಚ.ಪ. ೧೩೦-೧೩೨ (ಕ್ರಿ.ಶ. ೧೦೦೭), ಚ.ಪ. ೧೩೬-೧೩೭ (ಕ್ರಿ.ಶ. ೧೧೫೯), ಮಳೂರು, ಚ.ಪ. ೧೮೦ (ರಾ.ನ.ತಾ. ತಾಳವಾಡಿ, ಕ್ರಿ.ಶ. ೧೦೮೫) - ಕಿವಿಲೈನಾಡು

೧೦. ಎ.ಕ.೫ (ಹೊಸತು, ೧೯೭೬, ಮೈಸೂರು ಜಿಲ್ಲೆ, ಮೈಸೂರು ವಿಶ್ವವಿದ್ಯಾಲಯ, ಟಿ.ನರಸೀಪುರ, ೧೪೫ (೯ನೇ ಶತಮಾನ)

೧೧. i. ಅದೇ ತಿ.ನ. ೧೪೬ (೯ನೇ ಶತಮಾನ) ii. ಎ.ಕ.ಸಂ.೯, ಅನುಬಂಧ ಬೆಂಗಳೂರು ಜಿಲ್ಲೆ, ಚ.ಪ. ೧೯೬

೧೨. ಡಾ. ಪಿ.ವಿ.ಕೃಷ್ಣಮೂರ್ತಿ ಅವರು 'ಕೆಮ್ಮಿಮಿ' ಎಂಬ ಶಬ್ದದ ಬಗ್ಗೆ 'ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು', ೧೯೯೯ (ಸಂ) ಎಂ.ಎಂ.ಕಲಬುರ್ಗಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೩೫ ರಲ್ಲಿ ಗಮನ ಸೆಳೆದಿದ್ದಾರೆ. ಆದರೆ ಸಾಹಿತ್ಯಕ ಹಾಗೂ ಶಾಸನೋಕ್ತವಾಗಿಯೂ ಮತ್ತಷ್ಟು ವಿವೇಚನೆ ಬೇಕಾಗುತ್ತದೆ.

೧೩. ಎ.ಕ.ಸಂ. ೯ (ರೈಸ್), ಚ.ಪ. ೧೨೮

೧೪. ಅದೇ, ಚ.ಪ. ೧೮೭

೧೫. i. ೧೯೭೭ರಲ್ಲಿ ಎಂ.ಜಿ.ನಾಗರಾಜ್ ಮತ್ತು ವಿ.ಪಿ.ಗುರುಮೂರ್ತಿಯವರು ರಾಮನಗರದಲ್ಲಿ ಕಂಡುಹಿಡಿದ ಶಾಸನ

ii. ಎಂ.ಜಿ.ನಾಗರಾಜ್, ೧೯೯೦, ಶಾಸನಶಿಲ್ಪಗಳು, ಶ್ರೀ ಗೌರೀಗಂಗಾ ಪ್ರಕಾಶನ, ಬೆಂಗಳೂರು, ಪು. ೪೩ ಹಾಗೂ ಒಪ್ಪೋಲೆ (ಕೊನೆಪುಟ)

೧೬. 'ಮಗಚ್ಚವರ್' ಎಂಬ ಶಬ್ದಕ್ಕೆ ಅಚ್ಚೆಯವರಾದ ಮುದ್ದಿನ ಮಗ ಎಂಬ ಅರ್ಥವನ್ನು ಸಂಪಾದಕೀಯ ಟಿಪ್ಪಣಿಯಲ್ಲಿ ಸೂಚಿಸಿದವರು ಶ್ರೀ ಬನ್ನಂಜೆ ಗೋವಿಂದಾಚಾರ್ಯ ಅವರು (ನೋಡಿ ಉದಯವಾಣಿ ಮಾಗಸೀನ್ ವಿಭಾಗ ರವಿವಾರ ೩೧.೮.೧೯೮೦, ಎಂ.ಜಿ.ನಾಗರಾಜ್, 'ರಾಮನಗರದ ಶಾಸನ, ಪೂರ್ವ ಹಳಗನ್ನಡ ಭಾಷೆ - ಲಿಪಿಗಳಿಗೆ ಒಂದು ಕೊಡುಗೆ')

೧೭. MAR ೧೯೧೦, P. ೨೬

೧೮. ಡಾ. ಕೆ.ಜಿ.ಗೋಪಾಲಕೃಷ್ಣ, ಎಂ.ಜಿ.ನಾಗರಾಜ್, 'ರಾಮನಗರದ ಒಂದು ಅಪ್ರಕಟಿತ ವೀರಗಲ್ಲು ಶಾಸನ', ಇತಿಹಾಸದರ್ಶನ, (ಸಂ) ಎಂ.ಜಿ.ನಾಗರಾಜ್, ಡಾ. ಪಿ.ವಿ.ಕೃಷ್ಣಮೂರ್ತಿ, ಕ.ಇ.ಅ. ಸಂ. ೧೮, ೨೦೦೩, ಪು. ೬೯

೧೯. ಎ.ಕ.೯ (ರೈಸ್ ಆವೃತ್ತಿ), ಚನ್ನಪಟ್ಟಣ ೭೩ (ವಿರೂಪಾಕ್ಷಪುರ ಹೋಬಳಿ ಮಾಗೇನಹಳ್ಳಿ, ಕ್ರಿ.ಶ. ೧೩೧೮)

೨೦. ಅದೇ, ಚ.ಪ. ೧೦ (ಸುಗ್ಗನಹಳ್ಳಿ, ಕ್ರಿ.ಶ. ೧೩೧೮)

೨೧. ಅದೇ, ಚ.ಪ. ೭ (ಕ್ಲೋಸಪೇಟೆ, ಹೋಬಳಿ ಹಾಗಲಹಳ್ಳಿ, ಕ್ರಿ.ಶ. ೧೩೩೪)

೨೨. ಅದೇ, ಚ.ಪ. ೧೬ (ಐಜೂರು, ರಾಮನಗರ, ಕ್ರಿ.ಶ. ೧೩೫೧)

೨೩. ಅದೇ, ಚ.ಪ. ೩೭ (ಹರೂರು, ಚ.ಪ.ತಾ. ಕ್ರಿ.ಶ. ೧೩೯೫)

೨೪. ಅದೇ, ಚ.ಪ. ೧೫೦ (ಅಬ್ಬೂರು, ಮಳೂರು, ಹೋಬಳಿ, ಕ್ರಿ.ಶ. ೧೩೬೯)

೨೫. i. ಡಾ. ಎಂ.ಜಿ.ಚಂದ್ರಕಾಂತ, ಎಂ.ಜಿ.ನಾಗರಾಜ್, 'ಕೊಡಗಿನ ಕೊಂಗಾಳ್ವರು ಮತ್ತು ಜೈನಧರ್ಮ', ಇತಿಹಾಸದರ್ಶನ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ಸಂ. ೧೮, ೨೦೦೩, ಪು. ೧೬೮-೯,

ii. ಎ.ಕ. ೫ (ಹೊಸತು), ೧೯೭೫, ಮೈಸೂರು ಜಿಲ್ಲೆ, ಕೃ.ನ. ೭೭ (ಹಬಸೂರು, ಕ್ರಿ.ಶ. ೧೩೭೭) ಮೈಸೂರು ವಿಶ್ವವಿದ್ಯಾಲಯ

iii. ಎ.ಕ. ೮ (ಹೊಸತು), ೧೯೮೪, ಹಾಸನ ಜಿಲ್ಲೆ, ಹಾಸನ ೭೬ (ಕಲ್ಲವತ್ತಿ, ಕ್ರಿ.ಶ. ೧೧೨೩), ಮೈಸೂರು ವಿಶ್ವವಿದ್ಯಾಲಯ

೨೬. ಎ.ಕ.ಸಂ. ೯ (ರೈಸ್) ಅದೇ, ಚ.ಪ. ೧೪೮ (ಮಳೂರು, ಕ್ರಿ.ಶ. ೧೪೧೪), ಚ.ಪ. ೧೪೭ (ಮಳೂರು, ಕ್ರಿ.ಶ. ೧೪೩೭)

೨೭. ಅದೇ, ಚ.ಪ. ೧೬೯ (ಮಾಕಳಿ, ಕ್ರಿ.ಶ. ೧೪೧೬)

೨೮. ಅದೇ, ಚ.ಪ. ೧೪೯ (ಮಳೂರು, ಕ್ರಿ.ಶ. ೧೪೩೨)

೨೯. ಅದೇ, ಚ.ಪ. ೧೫೮ (ಚಕ್ಕಲೂರು, ಕ್ರಿ.ಶ. ೧೪೭೮)

೩೦. ಅದೇ, ಚ.ಪ. ೧೫೬ (ಮಳೂರು ಹೋಬಳಿ ಹೊಟ್ಟಗನಹಳ್ಳಿ, ಕ್ರಿ.ಶ. ೧೫೧೩)

೩೧. ಅದೇ, ಚ.ಪ. ೨೪ (ರಾಮನಗರ ತಾ. ಕೂನಗಲ್ಲು ಹೋಬಳಿ ಕೋಟಳ್ಳಿ, ಕ್ರಿ.ಶ. ೧೫೨೭)

೩೨. ಅದೇ, ಚ.ಪ. ೧೮೧ (ರಾಮನಗರ ತಾ. ಕೂಟಗಲ್ಲು ಗ್ರಾಮ, ಕ್ರಿ.ಶ. ೧೫೩೦)

೩೩. ಅದೇ, ಚ.ಪ. ೨೦ (ರಾ.ನ.ತಾ. ಹುಲ್ಲುಕೆರೆ ಗುಂನೂರು, ಕ್ರಿ.ಶ. ೧೫೩೨)

೩೪. ಅದೇ, ಚ.ಪ. ೫೨ (ಚನ್ನಪಟ್ಟಣ ತಾ. ಕೋಡಂಬಳ್ಳಿ, ಕ್ರಿ.ಶ. ೧೪೯೯)

೩೫. ಅದೇ, ಚ.ಪ. ೫೩ (ಚ.ಪ.ತಾ. ಕೋಡಂಬಳ್ಳಿ, ಕ್ರಿ.ಶ. ೧೫೩೪)

೩೬. ಅದೇ, ಚ.ಪ. ೭೪ (ಚ.ಪ.ತಾ. ಮಾಗೇನಹಳ್ಳಿ, ಕ್ರಿ.ಶ. ೧೫೩೫)

೩೭. ಅದೇ, ಚ.ಪ. ೫೦ (ಚ.ಪ.ತಾ. ಮೋಗೇನಹಳ್ಳಿ, ಕ್ರಿ.ಶ. ೧೫೩೫)

೩೮. ಅದೇ, ಚ.ಪ. ೪೭ (ಚ.ಪ.ತಾ. ಮೋಗೇನಹಳ್ಳಿ, ಕ್ರಿ.ಶ. ೧೦೦೦)

೩೯. ಕನ್ನಡನಾಡಿನ ಚರಿತ್ರೆ, (ಮೊದಲ ಭಾಗ), ೧೯೭೩, (ಪ್ರ.ಸಂ.) ಬಿ.ಎಂ.ಶ್ರೀ. ಡಾ. ಬಿ.ಎ.ಸಾಲೆತ್ತೊರೆ ದೇಸಾಯಿ ಪಾಂಡುರಂಗರಾಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೭೪

೪೦. ಕರ್ನಾಟಕ ಚರಿತ್ರೆ (ಸಂಪುಟ ೩), ೧೯೯೭, ಅದೇ (ಪ್ರ.ಸಂ.) ಪ್ರೊ. ಷೇಕ್ ಅಲಿ, (ಸಂ) ಕೆ.ಎಸ್.ಶಿವಣ್ಣ, ಹಂಪಿ ಕನ್ನಡ ವಿಶ್ವವಿದ್ಯಾಲಯ, ಪು. ೭೦

❖ ❖

೨೩

ಬಿ.ಕೆ.ಹಳ್ಳಿಯ ಅಪೂರ್ವ ಭಿತ್ತಿ ಚಿತ್ರಕಲಾ ಭಾಂಡಾರ ಶೋಧ

ಡಾ. ಎಸ್.ಸಿ.ಪಾಟೀಲ

ಕರಾವಳಿಯ ಪ್ರದೇಶದ ದೇವಾಲಯಗಳಿಗೆ ಅವುಗಳದೇ ಆದ ವಸ್ತು ವಿನ್ಯಾಸವಿದ್ದು, ಕಾವಿ ಬಣ್ಣದಿಂದ ಬಿಡಿಸಿದ ಕಾವಿ ಭಿತ್ತಿ ಚಿತ್ರಕಲೆ ಈ ಪ್ರದೇಶದ ದೇವಾಲಯದ ಪ್ರಮುಖ ಆಕರ್ಷಣೆಯಾಗಿದೆ. ಕರಾವಳಿಯುದ್ದಕ್ಕೂ ಕಂಡುಬರುವ ಈ ಕಾವಿ ಭಿತ್ತಿ ಚಿತ್ರಗಳ ಮಧ್ಯದಲ್ಲಿ ಅಪರೂಪದ ಬಹುವರ್ಣ ಭಿತ್ತಿಚಿತ್ರ ನೆಲೆಯೊಂದು ಇರುವುದು ಬಹುಕಾಲು ಇತಿಹಾಸಕಾರರಿಗೆ, ಕಲಾಸಕ್ತರಿಗೆ ಗೊತ್ತಿಲ್ಲ. ಕಾರವಾರ ಜಿಲ್ಲೆಯ ಹಳಿಯಾಳ ಸಮೀಪ ೪ ಕಿ.ಮೀ. ದೂರದಲ್ಲಿ ಹಳಿಯಾಲ ಧಾರವಾಡ ಮಧ್ಯದಲ್ಲಿ ಬಿ.ಕೆ.ಹಳ್ಳಿ ಎಂಬ ಚಿಕ್ಕ ಗ್ರಾಮವಿದೆ. ಬಿ.ಕೆ.ಹಳ್ಳಿ ಎಂದರೆ ಬಂಜರ ಕಂಚನಹಳ್ಳಿ ಎಂದು, ದಾಖಲೆಯಲ್ಲಿ ಬಂಜನ ಕಂಚನಹಳ್ಳಿಯೆಂದೇ ಕರೆಯಿಸಿಕೊಂಡ ಈ ಗ್ರಾಮದಲ್ಲಿ ಕದಂಬರ ಕಾಲದ ದೇವಾಲಯಗಳಿವೆ. ಹಾಗೆಯೇ ಬೇರೆ ಬೇರೆ ಕಾಲಘಟ್ಟಗಳಲ್ಲಿ ನಿರ್ಮಾಣವಾದ ದೇವಾಲಯಗಳು ಇವೆ. ಪ್ರಸ್ತುತ, ಊರ ಹೊರಗಡೆ ಇರುವ ಶ್ರೀ ರಾಮದೇವಾಲಯವೇ ಅಪರೂಪದ ಕಲಾಕೃತಿಗಳ ವರ್ಣವಿನ್ಯಾಸ ಹೊಂದಿರುವ ವೈಭವದ ತಾಣ. ಕಲಾಸಕ್ತರನ್ನು ಬೆರಗುಗೊಳಿಸುವ ಈ ಅದ್ಭುತ ಕಲಾಭಂಡಾರದ ಸ್ಥೂಲ ಪರಿಚಯ ಪ್ರಸ್ತುತ ಲೇಖನದಲ್ಲಿದೆ.

ದೇವಾಲಯದ ಸ್ವರೂಪ

ಶ್ರೀರಾಮ ದೇವಾಲಯವು ಕಲ್ಲಿನಿಂದ ಕಟ್ಟಿದ ಬಯಲು ಸೀಮೆಯ ದೇವಾಲಯದಂತೆ ಇರದೆ ಮಲೆನಾಡಿನ ಹಳೆಯ ಕೊಳವೆ ಹಂಚಿನ ಮನೆಗಳ ಮಾದರಿಯಲ್ಲಿದ್ದು, ಕಲ್ಲು,

ಮಣ್ಣು, ಇಟ್ಟಿಗೆ ಉಪಯೋಗಿಸಿ ಕಟ್ಟಿದ್ದು ಮೇಲ್ಛಾವಣಿಗೆ ಮಣ್ಣಿನ ಹಂಚುಗಳನ್ನು ಹೊದಿಸಲಾಗಿದೆ. ದೇವಾಲಯದ ಸುತ್ತಲೂ ಪ್ರದಕ್ಷಿಣಾ ಪಥವಿದ್ದು ಅದರ ಸುತ್ತಲು ೨೮ ಕಟ್ಟಿಗೆ (ಮರದ) ಕಂಬಗಳಿವೆ. ಒಳಬದಿಯಲ್ಲಿ ಸಹ ಈ ಮರದ ೧೮ ಕಂಬಗಳು ದೇವಾಲಯವನ್ನು ಸುತ್ತುವರಿದಿವೆ. ಈ ಕಂಬಗಳಿಗೆ ಮೇಲ್ಭಾಗದಲ್ಲಿ ಮೇಲ್ಛಾವಣಿ ಇದೆ. ದೇವಾಲಯ ಮರದ ಕಂಬಗಳ ಮೇಲೆಯೇ ನಿಂತಿರುವುದು. ಈ ದೇವಾಲಯದ ಕೆಳಗಣ ಪ್ರಾಂಗಣ ೮೧/೨ ಅಡಿ ಅಗಲದ ಸುತ್ತಳತೆಯನ್ನು ಹೊಂದಿದ್ದು ಅದರ ಮೇಲ್ಗಡೆ ೧ ಅಡಿ ಎತ್ತರದಲ್ಲಿ ೩೧/೨ ಅಡಿಯ ಪ್ರಾಂಗಣವಿದೆ. ಹೀಗಾಗಿ ಭಿತ್ತಿ ಚಿತ್ರಗಳು ಸ್ವಲ್ಪ ಎತ್ತರದಲ್ಲಿವೆ.

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಒಳಭಾಗದಲ್ಲಿ ಮರದ ಮೇಲೆ ಮತ್ತು ಗಾರೆಯನ್ನು ಮಾಡಿ ಅದರ ಮೇಲೆಲ್ಲಾ ಚಿತ್ರಗಳನ್ನು ಬಿಡಿಸಲಾಗಿದೆ. ದೇವಾಲಯದ ಒಳಗಡೆ ಯಾವ ಸ್ಥಳವನ್ನೂ ಖಾಲಿ ಬಿಡದೆ ಎಲ್ಲವನ್ನೂ ವರ್ಣಚಿತ್ರಗಳಿಂದ ಅಲಂಕರಿಸಲಾಗಿದೆ. ದೊಡ್ಡದಾದ ಚೌಕುಗಳಿದ್ದು ಮತ್ತೆ ಸಣ್ಣ ಸಣ್ಣ ಪಟ್ಟಿಕೆಗಳನ್ನು ಮಾಡಿಕೊಳ್ಳಲಾಗಿದೆ. ಗರ್ಭಗುಡಿಯಲ್ಲೂ ಸಹ ಸುತ್ತಲು ವರ್ಣವಿನ್ಯಾಸ ಮಾಡಲಾಗಿದೆ. ದೇವಾಲಯದ ಬಲಬದಿಯಲ್ಲಿ ಗಾರೆಯ ಭಿತ್ತಿಯಲ್ಲಿ ಮಾತ್ರ ಚಿತ್ರಗಳಿವೆ. ೬ ಅಡಿ ಅಗಲ ೭ ಅಡಿ ಉದ್ದದ ಎರಡು ದೊಡ್ಡ ಪಟ್ಟಿಕೆಗಳಿದ್ದು. ಅದರಲ್ಲಿ ೨೧/೨ ಪೂಟ ಅಗಲ ೬ ಅಡಿ ಉದ್ದದ ಮತ್ತೆ ಎರಡು ಚೌಕಗಳಿವೆ. ಇವುಗಳಲ್ಲಿ ಮತ್ತೆ ಸಣ್ಣ ಸಣ್ಣ ೬x೧೨ ಇಂಚಿನ ಆಯತಾಕಾರದ ಚೌಕುಗಳನ್ನು ಮಾಡಿಕೊಂಡು ಚಿತ್ರ ಬಿಡಿಸಲಾಗಿದೆ. ನಡುವೆ ಉದ್ದನೆಯ ಪಟ್ಟಿಯೊಂದಿದೆ. ದೇವಸ್ಥಾನದ ಬಲಬದಿಯ ಎಲ್ಲ ಗೋಡೆಯನ್ನು ಇಲ್ಲಿ ಚಿತ್ರಕಲೆಗಾಗಿ ಬಳಸಿಕೊಳ್ಳಲಾಗಿದೆ.

ಹಿಂಬದಿಯ ಗೋಡೆಯು ೬ ಅಡಿ ಉದ್ದನೆಯದಾಗಿದ್ದು ಅಲ್ಲಿ ೮ ಪಟ್ಟಿಕೆಗಳನ್ನು ಮಾಡಿಕೊಳ್ಳಲಾಗಿದೆ. ಎಡಬದಿಯ ಗೋಡೆಯಲ್ಲಿ ಬಲಬದಿಯ ಅಳತೆಯ ಗಾರೆಯೇ ಮುಂದುವರಿದಿದ್ದು, ಇಲ್ಲಿ ೩ ಅಡಿ ಉದ್ದ ಮತ್ತು ೬ ಅಡಿ ಅಗಲದ ಪಟ್ಟಿಕೆಗಳಿವೆ. ಭಿತ್ತಿಚಿತ್ರಗಳಿರುವ ಗಾರೆಯೂ ಇಲ್ಲಿ ೨೦ ಅಡಿ ಅಗಲ ೬ ಅಡಿ ಉದ್ದದ ಅಳತೆಯನ್ನು ಹೊಂದಿದೆ. ದೇವಾಲಯದ ಮೂರೂ ಬದಿಯೂ ಈ ಗಾರೆಯ ಭಿತ್ತಿ ಚಿತ್ರಗಳಲ್ಲದೆ ಮೇಲ್ಛಾವಣಿಯಲ್ಲಿ ೩೧/೨ ಅಡಿಯಷ್ಟು ಗೋಡೆಯ ಸುತ್ತಲೂ ಪ್ರಾಚೀನ ಮಾದರಿಯ ಬೇಟೆಯ ದೃಶ್ಯಗಳ ವರ್ಣಚಿತ್ರಗಳಿವೆ.

ಭಿತ್ತಿಚಿತ್ರಗಳ ವಸ್ತು, ವಿಷಯ

ರಾಮಾಯಣ, ಮಹಾಭಾರತ ಮತ್ತು ಇತರ ಪುರಾಣಗಳಿಗೆ ಸಂಬಂಧಿಸಿದ ಚಿತ್ರಗಳು, ಐತಿಹಾಸಿಕ ಘಟನೆಗಳನ್ನು ಪ್ರತಿಬಿಂಬಿಸುವ ಚಿತ್ರಗಳು. ನಿತ್ಯಜೀವನದ ಘಟನೆಗಳು, ಪ್ರಾಣಿ, ಪಕ್ಷಿಗಳು, ಕಾಲ್ಪನಿಕ ಪ್ರಾಣಿ ಪಕ್ಷಿಗಳು, ಪೌರಾಣಿಕ ಪ್ರಾಣಿಗಳಾದ ಐರಾವತ, ಕಾಮಧೇನು, ಉಚ್ಛೈಶ್ರವಸ್ಸು ಹೀಗೆ ವೈವಿಧ್ಯ ವಿಷಯಗಳಿಗೆ ಸಂಬಂಧಿಸಿದ ಚಿತ್ರಗಳು ಇಲ್ಲಿ ರಚನೆಯಾಗಿವೆ. ಇವುಗಳಲ್ಲದೇ ಸಮಕಾಲೀನ ವ್ಯಕ್ತಿಗಳು, ನವಗ್ರಹಗಳಿಗೆ ಸಂಬಂಧಿಸಿದ ತಾಂತ್ರಿಕ ಚಿತ್ರ,

ಮೇಷ, ವೃಷಭ, ಕಟಕ ಮುಂತಾದ ದ್ವಾದಶ ರಾಶಿಗಳ ಚಿತ್ರ, ಅಷ್ಟದಿಕ್ಪಾಲರ ಚಿತ್ರಗಳು, ಕೈಲಾಸ, ವೈಕುಂಠ ಬ್ರಹ್ಮಲೋಕದ ಚಿತ್ರಗಳು ಇಲ್ಲಿ ರಚನೆಯಾಗಿವೆ. ಶೇಷಶಯನ ವಿಷ್ಣು, ಮಹಿಷಾಸುರಮರ್ದಿನಿ ಪಂಚವಿಂಶತಿ ರೂಪದ ಶಿವ, ಮುಂತಾದ ಪ್ರಮುಖ ದೇವತೆಗಳನ್ನು ಒಂದೊಂದು ಪ್ರತ್ಯೇಕ ಪಟ್ಟಿಯಲ್ಲಿ ಚಿತ್ರಿಸಿದ್ದಾರೆ. ಆಂಜನೇಯನ ರೂಪಗಳು ಇಲ್ಲಿ ವಿಶಿಷ್ಟವಾಗಿ ರಚನೆಯಾಗಿವೆ. ಒಂದು ಮುಖದ ಆಂಜನೇಯನಲ್ಲದೇ ಮೂರು ಮತ್ತು ಐದು ಮುಖದ ಆಂಜನೇಯನ ಚಿತ್ರಗಳಿವೆ. ಹತ್ತು ಕೈಗಳುಳ್ಳ ಆಂಜನೇಯನ ರೂಪವು ಉಗ್ರವಾಗಿದ್ದು, ನರಸಿಂಹನ ರೂಪ ಹೋಲುತ್ತದೆ. ಇಲ್ಲಿ ಎಲ್ಲ ಕಡೆಗೂ ಆಂಜನೇಯನನ್ನು ನೀಲವರ್ಣದಲ್ಲಿ ವಿಶೇಷವಾಗಿ ಚಿತ್ರಿಸಲಾಗಿದೆ.

ಗೋಡೆಯಲ್ಲಿ ಒಂದೊಂದು ವಿಸ್ತಾರವಾದ ಪಟ್ಟಿಕೆಗಳನ್ನು ಮಾಡಿ, ಅದರಲ್ಲಿ ಮತ್ತೆ ಸಣ್ಣ ಸಣ್ಣ ಚೌಕಗಳನ್ನು ನಿರ್ಮಿಸಿಕೊಂಡು ಅವುಗಳಲ್ಲಿ ಒಂದು ಕಥೆ, ಇಲ್ಲವೇ ಪುರಾಣಕ್ಕೆ ಸಂಬಂಧಿಸಿದಂತೆ ಘಟನೆಗಳನ್ನು ಧಾರಾವಾಹಿಯ ಹಾಗೆ ಒಂದರ ನಂತರ ಒಂದಾಗಿ ರಚಿಸುತ್ತಾ ಹೋಗಲಾಗಿದೆ. ಒಂದು ದೊಡ್ಡ ಪಟ್ಟಿಕೆಯಲ್ಲಿ ರಾಮ-ರಾವಣರ ಯುದ್ಧವನ್ನು ಬಿಡಿಸಲಾಗಿದೆ. ಅಲ್ಲಿ ರಾಮ-ರಾವಣ, ಲಕ್ಷ್ಮಣ-ಇಂದ್ರಜಿತ, ರಾಮ-ಲಕ್ಷ್ಮಣ-ಕುಂಭಕರ್ಣ ಹೀಗೆ ವಿವಿಧ ವ್ಯಕ್ತಿಗಳು ಮತ್ತು ಅವರ ಯುದ್ಧದ ವಿವಿಧ ಘಟನೆಗಳನ್ನು ನಿರೂಪಿಸಲಾಗಿದೆ. ಇಂತಹ ಅನೇಕ ದೊಡ್ಡ ಪಟ್ಟಿಕೆಗಳು ಇಲ್ಲಿವೆ.

ಐತಿಹಾಸಿಕ ಘಟನೆಗಳಿಗೆ ಸಂಬಂಧಿಸಿದ ಹೆಚ್ಚಿನ ಚಿತ್ರಗಳು ಗೋಡೆಯ ಮೇಲ್ಭಾಗದ ಕಟ್ಟಿಗೆಯ ಬೋದಿಗೆಯಲ್ಲಿವೆ. ಅಂತಹ ಒಂದು ಚಿತ್ರದಲ್ಲಿ ಬ್ರಿಟೀಷ್ ಶೈಲಿಯ ಹ್ಯಾಟನ್ನು ಧರಿಸಿ, ಕೈಯಲ್ಲಿ ಕೋವಿ ಹಿಡಿದು ಶಿಸ್ತಿನಿಂದ ಹೊರಟ ಸೈನಿಕರಿದ್ದಾರೆ. ಅವರ ಸಾಲಿನಲ್ಲಿ ಹಿಂದುಗಡೆ ಎರಡು ಕುದುರೆಗಳು ಬರುತ್ತಿವೆ. ಅದರಲ್ಲಿ ಕೆಂಪು ಕುದುರೆಯ ಮೇಲೆ ಒಬ್ಬ, ಬಿಳಿ ಕುದುರೆಯ ಮೇಲೆ ಒಬ್ಬ ಅಧಿಕಾರಿಗಳು ಕುಳಿತಿದ್ದಾರೆ. ಅವರೂ ಬ್ರಿಟೀಷ್ ಶೈಲಿಯ ಉಡುಪಿನಲ್ಲೇ ಇದ್ದಾರೆ. ಈ ಸೈನಿಕರು ಸಾಲಾಗಿ ಹೋಗುತ್ತಿದ್ದು ಸಾಲಿನ ತೀರ ಮುಂದುಗಡೆ ವ್ಯಕ್ತಿಯೊಬ್ಬ ತಲೆಯ ಮೇಲೆ ಗಂಟು ಹೊತ್ತು ಹೆಗಲಿಗೆ ಕಂಬಳಿ ಇಳಿಬಿಟ್ಟಿದ್ದಾನೆ. ಆತ ಬರೀ ಲಂಗೋಟಿ ಕಟ್ಟಿದ್ದು, ಉಳಿದಂತೆ ಬರಿಮೈಯಲ್ಲಿದ್ದಾನೆ. ಕೊರಳಲ್ಲಿ ಕರಿದಾರ ಒಂದನ್ನು ಕಟ್ಟಿದ್ದು ದಪ್ಪ ಮೀಸೆ ಬಿಟ್ಟಿದ್ದಾನೆ. ಅವನನ್ನು ನೋಡಿದ ತಕ್ಷಣ ಕುರಿಕಾಯುವ ಕುರುಬ ಜನಾಂಗದವನೆಂದು ಊಹಿಸಬಹುದಾಗಿದೆ. ಮತ್ತೊಂದು ಇಂತಹ ಉದ್ದ ಪಟ್ಟಿಕೆಯಲ್ಲಿರುವ ಐತಿಹಾಸಿಕ ಚಿತ್ರದಲ್ಲಿ ಆನೆ, ಕುದುರೆಗಳ ಸಮೇತ ಜನರು ವ್ಯಕ್ತಿಯೊಬ್ಬನನ್ನು ಮೇನೆಯಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿದ್ದಾರೆ. ಆನೆ, ಕುದುರೆಗಳ ಮೇಲೆ ಕುಳಿತ ವ್ಯಕ್ತಿಗಳು ಮತ್ತು ಮೇನೆಯಲ್ಲಿ ಕುಳಿತ ವ್ಯಕ್ತಿ ಪೇಶ್ವೆ ಅರಸರ ವೇಷಭೂಷಣ ಧರಿಸಿದ್ದಾರೆ. ಕೆಲವು ದೊಡ್ಡ ಚಿತ್ರಗಳ ಮೇಲ್ಭಾಗದಲ್ಲಿ ಧೀರ್ಘ ವೃತ್ತಾಕಾರದ ಚೌಕಗಳನ್ನು ಮಾಡಿಕೊಂಡು ಅದರಲ್ಲಿ ಅಷ್ಟದಿಕ್ಪಾಲಕರು, ದ್ವಾದಶ ರಾಶಿಗಳು ಮತ್ತು ದಶಾವತಾರಗಳಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸಲಾಗಿದೆ. ನವಗ್ರಹಗಳ ತಾಂತ್ರಿಕ ಸಂಬಂಧಿ ಚಿತ್ರ ಇಲ್ಲಿನ ವಿಶೇಷವಾಗಿದೆ. ನವಗ್ರಹಗಳನ್ನು ಅವರ ವಾಹನ ಸಮೇತ ಚಿತ್ರಿಸಿ ವರ್ಣ ಸಂಯೋಜನೆ ಮಾಡಲಾಗಿದೆ.

ಮೇಲ್ಛಾವಣಿ ಮತ್ತು ಗೋಡೆಯ ಮಧ್ಯದ ಸ್ಥಳದಲ್ಲಿ ಪ್ರತ್ಯೇಕ ಭಿತ್ತಿ ಲೇಪಿಸಿ, ರಚಿಸಿದ ಚಿತ್ರಗಳಲ್ಲಿ ಹೆಚ್ಚಾಗಿ ಬೃಹತ್ತಾದ ಪ್ರಾಣಿಚಿತ್ರಗಳನ್ನು ರಚಿಸಲಾಗಿದೆ. ಆನೆ, ಕುದುರೆ, ಹುಲಿ, ಕಾಲ್ಪನಿಕ ಮತ್ತು ಪೌರಾಣಿಕ ಪ್ರಾಣಿಗಳು ಇವೆ. ಹಾಗೇ ಹುಲಿಯು ಗಿಳಿಯನ್ನು ಕಾಲ ಕೆಳಗೆ ಹಾಕಿ ಬಗಿದು ತಿನ್ನುತ್ತಿರುವುದು, ಹುಲಿ ಆಕಳನ್ನು ಕೊಂದು ತಿನ್ನುತ್ತಿರುವುದು, ಪೌರಾಣಿಕ ಪ್ರಾಣಿಯೊಂದು ಗಿಳಿಯನ್ನು ಕೊಲ್ಲುತ್ತಿರುವುದು ಇಲ್ಲಿ ರಚನೆಯಾದ ಚಿತ್ರಗಳಲ್ಲಿ ಮುಖ್ಯವಾಗಿದೆ. ಬೆದರಿ ಓಡುತ್ತಿರುವ ಜಿಂಕೆಗಳ ಚಿತ್ರಗಳು ಇಲ್ಲಿ ರಚನೆಗೊಂಡಿವೆ. ಪ್ರಾಣಿಬೇಟೆಯ ಚಿತ್ರದಲ್ಲಿ ಒಂದು ಪೌರಾಣಿಕ ಪ್ರಾಣಿಯು ಇನ್ನೊಂದು ಪ್ರಾಣಿಯನ್ನು ಕೊಲ್ಲುತ್ತಿರುವ ದೃಶ್ಯವಿದೆ. ಬೇಟೆಯಾಡುತ್ತಿರುವ ಮೇಲಿನ ಪ್ರಾಣಿಯು ಹುಲಿ, ಸಿಂಹ, ಚಿರತೆ, ಮೊಸಳೆ, ಹಾವುಗಳ ಸಂಯುಕ್ತರೂಪ ಹೊಂದಿದೆ. ಕೆಳಗೆ ಬೇಟೆಯಿಂದಾಗಿ ಸಾಯುತ್ತಿರುವ ಪ್ರಾಣಿ ಆನೆ, ಹಂದಿ, ಮೀನು, ಘೇಂಡಾಮೃಗಗಳ ಸಂಯುಕ್ತ ರೂಪ ಹೊಂದಿದೆ. ಇದೊಂದು ತುಂಬ ಕಲಾತ್ಮಕವಾದ ಮತ್ತು ಕುತೂಹಲಕಾರಿಯಾದ ಚಿತ್ರವೆನ್ನಬಹುದು.

ಕೆಲವು ಋಷಿ-ಮುನಿಗಳು ಇಲ್ಲಿ ಇದ್ದು, ಅವರಲ್ಲಿ ಕೆಲವರು ಹೋಮ, ಧ್ಯಾನ್ಯದಲ್ಲಿ ತೊಡಗಿದ್ದರೆ ಕೆಲವರು ಅನುಷ್ಠಾನಗಳಲ್ಲಿ ನಿರತರಾಗಿದ್ದಾರೆ. ಯೋಗಪಟ್ಟ ಬಂಧದಲ್ಲಿ ಕುಳಿತಿರುವ ಋಷಿ ಬಲಗೈಯಲ್ಲಿ ಮರಾಠಿ ಭಾಷೆಯ ಹಸ್ತಪ್ರತಿಯನ್ನು ಓದುತ್ತಿರುವ ದೃಶ್ಯವಿದೆ. ಈ ಚಿತ್ರಗಳಲ್ಲದೇ ಸಮುದ್ರ ಮಂಥನ ದೃಶ್ಯ, ಬೇಟೆಯ ದೃಶ್ಯ, ಮನೋಹರವಾಗಿದೆ. ಹೂಬಳ್ಳಿಯ ನಕ್ಷೆಗಳು ಇಲ್ಲಿನ ಇನ್ನೊಂದು ಗಮನಾರ್ಹ ಅಂಶ. ದೊಡ್ಡ ಮತ್ತು ಸಣ್ಣದಾದ ಬಣ್ಣ ಬಣ್ಣದ ಹೂಗಳು, ಬಳ್ಳಿಗಳು, ವಿವಿಧ ಗಿಡಮರಗಳು ಅವುಗಳ ನೈಜ ಮತ್ತು ಅಲಂಕಾರಿಕ ರೂಪಗಳು ಇಲ್ಲಿ ರಚಿತಗೊಂಡಿವೆ. ಕೆಲವು ಭಾಗದಲ್ಲಿ ವಿಶೇಷವಾಗಿ ಗರ್ಭಗುಡಿಯಲ್ಲಿ ದೊಡ್ಡದಾದ ಪಟ್ಟಿಕೆಯಿದ್ದು ಅಲ್ಲೆಲ್ಲಾ ಹೂಬಳ್ಳಿ ನಕ್ಷೆಯಿಂದ ಆ ಪಟ್ಟಿಕೆಯನ್ನು ಕಲಾತ್ಮಕಗೊಳಿಸಲಾಗಿದೆ.

ಚಿತ್ರಗಳ ಕಾಲ

ಈ ದೇವಾಲಯದಲ್ಲಿನ ಭಿತ್ತಿಚಿತ್ರಿಗಳ ವಸ್ತುವಿಷಯ, ವರ್ಣಗಾರಿಕೆ, ರಚನಾಶೈಲಿಗಳು, ನರಗುಂದ, ಅಮ್ಮಿನಭಾವಿ, ಮಹಾಲಿಂಗಪುರಗಳಲ್ಲಿನ ಭಿತ್ತಿಚಿತ್ರಗಳಿಗೆ ಹೆಚ್ಚು ಹೋಲಿಕೆಯಾಗುವುದರಿಂದ ೧೮ನೇ ಶತಮಾನದಲ್ಲಿಯೇ ಇವು ಕೂಡಾ ರಚನೆಯಾಗಿರುವ ಸಾಧ್ಯತೆಗಳಿವೆ. ಪೇಶ್ವೆಯುವರ ಕಾಲದಲ್ಲಿ ಬಹುಶಃ ಈ ವರ್ಣಚಿತ್ರಗಳು ರಚನೆಯಾಗಿರಬಹುದು.

ಇಲ್ಲಿನ ಶೇಷಶಯನ ವಿಷ್ಣುವಿನ ಚಿತ್ರವು ನರಗುಂದ ಬಾಬಾಸಾಹೇಬನ ಅರಮನೆಯಲ್ಲಿ ರಚಿಸಿದ ಶೇಷಶಯನ ವಿಷ್ಣುವಿನ ಚಿತ್ರಕ್ಕೆ ಸರಿಯಾಗಿ ಹೋಲುತ್ತದೆ. ಅದೇ ರೀತಿ ಶಿವನು ನಂದಿಯ ಮೇಲೆ ಕುಳಿತು ಬರುತ್ತಿರುವ ಚಿತ್ರವೂ ನರಗುಂದದಲ್ಲಿ ಮತ್ತು ಇಲ್ಲಿ ಒಂದೇ

ಶೈಲಿಯಲ್ಲಿ ರಚನೆಯಾಗಿವೆ. ಇವುಗಳಲ್ಲದೆ ಸಮುದ್ರ ಮಂಥನ ಮಾಡುವ ಚಿತ್ರ, ಗರುಡನು ಎರಡೂ ಕೈಯಲ್ಲಿ ಹಾವನ್ನು ಹಿಡಿದು ಕೊಲ್ಲುತ್ತಿರುವ ಚಿತ್ರ, ಕೆಲವು ಅಲಂಕಾರಿಕ ಹೂಬಳ್ಳಿಯ ನಕ್ಷೆಗಳು ನರಗುಂದದ ಭಿತ್ತಿಚಿತ್ರಗಳಿಗೆ ಸರಿಯಾಗಿ ಹೋಲುತ್ತವೆ.

ಹಾಗೆಯೇ ಇಲ್ಲಿನ ಕಾಮಧೇನುವಿನ ಚಿತ್ರ, ಪಂಚವಿಂಶತಿ ರೂಪದ ಶಿವನ ಚಿತ್ರಗಳು ಧಾರವಾಡ ಜಿಲ್ಲೆಯ ಅಮ್ಮಿನಭಾವಿಯ ಹಿರೇಮಠದಲ್ಲಿ ರಚನೆಯಾದ ಚಿತ್ರಗಳಿಗೆ ಹೋಲಿಕೆಯಾಗುತ್ತದೆ. ಅಮ್ಮಿನಭಾವಿಯ ಈ ಚಿತ್ರಗಳೂ ಕ್ರಿ.ಶ. ೧೮ನೇ ಶತಮಾನದಲ್ಲಿ ರಚನೆಯಾಗಿವೆ. ಚಿತ್ರದ ಶೈಲಿ ವರ್ಣಗಾರಿಕೆ ವಿನ್ಯಾಸಗಳಿಂದ ಇವು ಕೂಡಾ ೧೮ನೇ ಶತಮಾನದಲ್ಲಿ ರಚನೆಯಾದ ಚಿತ್ರಗಳೆಂದು ಹೇಳಬಹುದಾಗಿದೆ. ಇವು ಮೇಲ್ಛಾವಣಿ ಕೆಳಗಿನ ಭಿತ್ತಿಚಿತ್ರಗಳಿಗೆ ಮಾತ್ರ ಅನ್ವಯಿಸುವ ಮಾತುಗಳಾಗಿವೆ.

ಇಲ್ಲಿ ಚಿತ್ರಗಳು ಒಂದೇ ಶೈಲಿಯಲ್ಲಿರದೇ ಮೂರು ರೀತಿಯ ಶೈಲಿಯಲ್ಲಿದೆ. ಕೆಲವು ನುರಿತ ಚಿತ್ರಗಾರರ ಕೈಯಿಂದ ರಚನೆಯಾಗಿದ್ದರೆ ಇನ್ನೂ ಕೆಲವು ಚಿತ್ರಗಳು ಪ್ರಬುದ್ಧರಲ್ಲದವರ ಚಿತ್ರಶೈಲಿಯೂ ಇಲ್ಲಿನ ಬಹುಪಾಲು ಚಿತ್ರಗಳಲ್ಲಿ ಕಂಡುಬರುತ್ತವೆ. ಉದಾಹರಣೆಗೆ ದುರಗಮುರಗಿಯವರ ಪೆಟ್ಟಿಗೆಯ ಚಿತ್ರಗಳನ್ನು ಇವು ತದ್ರೂಪವಾಗಿ ಹೋಲುತ್ತವೆ. ಇಂತಹ ಶೈಲಿಯ ಚಿತ್ರಗಳನ್ನು ಈಗಲೂ ತಾಳಿಕೋಟೆಯ 'ಜಿನಗಾರ' ಕುಟುಂಬದ ಕಲಾವಿದರು ರಚನೆ ಮಾಡುತ್ತಿರುವುದು ಗಮನಿಸಿದರೆ ಅಲ್ಲಿಯ ಕಲಾವಿದರ ಹಿರಿಯರು ಇಲ್ಲಿ ಬಂದು ಚಿತ್ರ ರಚಿಸಿರುವ ಸಾಧ್ಯತೆಯಿದೆ.

ಮೇಲ್ಛಾವಣಿ ಸಮೀಪದ ಗೋಡೆಯಲ್ಲಿ ರಚನೆಯಾಗಿರುವ ಪ್ರಾಣಿಚಿತ್ರಗಳ ಶೈಲಿಯು ಉಳಿದ ಚಿತ್ರಗಳು ವಿಜಯನಗರ ಭಿತ್ತಿಚಿತ್ರ ಶೈಲಿಯನ್ನು ಪ್ರತಿನಿಧಿಸುತ್ತವೆ. ಹೊರಗೋಡೆಯ ಸುತ್ತಲು ದೊಡ್ಡ ಗಾತ್ರ ಪಟ್ಟಿಕೆಗಳಲ್ಲಿಯ ಜನಪದ ಶೈಲಿಯ ಚಿತ್ರಗಳು ೧೮ನೇ ಶತಮಾನದವುಗಳಾಗಿವೆ. ಹೀಗೆ ವಿವಿಧ ಕಾಲಘಟ್ಟದಲ್ಲಿ ವಿವಿಧ ಕಲಾವಿದರಿಂದ ಚಿತ್ರ ರಚಿಸಲಾಗಿದ್ದು, ಇನ್ನೂ ಸೂಕ್ಷ್ಮವಾಗಿ ಇವುಗಳ ಅಧ್ಯಯನ ಮಾಡಬೇಕಾಗಿದೆ. ಒಟ್ಟಾರೆ ಕರ್ನಾಟಕದಲ್ಲಿ ಸ್ಪಷ್ಟವಾಗಿ ಬಹುಪಾಲು ಉಳಿದಿರುವ ಭಿತ್ತಿಚಿತ್ರಗಳಲ್ಲಿ ಈ ರಾಮಮಂದಿರವು ಪ್ರಮುಖ ನೆಲೆಯಾಗಿದೆ.

ಭಿತ್ತಿ ಚಿತ್ರಗಳ ಕೆಲವು ವೈಶಿಷ್ಟ್ಯಗಳು

೧. ಇಲ್ಲಿ ಕಿರುರೂಪ ಭಿತ್ತಿಚಿತ್ರಗಳಿವೆ ಮತ್ತು ಜಾನಪದ ಶೈಲಿಯ ಚಿತ್ರಗಳಿದ್ದು ಧಾರಾವಾಹಿಯ ಹಾಗೆ ಸಂಪೂರ್ಣ ರಾಮಾಯಾಣವನ್ನು ಚಿತ್ರಿಸಲಾಗಿದೆ.

೨. ಗಾರೆಯ ಭಿತ್ತಿಯಿಲ್ಲದೆ, ಮಣ್ಣಿನ ಭಿತ್ತಿಯೂ ಇಲ್ಲಿದ್ದು ಇಟ್ಟಿಗೆಯಿಂದ ದೇವಾಲಯ ನಿರ್ಮಾಣವಾಗಿದೆ.

೩. ಗಾರೆ, ಮಣ್ಣು, ಮತ್ತು ಮರದ ಭಿತ್ತಿಯ ಮೇಲೆ ವರ್ಣಚಿತ್ರಗಳು ಬಿಡಿಸಲಾಗಿದೆ.

೪. ದೇವಾಲಯದ ಗರ್ಭಗುಡಿಯಲ್ಲಿಯೂ ವರ್ಣವಿನ್ಯಾಸವಿರುವದು ಒಂದು ಅಪರೂಪದ ಉದಾಹರಣೆಯಾಗಿದೆ.

೫. ಮೂರು ರೀತಿಯ ವಿಭಿನ್ನ ಶೈಲಿಯ ಭಿತ್ತಿಚಿತ್ರಣ ಇಲ್ಲಿಯ ಇನ್ನೊಂದು ವೈಶಿಷ್ಟ್ಯವಾಗಿದೆ. ವಿಜಯನಗರ ಪೂರ್ವದ ವಿಜಯನಗರ ನಂತರದ ಮತ್ತು ೧೮ನೇ ಶತಮಾನದ ಭಿತ್ತಿಚಿತ್ರಗಳು ರಚನೆಯಾಗಿವೆ.

೬. ಶೈವ ಮತ್ತು ವೈಷ್ಣವ ಧರ್ಮದ ಹಿನ್ನೆಲೆಯ ವರ್ಣಚಿತ್ರಗಳು ಮಾತ್ರ ವಿಶೇಷ ಸ್ಥಾನ ಪಡೆದಿವೆ.

೭. ಬೇಟೆಯಾಡುವ ಕಾಡುಪ್ರಾಣಿಗಳು, ಬೇಟೆಗೆ ಹೋಗುವ ದೃಶ್ಯ ಇಲ್ಲಿ ತುಂಬ ಕುತೂಹಲಕಾರಿಯಾಗಿ ಚಿತ್ರಣಗೊಂಡಿವೆ.

೮. ಉತ್ತರಕನ್ನಡ ಜಿಲ್ಲೆಯಲ್ಲಿ ಭಿತ್ತಿಚಿತ್ರಗಳ ನೆಲೆಗಳೂ ಹೇರಳವಾಗಿದ್ದು, ಇದೊಂದು ಮಾತ್ರ ಬಹುವರ್ಣ ಭಿತ್ತಿಚಿತ್ರಗಳ ದೇವಸ್ಥಾನವಾಗಿದೆ.

೯. ಈ ದೇವಾಲಯದ ಗರ್ಭಗುಡಿಯಲ್ಲಿ ವಿಶೇಷವಾಗಿ ೪ ಅಡಿ ಎತ್ತರದ ರಾಮ, ಲಕ್ಷ್ಮಣ, ಸೀತೆ, ಭರತ, ಶತೃಘ್ನ ಮತ್ತು ಹನುಮಂತನ ಮೂರ್ತಿಗಳನ್ನು ಸಾಲಾಗಿ ನಿಲ್ಲಿಸಲಾಗಿದ್ದು, ರಾಮ ಲಕ್ಷ್ಮಣ ಸೀತೆಯೊಂದಿಗೆ ಭರತ, ಶತೃಘ್ನರ ಶಿಲ್ಪಗಳಿರುವುದು ಈ ದೇವಾಲಯ ಒಂದರಲ್ಲೇ ಎನ್ನುವುದು ಇನ್ನೊಂದು ವೈಶಿಷ್ಟ್ಯ.

೧೦. ಗ್ರಾಮೀಣ ಪ್ರದೇಶದ ಸಾಮಾನ್ಯ ಜನಜೀವನದ ದೃಶ್ಯಗಳು ಗ್ರಾಮ ಕಸುಬುಗಳಿಗೆ ಸಂಬಂಧಿಸಿದ ದೃಶ್ಯಗಳು ಪ್ರಥಮ ಬಾರಿಗೆ ಇಲ್ಲಿ ಕಂಡುಬರುತ್ತದೆ.

ರಕ್ಷಣೆ : ಈ ದೇವಾಲಯವು ಅತ್ಯಂತ ದುಸ್ಥಿತಿಯಲ್ಲಿದ್ದು, ನಾಶದ ಭೀತಿ ಎದುರಿಸುತ್ತಿದೆ. ದೇವಾಲಯದ ಪೂಜಾರಿಗಳು ಈ ದೇವಾಲಯವನ್ನು ಸದ್ಯದಲ್ಲೇ ಕೆಡವಿ ಹೊಸದಾಗಿ ಕಟ್ಟಿಸುವ ಸಿದ್ಧತೆಯಲ್ಲಿದ್ದಾರೆ. ಹಾಗೇನಾದರೂ ಮಾಡಿದರೆ ಅಪೂರ್ವಕಲೆಯ ಭಿತ್ತಿಚಿತ್ರಗಳು ನಾಶವಾಗುತ್ತವೆ. ಊರಿನ ಎರಡು ಬಣಗಳ ರಾಜಕೀಯದಿಂದಾಗಿ ಯಾರೂ ಇತ್ತ ಲಕ್ಷ ಕೊಟ್ಟಿಲ್ಲ. ಜನರು ಸುತ್ತಮುತ್ತಲೂ ಬಹಿರ್ದೆಶೆಗೆ ಕುಳಿತು ಸುತ್ತಲಿನ ವಾತಾವರಣ ಗಲೀಜು ಮಾಡುತ್ತಿದ್ದಾರೆ. ಒಳಗಡೆಗೆ ಸೋಮಾರಿಗಳು ತಮ್ಮ ಜೂಜಾಟದ ಅಡ್ಡೆಯಾಗಿ ದೇವಾಲಯವನ್ನು ಉಪಯೋಗಿಸುತ್ತಿದ್ದಾರೆ. ಮತ್ತೆ ಕೆಲವರು ಚಿತ್ರಗಳನ್ನು ಕೆತ್ತಿ, ಕೊರೆದು, ನಾಶಮಾಡಿದ್ದಾರೆ. ಮಕ್ಕಳು ಚಾಕ್‌ಪೀಸ್ ಮತ್ತು ಇದ್ದಿಲಿನಿಂದ ಭಿತ್ತಿಚಿತ್ರಗಳ ಮೇಲೆ ಗೀಚಾಡಿದ್ದಾರೆ. ಇಂತಹ ಅಮೂಲ್ಯ ಚಿತ್ರಕಲಾ ಭಂಡಾರದ ಪ್ರಾಚೀನ ಸ್ಮಾರಕವನ್ನು ಉಳಿಸುವ ನಿಟ್ಟಿನಲ್ಲಿ ಜನಪ್ರತಿನಿಧಿಗಳು, ಸರ್ಕಾರ, ಪುರಾತತ್ವ ಇಲಾಖೆ, ಸಂಘ, ಸಂಸ್ಥೆಗಳು ಆಸಕ್ತ ಅಭಿಮಾನಿಗಳು ಇತ್ತಕಡೆ ಗಮನಹರಿಸಿ ಈ ದೇವಾಲಯದ ಭಿತ್ತಿಚಿತ್ರಗಳು ನಾಶವಾಗದ ಹಾಗೆ ಉಳಿಸಿಕೊಳ್ಳಬೇಕು.

❖ ❖

೨೪

ಮೈಸೂರಿನ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ ಚಿತ್ರಮಂಟಪದಲ್ಲಿನ ಭಿತ್ತಿಚಿತ್ರಗಳು : ಒಂದು ಅವಲೋಕನ

ಡಾ. ಆರ್.ಎಚ್.ಕುಲಕರ್ಣಿ

ಪೀಠಿಕೆ

ಪ್ರಾಚೀನ ಕರ್ನಾಟಕದಲ್ಲಿ ಭಿತ್ತಿ ಚಿತ್ರಕಲೆಯು ವಿಜಯನಗರದ ಕಾಲದಿಂದ ಪುನ: ತನ್ನ ಅಸ್ತಿತ್ವವನ್ನು ಪಡೆದುಕೊಂಡು ಬೆಳವಣಿಗೆ ಹೊಂದಲು ಪ್ರಾರಂಭಿಸಿತು ಎಂದು ಹೇಳಬಹುದು. ವಿಜಯನಗರಕಾಲದಲ್ಲಿಯೇ ದೇವಾಲಯಗಳ ಒಳಗೋಡೆಗಳ, ಒಳಮಾಳಿಗೆಗಳ ಹಾಗೂ ಅರಮನೆಗಳಲ್ಲಿ ಅಲಂಕಾರಕ್ಕಾಗಿ ಭಿತ್ತಿ ಚಿತ್ರಗಳನ್ನು ರಚಿಸಲಾಗುತ್ತಿತ್ತು ಎನ್ನುವ ವಿಷಯ ದಾಖಲೆಗಳಿಂದ ಸ್ಪಷ್ಟವಾಗುತ್ತದೆ.[೧] ಆದರೆ ಈ ಕಲಾಪ್ರಕಾರದ ಚಟುವಟಿಕೆಗಳು ವಿಜಯನಗರದ ಅವನತಿಯಾದ ಮೇಲೆ ಕೆಲ ಕಾಲ ಕುಂಠಿತವಾಗಿದ್ದ ವಿಷಯವೂ ಸಹ ಕಂಡುಬರುತ್ತದೆ. ವಿಜಯನಗರೋತ್ತರ ಕಾಲದಲ್ಲಿ, ವಿಜಯನಗರದಲ್ಲಿ ಪ್ರಚಲಿತದಲ್ಲಿದ್ದ ಕಲೆಯು ಅಂದು ದೊರೆತಿದ್ದಿರಬಹುದಾದ ಪೋಷಣೆಯನ್ನು ಅನುಸರಿಸಿದವು ಎಂದು ಹೇಳಬಹುದು. ಹಾಗೆ ಬೆಳೆದ ಚಿತ್ರಕಲಾ ಸಂಪ್ರದಾಯ ಇತ್ತ ಮೈಸೂರು ಭಾಗದಲ್ಲಿ ಅತ್ಯಂತ ಗಮನಾರ್ಹವಾದ ರೀತಿಯಲ್ಲಿ ಅಭಿವೃದ್ಧಿ ಹೊಂದಿರುವುದು ಈಗಲೂ ಉಳಿದುಕೊಂಡು ಬಂದಿರುವ ಅಂದಿನ ಉದಾಹರಣೆಗಳಿಂದ ರುಜುವಾತಾಗುತ್ತದೆ.[೨]

ಮೈಸೂರು ಸಂಸ್ಥಾನವು ವಿಜಯನಗರದ ಅವನತಿಯ ನಂತರದಲ್ಲಿ ತನ್ನದೇ ಆದ ವಿಶಿಷ್ಟ

ಸ್ಥಾನವನ್ನು ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಪಡೆದುಕೊಂಡಿದೆ. ಈ ಮನೆತನದ ಒಡೆಯರು ಅರಸರುಗಳು ಕಲಾಪ್ರಿಯರು ಹಾಗೂ ಕಲಾ ಆಸಕ್ತರಾಗಿದ್ದುದೇ ಕಲಾಚಟುವಟಿಕೆಗಳು ಬೆಳೆಯಲು ಪ್ರಮುಖ ಕಾರಣವೆಂದು ಹೇಳಬಹುದು. ಹೀಗಾಗಿ ವಿಜಯನರೋತ್ತರ ಕಾಲದಲ್ಲಿ ಮೈಸೂರು ಸಂಸ್ಥಾನವು ವಿಜಯನಗರದ ಸಾಂಸ್ಕೃತಿಕ ಸಂವೇದನಗಳನ್ನು ತನ್ನಲ್ಲಿ ಮೈಗೂಡಿಸಿಕೊಂಡು ವಿಭಿನ್ನ ಕ್ಷೇತ್ರಗಳಲ್ಲಿ ವಿಶಿಷ್ಟ ಛಾಪನ್ನು ಕೊಡಮಾಡಿದೆ.

ಚಿತ್ರಕಲೆಯನ್ನು ಕುರಿತಂತೆ, ಈ ಕಾಲಕ್ಕೆ ಸೀಮಿತವಾಗಿಸಿಕೊಂಡು ನಾವು ಒಂದು ಅವಲೋಕನ ಮಾಡಿದರೆ ಸುಮಾರು ಕ್ರಿ.ಶ. ೧೭೫೦ರ ಕಾಲದಿಂದಲೂ ದಾಖಲಿಸಬಹುದಾದ ಹಲವಾರು ಭಿತ್ತಿಚಿತ್ರಗಳು ದೇವಾಲಯಗಳಲ್ಲಿ ಮತ್ತು ಅರಮನೆಯಲ್ಲಿ ಈಗಲೂ ಉಳಿದುಕೊಂಡುಬಂದಿವೆ. ಮೈಸೂರು ಸಂಸ್ಥಾನದಲ್ಲಿ ಕಲೆ, ವಾಸ್ತು, ಶಿಲ್ಪ, ಸಂಗೀತಾದಿ ವಿಷಯಗಳಿಗೆ ವಿಶೇಷವಾಗಿ ಪೋಷಣೆ ದೊರೆತದ್ದು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಎಂದು ಹೇಳಬಹುದು. ಈ ಕಾಲದಲ್ಲಿಯೇ ಮೈಸೂರು ಅರಮನೆಯ ಆವರಣದಲ್ಲಿನ ದೇವಾಲಯಗಳಲ್ಲಿ ನಗರದಲ್ಲಿನ ದೇವಾಲಯಗಳಲ್ಲಿ ಹಾಗೂ ಮೈಸೂರು ಸುತ್ತಮುತ್ತಲಿನ ಕೆಲವು ದೇವಾಲಯಗಳಲ್ಲಿ ಭಿತ್ತಿ ಚಿತ್ರಗಳು ರಚನೆಯಾಗಿರುವುದು ಕಂಡುಬರುತ್ತವೆ.[೩]

ಅರಮನೆಯ ಆವರಣದಲ್ಲಿರುವ ಶ್ರೀ ಶ್ವೇತವರಾಹಸ್ವಾಮಿ ದೇವಾಲಯ, ಶ್ರೀ ಅಮೃತುವಲ್ಲಿ ಅಮ್ಮನವರ ದೇವಾಲಯ, ಹಾಗೂ ಶ್ರೀ ಪ್ರಸನ್ನ ಕೃಷ್ಣ ದೇವಾಲಯಗಳಲ್ಲಿ, ಭಾಗವತ, ರಾಮಾಯಣ ಅಲ್ಲದೇ ಇನ್ನೂ ಹಲವಾರು ವಿಷಯ ವ್ಯಾಪ್ತಿಗೆ ಸೇರಿದ ಭಿತ್ತಿ ಚಿತ್ರಗಳು ಕಂಡುಬರುತ್ತವೆ. ಈ ಭಿತ್ತಿ ಚಿತ್ರಗಳನ್ನು ಕುರಿತಂತೆ ಈಗಾಗಲೇ ಕೆಲವು ಬಿಡಿ ಅಧ್ಯಯನಗಳೂ ಆಗಿವೆ. ಆದರೆ ಪ್ರಾಯಶ: ಆ ಕಾಲದ ಭಿತ್ತಿ ಚಿತ್ರಗಳಲ್ಲಿಯೇ ವಿಶಿಷ್ಟ ಎಂದು ಹೆಸರಿಸಬಹುದಾದ ಮೈಸೂರಿನಲ್ಲಿಯ ಕೃಷ್ಣಾಂಬ ಅಗ್ರಹಾರದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ ಉಪ್ಪರಿಗೆಯ ಚಿತ್ರಮಂಟಪದಲ್ಲಿ ಕಂಡುಬರುವ ಭಿತ್ತಿ ಚಿತ್ರಗಳು.[೪] ಈ ದೇವಾಲಯವು ಚಿತ್ರಗಳಿಗೆ ಮೀಸಲಾಗಿಸಿರುವ ಚಿತ್ರಮಂಟಪದಲ್ಲಿ ಹಲವಾರು ವಿಶಿಷ್ಟ ಹಾಗೂ ಆಕರ್ಷಕವಾಗಿರುವ ಚಿತ್ರಗಳನ್ನು ಹೊಂದಿದೆ. ಈ ಚಿತ್ರಗಳನ್ನು ಕುರಿತು ನೋಡುವ ಮೊದಲು ಈ ಚಿತ್ರಗಳ ರಚನೆಗೆ ಪೂರಕವಾದ ಹಿನ್ನೆಲೆಯನ್ನು ತಿಳಿಯುವುದು ಅವಶ್ಯಕವಾಗಿದೆ.

ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಕ್ರಿ.ಶ. ೧೮೩೬ರಲ್ಲಿ ಹಾಕಿಸಿರುವ ಒಂದು ಶಾಸನದಲ್ಲಿ[೫] ಈ ದೇವಾಲಯವನ್ನು ಶ್ರೀ ಮುಮ್ಮಡಿ ಕೃಷ್ಣರಾಯ ಒಡೆಯರ ಧಾರಾಳವಾದ ಸಹಾಯದಿಂದ ನಿರ್ಮಿಸಲಾಯಿತೆಂದು ಜೊತೆಯಲ್ಲಿ ಚಿತ್ರಮಂಟಪವನ್ನು ನಿರ್ಮಿಸಲಾಯಿತೆಂದು ದಾಖಲಿಸಲಾಗಿದೆ. ಅಲ್ಲದೇ ವಿಶೇಷವಾಗಿ ಅದೇ ವರ್ಷದಲ್ಲಿ ಹಾಕಿಸಲ್ಪಟ್ಟ ಮತ್ತೊಂದು ಶಾಸನದಲ್ಲಿ,[೬] ಈ ದೇವಾಲಯವನ್ನು ಶ್ರೀ ಸುಬ್ಬರಾಯದಾಸ ಎನ್ನುವವರು ನಿರ್ಮಿಸಿದ ವಿವರ ತಿಳಿಯುತ್ತದೆ. ಈ ಸುಬ್ಬರಾಯದಾಸರು, ಮಾಧ್ವ

ಸಂಪ್ರದಾಯದ ದಾಸರಾಗಿದ್ದು, ಆ ಕಾಲದಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಹೊಂದಿದ್ದುದು ಅದೇ ವರ್ಷದಲ್ಲಿ ಹಾಕಿಸಿದ ಮುಮ್ಮಡಿಯವರ ಮತ್ತೊಂದು ಶಾಸನದಿಂದ ದೃಢಪಡುತ್ತದೆ. ಈ ಶಾಸನದಲ್ಲಿ ಸುಬ್ಬರಾಯ ದಾಸರು ಕೈಗೊಂಡ ತೀರ್ಥಯಾತ್ರೆಯ ವಿವರಗಳೂ ಸಹ ದಾಖಲಿಸಲ್ಪಟ್ಟಿವೆ.[೬]

ಚಿತ್ರಮಂಟಪದಲ್ಲಿ ರಚಿಸಲ್ಪಟ್ಟ ಚಿತ್ರಗಳು ವಿಭಿನ್ನ ವಿಷಯವ್ಯಾಪ್ತಿಗೆ ಸೇರಿವೆ. ಇವುಗಳಲ್ಲಿ ಮೈಸೂರು ರಾಜಮನೆತನದ ಪ್ರಾರಂಭದ ಅರಸರ ಭಾವಚಿತ್ರಗಳಿಂದ ಹಿಡಿದು, ಮುಮ್ಮಡಿಯವರವರೆಗಿನ ಎಲ್ಲ ಅರಸರ ಭಾವಚಿತ್ರಗಳು ಇಲ್ಲಿ ರಚಿಸಲ್ಪಟ್ಟಿವೆ. ಸುಬ್ಬರಾಯದಾಸರು ಸಂದರ್ಶಿಸಿದ ಉತ್ತರ ಹಾಗೂ ದಕ್ಷಿಣದ ತೀರ್ಥ ಕ್ಷೇತ್ರಗಳನ್ನು ಬಿಂಬಿಸುವ ವಿಶಿಷ್ಟವಾದ ದೃಶ್ಯಚಿತ್ರಗಳು ಹಾಗೂ ಭಾಗವತಕ್ಕೆ ಸಂಬಂಧಿಸಿದ ಕೆಲವು ದೃಶ್ಯಾವತರಣಿಕೆಗಳೂ ಇಲ್ಲಿ ಕಂಡುಬರುತ್ತದೆ. ಈ ಚಿತ್ರಗಳನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಬಹುದಾಗಿದೆ. ವಿಶೇಷತ: ಈ ಚಿತ್ರಗಳಲ್ಲಿ ಚಿತ್ರಮಾಧ್ಯಮದಲ್ಲಿ ನಿರೂಪಿಸಲ್ಪಟ್ಟ ವಿಷಯ ವಸ್ತುಗಳು, ಅವುಗಳ ಶೈಲಿ, ಇವುಗಳೊಂದಿಗೆ ಅಂದಿನ ಸಮಕಾಲೀನ ಚಿತ್ರಗಳ ಸಂಬಂಧ ಹೀಗೆ ವಿಭಿನ್ನ ದೃಷ್ಟಿಕೋನದಿಂದ ಈ ಭಿತ್ತಿ ಚಿತ್ರಗಳನ್ನು ನೋಡಬಹುದಾಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೇ ಈ ದೇವಾಲಯದ ಚಿತ್ರಮಂಟಪದಲ್ಲಿ ಚಿತ್ರರಚನೆ ಕೆಲಸಮಾಡಿದ ಕಲಾವಿದರುಗಳ ಬಗ್ಗೆ ನಮಗೆ ಏನೊಂದು ತಿಳಿದು ಬರುವುದಿಲ್ಲ. ಅಂದರೆ ಅವರುಗಳ ಹೆಸರು ಅಥವಾ ಅವರ ಕುರಿತು ಮಾಹಿತಿ ಇಲ್ಲವೇ ಇಲ್ಲ. ಆದರೆ ಕಲಾವಿದರುಗಳು ಅತ್ಯಂತ ಸೃಜನಾತ್ಮಕವಾಗಿ ಮತ್ತು ಕ್ರಿಯಾತ್ಮಕವಾಗಿ ಹಾಗೂ ಅಷ್ಟೇ ವಿಶಿಷ್ಟವಾಗಿ ಇಲ್ಲಿನ ಚಿತ್ರಗಳನ್ನು ಬಿಂಬಿಸಿದ್ದಾರೆ.

ಚಿತ್ರಮಂಟಪವು ಒಂದು ಸಾಧಾರಣ ವಿಸ್ತೀರ್ಣವುಳ್ಳ ಕೊಠಡಿಯಂತೆ ಇದೆ. ಆಯಾತಾಕಾರದ ಅದರ ಒಳ ವಿನ್ಯಾಸವನ್ನು ಚಿತ್ರರಚನಾ ಅನುಕೂಲಕ್ಕಾಗಿ ಎರಡು ಭಾಗವಾಗಿಸಿದೆ. ಹಿಂಬದಿಯ ಗೋಡೆ, ಈ ಎರಡೂ ಪಾರ್ಶ್ವಗಳ ಗೋಡೆ, ಹಾಗೂ ಒಳಮಾಳಿಗೆಗಳು ಒಟ್ಟಾರೆಯಾಗಿ ಸಂಪೂರ್ಣವಾಗಿ ಚಿತ್ರಣಗೊಂಡಿವೆ. ಈ ಚಿತ್ರಮಂಟಪದಲ್ಲಿ ತಾಂತ್ರಿಕವಾಗಿ ಬಹುಶಃ ಅತ್ಯಂತ ಉನ್ನತವಾದ ಚಿತ್ರರಚನಾ ಕೆಲಸವನ್ನು ನಾವು ಕಾಣಬಹುದು. ಚಿತ್ರಮಂಟಪದಲ್ಲಿ ತೀರ್ಥಕ್ಷೇತ್ರಗಳ ಚಿತ್ರಗಳು ಹಾಗೂ ಒಡೆಯರ್ ರವರ ಭಾವಾಕೃತಿಗಳು ಹಾಗೂ ಇತರ ಪೌರಾಣಿಕ ಕಥಾನಕ ದೃಶ್ಯಗಳಿವೆ ಎಂದು ಈ ಮೇಲೆ ಹೇಳಿದ್ದೇವೆ. ಕಲಾವಿದರು ಇಲ್ಲಿನ ಒಳಮಾಳಿಗೆಯ ಚಿತ್ರಗಳನ್ನು ಹಾಗೂ ಒಡೆಯರವರ ಭಾವಚಿತ್ರಗಳನ್ನು ನೇರವಾಗಿ ಗೋಡೆಯಮೇಲೆ ಚಿತ್ರಿಸಿಲ್ಲ ತಾಂತ್ರಿಕವಾಗಿ ಗೋಡೆಯಮೇಲೆ, ಮರದ ಹಲಗೆಗಳನ್ನು ಜೋಡಿಸಿ ಅವುಗಳಲ್ಲಿ ಆಕರ್ಷಕವಾದ ತೆಳು ಉಬ್ಬು ಕಟ್ಟುಗಳನ್ನು ಮಾಡಿ, ಪ್ರತ್ಯೇಕವಾಗಿ ಪ್ರತಿಯೊಂದು ಭಾವಚಿತ್ರಗಳಿಗೂ ಒದಗಿಸಲಾಗಿದೆ. ಈ ರೀತಿಯ ಸಂಯೋಜನೆಯು ಭಾವಚಿತ್ರಗಳಿಗೆ ಒಂದು ರೀತಿಯ ಆಕರ್ಷಕ ಮೆರಗನ್ನೂ ನೀಡುತ್ತದೆ.

ಭಾವಚಿತ್ರಗಳದು ಭಿತ್ತಿಗಳ ಒಂದು ಭಾಗವಾದರೆ, ಚಿತ್ರಮಂಟಪದ ಹಿಂಭಾಗದಲ್ಲಿ ಶ್ರೀ ಸುಬ್ಬರಾಯದಾಸರು ಅಂದು ಸಂದರ್ಶಿಸಿದ ತೀರ್ಥಕ್ಷೇತ್ರಗಳನ್ನು ದೃಶ್ಯರೂಪದಲ್ಲಿ ಚಿತ್ರಿಸಲಾಗಿದೆ. ತೀರ ಹಿಂದಿನ ಗೋಡೆಯ ಮೇಲೆ ಮಧ್ಯಭಾಗದಲ್ಲಿ ಮರದ ಹಲಗೆಯ ಮೇಲೆ ಉಬ್ಬುಶಿಲ್ಪದ ರೀತಿಯಲ್ಲಿ ಕೆತ್ತಿದ, ಸರ್ಪಶಯನದ ಮೆಲೆ ಕುಳಿತ ಶ್ರೀ ವ್ಯಾಸಮುನಿಗಳು, ಅವರ ಬಲಭಾಗದಲ್ಲಿ ಶ್ರೀ ಮಧ್ವಾಚಾರ್ಯರು, ಎಡಭಾಗದಲ್ಲಿ ಶ್ರೀ ಗರುಡದೇವರು ಕುಳಿತಿದ್ದಾರೆ. ಇವರ ಎರಡು ಪಾರ್ಶ್ವದಲ್ಲಿ ಕ್ರಮವಾಗಿ ಶ್ರೀ ಭೀಮಸೇನ ಹಾಗೂ ಶ್ರೀ ಆಂಜನೇಯಸ್ವಾಮಿಯ ನಿಂತ ಆಕೃತಿಗಳಿವೆ. ಈ ಎಲ್ಲ ಆಕೃತಿಗಳು ಫಲಕದ ಮೇಲ್ಭಾಗವನ್ನು ಅಲಂಕರಿಸಿವೆ. ಈ ಆಕೃತಿಗಳ ಕೆಳಗೆ ಮತ್ತೊಂದು ಭಾಗವನ್ನು ಮಾಡಿ, ಅದರಲ್ಲಿ ಕ್ರಮವಾಗಿ ದಿವಾನ್ ಪೂರ್ಣಯ್ಯ, ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರು, ಸುಬ್ರಾಯದಾಸರು ಹಾಗೂ ಅವರ ಅಣ್ಣ ಶೀನಪ್ಪದಾಸರುಗಳ ತೆಳು ಉಬ್ಬು ಆಕೃತಿಗಳನ್ನು ಕೆತ್ತಲಾಗಿದೆ. ಈ ಎಲ್ಲಾ ಆಕೃತಿಗಳಿಗೆ ನೈಜವಾದ ವರ್ಣವಿನ್ಯಾಸವನ್ನು ಸಹ ಮಾಡಲಾಗಿದೆ. ಈ ಉಬ್ಬುಫಲಕದಲ್ಲಿ ವ್ಯಾಸಾದಿ ದೇವತೆಗಳನ್ನು ಹಾಗೂ ಮಧ್ವಾಚಾರ್ಯ, ಆಂಜನೇಯ, ಭೀಮಸೇನರ ಆಕೃತಿಗಳನ್ನು ತೋರಿಸುವುದು, ಮಾಧ್ವ ಸಂಪ್ರದಾಯದ ಇರುವಿಕೆಯನ್ನು ತೋರಿಸುತ್ತದೆ. ಅಲ್ಲದೇ ದೀವಾನ್ ಪೂರ್ಣಯ್ಯನವರನ್ನು ಚಿತ್ರಿಸಿರುವುದು ಸಹ ಇದಕ್ಕೆ ಪುಷ್ಠಿ ನೀಡುತ್ತದೆ. ಪೂರ್ಣಯ್ಯನವರು ಮಾಧ್ವ ಸಂಪ್ರದಾಯದವರು ಆಗಿದ್ದುದೇ ಮತ್ತು ಅತ್ಯಂತ ಪ್ರಭಾವಿ ವ್ಯಕ್ತಿ ಆಗಿದ್ದುದೇ ಇಲ್ಲಿ ಅವರ ಕೆತ್ತನೆಯು ಬರಲು ಸಾಧ್ಯವಾಯಿತೆಂದು ಹೇಳಬಹುದು. ಆದರೆ ಈ ದೇವಾಲಯದ ಪ್ರಸ್ತುತ ಚಿತ್ರಮಂಟಪದ ನಿರ್ಮಾಣದ ಕಾಲವನ್ನು ಶಾಸನದ ಪ್ರಕಾರ ಕ್ರಿ.ಶ. ೧೮೩೬ ಎಂದು ತೆಗೆದುಕೊಂಡರೆ ಆ ಹೊತ್ತಿಗೆ ಆಗಲೇ ದಿವಾನ್ ಪೂರ್ಣಯ್ಯನವರು ರಾಜಕೀಯವಾಗಿ ನೇಪಥ್ಯಕ್ಕೆ ಸೇರಿದ್ದರು ಎಂಬ ವಿಷಯವನ್ನು ಇಲ್ಲಿ ಗಮನಿಸಬಹುದು. ಅದೇನೇ ಇದ್ದರೂ ಇಲ್ಲಿ ಚಿತ್ರಕಲಾ ದೃಷ್ಟಿಯಿಂದ ಈ ಕೃತಿಗಳು ಗಮನ ಸೆಳೆಯುತ್ತವೆ. ಚಿತ್ರಮಂಟಪದ ಈ ಉಬ್ಬುಕೆತ್ತನೆಯ ಫಲಕದ ಎರಡೂ ಪಾರ್ಶ್ವಗಳಲ್ಲಿ ಯಾತ್ರಾಸ್ಥಳಗಳ ಆಕರ್ಷಕ ಚಿತ್ರಣಗಳಿವೆ. ಎಡಭಾಗಕ್ಕೆ ಕ್ರಮವಾಗಿ

೧. ಆಳ್ವಾರ್ ಉತ್ಪತ್ತಿ ಸ್ಥಳ್ (ನಮ್ಮಾಳ್ವರ್‌ರು ಜನಿಸಿದ ತಿರುನಗರಿ (ತಿನ್ನವೇಲಿ, ತಮಿಳುನಾಡು))

೨. ನವತಿರುಪತಿ (ಒಂಭತ್ತು ತಿರುಪತಿಯ ತೀರ್ಥಸ್ಥಳಗಳು, ಅದೇ ಜಿಲ್ಲೆ)

೩. ಹಂಪೆ ಕ್ಷೇತ್ರ್ ಇದರಲ್ಲಿ ಹಂಪೆಯ ನಿಸರ್ಗ ಚಿತ್ರಣ ತುಂಗಭದ್ರಾನದಿ, ಮಾಧ್ವಯತಿಗಳು ಸಮಾಧಿಗಳಾದ ನವವೃಂದಾವನ, ವಿರೂಪಾಕ್ಷ ಹಾಗೂ ಪಂಪಾಂಬಿಕೆಯರ ಆಕೃತಿಗಳು ಹಾಗೂ ಶ್ರೀ ವ್ಯಾಸತೀರ್ಥರು ಹಂಪಿಯಲ್ಲಿ ವಾಸವಾಗಿದ್ದರು. ಹಾಗೂ ಅವರು ಗುರುಕುಲವನ್ನು ನಡೆಸುತ್ತಿದ್ದರು ಎನ್ನುವ ವಿಷಯವನ್ನು ನಿರೂಪಿಸುವ "ವ್ಯಾಸರಾಯರ ಪಾಠ" ಎಂಬ ನಾಮಾಂಕನವುಳ್ಳ ಆಕೃತಿಗಳು ತೋರಿಸಲ್ಪಟ್ಟಿವೆ.

೪. ಮೇಲುಕೋಟೆ, ಶ್ರೀರಂಗಪಟ್ಟಣ, ಇಲ್ಲಿನ ಪ್ರಮುಖ ದೇವತೆಗಳ ದೇವಾಲಯಗಳು ಹಾಗೂ ಅಲ್ಲಿನ ಪ್ರಕೃತಿ ಚಿತ್ರಣವನ್ನು ಇದರಲ್ಲಿ ತೋರಿಸಲಾಗಿದೆ.

ಇನ್ನೂ ಎಡಗೋಡೆಯಮೇಲೆ ೧. ಚಕ್ರಪಾಣಿ ದೇವಾಲಯ-ಕುಂಭಕೋಣಂ ೨. ಚಿಂನಪಟ್ಟಣ; ಅಂದಿನ ಚೆನ್ನೈ ನಗರದಲ್ಲಿನ ಕೆಲವು ದೇವಾಲಯಗಳು ಹಾಗೂ ಕೋಟೆ ಇತ್ಯಾದಿ ೩. ಬೇಲೂರು ಚೆನ್ನಕೇಶವ ದೇವಾಲಯ ೪. ನಂಜನಗೂಡು ಶ್ರೀ ನಂಜುಂಡೇಶ್ವರ ದೇವಾಲಯ ೫. ಶಿವಗಂಗೆ ಮತ್ತು ಕಂಚಿಪಟ್ಟಣ; ಇದರಲ್ಲಿ ಶಿವಕಂಚಿ ಹಾಗೂ ವಿಷ್ಣುಕಂಚಿಯನ್ನು ತೋರಿಸಲಾಗಿದೆ. ಕೊನೆಯದಾಗಿ ೬. ಚಾಮುಂಡಿ ಬೆಟ್ಟವನ್ನು ಸಹ ಚಿತ್ರಿಸಲಾಗಿದೆ.

ಒಳಮಾಳಿಗೆಯ ಮೇಲೆ ಕಾಶಿ, ಶ್ರೀನಗರ, ಪಂಡರಪುರ ಇತ್ಯಾದಿಗಳು, ಅಲಕನಂದಾ ನದಿ, ಬೆಟ್ಟಗುಡ್ಡಗಳ ಸುಂದರ ಪ್ರಕೃತಿ ದೃಶ್ಯಗಳನ್ನು ಚಿತ್ರಿಸಲಾಗಿದೆ. ಚಿತ್ರಮಂಟಪದ ತೀರ ಮುಂಭಾಗದಲ್ಲಿ ಭಾಗವತಕ್ಕೆ ಸಂಬಂಧಿಸಿದ ದೃಶ್ಯಗಳಿವೆ. ಒಟ್ಟಾರೆಯಾಗಿ ನೋಡಿದಾಗ ಚಿತ್ರಮಂಟಪ ಸಂಪೂರ್ಣವಾಗಿ ಅಲಂಕೃತಗೊಂಡಿರುವುದು ಕಂಡುಬರುತ್ತದೆ. ಹೆಸರೇ ಸೂಚಿಸುವಂತೆ ಚಿತ್ರಮಂಟಪದ ಉದ್ದೇಶವೇ ಅದಾಗಿದೆ.[೧೦] ಅಲ್ಲದೇ ಬಹುಶಃ ಈ ರೀತಿಯ ಕಟ್ಟಡ ಇಡೀ ಮೈಸೂರು ಭಾಗದಲ್ಲಿ ಇದೊಂದೆ ಎಂದೂ ಸಹ ಹೇಳಬಹುದು.[೧೧]

ಮೈಸೂರು ಅರಸರ ಭಾವಚಿತ್ರಗಳು ಕಾಲಮಾನದ ದೃಷ್ಟಿಯಿಂದ ಈಗ ಉಳಿದುಕೊಂಡುಬಂದಿರುವ ಬಹುಶ: ಅತ್ಯಂತ ಪ್ರಾಚೀನ ದಾಖಲೆಗಳೆಂದು ಹೇಳಬಹುದು. ಏಕೆಂದರೆ ಪ್ರಾರಂಭಿಕ ಅರಸರುಗಳನ್ನು ಬಿಂಬಿಸುವ ಚಿತ್ರಗಳು ಅತೀವ ವಿರಳ ಅಥವಾ ಇಲ್ಲವೇ ಇಲ್ಲವೆಂದು ಹೇಳಬಹುದು. ಸುಬ್ಬರಾಯದಾಸರಿಗೆ ಮುಮ್ಮಡಿಯವರು ದೇವಾಲಯದ ಇತರೆ ಸ್ವತ್ತಿನ ಜೊತೆಗೆ ಚಿತ್ರಮಂಟಪ ಮಾಡಿಸಲೂ ಸಹ ಸಹಾಯ ನೀಡಿರುವ ವಿಷಯ ಶಾಸನೋಕ್ತವಾಗಿದೆ. ಪ್ರಾಯಶಃ ಇದರಿಂದಲೇ ಚಿತ್ರಮಂಟಪದಲ್ಲಿ ಒಡೆಯರ ಭಾವಚಿತ್ರಗಳನ್ನು ರಚಿಸಿದಂತೆ ತೋರುತ್ತದೆ. ಈ ಚಿತ್ರಗಳನ್ನು ಬಿಟ್ಟರೆ ಬಹುಶ: ಇಷ್ಟೇ ಉತ್ತಮ ಭಾವಚಿತ್ರಗಳು ಕಂಡುಬರುವುದು ಜಗನ್ ಮೋಹನ ಅರಮನೆಯ ಮೇಲ್ಮಹಡಿಯಲ್ಲಿರುವ ಭಿತ್ತಿಚಿತ್ರಗಳಲ್ಲಿ. ಅಲ್ಲದೇ, ಟಿಪ್ಪುವಿನ ಕಾಲದಲ್ಲಿ ರಚನೆಗೊಂಡ ದರಿಯಾದೌಲತ್ ಅರಮನೆಯ ಹೊರಗೋಡೆಗಳ ಮೇಲೆ ಪ್ರಸ್ತುತ ಚಿತ್ರಮಂಟಪದಲ್ಲಿನ ಭಾವಚಿತ್ರಗಳನ್ನು ತುಸು ವಿವರವಾಗಿ ಗಮನಿಸಬಹುದು.

ಒಡೆಯರುಗಳ ಭಾವಚಿತ್ರಗಳನ್ನು ಆಕರ್ಷಕ ಚೌಕಟ್ಟುಗಳಲ್ಲಿ ರಚಿಸಲಾಗಿವೆ. ಇವುಗಳಲ್ಲಿ ಪ್ರತಿಯೊಂದು ರಾಜರ ಆಕೃತಿಗಳನ್ನು ಸಿಂಹಾಸನದ ಮೇಲೆ ಕುಳಿತಂತೆ ತೋರಿಸಲಾಗಿದೆ. ಅವರ ಜೊತೆಯಲ್ಲಿ ದಿವಾನರು, ಸಹಾಯಕರು ಹಾಗೂ ಚಾಮರಧಾರಿಗಳನ್ನು ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಆಕರ್ಷಕವಾದ ವಾಸ್ತು ವಿನ್ಯಾಸಗಳ ಚಿತ್ರಣಗಳು ಕಂಡುಬರುತ್ತವೆ. ವಿಶೇಷವೆಂದರೆ ಪ್ರತಿಯೊಬ್ಬ ರಾಜರುಗಳನ್ನು ಒಂದೇ ರೀತಿಯ ಸಂಯೋಜನೆಯಲ್ಲಿ ತೋರಿಸಲಾಗಿದೆ. ಆದರೂ ಅವರವರ ಮುಖದ ಭಾವಭಂಗಿಗಳಲ್ಲಿ ವಿಭಿನ್ನತೆ

ಕಂಡುಬರುತ್ತದೆ. ಇದನ್ನು ಕಲಾವಿದ ಬಹು ನೈಜವಾಗಿ ಬಿಂಬಿಸಿದ್ದಾರೆ. ಸಂಯೋಜನೆಯಲ್ಲಿ ಆಕೃತಿಗಳನ್ನು ಚಾಲನೆರಹಿತವಾಗಿ "ಛಾಯಾಚಿತ್ರದ" ರೀತಿಯಲ್ಲಿ ತೋರಿಸಿರುವುದು ಕಲಾವಿದನು ಈ ಹಿಂದಿನ ಪದ್ಧತಿಗಳನ್ನೇ ಸಂಯೋಜನೆಯಲ್ಲಿ ಮುಂದುವರಿಸಿರುವುದು ಕಂಡುಬರುತ್ತದೆ. ಈ ಆಕೃತಿಗಳನ್ನು ಪ್ರತ್ಯೇಕವಾಗಿ ತೋರಿಸಲಾಗಿದೆ. ಒಂದರಮೇಲೆ ಒಂದರಂತೆ ಪ್ರತ್ಯೇಕವಾಗಿ ಪ್ರತಿಯೊಬ್ಬ ರಾಜರ ಭಾವಚಿತ್ರಗಳನ್ನು ದೃಶ್ಯರೂಪದಲ್ಲಿ ತೋರಿಸಲಾಗಿದೆ. ಇವುಗಳ ತೀರ ಕೆಳಸ್ತರದಲ್ಲಿ ಅರಮನೆಯ ಮಹಾದ್ವಾರದ ವಾಸ್ತು ಚಿತ್ರಣವನ್ನು ಮಾಡಿದೆ. ಸಾಂಕೇತಿಕವಾಗಿ ಇವುಗಳು ಅರಮನೆಯ ಒಳಗಡೆ ಪ್ರವೇಶ ಮಾಡುವುದನ್ನು ಮತ್ತು ಅರಸರುಗಳನ್ನು ಕಾಣುವುದನ್ನು ಸೂಚಿಸುವಂತೆ ಕಂಡುಬರುತ್ತವೆ.

ಇಲ್ಲಿ ಮೈಸೂರು ಸಂಸ್ಥಾನದ ಪ್ರಥಮ ಮಹಾರಾಜರಾದ ರಾಜ ಒಡೆಯರಿಂದ ಹಿಡಿದು ಖಾಸಾ ಚಾಮರಾಜರೊರೆಗಿನ ಒಟ್ಟು ೧೨ ಜನ ರಾಜರುಗಳ ಭಾವಚಿತ್ರಗಳು ರಚಿಸಲ್ಪಟ್ಟಿವೆ. ವಿಶೇಷವೆಂದರೆ ಪ್ರತಿಯೊಂದು ರಾಜರ ಆಕೃತಿಗಳ ಮೇಲ್ಭಾಗದಲ್ಲಿ ಅವರವರ ಹೆಸರು ಹಾಗೂ ಆಳಿದ ಅವಧಿ ನಮೂದಿಸಲಾಗಿದೆ. ಕ್ರಮವಾಗಿ ಈಗ ರಾಜರುಗಳ ಹೆಸರುಗಳನ್ನು ಹಾಗೂ ಇನ್ನುಳಿದ ವಿವರಗಳನ್ನು ನೋಡಬಹುದಾಗಿದೆ.

೧. ರಾಜ ಒಡೆಯರು : ಪಟ್ಟ ೩೧/೪ ಅಂದರೆ ೧ ಪಟ್ಟವು ೧೨ ವರ್ಷಕ್ಕೆ ಸಮ.[೨] ಹೀಗಾಗಿ ಅವರು ಆಳಿದ ವರ್ಷಗಳು ೩೯ ಎಂದು ಆಗುತ್ತದೆ.

೨. ಚಾಮರಾಜ ಒಡೆಯರು : ಪಟ್ಟ ೧೩/೪ (೨೦ ವರ್ಷ)

೩. ಕಂಠೀರವ ನರಸರಾಜ ಒಡೆಯರು : ಪಟ್ಟ ೧೩/೪ (೨೦ ವರ್ಷ, ೫ ತಿಂಗಳು)

೪. ದೊಡ್ಡ ದೇವರಾಜ ಒಡೆಯರು : ಪಟ್ಟ ೧ (೧೩ ವರ್ಷ, ೬ ತಿಂಗಳು)

೫. ಚಿಕ್ಕದೇವರಾಜ ಒಡೆಯರು : ಪಟ್ಟ ೨೧/೨ (೩೧ ವರ್ಷ, ೮ ತಿಂಗಳು)

೬. ಕಂಠೀರವ ಮಹಾರಾಜರು : ಪಟ್ಟ ೩/೪ (೯ ವರ್ಷ, ೩ ತಿಂಗಳು)

೭. ದೊಡ್ಡಕೃಷ್ಣರಾಜ ಒಡೆಯರು : ಪಟ್ಟ ೧೧/೨ (೧೮ ವರ್ಷಗಳು)

೮. ಚಾಮರಾಜ ಒಡೆಯರು : (೧ ವರ್ಷ, ೬ ತಿಂಗಳು)

೯. ಇಮ್ಮಡಿ ಕೃಷ್ಣರಾಜ ಒಡೆಯರು : ಪಟ್ಟ ೨೧/೨ (೩೧ ವರ್ಷ, ೯ ತಿಂಗಳು)

೧೦. ನಂಜರಾಜ ಒಡೆಯರು : (೪ ವರ್ಷ, ೪ ತಿಂಗಳು)

೧೧. ಬೆಟ್ಟದ ಚಾಮರಾಜ ಒಡೆಯರು : ಪಟ್ಟ ೧/೨ (೬ ವರ್ಷ, ೨ ತಿಂಗಳು)

೧೨. ಖಾಸಾ ಚಾಮರಾಜ ಒಡೆಯರು : ಪಟ್ಟ ೧೧/೨ (೧೯ ವರ್ಷ, ೭ ತಿಂಗಳು)

ಹೀಗೆ ಪ್ರತಿಯೊಬ್ಬ ರಾಜರ ಆಳ್ವಿಕೆಯ ಕಾಲವನ್ನು ಅವರವರ ಹೆಸರಿನ ಮುಂದೆ ನಮೂದಿಸಲಾಗಿದೆ.

ಇಲ್ಲಿ ಚಿತ್ರಿಸಿದ ರಾಜರ ಮತ್ತು ಅವರ ಪರಿಚಾರಕರ ಆಕೃತಿಗಳಲ್ಲಿ ಗಟ್ಟಿಯಾದ ವರ್ಣ ವಿನ್ಯಾಸವಿದೆ. ಈ ಹಿಂದೆಯೇ ಈ ಎಲ್ಲ ಚಿತ್ರಗಳನ್ನು ಮರದ ಹಲಗೆಯ ಮೇಲೆ ರಚಿಸಲಾಗಿದೆ ಎಂದು ಹೇಳಿದ್ದೇವೆ. ತಾಂತ್ರಿಕವಾಗಿ ಮರದ ಹಲಗೆಯ ಮೇಲೆ ಚಿತ್ರ ರಚಿಸಬೇಕಾದರೆ,

ಮೊದಲು ಹಲಗೆಯ ಮೇಲ್ಮೈಯನ್ನು ಚಿತ್ರ ರಚನಾ ಯೋಗ್ಯವಾದ ರೀತಿಯಲ್ಲಿ ಹಿನ್ನೆಲೆ ವರ್ಣದಿಂದ ಅಥವಾ ಹಲಗೆಯ ಮೇಲೆ ತೆಳುವಾದ ಉತ್ತಮ ಗುಣಮಟ್ಟದ ಬಟ್ಟೆಯನ್ನು ಅಂಟಿಸಬೇಕಾಗುತ್ತದೆ. ಆನಂತರ ಅದರಮೇಲೆ ತೆಳುವಾದ ಹಿನ್ನೆಲೆವರ್ಣ ಲೇಪನ ಮಾಡಬೇಕಾಗುತ್ತದೆ. ಇದಾದ ನಂತರವೇ ಚಿತ್ರಗಳ ರಚನೆ ಆಗಬೇಕು. ಪ್ರಸ್ತುತ ಒಡೆಯರ ಭಾವಚಿತ್ರಗಳನ್ನು ರಚಿಸಿರುವ ವಿಧಾನವೂ ಅದೇ ಆಗಿದೆ. ವರ್ಣವಿನ್ಯಾಸಗಳಲ್ಲಿ ಗಟ್ಟಿಯಾದ ವರ್ಣಗಳ ಉಪಯೋಗದಿಂದ ಆಕೃತಿಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ತೋರಿಸಲು ಸಾಧ್ಯವಾಗುತ್ತದೆ. ಆಕೃತಿಗಳ ಬಾಹ್ಯ ರೇಖೆಗಳನ್ನು ತುಸು ಕೊರೆದು ಮಾಡಿದ ಹಾಗೆ ರಚಿಸುವುದರಿಂದ ಆಕೃತಿಗಳನ್ನು ಚಿತ್ರ ಹಿನ್ನೆಲೆಯಿಂದ ಹೊರಬರುವಂತೆ ಅವುಗಳಿಗೆ ಘನತ್ವದ ಕಲ್ಪನೆಯನ್ನು ಕೊಡಲು ಸಾಧ್ಯವಾಗುತ್ತದೆ. ಇಲ್ಲಿನ ಚಿತ್ರಗಳಲ್ಲಿ ಕಲಾವಿದ ಆಕೃತಿಗಳಲ್ಲಿ ಕುಸುರಿನಿಂದ ಕೂಡಿದ ವರ್ಣಗಳ ಉಪಯೋಗ ಮಾಡಿದ್ದು, ವಸ್ತ್ರಗಳನ್ನು, ಆಭರಣಗಳನ್ನು ಮತ್ತು ಒಟ್ಟಾರೆಯಾಗಿ ಆಕೃತಿಗಳ ರಚನೆಯಲ್ಲಿ ವಾಸ್ತವಿಕತೆಯನ್ನು ತರುವ ಪ್ರಯತ್ನ ಮಾಡಿದ್ದಾನೆ. ಈ ಭಾವಚಿತ್ರಗಳಲ್ಲಿ ಮರಾಠ ಹಾಗೂ ದಖ್ಖನೀ ಭಾವಚಿತ್ರ ಶೈಲಿಗಳ ಪ್ರಭಾವವನ್ನು ಗುರುತಿಸಬಹುದು. ಈ ಹಿಂದೆಯೇ ಕ್ರಿ.ಶ. ೧೭೮೦ರ ದಶಕದಲ್ಲಿ ರಚನೆಗೊಂಡ ದರಿಯಾದೌಲತ್‌ನ ಭಿತ್ತಿಯಲ್ಲಿನ ಅಂದಿನ ರಾಜರ, ರಾಜಪ್ರಮುಖರ ಭಾವಚಿತ್ರಗಳ ಶೈಲಿಗೆ ಪ್ರಸ್ತುತ ಚಿತ್ರಗಳು ಹೆಚ್ಚು ಹತ್ತಿರದಲ್ಲಿವೆ.[೧೩] ಅಲ್ಲಿ ಇಡೀ ಗೋಡೆಯನ್ನೇ ಉಪಯೋಗಿಸಿ ಅಂದಿನ ಸಮಕಾಲೀನ ರಾಜರುಗಳನ್ನು ಭಾವಚಿತ್ರಗಳ ಮೂಲಕ ತೋರಿಸಲಾಗಿ ಅಲ್ಲಿಯೂ ಕೂಡ ಪ್ರತಿಯೊಂದು ರಾಜರುಗಳ ಭಾವಚಿತ್ರಗಳನ್ನು ಆಯತಾಕಾರದ ಸಂಯೋಜನೆಯಲ್ಲಿ ವಾಸ್ತು ಆಕೃತಿಗಳ ಆಕರ್ಷಕ ಹಿನ್ನೆಲೆಯಲ್ಲಿ ತೋರಿಸಿರುವುದನ್ನು ಗಮನಿಸಬಹುದು. ಪ್ರಸ್ತುತ ಚಿತ್ರಮಂಟಪದಲ್ಲಿ ರಾಜರುಗಳ ಭಾವಚಿತ್ರಗಳಲ್ಲಿಯೂ ಸಹ ಗಮನಾರ್ಹವಾದ ರೀತಿಯಲ್ಲಿ ಶೈಲಿಸಾಮ್ಯತೆಯನ್ನು ಕಾಣಬಹುದು. ಇಲ್ಲಿನ ಪ್ರತಿಯೊಂದು ರಾಜರುಗಳು ಸಿಂಹಾಸನಗಳಲ್ಲಿ ಕುಳಿತಿದ್ದು, ಪಟ್ಟದಕತ್ತಿ, ರಾಜ್ಯಲಾಂಛನ, ಛತ್ರಿ ಚಾಮರಗಳು ಕಂಡುಬರುತ್ತವೆ. ಈ ಭಾವಚಿತ್ರಗಳಲ್ಲಿ ಮುಮ್ಮಡಿಯವರ ಭಾವಚಿತ್ರವು ಕಂಡುಬರುವುದಿಲ್ಲ. ಇಲ್ಲಿನ ಭಾವಚಿತ್ರಗಳೆಲ್ಲವೂ ಆಗಲೇ ಕಾಲವಾದ ಮುಮ್ಮಡಿಯವರ ಪೂರ್ವಜರ ಭಾವಚಿತ್ರಗಳು.[೧೪] ಹೀಗಾಗಿ ಕಾಲವಾದವರ ಚಿತ್ರಗಳೊಂದಿಗೆ ಮುಮ್ಮಡಿಯವರ ಭಾವಚಿತ್ರವನ್ನು ರಚಿಸಿರುವುದಿಲ್ಲವೆಂದು ಊಹಿಸಬಹುದು. ಚಿತ್ರಮಂಟಪದಲ್ಲಿ ಬೇರೆ ವಿಷಯವ್ಯಾಪ್ತಿಗೆ ಸೇರಿದ ಚಿತ್ರಗಳಿದ್ದರೂ ರಾಜರುಗಳ ಭಾವಚಿತ್ರಗಳಿಗೇ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಇದಕ್ಕೆ ಈ ಮೇಲೆ ವಿವರಿಸಿದ ವಿವರಣೆ ಪೂರಕವಾಗಿದೆ.

ಭಾವಚಿತ್ರಗಳು ಚಿತ್ರಮಂಟಪದ ಮುಂದಿನ ಭಾಗವನ್ನು ಅಲಂಕರಿಸಿದರೆ, ಹಿಂದಿನ ಭಾಗದ ಎರಡೂ ಪಾರ್ಶ್ವದ ಗೋಡೆಯಮೇಲೆ ಕಲಾವಿದನ ಕಲ್ಪನೆಯ ದೃಶ್ಯರೂಪಗಳಾಗಿ ಮೂಡಿಬಂದಿರುವ ಚಿತ್ರಗಳು ಆಕರ್ಷಕವಾದ ವಿವರಗಳನ್ನು ಹೊಂದಿವೆ. ಈ ಚಿತ್ರಗಳಲ್ಲಿ

ಭಾವಚಿತ್ರಗಳಿಗಿಂತಲೂ ಸಾಕಷ್ಟು ವಿಭಿನ್ನತೆ ಮತ್ತು ವೈವಿಧ್ಯತೆ ಕಂಡುಬರುತ್ತವೆ. ಈ ಎಲ್ಲ ಚಿತ್ರಗಳು ಶ್ರೀ ಸುಬ್ಬರಾಯದಾಸರು, ತೀರ್ಥಯಾತ್ರೆ ಕೈಗೊಂಡ ಸಂದರ್ಭದಲ್ಲಿ ಸಂದರ್ಶಿಸಿದ ಕೆಲವು ಸ್ಥಳಗಳ ದೃಶ್ಯರೂಪಗಳಾಗಿವೆ. ಇಲ್ಲಿ ಗಮನಿಸಬೇಕಾದ ವಿಶೇಷ ಅಂಶವೆಂದರೆ ಈ ಎಲ್ಲ ಚಿತ್ರಗಳ ಸಂಯೋಜನೆ ಕಾಲ್ಪನಿಕವಾದ ದೃಶ್ಯ ಸಂಯೋಜನೆ ಚೌಕಟ್ಟಿನಲ್ಲಿ ಆಗಿದೆ. ಏಕೆಂದರೆ ಸುಬ್ಬರಾಯದಾಸರು ತಾವು ನೋಡಿದ ವಿವರಗಳನ್ನು ಕಲಾವಿದನಿಗೆ ವಿವರಿಸಿದಾಗ ಆ ವಿವರಣೆಯ ಸಹಾಯದಿಂದ ಸ್ಥಳದ ದೃಶ್ಯರೂಪವನ್ನು ಕಲ್ಪಿಸಿ, ಅದರ ಚಿತ್ರಣವನ್ನು ಮಾಡುವುದು ತುಂಬಾ ವಿಶಿಷ್ಟವಾದ ಅನುಭವವಾಗಿರುತ್ತದೆ. ಕಲಾವಿದನಿಗೆ ತನ್ನದೇ ಆದ ಆಕೃತಿಗಳ ದುಡಿಮೆ ಇದೆ ಅವುಗಳನ್ನು ಉಪಯೋಗಿಸಿಯೇ ಅವನು ಚಿತ್ರ ರಚಿಸುವುದು ಅಲ್ಲದೆ ಇದಕ್ಕೆ ಪೂರಕವಾದ ವಿವರಣೆಯ ನೆರವು ತುಂಬಾ ಮುಖ್ಯವಾಗಿದೆ ಕೂಡಾ. ಈ ಎರಡೂ ವಿಷಯಗಳು ವ್ಯವಸ್ಥಿತವಾಗಿದ್ದಾಗಲೇ ಒಂದು ಉತ್ತಮ ಚಿತ್ರ ರಚನೆಯಾಗುವುದಕ್ಕೆ ಸಹಕಾರಿಯಾಗುತ್ತದೆ. ಚಿತ್ರಮಂಟಪದ ಚಿತ್ರಗಳ ರಚನೆಯಲ್ಲಿ ಕಲಾವಿದನು ತೀರ್ಥಕ್ಷೇತ್ರಗಳ ಚಿತ್ರಣದ ಸಂದರ್ಭದಲ್ಲಿ ಸುಬ್ಬರಾಯದಾಸರು ನೋಡಿದ ಕ್ಷೇತ್ರಗಳ ವಿವರಣೆಯನ್ನು ಪಡೆದು ತೀರ್ಥಕ್ಷೇತ್ರಗಳ ಪರಿಕಲ್ಪನೆ ಮಾಡಿ ಚಿತ್ರಿಸಿರುವ ರೀತಿ ಬೆರಗುಗೊಳಿಸುತ್ತದೆ.

ಉದಾಹರಣೆಗೆ ಹಂಪಿಯನ್ನು ತೋರಿಸುವ ಚಿತ್ರದಲ್ಲಿ ಕಲಾವಿದ ವಿರೂಪಾಕ್ಷ, ಪಂಪಾಂಬಿಕ ದೇವತೆಗಳ ಚಿತ್ರಗಳನ್ನು ಮಂಟಪಗಳಲ್ಲಿ ತೋರಿಸಿದ್ದು, ಮಂಟಪಗಳ ಮೇಲೆ ದ್ರಾವಿಡ ಶೈಲಿಯ, ಎತ್ತರದ ಗೋಪುರಗಳನ್ನು ತೋರಿಸಿದ್ದಾನೆ. ಇದರಿಂದ ದೇವಾಲಯಗಳ ಒಂದು ಪರಿಕಲ್ಪನೆ ಕೊಡುತ್ತದೆ. ತುಂಗಭದ್ರಾ ನದಿಯನ್ನು ಸಹ ಬಹಳ ನೈಜವಾಗಿ ಚಿತ್ರಿಸಲಾಗಿದೆ. ಹಂಪೆಯ ಪರಿಸರವನ್ನು ತೋರಿಸಲು ಅಲ್ಲಲ್ಲಿ ಗುಡ್ಡಗಳು ಹಾಗೂ "ವ್ಯಾಸರಾಯರ ಪಾಠ" ಎಂದು ಹೆಸರಿಸಿರುವ ಚಿತ್ರ, ಇದರಲ್ಲಿ ವ್ಯಾಸರಾಯರು ಇಬ್ಬರು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿರುವ ದೃಶ್ಯಗಳು ಮೂಡಿಬಂದಿವೆ. ಹಂಪೆಯ ಪರಿಸರದಲ್ಲಿಯೇ ಇರುವ ಮಧ್ವಯತಿಗಳ ಸಮಾಧಿ ಸ್ಥಳಗಳಾದ ನವಬೃಂದಾವನಗಳನ್ನೂ ಸಹ ತೋರಿಸಿದ್ದಾನೆ. ಇದರಿಂದ ಸುಬ್ಬರಾಯದಾಸರು ಕಲಾವಿದನಿಗೆ ಪ್ರತಿಯೊಂದು ತೀರ್ಥಕ್ಷೇತ್ರಗಳ ವಿವರಣೆಯನ್ನು ನೀಡಿರುವ ನೀತಿ ಈಗ ಸ್ಪಷ್ಟವಾಗಿ ಈ ಚಿತ್ರಗಳ ರೂಪದಲ್ಲಿ ಸಾಬೀತಾಗುತ್ತದೆ.

ಅದೇ ರೀತಿ ಆಳ್ವಾರ್ ಉತ್ಪತ್ತಿ ಸ್ಥಳ, ನವತಿರುಪತಿಗಳೂ ಸಹ ಅಲ್ಲಿನ ಸಹಜ ಚಿತ್ರಣವನ್ನು ಕಲಾವಿದನು ದೃಶ್ಯರೂಪದಲ್ಲಿ ನೀಡಲು ಯತ್ನಿಸಿದ್ದಾನೆಂದು ಹೇಳಬಹುದು. ಇನ್ನೂ ಮೇಲುಕೋಟೆಯ ದೃಶ್ಯದಲ್ಲಿ ಚೆಲುವನಾರಾಯಣ, ಕಲ್ಯಾಣಿ, ಬೆಟ್ಟ ಬೆಟ್ಟದಮೇಲೆ ಯೋಗಾನರಸಿಂಹದ ಚಿತ್ರಗಳನ್ನು ಬಹು ಆಕರ್ಷಕವಾಗಿ ಬಿಂಬಿಸಿದ್ದಾನೆ. ಈ ಚಿತ್ರಗಳಲ್ಲಿ ಕಲಾವಿದನು ಆಕೃತಿಗಳ ನೈಜತೆಗಿಂತಲೂ ವಿಷಯ ನಿರೂಪಣೆಗೆ ಮತ್ತು ವಿಷಯದಲ್ಲಿನ ಪ್ರಮುಖ ವಸ್ತುಗಳಿಗೆ ಪ್ರಾಮುಖ್ಯತೆ ನೀಡಿದ್ದಾನೆ. ಮೇಲುಕೋಟೆಯ ದೃಶ್ಯದಲ್ಲಿ ಚೆಲುವನಾರಾಯಣಸ್ವಾಮಿಯನ್ನು ತೋರಿಸಿದ್ದು ಅದೇ ರೀತಿ ಯೋಗಾನರಸಿಂಹನನ್ನು


ಬೆಟ್ಟದಮೇಲಿರುವಂತೆ ತೋರಿಸಿ, ಅವರವರ ದೇವಾಲಯಗಳನ್ನು ಸಾಂಕೇತಿಕವಾಗಿರುವಂತೆ ಚಿತ್ರಿಸಲಾಗಿದೆ. ಪ್ರತಿಯೊಂದು ದೇವಾಲಯದ ಗೋಪುರಗಳನ್ನು ಒಂದೇ ಪಾರ್ಶ್ವದಿಂದ ಕಾಣುವ ಹಾಗೆ ಚಿತ್ರಿಸಿರುವುದು ಕಂಡುಬರುತ್ತದೆ. ಚಿತ್ರಮಂಟಪದಲ್ಲಿ ಎಲ್ಲೆಲ್ಲಿ ದೇವಾಲಯದ ಚಿತ್ರಣ ಕಂಡುಬರುತ್ತದೆಯೋ ಎಲ್ಲದರಲ್ಲಿಯೂ ಗೋಪುರದ ಚಿತ್ರಣ ಬಹುತೇಕ ಒಂದೇ ತೆರದಲ್ಲಿ ಕಂಡುಬರುತ್ತದೆ. ಇದಕ್ಕೆ ಹಿನ್ನೆಲೆಯಾಗಿ ನಾವು ಹಂಪಿಯ ವಿರೂಪಾಕ್ಷ ದೇವಾಲಯದ ಭಿತ್ತಿಗಳನ್ನು ಸ್ಮರಿಸಬಹುದು. ಹಂಪಿಯಲ್ಲಿನ ಭಿತ್ತಿ ಚಿತ್ರದಲ್ಲಿಯೂ ಗೋಪುರಗಳನ್ನು ತೋರಿಸುವಾಗ ಇಂತಹದೆ ರಚನಾ ತಾಂತ್ರಿಕತೆಯನ್ನು ದುಡಿಸಿಕೊಂಡಿರುವುದನ್ನು ಗಮನಿಸಬಹುದು. ಇದರಿಂದ ಅಂದಿನ ಕಲಾ ಅಂಶಗಳು ಹಾಗೆಯೇ ಮುಂದುವರೆದುಕೊಂಡು ಬಂದುದನ್ನು ಈ ಮೂಲಕ ನಾವು ಗುರುತಿಸಬಹುದಾಗಿದೆ.

ಶ್ರೀರಂಗಪಟ್ಟಣದ ಚಿತ್ರದಲ್ಲಿ ಕಾವೇರಿ ನದಿಯು ಶ್ರೀರಂಗಪಟ್ಟಣವನ್ನು ಸುತ್ತುವರಿದ ರೀತಿ, ಗಂಜಾಂ ಅಲ್ಲದೆ, ಶ್ರೀರಂಗಪಟ್ಟಣದಲ್ಲಿನ ಪ್ರಮುಖ ದೇವಾಲಯಗಳು ಚಿತ್ರಿಸಲ್ಪಟ್ಟಿವೆ. ಈ ಚಿತ್ರವೂ ಸಹ ಕಲಾವಿದನ ಸಮಯಪ್ರಜ್ಞೆಗೆ ಕೈಗನ್ನಡಿಯಾಗಿದೆ.

ಚಿತ್ರಮಂಟಪದ ಎಡಗೋಡೆಯ ಮೇಲೆ ಕಂಡುಬರುವ ಚೆನ್ನಪಟ್ಟಣ (ಇಂದಿನ ಚೆನ್ನೈ), ಕುಂಭಕೋಣಂ ಮತ್ತು ಕಂಚಿಗಳನ್ನು ತೋರಿಸುವ ದೃಶ್ಯಗಳು ಪ್ರಮುಖವಾಗಿವೆ. ಕಂಚಿಯ ದೃಶ್ಯದಲ್ಲಿ ವಿಷ್ಣುಕಂಚಿ ಹಾಗೂ ಶಿವಕಂಚಿಗಳನ್ನು ಪ್ರತ್ಯೇಕವಾಗಿ ಚಿತ್ರಿಸಲಾಗಿದೆ. ವಿಷ್ಣುಕಂಚಿಯಲ್ಲಿ ವಿಷ್ಣುವಿನ ಆಕೃತಿ, ಶಿವಕಂಚಿಯಲ್ಲಿ ಶಿವಲಿಂಗದ ಆಕೃತಿಗಳು ಮತ್ತು ಆಯಾ ದೇವಾಲಯಗಳು ಗೋಪುರಗಳು ರಚನೆಗೊಂಡಿವೆ. ಇನ್ನು ನಂಜನಗೂಡು ದೃಶ್ಯವಿರುವ ಚಿತ್ರದಲ್ಲಿ ಶ್ರೀಕಂಠೇಶ್ವರ ದೇವಾಲಯದ ಚಿತ್ರಣ, ನಂಜನಗೂಡಿನ ದೇವಾಲಯದ ಗುರುತು ಮತ್ತು ಪ್ರತೀಕವೆಂಬಂತೆ ರಥಗಳನ್ನು ತೋರಿಸಲಾಗಿದೆ. ಇದೂ ಕೂಡಾ ಕಲಾವಿದನು ಸ್ಥಳೀಯ ವಿವರಗಳನ್ನು ದೃಶ್ಯಮಾಧ್ಯಮದಲ್ಲಿ ತೋರಿಸುವ ವಿಧಾನವಾಗಿದೆ. ಕೊನೆಯದಾಗಿ ಭಿತ್ತಿಚಿತ್ರಗಳಲ್ಲಿ ಚಾಮುಂಡಿ ಬೆಟ್ಟವನ್ನು ಚಿತ್ರಿಸಲಾಗಿದೆ. ಇದರಲ್ಲಿ ಶ್ರೀ ಚಾಮುಂಡಿ ಅಮ್ಮನವರು, ಮಹಾಬಲೇಶ್ವರ ದೇವಾಲಯದ ಚಿತ್ರಗಳು ಕಂಡುಬರುತ್ತವೆ. ಪ್ರಾಯಶಃ ಸುಬ್ಬರಾಯದಾಸರು ಎಲ್ಲ ಸ್ಥಳಗಳ ಪ್ರಮುಖ ಆಕರ್ಷಣೆಗಳನ್ನು ಮಾತ್ರ ಇಲ್ಲಿ ಚಿತ್ರಿಸುವಂತೆ ಕಲಾವಿದನಿಗೆ ವಿವರ ನೀಡಿದಂತೆ ತೋರುತ್ತದೆ. ಇದಕ್ಕೆ ಪೂರಕವಾದಂತೆ ಒಳಮಾಳಿಗೆಯಲ್ಲಿ ಕಂಡುಬರುವ ಉತ್ತರದ ತೀರ್ಥಕ್ಷೇತ್ರಗಳ ಚಿತ್ರಗಳು ಮೂಡಿಬಂದಿವೆ. ಕಾಶಿ, ಅಲಕನಂದಾ ನದಿ, ಪಂಢರಪುರ ಹೀಗೆ ವಿಭಿನ್ನ ದೃಶ್ಯಗಳು ಮೂಡಿಬಂದಿವೆ. ಇವುಗಳಲ್ಲಿ ನದಿಯ ಚಿತ್ರವನ್ನು ತೋರಿಸುವ ಸಂದರ್ಭದಲ್ಲಿ ನದಿಯಲ್ಲಿರುವ ಜಲಚರಿಗಳನ್ನು ಚಿತ್ರಿಸಿರುವ ವಿಧ, ನದಿಯ ನೈಜತೆಯನ್ನು ಹೆಚ್ಚಿಸುತ್ತದೆ. ಈ ರೀತಿಯಲ್ಲಿ ಚಿತ್ರಿಸುವ ಸಂಪ್ರದಾಯ ಬಹು ಪ್ರಾಚೀನ ಕಾಲದಿಂದಲೂ ಕಂಡುಬರುತ್ತದೆ. ಹೊಯ್ಸಳ ಶಿಲ್ಪಗಳಲ್ಲಿ ನದಿ ಅಥವಾ ನೀರನ್ನು ತೋರಿಸುವ ಸಂದರ್ಭದಲ್ಲಿ ಜಲಚರಗಳನ್ನು

ತೋರಿಸಿರುವುದು ಕಂಡುಬರುತ್ತದೆ. ಅಲ್ಲದೆ ಚಿಕಣಿ ಚಿತ್ರಗಳಲ್ಲಿ ಹಲವಾರು ಭಿತ್ತಿ ಚಿತ್ರಗಳಲ್ಲಿಯೂ ಸಹ ಇದು ಕಂಡುಬರುತ್ತವೆ.

ಚಿತ್ರಮಂಟಪದಲ್ಲಿನ ಭಿತ್ತಿಚಿತ್ರಗಳು ಚಿತ್ರ ರಚನಾ ಕಾಲದ ದೃಷ್ಟಿಯಿಂದ ಅತ್ಯಂತ ಮುಖ್ಯ ದಾಖಲೆಗಳಾಗಿವೆ. ಏಕೆಂದರೆ ಇವುಗಳ ರಚನೆಯ ಸಂದರ್ಭದಲ್ಲಿ ಆಗಲೇ ಮೈಸೂರು ಬ್ರಿಟೀಷ್ ರೀತಿ ರಿವಾಜುಗಳ ಪ್ರಭಾವಕ್ಕೆ ಬಂದಿತ್ತು. ಬ್ರಿಟೀಷ್ ಅಕಾಡೆಮಿಕ್ ಚಿತ್ರಶೈಲಿ ಇಲ್ಲಿ ತನ್ನ ಬೇರನ್ನು ಬಿಡುತ್ತಲಿತ್ತು. ಹಲವಾರು ಬ್ರಿಟೀಷ್ ಕಲಾವಿದರು ಮೈಸೂರಲ್ಲೇ ಬೀಡುಬಿಟ್ಟಿದ್ದರು ಮತ್ತು ಅಂದು ಹಲವಾರು ಭಾವಚಿತ್ರಗಳನ್ನು ಹಾಗೂ ಇತರೆ ಆಕರ್ಷಕ ಚಿತ್ರಗಳನ್ನು ರಚಿಸಿದ್ದುದು ಉದಾಹರಣೆಗಳಿಂದ ತಿಳಿದುಬರುತ್ತದೆ.[೧೫] ಆದಾಗ್ಯೂ ಪ್ರಸ್ತುತ ಚಿತ್ರಮಂಟಪದಲ್ಲಿನ ಚಿತ್ರಗಳಲ್ಲಿ ಯಾವುದೇ ತರಹದ ಬ್ರಿಟೀಷ್ ಚಿತ್ರಶೈಲಿಯ ಪ್ರಭಾವ ಕಂಡುಬರುವುದಿಲ್ಲ. ಬ್ರಿಟೀಷ್‌ರ ಕಲಾಚಟುವಟಿಕೆಗಳು ಮುಖ್ಯವಾಗಿ ಭಾವಚಿತ್ರಗಳ ರಚನೆ ಮಾತ್ರ ಸೀಮಿತವಾಗಿದ್ದವು ಎಂಬ ವಿಷಯವನ್ನು ಸಹ ಇಲ್ಲಿ ನಾವು ಗಮನಿಸಬೇಕು. ಆದಾಗ್ಯೂ ಈ ಕಾಲದಲ್ಲಿ ರಚನೆಗೊಂಡ ದೇವಾಲಯ ಭಿತ್ತಿಚಿತ್ರಗಳು ವಿಜಯನಗರ ಚಿತ್ರಶೈಲಿಯಿಂದ ಹಾಗೂ ದಖ್ಖನೀ ಚಿಕಣಿ ಚಿತ್ರಶೈಲಿಯಿಂದ ಸ್ಫೂರ್ತಿಗೊಂಡು ತಮ್ಮದೇ ಆದ "ಮೈಸೂರು ಸಾಂಪ್ರದಾಯಿಕ ಶೈಲಿ"ಯನ್ನು ಹೊಂದಿ ರಚನೆಗೊಂಡವು. ಪ್ರಸ್ತುತ ಚಿತ್ರಮಂಟಪದ ಚಿತ್ರಗಳು ಎರಡು ದೃಷ್ಟಿಯಿಂದ ಪ್ರಮುಖವಾಗಿವೆ. ಮೊದಲನೆಯದಾಗಿ ಈ ಚಿತ್ರಗಳಲ್ಲಿ ಪಾರಂಪರಿಕ ಚಿತ್ರಶೈಲಿಯ ಗಾಢವಾದ ಪ್ರಭಾವ ಕಾಣುತ್ತಿದ್ದು ರಚನಾ ವಿಧಾನದಲ್ಲಿ ಹಿಂದಿನ ಪದ್ಧತಿಯೇ ಮುಂದುವರೆದುಕೊಂಡು ಬಂದಿರುವುದು, ಎರಡನೆಯದಾಗಿ ಇಲ್ಲಿನ ಚಿತ್ರಗಳು ಐತಿಹಾಸಿಕ ದಾಖಲೆಗಳಾಗಿರುವುದು. ಕ್ರಿ.ಶ. ೧೮೩೭ರಲ್ಲಿ ರಚನೆಗೊಂಡ ಚಿತ್ರಮಂಟಪದಲ್ಲಿನ ಚಿತ್ರಗಳು ಐತಿಹಾಸಿಕವಾಗಿ ಒಡೆಯರ ಭಾವಚಿತ್ರಗಳನ್ನಷ್ಟೇ ಅಲ್ಲ ಸುಬ್ಬರಾಯದಾಸರು ಕೈಗೊಂಡ ತೀರ್ಥಕ್ಷೇತ್ರಗಳ ದರ್ಶನದ ದೃಶ್ಯ ವಿವರಣೆಯನ್ನು "ಪ್ರವಾಸ ಕಥನದ" ಮಾದರಿಯಲ್ಲಿ ದೃಶ್ಯರೂಪದಲ್ಲಿ ನೀಡುತ್ತವೆ. ಆದುದರಿಂದ ಇವುಗಳು ಕಲಾಇತಿಹಾಸದ ದೃಷ್ಟಿಯಿಂದ ಪ್ರಮುಖ ಉದಾಹರಣೆಗಳಾಗುತ್ತವೆ. ಈ ಭಾಗದ ಚಿತ್ರಕಲೆ ಬ್ರಿಟೀಷ್ ಅಕಾಡೆಮಿಕ್ ಚಿತ್ರಶೈಲಿಯ ಪ್ರಭಾವದ ಮಧ್ಯೆಯೂ ತನ್ನ ತನವನ್ನು ಉಳಿಸಿಕೊಂಡು ಬೆಳೆದಿರುವುದು ಈ ಮೇಲಿನ ಚರ್ಚೆಯಿಂದ ದೃಢಪಡುತ್ತದೆ.



ದೇವರಾಜ ವಡೆಯರು




ದೊಡ್ಡ ದೇವರಾಜ ವಡೆಯರು




ದೊಡ್ಡ ಕೃಷ್ಣರಾಜ ವಡೆಯರು




ಬೆಟ್ಟದ ಚಾಮರಾಜ ವಡೆಯರು




ಚಾಮರಾಜ ಒಡೆಯರು



ಹಂಪೆಯ ದೃಶ್ಯ



ಮೇಲುಕೋಟೆಯ ದೃಶ್ಯ



ಆಳ್ವಾರು ಉತ್ಪತ್ತಿ ಸ್ಥಳ ಮತ್ತು ನವ ತಿರುಪತಿ



ಫಂಡರಪುರ ಮತ್ತು ಕಾಶಿಯ ದೃಶ್ಯಗಳು



ಶ್ರೀನಗರ, ಅಲಕನಂದ ಇತ್ಯಾದಿ ದೃಶ್ಯಗಳು

ಅಡಿಟಿಪ್ಪಣಿಗಳು

೧. ಈ ಲೇಖನದ ವಿವರಗಳ ಬಗ್ಗೆ ಈ ಹಿಂದೆ ಸೂಚ್ಯವಾಗಿ ನನ್ನದೇ ಲೇಖನ ಇದೇ "ಅಧ್ಯಯನ"ದಲ್ಲಿ ಪ್ರಕಟಗೊಂಡಿದೆ. "ಮೈಸೂರು ದೇವಾಲಯಗಳಲ್ಲಿನ ಭಿತ್ತಿ ಚಿತ್ರಗಳ ಮೇಲೆ ವಿಜಯನಗರ ಚಿತ್ರಶೈಲಿಯ ಪ್ರಭಾವ", ವಿಜಯನಗರ ಅಧ್ಯಯನ, ಸಂಪುಟ ೨, ೧೯೯೭

೨. ಹೆಚ್ಚಿನ ಚರ್ಚೆಗೆ ನೋಡಿ : ಕುಲಕರ್ಣಿ ಆರ್.ಎಚ್. "ವಿಜಯನಗರ ಚಿತ್ರಶೈಲಿಯ ಕಿನ್ನಾಳದ ರೇಖಾಚಿತ್ರಗಳು", "ವಿಜಯನಗರ ಅಧ್ಯಯನ", ಸಂಪುಟ-೩, ಪು. ೨೨-೩೫, ೧೯೯೮

೩. ಕುಲಕರ್ಣಿ ಆರ್.ಎಚ್. ೧೯೯೭, ಪೂರ್ವೋಕ್ತ

೪. ಮೈಸೂರು ನಗರದಲ್ಲಿರುವ ದೇವಾಲಯಗಳಲ್ಲಿನ ಭಿತ್ತಿಚಿತ್ರಗಳು ಬಹುವಾಗಿ ಅಲಕ್ಷಿತವಾಗಿವೆ. ಪ್ರಸ್ತುತ ಚಿತ್ರಮಂಟಪದ ಚಿತ್ರಗಳನ್ನು ೨ ದಶಕಗಳ ಹಿಂದೆ ಒಂದುಸಾರಿ ದುರಸ್ತಿ ಮಾಡಿಸಿದ್ದರೂ ತಕ್ಷಣದ ದುರಸ್ತಿಯ ಅವಶ್ಯಕತೆ ಅವುಗಳಿಗೆ ಇದೆ. ಅದೇ ರೀತಿ ಶ್ರೀ ಶ್ವೇತವರಾಹಸ್ವಾಮಿ ದೇವಾಲಯವೂ ಕೂಡಾ.

೫. ಎಪಿಗ್ರಾಫಿಯಾ ಕರ್ನಾಟಕ ೫, ೧೯೭೫, ಮೈಸೂರು-೪, ಪು. ೧೪೭

೬. ಅದೇ, ೫, ಪು. ೧೪೭

೭. ಅದೇ, ೫, ಪು. ೧೫೨

೭. ಅದೇ, ೫, ಪು. ೧೪೮-೫೨

೮. ಇಲ್ಲಿನ ಬಹುತೇಕ ಎಲ್ಲ ಚಿತ್ರಗಳ ಮೇಲೂ ಅವುಗಳಿಗೆ ಶಿರೋನಾಮೆಯನ್ನು ಒದಗಿಸುವ ರೀತಿಯಲ್ಲಿ ಅವುಗಳ ಹೆಸರುಗಳನ್ನು ಬರೆಯಲಾಗಿದೆ. ಇದರಿಂದ ಸದರಿ ಚಿತ್ರಗಳನ್ನು ಗುರುತಿಸುವುದು ಅತ್ಯಂತ ಸರಳ ಕೆಲಸವಾಗುತ್ತದೆ.

೯. ಹಂಪಿ ಕ್ಷೇತ್ರದ ಚಿತ್ರವನ್ನು ಕುರಿತು ಹಾಗೂ ಇಲ್ಲಿ ಬರುವ ವ್ಯಾಸ ತೀರ್ಥರ ಚಿತ್ರದ ಕುರಿತು ಈ ಹಿಂದೆ ನನ್ನದೆ ಆದ ಒಂದು ಲೇಖನದಲ್ಲಿ ವಿವರವಾಗಿ ಚರ್ಚಿಸಿದ್ದೇನೆ. ನೋಡಿ: ಕುಲಕರ್ಣಿ ಆರ್.ಎಚ್. "ಹಂಪಿ ವಿರೂಪಾಕ್ಷ ದೇವಾಲಯದ ಮಹಾರಂಗಿ ಮಂಟಪದ ಒಳ ಭಿತ್ತಿಯಲ್ಲಿನ ಯತಿಗಳ ಚಿತ್ರ ವಿದ್ಯಾರಣ್ಯರದೇ? ವ್ಯಾಸರಾಯರದೇ?", ಇತಿಹಾಸ ದರ್ಶನ, ಸಂಪುಟ-೧೬, ಬೆಂಗಳೂರು, ೨೦೦೧, ಪು. ೧೭೮-೮೧

೧೦. ಒಟ್ಟಾರೆಯಾಗಿ ಈ ಚಿತ್ರಮಂಟಪವನ್ನು ನೋಡಿದಾಗ ಅಂಜತಾದಲ್ಲಿ ವರ್ಣಚಿತ್ರಗಳಿಂದ ಆವೃತವಾದ ಗುಹಾಂತ ದೇವಾಲಯದ ನೆನಪು ಬರುತ್ತದೆ.

೧೧. ಕೊಳ್ಳೆಗಾಲದಲ್ಲಿರುವ "ಚಿತ್ರ ಚಾವಡಿ" ಮುಖ್ಯ ಉದ್ದೇಶ ಇದೇ ರೀತಿ ಇದ್ದರೂ ಇಂದು ಅದು ಬಹುತೇಕ ಅವಸಾನದ ಅಂಚಿನಲ್ಲಿದೆ. ಇನ್ನೂ ಮುಡುಕುತೊರೆಯ ಕಲ್ಯಾಣಮಂಟಪದಲ್ಲಿ ಚಿತ್ರಗಳಿದ್ದರೂ ಅವು ಕೇವಲ ಅದರ ಚಿಕ್ಕದಾದ ಒಂದು ಭಾಗವಾಗಿದೆ. ಹೀಗಾಗಿ ಚಿತ್ರಮಂಟಪವೆಂದೇ ಚಿತ್ರಗಳಿಗೆ ಮೀಸಲಾದ ಕಟ್ಟಡ ಇದೊಂದೇ ಎಂದು ಹೇಳಬಹುದು.

೧೨. ಎಂ.ಎ.ಆರ್. ೧೯೮೪ ರಲ್ಲಿ ಇವುಗಳ ಕುರಿತು ಸ್ಥೂಲವಾದ ಚರ್ಚೆ ಇದೆ.

೧೩. ಕುಲಕರ್ಣಿ ಆರ್.ಎಚ್. ೨೦೦೧, "ಕನ್ನಡ ರಾಜರ ಭಾವಚಿತ್ರ ಸಂಪುಟ" (ಅಚ್ಚಿನಲ್ಲಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಇದರಲ್ಲಿ ದರಿಯಾದೌಲತ್ ನ ಚಿತ್ರಗಳನ್ನು ಕುರಿತು ವಿವರವಾಗಿ ಚರ್ಚಿಸಲಾಗಿದೆ.

೧೪. ಸಾಮಾನ್ಯವಾಗಿ ಪ್ರಾಚೀನ ಪದ್ಧತಿಗಳ ಪ್ರಕಾರ ಕಾಲವಾದವರ ಭಾವಶಿಲ್ಪ ಅಥವಾ ಚಿತ್ರಗಳನ್ನು ಮಾಡಿಸುತ್ತಿದುದು ಉದಾಹರಣೆಗಳಿಂದ ರುಜುವಾತಾಗುತ್ತದೆ. ಉದಾಹರಣೆಗೆ ನಾನೆಘಾಟ್ ನಲ್ಲಿರುವ ಶಾತವಾಹನ ದೊರೆಗಳ ಹಾಗೂ ಕುಟುಂಬದವರ ಭಾವಶಿಲ್ಪಗಳು, ಭಾಸನ ನಾಟಕಗಳಲ್ಲಿ ಒಂದಾದ ಪ್ರತಿಮಾ ನಾಟಕದಲ್ಲಿ "ರಾಜಕುಲ ಪ್ರತಿಮಾಗೃಹ"ದ ವಿವರ ಇದೆ. ಇದರಲ್ಲಿ ದಶರಥನೊರೆಗಿನ ರಘುಕುಲದ ರಾಜರುಗಳನ್ನು ಪ್ರತಿಮೆಯ ರೀತಿಯಲ್ಲಿ ನಿಲ್ಲಿಸಿರುವುದು ಕಂಡುಬರುತ್ತದೆ. ಅದೇ ರೀತಿ ರೋಮ್ ನಲ್ಲಿ ಶ್ರೀಮಂತ ಮನೆಗಳಲ್ಲಿ ಪೂರ್ವಜರ ಭಾವಶಿಲ್ಪಗಳನ್ನು ಇಡುತ್ತಿದ್ದ ಸಂಪ್ರದಾಯವಿತ್ತು. ಇಂದಿಗೂ ಕೂಡಾ ಕೆಲವು ಪ್ರದೇಶಗಳಲ್ಲಿ ಜೀವಂತನಿದ್ದಾಗ ಛಾಯಾಚಿತ್ರ ತೆಗೆಸಿಕೊಳ್ಳುವುದಾಗಲೀ ಅಥವಾ ಭಾವಚಿತ್ರ ಮಾಡಿಸಿಕೊಳ್ಳುವುದಾಗಲೀ ನಿಷಿದ್ಧ. ಒಂದುವೇಳೆ ತೆಗೆಸಿದರೂ ಕಾಲವಾದವರ ಚಿತ್ರಗಳ ಸಾಲಿನಲ್ಲಿ ಹಾಕುವುದಿಲ್ಲ. ಬಹುಶಃ ಮುಮ್ಮಡಿಯವರು ಈ ದೇವಾಲಯಕ್ಕೆ ದಾನದತ್ತಿಗಳನ್ನು ನೀಡಿದ್ದರೂ ಸಹ ಮೇಲಿನ ಉದ್ದೇಶದಿಂದ ಅವರ ಚಿತ್ರವನ್ನು ಅವರ ಪೂರ್ವಜರ ಸಾಲಿನಲ್ಲಿ ಹಾಕಿಲ್ಲವೆಂದು ಹೇಳಬಹುದು.

೧೫. ಜಾನ್ ಜಪೋನಿ, ಟೆಲ್ಲಿಕೆಟಲ್ ಅಲ್ಲದೇ ಇನ್ನೂ ಹಲವಾರು ಜನರು ಬ್ರಿಟೀಷ್ ಕಲಾವಿದರುಗಳು ಶ್ರೀರಂಗಪಟ್ಟಣದ ಅವನತಿಯ ನಂತರವೂ ಇಲ್ಲಿ ಇದ್ದರೂ ಅವರ ಅಕಾಡಮಿಕ್ ಶೈಲಿಯೂ ಅಷ್ಟಾಗಿ ಇಲ್ಲಿನ ಕಲಾವಿದರ ಮೇಲೆ ಪ್ರಭಾವ ಬೀರಲಿಲ್ಲ.

❖ ❖

೨೫

ವಿಜಯನಗರ ಕಾಲದ ಪಶುಪಾಲನೆ

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಹಿಂದಿನ ರಾಜಪ್ರಭುತ್ವಗಳ ಆಳ್ವಿಕೆ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ಬೇಟೆ, ಪಶುಪಾಲನೆ ಮತ್ತು ಕೃಷಿ ವ್ಯವಸ್ಥೆಗಳು ವಿಜಯನಗರ ಕಾಲದಲ್ಲಿ ಪ್ರಗತಿದಾಯಕ ಕ್ಷೇತ್ರಗಳಾಗಿದ್ದವು. ಆರ್ಥಿಕ ಉತ್ಪನ್ನ, ಅಭಿವೃದ್ಧಿ, ವಿತರಣೆ ಹಾಗೂ ಅನುಭೋಗದಲ್ಲಿ ಮಹತ್ತರವಾದ ಬದಲಾವಣೆಯನ್ನುಂಟು ಮಾಡಲಾಗಿತ್ತು ಈ ಕ್ಷೇತ್ರಗಳು.

ವಿಜಯನಗರ ಕಾಲದ ಪಶುಪಾಲನೆಯನ್ನು ಭಾರತೀಯ ಸಾಂಸ್ಕೃತಿಕ ಚರಿತ್ರೆಯ ಹಿನ್ನೆಲೆಯಲ್ಲಿಯು ಅವಲೋಕಿಸಬಹುದಾಗಿದೆ. ಈ ಬಗ್ಗೆ ಕೆಲವು ಆಕರಗಳು ಲಭ್ಯ. ಈ ನೆಲದ ಪಾರಂಪರಿಕ ವೃತ್ತಿಗಳಾದ ಬೇಟೆ ಬಗ್ಗೆ ವಿಪುಲ ಉಲ್ಲೇಖಗಳು ಸಿಗುವಂತೆ, ಪಶುಪಾಲನೆಗೂ ಸಹಾ ಮಹತ್ವದ ಸ್ಥಾನವಿದೆ. ಭಾರತ ಕೃಷಿ ಪ್ರಧಾನ ದೇಶ. ಪ್ರಾಚೀನ ಕಾಲದಿಂದಲೂ ಇಂದಿನವರೆಗೆ ಮಾನವನ ಜೀವನಾವಶ್ಯಕ ವೃತ್ತಿಗಳಾಗಿ ಇವುಗಳನ್ನು ಜೀವಂತಗೊಳಿಸಿಕೊಂಡು ಬಂದಿದ್ದಾರೆ. ಶಿಲಾಯುಗದ ಮಾನವನ ಬದುಕು ಆಹಾರ ಸಂಗ್ರಹಣೆಯಿಂದ ಬೇಟೆಗೆ ಪರಿವರ್ತನೆಯಾದರೆ, ಬೇಟೆಯಿಂದ ಕ್ರಮೇಣ ಪಶುಪಾಲನೆಗೆ ಆಸ್ಪದವಾಯಿತು. ಕ್ರೂರ, ಕಾಡುಪ್ರಾಣಿಗಳನ್ನು ಪಳಗಿಸಿ, ಹಿಂಸೆಯಿಂದ ಕೆಲವು ಪ್ರಾಣಿಗಳಿಗೆ ಜೀವದಾನ ನೀಡಿ ಸಾಕಿದ್ದು ಇತಿಹಾಸ. ಸಾತ್ವಿಕ ಪ್ರಾಣಿಗಳನ್ನು ಮನೆ, ಹೊಲ ಹಾಗೂ ಹಟ್ಟಿ ಅಥವಾ ಮಂದೆಯಲ್ಲಿ ವಾಸಿಸಲು ಅವಕಾಶ ಕಲ್ಪಿಸಿಕೊಟ್ಟು ಹಾಲು, ಸಗಣಿಯಿಂದ ಆರ್ಥಿಕ ಕೊರತೆಯನ್ನು ಮಾನವ ನೀಗಿಸಿಕೊಳ್ಳುತ್ತಿದ್ದ. ಹರಪ್ಪ ಅಥವಾ ಸಿಂಧೂ ಬಯಲಿನ ನಾಗರಿಕತೆಯ ಜನರು ಕೃಷಿಗಷ್ಟೇ ಅಲ್ಲದೆ, ಪಶುಪಾಲನೆಯಲ್ಲಿ ತಮ್ಮ ಮುಕ್ಕಾಲುಪಾಲು ಜೀವನ ನಡೆಸಿರುವ ಬಗ್ಗೆ ವೇದಗಳೇ ಸಾಕ್ಷಿ. ಹಸು, ಎತ್ತು, ಎಮ್ಮೆ ಕುರಿ, ಮೇಕೆಗಳನ್ನು ಸಾಕುತ್ತಿದ್ದದು ಬಹುಶಃ ಮೊದಲ ಹಂತ ಇರಬೇಕು. ಹಂದಿ, ಜಿಂಕೆ, ಮೊಲ, ಬೆಕ್ಕು,

ನಾಯಿ, ಕತ್ತೆ, ಕುದುರೆ, ಒಂಟೆಗಳನ್ನು ಆನಂತರ ಸಾಕಿರುವ ಶಕ್ಯತೆಯಿದೆ. ವೇದಗಳ ಅಥವಾ ಆರ್ಯರ ಕಾಲವು ಪಶುಪಾಲನೆಯ ಸುವರ್ಣಯುಗವಾಗಿತ್ತು. ಆ ಕಾಲಕ್ಕೆ ದನಗಳ ಹಿಂಡು, ಗೋವುಗಳ ಸಂಪತ್ತು ಹೆಚ್ಚಿರುವವನೇ ಶ್ರೀಮಂತನಾಗಿರುತ್ತಿದ್ದ. ದನಗಳಿಗಾಗಿಯೇ (ತುರುಕಾಳಗ) ಯುದ್ಧಗಳಾಗುತ್ತಿದ್ದವು. ಹೀಗೆ ಮೌರ್ಯ, ಶಾತವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಹಾಗೂ ಕುಮ್ಮಟದುರ್ಗದ ನಾಯಕ ಅರಸರ ಕಾಲದಲ್ಲಿ ಪಶುಪಾಲನೆ, ಗೋಗ್ರಹಣ ಅಥವಾ ತುರುಕಾಳಗಗಳ ಉಲ್ಲೇಖಗಳು ಸಿಗುತ್ತವೆ. ಮುಮ್ಮಡಿ ಸಿಂಗೇಯನಾಯಕ, ಕಂಪಿಲರಾಯ ಮತ್ತು ಕುಮಾರರಾಮನ ಕಾಲದ ಅವಧಿಯಲ್ಲಿ ನಡೆದ ಗೋಗ್ರಹಣಗಳ ಬಗ್ಗೆ ಶಾಸನ, ವೀರಗಲ್ಲುಗಳು ಸಾಕ್ಷೀಕರಿಸುತ್ತವೆ.

ವಿಜಯನಗರ ಕಾಲದ ಪಶುಪಾಲನೆಯನ್ನು ಈ ಕೆಳಗಿನ ಆಧಾರಗಳ ಮೂಲಕ ನಿರೂಪಿಸಲಾಗುವುದು. ಪುರಾತತ್ವಶಾಸ್ತ್ರ, ಸಾಹಿತ್ಯ, ವಿದೇಶಿಯರ ಬರವಣಿಗೆ ಮತ್ತು ಮೌಖಿಕ ಆಕರ ಹಾಗೂ ಕ್ಷೇತ್ರಕಾರ್ಯವನ್ನು ಆಧರಿಸಿ ವಿಶ್ಲೇಷಿಸಲಾಗುತ್ತದೆ. ಪುರಾತತ್ವಶಾಸ್ತ್ರೀಯ ಆಧಾರಗಳಲ್ಲಿ ಪ್ರಮುಖವಾಗಿ ಶಾಸನ, ವೀರಗಲ್ಲು, ಶಿಲ್ಪ, ಸ್ಮಾರಕ, ನಾಣ್ಯಗಳು ಪರಿಗಣಿತ ಆಧಾರಗಳು. ಸಾಹಿತ್ಯ ಆಕರಗಳಲ್ಲಿ ಪ್ರಮುಖವಾದುದು ದೇಶೀಯ ಸಾಹಿತ್ಯ : ವಿಶೇಷವಾಗಿ ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ಹದಿನೆಂಟು ವರ್ಣನೆಗಳು ಬರುವಾಗ, ಸಪ್ತವ್ಯಸನ, ಸಹಜವಾಗಿ ಪಶು, ಪಕ್ಷಿ, ಪ್ರಾಣಿಗಳ ಪ್ರಸ್ತಾಪ ಬರುತ್ತದೆ. ಹರಿಹರ, ರಾಘವಾಂಕ, ಜನ್ನ, ಷಡಕ್ಷರದೇವ, ವಿರೂಪಾಕ್ಷಪಂಡಿತ, ಲಕ್ಕಣ್ಣ ದಂಡೇಶ, ಮಲ್ಲಿಕಾರ್ಜುನ, ಕೇಶಿರಾಜ, ಕುಮಾರವ್ಯಾಸ, ಕನಕದಾಸ ಮೊದಲಾದವರು ಕಂಡುಬರುತ್ತಾರೆ. ಸಾಹಿತ್ಯ ಆಧಾರಗಳಲ್ಲಿ ಪ್ರಮುಖವಾಗಿ ಕನ್ನಡದ ಕಾವ್ಯಗಳನ್ನೇ ಹೆಸರಿಸಲಾಗುತ್ತದೆ. ಆಂಧ್ರದ ತೆಲುಗು (ಅಷ್ಟದಿಗ್ಗಜ) ಕವಿಗಳು, ಸ್ವತಃ ಕೃಷ್ಣದೇವರಾಯ, ಗಂಗಾದೇವಿಯವರ ಸಾಹಿತ್ಯ ಸೇವೆ ಇಲ್ಲಿ ಸ್ಮರಣೀಯ. ವಿದೇಶಿ ಪ್ರವಾಸಿಗರು ಇಲ್ಲಿನ ಚರಿತ್ರೆ ಮತ್ತು ಸಂಸ್ಕೃತಿಯನ್ನು ವಿಶ್ವಮಟ್ಟಕ್ಕೆ ಪರಿಚಯಿಸಿದ್ದು ಶ್ಲಾಘನೀಯ. ನಿಕೋಲೊಕೊಂಟಿ, ಡೊಮಿಂಗೊ ಪಯಾಸ್, ರಜಾಕ್, ಬಾರ್ಬೊಸಾ, ಫಿರಿಸ್ತಾ ಇತರರು ವಿಜಯನಗರ ಚರಿತ್ರೆಯನ್ನು ಪರಿಚಯಿಸಿರುವುದು ಸ್ಪಷ್ಟ. ಹಂಪಿ ಪರಿಸರ ಹಾಗೂ ಕರ್ನಾಟಕದ ಇತರೆಡೆಗಳಲ್ಲಿ ಈ ಬಗ್ಗೆ ಮೌಖಿಕ ವಿವರಗಳು ಲಭ್ಯ. ಆದರೆ ಇವುಗಳಲ್ಲಿ ಕಾಲ, ವಸ್ತುವಿಷಯಗಳ ಪರಿಶೀಲನೆ ಆಗುವುದು ಅಗತ್ಯ. ಕ್ಷೇತ್ರಕಾರ್ಯದ ಮೂಲಕ ಸ್ಮಾರಕ, ದೇವಾಲಯ, ಶಿಲ್ಪ, ಶಾಸನ, ವೀರಗಲ್ಲುಗಳನ್ನು ಅಧ್ಯಯನ ಮಾಡಿ ಕೆಲವು ಹೊಸ ವಿಚಾರಗಳನ್ನು ಇಲ್ಲಿ ತಿಳಿಸಲು ಪ್ರಯತ್ನಿಸಲಾಗಿದೆ.

ಶಾಸನ

ಸಂಗಮ ವಂಶಜರು ಬೇಟೆಯಲ್ಲಿ ನಿಷ್ಣಾತರು. ಈ ಬಗ್ಗೆ ಬೇಟೆಗಾರರ ಹೆಬ್ಬಾಗಿಲು, ತಳವಾರಘಟ್ಟಗಳನ್ನು ಉದಾಹರಿಸಬಹುದು. ಬೇಟೆಯಲ್ಲಿ ಅಭಿರುಚಿಗೊಂಡಂತೆ ಪಶುಪಾಲನೆಯಲ್ಲಿಯೂ ಈ ಅರಸರು ತೋರಿದ ಪ್ರೀತಿ, ಅಭಿಮಾನ ದೊಡ್ಡದು. ಕ್ರಿ.ಶ.

೧೪೮೨ ಮಾರ್ಚ್ ೨ ರಂದು ಹರಿಹರ ಮಹರಾಯನು ತನ್ನ ಸಾಮ್ರಾಜ್ಯದ ಎತ್ತು, ಎಮ್ಮೆ ಕರಕುಶಲಕರ್ಮಿಗಳಿಂದ ತೆರಿಗೆ ವಸೂಲಿ ಮಾಡುವ ಹೊಸ ವಿಧಾನವನ್ನು ಜಾರಿಗೆ ತಂದಿದ್ದನು.[೧] ಗೋವುಗಳಿಗೆ ತೆರಿಗೆ ವಿಧಿಸುವುದು ಮಾತ್ರವಲ್ಲ, ಅದನ್ನು ದಾನ ಮಾಡುವುದು ಪ್ರಚಲಿತದಲ್ಲಿತ್ತು. ಪ್ರಾಣಿ ಹಿಂಸೆಯಿಂದ ಪಾರಾದ ಪ್ರಾಣಿಗಳಿಗೆ ಒಂದು ನೆಲೆಯನ್ನು ಒದಗಿಸಿಕೊಟ್ಟರು ಸಾಳುವ ಅರಸರು. ಆಂಧ್ರದ ಅನಂತಪುರ ಜಿಲ್ಲೆಯಲ್ಲಿರುವ ಧಾರ್ಮಿಕ ಕ್ಷೇತ್ರ ಕದ್ರಿನರಸಿಂಹಸ್ವಾಮಿ ದೇವಾಲಯದ ಶಾಸನದಲ್ಲಿ ಕ್ರಿ.ಶ. ೧೪೧೮ ಫೆಬ್ರವರಿ ೧೬ ರಂದು ಹರಿಹರ ಮಹಾರಾಯನು ನಾಲ್ಕುನಾಡು ಪಾಂಚಾಳರಿಗೆ ಮದುವೆ, ಕುಲಿಕೆ, ಯತ್ತು, ಯಮ್ಮೆ, ಧೊತ್ತು ಭಂಡಿಯ ಬತ್ತದ ಸುಂಕ ಉಪ್ಪರ ನೆಲವಳಿ ಅನುಪು ಆಳು ಅರಣಿಕೆ... ಕೊಟ್ಟ ವಿಷಯ ತಿಳಿಯುತ್ತದೆ.[೨] ಗೋವುಗಳು ಮೇಯುವ ಹುಲ್ಲುಗಾವಲು, ವಾಸಿಸುವ ನೆಲೆಗಳಿಗೆ ತೆರಿಗೆಯನ್ನು ಕೊಡಬೇಕಾಗಿತ್ತು.

ಶ್ರೀಕೃಷ್ಣದೇವರಾಯನ ಕಾಲದ ಕ್ರಿ.ಶ. ೧೫೨೧ರ ಶಾಸನದಲ್ಲಿ ಗೋದಾನದ ಉಲ್ಲೇಖವಿದೆ. ‘ಮಾನುವೆ, ಹಾನಗಲ್ಲು, ಅಲಂಪೂರು, ರಾಚೂರು, ಮಾಗಡೆದುರ್ಗಗಳನ್ನು ಗೆದ್ದು ಕೃಷ್ಣ ಮತ್ತು ಭೀಮಾನದಿ ಸಂಗಮದಲ್ಲಿ ‘ರತ್ನಧೇನು ಮಹಾದಾನ’ವನ್ನು ಮಾಡಿ, ತನ್ನ ಹೆಂಡತಿ ಚಿಂನಾದೇವಿ ಕೈಲಿ ಗೋದಾನವನ್ನು, ತಿರುಮಲದೇವಿ ಕೈಲಿ ಕನಕ ಗೋದಾನ ವನ್ನು ಮಾಡಿಸುತ್ತಾನೆ’.[೩] ಗೋದಾನ ಸ್ತ್ರೀಯರಿಂದ ಮಾಡಿಸುವ ಆಚರಣೆಯಾಗಿದ್ದು, ಗೋವನ್ನು ಸಂಪತ್ತು, ಸ್ತ್ರೀಯಾಗಿ ಬಗೆದಿರುವ ಶಕ್ಯತೆಯಿದೆ. ಗೋಕಟ್ಟೆ, ಗೋಕಲ್ಲು, ಗೋಸಾಸನಗಳ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ.

ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕು ಮುತ್ತಿಗೆ ಗ್ರಾಮದ ಆಂಜನೇಯ ದೇವಾಲಯದ ಶಾಸನದಲ್ಲಿ (ಸಂ: ೩೭೨, ಕ್ರಿ.ಶ. ೨-೧೧-೧೫೫೭ ನೇ ಮಂಗಳವಾರ) ‘ಮಹಾನಾಯಕಾಚಾರ್ಯ ಕೃಷ್ಣಪನಾಯಕನು ಮುತ್ತಿಗೆ ಗ್ರಾಮದ ಕೃಷಿಕರು ಕೊಡಬೇಕಾದ ಕುರಿಗಳ ತೆರಿಗೆಯನ್ನು ನಿಗದಿ ಪಡಿಸಿದ್ದನ್ನು ತಿಳಿಸುತ್ತದೆ’.[೪]

ವಿಜಯನಗರ ಸಾಮ್ರಾಜ್ಯಕ್ಕೂ ಪೂರ್ವದಲ್ಲಿ ಈ ಪ್ರದೇಶವು (ಹಂಪಿ) ಪಶುಪಾಲನ ಚಟುವಟಿಕೆಗಳಿಂದ ಕೂಡಿತ್ತು. ಹರಪನಹಳ್ಳಿ ತಾಲೂಕು ನೀಲಗುಂದ ಮುಕ್ತೇಶ್ವರ ದೇವಸ್ಥಾನದ ಮುಂದಿನ (ತ್ರಿಭುವನಮಲ್ಲ ನಾಲ್ಕನೇ ವಿಕ್ರಮಾದಿತ್ಯ) ವೀರಗಲ್ಲು ಶಾಸನದಲ್ಲಿ (ಕ್ರಿ.ಶ. ೧೦೭೯ ಜನವರಿ ೨೦ ಭಾನುವಾರ) ಚಯಂದಿಯರನ ಮಗ ಮರೆಯಾಳ್ವನು ನೀಗ್ರುಂದದ ಗೋವುಗಳನ್ನು ರಕ್ಷಿಸಲು ಬನವಾಸಿ ನಾಡಿನಲ್ಲಿ ಹೋರಾಡಿದಾಗ ನೀಗ್ರುಂದದ ಮೂಲಿನ ಕಲ್ಲಗಂಗನು ಮರಣ ಹೊಂದಿರುವುದನ್ನು ತಿಳಿಸುತ್ತದೆ.[೫] ಹೀಗೆ ಗೋವುಗಳನ್ನು ಮಳೆ, ಗಾಳಿ, ಬೆಂಕಿ, ಕಾಡುಪ್ರಾಣಿಗಳಿಂದ ರಕ್ಷಿಸಲು ಅವಿರತ ಶ್ರಮಸಿದ್ದು ಅವುಗಳನ್ನು ನಿಖರವಾಗಿ ಎಲ್ಲೂ ದಾಖಲಿಸಿಲ್ಲ. ಬೆಣ್ಣೆಹಳ್ಳಿ ಪಂಪಾಪತಿ ದೇವಸ್ಥಾನದಲ್ಲಿ ಶಾಸನವು (ಸಂ:೩೨೬) ಹೊಯ್ಸಳ ವೀರನರಸಿಂಹದೇವನಿಗೆ ಸೇರಿದೆ. ನಲ್ಲೆಮ್ಮೆಯ ಉಗ್ರಾಣಿ ಗಿರಿಪಯ್ಯ ಪಿರಿಯಣ್ಣನು ಬೆಣ್ಣೆವೂರಿನ ವಿರೂಪಾಕ್ಷ ದೇವರ ನೈವೇದ್ಯಕ್ಕೆ, ದೀಪಕ್ಕೆ ಮತ್ತು

ದೇವಸ್ಥಾನದ ೧೨ ಮಹಾಜನರ ಭೋಜನಕ್ಕೆ ಒಂದು ಹಸು ಮತ್ತು ಒಂದು ಎಮ್ಮೆಯನ್ನು ದಾನ ನೀಡಿದ ಬಗ್ಗೆ ತಿಳಿಸುತ್ತದೆ.[೬] ಮಧ್ಯಕಾಲೀನ ಸಂದರ್ಭದಲ್ಲಿ ಬ್ರಾಹ್ಮಣ(?)ರು ಗೋಮಾಂಸವನ್ನು ಭಕ್ಷಿಸುವುದನ್ನು ಈ ಮೂಲಕ ಅರ್ಥೈಸಿಕೊಳ್ಳಬಹುದಾಗಿದೆ. ಅಥವಾ ದೇವರ ನೈವೇದ್ಯದ ದೀಪಕ್ಕೆ ಹಸು ಮತ್ತು ಎಮ್ಮೆಯನ್ನು ದಾನ ನೀಡುವುದು ಅವುಗಳ ಉತ್ಪನ್ನದಿಂದ ಬರುವ ಹಣವನ್ನು ಬಳಸಿಕೊಳ್ಳಬಹುದಾಗಿತ್ತೇನೋ. ಪಶುಗಳು ಆ ಕಾಲಕ್ಕೆ ಗಣನೀಯ ಪ್ರಮಾಣದಲ್ಲಿದ್ದ ಸೂಚನೆಯನ್ನು ಗಮನಿಸಬಹುದಾಗಿದೆ.

ಪಶುಪಾಲನೆಗೆ ಸಂಬಂಧಿಸಿದ ವೀರಗಲ್ಲುಗಳು

ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಗೋಗ್ರಹಣ, ಕಾಡು ಪ್ರಾಣಿಗಳ ಉಪಟಳದಿಂದ ಸತ್ತ ವೀರರ ಬಗ್ಗೆ ವೀರಗಲ್ಲುಗಳಿವೆ. ಹಾಗೆಯೇ ಹಂದಿ, ಹುಲಿ, ನರಿ, ಚಿರತೆ, ಸಿಂಹ ಇತರ ಕಾಡುಪ್ರಾಣಿಗಳು ದನ, ಕುರಿಗಳಿಗೆ ಕೊಡುವ ಹಿಂಸೆಯನ್ನು ತಪ್ಪಿಸಲು ವೀರರು ಹೋರಾಡಿ ಮಡಿದ ಉಲ್ಲೇಖಗಳಿವೆ. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ಲೋಕದೊಳಲುವಿನ ಆಂಜನೇಯ ದೇವಾಲಯದ ಹಿಂಭಾಗದಲ್ಲಿರುವ ವೀರಗಲ್ಲು ಅಪೂರ್ವವಾದುದು. ಅದರ ವಿವರ: ವೀರ (ನಿಂತಿರುತ್ತಾನೆ) ಪಶುಗಳನ್ನು ರಕ್ಷಿಸಿ ದುಷ್ಟ ಪ್ರಾಣಿಗಳೊಡನೆ ಹೋರಾಡುವಾಗ ಮಡಿದಿರುತ್ತಾನೆ. ಸ್ವರ್ಗಕ್ಕೆ ಹೋಗುವ ಕಲ್ಪನೆಯನ್ನು ಶಿಲ್ಪಿ ವೀರನೊಂದಿಗಿರುವ ಆಯುಧವನ್ನು ಬಿಡಿಸಿರುತ್ತಾನೆ (ಕನ್ನಡ ವಿಶ್ವವಿದ್ಯಾಲಯ, ಗ್ಯಾಲರಿ-೧). ಮತ್ತೊಂದು ವೀರಗಲ್ಲಿನಲ್ಲಿ ವೀರ ಕೈಯಲ್ಲಿ ಬಂದೂಕು - ಇತರ ಆಯುಧಗಳನ್ನಿಡಿದು ಗೋವುಗಳ ಪಕ್ಕದಲ್ಲಿ ನಿಂತಿದ್ದಾನೆ. (ಕನ್ನಡ ವಿಶ್ವವಿದ್ಯಾಲಯ, ಗ್ಯಾಲರಿ - ಪಶ್ಚಿಮಕ್ಕೆ ನಂ.೧೨). ಬಳ್ಳಾರಿ ಪ್ರದೇಶದ ವೀರಗಲ್ಲೊಂದರಲ್ಲಿ ಪಶುಗಳ ರಕ್ಷಕ ಹೋರಾಡುವ ದೃಶ್ಯವನ್ನು ಕೆತ್ತಲಾಗಿದೆ (ನಂ.೩೦). ಪಶುಪಾಲನೆಗೆ ಸಂಬಂಧಿಸಿದ ಮತ್ತೊಂದು ವೀರಗಲ್ಲು ಮತ್ತು ಶಾಸನವು ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿದೆ. ಎಮ್ಮೆಗಳಿಗೋಸ್ಕರ ಹೋರಾಡಿ ಮಡಿದ ವೀರಗಲ್ಲು ಕೊಪ್ಪಳ ಜಿಲ್ಲೆ ಬೂದುಗುಂಪದಲ್ಲಿದೆ. ಈ ವೀರಗಲ್ಲಿನಲ್ಲಿ ವೀರನು ಬಿಲ್ಲು, ಬಾಣ ಹಿಡಿದು ಎದುರಾಳಿಗಳೊಂದಿಗೆ ಯುದ್ಧದಲ್ಲಿ ತೊಡಗಿದ್ದಾನೆ. ಆತನ ಹಿಂಭಾಗ ಎರಡು ಎಮ್ಮೆಗಳು (ಅಥವಾ ಕೋಣಗಳು), ಎರಡು ಎತ್ತುಗಳು ಹಾಗೂ ಮೇಲ್ಭಾಗದಲ್ಲಿ ಒಂದು ನೇಗಿಲಿದೆ. ಅಸ್ಪಷ್ಟವಾದ ಮೂರು ಸಾಲಿನ ಶಾಸನವಿದ್ದು, ಮೇಲ್ಭಾಗದಲ್ಲಿ ಸಖಿಯರು ವೀರನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ಚಿತ್ರಣವನ್ನು ವಾಸುದೇವ ಬಡಿಗೇರ ಗುರುತಿಸಿದ್ದಾರೆ.[೭]

ವಿಜಯನಗರ ಕಾಲದ ಪ್ರತಿ ದೇವಾಲಯಗಳ ಕಂಬ, ಗೋಡೆ, ಶಿಖರ ಇತರ ಭಾಗಗಳಲ್ಲಿ ಪಶು, ಪಕ್ಷಿ, ನಂದಿ, ಗೂಳಿ, ಕುರಿ, ಮೀನು, ಆಮೆಗಳ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಕನ್ನಡ ಕಾವ್ಯಗಳಲ್ಲಿಯು ಸಹಾ ಪಶುಪಾಲನೆ ಉಲ್ಲೇಖ ಕಾಣಬಹುದಾಗಿದೆ. ಪಶುಗಳನ್ನು ಕಾಯುವವನು ನಿಂತಿರುವ ದೃಶ್ಯ ದೇವಾಲಯದ ಕಂಬಗಳಲ್ಲಿ ಕೆತ್ತಲಾಗಿದೆ. ಕೃಷ್ಣ,

ಗೋದಾವರಿ, ಭೀಮಾ, ತುಂಗಭದ್ರಾ, ವೇದಾವತಿ, ಚಿನ್ನಹಗರಿ, ಕಾವೇರಿ, ಪಿನಾಕಿನಿ ಮೊದಲಾದ ನದಿ, ಕಣಿವೆಗಳಲ್ಲಿ ಪಶುಪಾಲನಾಕೇಂದ್ರಗಳಿದ್ದವು. ಹಾಗೆಯೇ ಚಿತ್ರದುರ್ಗ, ಬಳ್ಳಾರಿ, ತುಮಕೂರು, ದಾವಣಗೆರೆ ಜಿಲ್ಲೆಗಳಲ್ಲಿ ಬುಡಕಟ್ಟು ಜನರು ಪಶುಪಾಲನೆ ಮಾಡಿಕೊಂಡು ಬಂದ ಉದಾಹರಣೆಗಳಿವೆ. ಶಾಸನ, ವೀರಗಲ್ಲುಗಳು ಈ ಬಗ್ಗೆ ಬೆಳಕು ಚೆಲ್ಲುತ್ತವೆ.

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ಗಂಜಿಗಟ್ಟೆಯಲ್ಲಿ (ಮುತ್ತುಗದೂರು-ಸಾಸಲು) ಬೇಡ ಶರಣ, ಧಾರ್ಮಿಕ ಪುರುಷ, ಪಶುಪಾಲಕನಾದ ಗಾದರಿಪಾಲನಾಯಕನ ವೀರಗಲ್ಲಿದೆ. ಇದು ತುಂಬಾ ವಿಶಿಷ್ಟವಾದುದು. ಹುಲಿಗಳೊಂದಿಗೆ ಹೋರಾಡುವಾಗ (ಪಶುಗಳ ರಕ್ಷಣೆಯಲ್ಲಿ) ಇವನು, ಇವನ ತಮ್ಮ ಚಿನ್ನಪಾಲನಾಯಕನು ಮಡಿಯುತ್ತಾರೆ. ತುರುಮಂದೆಗೆ ನುಗ್ಗಿದ ಹುಲಿಗಳೆರಡನ್ನು ಕೊಂದು ತಾನು ಮರಣ ಹೊಂದಿದ ಘಟನೆಯನ್ನು ಈ ವೀರಗಲ್ಲು ಸಾಂಕೇತಿಸುತ್ತದೆ. ಇವನು ಮಡಿದ ನಂತರ ಹೆಂಡತಿಯರಾದ ಕಂಚವ್ವಕಾಮವ್ವರು ಸಹಗಮನ ಅನುಸರಿಸುತ್ತಾರೆ. ಈ ಕಾರಣವಾಗಿ ಗಂಜಿಕಟ್ಟೆಯಲ್ಲಿ ಮಾಸ್ತಿಕಲ್ಲನ್ನು ನೆಡಲಾಗಿದೆ. ಜನರು ಇದನ್ನು ಗಾದರಿಪಾಲನಾಯಕ ದೇವರೆಂದು ಕರೆದು ಪೂಜಿಸುತ್ತಾರೆ. ಗಾದರಿಪಾಲನಾಯಕನ ಕಾಲಮಾನ ಸ್ವಲ್ಪ ವ್ಯತ್ಯಾಸವಿದ್ದರೂ ಬಡುಕಟ್ಟು ಜನರು ಪಶುಪಾಲನೆಯಿಂದ ಜೀವನ ನಡೆಸಿದ ಈ ಕಾಲದ ಬಗ್ಗೆ ವಿವರಗಳಿವೆ. ಇತರ ಶಿಲ್ಪಗಳಲ್ಲಿ ಗಾದರಿಪಾಲನಾಯಕ ಪಶುಗಳೊಂದಿಗೆ ನಿಂತಿದ್ದಾನೆ. ಇವನ ನಂತರ ಚಿತ್ರದುರ್ಗದ ನಾಯಕರು ದೇವಾಲಯ ಕಟ್ಟಿಸಿ, ಶಾಸನ ಹಾಕಿಸಿರುವುದು ಸ್ಪಷ್ಟ.

ಇವನಂತೆ, ಜಗಳೂರು ಪಾಪನಾಯಕನೆಂಬ ಪವಾಡಪುರುಷನು ಮೂಲತಃ ಪಶುಪಾಲಕನಾಗಿ ಕಂಡುಬರುತ್ತಾನೆ. ಚಳ್ಳಕೆರೆ ಹತ್ತಿರ (ಗೋರ್ಲಕಟ್ಟೆ) ಇವನು ದನಕಾಯುತ್ತಿದ್ದ. ಪಕ್ಕದ ಊರಿನ ಗೊಲ್ಲರೊಂದಿಗೆ ತಿರುಪತಿಯಾತ್ರೆ ಮಾಡಿಬಂದು ಪವಾಡ ಪುರುಷನಾಗುತ್ತಾನೆ. ಇದನ್ನು ಸಹಿಸದ ದೊರೆ ಜಗಪತಿರಾಯನಿಂದ ಹತನಾಗುತ್ತಾನೆ. ಈ ವೀರನ ಬಗ್ಗೆ ವೀರಗಲ್ಲು, ದೇವಾಲಯ, ಸಮಾಧಿ (ಜಗಳೂರು) ಮೊದಲಾದವು ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ ಜಿಲ್ಲೆಗಳಲ್ಲಿ ಕಂಡುಬರುತ್ತವೆ.

ಬೇಟೆ, ಪಶುಪಾಲನೆಯೊಂದಿಗೆ ಬೆಳೆದು ಬಂದ ಬುಡಕಟ್ಟು ಜನರಾದ ಬೇಡರಿಗೆ ಪಶುಗಳೇ ಸಂಪತ್ತು. ಗೋಮೂತ್ರ, ಸಗಣಿ ಪವಿತ್ರವೆಂಬ ಭಾವನೆ ಇವರಲ್ಲಿತ್ತು. ಮ್ಯಾಸಮಂಡಲದ ಜನಸಂಖ್ಯೆ, ಪ್ರಾಣಿಸಂಕುಲ ಹೆಚ್ಚಾಗಿ ಹುಲ್ಲು, ನೀರಿಗಾಗಿ, ಆಹಾರಕ್ಕಾಗಿ ಅಲೆದಾಡಿದರು. ಕ್ಷಾಮ-ಬರಗಾಲ ಪರಿಸ್ಥಿತಿಯನ್ನು ಎದುರಿಸಿದರು. ಹೀಗೆ ವಿಜಯನಗರ ಸಾಮ್ರಾಜ್ಯ ಅಭಿವೃದ್ಧಿ ಪಥ ತಲುಪಿದಾಗಲೇ ಆಂಧ್ರ ಒರಿಸ್ಸಾದಿಂದ ಬೇಡ ಬುಡಕಟ್ಟಿನ ಪಶುಪಾಲಕರು ಕರ್ನಾಟಕಕ್ಕೆ ವಲಸೆ ಬಂದರು. ಇವರು ಮೂಲತಃ ಬೇಟೆಗಾರರಾದರೂ ಆನಂತರ ಪಶುಪಾಲನೆಯನ್ನು ಶಾಶ್ವತವಾಗಿ ಉಳಿಸಿಕೊಂಡು ಬಂದವರಾಗಿದ್ದರು. ಆಂಧ್ರದ ಶ್ರೀಶೈಲ, ತಿರುಪತಿ, ಕದ್ರಿ, ಅಹೋಬಲಂ ಮೊದಲಾದ ನೆಲೆಗಳಿಂದ ಇಲ್ಲಿಗೆ

ಆಗಮಿಸಿರುತ್ತಾರೆ. ಇವರಿಗೆ ಮ್ಯಾಸಬೇಡರೆಂದು ಹೆಸರು. ಮೇಯಿಸುವ (ಗೋವು ಮತ್ತು ಕುರಿ) ಇತ್ಯಾದಿ. ಅಡವಿಯಲ್ಲಿ ಇರುವವರು ಅಡವಿಚೆಂಚ ಮ್ಯಾಸ ಎಂದೆಲ್ಲ ಕರೆಯಲಾಯಿತು. ಶ್ರೀಶೈಲ (ಕರಿಮಲೆ) ಪರ್ವತದಿಂದ ಬಂದಂಥ ಇವರು ತಮ್ಮ ಜತೆಗೆ ೧೨ ಪೆಟ್ಟಿಗೆ ದೇವರು, ೫೦೦ ಜನ ಮೇಸರ್ರು ಸೇರಿ ವಿಜಯನಗರದ ಮೊದಲ ರಾಜಧಾನಿ ಆನೆಗೊಂದಿಗೆ ಬರುತ್ತಾರೆ (ಇದರ ಕಾಲಮಾನ ೧೫-೧೬ನೇ ಶತಮಾನ?). ಇದರ ಕಾಲಮಾನದ ಬಗ್ಗೆ ವಿದ್ವಾಂಸರಲ್ಲಿ ಗೊಂದಲಗಳಿದ್ದು, ೧೪ನೇ ಶತಮಾನ, ೧೫೨೯ ಮತ್ತು ೧೬ನೇ ಶತಮಾನಗಳೆಂದು ಕರೆಯಲಾಗಿದೆ. ಆಂಧ್ರದ ಅನಂತಪುರ ಜಿಲ್ಲೆ ಮೂಲಕ ಬಂದಂಥ ಕೆಲವು ಗುಂಪುಗಳು ಮೊಳಕಾಲ್ಮೂರು ತಾಲೂರಿನ ಕಂಪಳದೇವರಹಟ್ಟಿ, ಮುತ್ತಿಗಾರಹಳ್ಳಿ ಮತ್ತು ನಾಯಕನಹಟ್ಟಿಗಳಲ್ಲಿ ತಂಗುತ್ತಾರೆ. ಕಂಪಳದೇವರಹಟ್ಟಿ ಹತ್ತಿರ ಜನಿಗೆಹಳ್ಳಿ (ಚಿನ್ನಹಗರಿ ನದಿ) ಪರಿಸರದಲ್ಲಿ ಗೋವುಗಳನ್ನು ಮೇಯಿಸಿಕೊಂಡು ಕಾಲಕಳೆದರು. ಈ ಗುಂಪಿನ ಕೆಲವರು ಗುಹೇಶ್ವರಬೆಟ್ಟಕ್ಕೆ ಹೋಗುತ್ತಾರೆ. ಎಲ್ಲೆಲ್ಲಿ ಹೋಗಿ ನೆಲೆ ನಿಂತರೂ ಅವು ಪವಿತ್ರ ಕ್ಷೇತ್ರಗಳಾಗಿ, ಧಾರ್ಮಿಕ ತಾಣಗಳಾಗಿ ಖ್ಯಾತಿ ಪಡೆದವು.

ಬೇಟೆಗಾರರ ದೇವರಾಗಿ ಪೂಜಿಸುವ ತಿರುಪತಿ ತಿಮ್ಮಪ್ಪ ಒಂದು ಕಾಲಕ್ಕೆ ನಿಜವಾದ ಬುಡಕಟ್ಟು ವೀರ. ಒಂದು ಕಾಲದಲ್ಲಿ ತಿಮ್ಮಪ್ಪ ಬೇಟೆಗಾರನಾಗಿದ್ದನೆಂಬ ಜನರ ಮಾತು ಸುಳ್ಳಲ್ಲ. ಶ್ರೀಶೈಲದಿಂದ ಬಂದವರು ಶೈವಕ್ಷೇತ್ರಗಳನ್ನು, ತಿರುಪತಿಯಿಂದ ಬಂದವರು ವೈಷ್ಣವ ಕ್ಷೇತ್ರಗಳನ್ನು ನಿರ್ಮಾಣ ಮಾಡಿಕೊಂಡರು. ಉಳಿದ ಕ್ಷೇತ್ರಗಳಿಂದ ಬಂದವರು ಆಯಾ ಸ್ಥಳಗಳಿಗೆ ಅದೇ ಹೆಸರನ್ನಿಟ್ಟುಕೊಂಡರು. ಶ್ರೀಶೈಲದಿಂದ ಬಂದವರು ಮಲ್ಲಯ್ಯನ ಶಿಷ್ಯರೆಂದು ಕರೆದರು. ಮೇಲೆ ಹೇಳಿದಂತೆ ಕಾಟಮಲ್ಲನಾಯಕನ ನೇತೃತ್ವದಲ್ಲಿ ಬಂದ ಕಾಪು ಕಂಪಳ (ದನಕರು-ಜನರು) ವಿಜಯನಗರ ಸಾಮ್ರಾಜ್ಯದ ಗಡಿಯೊಳಗೆ ರಾಜರ ಅನುಮತಿ ಇಲ್ಲದೆ ತಂಗಿದರು. ಇವರನ್ನು ಹೊರದೂಡಲು ಜಟ್ಟಿಗರನ್ನು (ರಾಮಜಟ್ಟಿ ಅಣ್ಣತಮ್ಮಂದಿರು) ಸೈನಿಕ-ದಂಡನಾಯಕರನ್ನು ಕಳಿಸಿದರೂ ಶರಣಾಗತರಾಗಲಿಲ್ಲ. ಜಟ್ಟಿಗರಿಗೂ ಮಾತು ಕೇಳದ ಕಾಟಮಲ್ಲನಾಯಕನಿಗೆ ವಿಜಯನಗರದ ಅರಸರು ಸ್ವಾಮಿಗಳನ್ನು ಸಂಧಾನಕ್ಕೆ ಕಳುಹಿಸುತ್ತಾರೆ. ಸ್ವಾಮಿಗಳ ಮಾತಿಗೂ ಸೊಪ್ಪು ಹಾಕದ ನಾಯಕರಿಗೆ ತಕ್ಕ ಪಾಠ ಕಲಿಸಲು ೩೨ ಜನ ಸುಂದರ, ಮೋಹಕ ವೇಶ್ಯೆಯರನ್ನು ಕಳುಹಿಸುತ್ತಾರೆ. ಅವರನ್ನು ಮರಳು ಮಾಡಲು, ಮೋಹಗೊಳಿಸಲು ವಿಫಲರಾದ ಸ್ತ್ರೀಯರು ಮರಳಿಬರಬೇಕಾಯಿತು. ಇವೆಲ್ಲ ಬೆಳವಣಿಗೆಗಳನ್ನು ಅರಿತ ಅರಸರು ನಾಯಕರು ಧೈರ್ಯ- ಪರಾಕ್ರಮಿಶಾಲಿಗಳು, ಸಾಮ್ರಾಜ್ಯ ನಮ್ಮದಾದರೂ ನಮ್ಮ ಅಪ್ಪಣೆ ಕೇಳದೆ ಬಂದು ನೆಲಸಿದ್ದಾರೆಂದರೆ ಸಾಮಾನ್ಯರಲ್ಲ ಎಂದು ತಿಳಿದು ನಾಯಕನಹಟ್ಟಿ ಪಾಳೆಯಪಟ್ಟನ್ನು ಆಳ್ವಿಕೆ ಮಾಡಿಕೊಳ್ಳಲು ಅನುಮತಿಕೊಟ್ಟರು. ಪಶುಗಳಿಗೆ ಹುಲ್ಲುಗಾವಲಿಲ್ಲದ ಕಾರಣ ಮುತ್ತಿಗಾರಹಳ್ಳಿ ಅರಣ್ಯದಲ್ಲಿ ೩೦೦ ಎಕರೆ ಪ್ರದೇಶವನ್ನು ಎತ್ತುಗಳಿಗೆಂದು ಬಿಟ್ಟುಕೊಟ್ಟರು. ಇಂದಿಗೂ ಮುತ್ತಿಗಾರ ಎತ್ತುಗಳ ಕಿಲಾರಿಗಳನ್ನು ಇದನ್ನು ಪರಿಪಾಲಿಸಿಕೊಂಡು ಬಂದಿರುತ್ತಾರೆ.

ಒಮ್ಮೆ ಆನೆಗೊಂದಿ ರಾಜನಿಗೆ ಕಿರುಕುಳ ಕೊಡುತ್ತಿದ್ದ ಭೀಮಾಜಟ್ಟಿಯನ್ನು ಸೋಲಿಸಿದ ಬೋಡಿ ಮಲ್ಲಪ್ಪನಾಯಕನಿಗೆ ಆನೆಗೊಂದಿರಾಜ ರಾಮರಾಯ ತಿರುಮಲ ರಾಜನು ಬುಕ್ಕಸಾಗರ ಹರಿಯ ಸಮುದ್ರ ಗ್ರಾಮಗಳ ನಡುವೆ ಇದ್ದ ಕಳಸಾಪುರ, ಕಮಲಾಪುರ ಕೆರೆಯ ಕೆಳಗೆ ೩ ಖಂಡುಗ ಬೀಜಾವರ್ರಿ ಭೂಮಿಯನ್ನು ಉಂಬಳಿಯಾಗಿ ಬಿಟ್ಟುಕೊಡುತ್ತಾರೆ. ಹೀಗೆ ಹಟ್ಟಿ ನಾಯಕರ ಆಳ್ವಿಕೆ ಆರಂಭವಾದಾಗ ರಾಯದುರ್ಗ ಮತ್ತು ನಾಯಕನಹಟ್ಟಿಯವರಿಗೆ ಒಪ್ಪಂದ ಏರ್ಪಡುತ್ತದೆ. ರಾಯದುರ್ಗದ ಯರ್ರಿಬೊಮ್ಮಳನಾಯ್ಕ ೩೦೦ ಕುರಿ ೭೦೦ ಆಕಳು ಪಡೆದು ಮೊಳಕಾಲ್ಮೂರು ಸೀಮೆಯನ್ನು ಬಿಟ್ಟುಕೊಡುತ್ತಾನೆ. ಈ ಭಾಗದಲ್ಲಿ ಪಶುಪಾಲಕರಾದ ಗೊಲ್ಲರು, ಬೇಡರು ಸಹೋದರರಂತೆ ಕೂಡಿ ಬಾಳಿರುವುದು ಗಮನಾರ್ಹ.

ಮೇಲಿನಂತೆ ಪಶುಪಾಲಕರು ಮತ್ತು ಅರಸರಂತೆ ಹಿರೇಹಳ್ಳಿ ದಡ್ಡಿಸೂರ ನಾಯಕ, ಗಲಗಲ್ಲು ಗಾಜನಾಯಕ, ಯರಗಾಟನಾಯಕ, ಕೊರೇಲುಪಾಪನಾಯಕ, ಕೊಡಗಲು ಬೊಮ್ಮಯ್ಯ, ಯರಮಂಚನಾಯಕ ಮೊದಲಾದ ಪಶುಪಾಲಕ ವೀರರು ತಮ್ಮ ಹೋರಾಟ, ದೈವಶಕ್ತಿಯಿಂದ ಪಶುಪಾಲನಾ ಕುಟುಂಬಗಳಿಗೆ ದೇವರುಗಳಾಗಿದ್ದಾರೆ.[೮] ಇದೇ ರೀತಿ ಕರ್ನಾಟಕ ಮತ್ತು ದಕ್ಷಿಣ ಭಾರತದ ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಪಶುಪಾಲನೆ ವ್ಯವಸ್ಥೆ ಪಲ್ಲಟ ಸೃಷ್ಟಿಸಿದ್ದು ಗಮನಾರ್ಹ.

ವಿಜಯನಗರ ಕಾಲದ ಪಶುಪಾಲನೆ ಹೆಚ್ಚಾಗಿ ಮಲೆನಾಡು, ಬಯಲುಸೀಮೆ ಹಾಗೂ ಜಲಸಂಪನ್ಮೂಲ ಮತ್ತು ಹುಲ್ಲುಗಾವಲು ಪ್ರದೇಶದಲ್ಲಿತ್ತು. ಇಲ್ಲಿ ಆರೋಗ್ಯಯುತ ಪಶುಗಳನ್ನು ಪೋಷಿಸಲಾಗುತ್ತಿತ್ತು. ಮಧ್ಯ ಕರ್ನಾಟಕದಲ್ಲಿ ಬೇಡರು, ಕುರುಬರು ಮತ್ತು ಗೊಲ್ಲರು ಪ್ರಮುಖ ಪಶುಪಾಲಕರಾಗಿದ್ದರು. ಸಾಕುವ ಗೋವುಗಳಲ್ಲಿ ದೇವರಿಗೆಂದು ಬಿಟ್ಟ ಎತ್ತು, ದನಗಳನ್ನು ದೇವರೆತ್ತುಗಳೆಂದು ಕರೆಯುತ್ತಿದ್ದರು. ಇಂದಿಗೂ ಸಹಸ್ರಾರು ಸಂಖ್ಯೆಯ ದೇವರೆತ್ತುಗಳಿರುವುದನ್ನು ಗಮನಿಸಬಹುದು. ಇವುಗಳನ್ನು ಕಾಯುವವನಿಗೆ 'ಕಿಲಾರಿ' ಎನ್ನುತ್ತಾರೆ ಪ್ರತಿಯೊಂದು ಪಶುಪಾಲನಾ ಬುಡಕಟ್ಟು ಜನರು ತಮ್ಮ ಜಾತೀಯ ನೇತಾರನನ್ನಾಗಿ ಒಬ್ಬೊಬ್ಬರನ್ನ ಆರಾಧಿಸುವುದುಂಟು. ಕಾಡುಗೊಲ್ಲರಲ್ಲಿ ಎತ್ತಪ್ಪ-ಜುಂಜಪ್ಪ, ಲಂಬಾಣಿಗರ ಸೇವಾಲಾಲ ಮತ್ತು ರಾಮೋಜಿ, ಕುರುಬರ ಮಾಳಿಂಗರಾಯ, ಮೈಲಾರ, ಬೇಡರ ಗಾದರಿಪಾಲನಾಯಕ ಮತ್ತು ಇತರರನ್ನು ಸ್ಮರಿಸಬಹುದು. ವಿಜಯನಗರದ ಅರಸರು ಬುಡಕಟ್ಟು ಜನರಿಗೆ ನೆಲೆಯನ್ನು ಕಲ್ಪಿಸಿ ಪಶುಪಾಲನೆಗೆ ನೆರವು ಕೊಟ್ಟಿರುತ್ತಾರೆ. ಜೊತೆಗೆ ರಾಜಕೀಯದಿಂದ ಇವರನ್ನು ದೂರವಿಡಲು ಪ್ರಯತ್ನಿಸಿ ವಿಫಲರಾದಾಗ ಅನಿವಾರ್ಯವಾಗಿ ರಾಜಕೀಯಕ್ಕೂ ಬೆಂಬಲ ನೀಡಿದರು.

ವಿದೇಶಿಯರ ದೃಷ್ಟಿಯಲ್ಲಿ ವಿಜಯನಗರ ಕಾಲದ ಪಶುಪಾಲನೆ

ಸ್ಥಳೀಯವಾದ ಆಕರಗಳು ಪಶುಪಾಲನೆಯನ್ನು ನಿರೂಪಿಸುವುದಕ್ಕಿಂತ ಕೊಂಚ ಭಿನ್ನವಾದ ರೀತಿಯಲ್ಲಿ ವಿದೇಶಿ ಬರವಣಿಗೆಗಳು ಈ ಬಗ್ಗೆ ಬೆಳಕು ಚೆಲ್ಲುತ್ತವೆ. ಕನ್ನಡ ಕಾವ್ಯ,

ಶಾಸನಗಳಿಂದ ವಿದೇಶಿಯರ ಲೋಕದೃಷ್ಟಿ ಏನಾಗಿತ್ತೆಂಬ ಸ್ಪಷ್ಟ ಕಲ್ಪನೆ ಅವರು ನೋಡುವ ದೃಷ್ಟಿ ಮತ್ತು ರೂಪಿಸುವ ಸೃಷ್ಟಿಯಿಂದ ವ್ಯಕ್ತಪಟ್ಟಿದೆ. ಆದರೂ ಆಮೂಲಾಗ್ರವಾದ ವಿವರ, ವಿಶ್ಲೇಷಣೆ ಯಾರೊಬ್ಬರೂ ಮಾಡದೇ ಇರುವುದು ವಿಷಾದನೀಯ.

ಡೊಮಿಂಗೊ ಪಾಯಸ್ (೧೫೨೦-೨೨) ವಿಜಯನಗರಕ್ಕೆ ಭೇಟಿ ಕೊಟ್ಟಾಗ ಅವನು ಕಂಡ ದೃಶ್ಯವನ್ನು ಹೀಗೆ ಹೇಳಿದ್ದಾನೆ: ಈ ರಾಜ್ಯಗಳು ಒಳ್ಳೆಯ ಸಾಗುವಳಿ ಮಾಡಿದವುಗಳು ಮತ್ತು ಬಲು ಫಲವತ್ತಾದವುಗಳಲ್ಲದೆ, ಆಕಳು, ಎಮ್ಮೆ ಮತ್ತು ಕುರಿ ಮೊದಲಾದ ಜಾನುವಾರುಗಳ ವಿಪುಲತೆಯಿಂದ ಕೂಡಿವೆ ಎನ್ನುತ್ತಾನೆ. ಇಲ್ಲಿನ ಮರ, ಗಿಡ, ಪ್ರಾಣಿ, ಪಕ್ಷಿಗಳು, ದವಸ-ಧಾನ್ಯಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿ ತಿಳಿಸಿರುವನು. ಮುಂದುವರೆದು ಈ ಸರೋವರಗಳಲ್ಲಿ ವಿಶೇಷತಃ (ಚಿಲುಮೆ) ಊಟೆಗಳು ಇರದವುಗಳಲ್ಲಿ, ನೀರು ಬಹುಮಟ್ಟಿಗೆ ರಾಡಿಯಾಗಿರುತ್ತದೆ. ಅದಕ್ಕೆ ಕಾರಣವೆಂದರೆ ನಾಡಿನಲ್ಲಿರುವ ಪ್ರಬಲ ಗಾಳಿ ಮತ್ತು ಧೂಳು, ನೀರು ತಿಳಿಯಾಗಲು ಬಿಡುವುದಿಲ್ಲ. ಇದೂ ಅಲ್ಲದೆ, ಅವುಗಳಲ್ಲಿ ನೀರು ಕುಡಿಯುವ ಎಮ್ಮೆಗಳು ಆಕಳು, ಎತ್ತುಗಳು ಮತ್ತು ಇತರ ಚಿಕ್ಕ ಜಾನುವಾರಗಳ ಸಂಖ್ಯೆ ಅಧಿಕ. ಏಕೆಂದರೆ ಈ ನಾಡಿನಲ್ಲಿ ಅವರು ವಸ್ತುಗಳನ್ನು ಅಥವಾ ಆಕಳುಗಳನ್ನು ಕೊಲ್ಲುವುದಿಲ್ಲ ಎಂಬುದನ್ನು ತಿಳಿದಿರಬೇಕು, ಎತ್ತುಗಳು ಹೊರೆ ಹೊರುವ ಪ್ರಾಣಿಗಳು ಮತ್ತು ಹೇಸರಗತ್ತೆಗಳಂತಿರುತ್ತವೆ: ಇವು ಅವರ ಎಲ್ಲ ಸರಕುಗಳನ್ನು ಹೊತ್ತೊಯ್ಯುತ್ತವೆ. ಅವರು ಆಕಳುಗಳನ್ನು ಪೂಜಿಸುತ್ತಾರೆ ಮತ್ತು ಅವುಗಳನ್ನು ಕಲ್ಲಿನಲ್ಲಿ ಕಟ್ಟಿದ ದೇವಸ್ಥಾನಗಳಲ್ಲಿ ಇಡುತ್ತಾರೆ. ಹಾಗೆಯೇ ಹೋರಿಗಳನ್ನು ಕೂಡ, ಈ ದೇವಸ್ಥಾನಗಳಿಗೆ ದಾನ ಮಾಡಿದ ಅನೇಕ ಹೋರಿಗಳಿದ್ದು ಅವು ಊರು ಸುತ್ತಿದರೂ ಯಾರೂ ಅವುಗಳಿಗೆ ತೊಂದರೆ ಅಥವಾ ಹಾನಿಮಾಡುವುದಿಲ್ಲ ಎಂದು ತಿಳಿಸಿದ್ದಾನೆ.[೬] ಬಹುಶಃ ಅವನು ಗೂಳಿಗಳನ್ನು ಅಥವಾ ತುರುಮಂದೆ ದನಗಳನ್ನು ಈ ರೀತಿ ಬಣ್ಣಿಸಿರಬೇಕು. ಇಲ್ಲವೇ ಬೀದಿಗಳಲ್ಲಿರುವ ಪೋಲಿ ದನಗಳನ್ನು ಹೆಸರಿಸಿರಬೇಕು. ಒಟ್ಟಾರೆ ಆಕಳುಗಳು ಅಧಿಕ ಸಂಖ್ಯೆಯಲ್ಲಿದ್ದವು ಎಂಬುದು ಗಮನಾರ್ಹ.

ಶ್ರೀಕೃಷ್ಣದೇವರಾಯನು ತನ್ನ ಕಾಲದಲ್ಲಿ ದೊರೆ, ದಳವಾಯಿಗಳು, ರಾಜನ ಪರವಾಗಿ ಬಂದ ಇತರ ವ್ಯಕ್ತಿಗಳಿಗೆ ಕುರಿ, ಕೋಳಿ, ಬೆಣ್ಣೆ, ಜೇನುತುಪ್ಪ ಇತ್ಯಾದಿ ವಸ್ತುಗಳನ್ನು ಕೊಡುತ್ತಿದ್ದನು. ಹಂಪೆ ರಾಜಧಾನಿಯ ಹೆಬ್ಬಾಗಿಲಿಗೆ ಹೊಂದಿಕೊಂಡಂತೆ ಎರಡು ದೇವಾಲಯಗಳಿಗೆ (ಪಟ್ಟಣದ ಯಲ್ಲಮ್ಮ!) ಕುರಿಗಳನ್ನು ಕಡಿಯಲಾಗುತ್ತದೆ. ಇಲ್ಲಿ ಬಿಟ್ಟರೆ ಇನ್ನೆಲ್ಲೂ ಕುರಿ ಕಡಿಯಲಾಗುತ್ತಿರಲಿಲ್ಲ. ಅವುಗಳ ರಕ್ತವನ್ನು ದೇವಾಲಯದಲ್ಲಿನ ಮೂರ್ತಿಗಳಿಗೆ ನೈವೇದ್ಯ ಮಾಡುತ್ತಾರೆ. ತಲೆಗಳನ್ನು ಅವನಿಗೆ ಬಿಡಲಾಗುತ್ತದೆ ಮತ್ತು ಪ್ರತಿಯೊಂದು ಕುರಿಗೆ ಒಂದು ಚಕ್ರಮ್ (?) ಕೊಡುತ್ತಾರೆ (ಇದೊಂದು ರೀತಿಯಲ್ಲಿ ನಾಣ್ಯಡಾಟಿಲ್ಲಾ ಎನ್ನುತ್ತಾರೆ). ಈ ಪಶುಬಲಿಯ ಸಮಯಕ್ಕೆ ಅಲ್ಲೊಬ್ಬ ಆ ದೇವಾಲಯದ ಮೇಲ್ವಿಚಾರಣೆಯಲ್ಲಿ ಉಪಸ್ಥಿತನಿದ್ದು ಕುರಿ ಅಥವಾ ಆಡಿನ ತಲೆ ಕಡಿದುಸಲಕ್ಕೊಮ್ಮೆ

ಮೂರ್ತಿ ಆ ಬಲಿಯನ್ನು ಸ್ವೀಕರಿಸುವುದರ ಸಂಕೇತವಾಗಿ ಕೊಂಬು ಊದುತ್ತಾನೆ (ಕಹಳೆ). ವಿಜಯನಗರದ ರಾಜಧಾನಿಯಲ್ಲಿ ಪ್ರತಿ ಶುಕ್ರವಾರ ಸಂತೆ ಆಗುತ್ತಿತ್ತು. ಅಂದು ಹಂದಿ, ಕೋಳಿ, ಮೀನು ಮೊದಲಾದವು ಮಾರಾಟವಾಗುತ್ತಿದ್ದವು. ಹಣ್ಣು-ಹಂಪಲು, ನಿಂಬೆ, ಕಿತ್ತಾಳೆ, ವಜ್ರ, ವಸ್ತುಗಳ ವ್ಯಾಪಕ ಮಾರುಕಟ್ಟೆಯಲ್ಲಿ ಕವುಜುಗ, ಲಾವಕ್ಕಿ, ಮೊಲ ಇತರ ಪಕ್ಷಿ ಬೇಟೆ ಪ್ರಾಣಿಗಳನ್ನು ಮಾರುತ್ತಿದ್ದರು. ಕುದುರೆ ಎತ್ತುಗಳು ನದಿಯನ್ನು ಈಜಿ ದಾಟುತ್ತಿದ್ದವು. ಇವು ಒಮ್ಮೊಮ್ಮೆ ದೋಣಿಗಳಲ್ಲಿಯು ದಡ ಸೇರುತ್ತಿದ್ದವು.

ವಿಜಯನಗರದ ಕೇಂದ್ರಸ್ಥಳದಲ್ಲಿ ಜೀವಂತ ಕುರಿಗಳನ್ನು ಮಾರುವ ಕುರಿ ಮಾರ್ಕೆಟ್ ಇತ್ತು. ಇಲ್ಲಿನ ಆಕಳುಗಳು ಮತ್ತು ಎಮ್ಮೆಗಳು ಸುಂದರವಾಗಿದ್ದವು. ಆಡು-ಮರಿ ಮತ್ತು ಟಗರುಗಳಿದ್ದು ಲಗಾಮು ಜೀನು ತೊಡಿಗಿಸಲಾಗುತ್ತಿತ್ತು. ಹುಡುಗರು ಅವುಗಳ ಮೇಲೆ ಕುಳಿತು ನಡೆಸುತ್ತಾರೆ.[೧೦] ಕೋಣ, ಕಾಯಿಪಲ್ಯೆಗಳು, ಗಿಡ, ತೋಟ, ಕಟ್ಟಡ, ಜನರ ರುಚಿಗಳ ಬಗ್ಗೆ ವಿದೇಶಿ ಪ್ರವಾಸಿಗರು ತಿಳಿಸಿದ್ದಾರೆ.

ಒಂದು ವಾರ ನಡೆಯುವ ಹಬ್ಬದಲ್ಲಿ (ಫಲಪೂಜೆ ಅಥವಾ ಮಹಾನವಮಿ) ೨೪ ಕೋಣ, ೧೫೦ ಕುರಿಗಳ ವಧೆಯನ್ನು ವೀಕ್ಷಿಸುತ್ತಾನೆ. ಈ ಕೋಣ, ಕುರಿಗಳ ರುಂಡಗಳನ್ನು ಕೆಲವು ದೊಡ್ಡ ಮಚ್ಚುಗತ್ತಿಗಳಿಂದ ಒಂದೇ ಹೊಡೆತಕ್ಕೆ ಕತ್ತರಿಸುತ್ತಾರೆಂಬುದನ್ನು ನೀವು ತಿಳಿಯಬೇಕೆಂದು ಡೊಮಿಂಗ್‌ಫಯಾಜ್ ತಿಳಿಸುತ್ತಾನೆ.[೧೧]

ಪ್ರಾಣಿಗಳ ನಡುವೆ ಕಾಳಗವನ್ನು ಏರ್ಪಡಿಸಲಾಗುತ್ತಿತ್ತು (ಟಗರಿನ ಕಾಳಗ). ಓಣಿ, ಬಜಾರಗಳಲ್ಲಿ ದಳವಾಯಿಗಳ ಪಡೆಗೆ ತನ್ನದೆ ಮಾರುಕಟ್ಟೆ ಇತ್ತು. ಅಲ್ಲಿ ಕುರಿ, ಕೋಳಿ, ಆಡು, ಹಂದಿ, ಮೊಲ, ಕವುಜಗ ಮತ್ತು ಇತರ ಹಕ್ಕಿಗಳು ಮುಂತಾದವುಗಳ ಮಾಂಸ ಯಥೇಚ್ಛವಾಗಿ ದೊರೆಯುತ್ತಿತ್ತು. ಎಷ್ಟು ಯಥೇಚ್ಛವೆಂದರೆ ನೀವು ವಿಜಯನಗರದ (ಭಿನ್ನಗದವನಗರ)ದಲ್ಲಿದ್ದಂತೆಯೇ ಭಾಸವಾಗುತ್ತಿತ್ತು. ಇತರ ಕಾಳುಗಳ ಅನೇಕಾನೇಕ ಜಾತಿಗಳು ದೊರಕುತ್ತಿದ್ದವೆಂದು ತಿಳಿಸಲಾಗಿದೆ.

ವಿಜಯನಗರದ ರಾಜರು ಎಲ್ಲ ತರಹದ ಭಕ್ಷ್ಯ ತಿನ್ನುತ್ತಿದ್ದರಾದರೂ, ಎತ್ತು ಅಥವಾ ಆಕಳಿನ ಮಾಂಸ ತಿನ್ನುತ್ತಿರಲಿಲ್ಲ. ಇವುಗಳನ್ನು ಅವರು ಪೂಜಿಸುತ್ತಿದ್ದರಿಂದ ಈ ವಿಧರ್ಮೀಯರ ದೇಶದಲ್ಲಿ ಎಲ್ಲೂ ಅವುಗಳನ್ನು ಎಂದು ಕೊಲ್ಲುತ್ತಿರಲಿಲ್ಲ. ಅವರು ಕುರಿ, ಹಂದಿ, ಚಿಗರಿ, ಮೊಲಗಳ ಮಾಂಸವನ್ನು ಮತ್ತು ಕವುಜಗ, ಪಾರಿವಾಳ, ಲಾವಕ್ಕಿ, ಇತರ ಎಲ್ಲ ಬಗೆಯ ಹಕ್ಕಿ, ಗುಬ್ಬಿಗಳ ಮಾಂಸವನ್ನು ಜೊತೆಗೆ ಇಲಿ, ಬೆಕ್ಕು, ಉಡಗಳನ್ನು ಸಹಾ ತಿನ್ನುತ್ತಿದ್ದರೆಂದು ವಿದೇಶಿ ಪ್ರವಾಸಿ ಫರ್ನಾಓ ನ್ಯೂನಿಜ್ ಹೇಳಿದ್ದಾನೆ. ಮುಂದುವರೆದು ನ್ಯೂನಿಜ್ ವಿಜಯನಗರ ಸಾಮ್ರಾಜ್ಯದಲ್ಲಿ ಉತ್ಸವ, ಆಚರಣೆಗಳು ನಡೆಯುತ್ತಿದ್ದವು. ೯ ಮಂಟಪ, ೯ ಪ್ರಧಾನ ದಳವಾಯಿ, ನೃತ್ಯಗಾರ್ತಿಯರು ರಾಜನಿಗೆ ತೋರಿಸಲು ಬರುತ್ತಾರೆ. ೯ ದಿನಗಳ ಕಾಲ (ದಸರಾ?) ಅಧಿಕಾರಿಗಳ ಸಮ್ಮುಖದಲ್ಲಿ ಪ್ರಾಣಿಗಳನ್ನು ಬಲಿ ಕೊಡುತ್ತಾರೆ. ಮೊದಲ ದಿನ ೯ ಕೋಣ, ೯ ಕುರಿ ಮತ್ತು ೯ ಆಡುಗಳನ್ನು ಕೊಲ್ಲುತ್ತಾರೆ. ಹೀಗೆ ದಿನದಿಂದ

ದಿನಕ್ಕೆ ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋಗುತ್ತಾರಲ್ಲದೆ, ರಾಜನೊಂದಿಗೆ ಪ್ರಧಾನ ಅಶ್ವಪತಿ ಇರುತ್ತಾನೆ.

ಕೃಷ್ಣದೇವರಾಯನ ಪ್ರಧಾನ ಅಶ್ವಪತಿಯಾಗಿದ್ದ ಮಲಪನಾಯಕ (ರ್ಕ್) ಕಾಲೆಕು (ಕ್ಯಾಲಿಕಟ್)ದ ಒಳನಾಡಿನಲ್ಲಿರುವ ಅವಳಿ (ಕೋಲಾರ ಜಿಲ್ಲೆ ಮೊರಸುಒಕ್ಕಲು) ಪ್ರದೇಶದ ದೊರೆಯಾಗಿರುವನು. ಈ ನಾಡಿನಲ್ಲಿ ಕಬ್ಬಿಣ ಮತ್ತು ಹತ್ತಿ, ಭತ್ತ, ಆಡುಗಳು, ಕುರಿಗಳು, ಆಕಳುಗಳು ಮತ್ತು ಎಮ್ಮೆಗಳು ವಿಪುಲವಾಗಿದ್ದವೆಂದು, ಅವನಿಗೆ ೧೫ ಸಾವಿರ ಪರ್ದಾಒಗಳ ಆದಾಯವಿದೆ. ೪೦೦ ಕುದುರೆ ಮತ್ತು ೬೦೦೦ ಕಾಲಾಳುಗಳೊಂದಿಗೆ ಸೇವೆ ಮಾಡಲು ಬಾಧ್ಯಸ್ಥರು ಮತ್ತು ರಾಜನಿಗೆ ಪ್ರತಿ ವರ್ಷ ೫ ಸಾವಿರ ಪರ್ದಾಒಗಳನ್ನು ಕೊಡುತ್ತಾನೆಂದು ನ್ಯೂನಿಜ್ ತಿಳಿಸಿದ್ದಾನೆ. ಅಮರ ನಾಯಕರು ತಮ್ಮ ಶಕ್ತಿ ಮೀರಿ ರಾಜನಿಗೆ ಸಹಕರಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಇಡೀ ಸಾಮ್ರಾಜ್ಯ ಸಂಪತ್ತು ಯಾವುದೇ ಒಬ್ಬ ವ್ಯಕ್ತಿಯಲ್ಲಿ ಕೇಂದ್ರೀಕೃತವಾಗಿರಲಿಲ್ಲ. ಅದು ಹಂಚಿ ಹೋಗಿತ್ತು. ಅಂದು ಜನಸಾಮಾನ್ಯರು ತಾನು ರೂಢಿ-ಸಂಪ್ರದಾಯಗಳನ್ನು ಯಾರ ಒತ್ತಡಕ್ಕೂ ಬದಲಿಸಿಕೊಂಡಿಲ್ಲವೆಂಬಂತೆ ತಿಳಿಯುತ್ತದೆ. ವಿಜಯನಗರದಲ್ಲಿ ಬ್ರಾಹ್ಮಣರು, ಶ್ರೇಷ್ಠರು ಒಬ್ಬನೇ ದೇವರಾದ ತ್ರಿಮೂರ್ತಿಯನ್ನು ಪೂಜಿಸುತ್ತಾರೆ. ಕನ್ನಡದವರಾದ ಇನ್ನೊಂದು ವರ್ಗವಿದೆ. ಅವರ ದೇವಾಲಯಗಳಲ್ಲಿ ಮಂಗಗಳು, ಆಕಳುಗಳು, ಎಮ್ಮೆಗಳು ಮತ್ತು ರಾಕ್ಷಸರಿಗೆ (ವಿಗ್ರಹ) ಅವರು ಭಕ್ತಿ ತೋರಿಸುತ್ತಾರೆ. ಮಂಗಗಳನ್ನು ಇಲ್ಲಿ ಕೊಲ್ಲುವುದಿಲ್ಲ. ವಿಜಯನಗರದ ಬ್ರಾಹ್ಮಣರು ಮತ್ತು ಈ ಜನರ ಕಟ್ಟಳೆಗಳಿದ್ದವು. ಆಕಳುಗಳಿಗೆ ಭಕ್ತಿ ತೋರುತ್ತಿದ್ದರು. ದಿನಾಲು ಅವುಗಳನ್ನು ಪೃಷ್ಠದ ಮೇಲೆಂದು (ಹೇಳಲಾಗುತ್ತದೆ. ಅವರ ಮರ್ಯಾದೆಗಾಗಿ ಈ ಸಂಗತಿಯನ್ನು ಒತ್ತಿ ಹೇಳುವುದಿಲ್ಲ) ಚುಂಬಿಸುತ್ತಾರೆ. ಈ ಆಕಳುಗಳ ಸಗಣಿಯಿಂದ, ಪವಿತ್ರ ಜಲವೆಂಬಂತೆ ಅವರು ತಮ್ಮ ಪಾಪಗಳನ್ನು ಮಾರ್ಜನ ಮಾಡಿಕೊಳ್ಳುತ್ತಾರೆ. ಬ್ರಾಹ್ಮಣ ಪುರೋಹಿತರಿಗೆ ತಮ್ಮ ಪಾಪಗಳನ್ನು ನಿವೇದಿಸಬೇಕೆಂಬ ಕಟ್ಟಳೆಯೊಂದಿದೆ ಎಂದು ನ್ಯೂನಿಜ್ ತಿಳಿಸುತ್ತಾನೆ.

ಒಟ್ಟಾರೆ ಹೇಳುವುದಾದರೆ, ವಿಜಯನಗರ ಪೂರ್ವದಲ್ಲಿದ್ದ ಪಶುಪಾಲನೆಗೂ ಈ ಕಾಲಕ್ಕೂ ಸಾಕಷ್ಟು ವ್ಯತ್ಯಾಸವಿತ್ತು. ವಿಜಯನಗರ ಪೂರ್ವದಲ್ಲಿ ಗೋವುಗಳ ಕಳ್ಳತನ, ಗೋಗ್ರಹಣ ನಡೆದ ಅನೇಕ ಪ್ರಸಂಗಗಳಿವೆ (ಕುರುಗೋಡು, ಗಾದಿಗನೂರು, ಪಾಪಾನಾಯಕನಹಳ್ಳಿ). ವಿಜಯನಗರ ಕಾಲಕ್ಕೆ ಸುಧಾರಣೆ ಕಂಡುಬರುತ್ತದೆ. ಪಶುಪಾಲನೆ ಜೊತೆ ಜೊತೆಗೆ ಇಲ್ಲಿ ಕೃಷಿಯನ್ನು ಅವಲಂಬಿಸಿದ್ದರಿಂದ ಗೋವುಗಳ ಸಾಕಾಣಿಕೆ ಸ್ಪರ್ಧೆ ಇಳಿಮುಖವಾದಂತಾಯಿತು. ಆದರೂ 'ಗೋವು'ಗೆ ಪೂಜ್ಯನೀಯ ಸ್ಥಾನವಿತ್ತು. ಅರಸನಿಗೆ ಸ್ವಂತ ಗೋವುಗಳಿಲ್ಲದಾಗ ಇನ್ನೊಬ್ಬರಿಂದ ಅದನ್ನು ಖರೀದಿಸಿ, ಪುರೋಹಿತರಿಗೆ, ಕುಶಲಕರ್ಮಿಗಳಿಗೆ ಕೊಡುತ್ತಾನೆ. ದನಗಳಿಗೆ ಕಾಯುವ ಮತ್ತು ಹುಲ್ಲುಗಾವಲಿನಲ್ಲಿನ (ಕಾಯ್ದಿಟ್ಟ) ಪ್ರದೇಶಕ್ಕೆ ಪ್ರವೇಶಿಸಲು ತೆರಿಗೆ ಕೊಡಬೇಕಾಗಿತ್ತು. ದೇವತೆಗಳಿಗೆ ಕುರಿ,

ದನಗಳನ್ನು ಬಲಿ ಕೊಡುವ ಅಮಾನವೀಯ ಕೃತ್ಯವನ್ನು ಇಲ್ಲಿ ಕಾಣಬಹುದು. ಎತ್ತು, ಎಮ್ಮೆ, ದನಗಳನ್ನು ಸಂತೆಯಲ್ಲಿ ಮಾರಾಟ ಮಾಡುತ್ತಿದ್ದದ್ದು ಅಂದಿನ ಆರ್ಥಿಕ ವಹಿವಾಟನ್ನು ಸಂಕೇತಿಸುತ್ತದೆ. ಸದಾ ಅರಸರ ಪ್ರೋತ್ಸಾಹ ಪಶುಪಾಲನೆ ಬಗೆಗೆ ಇದ್ದುದರಿಂದಲೇ ಸಾಮ್ರಾಜ್ಯದಲ್ಲಿ ಮಕ್ಕಳಿಗೆ ಹಾಲು, ಮೊಸರು, ಮಜ್ಜಿಗೆ, ತುಪ್ಪದ ಕೊರತೆ ಕಡಿಮೆ ಇದ್ದಿರಬೇಕು. ಈ ಕಾರಣವಾಗಿ ಜನರು ಈ ವ್ಯವಸ್ಥೆಗೆ ಬೆಂಬಲಿಸಿ ಒಗ್ಗಿಕೊಂಡಿದ್ದರು. ಪಶುಪಾಲನೆಗೆ, ಪಶುಪಾಲಕರಿಗೆ ಅರಸರು ವಿಶೇಷ ಪ್ರೋತ್ಸಾಹ ನೀಡಿದ್ದರಿಂದ ಆ ಕ್ಷೇತ್ರ ಸಮೃದ್ಧವಾಗಿರಲು ಸಾಧ್ಯ. ವಿಜಯನಗರ ಕಾಲಕ್ಕೆ ಗೋವುಗಳ ಆರೋಗ್ಯ ಸುಧಾರಣೆ ಆಗಿತ್ತು. ಕ್ರಿ.ಶ. ೧೧೦೦ ರಲ್ಲಿ ಕೀರ್ತಿವರ್ಮನು ರಚಿಸಿದ ಗೋವೈದ್ಯಮು ಎಂಬ ಗ್ರಂಥವನ್ನು ಪಶುವೈದ್ಯಮು ಎಂದು ಕ್ರಿ.ಶ. ೧೪೦೦ರಲ್ಲಿ ತೆಲುಗು ಭಾಷೆಗೆ ನಾರಣ ಮಂತ್ರಿಯಿಂದ ಭಾಷಾಂತರಗೊಂಡಿತು. ಪಶುಪಾಲನೆಯ ದೊಡ್ಡಿ-ಹಟ್ಟಿ, ಮಂದೆ (ಎತ್ತುಗಳ ಹಟ್ಟಿ, ದನಗಳ ಹಟ್ಟಿ, ಕರುಗಳ ಹಟ್ಟಿ, ದೇವರೆತ್ತಿನ ಹಟ್ಟಿ, ಕುರಿಹಟ್ಟಿ, ಕರಡಿಹಳ್ಳಿ ಎಂಬ ಗ್ರಾಮಗಳು ತುಂಗಭದ್ರಾ-ವೇದಾವತಿ ನದಿಗಳ ಮಧ್ಯಭಾಗದಲ್ಲಿ ಕಂಡುಬರುತ್ತವೆ). ತುಂಗಭದ್ರಾ ತೀರದಲ್ಲಿನ ಕ್ಷೇತ್ರಗಳು ಹೆಚ್ಚಾಗಿ ಈ ವ್ಯವಸ್ಥೆಗೆ ಸಂಬಂಧಿಸಿವೆ. ಈ ಪರಿಸರವನ್ನು ಅಧ್ಯಯನ ಮಾಡಿದರೆ, ವಿಜಯನಗರ ಕಾಲದಲ್ಲಿ ಪಶುಪಾಲನೆ ಲಾಭದಾಯಕ ವೃತ್ತಿಯಾಗಿತ್ತು. ಪಶುಗಳ ಹಾಲು, ಸಗಣಿ, ಗೋಮೂತ್ರ, ಕೊಂಬು, ಚರ್ಮ, ಗೋರಂಜಕ ಮೊದಲಾದ ಭಾಗಗಳಿಂದ ಅದು ಮಹತ್ವ ಪಡೆದು ಆರ್ಥಿಕ ಮಟ್ಟವನ್ನು ಸುಧಾರಿಸಿತ್ತು. ಸಾಮಾಜಿಕ, ಧಾರ್ಮಿಕ, ಆರ್ಥಿಕ ನೆಲೆಯಲ್ಲಿ ಪಶುಪಾಲನೆ ವಿಜಯನಗರ ಕಾಲದ ಮಟ್ಟಿಗೆ ಪರಿವರ್ತನೆ ತಂದಿದ್ದು ಗಮನಾರ್ಹ. ವಿಜಯನಗರ ಕಾಲದ ನೂರಾರು ಕೆರೆ-ಕಟ್ಟೆಗಳು ಸಹಸ್ರಾರು ಬಾವಿಗಳಲ್ಲದೆ, ಕೃಷ್ಣ, ಕಾವೇರಿ, ವೇದಾವತಿ, ಚಿನ್ನಹಗರಿ, ತುಂಗಭದ್ರಾ, ಗೋದಾವರಿ ಮೊದಲಾದ ನದಿ ಬಯಲುಗಳು ಪಶುಪಾಲನೆಗೆ ಹಾಸುಹೊಕ್ಕಾದ ಪರಿಸರ ನಿರ್ಮಿಸಿದ್ದವು. ಹುಲ್ಲುಗಾವಲು (ಮುತ್ತಿಗಾರಹಳ್ಳಿ), ಬೆಟ್ಟ-ಗುಡ್ಡ, ಕಾಡನ್ನು ಸಹಾ ಪಶುಪಾಲನೆಗೆ ಮೀಸಲಿಟ್ಟ ಉದಾಹರಣೆಗಳಿವೆ. ಇಂಥ ಅಧ್ಯಾಯವೊಂದು ವಿಜಯನಗರದ ಸಾಂಸ್ಕೃತಿಕ ಇತಿಹಾಸದಿಂದ ಕಣ್ಮರೆಯಾಗಿತ್ತು. ಪ್ರಭುತ್ವಕ್ಕೆ ಮಹತ್ವಕೊಟ್ಟ ಬರವಣಿಗೆಗಳು ಪಶುಪಾಲನೆಯಂಥ ಕ್ಷೇತ್ರವನ್ನು ಅಲಕ್ಷಿಸಿತ್ತು. ಸಾಮಾನ್ಯ ಪ್ರಜೆಗಳು ಬೇಟೆ, ಪಶುಪಾಲನೆ ಮತ್ತು ಕೃಷಿ - ಈ ಮೂರು ವೃತ್ತಿಗಳಲ್ಲಿ ದುಡಿದು ತಮ್ಮ ಅನುಪಮ ಸೇವೆಯನ್ನು ಅರ್ಪಿಸಿದ್ದಾರೆ. ಇಂದು ಗೋವನ್ನು ರಾಷ್ಟ್ರೀಯ ಚಿನ್ಹೆಯಾಗಿ ಬಿಂಬಿಸಲಾಗುತ್ತದೆ. ಅಂದರೆ ಮುಸ್ಲಿಂಮರು ಗೋವನ್ನು ಹತ್ಯೆ (ಗೋಹತ್ಯೆ) ಮಾಡುತ್ತಾರೆ, ಮಾರಣಹೋಮ ನಡೆಯುತ್ತದೆ. ಇದು ನಿಲ್ಲಬೇಕೆಂದು ಹಿಂದೂ ಸಂಘಟನೆಗಳು ಕೋರುತ್ತವೆ. ವಾಸ್ತವವಾಗಿ ಗೋವನ್ನು ಆರಂಭದಲ್ಲಿ ಎಲ್ಲ ಜನಾಂಗಗಳು ಸೇವಿಸಿವೆ. ಪರಿವರ್ತನೆಗೊಂಡ ಸಂದರ್ಭಕ್ಕೆ ಗೋವು ಪವಿತ್ರ (ಧಾರ್ಮಿಕ ಭಾವನೆ) ಪ್ರಾಣಿಯಾಗಿ ಇಂದು ಜನಮನದಲ್ಲಿ ತುಂಬಿ ಹೋಗಿದೆ. ವಿಜಯನಗರ ಕಾಲದಲ್ಲೂ ಗೋವು ಪೂಜ್ಯನೀಯ ಪ್ರಾಣಿಯಾಗಿತ್ತಲ್ಲದೆ, ಭಕ್ಷ್ಯಕ್ಕೂ ಸ್ವೀಕಾರವಾಗಿತ್ತು.



ಪಶುಪಾಲಕ ದಂಪತಿಗಳು, ಗಂಜಿಗಟ್ಟೆ



ಪಶುಪಾಲಕ ವೀರ, ಗಂಜಿಗಟ್ಟೆ

ಅಡಿ ಟಿಪ್ಪಣಿಗಳು

೧. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಸನ್ ವಾ.IX, ಭಾಗ II, ಪು.೪೪೭

೨. ಅದೇ: ಪು.೪೪೬

೩. ರಾಯಚೂರು ಜಿಲ್ಲೆ ಶಾಸನ ಸಂಪುಟ, ಮಾನ್ವಿ ೧೯, ಕ.ವಿ.ಹಂ.ಪ್ರಸಾರಾಂಗ.

೪. ಈ ಶಾಸನವನ್ನು ಗೋಬಳಿಯ ಬಾವಿಯ ಸೇನಬೋವನು ಬರೆದನು ಮತ್ತು ದೇಯೋಜನು ಕಂಡರಿಸಿದನು.

೫. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಸಂ. ೩೮೬

೬. ಅದೇ: ಸಂ. ೩೨೬

೭. ಇತಿಹಾಸದರ್ಶನ - ೧೩, ೧೯೯೮, ಪು.೧೯-೨೦

೮. ಹೆಚ್ಚಿನ ಓದಿಗೆ ನೋಡಿ: ಡಾ. ವಿರೂಪಾಕ್ಷಿ ಪೂಜಾರಹಳ್ಳಿ: ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪ್ರಸಾರಾಂಗ, ಕ.ವಿ.ಹಂ. ೨೦೦೨

೯. ರಾಬರ್ಟ್‌ಸಿವೆಲ್: ಮರೆತು ಹೋದ ಮಹಾಸಾಮ್ರಾಜ್ಯ: ವಿಜಯನಗರ (ಅನು: ಸದಾನಂದ ಕನವಳ್ಳಿ) ೧೯೯೨, ಪು.೨೬೦

೧೦. ಸಿವೆಲ್: ೨೭೮

೧೧. ಅದೇ: ಪು. ೨೮೩

೧೨. ಅದೇ: ಪು. ೩೫೪

❖ ❖

೨೬

ಭುವನಗಿರಿ-ಶಿವಮೊಗ್ಗ ಜಿಲ್ಲೆಯ ಹಂಪೆ?

ಡಾ. ಎಸ್.ಜಿ.ಸಾಮಕ್

ಕ್ರಿ.ಶ. ೧೩೩೬ರಲ್ಲಿ ಹರಿಹರ ಮತ್ತು ಬುಕ್ಕರಾಯರಿಂದ ಸ್ಥಾಪಿಸಲ್ಪಟ್ಟ ವಿಜಯನಗರ ಒಂದು ಬೃಹತ್ ಸಾಮ್ರಾಜ್ಯವಾಗಿ ಬೆಳೆಯಿತು. ಒಂದೆಡೆ ಅದನ್ನು ಆಳಿದ ರಾಜ, ಮಹಾರಾಜರ ಸಾಮರ್ಥ್ಯ ಕಾರಣವಾದರೆ ಮತ್ತೊಂದೆಡೆ ಸಾಮ್ರಾಜ್ಯದ ಅಧೀನದಲ್ಲಿದ್ದ ಅನೇಕ ಸಣ್ಣಪುಟ್ಟ ಪಾಳೆಪಟ್ಟುಗಳು ಕೂಡಾ ಕಾರಣವಾಗಿವೆ. ಈ ಪಾಳೆಪಟ್ಟುಗಳು ತಮ್ಮ ಸಾಮ್ರಾಟರ ಆಶೋತ್ತರಗಳನ್ನು ಶಿರಸಾವಹಿಸಿ, ಸ್ವಸಾಮರ್ಥ್ಯದಿಂದ ವಿಜಯನಗರ ಸಾಮ್ರಾಜ್ಯದ ಏಳಿಗೆಗೆ ಸಹಕರಿಸಿ ಎಲೆಮರೆಯ ಕಾಯಿಗಳಂತೆ ಬದುಕಿ ಮರೆಯಾಗಿವೆ. ಅಂತಹಾ ಒಂದು ಪಾಳೆಪಟ್ಟು ಕೆಳದಿ ಅರಸೊತ್ತಿಗೆ.

ಕ್ರಿ.ಶ. ೧೪೯೯ರಲ್ಲಿ ಇಂದಿನ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಪಳ್ಳಿಯ ಬಯಲಿನಲ್ಲಿ ಚೌಡಪ್ಪ ಮತ್ತು ಭದ್ರಪ್ಪರಿಂದ ಸಣ್ಣಪ್ರಮಾಣದಲ್ಲಿ ಆರಂಭಗೊಂಡ ಈ ಅರಸೊತ್ತಿಗೆಯ ದೊರೆಗಳು, ವಿಜಯನಗರದ ನಂಬುಗೆಯ ಬಂಟರಾಗಿ, ಸಾಮ್ರಾಟರ ಸೇವೆ ಮಾಡಿ, ಬಹುಬೇಗ ಪ್ರವರ್ಧಮಾನಕ್ಕೆ ಬಂದು ಪ್ರಸಿದ್ಧಿಯನ್ನು ಹೊಂದಿದ್ದಾರೆ. ವಿಜಯನಗರದ ಕರಾವಳಿಯವರೆಗಿನ ದಕ್ಷಿಣಭಾಗವನ್ನು ತಮ್ಮ ಶಕ್ತಿ ಸಾಮರ್ಥ್ಯದಿಂದ ಆಳ್ವಿಕೆ ನಡೆಸಿ, ಸಾಮ್ರಾಜ್ಯದ ಸುಭದ್ರತೆಗೆ ಕಾರಣೀಭೂತರಾಗಿದ್ದಾರೆ. ಮುಂದೆ ತಾಳಿಕೋಟೆ ಕದನದ ತರುವಾಯ ವಿಜಯನಗರ ಪತನಗೊಂಡಾಗ ಅಳಿದುಳಿದ ರಾಜಮನೆತನದವರಿಗೆ ಆಶ್ರಯನೀಡಿ ತಮ್ಮ ಸ್ವಾಮಿಭಕ್ತಿಯನ್ನು ಮೆರೆದಿದ್ದಾರೆ.

ಪ್ರಾರಂಭದಿಂದಲೂ ವಿಜಯನಗರದ ಆಶೀರ್ವಾದ ಹಾಗೂ ನೆರಳಿನಲ್ಲಿ ಬೆಳೆದುಬಂದ ಈ ಅರಸೊತ್ತಿಗೆ ಆ ಮಹಾ ಸಾಮ್ರಾಜ್ಯದ ಎಲ್ಲಾ ಉದಾತ್ತ ಗುಣಗಳನ್ನು ತನ್ನಲ್ಲಿರಿಸಿಕೊಂಡು, ಸ್ವತಂತ್ರಾ ನಂತರವೂ ಅವುಗಳನ್ನು ತನ್ನದೆ ಆದ ಶೈಲಿಯಲ್ಲಿ ಮುಂದುವರೆಸಿಕೊಂಡು

ಹೋಗಿರುವುದು ಸರ್ವವಿದಿತ. ಆ ಕಾಲದ ಸಾಹಿತ್ಯ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪ ಅವೆಲ್ಲವುಗಳಲ್ಲಿ ವಿಜಯನಗರದ ಪ್ರಭಾವಗಳನ್ನು ಕಾಣಬಹುದು.

ಈ ಕಿರು ಪ್ರಬಂಧದಲ್ಲಿ ಕೆಳದಿ ಅರಸರ ಪ್ರಮುಖ ನಗರಗಳಲ್ಲಿ ಒಂದಾದ ಭುವನಗಿರಿದುರ್ಗದಲ್ಲಿರುವ ವಿಜಯನಗರೋತ್ತರ ಕಾಲದ ಕಲೆ ಮತ್ತು ವಾಸ್ತು ಶಿಲ್ಪವನ್ನು ವಿಜಯನಗರದ ಪ್ರಭಾವದಡಿಯಲ್ಲಿ ಅವಲೋಕಿಸಲಾಗಿದೆ.

ಭುವನಗಿರಿದುರ್ಗ ಅಥವಾ ಕವಲೇದುರ್ಗ, ಇಂದಿನ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ತೀರ್ಥಹಳ್ಳಿ ಪಟ್ಟಣದಿಂದ ಸುಮಾರು ೨೨ ಕಿ.ಮೀ. ದೂರದಲ್ಲಿ ಹಾಗೂ ಆರಗ (ವಿಜಯನಗರ ಕಾಲದ ಆರಗ-ಗುತ್ತಿ ಪ್ರದೇಶದ ರಾಜಧಾನಿ) ದಿಂದ ೬ ಕಿ.ಮೀ. ದೂರದಲ್ಲಿದೆ. ಕೆಳದಿ ದೊರೆ ವೆಂಕಟಪ್ಪನಾಯಕನು (೧೫೫೨-೧೬೨೯), ತೊಲೆ ತಮ್ಮ, ಮಂಡಿಗೆ ತಮ್ಮರೆಂಬ ಗ್ರಾಮಾದಿಪತಿ ಸಹೋದರರನ್ನು ಸೋಲಿಸಿ ಕೋಟೆ, ಅರಮನೆ, ದೇವಾಲಯ, ಅಗ್ರಹಾರ ಮುಂತಾದವುಗಳನ್ನು ಸ್ಥಾಪಿಸದನೆಂದು ಕೆಳದಿ ನೃಪವಿಜಯದಲ್ಲಿ ಉಲ್ಲೇಖಿಸಲಾಗಿದೆ. ಈತ ವಿಜಯನಗರದ ಅಧೀನತೆಯನ್ನು ಕಳಚಿಕೊಂಡ ಪ್ರಥಮ ಕೆಳದಿ ದೊರೆ. ತಾನು ಮಾಂಡಲೀಕನಾಗಿದ್ದಾಗ ವಿಜಯನಗರದ ರಾಜಧಾನಿಯ ಪರಿಚಯವನ್ನು ಚೆನ್ನಾಗಿ ಬಲ್ಲವನಾಗಿದ್ದ. ಈತ ತನ್ನ ರಾಜ್ಯದಲ್ಲೊಂದು ಪ್ರತಿ ಹಂಪೆಯನ್ನು ನಿರ್ಮಿಸುವ ಇಚ್ಛೆಯಿಂದ ಭುವನಗಿರಿದುರ್ಗವನ್ನು ಅಭಿವೃದ್ಧಿಪಡಿಸಿದ್ದಾನೆ. ಮಹಾಭಾರತ ಕಾಲದಲ್ಲಿ ಕಾಮ್ಯಕವನವಾಗಿತ್ತು ಈ ಪ್ರದೇಶ. ಕೌಲಿಯಂಬ ಗ್ರಾಮದಲ್ಲಿ ಈ ಕೋಟೆ ಇದ್ದ ಕಾರಣ ಇದಕ್ಕೆ ಕೌಲೆದುರ್ಗವೆಂಬ ಹೆಸರು ಬಂದಿದೆ. ಮುಂದೆ ಹೈದರಾಲಿ ಇದನ್ನು ವಶಪಡಿಸಿಕೊಂಡಮೇಲೆ ಕಾವಲುದುರ್ಗವೆಂದು ಹೆಸರಿಸಿದ್ದಾನೆ. ಕೆಳದಿ ಅರಸರು ಇದನ್ನು ತಮ್ಮ ವಶಕ್ಕೆ ತೆಗೆದುಕೊಂಡಮೇಲೆ ಭುವನಗಿರಿದುರ್ಗವೆಂತಲೂ ಅವರಿಗೆ ಅನೇಕ ಪ್ರಸಂಗಗಳಲ್ಲಿ ರಕ್ಷಣಾ ತಾಣವಾಗಿ ಆಶ್ರಯನೀಡಿ ಕಾಪಾಡಿದೆ. ಉದಾಹರಣೆಗೆ ದೊರೆ ವೀರಭದ್ರನಾಯಕನ ಕಾಲದಲ್ಲಿ (೧೬೨೯-೧೬೪೫) ರಣಧುಲ್ಲಾಖಾನನು ದಾಳಿಮಾಡಿದಾಗ ದೊರೆ ಇಲ್ಲಿಗೆ ಬಂದು ಆಶ್ರಯಪಡೆದು, ನಂತರ ಖಾನನೊಡನೆ ಸಂಧಿಮಾಡಿಕೊಂಡಿದ್ದಾನೆ. ಭದ್ರಪ್ಪನಾಯಕನ ಕಾಲದಲ್ಲಿ (೧೬೬೨-೧೬೬೪) ಬಿಜಾಪುರದ ೨ನೇ ಆದಿಲ್ ಶಾ ಬಿದನೂರನ್ನು ಆಕ್ರಮಿಸಿದಾಗ ದೊರೆಗೆ ಆಶ್ರಯ ಕೊಟ್ಟಿದ್ದು ಈ ದುರ್ಗವೇ. ತನ್ನ ಪತಿ ಸೋಮಶೇಖರನಾಯಕನ ಮರಣದ ತರುವಾಯ ಕೆಳದಿ ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ಉಂಟಾದಾಗ ರಾಣಿ ಚೆನ್ನಮ್ಮಾಜಿ ತನ್ನ ಕೆಲವೇ ಕೆಲವು ಆಪ್ತರೊಡನೆ ಭುವನಗಿರಿದುರ್ಗಕ್ಕೆ ಬಂದು ೧೬೭೨ರಲ್ಲಿ ತನ್ನ ಪಟ್ಟಾಭಿಷೇಕವನ್ನು ಮಾಡಿಸಿಕೊಂಡಿದ್ದಾಳೆ. ಆಕೆ ಮೊಘಲರ ದೊರೆ ಔರಂಘಜೇಬನ ಬಲಿಷ್ಠ ಸೈನ್ಯವನ್ನು ಹಿಮ್ಮೆಟ್ಟಿಸಿದ್ದು ಇಲ್ಲಿಂದಲೇ. ಹೈದರ್ ನಂತರ ಮೈಸೂರರಸರ ವಶಕ್ಕೆ ಬಂದ ಕವಲೇದುರ್ಗ, ೧೮೮೧ರ ವರೆಗೆ ತಾಲೂಕು ಕೇಂದ್ರವಾಗಿತ್ತು. ಸಮುದ್ರ ಮಟ್ಟಕ್ಕಿಂತ ೩೦೮೫ ಅಡಿ ಎತ್ತರದಲ್ಲಿ, ಪಶ್ಚಿಮಘಟ್ಟದ ಒಂದು ಭಾಗವಾಗಿರುವ ಇದು ಕರಾವಳಿ ಹಾಗೂ ಬಯಲುಸೀಮೆಯ ನಡುವೆ ಸಂಪರ್ಕ ಕೊಂಡಿಯಂತಿದೆ.

ಭುವನಗಿರಿದುರ್ಗದಲ್ಲಿರುವ ಪ್ರಾಚ್ಯಾವಶೇಷಗಳನ್ನು ಮುಖ್ಯವಾಗಿ ಧಾರ್ಮಿಕ ಹಾಗೂ ಸಾಮಾಜಿಕ ಸ್ಮಾರಕಗಳೆಂದು ವಿಂಗಡಿಸಬಹುದು. ಧಾರ್ಮಿಕ ಸ್ಮಾರಕಗಳಲ್ಲಿ ದೇವಾಲಯ, ಮಸೀದಿ, ಮಠ ಮುಂತಾದವು ಪ್ರಮುಖವಾದರೆ, ಸಾಮಾಜಿಕ ಸ್ಮಾರಕಗಳಲ್ಲಿ ಕೋಟೆ, ಅರಮನೆ ಮುಂತಾದವುಗಳು ಮುಖ್ಯವಾಗಿವೆ. ಇಲ್ಲಿರುವ ಗಣಪತಿ, ವಿರೂಪಾಕ್ಷ, ಕಾಶಿವಿಶ್ವೇಶ್ವರ, ಮೈಲಾರೇಶ್ವರ, ಶಿಖರೇಶ್ವರ, ವಿಠಲ, ಸಂಜೀವ ಆಂಜನೇಯ, ಲಕ್ಷ್ಮೀನಾರಾಯಣ, ಲಕ್ಷ್ಮೀನರಸಿಂಹ, ಭುವನೇಶ್ವರಿ, ವೀರಭದ್ರ ಮುಂತಾದ ದೇವಾಲಯಗಳು ಸಮಕಾಲೀನ ವಾಸ್ತು ನಿರ್ಮಿತಿಯ ಪ್ರತಿನಿಧಿಗಳಂತಿವೆ. ಇಲ್ಲಿರುವ ಮಸೀದಿಯು ವೆಂಕಟಪ್ಪನಾಯಕನ ಕಾಲದಲ್ಲಿ ನಿರ್ಮಿಸಲ್ಪಟ್ಟಿದ್ದು, ಆತನ ಸರ್ವಧರ್ಮಸಮನ್ವಯತೆಯ ಪ್ರತೀಕವಾಗಿದೆ. ದುರ್ಗದ ತಿಮ್ಮಣ್ಣನು ಕಟ್ಟಿಸಿರುವ ಮಹತ್ತಿನ ಮಠ, ಭುವನಗಿರಿ ಸಂಸ್ಥಾನದ ಮಹಾಮಹತ್ತಿನ ಮಠವೆಂಬ ಹೆಸರಿನಲ್ಲಿ ಕೆಳದಿ ರಾಜಗುರುಗಳ ಪೀಠವಾಗಿದ್ದು, ಆ ಕಾಲದಲ್ಲಿದ್ದ ನೂರಾರು ಮಹತ್ತಿನ ಮಠಗಳಿಗೆ ಯಜಮಾನ ಮಠವಾಗಿತ್ತು. ಸಾಮಾಜಿಕ ಸ್ಮಾಕರಗಳಲ್ಲಿ ಪ್ರಮುಖವಾದ ಇಲ್ಲಿನ ಕೋಟೆ ಏಳು ಸುತ್ತಿನದ್ದಾಗಿದ್ದು ಮಿಶ್ರದುರ್ಗದ ವರ್ಗಕ್ಕೆ (ಗಿರಿ+ವನ) ಸೇರುತ್ತದೆ. ಮೊದಲನೇ ಸುತ್ತು ಕೌಲಿ ಗ್ರಾಮವನ್ನೂ ಹಾಗೂ ಉಳಿದ ಸುತ್ತು ದುರ್ಗವನ್ನು ಬಳಸಿವೆ. ಕೋಟೆ ಗೋಡೆಗಳು ೩೦ ಅಡಿ ಎತ್ತರವಿದ್ದು ಚೌಕಾಕಾರ ಅಥವಾ ಆಯತಾಕಾರದ ಕಣಶಿಲೆಯಿಂದ ನಿರ್ಮಿಸಲ್ಪಟ್ಟಿವೆ. ಪ್ರತಿಯೊಂದು ಸುತ್ತು ಪ್ರಮುಖ ಪ್ರವೇಶ ದ್ವಾರವನ್ನು ಹಾಗೂ ಒಳಭಾಗದಲ್ಲಿ ಕಾವಲುಗಾರರ ಚಾವಡಿಗಳನ್ನು ಹೊಂದಿವೆ. ಗೋಡೆಯ ಹಲವೆಡೆಯಲ್ಲಿ ಬುರುಜುಗಳನ್ನು ನಿರ್ಮಿಸಿ ಫಿರಂಗಿಗಳನ್ನಿಡುವ ವ್ಯವಸ್ಥೆ ಮಾಡಲಾಗಿದೆ. ನಾಲ್ಕನೇ ಕೋಟೆಯ ಒಳಭಾಗದಲ್ಲಿ ಕಾಶಿವಿಶ್ವೇಶ್ವರ, ಲಕ್ಷ್ಮೀನಾರಾಯಣ ದೇವಾಲಯಗಳು, ಎಣ್ಣೆಕೊಳ ಮುಂತಾದ ಸ್ಮಾರಕಗಳನ್ನು ಕಾಣಬಹುದು. ಐದನೇ ಕೋಟೆಯೊಳಗೆ ದಟ್ಟ ಕಾನನದ ಅರಮನೆ ಅವಶೇಷಗಳಿವೆ. ಇಲ್ಲಿ ೧೦೦ ಅಡಿ ಉದ್ದ, ೫೦ ಅಡಿ ಅಗಲದ ನೆಲಗಟ್ಟು, ಚದುರಿದ ವಿವಿಧ ಗಾತ್ರದ ಕಲ್ಲಿನ ಕಂಬಗಳು, ಈಜುಕೊಳ ಮುಂತಾದವು ಗತಕಾಲದ ಭವ್ಯ ಅರಮನೆಯ ಪಳಯುಳಿಕೆಗಳಾಗಿ ನಿಂತಿವೆ. ಸಮೀಪದಲ್ಲಿ ಉಯ್ಯಾಲೆ ಕಂಬ. ದುರ್ಗದ ಅತಿ ಎತ್ತರದಲ್ಲಿ ಕೋಡುಬಂಡೆಯ ಮೇಲೆ ನಿರ್ಮಿತವಾದ ಶಿಕರೇಶ್ವರ ದೇವಾಲಯದಿಂದ ಪಶ್ಚಿಮದ ಕರಾವಳಿಯ ಹಾಗೂ ಸೂರ್ಯಾಸ್ತದ ರಮಣೀಯ ದೃಶ್ಯವನ್ನು ಸವಿಯಬಹುದು. ಊರೊಳಗಿನ ಪ್ರಮುಖ ರಾಜಬೀದಿಯ ಎದುರಿನಲ್ಲಿ ಸಣ್ಣ ಗುಡ್ಡದ ಮೇಲಿರುವ ಕಲ್ಯಾಣಮಹಲ್ ಅರಮನೆ, ಕೆಳದಿ ದೊರೆಗಳು ನವರಾತ್ರಿ ಸಮಯದಲ್ಲಿ ಉತ್ಸವಕ್ಕೆ ಉಪಯೋಗಿಸುತ್ತಿದ್ದರೆಂದು ತೋರುತ್ತದೆ. ವಿಜಯದಶಮಿ ದಿನ ರಾಜ ನಾಲಕಿಯೆಂಬ ಪಲ್ಲಕ್ಕಿಯಲ್ಲಿ ಕುಳಿತು ವೈಭವದ ಮೆರವಣಿಗೆಯಲ್ಲಿ ಬನ್ನಿಮಂಟಪಕ್ಕೆ ಸಾಗಿ, ಪೂಜೆ ಸಲ್ಲಿಸಿ, ಈ ಅರಮನೆಗೆ ಬಂದು ಪ್ರಜೆಗಳೊಂದಿಗೆ ಅರಮನೆಯ ಮುಂಭಾಗದಲ್ಲಿರುವ ವಿಶಾಲವಾದ ಬಯಲಿನಲ್ಲಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದನೆಂದು ತೋರುತ್ತದೆ.

ಇದಲ್ಲದೇ ದುರ್ಗದ ಜನವಸತಿಯ ಉಪಯೋಗಕ್ಕಾಗಿ ವಿವಿದೆಡೆ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ದುರ್ಗದ ಮೇಲಿರುವ ಅರಮನೆಗೆ ಶಾಂತಗಂಗೆಯಿಂದ, ಮಹತ್ತಿನ ಮಠಕ್ಕೆ ಮಠದ ಕೆರೆಯಿಂದ ಹಾಗೂ ಊರಿಗೆ ತಿಮ್ಮಣ್ಣನಾಯಕನ ಕೆರೆಯಿಂದ ನೀರನ್ನು ಒದಗಿಸಲಾಗಿದೆ.

ಭುವನಗಿರಿದುರ್ಗದಲ್ಲಿರುವ ವಿವಿಧ ದೇವಾಲಯಗಳಲ್ಲಿ ಎರಡು ಬಗೆಯ ನಿರ್ಮಾಣಶೈಲಿಯನ್ನು ಕಾಣಬಹುದು. ವಿರೂಪಾಕ್ಷ, ಸಂಜೀವ ಆಂಜನೇಯ, ಕಾಶಿ ವಿಶ್ವೇಶ್ವರ, ಲಕ್ಷ್ಮಿನಾರಾಯಣ ಮುಂತಾದ ದೇವಾಲಯಗಳು ಕಣಶಿಲೆಯಿಂದ ಸಾಮಾನ್ಯವಾಗಿ ಒಂದು ಮೀಟರ್ ಎತ್ತರದ ಅದಿಸ್ಥಾನದ ಮೇಲೆ ನಿರ್ಮಿಸಲಾಗಿದ್ದು, ಬಹುತೇಕ ಅಲಂಕಾರ ರಹಿತ ಭಿತ್ತಿಯನ್ನು ಹೊಂದಿವೆ. ಕಾಶಿ ವಿಶ್ವೇಶ್ವರ ಮತ್ತು ಸಂಜೀವ ಆಂಜನೇಯ ದೇವಾಲಯಗಳ ಹೊರಗೋಡೆಗಳ ಮೇಲೆ ಅನೇಕ ಸಮಕಾಲೀನ ಸಾಮಾಜಿಕ ಜೀವನವನ್ನು ಚಿತ್ರಿಸುವ ಉಬ್ಬುಶಿಲ್ಪಗಳನ್ನು ಕಾಣಬಹುದು. ಈ ಪ್ರದೇಶದಲ್ಲಿ ಹೆಚ್ಚು ಮಳೆ ಬೀಳುವ ಕಾರಣ, ಮಳೆ ನೀರು ಸುಲಭವಾಗಿ ಹರಿಯುವಂತೆ ಮಾಡು ಹಾಗೂ ಚಜ್ಜವನ್ನು ನಿರ್ಮಿಸಲಾಗಿದೆ. ಕಾಶಿ ವಿಶ್ವೇಶ್ವರ ದೇವಾಲಯಕ್ಕೆ ಮಾತ್ರ ಕಲ್ಲಿನ ಶಿಖರವನ್ನು ನಿರ್ಮಿಸಲಾಗಿದೆ. ಗಣೇಶ, ವೀರಭದ್ರ, ಲಕ್ಷ್ಮಿನರಸಿಂಹ ಮುಂತಾದ ದೇವಾಲಯಗಳನ್ನು ಜಂಬಿಟ್ಟಿಗೆಯಿಂದ ನಿರ್ಮಿಸಲಾಗಿದ್ದು ಅವುಗಳು ಇಂದು ಸಂಪೂರ್ಣವಾಗಿ ಶಿಥಿಲವಾಗಿವೆ. ಇಲ್ಲಿರುವ ಎಲ್ಲಾ ಶಿಲ್ಪಗಳ ಮೇಲೆ ವಿಜಯನಗರದ ಪ್ರಭಾವವನ್ನು ಕಾಣಬಹುದು. ಇಲ್ಲಿರುವ ವಾಸ್ತುಶೈಲಿಯಲ್ಲಿ ಕೆಳದಿ ಶಿಲ್ಪಗಳು, ಇಸ್ಲಾಂ ಶೈಲಿಯ ವಿವಿಧ ಲಕ್ಷಣಗಳಾದ ಕಂಗುರ, ಮಿನರೇಟು, ಕಮಾನು ಮುಂತಾದವುಗಳನ್ನು ಹಿಂದೂ ಸಂಪ್ರದಾಯಕ್ಕೆ ದಕ್ಕೆ ಬಾರದ ರೀತಿಯಲ್ಲಿ ಉಪಯೋಗಿಸಿದ್ದಾರೆ. ಇದೇ ಕೆಳದಿ ಶೈಲಿಯ ವಿಶೇಷ.

ಭುವನಗಿರಿದುರ್ಗವನ್ನು ಒಮ್ಮೆ ಸಂದರ್ಶಿಸಿದರೆ, ಇಲ್ಲಿರುವ ಹಲವಾರು ಸ್ಮಾರಕಗಳ ಹೆಸರುಗಳು ಹಂಪಿಯಲ್ಲಿರುವ ಸ್ಮಾರಕಗಳನ್ನು ನೆನಪಿಗೆ ತರುತ್ತವೆ. ಏಳು ಸುತ್ತಿನಕೋಟೆ, ಅರಮನೆ (ಕಮಲ್ ಮಹಲ್ /ಕಲ್ಯಾಣಮಹಲ್), ವಿಠಲ, ಮಾರಿಕಾಂಬ, ವಿರೂಪಾಕ್ಷ, ವೀರಭದ್ರ, ಆಂಜನೇಯ, ಲಕ್ಷ್ಮಿನರಸಿಂಹ ದೇವಾಲಯಗಳೂ, ಮಹನವಮಿ (ದಿಬ್ಬ/ಕಟ್ಟೆ), ಆನೆಲಾಯ, ಕುದುರೆ ಲಾಯ, ಉಯ್ಯಾಲೆ ಕಂಬ ಮುಂತಾದ ಸಾಮಾಜಿಕ ಸ್ಮಾರಕಗಳು ಎರಡೂ ಸ್ಥಳಗಳಲ್ಲಿ ಕಂಡುಬರುತ್ತವೆ. ಆದರೆ ಅವೆಲ್ಲವೂ ರಚನೆ, ಶೈಲಿ ಹಾಗೂ ಗಾತ್ರದಲ್ಲಿ ಭಿನ್ನವಾಗಿವೆ. ಅದಕ್ಕೆ ಸಮಕಾಲೀನ ರಾಜಕೀಯ, ಆರ್ಥಿಕ ಹಾಗೂ ಭೌಗೋಳಿಕ ಲಕ್ಷಣಗಳು ಕಾರಣವಾದರೂ, ಕೆಳದಿ ಅರಸರು ತಮ್ಮ ವಿಜಯನಗರದ ಮೇಲಿನ ಗೌರವ, ಭಕ್ತಿ ಮುಂತಾದವುಗಳನ್ನು ಈ ರೀತಿ ಪ್ರಕಟಪಡಿಸಿದ್ದಾರೆಂದರೆ ತಪ್ಪಾಗಲಾರದು. ಒಂದು ವೇಳೆ ಕೆಳದಿ ಅರಸರು ವಿಜಯನಗರದ ಸರಿಸಮಾನರಾಗಿ ಬೆಳೆದಿದ್ದರೆ, ಅವರೂ ಸಹ ಹಂಪೆಗೆ ಪ್ರತಿ ಹಂಪೆಯನ್ನು ತಮ್ಮ ಸಾಮ್ರಾಜ್ಯದಲ್ಲಿ ನಿರ್ಮಿಸುತ್ತಿದ್ದರೇನೋ? ಈ ಎಲ್ಲಾ ಕಾರಣಕ್ಕಾಗಿ ಭುವನಗಿರಿದುರ್ಗವನ್ನು ಶಿವಮೊಗ್ಗ ಜಿಲ್ಲೆಯ ಹಂಪೆ ಅಥವಾ ವಿಜಯನಗರವೆಂದು

ಕರೆಯಬಹುದೇನೋ? ಇಲ್ಲೂ ಸಹ ಪ್ರಾಧಿಕಾರವೊಂದನ್ನು ಸ್ಥಾಪಿಸಿ, ಅನ್ವೇಷಣೆ, ಉತ್ಖನನ, ಸಂರಕ್ಷಣೆ ನಡೆಸಿದರೆ ಇತಿಹಾಸಕ್ತರಿಗೆ, ಪ್ರವಾಸಿಗರಿಗೆ ಉತ್ತಮ ನೆಲೆಯಾಗುವುದರಲ್ಲಿ ಸಂಶಯವಿಲ್ಲ.

ಆಧಾರ ಗ್ರಂಥಗಳು

೧. ಕೆಳದಿ ನೃಪವಿಜಯ

೨. Art and Architecture of the Nayakas of Keladi with special reference to Kavaledurga and Nagara (A micro study), S.G.Samak, Banglore University, ೧೯೯೬ (Un published thesis).

❖ ❖

೨೭

ಪ್ರೌಢದೇವರಾಯನ ಕಾಲದ ಪಟ್ಟಣದ ಎಲ್ಲಮ್ಮನ ಶಾಸನ ಮತ್ತು ಇತರ ಶಾಸನಗಳು

ಡಾ. ಡಿ.ವಿ.ಪರಮಶಿವಮೂರ್ತಿ

ಹಂಪಿ ಪರಿಸರದಲ್ಲಿ ಬೇರೆಡೆಗಳಿಂದ ಹಂಪಿಗೆ ಬಂದು ಸೇರುವ ಪುರಾತನ ರಸ್ತೆಗಳ ಪರಿಶೀಲನೆಯ ಸಂದರ್ಭದಲ್ಲಿ ಹಲವಾರು ಅಪ್ರಕಟಿತ ಶಾಸನಗಳು ಕಂಡುಬಂದವು. ಅವುಗಳಲ್ಲಿ ಮೂರು ಶಾಸನಗಳ ಬಗ್ಗೆ ಈ ಪ್ರಬಂಧದಲ್ಲಿ ಚರ್ಚಿಸಲಾಗಿದ್ದು, ಎರಡು ಅಪ್ರಕಟಿತವಾಗಿದ್ದು ಒಂದು ಪರಿಷ್ಕೃತ ಪಾಠವಾಗಿದೆ.

ಮೊದಲನೆಯದಾಗಿ ಕಡ್ಡಿರಾಂಪುರದ ವಾಯುವ್ಯಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿ ಕಬ್ಬಿನಗದ್ದೆಯ ನಡುಭಾಗದಲ್ಲಿ ಒಂದು ಶಾಸನ ಪತ್ತೆಯಾಗಿದ್ದು, ಇದು ಬಹಳ ಪ್ರಮುಖವಾದ ಶಾಸನವೆಂಬ ಹೆಗ್ಗಳಿಕೆಗೆ ಪಾತ್ರವಾಗುತ್ತದೆ. ಕಾರಣ ಹಂಪಿಯ ಪಟ್ಟಣದ ದೇವತೆ ಪಟ್ಟಣದ ಎಲ್ಲಮ್ಮನ ಬಗೆಗೆ ದೊರೆತಿರುವ ಮೊತ್ತಮೊದಲ ಶಾಸನ ಇದಾಗಿದೆ. ಶಾಸನವಿರುವ ಗದ್ದೆಯ ಬಹುಭಾಗ ಕಪ್ಪು ಕಲ್ಲುಗುಂಡುಗಳಿಂದ ಕೂಡಿದ್ದು, ಸಮತಟ್ಟಾದ ಒಂದು ಬಂಡೆಯ ಮೇಲೆ ಈ ಶಾಸನ ಕೆತ್ತಲಾಗಿದೆ. ಅಕ್ಷರಗಳು ಸ್ಫುಟವಾಗಿದ್ದು ಶಾಸನದ ಪಾಠವನ್ನು ಸುಲಭವಾಗಿ ಓದಬಹುದಾಗಿದೆ. ಆದರೆ ಶಾಸನದ ದಕ್ಷಿಣಭಾಗಕ್ಕೆ ಬೆಂಕಿ ತಗುಲಿ ಬಂಡೆಯು ಸಿಡಿದು ಹಲವು ಅಕ್ಷರಗಳು ನಷ್ಟವಾಗಿವೆ. ಕಬ್ಬಿನ ಗದ್ದೆಗೆ ಆಗಾಗ ಬೆಂಕಿ ಹಚ್ಚುವುದರಿಂದ ಈ ರೀತಿ ಶಾಸನ ಹಾಳಾಗಿದೆ. ಶಾಸನದ ಬಂಡೆಯನ್ನು ನಯಗೊಳಿಸದೆ ಇದ್ದ ಸ್ಥಿತಿಯಲ್ಲೇ ಬರೆದಿರುವುದರಿಂದ ಬಂಡೆಯ ಹೊರಮೈ ಲಕ್ಷಣಕ್ಕೆ ಅನುಗುಣವಾಗಿ ಸಾಲುಗಳೂ ಅಂಕುಡೊಂಕಾಗಿವೆ. ವಿಜಯನಗರ ಅರಸರ ಬಹುತೇಕ ಶಾಸನಗಳಲ್ಲಿ ಕಂಡುಬರುವಂತೆ ಈ ಶಾಸನದಲ್ಲೂ ಪ್ರತಿ ಸಾಲಿನ ಆರಂಭದಲ್ಲಿ ಸೊನ್ನೆಯನ್ನು ಕೆತ್ತಲಾಗಿದೆ.

ಶಾಸನವು ಒಟ್ಟು ಹದಿನೆಂಟು ಸಾಲುಗಳನ್ನು ಒಳಗೊಂಡಿದೆ. ಆರಂಭದ ಸಾಲುಗಳು ಉದ್ದವಾಗಿದ್ದು ನಂತರ ಕ್ರಮವಾಗಿ ಕಡಿಮೆಯಾಗುತ್ತಾ ಬಂದಿದೆ.

ಶಾಸನದಲ್ಲಿ ಕಾಲದ ಉಲ್ಲೇಖ ಹೀಗಿದೆ : "ಶಾಲಿವಾಹನ ಶಕ ವರುಷ ೧..... ವಿಶ್ವಾವಸು ಸಂವತ್ಸರದ ಪುಶ್ಯ ಶು ೧೫ ಗು.ವಾರ ಮಕರ ಸಂಕ್ರಾಂತಿ ಪುಣ್ಯಕಾಲದಲೂ" ಎಂದಿದೆ. ಇಲ್ಲಿ ಸಂವತ್ಸರ ಮತ್ತು ತಿಥಿಯನ್ನು ಸರಿಯಾಗಿ ನೀಡಿದ್ದರೂ ವರ್ಷದ ಉಲ್ಲೇಖದ ಭಾಗ ತ್ರುಟಿತವಾಗಿದೆ. ಲಿಪಿಯ ಶೈಲಿ ಮತ್ತು ಅರಸನ ಉಲ್ಲೇಖದಿಂದ ಈ ಶಾಸನದ ಕಾಲ ಕ್ರಿ.ಶ. ೧೪೨೫, ಡಿಸೆಂಬರ್ ೨೭, ಗುರುವಾರಕ್ಕೆ ಸರಿಹೊಂದುತ್ತದೆ. ಶಾಸನದ ಮತ್ತೊಂದು ಪ್ರಮುಖ ಭಾಗವಾದ ಅರಸನ ಉಲ್ಲೇಖದ ಭಾಗವೂ ತ್ರುಟಿತವಾಗಿದೆ. ಇದರಿಂದ ಅರಸನ ಹೆಸರೂ ನಮಗೆ ನಿಖರವಾಗಿ ದೊರೆತಿಲ್ಲ. ಆದರೂ ಬಿರುದು ಮತ್ತು ಇತರ ಆಧಾರದಿಂದ ಉಲ್ಲೇಖಿತ ಅರಸ ಪ್ರೌಢದೇವರಾಯನೆಂದು ಹೇಳಬಹುದು.

ಕ್ರಿ.ಶ. ೧೪೨೫, ಡಿಸೆಂಬರ್ ೨೭, ಗುರುವಾರ ಮಕರ ಸಂಕ್ರಾಂತಿಯ ಪುಣ್ಯಕಾಲದಲ್ಲಿ ಪ್ರೌಢದೇವರಾಯನು ಹಂಪಿಯ ಪಟ್ಟಣದ ಎಲ್ಲಮ್ಮನಿಗೆ ಭೂಮಿಯನ್ನು ದಾನ ನೀಡಿದ ವಿವರ ಈ ಶಾಸನದ ಮುಖ್ಯ ಪಾಠವಾಗಿದೆ. ಹಿರಿಯ ಅರಮನೆಯ ಒಳಭಾಗದ ಸೋಗುಲವಾಡಿಯ ಶ್ರೀ ಎಲ್ಲಮ್ಮ ದೇವತೆಗೆ ರಾಮಾಪುರದ ಸೀಮೆಯಲ್ಲಿದ್ದ (ಈಗಿನ ಕಡೆರಾಮಪುರ) ಹತ್ತು ಕೊಳಗ ಗದ್ದೆಯನ್ನು ಮಾನ್ಯವಾಗಿ ನೀಡಿದ್ದು, ಇದಕ್ಕೆ ಯಾರಾದರೂ ತಪ್ಪಿದರೆ ಯತಿ, ಗೋವುಗಳು ಮತ್ತು ಬ್ರಹ್ಮ ಹತ್ಯದ ಮಹಾಪಾಪಕ್ಕೆ ಸಲ್ಲುವರೆಂದು ಶಾಸನದಲ್ಲಿ ಹೇಳಲಾಗಿದೆ.

ಶಾಸನದಲ್ಲಿ ಗಮನ ಸೆಳೆಯುವ ಉಲ್ಲೇಖವೆಂದರೆ 'ಹಿರಿಯರ ಮನೆಯೊಳಗಣ ಯೆಲ್ಲಮ್ಮ' ಎಂಬ ಭಾಗ. ಈ ಪದವನ್ನು 'ಹಿರಿಯರ ಮನೆಯ ಒಳಗಣ ಯೆಲ್ಲಮ್ಮ' ಎಂದೂ, 'ಹಿರಿಯ ಅರಮನೆಯ ಒಳಗಣ ಯೆಲ್ಲಮ್ಮ' ಎಂದೂ ಎರಡೂ ರೀತಿಯಾಗಿ ವಿಭಾಗಿಸಬಹುದು. ಹಿರಿಯರ ಮನೆ ಒಳಗಣ ಎಂದರೆ ಅರ್ಥ ಸ್ಪಷ್ಟವಾಗುವುದಿಲ್ಲ. ಅಲ್ಲದೆ ಮನೆಯ ಒಳಗೆ ಯೆಲ್ಲಮ್ಮ ಇದ್ದಳೆ? ಎಂದು ಅನುಮಾನವಾಗುತ್ತದೆ. ಅಲ್ಲದೆ ಯಾವ ಹಿರಿಯರ ಮನೆ? ಎಂಬ ಅನುಮಾನವೂ ಉಂಟಾಗುತ್ತದೆ. ಇನ್ನೂ ಹಿರಿಯ ಅರಮನೆ ಒಳಗಣ ಯೆಲ್ಲಮ್ಮ ಎಂಬುದಕ್ಕೆ ಹಿರಿಯ ಅರಮನೆಯ ಒಳಗಿದ್ದ (ಆಸುಪಾಸಿನಲ್ಲಿದ್ದ) ಯೆಲ್ಲಮ್ಮ ಎಂದು ಅರ್ಥೈಸಬೇಕಾಗುತ್ತದೆ. ಇದೇ ಸರಿಯೆಂದು ನಮ್ಮ ಭಾವನೆ. ಹೀಗಾಗಿ ಯೆಲ್ಲಮ್ಮನಗುಡಿ ಇರುವ ಸ್ಥಳವು ಹಿರಿಯ ಅರಮನೆಯ ಒಳಗಣ ಪ್ರದೇಶವಾಗಿತ್ತೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಹಿರಿಯ ಅರಮನೆ ಎಂದರೆ ದೊಡ್ಡ ಅಥವಾ ಮುಖ್ಯ ಅರಮನೆ ಎಂದು ಅರ್ಥ. ಇದರಿಂದಾಗಿ ಅರಮನೆಯನ್ನು ಪತ್ತೆಹಚ್ಚಲು ಈ ಶಾಸನ ಸ್ವಲ್ಪಮಟ್ಟಿಗಿನ ನೆರವನ್ನೀಯುತ್ತದೆ. ಯೆಲ್ಲಮ್ಮನಗುಡಿಯ ಆಸುಪಾಸಿನಲ್ಲೇ ಮುಖ್ಯ ಅರಮನೆ ಇತ್ತೆಂಬ ಅಂಶವನ್ನು ಇದು ಸೂಚಿಸುತ್ತದೆ. ಶಾಸನವು "ಹಿರಿಯ ಅರಮನೆ ಒಳಗಣ..... ಸೋಗುಲವಾಡಿಯ ಶ್ರೀ ಯೆಲ್ಲಮ್ಮ....." ಎಂದು ಹೇಳಿರುವುದರಿಂದ.....ಸೋಗುಲವಾಡಿ

ಎಂಬುದು ಸ್ಥಳವೇ, ಬೀದಿಯೇ ಅಥವಾ ಈ ಎಲ್ಲಮ್ಮನ ಮೂಲಸ್ಥಳವೇ ಎಂಬುದಕ್ಕೆ ಹೆಚ್ಚಿನ ಸಂಶೋಧನೆ ಆಗಬೇಕಿದೆ.

ಈ ಶಾಸನದಿಂದ ಪಟ್ಟಣದ ಎಲ್ಲಮ್ಮಳು ವಿಜಯನಗರದ ಇತಿಹಾಸದ ಆರಂಭದಿಂದಲೂ ಇದ್ದಳೆಂದು ತಿಳಿಯುತ್ತದೆ. ಪ್ರೌಢದೇವರಾಯನು ಅನ್ಯ ದೇವಾಲಯಗಳಿಗೆ ನೀಡಿದ ಪ್ರೋತ್ಸಾಹವನ್ನು ನಗರದೇವತೆಗೂ ನೀಡಿರುವುದು ತಿಳಿದುಬರುತ್ತದೆ. ಇದುವರೆಗೂ ಕೇವಲ ಜಾನಪದದ ನೆಲೆಯಲ್ಲಿಯೇ ಅಧ್ಯಯನಕ್ಕೆ ಒಳಗಾಗಿದ್ದ[೧] ಎಲ್ಲಮ್ಮಳಿಗೆ ಶಾಸನದ ಬೆಂಬಲವೂ ದೊರೆತಿರುವುದು ಈ ದೇವತೆಯ ಪ್ರಭಾವಕ್ಕೆ ಸಾಕ್ಷಿಯಾಗಿದೆ.

ವಿಜಯನಗರದ ಅರಸರು ಯುದ್ಧಗಳಿಗೆ ಹೊರಡುವಾಗ ಈ ದೇವತೆಯ ಆಶೀರ್ವಾದ ಪಡೆದು ಹೊರಡುತ್ತಿದ್ದರೆಂಬ ಐತಿಹ್ಯವುಂಟು.[೨] ಇಂದಿಗೂ ಮಂಗಳವಾರ, ಶುಕ್ರವಾರಗಳಂದು ನೂರಾರು ಭಕ್ತರು ಆಗಮಿಸಿ ಆಚರಣೆಗಳನ್ನು ನಡೆಸುತ್ತಾರೆ. ಇದು ಹಂಪಿ ನಗರದ ರಕ್ಷಣಾ ದೇವತೆಯೆಂಬ ನಂಬಿಕೆ ಇಂದಿಗೂ ಜನಪದರಲ್ಲಿದೆ. ಈ ದೇವಿಯ ಮೂರ್ತಿಯ ಕಾಲ ಕ್ರಿ.ಶ. ೧೪ನೇ ಶತಮಾನವಾಗಿದೆಯೆಂದು ಈಗಾಗಲೇ ತೀರ್ಮಾನಿಸಲಾಗಿದೆ.[೩]

ಈ ಶಾಸನದ ಮಹತ್ವವನ್ನು ಮತ್ತೊಮ್ಮೆ ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು.

೧. ಈ ಶಾಸನವನ್ನು ಪ್ರೌಢದೇವರಾಯನು ಹಾಕಿಸಿರುವುದು
೨. ಯೆಲ್ಲಮ್ಮಳಿಗೆ ಹತ್ತು ಕೊಳಗ ಗದ್ದೆಯನ್ನು ನೀಡಿರುವುದು
೩. ಈ ಯೆಲ್ಲಮ್ಮಳು ಹಿರಿಯ ಅರಮನೆಯ ಆವರಣದಲ್ಲಿ (ಆಸುಪಾಸಿನಲ್ಲಿ) ಇದ್ದಳು
೪. ಪಟ್ಟಣದ ಯೆಲ್ಲಮ್ಮಳ ಬಗ್ಗೆ ದೊರೆತ ಮೊದಲ ಶಾಸನ
೫. ಅನೇಕ ಅಥವಾ ಎರಡು ಅರಮನೆಗಳಿದ್ದು, ಯೆಲ್ಲಮ್ಮ ಇದ್ದ ಭಾಗದ ಅರಮನೆ ಹಿರಿಯ ಅರಮನೆಯಾಗಿತ್ತೆಂಬ ಅಂಶ
೬. ದೇವಿಯ ಅಧ್ಯಯನಕ್ಕೆ ಜಾನಪದ ಆಕರಗಳಿಗೆ ಬೆಂಬಲವಾಗಿ ಶಾಸನ ಆಕರವೂ ಲಭ್ಯ
೭. ಕ್ರಿ.ಶ. ೧೪೨೫ಕ್ಕೂ ಪೂರ್ವದಲ್ಲಿ ಯೆಲ್ಲಮ್ಮಳ ಪ್ರಭಾವ ಹಂಪಿಯಲ್ಲಿತ್ತು ಎಂಬ ಅಂಶ

ಶಾಸನ ಪಾಠ

೧. ೦ ಶಾಲಿವಾಹನ ಶಕವರುಷ ೧೪.....
೨. ೦ ವಿಶ್ವಾವಸು ಸಂವಛರದ ಪುಶ್ಯ ಶು ೧೫ ಗು.
೩. ೦ ವಾರ ಮಕರ ಸಂಕ್ರಾಂತಿ ಪುಂಣ್ಯ ಕಾಲದ
೪. ೦ ಲೂ ಶ್ರೀ ಮದ್ರಾಜಾದಿರಾಜ ರಾಜ

೫. ಂ ಪರಮೇಶ್ವರ ಶ್ರೀ ವೀರಪ್ರತಾಪ
೬. ಂ...ಯ ಮಹಾರಾಯರೂ ಹಿ
೭. ಂ ರಿಯರಮನೆಯೊಳಗಣ
೮. ಂ...ಸೋಗುಲವಾಡಿಯ
೯. ಂ ಶ್ರೀ ಯೆಲ್ಲಂಮಗೆ
೧೦. ಂ ರಾಮಾಪುರದ ಸೀಮೆಯಾ
೧೧. ಂ ಳಗೆ ಸಲುವ ಮಾಂನ್ಯವಾಗಿ
೧೨. ಂ ಕೊಟ್ಟ ಗದ್ದೆ ಹತ್ತು ಕೊಳಗ
೧೩. ಂ ಯೀ ಧಂರ್ಮ್ಮಕ್ಕೆ ಆ
೧೪. ಂ ರು ತಪ್ಪದ...
೧೫. ಂ ಯತಿ ಗೋ...
೧೬. ......ಹ್ಮತ್ಯ
೧೭. ......ಡಿದ ಪಾಪಕೆ ಹೋ
೧೮. ಂ...ರೂ

ಎರಡನೆಯದಾಗಿ ತುಂಗಭದ್ರಾ ನದೀ ದಂಡೆಯ ಕಾಳಘಟ್ಟ ಗ್ರಾಮದ ಪೂರ್ವಕ್ಕೆ ಗೊಲ್ಲರ ಗದ್ದೆಯಲ್ಲಿ ಒಂದು ಅಪ್ರಕಟಿತ ಶಾಸನ ದೊರಕಿದೆ. ಬಿಳಿಯ ಚಪ್ಪಡಿಕಲ್ಲಿನ ಮೇಲೆ ಕೆತ್ತಲಾಗಿರುವ ಈ ಶಾಸನ ನೆಲದಲ್ಲಿ ಮಲಗಿರುವುದರಿಂದ ದನ-ಕರುಗಳು ಓಡಾಡಿ ಅಕ್ಷರಗಳು ಬಹಳ ತ್ರುಟಿವಾಗಿವೆ. ಒಟ್ಟು ಹದಿನೇಳು ಸಾಲುಗಳಿರುವ ಈ ಶಾಸನ ಯಾವ ವಿಷಯವನ್ನೂ ಸ್ಪಷ್ಟವಾಗಿ ತಿಳಿಸದ ಸ್ಥಿತಿಯಲ್ಲಿದೆ.

ಶಾಸನದಲ್ಲಿ ಕಾಲವನ್ನು 'ಕ್ರೋಧನ ನಾಮ ಸಂವತ್ಸರದ ವೈಶಾಖ ಶು. ೮ ಲು.....' ಎಂಬುದಾಗಿ ನೀಡಿದೆ. ದಾನ ನೀಡಿದವರ ಬಿರುದು ಮಾತ್ರ ತಿಳಿದುಬರುತ್ತದೆ. 'ಶ್ರೀಮತು ರಾಜೇಶ್ರೀ' ಎಂಬ ಬಿರುದು ಮಾತ್ರ ಸ್ಪಷ್ಟವಾಗಿ ಗೋಚರಿಸಿದ್ದು, ಇತರ ಭಾಗ ಹಾಳಾಗಿದೆ. ಈ ರಾಜೇಶ್ರೀ ಎಂಬ ಬಿರುದು ಬಳಕೆಯಾಗಿರುವುದು ಬಳ್ಳಾರಿಯ ಹಂಡೆ ಪಾಳೆಯಗಾರರಿಗೆ ಬಳಕೆಯಾಗಿರುವುದು ಅವರ ಶಾಸನಗಳಿಂದ ತಿಳಿದುಬರುತ್ತದೆ. ಹೀಗಾಗಿ ಈ ಶಾಸನವನ್ನು ಅವರ ಅವಧಿಯದ್ದೇ ಎಂದು ಊಹಿಸಬೇಕಾಗುತ್ತದೆ. ಆದರೆ ಹಂಪಿ ಪರಿಸರದಲ್ಲಿ ಇದುವರೆಗೂ ಹಂಡೆ ಪಾಳೆಯಗಾರರ ಯಾವ ಶಾಸನಗಳೂ ದೊರಕಿಲ್ಲ. ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠದ ಕೆಲವು ದಾಖಲೆಗಳಲ್ಲಿ ಇವರು ದಾನ ನೀಡಿದ ವಿವರವಿದೆ.[೪] ಈ ಬಿರುದು ಮತ್ತು ಸಂವತ್ಸರದ ಆಧಾರದಿಂದ ಈ ಶಾಸನದ ಕಾಲ ನಿರ್ಧರಿಸಲು ಸಾಧ್ಯವಿಲ್ಲ. ಆದರೆ ಇಲ್ಲಿ ತ್ರುಟಿತವಾಗಿರುವ ಅರಸನ ಹೆಸರನ್ನು ರಾಮಪ್ಪನಾಯಕನೆಂದು ತುಂಬಿಕೊಂಡರೆ ಈ ಶಾಸನದ ಕಾಲ ಕ್ರಿ.ಶ. ೧೭೪೫ ಆಗುತ್ತದೆ. ಈ ರಾಮಪ್ಪನಾಯಕನು ಕ್ರಿ.ಶ. ೧೭೩೫ ರಿಂದ ೧೭೬೪ರ ವರೆಗೆ ಅರಸನಾಗಿದ್ದನೆಂದು ಈವರೆಗೆ ದೊರಕಿರುವ ಶಾಸನಗಳಿಂದ

ತಿಳಿದುಬರುತ್ತದೆ.[೫] ಈ ರಾಮಪ್ಪನಾಯಕನ ಅಪ್ಪಣೆಯಿಂದ ಕಾಳಘಟ್ಟದ ಕೆಳಗೋಟೆಯ ಸಮೀಪ ಯಾವುದೋ ವಡೆಯರಿಗೆ ಗದ್ದೆಯನ್ನು ದಾನ ನೀಡಿದ ವಿವರವಿದೆ. ಈ ವಡೆಯರು ಯಾವುದೋ ಮಠದ ಮುಖ್ಯಸ್ಥನಾಗಿರಬಹುದು. ಈ ಮಠವು ಎಲ್ಲಿ ಇತ್ತೆಂದು ತಿಳಿದುಬರುವುದಿಲ್ಲ. ಈ ಶಾಸನದಿಂದ ತಿಳಿದುಬರುವ ಮುಖ್ಯ ಸಂಗತಿಗಳನ್ನು ಹೀಗೆ ಹೇಳಬಹುದು.

೧. ಇದು ಹಂಪಿ ಪರಿಸರದಲ್ಲಿ ದೊರೆತ ಮೊದಲ ಹಂಡೆ ಪಾಳೆಯಗಾರರ ಶಾಸನ.

೨. ರಾಮಪ್ಪನಾಯಕನು ವಡೆಯರೊಬ್ಬರಿಗೆ ಗದ್ದೆಯನ್ನು ದಾನ ನೀಡಿರುವನು.

೩. ಕಾಳಗಟ್ಟದಲ್ಲಿ 'ಕೆಳಗೋಟೆ' ಎಂಬ ಪ್ರದೇಶವಿದ್ದುದು.

ಈ ಕಾರಣಗಳಿಂದ ಹಂಡೆ ಪಾಳೆಯಗಾರರ ಬಗೆಗೆ ಅವರ ರಾಜ್ಯ ವಿಸ್ತಾರದ ಬಗೆಗೆ, ಅವರಿಗೂ ಹಂಪಿ ಪರಿಸರಕ್ಕೂ ಇದ್ದಿರಬಹುದಾದ ಸಂಬಂಧದ ಬಗೆಗೆ ಈ ಶಾಸನವು ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ.

ಶಾಸನ ಪಾಠ

೧. ಕ್ರೋಧನ ನಾಮ ಸಂ
೨. ವತ್ಸರದ ವೈಶಖ ಶು ೮ ಲು.
೩. ಶ್ರೀಮತು ರಾಜೆಶ್ರೀ ರಾ...
೪. ಯ. ರ ಅಪಣೆಯಿಂದ...
೫.. ಎಮ್ಮಗೆ ಕೊಟ ಮಾಂನ್ಯವೂ.
೬. ರಿ ಕಾಳಗಟಿ ಕೆಳಗೋಟಿಗ... ಯ
೭. . ಲ್ವ ಇದಕೆ ಆಗಿ... ಲಳ
೮. ... ಳದಾಗ... ಆ.....
೯. ...ನು. ದಿವಸ. ೦. ಕಾ
೧೦. ದೆ ಕೊಟ ಕಾರ್ಯಕೆ...
೧೧. ವಡೆಯರಿಗೆ ನಾವು ಕೊಟ ಸ. ಮಾ
೧೨. ... ವಾಗಿ ೧... ವೆ
೧೩. ಕೊಟ ಮಾನ್ಯ... ಕೆ.
೧೪. ಕೆವಾಡಿಮುನ. ಗಣಕೆ.
೧೫. ಡಿ ವಳಿತವಾದ ಭತ್ತಕೆ ಬಿಟ್ಟ ಕಲ್ಲೂ
೧೬. ಗದೆಗಳು ಕೊಟಿಲೂ. ಕಾ
೧೭. ಎದೆ ಕಾರಣ ಯ ವಾ.....

ಮೂರನೆಯದಾಗಿ ಕಾಳಘಟ್ಟದ ಬಯಲ ಹನುಮಪ್ಪನ ಗುಡಿ ಸಮೀಪವಿರುವ

ದಾರಿಬದಿಯ ಗುಂಡಿನಲ್ಲಿರುವ ಶಾಸನದ ಪಾಠ ಈಗಾಗಲೇ ಡಾ. ಟಿ.ಎಂ.ಮಂಜುನಾಥಯ್ಯನವರು ಪ್ರಕಟಿಸಿರುವರು.[೬] ಈ ಶಾಸನವನ್ನು ಮತ್ತೆ ಪರಿಶೀಲಿಸಿದಾಗ ಪ್ರಕಟಿತ ಪಾಠದಲ್ಲಿನ ಕೆಲವು ದೋಷಗಳು ಪರಿಹಾರವಾದವು. ಈ ಕಾರಣದಿಂದ ಅದರ ಪರಿಷ್ಕೃತ ಪಾಠವನ್ನು ಇಲ್ಲಿ ನೀಡಲಾಗಿದೆ. ಪ್ರಕಟಿತ ಪಾಠದ ಮೂರನೇ ಸಾಲಿನಲ್ಲಿ ಶಕ ವರುಷದ ಮುಂದಿನ ಭಾಗ ಓದಿಲ್ಲ. ಆದರೆ ಈಗ ೧೪ ಎಂಬ ಶಕವರುಷದ ಆರಂಭದ ಎರಡು ಸಂಖ್ಯೆಗಳು ಕಂಡುಬಂದಿವೆ. ೬ನೇ ಸಾಲಿನಲ್ಲಿ 'ಮಹಾ... ಚಿಕ ಒಡೆಯರು...' ಎಂದು ಪ್ರಕಟವಾಗಿದೆ. ಆದರೆ ಇದು ಸ್ಪಷ್ಟವಾಗಿ "ಶ್ರೀ ಮಂನುಮಹಾ ನರ್ಸಣನಾಯಕ ಒಡೆಯರು..." ಎಂದಿದೆ. ಇವನು ಕೃಷ್ಣದೇವರಾಯನ ತಂದೆ. ಇವನು ತನ್ನ ತಂದೆ ಯೀಶ್ವರ ನಾಯಕ ಒಡೆಯರಿಗೂ ತಾಯಿ ಬುಕಾಜಿದೇವಿ ಅಂಮ್ಮನವರಿಗೂ ಪುಣ್ಯವಾಗಲಿಯೆಂದು ಹಂಪಿಯ ವಿಠಲ ದೇವರಿಗೆ ಪಂಚಕದ ಸೀಮೆಯೊಳಗಣ ಗೋಪಿಸೆಟ್ಟಿಹಳ್ಳಿಯನ್ನು ದಾನವಾಗಿ ನೀಡಿದ ವಿವರ ಈ ಶಾಸನದ ವಿಷಯವಾಗಿದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ ನರಸಂಣನಾಯಕ ಒಡೆಯರು ಮತ್ತು ಯೀಶ್ವರನಾಯಕ ಒಡೆಯರು ಹೆಚ್ಚು ಶಾಸನಗಳಲ್ಲಿ ಉಲ್ಲೇಖವಾಗಿಲ್ಲ. ಈ ಕಾರಣದಿಂದ ಇವರನ್ನು ಉಲ್ಲೇಖಿಸಿದ ಅಪರೂಪದ ಶಾಸನಗಳಲ್ಲಿ ಇದೂ ಒಂದಾಗಿದೆ. ಅಲ್ಲದೆ ಈ ಶಾಸನದಲ್ಲಿ ಉಲ್ಲೇಖವಾಗಿರುವ ಪಂಚಕದ ಸೀಮೆಯ ಗೋಪಿಸೆಟಿಹಳ್ಳಿಯು ಈಗ ಯಾವುದೆಂದು ತೀರ್ಮಾನಿಸಲಾಗಿಲ್ಲ. ಅಲ್ಲದೆ ಈ ಪಂಚಕದ ಸೀಮೆ ಯಾವುದು ಎಂದೂ ತೀರ್ಮಾನವಾಗಿಲ್ಲ.

ಈ 'ಪಂಚಕದ ಸೀಮೆಯೊಳಗಣ ಗೋಪಿಸೆಟಿಹಳಿ' ಎಂಬ ಉಲ್ಲೇಖ ಕೃಷ್ಣದೇವರಾಯನ ಎರಡು ಶಾಸನಗಳಲ್ಲೂ ದೊರಕುತ್ತದೆ.[೭] ಈ ಪಂಚಕದ ಸೀಮೆ ಎಂದರೆ ಐದು ಗ್ರಾಮಗಳು ಸೇರಿದ ಸೀಮೆ ಎಂದು ಊಹಿಸಬಹುದು. ಪಂಚಕ ಎಂಬುದು ಸಂಖ್ಯೆಯನ್ನು ಸೂಚಿಸುವುದರಿಂದ ಈ ಊಹೆಯನ್ನು ಮಾಡಬಹುದು. ಈ ಶಾಸನ ದೊರೆತಿರುವ ಕಾಳಘಟ್ಟದ ಸುತ್ತಮುತ್ತಲ ಪ್ರದೇಶವೇ ಪಂಚಕದ ಸೀಮೆಯಾಗಿರಬಹುದು. ಈಗಲೂ ಕಾಳಘಟ್ಟದ ಪೂರ್ವಕ್ಕೆ ಕೆಲವು ಗ್ರಾಮಗಳಿದ್ದ ಕುರುಹುಗಳಿದ್ದು, ಜನರ ಬಾಯಲ್ಲೂ ಅವುಗಳ ಹೆಸರು ಉಳಿದುಬಂದಿದೆ. ರಾಮಚಂದ್ರಹಳ್ಳಿ ಮತ್ತು ಸಿಂಗೇನಾಯಕನಹಳ್ಳಿ ಎಂಬವುಗಳೇ ಆ ಗ್ರಾಮಗಳು. ಇದರಿಂದ ಕಾಲಘಟ್ಟ, ಗೋಪಿಸೆಟ್ಟಿಹಳ್ಳಿ, ರಾಮಚಂದ್ರಹಳ್ಳಿ, ಸಿಂಗೇನಾಯಕಹಳ್ಳಿ ಮತ್ತು ಡಣಾಪುರಗಳೇ ಪಂಚಕದ ಸೀಮೆಯ ಗ್ರಾಮಗಳೆಂದು ಊಹಿಸಬಹುದಾಗಿದೆ. ಈಗ ಕಾಳಘಟ್ಟ ಮತ್ತು ಡಣಾಪುರಗಳಲ್ಲಿ ಮಾತ್ರ ಜನವಸತಿಯಿದೆ.

ಶಾಸನ ಪಾಠ (ಪರಿಷ್ಕೃತ)

೧. ಶ್ರೀ ವಿಠಲದೇವರ ಗ್ರಾ (ಮ)
೨. ಗೋಪಿಸೆಟಿಯಹಳಿ ಸ್ವಸ್ತಿಶ್ರೀ...
೩. ದಯ ಶಾಲಿವಾಹನ ಶಕ ವರುಷ ೧೪...
೪. ಯ ಸಿಧಾರ್ತಿ ಸಂವಛರದ ಪುಷ್ಯಮಾಸ ಮಕ

೫. ರ ಸಂಕ್ರಾಂತಿ ಪುಣ್ಯಕಾಲದಲಿ ಶ್ರೀ ಮಂನು
೬. ಮಹಾ ನರ್ಸಣನಾಯಕ ಒಡೆಯರು ತಂಮ ತಂದೆ ಯೀಶ್ವರ
೭. ನಾಯಕ ಒಡೆಯರಿಗೆಉ ತಂಮ ತಾಯಿ ಬುಕಾಜಿದೇವಿ
೮. ಅಂಮನವರಿಗೆಉ ಪುಂಣ್ಯವಾಗಬೇಕೆಂದು ಶ್ರೀ ವಿಠಲದೇವರಿಗೆ
೯. ... ಯಿ... ರಂಗವೈಭವ ನಿತ್ಯ ನೈಮಿತ್ತಿಕ ಪಕ್ಷೋತ್ಸವ
೧೦. ... ವಿ. ರೋತ್ಸವ ಮೊದಲಾದ ಪುಂಣ್ಯಾಧಿಗಳಿಗೆಊ.. ಥಿ
೧೧. .. ಮಹಾಪೂಜೆ ಮಹಾನ್ಯೆವೇದ್ಯಕ್ಕೆ ಸಮರ್ಪ್ಪಿಸ್ತ ಪಂಚಕದ ಸೀಮೆ
೧೨. .ವೊಳಗಣ ಗೋಪಿಸೆಟಿಯಹಳಿಯ ಗ್ರಾಮ ಶ್ರೀ..... ಕೆ ಸಲುವ ಕಾ
೧೩. ಡಾರಂಭ ನೀರಾರಂಭ ರೊಕ ಆದಾಯ ಭತ ಆದಾಯ ಸುಂಕಪೂ
೧೪. ರ್ವ್ವಕ. ತಳವಾರಿಕೆ ಜೋಡಿ ಬೀರಾಡ ಯೇನುಂಟಾದ ಸರ್ವ ಆದಾಯವನು
೧೫. ಸರ್ವಮಾನ್ಯವಾಗಿ ಆ ಚಂದ್ರಾರ್ಕ ಸ್ಥಾಯಿಯಾಗಿ ನಡೆವ ಮರಿಯ್ಯಾದೆಲು ದಾನ
೧೬. ಧಾರಾಪೂರ್ವಕವಾಗಿ ಶ್ರೀ ವಿಠಲ ದೇವರಿಗೆ ಸಮರ್ಪ್ಪಿಸಿದೆ ಉಯೀ ಧಂರ್ಮ್ಮಕೆ
೧೭. ಆರು ತಪ್ಪಿದ(ರೆ) ಅವರು ತಂಮ ತಂದೆ ತಾಯಿಗಳನೂ ವಾರಣಾಸಿಯಲಿ ಕೊಂ
೧೮. ದ ಪಾದಕೆ ಹೋಹರು ಗೋಹತ್ಯ ಬ್ರಂಹ್ಮಹತ್ಯ ಬ್ರುಣ ಹತ್ಯ ಅಶ್ವೇತಿ ಹ
೧೯. ತ್ಯ ಮೊದಲಾದ ಮಹಾಪಾತಕದ ಮಾಡಿದ ಪಾಪಕೆ ಹೋಹರು

ಅಡಿಟಿಪ್ಪಣಿಗಳು

೧. ಹಂಪಿಯ ಗ್ರಾಮದೇವತೆ, ಪಟ್ಟಣದ ಎಲ್ಲಮ್ಮ, ಡಾ. ಸ.ಚಿ.ರಮೇಶ್, ಹಂಪಿ ಪರಂಪರೆ, ಪು. ೧೬-೨೦
೨. ಮರೆತು ಹೋದ ಮಹಾ ಸಾಮ್ರಾಜ್ಯ, ಅನು. ಸದಾನಂದ ಕನವಳ್ಳಿ
೩. ನಗರ ದೇವತೆ ಶ್ರೀ ಪಟ್ಟಣದ ಎಲ್ಲಮ್ಮ ದೇವಸ್ಥಾನ - ಒಂದು ಟಿಪ್ಪಣೆ, ಶ್ರೀ ಎಚ್.ಟಿ.ತಳವಾರ್, ವಿಜಯನಗರ ಅಧ್ಯಯನ - ೬, ಪು. ೧೧೫
೪. ಹೊಸಪೇಟೆ - ೬, ೭, ಬಳ್ಳಾರಿ ಜಿಲ್ಲಾ ಶಾಸನ ಸಂಪುಟ - ಕನ್ನಡ ವಿಶ್ವವಿದ್ಯಾಲಯ
೫. ಬಳ್ಳಾರಿ ಪಾಳೆಯಗಾರರು, ಡಾ. ಸಿ.ನಾಗಭೂಷಣ, ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ, ಪು. ೧೯೩
೬. ಹಂಪೆಯ ಪರಿಸರದಲ್ಲಿ ನವಶೋಧಿತ ಶಾಸನಗಳು, ಡಾ. ಟಿ.ಎಂ.ಮಂಜುನಾಥಯ್ಯ, ವಿಜಯನಗರ ಅಧ್ಯಯನ - ೬, ಪು. ೧೨೬-೧೪೧
೭. ಹಂಪಿ - ೧೮೧, ೧೮೨, ಹಂಪಿ ಶಾಸನ ಸಂಪುಟ, ಕನ್ನಡ ವಿಶ್ವವಿದ್ಯಾಲಯ

❖ ❖

೨೮

ಕುದುರೆಕಲ್ಲು

ಬಾಲಸುಬ್ರಮಣ್ಯ

ಕುದುರೆ ಕಲ್ಲು : ವಿಜಯನಗರದ ರಕ್ಷಣಾ ವ್ಯವಸ್ಥೆಗೆ ಕುದುರೆ ಕಲ್ಲುಗಳು ಒಂದು ಉತ್ತಮ ಉದಾಹರಣೆ. ನೂರಾರು ಕಲ್ಲುಗಳನ್ನು ಒಂದೆಡೆ ಕಾಣಬಹುದು. ಸಾಕಷ್ಟು ದೊಡ್ಡದಾದ ಕಲ್ಲುಗಳನ್ನು ಎರಡು ಬೆಟ್ಟಗಳ ನಡುವಿನ ಕಣಿವೆಯಲ್ಲಿ ಅಡ್ಡಲಾಗಿ ನೆಡಲಾಗಿದೆ. ಇವುಗಳ ಅನೇಕ ಸಾಲುಗಳು ಕಂಡುಬರುತ್ತವೆ. ಕುಮ್ಮಟದುರ್ಗದ ಹಿರೇಕಣಿವೆಯ ಪ್ರದೇಶದಲ್ಲಿ ಕುದುರೆ ಕಲ್ಲುಗಳ ಸಾಲುಗಳು ಇರುವುದನ್ನು ಕಾಣಬಹುದು. ಹಂಪಿಯಲ್ಲಿ ಈ ಕಲ್ಲುಗಳು ಮೊದಲನೆಯ ಕೋಟೆಯ ಹೊರಭಾಗದಲ್ಲಿ ಅಂದರೆ ಪುರ ಪ್ರವೇಶದ ಮೊದಲ ಕೋಟೆಯ ಹೊರಭಾಗದಲ್ಲಿ ನೆಟ್ಟಿರಲಾಗುತ್ತಿತ್ತು. ಈ ಕಲ್ಲುಗಳನ್ನು ನೋಡಿದಲ್ಲಿ ಒಂದು ಕಲ್ಲಿನ ಹಿಂದೆ ಇನ್ನೊಂದು ಕಲ್ಲು ನೇರವಾಗಿರದೆ ಪಕ್ಕದಲ್ಲಿರುವುದು ಸಾಮಾನ್ಯ. ಈ ರೀತಿ ಒಂದರ ಪಕ್ಕದಲ್ಲೊಂದು ಸಾಲಾಗಿ ಕಲ್ಲುಗಳನ್ನು ಜೋಡಿಸಿರುವುದರಿಂದ ಶತ್ರುಸೈನ್ಯದ ಮುನ್ನಡೆ, ಅದರಲ್ಲೂ ಅಶ್ವದಳದ ಮುನ್ನಡೆಯನ್ನು ಸಮರ್ಥವಾಗಿ ತಡೆಯುವಲ್ಲಿ ಸಹಕಾರವಾಗುತ್ತಿತ್ತು. ವೈರಿಯು ನಗರ ಪ್ರವೇಶಮಾಡಲು ಗುಡ್ಡ ಕಣಿವೆ ಅಥವಾ ಕೋಟೆ ದ್ವಾರಗಳನ್ನು ದಾಟಿ ಮುನ್ನಡೆಯಬೇಕಾಗಿತ್ತು. ಕೋಟೆಗಳನ್ನು ಹೊರತುಪಡಿಸಿ ಕಣಿವೆಯ ಪ್ರದೇಶದಲ್ಲಿ ಒಳನುಗ್ಗಲು ಪ್ರಯತ್ನಿಸಿದರೆ ಈ ಕುದುರೆ ಕಲ್ಲುಗಳು ಉತ್ತಮವಾದ ತಡೆಗೋಡೆಗಳಾಗುತ್ತಿದ್ದವು. ಶತ್ರುಸೈನಿಕರು ಈ ಪ್ರದೇಶದಲ್ಲಿ ಸಾವಧಾನವಾಗಿ ಚಲಿಸಬೇಕಾಗುತ್ತಿತ್ತು. ಆ ಸಂದರ್ಭದಲ್ಲಿ ಎರಡೂ ಕಡೆಯ ಗುಡ್ಡಗಳ ಮೇಲಿಂದ ಶತ್ರುಪಡೆಯ ಸೈನಿಕರ ಮೇಲೆ ಬಿಲ್ಲು ಬಾಣ ಭರ್ಜಿಗಳಿಂದ ಆಕ್ರಮಣ ಮಾಡಿ ಅವರನ್ನು ನಾಶಮಾಡಲಾಗುತ್ತಿತ್ತು. ದೊಡ್ಡ ಗುಡ್ಡಗಳನ್ನು ಸುತ್ತುವರಿದು ಕಣಿವೆಗಳನ್ನು ಹುಡುಕಿಕೊಂಡು

ಅವುಗಳ ಮೂಲಕ ಒಳನುಗ್ಗಲು ಪ್ರಯತ್ನಿಸಿದರೆ ಅಲ್ಲಿ ಮೊದಲು ಅಡ್ಡಬರುತ್ತಿದುದು ಕುದುರೆ ಕಲ್ಲುಗಳು. ಭಾರತದ ಯುದ್ಧ ತಂತ್ರದಲ್ಲಿ ಇವು ವಿಶಿಷ್ಟ ಸ್ಥಾನ ಪಡೆದಿವೆ.

ಕುಮ್ಮಟದುರ್ಗದಲ್ಲಿ ದೊಡ್ಡ ಉಂಡೆಕಲ್ಲುಗಳನ್ನು ಎರಡು ಭಾಗವಾಗಿ ನೇರವಾಗಿ ಸೀಳಿ ಒಂದರ ಪಕ್ಕದಲ್ಲಿ ಒಂದರಂತೆ ಭೂಮಿಯಲ್ಲಿ ಹೂಳಲಾಗುತ್ತಿತ್ತು. ಒಂದು ಸಾಲಿನ ಕಲ್ಲಿಗೂ ಇನ್ನೊಂದು ಸಾಲಿನ ಕಲ್ಲಿಗೂ ಸಮಾನ ಅಂತರವಿದ್ದರೂ ವಿವಿಧ ಎತ್ತರಗಳಿದ್ದುದರಿಂದ ಸೈನ್ಯವು ಈ ಕಲ್ಲುಗಳನ್ನು ದಾಟಿಹೋಗಲು ತೀವ್ರ ಶ್ರಮಪಡಬೇಕಾಗುತ್ತಿತ್ತು. ಈ ರೀತಿಯ ಕುದುರೆ ಕಲ್ಲುಗಳು ವಿಜಯನಗರ ಪೂರ್ವ ಹಾಗೂ ವಿಜಯನಗರ ಕಾಲದ ಸೈನಿಕ ಯುದ್ಧ ಕಲೆಗೆ ಉತ್ತಮವಾದ ಉದಾಹರಣೆಗಳಾಗಿವೆ.

ವಿಜಯನಗರದಲ್ಲಿ ಇಂತಹ ಕಲ್ಲುಗಳು ಇದ್ದ ಬಗ್ಗೆ ವಿದೇಶೀ ಪ್ರವಾಸಿಗರಾದ ಅಬ್ದುಲ್ ರಜಾಕ್ ಹಾಗೂ ಡೊಮೆಂಗೋ ಪಯಾಸ್ ಉಲ್ಲೇಖ ಮಾಡಿದ್ದಾರೆ. ಬಹುಶಃ ಕುದುರೆ ಕಲ್ಲುಗಳ ತಂತ್ರಗಾರಿಕೆ ವಿಜಯನಗರ ಪೂರ್ವಕಾಲದಿಂದಲೂ ಮುಂದುವರೆದಿದೆ ಎಂಬುದಕ್ಕೆ ಹಂಪೆ ಹತ್ತಿರದ ವಿಜಯನಗರವನ್ನು ೧೪೪೨-೪೩ರಲ್ಲಿ ಸಂದರ್ಶಿಸಿ ಇಲ್ಲಿನ ವೈಭವವನ್ನು ತಿಳಿಸಿದ್ದಾನೆ. ಇಲ್ಲಿ ಏಳುಸುತ್ತಿನ ಕೋಟೆಗಳಿದ್ದ ಬಗ್ಗೆ ತಿಳಿಸಿದ್ದಾನೆ. ಮೊದಲನೆಯ ಕೋಟೆಯ ಹೊರಭಾಗದಲ್ಲಿ ಸುಮಾರು ಮನುಷ್ಯನೆತ್ತರದ ಕಲ್ಲುಗಳಿದ್ದು, ಅರ್ಧಭಾಗವನ್ನು ಭೂಮಿಯಲ್ಲಿ ಹೂತಿದ್ದು ಉಳಿದರ್ಧಭಾಗ ಮೇಲೆ ಇದ್ದ ಬಗ್ಗೆ ತಿಳಿಸಿದ್ದಾರೆ. ಈ ಕಲ್ಲುಗಳು ಹಲವು ಸಾಲುಗಳಲಿದ್ದು ಪ್ರತೀ ಎರಡನೇ ಸಾಲಿನ ಕಲ್ಲು ಅದರ ಮುಂದಿನ ಸಾಲಿನ ಎರಡು ಕಲ್ಲುಗಳ ಮಧ್ಯೆ ಬರುವಂತೆ ನೆಟ್ಟಿರುವುದನ್ನು ಗಮನಿಸಿ ಉಲ್ಲೇಖಿಸಿದ್ದಾನೆ. ಇದರಿಂದಾಗಿ ಸೈನ್ಯವೂ, ಅಶ್ವದಳವೂ ಸುಲಭವಾಗಿ ನಗರಪ್ರವೇಶ ಮಾಡುವುದನ್ನು ನಿರ್ಬಂಧಿಸಿದಂತೆ ಆಗುತ್ತಿತ್ತು ಎಂದು ತಿಳಿಸಿದ್ದಾನೆ.

೧೫೨೦ರಲ್ಲಿ ಬಂದ ಪೋರ್ಚುಗೀಸ್ ಪ್ರವಾಸಿ ಡೊಮೆಂಗೋ-ಪಯಾಸ್ ಹೆಚ್ಚಾಗಿ ಮೇಲಿನ ರೀತಿಯ ವಿವರಣೆಯನ್ನೇ ನೀಡಿದ್ದಾನೆ. ಇಲ್ಲಿಯ ರಕ್ಷಣಾ ವ್ಯವಸ್ಥೆಗೆ ಕೋಟೆಗಳು ಅತೀ ಮುಖ್ಯವಾಗಿದ್ದು, ನಗರದ ಹೊರ ಕೋಟೆಯ ಹೆಬ್ಬಾಗಿಲ ಬಳಿ ಬಂದರೆ ಹಿಂದಿನ ಸುತ್ತಿನ ಕೋಟೆಗಳು ಒಂದರ ಹಿಂದೆ ಒಂದಿರುವಂತೆ ಕಾಣುತ್ತಿತ್ತು. ಅಲ್ಲದೆ ಕೋಟೆಗೋಡೆಯನ್ನು ಬೃಹತ್ ಬಂಡೆಗಳನ್ನು ಸೀಳಿ ಚೌಕಾಕಾರದ ಅಥವಾ ಆಯತಾಕಾರದ ಕಲ್ಲುಗಳಾಗಿ ಒಡೆದು ನಿರ್ಮಿಸಲಾಗುತ್ತಿತ್ತು. ಈ ರೀತಿಯ ಕೋಟೆ ಕೆಲವು ಕಡೆ ಹಾಳಾಗುವತ್ತ ಸಾಗಿದೆ ಎನ್ನುವುದನ್ನು ಉಲ್ಲೇಖಿಸಿದ್ದಾನೆ. ಈ ಕೋಟೆಗೋಡೆಯು ತಗ್ಗಿನ ಪ್ರದೇಶಗಳಲ್ಲಿ ಹಾಯ್ದು ಹೋಗಬೇಕಾದರೆ ಮತ್ತು ಕೆಲವು ಕಡೆ ಕಂದಕಗಳಿದ್ದು ಅಲ್ಲಿ ನೀರಿನಿಂದ ತುಂಬಿಕೊಂಡಿರುವುದನ್ನು ಕಂಡಿರುವುದಾಗಿ ತಿಳಿಸಿದ್ದಾನೆ. ಈ ರೀತಿಯ ತಡೆಗಳಲ್ಲದೆ ಕೆಲವು ಚೂಪಾದ ಕಲ್ಲುಗಳನ್ನು ಭೂಮಿಯಲ್ಲಿ ನೆಟ್ಟು ಅದರ ಮೇಲ್ಭಾಗವು ಸುಮಾರು ಮನುಷ್ಯನ ಎದೆಮಟ್ಟದವರೆಗೂ ಬರುವಂತೆ ವ್ಯವಸ್ಥೆಗೊಳಿಸಿರುವುದನ್ನು ತಿಳಿಸಿದ್ದಾನೆ. ಈ ಕಲ್ಲುಗಳು ಭರ್ಜಿಯ ಹಿಡಿಯ ಒಂದರಿಂದ ಒಂದೂವರೆ ಪಟ್ಟು ಅಗಲವನ್ನು ಹೊಂದಿದ್ದವು ಎಂದು

ಹೇಳಿದ್ದಾನೆ. ಈ ಕಲ್ಲುಗಳು ಹಲವು ಸಾಲುಗಳಲ್ಲಿದ್ದು, ಕೋಟೆಗೋಡೆಯಿಂದ ಮತ್ತು ಸಾಲುಗಳ ಮಧ್ಯೆ ಒಂದು ಸಮಾನ ಅಂತರವಿದ್ದ ಬಗ್ಗೆ ಗಮನಿಸಲಾಗಿದೆ. ಅಲ್ಲದೆ ಕಣಿವೆಯ ಪ್ರದೇಶದಿಂದ ಬೆಟ್ಟದ ತಪ್ಪಲಿನವರೆಗೂ ವ್ಯವಸ್ಥಿತವಾಗಿ ನೆಡಲಾಗಿತ್ತು ಎಂದು ತಿಳಿಸಲಾಗಿದೆ.

ರಾಬರ್ಟ್ ಸೀವೆಲ್‌ರವರು, ಡೊಮೆಂಗೋ ಪಯಾಸ್ ಮತ್ತು ಅಬ್ದುಲ್ ರಜಾಕ್ ಕುದುರೆ ಕಲ್ಲುಗಳ ಬಗೆಗೆ ಪ್ರಸ್ತಾಪ ಮಾಡಿದ್ದಾರೆ ಎಂದು ತಮ್ಮ ಕೃತಿ 'ಫರ್‌ಗಾಟನ್ ಎಂಪೈರ್'ನಲ್ಲಿ ತಿಳಿಸಿದ್ದಾರೆ. ಆದರೆ ತಾವು ಆ ಕಲ್ಲುಗಳನ್ನು ನೋಡಿಲ್ಲವೆಂದು ಹೇಳುತ್ತಾರೆ.

ವಿಜಯನಗರಕ್ಕೆ ಏಳುಸುತ್ತಿನ ಕೋಟೆಗಳಿದ್ದು, ಅದರಲ್ಲಿ ಒಳಸುತ್ತಿನ ಕೋಟೆಯ ಹೆಬ್ಬಾಗಿಲಿನ ಕಾವಲುಗಾರರು ಸುಂಕದ ವಸೂಲಿ ಮಾಡುತ್ತಿದ್ದ ಬಗ್ಗೆ ತಿಳಿಸಿದ್ದಾರೆ. ಅಲ್ಲದೆ ಕೋಟೆಗಳನ್ನು ಕಾಯಲು ಸದೃಢವಾದ ಕಾವಲುಗಾರರು ಇದ್ದ ಬಗ್ಗೆ ಉಲ್ಲೇಖಿಸಿದ್ದಾರೆ.

ವಿಜಯನಗರ ಪಟ್ಟಣ ಮತ್ತು ಅದರ ಸುತ್ತಮುತ್ತ ಬೆಟ್ಟಗುಡ್ಡಗಳ ಪ್ರಾಕೃತಿಕ ರಕ್ಷಣೆ ಇದ್ದ ಬಗ್ಗೆ ಗಮನಿಸಬಹುದಾಗಿದೆ. ಪಟ್ಟಣದ ಸುತ್ತ ಗುಡ್ಡಗಳಿದ್ದು, ಕಣಿವೆ ಪ್ರದೇಶದಲ್ಲಿ ಕೋಟೆಗಳನ್ನು ಕಟ್ಟಿ ಅಬೇಧ್ಯವಾದ ಪಟ್ಟಣವನ್ನು ನಿರ್ಮಿಸಲಾಗಿತ್ತು. ಪ್ರವಾಸಿಗರು ಏಳುಸುತ್ತಿನ ಕೋಟೆಯ ಬಗ್ಗೆ ತಿಳಿಸಿದ್ದರೂ ಈಗ ಕೆಲವು ಸುತ್ತುಗಳು ಮಾತ್ರ ಇರುವುದನ್ನು ಗಮನಿಸಬಹುದು. ಪ್ರಾಕೃತಿಕವಾಗಿ ಈ ಪ್ರದೇಶವು ಬೃಹತ್ ಬಂಡೆಗಳನ್ನು ಹಾಗೂ ಬೆಟ್ಟಗಳನ್ನು ಹೊಂದಿದ್ದರಿಂದ ಕೋಟೆಯನ್ನು ನಿರ್ಮಿಸುವುದು ಸುಲಭವಾಗಿತ್ತು. ದೊಡ್ಡ ಕಲ್ಲುಗಳನ್ನು ಆಯತಾಕಾರ ಅಥವಾ ಚೌಕಕಾರದ ಮುಂಭಾಗವನ್ನು ಹೊಂದಿ ಬೆಣೆಯ ರೂಪದಲ್ಲಿ ಸಿದ್ಧಪಡಿಸಿ ಒಂದರಮೇಲೊಂದನ್ನಿಟ್ಟು ಅಗಲವು ಕಿರಿದಾಗುತ್ತಾ ಸಾಗಿ ಮೇಲ್ಭಾಗವು ಚೂಪಾಗಿರುವಂತೆ ನಿರ್ಮಿಸಲಾಗಿದೆ. ಈ ಕಲ್ಲುಗಳ ಮಧ್ಯೆ ಯಾವುದೇ ರೀತಿಯ ಸುಣ್ಣ ಅಥವಾ ಗಾರೆಯನ್ನು ಉಪಯೋಗಿಸದೇ ಇರುವುದನ್ನು ಕಾಣಬಹುದು. ಕೋಟೆಯ ಹೊರಭಾಗ ಎತ್ತರವಾಗುತ್ತಾ ಸಾಗಿದರೆ ಹಿಂಭಾಗ ಇಳಿಜಾರಾಗಿರುವುದನ್ನು ಅನೇಕ ಕಡೆ ಇಂದೂ ಗಮನಿಸಬಹುದು. ಕೋಟೆಯ ಮಧ್ಯೆ ಸಮಾನಾಂತರದಲ್ಲಿ ಕೊತ್ತಳಗಳನ್ನು ನಿರ್ಮಿಸಿ ಅಲ್ಲಿ ಕಾವಲುಗಾರರನ್ನು ಇರಿಸಲಾಗುತ್ತಿತ್ತು. ಈ ಕೋಟೆ ಗೋಡೆಗಳಲ್ಲಿ ಅಲ್ಲಲ್ಲಿ ವಿವಿಧ ಬಗೆಯ ಬಾಗಿಲುಗಳಿದ್ದವು. ನೇರ ಪ್ರವೇಶದ ನಿಯಂತ್ರಣ ಮಾಡಿದ್ದಲ್ಲದೆ ಅಂಕುಡೊಂಕಾದ ದಾರಿಗಳಿಂದ ಪುರಪ್ರವೇಶ ಅಷ್ಟು ಸುಲಭ ಸಾಧ್ಯವಾಗದೆ ತೀವ್ರ ನಿಗಾಕ್ಕೆ ಒಳಪಟ್ಟಿತ್ತು ಎಂಬುದನ್ನು ಗಮನಿಸಬಹುದು.

ವಿಜಯನಗರದ ಕೋಟೆಗೋಡೆಗಳ ನಿರ್ಮಾಣ, ನಗರದ ಬೆಳವಣಿಗೆಯಾದಂತೆ ಹಲವು ಸುತ್ತುಗಳಾಗಿ ವರ್ಧಿಸುತ್ತಾ ಒಂದು ಕಾಲಕಾಲಕ್ಕೆ ವಿಸ್ತಾರಗೊಂಡು ಹಲವು ಸುತ್ತುಗಳಾಗಿ ಬೆಳೆದಿರುವುದನ್ನು ಶಾಸನಗಳಿಂದ ಗುರುತಿಸಬಹುದಾಗಿದೆ. ಕೋಟೆಬಾಗಿಲುಗಳು, ಕೊತ್ತಳಗಳು, ಉಪನಗರಗಳು ಅಲ್ಲದೆ ಕೆಲವು ಪ್ರದೇಶಗಳಿಗೆ ನಿರ್ದಿಷ್ಟವಾದ ಹೆಸರನ್ನಿಟ್ಟಿದ್ದರಿಂದ ಅವುಗಳನ್ನು ಗುರುತಿಸಲು ಸುಲಭ ಸಾಧ್ಯವಾದ ಉಪಾಯವನ್ನು ಮಾಡಿಕೊಂಡಿದ್ದರು. ಈ ಬಗ್ಗೆ ಅನೇಕ ಶಾಸನಗಳು ಉಲ್ಲೇಖಿಸಿವೆ.

ಅಂದಿನ ವಿಜಯನಗರದ ಪೂರ್ವದಿಕ್ಕಿನ ಕಣಿವೆಯಲ್ಲಿ ಅಂದರೆ ಇಂದಿನ ಕಮಲಾಪುರದ ಪೂರ್ವಕ್ಕೆ ಈ ಕುದುರೆ ಕಲ್ಲುಗಳು ಕಂಡುಬರುತ್ತವೆ. ಉದ್ದನೆಯ ಕಲ್ಲುಗಳನ್ನು ಎರಡೂ ಕಡೆಯ ತುದಿಯಲ್ಲಿ ನೆಟ್ಟು ಮಧ್ಯಭಾಗದಲ್ಲಿ ವಿವಿಧ ಗಾತ್ರದ ಸ್ವಾಭಾವಿಕವಾಗಿ ದೊರಕುವ ದುಂಡನೆಯ ಕಲ್ಲುಗಳನ್ನು ನೆಟ್ಟಿದ್ದಾರೆ. ಈ ಉಂಡೆ ಕಲ್ಲುಗಳನ್ನು ಗೊತ್ತಾದ ರೀತಿಯಲ್ಲಿ ವ್ಯವಸ್ಥಿತವಾಗಿ ನಿಲ್ಲಿಸಲಾಗಿದೆ. ಅದರೊಡನೆ ಕೆಲವು ಪ್ರದೇಶದಲ್ಲಿ ಚದುರಿದಂತೆಯೂ ನೆಡಲಾಗಿದೆ. ಇವು ಸುಮಾರು ಹತ್ತುಮೀಟರ್ ಅಗಲದವರೆಗೂ ಹರಡಿಕೊಂಡಿವೆ.

❖ ❖

೨೯

ವಿಜಯನಗರ ಕಾಲದ ನಾಯಿಂದ ಜನಾಂಗದ ಪ್ರಮುಖರು

ಡಾ. ಬಿ.ರಾಜಶೇಖರಪ್ಪ

ವಿಜಯನಗರ ಕಾಲದಲ್ಲಿ ಪ್ರಜೆಗಳ ಮೇಲೆ ಅನೇಕ ವಿಧದ ತೆರಿಗೆ ಸುಂಕಗಳನ್ನು ವಿಧಿಸಲಾಗಿತ್ತಾದರೂ, ಕಾರಣಾಂತರದಿಂದ ಆಗಾಗ ಕೆಲವಕ್ಕೆ ವಿನಾಯಿತಿ ನೀಡಲಾಗುತ್ತಿತ್ತೆಂಬ ಅಂಶ ಸರ್ವವಿದಿತ. ಕೆಲವಕ್ಕಂತೂ ವ್ಯಾಪಕವಾಗಿ ವಿನಾಯಿತಿ ಇತ್ತೆಂಬ ಅಂಶ ಕೂಡಾ ಸ್ಪಷ್ಟ. ಹಾಗೆ ವ್ಯಾಪಕವಾಗಿ ನೀಡಲಾದ ವಿನಾಯಿತಿಗಳಲ್ಲಿ ತುಂಬ ಕುತೂಹಲಕಾರಿಯಾದದ್ದು ನಾಯಿಂದರ ಮೇಲೆ ಹಾಕಿದ್ದ ತೆರಿಗೆ ಸುಂಕಗಳ ವಿನಾಯಿತಿ. ಸಾಮ್ರಾಜ್ಯದ ಅನೇಕ ಪ್ರಾಂತಗಳಲ್ಲಿ ಆ ಜನಾಂಗದವರಿಗೆ ವಿವಿಧ ತೆರಿಗೆ ಸುಂಕಗಳ ವಿನಾಯಿತಿಗಳನ್ನು ಅನೇಕ ಶಾಸನಗಳು ಸಾರುತ್ತವೆ. ಅವನ್ನು ನೋಡಿದರೆ, ಬೇರಾವ ಜನಾಂಗಕ್ಕೂ ಬಹುಶ: ಅಷ್ಟು ಪ್ರಮಾಣದಲ್ಲಿ ಆಗ ಸುಂಕ ವಿನಾಯಿತಿ ನೀಡಿರುವುದು ಕಂಡುಬರುವುದಿಲ್ಲ. ಆ ಜನಾಂಗಕ್ಕೆ ಅಷ್ಟೊಂದು ವಿನಾಯಿತಿ ನೀಡಲು ಕಾರಣ ಏನು? ಮತ್ತು ಕಾರಣ ಯಾರು? ಈ ಬಗ್ಗೆ ಪರಿಶೀಲಿಸಿದಾಗ, ಈ ವಿನಾಯಿತಿಯ ಹಿಂದೆ ಆ ಜನಾಂಗದ ಇಬ್ಬರು ಪ್ರಭಾವಶಾಲಿ ಪ್ರಮುಖರು ಕಾಣಬರುತ್ತಾರೆ. ಅವರೇ ತಿಮ್ಮೋಜ ಮತ್ತು ಕೊಂಡೋಜ.

ವಿಜಯನಗರ ಅರಸರ ಜೊತೆ ಈ ತಿಮ್ಮೋಜ ಕೊಂಡೋಜರಿಗೆ ಉಂಟಾದ ಮತ್ತು ಬೆಳೆದ ಸಂಪರ್ಕ ಹಾಗೂ ಅವರಿಂದ ಅವರ ಜನಾಂಗಕ್ಕೆ ಉಂಟಾದ ಲಾಭ ಮತ್ತು ಸ್ಥಾನಮಾನ, ಅವರ ಬಗೆಗಿನ ಲಭ್ಯ ಚರಿತ್ರೆ ಕುತೂಹಲಕಾರಿಯಾದವು. ಇನ್ನೂ ಹೆಚ್ಚಿನ ಕುತೂಹಲದ ಸಂಗತಿ ಎಂದರೆ ಒಂದು ಕಾಲಕ್ಕೆ (ಕ್ರಿ.ಶ. ೧೬ನೇ ಶತಮಾನದ ಕಾಲಕ್ಕೆ) ಮನುಷ್ಯರಾಗಿದ್ದ ಇವರು ಆ ತರುವಾಯ (ಕ್ರಿ.ಶ. ೧೮ನೇ ಶತಮಾನದ ಹೊತ್ತಿಗೆ) ಆ

ಜನಾಂಗದ ದೇವರುಗಳಾಗಿ ಪರಿಗಣಿತರಾಗಿದ್ದುದು. ಇವರನ್ನು ನಯನಕ್ಷತ್ರಿಯರ ದೇವರು ಎಂದು ಹೆಸರಿಸುವ ಒಂದು ಶಾಸನ ಹಾಗೂ ಅವರ ಒಂದು ಉಬ್ಬುಶಿಲ್ಪ ಈಗಾಗಲೇ ಬೆಳಕಿಗೆ ಬಂದಿವೆ. ಈ ಎಲ್ಲ ಹಿನ್ನೆಲೆಯಿಂದ ಇವರು ಆ ಜನಾಂಗದ 'ಸಾಂಸ್ಕೃತಿಕ ನಾಯಕರು' ಎಂದು ಪರಿಗಣಿಸಬೇಕಾದವರಾಗಿ ಕಾಣುತ್ತಾರೆ. ಈ ಎಲ್ಲ ಅಂಶಗಳು ವಿಜಯನಗರ ಕಾಲದ, ಅಷ್ಟೇ ಏಕೆ, ನಮ್ಮ ನಾಡಿನ ಸಾಮಾಜಿಕ ಸಾಂಸ್ಕೃತಿಕ ಚರಿತ್ರೆಯಲ್ಲಿ ವಿಶೇಷವಾಗಿ ಗುರುತಿಸಬೇಕಾದವು. ಇದನ್ನು ಸಾದರಪಡಿಸುವುದು ಈ ಸಂಪ್ರಬಂಧದ ಉದ್ದೇಶ.

ನಾಯಿಂದರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆಯಾದರೂ ಅವರು ತಮ್ಮನ್ನು 'ನಯನಕ್ಷತ್ರಿಯ' (ಅಥವಾ 'ನಯವಜ ಕ್ಷತ್ರಿಯ') ಎಂದೂ 'ನಾಯಿಂದ ಬ್ರಾಹ್ಮಣ' (ಅಥವಾ ಕೆಲವೆಡೆ 'ನಾಯಿ ಬ್ರಾಹ್ಮಣ') ಎಂದೂ ಕರೆದುಕೊಳ್ಳುವುದಕ್ಕೆ ಹೆಚ್ಚು ಇಷ್ಟಪಡುತ್ತಾರೆ. ನಾಯಿಂದಿರು ತಮ್ಮ ಕಾಯಕದಲ್ಲಿ ಕತ್ತಿ ಕತ್ತರಿ ಮುಂತಾದ 'ಶಸ್ತ್ರ'ಗಳನ್ನು ಬಳಸುವುದರಿಂದ ತಮಗೆ ಕ್ಷತ್ರಿಯತ್ವವನ್ನು ಆರೋಪಿಸಿಕೊಂಡು, ಕ್ಷತ್ರಿಯವರ್ಗದಲ್ಲೂ ಹಾಗೆಯೇ ಅವರು ಯಂತ್ರ, ಮಂತ್ರ, ಪಂಚಾಂಗ, ಪೌರೋಹಿತ್ಯ ಮುಂತಾದವುಗಳಲ್ಲಿ ಪರಿಶ್ರಮವುಳ್ಳವರಾದ್ದರಿಂದ ತಮಗೆ ಬ್ರಾಹ್ಮಣತ್ವವನ್ನು ಆರೋಪಿಸಿಕೊಂಡು, ಬ್ರಾಹ್ಮಣ ವರ್ಗದಲ್ಲೂ ತಮ್ಮನ್ನು ಗುರುತಿಸಿಕೊಳ್ಳಲು ಯತ್ನಿಸಿರುವುದು ಕಾಣುತ್ತದೆ. ಹೀಗೆ ಅವರು ತಮ್ಮನ್ನು ಸಮಾಜದ ಮೇಲುವರ್ಗದಲ್ಲಿ ಗುರುತಿಸಿಕೊಳ್ಳುವ ಪ್ರಯತ್ನದಿಂದ ಆ ಹೆಸರುಗಳು ಬಂದಿರುವುದು ಸ್ಪಷ್ಟ. ಕ್ಷೌರಿಕ ಅರ್ಥದ ಸಂಸ್ಕೃತದ ನಾಪಿತ ಶಬ್ದವೇ ಕಾಲಾಂತರದಲ್ಲಿ ರೂಪಾಂತರ ಹೊಂದಿ ಈ ಮೇಲಿನ ಹೆಸರುಗಳಲ್ಲಿ ನಯನ, ನಾಯಿಂದ, ನಾಯಿ ಶಬ್ದಗಳು ಬಂದಿರುವುದು ಕಾಣುತ್ತದೆ.

ಈ ಜನಾಂಗದವರು ಮದುವೆ ಇತ್ಯಾದಿ ಶುಭಕಾರ್ಯಗಳಲ್ಲಿ ತಮ್ಮ ಕುಲದೇವತೆಗೆ ಮೊದಲ ವೀಳ್ಯದ ಮರ್ಯಾದೆ ಸಲ್ಲಿಸಿದ ಮೇಲೆ, ತಮ್ಮ ಕುಲದ ಮೂಲಪುರುಷರೆಂದು ಖಂಡೋಜಿ ಮತ್ತು ತಿಮ್ಮೋಜಿಯರಿಗೆ ವೀಳ್ಯ ಸಲ್ಲಿಸುವ ಸಂಪ್ರದಾಯವಿದೆ. ಇವರ ತರುವಾಯ ವೀಳ್ಯ ಸಲ್ಲುವುದು ಇವರ ಕುಲದ 'ಕಟ್ಟೆಮನೆ' ಮತ್ತು 'ಯಜಮಾನ - ಕೋಲುಕಾರ'ರಿಗೆ. ಮೈಸೂರು ಕಡೆ ಖಂಡೋಜಿಯನ್ನು ಕೊಂಡೋಜಿ ಎಂದೂ ಕರೆಯುವುದುಂಟು. ಚಿತ್ರದುರ್ಗದ ಬೆಟ್ಟಸಂಕೀರ್ಣದ ಪಶ್ಚಿಮ ಭಾಗದಲ್ಲಿ ಈಗ 'ಷೂಟಿಂಗ್ ಬೈಲು' ಎಂದು ಕರೆಯುವ ಜಾಗದ ಬಂಡೆಯೊಂದರಲ್ಲಿ ನಿಂತ ಇಬ್ಬರ ಪುರುಷರ ಉಬ್ಬು ಕೆತ್ತನೆಯ ಮೇಲೆ, ಅವರನ್ನು ಕೊಂಡೋಜಿ ತಿಮ್ಮೋಜಿ ಎಂದು ಹೆಸರಿಸಿ, ಅವರು ನಯನಕ್ಷತ್ರಿಯರ ದೇವರು ಎಂದು ವಿಶೇಷಿಸಿರುವ ಕ್ರಿ.ಶ.ಸು. ೧೮ನೆಯ ಶತಮಾನದ ಕನ್ನಡ ಬರಹವೊಂದಿದೆ. ಹೀಗೆ ನಾಯಿಂದ ಜನಾಂಗದ ಮೂಲಪುರುಷರು ಮತ್ತು ದೇವರು ಎಂದು ಗೌರವಿಸಲ್ಪಟ್ಟ ಕೊಂಡೋಜಿ ತಿಮ್ಮೋಜಿಯರು ಕ್ರಿ.ಶ. ೧೬ನೇ ಶತಮಾನದ ಕಾಲದಲ್ಲಿ ಮನುಷ್ಯ ವ್ಯಕ್ತಿಗಳಾಗಿ ಬದುಕಿದ್ದವರು ಎಂಬ ಸಂಗತಿ ಆ ಕಾಲದ ಅನೇಕ ಶಿಲಾಶಾಸನಗಳ ಅಭ್ಯಾಸದಿಂದ ಸ್ಪಷ್ಟವಾಗುತ್ತದೆ. ಶಾಸನಗಳಲ್ಲಿ ಕಾಣಸಿಗುವ ಇವರ ಹೆಸರಿನ

ರೂಪ ಕೊಂಡೋಜ ತಿಮ್ಮೋಜ ಎಂದು. ಇವರ ಹೆಸರಿನ ಜೊತೆಗೆ ಭದ್ರೋಜ, ಭರ್ಮೋಜ ಎಂಬ ಇನ್ನಿಬ್ಬರ ಹೆಸರುಗಳೂ ಕೆಲವೇ ಕೆಲವೆಡೆ ಬಂದಿರುವುದುಂಟು. ಆದರೆ ಹೆಚ್ಚು ಕಡೆ ಕಾಣಿಸುವ ಹೆಸರುಗಳೆಂದರೆ ತಿಮ್ಮೋಜ ಕೊಂಡೋಜರವೇ. ಇವರ ಪರಸ್ಪರ ಸಂಬಂಧ ಇನ್ನೂ ಸ್ಪಷ್ಟ ತಿಳಿಯದು.

ಇವರು ಮೂಲತಃ ಆಂಧ್ರಪ್ರದೇಸದ ಕಂದನವೋಲು (ಈಗಿನ ಕರ್ನೂಲು) ಕಡೆಯವರೆಂದೂ ಆಮೇಲೆ ಅಲ್ಲಿಂದ ಕರ್ನಾಟಕದ ಬಾದಾಮಿಗೆ ಬಂದಿರಬೇಕೆಂದೂ ತಿಳಿಯಲಾಗಿದೆ. ವಿಜಯನಗರಕ್ಕೆ ಬಂದ ಇವರು ರಾಜಬಂಧುಗಳಾದ ರಾಮರಾಜಯ್ಯ ಮುಂತಾದ ಗಣ್ಯರ ಸಂಪರ್ಕ ಪಡೆದು, ಸದಾಶಿವರಾಯ ದೊರೆಯ ಪ್ರೀತಿಯನ್ನೂ ಗಳಿಸಿ, ಆಮೇಲೆ ತಮ್ಮ ಜನಾಂಗದವರಿಗೆ ವಿಧಿಸಲಾಗಿದ್ದ ಸಿದ್ಧಾಯ, ಮನೆವಣ, ಕಾಣಿಕೆ, ಕಡ್ಡಾಯ, ಮದುವೆಯ ಸುಂಕ, ಬಿರಾಡ ಮೊದಲಾದ ಎಲ್ಲ ಬಗೆಯ ತೆರಿಗೆ ಸುಂಕಗಳನ್ನು ಮಾನ್ಯ ಮಾಡಿಸಿಕೊಂಡರೆಂದೂ ತಿಳಿಯುತ್ತದೆ. ತೆರಿಗೆ ಸುಂಕಗಳನ್ನು ಅವರು ಮಾನ್ಯ ಮಾಡಿಸಿಕೊಂಡ ಸಂಗತಿ ಕರ್ನಾಟಕದ ಚಿತ್ರದುರ್ಗ, ಬಳ್ಳಾರಿ, ಧಾರವಾಡ, ಬಿಜಾಪುರ, ಬೆಳಗಾವಿ, ತುಮಕೂರು, ಮೈಸೂರು ಹಾಗೂ ನೆರೆಯ ಆಂಧ್ರಪ್ರದೇಶದ ಅನಂತಪುರ ಈ ಜಿಲ್ಲೆಗಳ ಶಾಸನಗಳಿಂದ ಈಗಾಗಲೇ ವಿದಿತ. ಇಷ್ಟು ವಿಶಾಲವಾದ ಭೌಗೋಳಿಕ ವ್ಯಾಪ್ತಿಯಲ್ಲಿ ನಾಯಿಂದರು, ಬಹುಶಃ ಇತರ ಯಾವ ಜನಾಂಗದವರಿಗಿಂತಲೂ, ಹೆಚ್ಚಿನ ರೀತಿಯ ತೆರಿಗೆ-ಮಾನ್ಯತೆ ಪಡೆಯಲು ವಿಜಯನಗರದ ಅರಸರು ಹಾಗೂ ಅವರ ಸಮೀಪ ಬಂದುಗಳೊಂದಿಗೆ ಕೊಂಡೋಜ ತಿಮ್ಮೋಜರು ಹೊಂದಿದ್ದ ಪ್ರಭಾವಪೂರ್ಣ ಸಂಪರ್ಕ ಕಾರಣವೆನ್ನುವುದನ್ನು ಹೇಳಬೇಕಾಗಿಲ್ಲ.

ವಿಜಯನಗರದ ಅರಸರು ಹಾಗೂ ಅವರ ಬಂಧುಗಳೊಂದಿಗಿನ ಅವರ ಆ ಸಂಪರ್ಕದ ಪ್ರಭಾವ ಕಾರಣವಾಗಿಯೋ ಏನೋ, ವಿಜಯನಗರ ಸಾಮ್ರಾಜ್ಯದ ಪತನಾನಂತರದಲ್ಲೂ (ಹಿಂದೊಮ್ಮೆ ಅವರ ಅಧೀನರಾಗಿದ್ದ) ಪಾಳೆಯಗಾರರುಗಳ ಕಾಲದಲ್ಲೂ, ಆ ತೆರಿಗೆ ಮಾನ್ಯತೆ ವಂಶಪಾರಂಪರ್ಯವಾಗಿ ಆ ಜನಾಂಗದವರಿಗೆ ಸಲ್ಲುತ್ತಾ ಬಂದಿತು. ಇದನ್ನು ಅನೇಕ ಶಾಸನಗಳು ಸಾರುತ್ತವೆ. ತೆರಿಗೆಮಾನ್ಯತೆಗೆ ಸಂಬಂಧಿಸಿದಂತೆ ಈ ಜನಾಂಗಕ್ಕೆ ಸಮಾನಾಂತರ ವಾದ ಇನ್ನೊಂದು ಉದಾಹರಣೆ ಆ ಕಾಲದಲ್ಲಿ ಸಿಕ್ಕುವುದು ಕಷ್ಟ.

ವಿಜಯನಗರದ ಪ್ರಭುತ್ವ ನಾಯಿಂದರಿಗೆ ಇಷ್ಟೊಂದು ಉತ್ತೇಜನ ನೀಡಲು ಕಾರಣ ವೇನೆಂದು ಹಿರಿಯ ವಿದ್ವಾಂಸರಾದ ಡಾ. ಬಿ.ಎ.ಸಾಲೆತ್ತೂರ್ ಅವರು ಸಾಕಷ್ಟು ವಿವೇಚಿಸಿ, ತಮ್ಮೊಂದು ಊಹೆ ಅಥವಾ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ. ಅದನ್ನು ಸಂಗ್ರಹ ವಾಗಿ ಹೀಗೆ ಹೇಳಬಹುದು. ವಿಜಯನಗರದ ಅರಸರು ನಾಯಿಂದರಿಗೆ ಇಷ್ಟೊಂದು ಪುರಸ್ಕಾರ ನೀಡುವಲ್ಲಿ ಅವರ ಕಸುಬಿನ ಕುಶಲತೆಯೊಂದೇ ಕಾರಣವಾಗಿರಲಾರದು; ಅವರು ಸಮಾಜಕ್ಕೆ ಉಪಯುಕ್ತ ಸೇವೆ ಸಲ್ಲಿಸುವವರೆಂಬ ಮತ್ತು ಹಿಂದೂಗಳ ಕೆಲವು ಸಂಪ್ರದಾಯಗಳಲ್ಲಿ ಅವರ ಪಾತ್ರ ಮುಖ್ಯ ಎಂಬ ಈ ಯಾವುದೇ ಕಾರಣವೂ ಇದ್ದಿರಲಾರದು; ಬಹುಶಃ ಆಗಿನ ಕಾಲದಲ್ಲಿ ರಾಜರಿಗೆ ಕಿರಿಕಿರ ಎನಿಸಿದ್ದ ಕುರುಬಂರಂಥ ಗಿರಿಜನ ಪಂಗಡಗಳನ್ನು ಹತ್ತಿಕ್ಕುವಲ್ಲಿ

ನಾಯಿಂದರ ಸೇವೆಯನ್ನು ಅವರು ಪಡೆಯುತ್ತಿದ್ದು ಅಷ್ಟೊಂದು ಪುರಸ್ಕರಿಸಬೇಕು. ಹೀಗೆ ರಾಜಕೀಯವಾದ ಕಾರಣವೊಂದನ್ನು ಅವರು ಊಹಿಸಿದ್ದಾರೆ. ಐತಿಹ್ಯ ಅಥವಾ ವೃತ್ತಾಂತ ಆಧರಿಸಿದ ಅವರ ಊಹೆಗೆ ಸೂಕ್ತ ಸಾಕ್ಷ್ಯಾಧಾರ ಸದ್ಯಕ್ಕೆ ಕಂಡಿಲ್ಲವಾದರೂ ಆ ಬಗೆಗೆ ಪರಿಶೋಧನೆ ಮುಂದುವರಿಯಬೇಕಾಗಿದೆ; ಸತ್ಯಾಂಶ ಏನೆಂದು ದೃಢಪಡಬೇಕಾಗಿದೆ.

ಮೇಲೆ ಹೇಳಿದಂತೆ ಡಾ. ಸಾಲೆತ್ತೂರ್ ಅವರು ಊಹಿಸುವ ಕಾರಣಕ್ಕೆ ಭಿನ್ನವಾದ ಇತರ ಕಾರಣಗಳೇನಾದರೂ ಕಾಣಬಹುದೆ ಎಂಬುದು ವಿಚಾರಣೀಯ. ಶಾಸನಗಳು ಕೊಂಡೋಜ ತಿಮ್ಮೋಜರನ್ನು ವಿಶೇಷಿಸಿರುವಲ್ಲಿ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಕೆಲವು ಕಾರಣಗಳನ್ನು ಸೂಚಿಸಿರುವಂತಿದೆ. ಶಾಸನಗಳು ಅವರನ್ನು 'ದೊರೆಗಳ ಗಡ್ಡದ ಕೆಲಸಿಗರು' ಎಂದು ವಿಶೇಷಿಸಿರುವಲ್ಲಿ ಅವರು ತಮ್ಮ ಜಾತಿ ಸಹಜವಾದ ನಾಯಿಂದ ಕಸುಬಿನಲ್ಲಿ ಕುಶಲತೆಯನ್ನು ತೋರಿ ರಾಜ ಮತ್ತು ರಾಜಬಂಧುಗಳ ಸೇವೆ ಮಾಡುತ್ತಿದ್ದರೆಂದು ಅಭಿಮಾನದಿಂದ ಹೇಳಿರುವಂತಿದೆ. ಇದಲ್ಲದೆ ಅವರನ್ನು 'ರಾಜ ನಿಯೋಗದ ನಾಯಿಂದರು' ಎಂದು ಹೇಳಿರುವುದರಿಂದ ಅವರು ಕೇವಲ ರಾಜವರ್ಗಕ್ಕೆ ನಾಯಿಂದರಾಗಿ ಸೇವೆ ಸಲ್ಲಿಸುತ್ತಿದ್ದವರೆಂದಲ್ಲ, ಸಂದರ್ಭಾನುಸಾರ ರಾಜನಿಯೋಗಿಗಳಾಗಿಯೂ ಸಹ ಗುರುತರ ಪಾತ್ರ ನಿರ್ವಹಿಸುತ್ತಿದ್ದವರೆಂದೂ ಸೂಚಿತವಾಗುತ್ತದೆ. ಇದಷ್ಟೇ ಅಲ್ಲ, ಇವರನ್ನು 'ದೇಶಾಭಾಗದ ನಾಯಿಂದರು' ಎಂದು ಕರೆದಿರುವಲ್ಲಿ, ಇವರು ಸಾಂದರ್ಭಿಕವಾಗಿ ನ್ಯಾಯ ನಿರ್ಣಯ ವಿಷಯದಲ್ಲಿ ಕೂಡಾ ಮಹತ್ತ್ವದ ಪಾತ್ರ ವಹಿಸುತ್ತಿದ್ದವರೆಂದೂ ಬಿಂಬಿತವಾಗುತ್ತದೆ. ಅವರು ತೆರಿಗೆಮಾನ್ಯತೆ ಪಡೆಯಲು ಇಂಥ ಕಾರಣಗಳಿರುವ ಸಾಧ್ಯತೆಯೂ ಇದೆ.

ಇಷ್ಟಲ್ಲದೆ, ಕೊಂಡೋಜ ತಿಮ್ಮೋಜರ ಹೆಸರುಗಳ ಅಂತ್ಯದಲ್ಲಿಯ 'ಓಜ' ಎಂಬ ಶಬ್ದ ಕೂಡಾ ಗಮನೀಯ. ಎಲ್ಲ ಶಾಸನಗಳಲ್ಲೂ ಈ ಶಬ್ದ ತಪ್ಪದೆ ಅವರ ಹೆಸರಿನ ಅವಿಭಾಜ್ಯ ಭಾಗವೆಂಬಂತೆ ಬಂದಿದೆ. 'ಓಜ' ಎಂದರೆ 'ಆಚಾರ್ಯ' ಎಂದರ್ಥ. ಈ ಶಬ್ದ ಆ ಕಾಲದ ನಾಯಿಂದರಿಗೆ ಚೆನ್ನಾಗಿ ಒಪ್ಪುವಂಥದ್ದೆ. ಏಕೆಂದರೆ, ಅವರು ತಮ್ಮ ಕುಲಕಸುಬನ್ನಷ್ಟೇ ಅಲ್ಲದೆ, ವಾದ್ಯ ಸಂಗೀತ ವೈದ್ಯ ಜೋತಿಷ್ಯ ಪೌರೋಹಿತ್ಯ ಇವನ್ನೂ ಸಹ ಬಲ್ಲವರಾಗಿದ್ದರು. ಈ ಜನಾಂಗದವರು ಈಗಲೂ ಅಂಥ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವುದನ್ನು ಹಾಗಾಗಿಯೆ ಕೆಲವೆಡೆ ಇವರನ್ನು 'ಪಂಡಿತರು' ಎಂದು ಮುಂತಾಗಿ ಕರೆಯುವುದನ್ನೂ ನೋಡಬಹುದು. ಒಂದು ಶಾಸನದಲ್ಲಿ ಕೊಂಡೋಜ ತಿಮ್ಮೋಜರನ್ನು ಹೆಸರಿಸುವಾಗ 'Mangalla Timmoja Kondaja' ಎಂದಿರುವುದರಿಂದ, ಅವರು ಮಂಗಳವಾದ್ಯ ವಾದಕರಾಗಿ ಸಹ ಸೇವೆ ಸಲ್ಲಿಸಿದ್ದರೆಂದು ತಿಳಿಯಬಹುದು. "ನಾಯಿಂದರು ದೇವಸ್ಥಾನ, ಉತ್ಸವ ವಿವಾಹಾದಿಗಳಲ್ಲಿ ವಾದ್ಯ ನುಡಿಸುತ್ತಿದ್ದರೆಂಬ ಸಂಗತಿ ಹಿಂದಿನಿಂದಲೂ ಪ್ರಸಿದ್ಧವಾದುದು." ಹೀಗೆ ಕೊಂಡೋಜ ತಿಮ್ಮೋಜರು ಡಾ. ಸಾಲೆತ್ತೂರ್ ಊಹಿಸುವ ರೀತಿಯ ಕಾರಣಕ್ಕೆ ಭಿನ್ನವಾಗಿ, ಬಹುವಿಧದ ಮತ್ತು ಮಹತ್ವದ ಸೇವೆ

ಸಲ್ಲಿಸುತ್ತಿದ್ದ ಕಾರಣಕ್ಕೆ ಅವರ ಜನಾಂಗಕ್ಕೆ ವಿಶೇಷ ರೀತಿಯಲ್ಲಿ ತೆರಿಗೆಮಾನ್ಯತೆ ಪಡೆದರೆಂದು ತಿಳಿಯಬೇಕಾಗುತ್ತದೆ.

ಇಲ್ಲಿ ಮತ್ತೊಂದು ಅಂಶವನ್ನು ಕೂಡಾ ಪ್ರಸ್ತಾಪಿಸಬಹುದೆಂದು ಅನ್ನಿಸುತ್ತದೆ. ಮೇಲೆ ತಿಳಿಸಿದ, ಚಿತ್ರದುರ್ಗದ ಬೆಟ್ಟದ ಬಂಡೆಯಲ್ಲಿರುವ ಸರಳ ಕೆತ್ತನೆಯ ಶಿಲ್ಪದಲ್ಲಿ ತಿಮ್ಮೋಜ ಕೊಂಡೋಜರು ನಿಲುವಂಗಿ, ಉತ್ತರೀಯ, ಸುರುವಾಲು, ಚಡಾವು ಧರಿಸಿ ನಿಂತಿರುವಂತೆ ಚಿತ್ರಿಸಲಾಗಿರುವುದರ ಜೊತೆಗೆ, ಇಂಗ್ಲಿಷಿನ 'ಯು' ಅಕ್ಷರವನ್ನು ಹೋಲುವಂತಹ ಹಣೆಯ ನಾಮದಿಂದ ಅವರು ವೈಷ್ಣವ ಪಂಥದವರೆಂದೂ ಸೂಚಿಸಿದೆ. ವೈಷ್ಣವ ಪಂಥವನ್ನು ಅನುಸರಿಸಿದ ನಾಯಿಂದರು ಬ್ರಾಹ್ಮಣ ಅಥವಾ ಸಾತಾನಿ (ಶ್ರೀವೈಷ್ಣವ) ಗುರುಗಳಿಂದ ಶಂಖ ಚಕ್ರ ನಾಮಗಳ ಮುದ್ರೆಯನ್ನು ಪಡೆಯುತ್ತಿದ್ದರು; ಮದ್ಯ ಮಾಂಸಗಳಿಂದ ದೂರವಿರುತ್ತಿದ್ದರಲ್ಲದೆ ಪೌರೋಹಿತ್ಯವನ್ನು ಮಾಡುತ್ತಿದ್ದರೆಂದು ತಿಳಿಯುತ್ತದೆ. ವಿಜಯನಗರದ ತುಳುವ ವಂಶದ ಅರಸರು ವೈಷ್ಣವ ದೇವಾಲಯ, ಮಠ ಮತ್ತು ಗುರುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದು ಸ್ಪಷ್ಟ. ತಿಮ್ಮೋಜ ಕೊಂಡೋಜರೂ ವೈಷ್ಣವ ಸಂಪ್ರದಾಯಕ್ಕೆ ಸೇರಿದ್ದರೆಂಬ ಸಂಗತಿ, ಅದೇ ತುಳುವ ವಂಶದ ದೊರೆ ಸದಾಶಿವರಾಯ ಹಾಗೂ ರಾಜವರ್ಗದವರ ಮನ್ನಣೆಗೆ ಹೆಚ್ಚಿನ ಒಂದು ಕಾರಣವಾಗಿರಬಹುದು.

ಹೀಗೆ ತಮ್ಮ ಜನಾಂಗಕ್ಕೆ ತೆರಿಗೆ ಮಾನ್ಯತೆ ಸಂಪಾದಿಸಿಕೊಟ್ಟು ಅದರ ಪ್ರತಿಷ್ಠೆ ಸ್ಥಾನಮಾನಗಳಿಗೆ ಮುಖ್ಯ ಕಾರಣರಾದ ತಿಮ್ಮೋಜ ಕೊಂಡೋಜರು, ತರುವಾಯದಲ್ಲಿ ಅಂದರೆ ಕ್ರಿ.ಶ. ೧೮ನೆಯ ಶತಮಾನದ ಹೊತ್ತಿಗಾಗಲೇ ಆ ಜನಾಂಗದವರ ದೃಷ್ಟಿಯಲ್ಲಿ ಅವರ ಕುಲದೇವತೆಗಳೇ ಆಗಿಹೋಗಿದ್ದರೆಂದು ಮೇಲೆ ತಿಳಿಸಿದ ಚಿತ್ರದುರ್ಗದ ಶಾಸನ ಮತ್ತು ಶಿಲ್ಪದಿಂದ ವ್ಯಕ್ತವಾಗುತ್ತದೆ. ಎಲ್ಲ ಕಡೆಯಲ್ಲಿ ಅಲ್ಲದಿದ್ದರೂ ಮೈಸೂರು ಮುಂತಾದ ಕೆಲವೆಡೆಯಲ್ಲಾದರೂ ಈ ಜನಾಂಗದವರು ಸಾಂಕೇತಿಕವಾಗಿ ಅವರನ್ನು ದೇವರಾಗಿ ಪೂಜಿಸುವ ಗೌರವಿಸುವ ಪರಿಪಾಟವಿಟ್ಟುಕೊಂಡಿರುವುದು ಈಗಲೂ ಕಂಡುಬರುತ್ತದೆ. ಆದರೆ ಇವರ ದೇವಾಲಯಗಳಾಗಲಿ, ದೇವರಂತೆ ಇವರನ್ನು ಮೂರ್ತಿಸಿರುವ ಶಿಲ್ಪಗಳಾಗಿ ಕರ್ನಾಟಕದಲ್ಲಿ ಈವರೆಗೆ ಕಂಡುಬರುವುದಿಲ್ಲ ಎಂಬ ಮಾತಿತ್ತು. ಆದರೆ ಚಿತ್ರದುರ್ಗದ ಬಂಡೆಯಲ್ಲಿ ಕಂಡುಬಂದಿರುವ ಮೇಲೆ ತಿಳಿಸಿದ ಶಿಲ್ಪ ಆ ಮಾತಿಗೆ ಒಂದು ಅಪವಾದವೆಂಬಂತಿದೆ. ಆಂಧ್ರಪ್ರದೇಶದ ಪ್ರಸಿದ್ಧ ಕ್ಷೇತ್ರವಾದ ತಿರುಪತಿಯಲ್ಲಿ ಕೊಂಡೋಜನ ದೇವಸ್ಥಾನವೊಂದಿರುವುದೆಂದು ಕ್ಷೌರಿಕರೊಬ್ಬರು ಹೇಳಿದುದಾಗಿ ಹಿರಿಯ ವಿದ್ವಾಂಸರಾದ ಡಾ. ಎಸ್.ನಾಗರಾಜು ನನಗೆ ತಿಳಿಸಿದ್ದಾರೆ. ಆ ಬಗ್ಗೆ ಖುದ್ದು ಪರಿಶೀಲಿಸಬೇಕಾದ ಅಗತ್ಯವಿದೆ.

ಒಂದು ಕಾಲಕ್ಕೆ ಮನುಷ್ಯರಾಗಿ ಬದುಕಿ ಬಾಳಿದ್ದವರು, ಒಂದು ಜನಸಮುದಾಯದ ಹಿತಸಾಧನೆಗಾಗಿ ಅಸಾಧಾರಣ ಕಾರ್ಯ ಮಾಡುವುದರಿಂದಲೋ ಇಲ್ಲವೆ ತಮ್ಮ ವಸ್ತು ಪ್ರಾಣವನ್ನೇ ಈಡಾಡುವುದರಿಂದಲೋ ತರುವಾಯದ ಕಾಲದಲ್ಲಿ ಆ ಸಮುದಾಯದ

ದೇವತಾಪುರುಷರಾಗುತ್ತಾರೆ. ಅಂಥವರನ್ನು ಹೊಸ ಅಧ್ಯಯನದ ಪರಿಭಾಷೆಯಲ್ಲಿ 'ಸಾಂಸ್ಕೃತಿಕ ನಾಯಕರು' ಎಂದು ಕರೆಯುವಂತೆ ತಿಮ್ಮೋಜ ಕೊಂಡೋಜರನ್ನು ನಾಯಿಂದ ಜನಾಂಗದ 'ಸಾಂಸ್ಕೃತಿಕ ನಾಯಕರೆಂದು' ಕರೆಯುವುದು ವಿಹಿತವಾಗಿ ಕಾಣುತ್ತದೆ. ಅವರ ಜೀವನ, ಚರಿತ್ರೆ ನಮಗೆ ಪೂರ್ಣ ಲಭ್ಯವಿಲ್ಲದಿದ್ದರೂ, ತಮ್ಮ ಜನಾಂಗವನ್ನು ಒಂದು ರೀತಿಯಲ್ಲಿ ಮೇಲೆತ್ತಲು ಕಾರಣರಾದರು ಅವರು. ಒಂದು ಕಾಲಕ್ಕೆ ಮನುಷ್ಯರಾಗಿ ಬದುಕಿ ತರುವಾಯ ದೇವತಾಪುರುಷರಾಗಿ ಪೂಜಿಸಲ್ಪಡುವ ಕಾಡುಗೊಲ್ಲ ಜನಾಂಗದ ಜುಂಜಪ್ಪ, ಎತ್ತಪ್ಪ ಹಾಗೂ ಬೇಡ ಜನಾಂಗದ ಗಾದರಿ ಪಾಲನಾಯಕ, ಜಗಲೂರು ಪಾಪನಾಯಕ (ಜಗಲೂರಜ್ಜ) ಇವರಂತೆ, ತಿಮ್ಮೋಜ ಕೊಂಡೋಜರು ನಾಯಿಂದ ಜನಾಂಗಕ್ಕೆ ಸಾಂಸ್ಕೃತಿಕ ನಾಯಕರಾಗಿ ಕಾಣುತ್ತಾರೆ. ಇವರನ್ನು ಕುರಿತ ಶಿಷ್ಟ ಕಾವ್ಯ ಅಥವಾ ಜನಪದ ಕಾವ್ಯ ಎಲ್ಲಾದರೂ ಎಂದಾದರೂ ರಚನೆಯಾಗಿರಬಹುದೆ? ವಿಜಯನಗರಕ್ಕೆ ಅವರು ಬರುವ ಮುನ್ನಿನ ಹಾಗೂ ಅವರ ಕಡೆಯ ದಿನಗಳ ವಿವರ ಲಭ್ಯವಾಗಬಹುದೆ? ಇದೆಲ್ಲದಕ್ಕೆ ಉತ್ತರ ಮುಂದಿನ ಸಂಶೋಧನೆಯಿಂದ ಸಾಧ್ಯವಾಗಬಹುದು.

ಪರಾಮರ್ಶನ ಗ್ರಂಥಗಳು

೧. EC Vol, XI

೨. SII Vols, IX, XVII

೩. E.THurston : Castes and Tribes of Southern India, Vol I, Govt. Press, Madras, ೧೯೦೯

೪. H.V.Nanjundayya and L.K.Ananthakrishna Iyer : The Mysore Tribes and Castes, Vol IV, University of Mysore, Mysore, ೧೯೩೧

೫. Dr. B.A.Saletore : Social and Political Life in the Vijayanagar Empire, Vol II, Madras, ೧೯೩೪

೬. ಪ್ರೊ. ಬಿ.ರಾಜಶೇಖರಪ್ಪ : ಇತಿಹಾಸ ಕಥನ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧

೩೦

ವಿಜಯನಗರ ಪಟ್ಟಣದ ಜಲಸಾರಿಗೆ ವ್ಯವಸ್ಥೆ

ಡಾ. ಸಿ.ಎಸ್.ವಾಸುದೇವನ್

ಯಾವುದೇ ರಾಜ್ಯ ಅಥವಾ ರಾಷ್ಟ್ರದ ಅಭಿವೃದ್ಧಿಗೆ ಸಾರಿಗೆ ವ್ಯವಸ್ಥೆಯು ಬಹುಮುಖ್ಯ. ಆರ್ಥಿಕ ಅಭಿವೃದ್ಧಿ ಹಾಗೂ ಸಾಂಸ್ಕೃತಿ ಕೊಡ ಕೊಳ್ಳುವಿಕೆಗೆ ಸಮರ್ಪಕ ಸಾರಿಗೆ ವ್ಯವಸ್ಥೆಯು ಮುಖ್ಯ ಕಾರಣವಾಗುತ್ತದೆ ಎಂಬುದರಲ್ಲಿ ಯಾವ ಸಂಶಯವಿಲ್ಲ. ಪ್ರಾಚೀನ ಭಾರತದ ಹರಪ್ಪಾ ಸಂಸ್ಕೃತಿಯ ಕಾಲದಿಂದಲೂ ನಮಗೆ ಸಾರಿಗೆ ವ್ಯವಸ್ಥೆಯ ಬಗೆಗೆ ಮಾಹಿತಿಗಳು ಲಭ್ಯವಿದೆ. ನಗರೀಕರಣ ಪ್ರಕ್ರಿಯೆಯು ಪ್ರಾರಂಭಗೊಂಡ ಕಾಲದಿಂದಲೂ ನಗರ, ಗ್ರಾಮ, ಹಳ್ಳಿ ಮುಂತಾದ ಮಾನವನ ನೆಲೆಗಳಲ್ಲಿ ರಸ್ತೆಗಳನ್ನು ನಿರ್ಮಿಸಿಕೊಂಡ ಉದಾಹರಣೆಗಳು ದೊರಕಿವೆ. ಆದಿ ಇತಿಹಾಸ ಕಾಲದ ಅನೇಕ ನೆಲೆಗಳಲ್ಲಿ ರಸ್ತೆಗಳು ಇದ್ದುದ್ದಕ್ಕೆ ಸಾಕ್ಷ್ಯಧಾರಗಳು ಲಭ್ಯವಿದೆ. ಹರಪ್ಪಾ ಸಂಸ್ಕೃತಿಯ ನೆಲೆಗಳಲ್ಲಿ ಒಂದಾದ ಕಾಳಿಬಂಗಾನ್ ನ ಉತ್ಖನನದಲ್ಲಿ ರಸ್ತೆಗಳು ದೊರಕಿವೆ. ಅವುಗಳ ಅಳತೆಯು ನಿರ್ದಿಷ್ಟವಾದ ೧ : ೨ : ೩ : ೪ರ ಪ್ರಮಾಣದಲ್ಲಿ ಇರುವುದು ಕುತೂಹಲಕಾರಿಯಾದ ಸಂಗತಿ.[೧]

ಕರ್ನಾಟಕದಲ್ಲಿ ಹಲವಾರು ಪ್ರಾಚೀನ ನೆಲೆಗಳಿದ್ದರೂ ಅವುಗಳ ಸಂಪೂರ್ಣ ಉತ್ಖನನಗಳು ಆಗಿರುವುದಿಲ್ಲ. ಇದರಿಂದ ನಗರ ಅಥವಾ ಗ್ರಾಮಗಳ ರಚನೆ, ವಿನ್ಯಾಸ ಮತ್ತು ವಿಸ್ತೀರ್ಣತೆಗಳು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಆದರೆ ಪ್ರತಿ ನೆಲೆಯಲ್ಲಿಯೂ ಜನರ ಮತ್ತು ವಾಹನಗಳ ಓಡಾಟಕ್ಕೆ ಅವಶ್ಯಕವಾದ ಬೀದಿಗಳು ಇತ್ತೆಂಬುದು ಸಾಮಾನ್ಯವಾದ ಗ್ರಹಿಕೆಯೆಂದರೆ ತಪ್ಪಾಗಲಾರದು. ಕರ್ನಾಟಕದ ಆದಿ ಇತಿಹಾಸ ಕಾಲದ ನೆಲೆಗಳಲ್ಲಿ ಒಂದಾದ ವಡಗಾಂವ್-ಮಾಧವಪುರದಲ್ಲಿ ಒಂದು ಸುಂದರ ರಸ್ತೆಯು ದೊರಕಿರುವುದು ಗಮನಾರ್ಹ. ವಡಗಾಂವ್-ಮಾಧವಪುರವು ಪ್ರಸ್ತುತ ಬೆಳಗಾಂ ನಗರದ ಹೊರವಲಯ ಪ್ರದೇಶವಾಗಿದ್ದು, ಸರಿಸುಮಾರು ೧೫ ಹೆಕ್ಟೇರ್ ನಷ್ಟು ಪ್ರದೇಶದಲ್ಲಿ ವಿಸ್ತರಿಸಿದ್ದು ಅಲ್ಲಿ ಆದಿ ಇತಿಹಾಸ

ಕಾಲದ ಅವಶೇಷಗಳು ದೊರಕಿವೆ. ಈ ನೆಲೆಯನ್ನು ವಿದ್ವಾಂಸರು ಉತ್ಖನನ ನಡೆಸಿ ಆ ಕಾಲಕ್ಕೆ ಅನೇಕ ಕಟ್ಟಡ, ಬಾವಿ, ಧಾನ್ಯಗಳ ಕಣಜ, ವಿವಿಧ ಪ್ರಕಾರದ ನಾಣ್ಯ, ಮಣ್ಣಿನ ಗೊಂಬೆ, ಆಭರಣ, ಮಣಿ, ತಾಮ್ರದ ಸಾಮಾನು ಮತ್ತು ಮೃತ್ಪಾತ್ರೆಗಳನ್ನು ಬೆಳಕಿಗೆ ತಂದಿದ್ದಾರೆ.

ಈ ಪ್ರಾಚೀನ ನೆಲೆಯ ದಕ್ಷಿಣ ಭಾಗದಲ್ಲಿ ಸುಮಾರು ಒಂದನೆಯ ಶತಮಾನದ ರಸ್ತೆಯ ಕೆಲವು ಭಾಗಗಳು ಉತ್ಖನನದಲ್ಲಿ ಶೋಧವಾಗಿದೆ. ಇವು ಗಚ್ಚಿನ ಹಾಗೆ ಗಟ್ಟಿಯಾಗಿರುವ ಪದರುಗಳುಳ್ಳ ನೆಲದ ಭಾಗಗಳಾಗಿದ್ದು ಒಂದೇ ಅಕ್ಷರೇಖೆಯಲ್ಲಿದೆ. ಸುಮಾರು ೧.೪ ಕಿ.ಮೀ. ಉದ್ದದಷ್ಟು ಭಾಗಗಳು ಬೆಳಕಿಗೆ ಬಂದಿವೆ. ಇದರ ಎರಡು ಬದಿಗಳಲ್ಲಿ ಕಟ್ಟಡಗಳ ಅವಶೇಷಗಳು ಹಾಗೂ ಸೂರಿನ ಹೆಂಚುಗಳು ಇದ್ದುದರಿಂದ ಇವು ನಗರದ ಒಂದು ಪ್ರಮುಖ ಬೀದಿಯೇ ಆಗಿರಬೇಕು ಎಂದು ಅಭಿಪ್ರಾಯಪಡಲಾಗಿದೆ. ಪ್ರಸ್ತುತ ರಸ್ತೆಯನ್ನು ಆಗಿಂದ್ದಾಗ್ಗೆ ಸರಿಮಾಡುತ್ತಿದ್ದುದರ ಕುರುಹಾಗಿ ರಸ್ತೆಯಲ್ಲಿ ಒಂದು ಪದರದ ಮೇಲೆ ಇನ್ನೊಂದನ್ನು ಹಾಕಲಾಗಿದೆ. ಬೀದಿಯಲ್ಲಿ ಉತ್ತಮಮಟ್ಟದ ಇಟ್ಟಿಗೆ ಕಟ್ಟಡಗಳು ಮತ್ತು ೧೩೦ ತಾಮ್ರ ನಾಣ್ಯಗಳು ದೊರಕಿರುವುದರಿಂದ ಇದು ವ್ಯಾಪಾರಸ್ಥರ ಬೀದಿ ಎಂದು ಅಭಿಪ್ರಾಯ ಪಡಲಾಗಿದೆ. ಈ ಬೀದಿಯಲ್ಲಿ ಗಾಡಿಗಳು ಓಡಾಡಿದ ಗುರುತುಗಳು ಇಲ್ಲದ ಕಾರಣ ಈ ಬೀದಿಯನ್ನು ಜನರು ಕಾಲ್ನಡಿಗೆಗೆ ಬಳಸುತ್ತಿದ್ದರು ಎಂದು ಉತ್ಖನನಕಾರರು ತರ್ಕಿಸಿದ್ದಾರೆ. ರಸ್ತೆಯನ್ನು ಸುಮಾರು ೧ನೆಯ ಶತಮಾನದ ಆದಿಭಾಗದಲ್ಲಿ ನಿರ್ಮಿಸಿದ್ದು ೨ನೆಯ ಶತಮಾನದ ಅಂತ್ಯದವರೆಗೆ ಉಪಯೋಗದಲ್ಲಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸ ಲಾಗಿದೆ. ಉತ್ಖನನಕಾರರಾದ ಪ್ರೊ. ಅ.ಸುಂದರ ಅವರ ಪ್ರಕಾರ "ಇಷ್ಟು ಉದ್ದಗಲದ ಉತ್ತಮ ತರಗಿಯ ಪ್ರಾಚೀನ ಬೀದಿ ಸಿಕ್ಕಿರುವುದು ದಕ್ಷಿಣ ಭಾರತದಲ್ಲೇ ಇದೇ ಪ್ರಪ್ರಥಮ."[೨]

ಮಧ್ಯಕಾಲಿನ ಯುಗಕ್ಕೆ ಸೇರಿದ ವಿಜಯನಗರ ಸಾಮ್ರಾಜ್ಯದಲ್ಲಿಯೂ ವ್ಯಾಪಕವಾದ ಸಾರಿಗೆ ವ್ಯವಸ್ಥೆಯು ಇತ್ತೆಂಬುದು ತಿಳಿದ ವಿಷಯವೇ ಸರಿ. ಸಾಹಿತ್ಯಿಕ ಮತ್ತು ಶಾಸನಾಧಾರಗಳು ವಿಜಯನಗರ ಸಾಮ್ರಾಜ್ಯದ ಸಾರಿಗೆ ವ್ಯವಸ್ಥೆಯನ್ನು ಕುರಿತ ಮಾಹಿತಿಗಳನ್ನು ಒದಗಿಸುತ್ತವೆ. ರಾಜಧಾನಿಯಾದ ವಿಜಯನಗರ ಪಟ್ಟಣ ಅಥವಾ ಹಂಪೆಯು ರಾಜ್ಯದ ಇತರ ಪ್ರದೇಶಗಳೊಂದಿಗೆ ರಸ್ತೆಯ ಸಂಪರ್ಕವನ್ನು ಹೊಂದಿತ್ತು. ಆದರೆ ಅವುಗಳನ್ನು ನಿಖರವಾಗಿ ಗುರುತಿಸುವಲ್ಲಿ ಹಲವಾರು ತೊಡುಕುಗಳಿವೆ. ಅಂದಿನಿಂದ ಇಂದಿನವರೆಗೆ ಸಾಗಿ ಬಂದಿರುವ ನಗರೀಕರಣ ಪ್ರಕ್ರಿಯೆ, ವ್ಯವಸಾಯ, ಭೂಕಬಳಿಕೆ, ಪ್ರಾಕೃತಿಕ ವಿಕೋಪ ಮತ್ತು ಮುಂತಾದ ಹಲವಾರು ಕಾರಣಗಳಿಂದಾಗಿ ರಾಜಧಾನಿ ಮತ್ತು ಇತರೆ ಪ್ರದೇಶಗಳೊಂದಿಗಿನ ರಸ್ತೆಯ ಸಂಪರ್ಕ ಜಾಲವನ್ನು ಗುರುತಿಸಲು ಸಾಧ್ಯವಾಗಿಲ್ಲ.

ವಿಜಯನಗರ ಪಟ್ಟಣ ಅಥವಾ ಹಂಪೆಯಲ್ಲಿ ನಡೆಸಿದ ಉತ್ಖನನದಲ್ಲಿ ಪ್ರಾಚೀನ ರಸ್ತೆಗಳನ್ನು ಬೆಳಕಿಗೆ ತರಲಾಗಿದೆ. ಈ ರಸ್ತೆಯು ಬಹಳ ಸುಂದರವಾಗಿದ್ದು, ಹಲವಾರು

ಭಾಗಗಳಿಗೆ ಉತ್ತಮವಾದ ಸಂಪರ್ಕ ಜಾಲವನ್ನು ಏರ್ಪಡಿಸಿತ್ತು.[೩] ರಾಜಧಾನಿಯು ಒಂದು ವ್ಯವಸ್ಥಿತ ಕೋಟೆಯ ಒಳಭಾಗದಲ್ಲಿದ್ದು, ಅದಕ್ಕೆ ಅನೇಕ ಪ್ರವೇಶ ದ್ವಾರಗಳಿದ್ದವು ಹಾಗೂ ಅವುಗಳಿಗೆ ವಿವಿಧ ಹೆಸರುಗಳಿಂದ ಕರೆಯಲಾಗುತ್ತಿತ್ತು ಎಂಬುದು ಶಾಸನ ಮತ್ತು ಸಾಹಿತ್ಯ ಆಧಾರಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ ಸಿಂಗಾರದ ಹೆಬ್ಬಾಗಿಲು, ಪೆನಗೊಂಡೆ ಹೆಬ್ಬಾಗಿಲು, ಅರೆಯಶಂಕರ ಹೆಬ್ಬಾಗಿಲು, ಬೇಟೆಗಾರರ ಹೆಬ್ಬಾಗಿಲು ಮುಂತಾದವುಗಳು. ಅವುಗಳ ಪಳೆಯುಳಿಕೆಗಳು ಹಂಪೆಯಲ್ಲಿ ಇಂದಿಗೂ ಕಾಣಸಿಗುತ್ತವೆ. ಹಂಪೆಯಲ್ಲಿ ನಡೆಸಲಾಗುತ್ತಿರುವ ಉತ್ಖನನಗಳಲ್ಲಿ ರಸ್ತೆಯ ಭಾಗಗಳು ಇಂದಿಗೂ ದೊರಕುತ್ತಲಿವೆ. ಉತ್ಖನನ ಕಾರ್ಯ ಸಂಪೂರ್ಣಗೊಂಡಾಗ ರಾಜಧಾನಿ ಪಟ್ಟಣದ ಸಮಗ್ರ ಸಂಪರ್ಕ ಜಾಲವನ್ನು ಅರಿಯಬಹುದು.

ಸಾರಿಗೆ ವ್ಯವಸ್ಥೆಯಲ್ಲಿ ರಸ್ತೆಯಷ್ಟೇ ಪ್ರಮುಖವಾದುದು ಜಲಸಾರಿಗೆ ವ್ಯವಸ್ಥೆ. ಹರಪ್ಪ ಸಂಸ್ಕೃತಿಯ ಕಾಲದಿಂದಲೂ ಜಲಸಾರಿಗೆ ವ್ಯವಸ್ಥೆ ಇತ್ತೆಂಬುದು ಉತ್ಖನನಗಳಿಂದ ದೃಢಪಟ್ಟಿದೆ. ಹರಪ್ಪ ಸಂಸ್ಕೃತಿಯ ನೆಲೆಗಳಲ್ಲಿ ಒಂದಾದ ಲೋಥಲ್‌ನಲ್ಲಿ (ಗುಜರಾತ್ ರಾಜ್ಯದಲ್ಲಿದೆ) ಒಂದು ಬಂದರು ಉತ್ಖನನದಿಂದ ಬೆಳಕಿಗೆ ಬಂದಿದೆ.[೪] ಇದರಿಂದ ಆ ಸಂಸ್ಕೃತಿಗೆ ಸೇರಿದವರು ಸಾಗರೋತ್ತರ ವಾಣಿಜ್ಯ ಚಟುವಟಿಕೆಗಳಲ್ಲಿ ಭಾಗಿಗಳಾಗುತ್ತಿದ್ದರು ಹಾಗೂ ಜಲಸಾರಿಗೆ ವ್ಯವಸ್ಥೆಯು ಸುವ್ಯವಸ್ಥಿತವಾಗಿ ನಡೆಯುತ್ತಿದ್ದವು ಎಂದು ಗ್ರಹಿಸಬಹುದು. ದೊರಕಿರುವ ಅಲ್ಪ ಆಧಾರಗಳಿಂದ ಆಂತರಿಕ ಜಲಸಂಪರ್ಕವು ಸಹ ಅಂದು ಪ್ರಚಲಿತವಾಗಿದ್ದವು ಎಂದು ಊಹಿಸಿದರೆ ತಪ್ಪಾಗಲಾರದು. ಆದಿಇತಿಹಾಸ ಕಾಲದಲ್ಲಿ ಮತ್ತು ಚಾರಿತ್ರಿಕ ಕಾಲಗಳಲ್ಲಿಯೂ ನದಿಗಳು ಮತ್ತು ಕಡಲುಗಳಿದ್ದು ಪ್ರದೇಶಗಳಲ್ಲಿ ಜಲಸಾರಿಗೆಯು ಸುಗಮವಾಗಿ ಸಾಗುತ್ತಿದ್ದವು ಎಂಬುದು ಅಂದಿನ ಕಾಲದ ಶಾಸನ, ಶಿಲ್ಪ, ನಾಣ್ಯ ಮತ್ತು ಸಾಹಿತ್ಯಿಕ ಆಧಾರಗಳಿಂದ ತಿಳಿದುಬರುವ ಸಂಗತಿಯಾಗಿದೆ.[೫] ಇನಾಮ್‌ಗಾವ್[೬] ಮತ್ತು ಬೆಸನಗರಗಳಲ್ಲಿಯೂ ಕೃತಕ ಕಾಲುವೆಗಳನ್ನು ನಿರ್ಮಿಸಿ ಜಲಸಂಪರ್ಕ ಸಾಧಿಸಿದ್ದರು ಎಂದು ಉತ್ಖನಗಳಿಂದ ತಿಳಿದುಬಂದಿದೆ.[೭] ಇದರಂತೆಯೇ ಆದಿಇತಿಹಾಸ ಕಾಲದ ನೆಲೆಯಾದ ಕುಮ್ರಹಾರದಲ್ಲಿ (ಇಂದಿನ ಪಾಟ್ನ) ೧೩ ಮೀ. ಅಗಲ ೩ ಮೀ. ಆಳದ ಕಾಲುವೆಯು, ಅಶೋಕನ ಕಾಲದ (ಮೌರ್ಯರ ಕಾಲ) ಕಂಬಗಳುಳ್ಳ ಮಂಟಪದ ಪಕ್ಕಕ್ಕೆ ಹಾಯ್ದು ಹೋಗಿದೆ. ಇದನ್ನು ಗಂಗಾನದಿಗೆ ಜೋಡಿಸಲಾಗಿದೆ. ಸಭಾಮಂಟಪಕ್ಕೆ ಬೇಕಾದ ವಸ್ತುಗಳನ್ನು ಮತ್ತು ಚುನಾರ್ ಗಣಿಗಳಲ್ಲಿ ರೂಪಿಸಿದ ಕಲ್ಲಿನ ಬೃಹತ್ ಕಂಬಗಳನ್ನು ಗಂಗಾನದಿಯಲ್ಲಿ ಸಾಗಿಸಿ ನಂತರ ಮೇಲೆ ಉಲ್ಲೇಖಿಸಿದ ಕಾಲುವೆಯ ಮೂಲಕ ಸಭಾಮಂಟಪಕ್ಕೆ ತರಲಾಗುತ್ತಿತ್ತು ಎಂದು ತರ್ಕಿಸಲಾಗಿದೆ.[೮] ನಾಗಾರ್ಜುನಕೊಂಡದಲ್ಲಿಯೂ ಸಹ ಇಂತಹ ವ್ಯವಸ್ಥೆಯು ಇತ್ತೆಂಬುದು ಉತ್ಖನನದಿಂದ ತಿಳಿದುಬಂದಿದೆ. ಕ್ರಿ.ಶ. ೩ನೇ ಶತಮಾನಕ್ಕೆ ಸೇರಿದ ೮೦೦ ಮೀ. ಉದ್ದ, ೧೫ ಮೀ. ಅಗಲದ ಮತ್ತು ೩ ಮೀ. ಆಳದ ಕಾಲುವೆಯು ಉತ್ಖನನದಲ್ಲಿ ದೊರಕಿದೆ. ಅದರ ಎರಡೂ ಒಳ ಬದಿಗಳನ್ನು ಒರಟುಕಲ್ಲು ಮತ್ತು

ಗಟ್ಟಿಸುಣ್ಣದ ಗಾರೆಯಿಂದ ಗಟ್ಟಿ ಮಾಡಲಾಗಿದೆ. ನೀರಿನ ರಭಸವನ್ನು ತಡೆಯಲು ಇಂತಹ ವ್ಯವಸ್ಥೆ ಮಾಡಲಾಗಿದೆ ಎಂದು ಉತ್ಖನನಕಾರರು ಅಭಿಪ್ರಾಯಪಡುತ್ತಾರೆ. ಅಲ್ಲಿರುವ ಬೆಟ್ಟದಿಂದ ಉರುಳುವ ಕಲ್ಲು ಮತ್ತು ಮಣ್ಣಿನಿಂದ ಆಗಬಹುದಾದ ಸವಕಳಿಯನ್ನು ತಡೆಯಲು ಇದೇ ಕಾಲುವೆಯ ಉತ್ತರ ಬದಿಯನ್ನು ಸಹ ಒರಟುಕಲ್ಲುಗಳನ್ನು ಬಳಸಿ ಗೋಡೆಯನ್ನು ಕಟ್ಟಲಾಗಿದೆ.[೯]

ವಿಜಯನಗರ ಪಟ್ಟಣದಲ್ಲಿ ಜಲಸಾರಿಗೆ ವ್ಯವಸ್ಥೆ ಇದ್ದ ಬಗ್ಗೆ ಸಾಹಿತ್ಯ, ಶಾಸನ ಮತ್ತು ಶಿಲ್ಪಗಳು ತಿಳಿಸುತ್ತವೆ. ವಿಜಯನಗರ ಪಟ್ಟಣವು ತುಂಗಾಭದ್ರ ನದಿಯ ಬಲದಂಡೆಯ ಮೇಲಿದೆ. ವಿಜಯನಗರ ಸಾಮ್ರಾಜ್ಯದ ಪ್ರಾರಂಭಿಕ ದಿನಗಳಲ್ಲಿ ತುಂಗಾಭದ್ರಾ ಎಡದಂಡೆಯಲ್ಲಿರುವ ಆನೆಗೊಂದಿಯು ರಾಜಧಾನಿಯಾಗಿತ್ತು. ಕಾಲಕ್ರಮದಲ್ಲಿ ರಾಜಧಾನಿಯನ್ನು ಅಲ್ಲಿಂದ ವಿಜಯನಗರ ಅಥವಾ ವಿದ್ಯಾನಗರ ಅಥವಾ ವಿಜಯನಗರ ಪಟ್ಟಣಕ್ಕೆ (ಇಂದಿನ ಹಂಪೆಗೆ) ಸ್ಥಳಾಂತರಿಸಲಾಯಿತು. ಜನಸಾಮಾನ್ಯರು ನದಿಯನ್ನು ದಾಟಲು ಅಂದು ಪುಟ್ಟ ದೋಣಿಗಳು ಮತ್ತು ಹರಗೋಲುಗಳನ್ನು ಬಳಸುತ್ತಿದ್ದರು. ಇದು ಅತ್ಯಂತ ಅಲ್ಪವೆಚ್ಚ ಮತ್ತು ಸಮಯದಲ್ಲಿ ನದಿ ದಾಟಬಹುದಾದ ವ್ಯವಸ್ಥೆಯಾಗಿದೆ. ಇದನ್ನು ಬಳಸದಿದ್ದರೆ, ಅವರು ಬಳಸುವ ಮಾರ್ಗಗಳನ್ನು ಅನುಸರಿಸಿ ತೆರಳಬೇಕಾಗುತ್ತಿತ್ತು. ವಿಠ್ಠಲ ದೇವಾಲಯದ ಬಳಿ ಇಂದಿಗೂ ವಿಜಯನಗರ ಕಾಲದ ಸಂಪರ್ಕ ಸೇತುವೆಯ ಪಳೆಯುಳಿಕೆಗಳನ್ನು ಕಾಣಬಹುದು. ಆಂತರಿಕ ಸಂಪರ್ಕಕ್ಕಾಗಿ ಜನರು ನದಿಯನ್ನು ಅವಲಂಬಿಸುತ್ತಿದ್ದರು ಎಂಬುದು ಗಮನಾರ್ಹ. ಈ ವ್ಯವಸ್ಥೆಯು ಇಂದಿಗೂ ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತಿರುವುದು ಗಮನಿಸಬೇಕಾದ ಸಂಗತಿ.[೧೦] ನದಿ ದಂಡೆಯ ಆಚೆಗಿರುವ ಊರುಗಳಾದ ಆನೆಗೊಂದಿ, ಹುಲಿಗಿ, ಗಂಗಾವತಿ ಮತ್ತು ಇತರೆ ಸ್ಥಳಗಳಿಗೆ ನದಿಯ ಮೂಲಕ ಸಾಗಿದರೆ ಸಮಯ ಹಾಗೂ ಹಣವನ್ನು ಉಳಿಸಬಹುದು.

ವಿದೇಶಿ ಪ್ರವಾಸಿಗರು ಅಂದಿನ ವಿಜಯನಗರಕ್ಕೆ ಭೇಟಿ ನೀಡಿ ತಮ್ಮ ಅನುಭವಗಳನ್ನು ದಾಖಲಿಸಿದ್ದಾರೆ. ವಿದೇಶಿ ಪ್ರವಾಸಿಗರು ಹರಗೋಲಿನ ಮೂಲಕ ತಳವಾರಘಟ್ಟದಿಂದ ಆನೆಗೊಂದಿಗೆ ತೆರಳುತ್ತಿದ್ದರು ಎಂಬ ವಿಷಯ ಒಂದು ಮೂಲದಲ್ಲಿ ದಾಖಲಾಗಿದೆ. ಇದರೊಂದಿಗೆ ನದಿ ದಂಡೆಯಲ್ಲಿದ್ದ ಸ್ಥಳಗಳಾದ ವಾಲಿಭಂಡಾರ, ಶಬರಿ ಆಶ್ರಮ ಹಾಗೂ ಕೇವಟ ಎಂದು ಕರೆಯಲಾದ ಗುಹೆ ಮುಂತಾದವುಗಳನ್ನು ಕುರಿತು ಉಲ್ಲೇಖಿಸಲಾಗಿದೆ.[೧೧] ಡೋಮಿಂಗೊ ಪಯಾಸ್ ಈ ರೀತಿಯಾಗಿ ತಿಳಿಸುತ್ತಾನೆ.[೧೨] "ಈ ನಗರದಲ್ಲಿ ರಾಜನ ಪರವಾಗಿ ಒಬ್ಬ ದಳವಾಯಿ ಇರುತ್ತಾನೆ. ಜನರು ಈ ಊರಿಗೆ ಬುಟ್ಟಿಗಳಂತೆ ದುಂಡಾಗಿರುವ ದೋಣಿಗಳಲ್ಲಿ ದಾಟಿ ಬರುತ್ತಾರೆ. ಅವುಗಳನ್ನು ಒಳಗಡೆ ಬೆತ್ತದಿಂದ ಮಾಡಿ ಹೊರಮೈಗೆ ಚರ್ಮ ಹೊದಿಸಿರುತ್ತಾರೆ. ಅವುಗಳು ೧೫-೨೦ ಜನರನ್ನು ಒಯ್ಯಬಲ್ಲವು ಮತ್ತು ಅಗತ್ಯಬಿದ್ದರೆ ಕುದುರೆ ಮತ್ತು ಎತ್ತುಗಳು ಅವುಗಳಲ್ಲಿ ದಾಟುತ್ತವೆ. ಆದರೆ, ಬಹುಮಟ್ಟಿಗೆ ಈ ಪ್ರಾಣಿಗಳು ಈಜಿ ದಾಟುತ್ತವೆ, ಜನರು ಅವುಗಳನ್ನು ಒಂದು ತರದ ಮೋಟು ಹುಟ್ಟಿನಿಂದ

ಹುಟ್ಟು ಹಾಕುತ್ತಾರೆ ಮತ್ತು ಅವು ಇತರ ದೋಣಿಗಳಂತೆ ನೇರವಾಗಿ ಹೋಗಲಾರ ವಾದುದರಿಂದ ಈ ದೋಣಿಗಳು ಯಾವಾಗಲೂ ದುಂಡಗೆ ತಿರುಗುತ್ತವೆ. ರಾಜ್ಯದಲ್ಲಿ ನದಿಗಳಿರುವೆಡೆಗಳೆಲ್ಲ ಇವುಗಳನ್ನು ಬಿಟ್ಟರೆ ಬೇರೆ ದೋಣಿಗಳಿಲ್ಲ." ಮತ್ತೊಬ್ಬ ವಿದೇಶಿ ಪ್ರವಾಸಿಗ ಬಾರ್ಬೋಸಾನು ವ್ಯಾಪಾರ ಮತ್ತು ವಾಣಿಜ್ಯವನ್ನು ಕುರಿತು ವಿವರಿಸುವಾಗ ವೀಳೆಯದೆಲೆಯನ್ನು ಕೊಯ್ದು ದಬುಲ್ ನಿಂದ ದಕ್ಷಿಣಕ್ಕೆ ಮುಂದೆ ಹೋದರೆ ಬೆಕಲ ನದಿಯ ಅಕ್ಕ ಪಕ್ಕದ ಸುಂದರ ತೋಟಗಳಿಂದ ವೀಳೆದೆಲೆ ಕೊಯ್ದು ಸಣ್ಣ ದೋಣಿಗಳ ಮೂಲಕ ನಾನಾ ಸ್ಥಳಗಳಿಗೆ ಸಾಗಿಸುತ್ತಿದ್ದರು ಎಂದು ದಾಖಲಿಸಿದ್ದಾನೆ.[೧೩]

ನದಿಯಲ್ಲಿ ಪ್ರವಾಹ ಬಂದಾಗ ಮತ್ತು ನೀರು ಅತಿ ಕಡಿಮೆ ಇದ್ದಾಗ ಅಶ್ವದಳ ಮತ್ತು ಆನೆಗಳ ಮೂಲಕ ಸವಾರಿ ಮಾಡಿ ನದಿ ದಾಟುತ್ತಿದ್ದರು ಎಂದು ಫೆರಿಸ್ತಾ ತಿಳಿಸಿದ್ದಾನೆ. ವಿಜಯನಗರದ ಅರಸರ ಕಾಲದಲ್ಲಿ ಜರುಗುತ್ತಿದ್ದ ಯುದ್ಧಗಳಲ್ಲಿಯೂ ನದಿಯನ್ನು ದಾಟಲು ದೋಣಿ ಮತ್ತು ಹರಗೋಲುಗಳನ್ನು ಬಳಸುತ್ತಿದ್ದರು ಎಂದು ಪ್ರವಾಸಿ ಕಥಾನಕಗಳಲ್ಲಿ ದಾಖಲಾಗಿವೆ. ಅದರಂತೆ ಸುಲ್ತಾನನು ನದಿ ದಾಟಲು ಸುದೀರ್ಘವಾಗಿ ಆಲೋಚಿಸಿ ತನ್ನ ಅಧಿಕಾರಿಗಳ ಸಹಾಯದಿಂದ ಅನುಕೂಲವಾದ ನೂರಾರು ಅಡ್ಡ ಪಟ್ಟಿಗಳನ್ನು ಸಿದ್ಧಗೊಳಿಸುತ್ತಾನೆ. ಇವುಗಳು ಚರ್ಮದಿಂದ ಆವೃತಗೊಂಡಿವೆಯೆಂದು ವಿವರಿಸಲಾಗಿದೆ. ಬುಟ್ಟಿಯಾಕಾರದ ಹರಗೋಲು ಅಂದು ಮತ್ತು ಇಂದು ಸಹ ಬಳಕೆಯಲ್ಲಿವೆ. ಈ ಹರಗೋಲುಗಳು ಬಿದಿರಿನ ಸೀಳಿನಿಂದ ಒಂದರೊಳಗೆ ಇನ್ನೊಂದು ಬರುವಂತೆ ಹೆಣೆದು ಹೊರಮೈಯನ್ನು ಚರ್ಮದಿಂದ ಪೂರ್ತಿಯಾಗಿ ಹೊದಿಸಲಾಗುತ್ತದೆ. ಬ್ರಿಟೀಷ್ ಸೈನ್ಯದ ಒಂದು ಪಡೆ ೧೮೧೨ರಲ್ಲಿ ಈ ಹರಗೋಲುಗಳಲ್ಲಿ ಫಿರಂಗಿಗಳನ್ನು ವಾಹನಗಳಿಂದ ಇಳಿಸದೆ ತುಂಗಾಭದ್ರಾ ನದಿ ದಾಟಿಸಿತಂತೆ ಎಂದು ಕರ್ನಲ ಬ್ರಿಗ್ಸ್ ರವರು ದಾಖಲಿಸಿರುವುದನ್ನು ರಾಬರ್ಟ್‌ಸೀವೆಲ್ ರವರು ಪ್ರಸ್ತಾಪಿಸಿರುತ್ತಾರೆ.[೧೪] ವಿಜಯನಗರದ ದೇವರಾಯನ ಮೇಲೆ ದಾಳಿ ಮಾಡಿದ ಗುಲ್ಬರ್ಗದ ಫಿರೋಜಷಾ ಸುಲ್ತಾನನ ಸುಮಾರು ೪೦೦೦ ಸೈನಿಕರು ಅದಕ್ಕಾಗಿಯೇ ಸಿದ್ಧಪಡಿಸಲಾಗಿದ್ದ ದೋಣಿ ಮತ್ತು ತೆಪ್ಪಗಳಲ್ಲಿ ನದಿಯನ್ನು ದಾಟಿದ್ದರೆಂದು ಹಾಗೂ ಯುದ್ಧದ ಸಂದರ್ಭದಲ್ಲಿ ಬಳಸಲಾಗುತ್ತಿದ್ದ ದೋಣಿ, ತೆಪ್ಪ ಮತ್ತು ಅಂಬಿಗರ ಮಹತ್ವದ ಪಾತ್ರವನ್ನು ಕುರಿತು ವಿದೇಶಿ ಯಾತ್ರಿಕನು ವಿವರಿಸಿದ್ದಾನೆ.[೧೫]

ಹಂಪಿ ಹೊಳೆಯ (ತುಂಗಭದ್ರಾ ನದಿ) ಉತ್ತರಕ್ಕೆ, ಆಚೆ ದಡದಲ್ಲಿ ಆನೆಗೊಂದಿಯ ಪ್ರವೇಶ ದ್ವಾರವಿದೆ. ಅಂಬಿಗರ ಎರಡು ವೀರಗಲ್ಲುಗಳು ಕೋಟೆಯ ಪ್ರವೇಶ ದ್ವಾರದಲ್ಲಿ ಪಶ್ಚಿಮಾಭಿಮುಖವಾಗಿದೆ. ಇದರಲ್ಲಿ ಇಬ್ಬರು ವೀರರು ತಮ್ಮ ಹುಟ್ಟುಗಳನ್ನು ಕೈಯಲ್ಲಿ ಹಿಡಿದಿರುವಂತೆ ಶಿಲ್ಪಗಳನ್ನು ಬಿಡಿಸಲಾಗಿದೆ. ಇವುಗಳಲ್ಲಿ ಶಾಸನಗಳಿಲ್ಲ. ಶಿಲ್ಪದಲ್ಲಿ ತೋರಲಾಗಿರುವ ವ್ಯಕ್ತಿಗಳನ್ನು ಜನರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಸಾಗಿಸುವಲ್ಲಿ ತಮ್ಮ ಸಾಹಸವನ್ನು ತೋರಿ ನೀರಿನಲ್ಲಿ ಮಡಿದಿರಬಹುದಾದ ವೀರರು ಎಂದು ಶೇಷಶಾಸ್ತ್ರೀಯವರು ಅಭಿಪ್ರಾಯಪಟ್ಟಿರುತ್ತಾರೆ.[೧೬] ಇಂದಿಗೂ ಅಂಬಿಗರು ವಿಶೇಷ

ಸಂದರ್ಭಗಳಲ್ಲಿ ಈ ವೀರಗಲ್ಲುಗಳನ್ನು ಆರಾಧಿಸುತ್ತಾರೆ ಮತ್ತು ಅವುಗಳನ್ನು ವೀರಗಾರರು ಎಂಬುದಾಗಿ ಕರೆಯುತ್ತಾರೆ.[೧೭]

ವಿಜಯನಗರದ ಅರಸರುಗಳು ಗಮನಾರ್ಹವಾದ ಕೆಲಸಗಳನ್ನು ಮಾಡಿ ಜಲಸಾರಿಗೆ ವ್ಯವಸ್ಥೆಯನ್ನು ರೂಪಿಸಿದ್ದರೆಂಬುದು ಶಾಸನಗಳಿಂದ ತಿಳಿದುಬರುತ್ತದೆ. ರಾಜ್ಯದ ಇತರೆಡೆಗಳಲ್ಲಿಯೂ ಇಂತಹ ವ್ಯವಸ್ಥೆಯನ್ನು ಮಾಡಿದ್ದರು.[೧೮] ಹಂಪೆಯ ಮತ್ತು ಅದರ ಸುತ್ತಲಿನ ಪರಿಸರದ ಕೆಲವಾರು ಶಾಸನಗಳು ನೇರವಾಗಿ ಇಂತಹ ವ್ಯವಸ್ಥೆಯನ್ನು ಕುರಿತು ಉಲ್ಲೇಖಿಸುವುದು ಗಮನಾರ್ಹ. ಕ್ರಿ.ಶ. ೧೫೧೭ರ ಒಂದು ಶಾಸನವು ಶ್ರೀಕೃಷ್ಣದೇವರಾಯನು ತನ್ನ ಪಟ್ಟದ ಕಾಲದಲ್ಲಿ ವಿಠಲೇಶ್ವರ ದೇವರ ಅಮೃತಪಡಿ ನೈವೇದ್ಯಕ್ಕೆ ಅಂಗರಂಗಭೋಗ ವೈಭವ, ಮಾಸ ಪೂಜೆ, ಮಾಸೋತ್ಸವ, ನಿತ್ಯನೈಮಿತ್ತಿಕ, ದೀಪಾರಾಧನೆ ಪಂಚಪರ್ವ ಮುಂತಾದ ಕಾಲಗಳಲ್ಲಿ ಮಾಡುವ ಮಹಾಪೂಜೆ, ನೈವೇದ್ಯಕ್ಕಾಗಿ, ಮಳಲಕೋಟೆಯ ಗೋರಿಯ ಕೆಳಗಣ ಸಿಂಘಾರಪುರ, ಹುಲಿಗೆಯ ಮಾಗಣೆಯ ಹರಿಯಲಾಪುರವನ್ನು ದಾನವಾಗಿ ನೀಡುತ್ತಾನೆ. ಮುಂದೆ ಬಾವ ಸಂವತ್ಸರದಲ್ಲಿ ತಿಪ್ಪರಾಜನ ತೋಟವನ್ನು, ಪ್ರಮಾದಿ ಸಂವತ್ಸವರದಲ್ಲಿ ರಾಯದುರ್ಗದ ಸೀಮೆಯಲ್ಲಿನ ದೇವಸಮುದ್ರ, ಉರುತಹಾಳ, ಮುರುವಡಿ, ದಡಗೂರು, ಪೋಕುಕೆ, ಜಂಬಲಮಡಿಕೆ, ದಾಕವಾಡಿ ಮತ್ತು ಬಡಲಾಪುರವನ್ನು ಸಮರ್ಪಿಸಿದ. ಅದೇ ವರ್ಷ ಪುಶ್ಯ ಮಾಸದಲ್ಲಿ ಹೊಸವೂರ ಮಾಗಣೆಯ ವಿರುಪಾಪುರ, ಜೆಂತಗಲ ಮಾಗಣೆಯ ಮುಷ್ಟೂರು ಮತ್ತು ಕುಂಟಜಿಯನ್ನು ದಾನ ನೀಡಿದ. ವ್ಯಯ ಸಂವತ್ಸರದ ಶು. ಆಷಾಢ ೧೫ರಲ್ಲಿ ಹೊಳೆಯಲ್ಲಿ ಎಂಟು ಜಾಗಗಳಿಂದ ಹರಿಗೋಲುಗಳನ್ನು ಬಿಟ್ಟನೆಂದು ಶಾಸನವು ತಿಳಿಸುತ್ತದೆ. ಅವುಗಳ ವಿವರ ಇಂತಿದೆ. ವಿಠಲದ ಬಳಿ ಸಂಕಲಾಪುರ ಹೊಳೆ ಮತ್ತು ಕಾಳಗಟಿಯ ಹೊಳೆ, ಹುಲಿಗೆಯ ಹೊಳೆ, ಹೊಂನ್ನೂರ ಹೊಳೆ, ಹಂಪೆಯ ಹೊಳೆ ಮತ್ತು ಕೊರಗಲ ಹೊಳೆಗಳು ಪಶ್ಚಿಮದ ಹೊಳೆಗಳು. ಮುಷ್ಟೂರು ಮತ್ತು ಕಂಪಿಲೆಯ ಹೊಳೆಗಳು ಪೂರ್ವದ ಹೊಳೆಗಳು. ತುಂಗಾಭದ್ರಾ ಹೊಳೆಯಲ್ಲಿ ಉಲ್ಲೇಖಿತ ಸ್ಥಳಗಳಿಂದ ಹರಿಗೋಲುಗಳನ್ನು ಬಿಡುತ್ತಿದ್ದರು. ಇದರೊಂದಿಗೆ ಸುಂಕಗಳಾದ ಸುವರ್ನಾದಾಯ, ಸಕಲ ಭತ್ತಾದಾಯ, ಸ್ಥಳ ಸುಂಕ, ತಳವಾರಿಕೆ, ಸಾಮ್ಯ, ಹಾರಿಕಾ, ಜೋಡಿಬಿರಾಡ ಮತ್ತು ಕಾಲುವೆಯ ನೀರ ಬಿರಾಡಗಳನ್ನು ದೇವಾಲಯಕ್ಕೆ ದಾನ ನೀಡುತ್ತಾನೆ. ಹೊಳೆಗಳಲ್ಲಿ ಆಯ್ದ ಪ್ರದೇಶಗಳಿಂದ ಮಾತ್ರವೇ ಹರಿಗೋಲುಗಳನ್ನು ಬಿಡುತ್ತಿದ್ದರು ಎಂದು ಹಾಗೂ ಅವುಗಳಿರುವ ಪ್ರವೇಶ ನಿರ್ದೇಶನಗಳಾದ ಪಡುವಣ ಮತ್ತು ಮೂಡಣ ಹೊಳೆಗಳೆಂದು ಶಾಸನದಲ್ಲಿ ಉಲ್ಲೇಖಿಸಿರುವುದು ಕುತೂಹಲಕಾರಿ ಸಂಗತಿಯಾಗಿದೆ.[೧೯] ಈ ಜಾಗಗಳಿಂದ ಹರಿಗೋಲುಗಳನ್ನು ಬಿಡಲು ಅನುಮತಿಯನ್ನು ನೀಡಿ ಬಹುಶಃ ಹರಿಗೋಲು ನಡೆಸುವವರಿಂದ ಸುಂಕಗಳನ್ನು ಸಂಗ್ರಹಿಸುತ್ತಿದ್ದರು ಎಂದು ಅಭಿಪ್ರಾಯಪಡಬಹುದು. ದೇವಾಲಯಕ್ಕೆ ದಾನ ನೀಡುವ ಸಂದರ್ಭದಲ್ಲಿ ಹರಿಗೋಲುಗಳನ್ನು ಬಿಡಲು ಅನುವು ಮಾಡಿಕೊಟ್ಟಿರುವುದು ರಾಜಧಾನಿಗೆ ಹಾಗೂ ಅಲ್ಲಿದ್ದ ದೇವಾಲಯಗಳ ಆರ್ಥಿಕ, ಧಾರ್ಮಿಕ

ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ದೃಢಪಡಿಸುವ ಸಲುವಾಗಿ ಎಂದು ಪ್ರಸ್ತುತ ಶಾಸನದಿಂದ ತಿಳಿಯಬಹುದು.

ಈ ಶಾಸನವು ಹರಿಗೋಲುಗಳನ್ನು ಬಿಡುತ್ತಿದ್ದ ಸ್ಥಳಗಳನ್ನು ತಿಳಿಸಿದರೆ, ಅವನ ಕಾಲಕ್ಕೆ ಸೇರಿದ ಮತ್ತೊಂದು ಶಾಸನವು ಹರಿಗೋಲುಗಳ ವೈವಿಧ್ಯತೆಯತ್ತ ಬೆಳಕು ಚೆಲ್ಲುತ್ತದೆ.[೨೦] ಕೃಷ್ಣದೇವರಾಯನು ಉದಯಗಿರಿಯಿಂದ ತಂದ ಬಾಲಕೃಷ್ಣ ದೇವರನ್ನು ಹಂಪೆಯಲ್ಲಿ ಪ್ರತಿಷ್ಠಾಪಿಸಿ ದೇವರ ನಿತ್ಯಪೂಜೆಗೆ, ಅಂಗರಂಗಭೋಗ, ಪಂಚಪರ್ವಗಳಿಗಾಗಿ ಅನೇಕ ದಾನ, ನವರತ್ನ ಖಚಿತ ಆಭರಣಗಳು, ಗ್ರಾಮ, ಭೂಮಿ, ಗದ್ದೆ, ಸುಂಕ, ಮೊದಲಾದವುಗಳನ್ನು ನೀಡುತ್ತಾನೆ. ಶಾಸನವು ಜೋಡಿ, ಬಿರಾಡ, ಸಾಮ್ಯ, ನಾಡ ತಳವಾರಿಕೆ, ಸುಂಕ, ಕರಣಿಕರ ಮಾನ್ಯದ ಗದ್ದೆಗಳು, ಸುವರ್ಣಾದಾಯ, ಸಕಲ ಭತ್ತಾದಾಯ, ಹಲವು ಕುರ್ವಗಳ ಆದಾಯ ಎಂಬ ತೆರಿಗೆಗಳೊಂದಿಗೆ ಕಟಿಗೆ ಪಣಬಿನ ಹರುಗೋಲವರು ಕೊಡುವ ತೆರಿಗೆ ಎಂದು ಉಲ್ಲೇಖಿಸಿರುವುದು ಗಮನಾರ್ಹ. ಹರಿಗೋಲವರು, ಹರಿಗೋಲು ನಡೆಸಲು ತೆರಿಗೆಗಳನ್ನು ರಾಜ್ಯಕ್ಕೆ ನೀಡುತ್ತಿದ್ದರು ಎಂದು ತಿಳಿದುಬರುತ್ತದೆ. ಜೊತೆಗೆ ಕಟಿಗೆ ಪಣಬಿನ ಹರಗೋಲು ಎಂದು ತಿಳಿಸುವುದರಿಂದ ಹರಗೋಲುಗಳು, ಕನಿಷ್ಠ ಎರಡು ಪ್ರಕಾರಗಳಿದ್ದವು ಎಂದು ತರ್ಕಿಸಬಹುದು. ಮೊದಲನೆಯದಾಗಿ ಜನಸಾಮಾನ್ಯರು ಓಡಾಡಲು ಅನುಕೂಲವಾಗುವಂತಹದಾದರೆ ಮತ್ತೊಂದು ಬಗೆಯದು ಸರಕು ಸಾಗಾಣೆ ಮಾಡಲು ಬಳಸುತ್ತಿದ್ದ ಹರಗೋಲುಗಳು. ಪ್ರಸ್ತುತ ಶಾಸನವು 'ಹೊಳೆಯಾಥೆ ಅನುಪು ಕಟಿಗೆ ಪಣಬಿನ ಹರುಗೋಲುವರು ಕೊಡುವ ತೆರಿಗೆ' ಎಂದು ಉಲ್ಲೇಖಿಸುತ್ತದೆ. ಹೊಳೆಯಾಥೆ ಅನುಪು ಎಂಬ ಪದದ ಅರ್ಥವು ಸ್ಪಷ್ಟವಾಗುವುದಿಲ್ಲ. ಕಟ್ಟಿಗೆಗಳ ಹೇರು ಪಣಬುಗಳನ್ನು ನಿಯಮಿತವಾಗಿ ಸಾಗಾಣೆ ಮಾಡುತ್ತಿದ್ದರು ಎಂದು ಗ್ರಹಿಸಬಹುದು. ಈ ಶಾಸನವನ್ನು ಕ್ರಿ.ಶ. ೧೫೧೭ರಿಂದ ಪ್ರಾರಂಭಿಸಿ ೧೫೧೯, ೧೫೨೨ ಮತ್ತು ೧೫೨೫ ರವರೆಗೆ ಮುಂದುವರಿಸಲಾಗಿದೆ.

ಕ್ರಿ.ಶ. ೧೫೩೧ರ ಶಾಸನವು ಅಚ್ಯುತರಾಯನು ವಿಠಲ ದೇವರ ನಿತ್ಯಕಟ್ಟಳೆಗೆ ಗ್ರಾಮವೊಂದನ್ನು ಸಮರ್ಪಿಸಿದಂತೆ ತಿಳಿಸುತ್ತದೆ.[೨೧] ಗ್ರಾಮದ ಹೆಸರು ತಿಳಿಸಿಲ್ಲ. ಇದರೊಂದಿಗೆ ಆನೆಗೊಂದಿಯ ಅಂಬಿಗ ಬೋಉಗಣ್ಣನು ವಿಠಲಾಹುತಿಗೆ, ಅಂದರೆ ವಿಠಲದೇವರ ನೈವೇದ್ಯಕ್ಕೆ, ಹೊಂನೂರು, ಕೊಳೆಗಟೆ, ಕಂಪಿಲಾಪುರಗಳ ಬಳಿಯ ಹೊಳೆಯಲ್ಲಿನ ಹರಗೋಲುಗಳನ್ನು ನೀಡುತ್ತಾನೆ. ಅಂಬಿಗನಿಗೆ ನೀಡಲಾಗಿದ್ದ ಹರಿಗೋಲುಗಳ ಸಾಮ್ಯವನ್ನು ಆತನು ವಿಠಲ ದೇವರಿಗೆ ನೀಡುತ್ತಾನೆ. ಇದು ಅಂದಿನ ಕಾಲದ ಅಂಬಿಗರಿಗೆ ಇದ್ದ ಸ್ವಾತಂತ್ರ್ಯವನ್ನು ತಿಳಿಸುತ್ತದೆ. ದೇವರ ಸೇವೆಯಲ್ಲಿ ಅವರೂ ಸಹ ಪಾಲ್ಗೊಳ್ಳುತ್ತಿದ್ದರು ಎಂದು ತಿಳಿಯಬಹುದು.

ಸದಾಶಿವರಾಯನ ಕಾಲಕ್ಕೆ ಸೇರಿದ ಕ್ರಿ.ಶ. ೧೫೫೬ರ ಒಂದು ಶಾಸನವು ಹರುಗೋಲುಗಳ ಗಾತ್ರದ ಬಗೆಗೆ ಪರಿಚಯಿಸುತ್ತದೆ.[೨೨] ಈ ಶಾಸನವು ತಳವಾರಘಟ್ಟದ ಬಂಡೆಯ ಮೇಲಿದೆ.

ಸದಾಶಿವರಾಯನ ಕಾಲದಲ್ಲಿ ಆನೆಗೊಂದಿ ಹೊಳೆಯ ೧೪ ಬೋವರು ೩೦೦ ಮಂದಿ ಅಂಬಿಗರು ಅಂಬಲಿಯ ಮಹಲಿಂಗವೊಡೆಯರಿಗೆ ತಾವು ಹೊಳೆಯಲ್ಲಿ ಬಿಡುವ ಚಿಕ್ಕ ಹರಗೋಲು, ದೊಡ್ಡ ಹರುಗೋಲುಗಳ ಮೇಲಿನ ಹಣವನ್ನು ನೀಡುವುದಾಗಿ ತಿಳಿಸುತ್ತದೆ. ಶಾಸನವು 'ಕವದರ ಹರಗೋಲುವೊಂದಕ್ಕೆ ಒಂದು ತಾರ, (ಹಣ) ದೊಡ್ಡ ರೊಕವದು, ಸು(ಂಕ) ಎರಡು ಕಾಸು, ಚಿಕ್ಕಹರಗೋಲುವೊಂದಕ್ಕೆ ಕಾಸು, ಒಂದು ಎಂದು ಉಲ್ಲೇಖಿಸುತ್ತದೆ. ಹರಿಗೋಲಿನ ಗಾತ್ರವನ್ನು ಆಧರಿಸಿ ಅವುಗಳ ಮೇಲೆ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ದೊಡ್ಡ ಹರಿಗೋಲಿಗೆ ಎರಡು ತಾಳವಾದರೆ ಚಿಕ್ಕದಕ್ಕೆ ಒಂದು ಕಾಸು ಎಂದು ತಿಳಿಯಬಹುದು. ತಾರೆಯ (ಹಣದ) ಅಂದಿನ ಸಮಕಾಲಿನ ಮೌಲ್ಯವನ್ನು ಅರಿಯುವುದು ಪ್ರಸ್ತುತ ಕಷ್ಟ. ಆನೆಗೊಂದಿಯ ಅಂಬಿಗರಿಗೆ ತಿಮರಾಜೆಯನ ಕಾಲದಲ್ಲಿ ರಾಮಾಪುರದಲ್ಲಿ ಒಂದು ಖಂಡುಗ ಗದ್ದೆಯನ್ನು ನೀಡಿದ್ದು ಅದನ್ನು ಶ್ರೀ ರಂಗರಾಜನು ಮುಂದುವರಿಸಿದಂತೆ ಇದೇ ಜಾಗದಲ್ಲಿರುವ ಮತ್ತೊಂದು ಶಾಸನವು ತಿಳಿಸುತ್ತದೆ.[೨೩]

ಆನೆಗೊಂದಿ ಅಂಬಿಗರ ದೊಡ್ಡ ತಾಯಣ್ಣ ಬಳಿ ಸದಾಶಿವರಾಯನ ಒಂದು ಕಾಲದ ಒಂದು ತಾಮ್ರಪಟ ಶಾಸನವಿದೆ. ಅದರಲ್ಲಿರುವ ತೇದಿಯು ಕ್ರಿ.ಶ. ೧೪೭೮ (ಕ್ರಿ.ಶ. ೧೫೫೬) ಎಂದಿದೆ.[೨೪] ಆದರೆ ಭಾಷೆ ಮತ್ತು ಲಿಪಿಯ ಆಧಾರಗಳ ಮೇಲೆ ಅದನ್ನು ೧೭-೧೮ನೆಯ ಶತಮಾನದ್ದೆಂದು ಹೇಳಬಹುದು. ಆ ಶಾಸನದಂತೆ ಸದಾಶಿವರಾಯನು ತುಂಗಾಭದ್ರಾ ನದಿಯ ಆನೆಗೊಂದಿ ತಳವಾರ ಕಟ್ಟೆಯಲ್ಲಿ ೧೦ ಹರಗೋಲು ೧೦ ಅಂಬಿಗರು ನಿರಂತರವಾಗಿ ಸರಕಾರದ ಸೇವೆಯಲ್ಲಿ ಕಾರ್ಯನಿರತರಾಗಿದ್ದು, ರಾಜನಿಗೆ ವಿಜ್ಞಾಪನೆ ಮಾಡಿಕೊಂಡರು. ಅದರಂತೆ ರಾಜನು ಇವರಿಗೆ ಆನೆಗೊಂದಿಯಲ್ಲಿ ೧೫ ಕೊಳಗ ನೀರು ಭೂಮಿ, ತಳವಾರ ಕೋಟೆಯಲ್ಲಿ ೧೫ ಕೊಳಗ ಒಟ್ಟು ೩೦ ಕೊಳಗ ನೀರು ಭೂಮಿಯನ್ನು ನಾಗಜೋಗಿ ಮತ್ತು ಬಸವಜೋಗಿಗೆ ನೀಡಿ ಅದರ ಆದಾಯವನ್ನು ಅವರು ಅನುಭವಿಸುತ್ತಾ ಬ್ರಾಹ್ಮಣ, ಸಾಧುಸಂತರ ಸೇವೆ ಮಾಡಿಕೊಂಡಿರಬೇಕೆಂದು ಷರತ್ತು ವಿಧಿಸುತ್ತಾನೆ. ಅಂಬಿಗರಿಗೆ ಕಟೆಮನೆ ಅಧಿಕಾರವಿದ್ದರೂ ಕುಲಾಚಾರದ ನ್ಯಾಯ ಬಹಷಕಾರ ಸುದ್ಧಪತ್ರ ಕೊಡಲಿಕ್ಕೆ ಅಧಿಕಾರ ಇದೆ ಎಂದು ಶಾಸನ ತಿಳಿಸುತ್ತದೆ. ಇವುಗಳ ಆಧಾರದ ಮೇಲೆ ಈ ಶಾಸನವು ಇತ್ತೀಚಿನದು, ಅಂದರೆ ೧೭-೧೮ನೆಯ ಶತಮಾನದ್ದೆಂದು ಹೇಳಬಹುದು. ಈ ಭಾಗದಲ್ಲಿ ಸುಮಾರು ೧೦ ಹರಗೋಲುಗಳು ಅಥವಾ ಅವುಗಳಿಗಿಂತ ಅಧಿಕ ಸಂಖ್ಯೆಯಲ್ಲಿ ಹರಗೋಲುಗಳು ಜನಸಾರಿಗೆಯಲ್ಲಿ ತೊಡಗಿದ್ದವು ಎಂದು ತರ್ಕಿಸಬಹುದು.

ಇನ್ನೊಂದು ಹಿತ್ತಾಳೆ ಶಾಸನವು ಅದೇ ದೊಡ್ಡ ತಾಯಣ್ಣನ ವಶದಲ್ಲಿದ್ದು, ಅದು ಆನೆಗೊಂದಿ ಸಂಸ್ಥಾನದವರ ಕಾಲಕ್ಕೆ ಸೇರಿದ್ದಾಗಿದೆ.[೨೫] ಶಕ ೧೬೫೦ರ (ಕ್ರಿ.ಶ. ೧೭೨೧) ಶಾಸನವು ತೆಲುಗು ಲಿಪಿ ಮತ್ತು ಭಾಷೆಯಲ್ಲಿದೆ. ಆನೆಗೊಂದಿ ಸಂಸ್ಥಾನದವರು ಅಂಬಿಗರ ಬರಮ ಮತ್ತು ಬಸವ ಎಂಬುವವರಿಗೆ ನೀಡಿದ ಸನ್ನದು. ಇವರು ಸಂಸ್ಥಾನದ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸುತ್ತಿರುವುದರಿಂದ ಅವುಗಳಲ್ಲಿ ಎರಡು ಹುಟ್ಟುಗಳನ್ನು ಇನಾಂ

ಆಗಿ ನೀಡಿರುತ್ತಾರೆ. ಇದರೊಂದಿಗೆ ಅವರಿಗೆ ತುಂಗಭದ್ರಾ ನದಿಯಲ್ಲಿ ಐದು ಹುಟ್ಟುಗಳಾಗುತ್ತವೆ. ಹಾಗೆಯೇ ಇವರು ಕಟೆ ಮನೆಯವರಾಗಿದ್ದು ಅವರ ಜಾತಿಯ ರೀತಿ ರಿವಾಜುಗಳನ್ನು ನಿಯಂತ್ರಿಸುವವರೂ ಆಗಿರುತ್ತಾರೆಂದು ಶಾಸನವು ತಿಳಿಸುತ್ತದೆ. ಈ ಶಾಸನವು ಮೇಲೆ ಉಲ್ಲೇಖಿಸಿದ ಶಾಸನದಂತೆಯೇ ಇರುವುದು ಗಮನಾರ್ಹ.

ಅಂಬಿಗರು ರಾಜ್ಯದ ಆಡಳಿತಕ್ಕೆ ಸೇರಿದ್ದು ಅವರ ಸೇವೆಗೆ ಸೂಕ್ತವಾಗಿ ದಾನ ಅಥವಾ ಆದಾಯವನ್ನು ಪಡೆಯುತ್ತಿದ್ದರು ಎಂದು ತಿಳಿದುಬರುತ್ತದೆ. ಇದರೊಂದಿಗೆ ಅವರದೇ ಆದ ಕೆಲವು ಸಂಪ್ರದಾಯಗಳು, ರೀತಿ ರಿವಾಜುಗಳು ಸಹ ಪ್ರಚಲಿತದಲ್ಲಿದ್ದವು ಎಂಬ ಅಂಶವು ಸ್ಪಷ್ಟವಾಗುತ್ತದೆ. ಇದರೊಂದಿಗೆ ಈ ಕಾಯಕವು ವಂಶಪಾರಂಪರ್ಯವಾಗಿ ಸಾಗಿ ಬರುತ್ತಿದ್ದವು ಎನ್ನುವುದರಲ್ಲಿ ಅನುಮಾನಗಳಿಲ್ಲ.

ಕೃತಜ್ಞತೆ : ಮಾಹಿತಿ ಒದಗಿಸಿದ ಡಾ. ಟಿ.ಎಂ.ಮಂಜುನಾಥಯ್ಯ, ಡಾ.ಕಲವೀರ ಮನ್ವಾಚಾರ್ ಮತ್ತು ಛಾಯಾಚಿತ್ರ ಒದಗಿಸಿದ ಶ್ರೀ ಗಣೇಶ್ ಯಾಜಿ ಅವರಿಗೆ ಕೃತಜ್ಞತೆಗಳು.



ಹರಿಗೋಲಿನಲ್ಲಿ ವಾಹನ ಸಾಗಿಸುತ್ತಿರುವ ದೃಶ್ಯ

ಹರಿಗೋಲಿನಲ್ಲಿ ಪ್ರಯಾಣಿಕರನ್ನು ಸಾಗಿಸುತ್ತಿರುವ ದೃಶ್ಯಗಳು





ಟಿಪ್ಪಣಿಗಳು

೧. ಎನ್ ಸೈಕ್ಲೋಪಿಡಿಯಾ ಆಫ್ ಇಂಡಿಯನ್ ಆರ್ಕಿಯಾಲಜಿ, (ಇನ್ನು ಮುಂದೆ ಇ.ಐ.ಎ. ಸಂ. ೧, ಪು. ೮೧.)

೨. ಸುಂದರ ಅ. "ವಡಗಾಂವ್ ಮಾಧವಪುರದಲ್ಲಿಯ ೨೦೦೦ ವರ್ಷ ಹಿಂದಿನ ವ್ಯಾಪಾರ ಕೇಂದ್ರದ ಮಹಾನಗರ" ವೇಣುನಾದ, ವಿಶೇಷ ಸಂಪುಟ, ಅಖಿಲಭಾರತ ೫೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಬೆಳಗಾವಿ, ಫೆಬ್ರವರಿ, ೧೯೮೦, ಪು. ೩-೫, ವಾಸುದೇವನ್ ಸಿ.ಎಸ್. ಪುರಾತತ್ವ ಸಂಪುಟ, ಸಂಪುಟ ೩, (ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಯೋಜನೆ, ೨೦೦೦, ಅಪ್ರಕಟಿತ)

೩. ನಾಗರಾಜರಾವ್ ಎಂ.ಎಸ್. ವಿಜಯನಗರ ಪ್ರೋಗ್ರೇಸ ಆಫ್ ರಿಸರ್ಚ್, ೧೯೮೩ ವಿದೇಶಿ ಪ್ರವಾಸಿಗರು ವಿಜಯನಗರ ಪಟ್ಟಣವನ್ನು ವಿವರಿಸುವಾಗ ಇಲ್ಲಿಯ ಬೀದಿಗಳ ವಿನ್ಯಾಸ ಮತ್ತು ವೈಭವಗಳನ್ನು ಪದೇ ಪದೇ ತಮ್ಮ ಪ್ರವಾಸಿ ಕಥಾನಕಗಳಲ್ಲಿ ವಿವರಿಸಿದ್ದಾರೆ. ಅವರ ಬಹುಪಾಲು ವರ್ಣನೆಯು ರಾಜಧಾನಿಯ ಪೇಟೆ, ಅರಮನೆ ಮತ್ತು ಬೀದಿಗಳಲ್ಲಿ ಜರುಗುತ್ತಿದ್ದ ದೈನಂದಿನ ಜೀವನಶೈಲಿಯನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ನೋಡಿ ಸದಾನಂದ ಕನವಳ್ಳಿ (ಅನುವಾದ), ರಾಬರ್ಟ್‌ಸೀವೆಲ್ (ಮೂಲ), ಮರೆತು ಹೋದ ಮಹಾಸಾಮ್ರಾಜ್ಯ, ಪು. ೬೫ ಮತ್ತು ಬಾಲಸುಬ್ರಹ್ಮಣ್ಯ (ಅನುವಾದ), ಬಿ.ಸೂರ್ಯನಾರಾಯಣರಾವ್ (ಮೂಲ), ಮರೆಯಲಾಗದ ಮಹಾಸಾಮ್ರಾಜ್ಯ, ಪು. ೨೧

೪. ಮಹದೇವಯ್ಯ ಎಂ.ಪಿ. "ಪ್ರಾಚೀನ ಕರ್ನಾಟಕದಲ್ಲಿ ನೌಕಯುದ್ಧಗಳು", ಇತಿಹಾಸ ದರ್ಶನ, ಸಂ. ೧೧, ಪು. ೧೫೮-೧೬೧ ವ್ಯಾಪಾರ ನೌಕಾ ಪಡೆಗಳಿಗೆ ಮತ್ತು ಸಾಗರೋತ್ತ ಚಟುವಟಿಕೆಗಳಿಗೆ ನೌಕೆಗಳನ್ನು ಬಳಸಲಾಗುತ್ತಿತ್ತು.

೫. ಇ ಐ ಎ, ಸಂ. ೧, ಪು. ೮೨ ಮತ್ತು ಸಂ. ೨, ಪು. ೨೯೭

೬. ಅದೇ, ಸಂ. ೧, ಪು. ೨೯೬ ಮತ್ತು ಸಂ. ೨, ಪು. ೧೭೨-೧೭೫

೭. ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯಾ ಆನ್ಯುಲ್ ರಿಪೋರ್ಟ್ ೧೯೧೪-೧೫, ಪು.೬೯

೮. ಇ ಐ ಎ, ಸಂ. ೧, ಪು. ೨೯೬-೨೯೭

೯. ಅದೇ

೧೦. ವಿರೂಪಾಕ್ಷಿ ಪೂಜಾರಹಳ್ಳಿ, "ವಿಜಯನಗರ ಕಾಲದ ಮೀನುಗಾರಿಕೆ ಮತ್ತು ಅಂಬಿಗತನ", ವಿಜಯನಗರ ಅಧ್ಯಯನ, ಸಂ. ೬, ಪು. ೭೪-೮೩, ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ಆನೆಗೊಂದಿ ತಳವಾರಘಟ್ಟ ಸೇತುವೆ ಪೂರ್ಣಗೊಂಡರೆ, ವಂಶಪಾರಂಪರ್ಯವಾಗಿ ನಡೆಸುವ ಅಂಬಿಗರ ಜೀವನಕ್ಕೆ ತೊಂದರೆಯಾಗುವ ಸಾಧ್ಯತೆಗಳ ಲೇಖಕರು ಗಮನ ಸೆಳೆದಿದ್ದಾರೆ. ಹರಗೋಲು ಮತ್ತು ಹರಿಗೋಲು ಎರಡೂ ಪದಗಳು (ಹರ > ಹರಿ) ಬಳಕೆಯಲ್ಲಿವೆ.

೧೧. ಸದಾನಂದ ಕನವಳ್ಳಿ (ಅನು), ಪೂರ್ವೋಕ್ತ, ಪು. ೨೭೭

೧೨. ಅದೇ

೧೩. ಸೋಮಶೇಖರ ಎಸ್.ವೈ. ಹಂಪೆಯ ಬಜಾರುಗಳು, ಪು. ೧೩

೧೪. ಸದಾನಂದ ಕನವಳ್ಳಿ (ಅನು), ಪೂರ್ವೋಕ್ತ, ಪು. ೫೯, ಟಿಪ್ಪಣಿ ೧೨

೧೫. ಅದೇ, ಪು. ೫೭

೧೬. ಶೇಷಶಾಸ್ತ್ರಿ ಆರ್. ಕರ್ನಾಟಕದ ವೀರಗಲ್ಲುಗಳು, ಪು. ೧೨೭

೧೭. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪು. ೮೨, ಲೇಖಕರು ಇಂದಿನ ಹಂಪಿ ಪರಿಸರದ ಅಂಬಿಗರ ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಸಾಂದರ್ಭಿಕವಾಗಿ ಹರಗೋಲುಗಳನ್ನು ಬಿಡಲಾಗುವ ಇಂದಿನ ಕೆಲವು ಸ್ಥಳಗಳನ್ನು ಗುರುತಿಸಿದ್ದಾರೆ. ಇಂದಿನ ಪುರಂದರ ಮಂಟಪ ಮತ್ತು ಚಕ್ರತೀರ್ಥದ ಕಡೆಯಿಂದ ನದಿಯಲ್ಲಿ ಇಳಿಮುಖವಾಗಿ, ಅಂದರೆ ನೀರು ಹರಿಯುವ ದಿಕ್ಕಿನಲ್ಲಿ ಸಾಗಿ, ಆನೆಗೊಂದಿ ತಲುಪಲು ಸುಲಭ ಸಾಧ್ಯವಿದೆ. ಇವುಗಳಲ್ಲಿ ನದಿಯ ಎರಡೂ ಕಡೆಗಳಿಂದ ಹಲವಾರು ಸ್ಥಳಗಳಲ್ಲಿ ಹರಗೋಲುಗಳನ್ನು ಬಿಡಲಾಗುತ್ತದೆ. ಆದರೆ ಕೆಲವು ಕಡೆ ಮಾತ್ರ ನದಿಯಲ್ಲಿ ಬಂಡೆಗಳಿಲ್ಲದೆ ಹರಗೋಲು ಹಾಯಲು ಸ್ಥಳಗಳು ಸೂಕ್ತವಾಗಿವೆ ಮತ್ತು ನದಿ ದಂಡೆಯಲ್ಲಿ ಹರಗೋಲು ಹತ್ತಲು ಹಾಗೂ ಇಳಿಯಲು ಕೆಲವು ಆಯ್ದ ಜಾಗಗಳೇ ಪ್ರಶಸ್ತವಾಗಿದೆ. ನೋಡಿ ವಸುಂಧರಾ ಫಿಲಿಯೋಜಾ, ಅಳಿದುಳಿದ ಹಂಪೆ, ಪು. ೯೩

೧೮. ವಸಂತಮಾಧವ ಕೆ.ಜಿ. "ವಿಜಯನಗರ ಅರಸರ ಸಾಗರೋತ್ತರ ವ್ಯಾಪಾರ ಒಂದು ಅಧ್ಯಯನ", ವಿಜಯನಗರ ಅಧ್ಯಯನ, ಎಂ.ವಿ.ಕೃಷ್ಣಪ್ಪ ಮತ್ತು ಹೆಚ್.ಡಿ.ತಳವಾರ (ಸಂ), ಸಂ. ೬, ಪು. ೧೦೪-೧೦೮

೧೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೩, ಸಂ. ೨೦೮ (ಇನ್ನು ಮುಂದೆ ಕವಿಶಾ) ಮತ್ತು ಸೌಥ್ ಇಂಡಿಯನ್ ಇನ್ಸ್ ಕ್ರಿಪ್ಶನ್ಸ್ (ಇನ್ನು ಮುಂದೆ) ಎಸ್. ಐ. ಐ, ಸಂ. IV, ಸಂ. ೨೭೭

೨೦. ಕವಿಶಾ, ಸಂ. ೩, ಸಂ. ೭೪, ಮತ್ತು ಎಸ್. ಐ. ಐ, ಸಂ. IV, ಸಂ. ೨೫೫, ಸೋಮಶೇಖರ ಎಸ್.ವೈ. ಪೂರ್ವೋಕ್ತ, ಪು. ೧೩

೨೧. ಕವಿಶಾ, ಸಂ. ೩, ಸಂ. ೧೯೨, ಎಸ್.ಐ.ಐ. ಸಂ. IX, ಭಾಗ ii, ಸಂ. ೫೩೪ ಮತ್ತು ಸಂ. XVIII, ಸಂ. ೩

೨೨. ಕವಿಶಾ, ಸಂ. ೨, ಗಂಗಾವತಿ ಸಂ. ೩೭, ಕ್ವಾಟರ್‌ನರಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಸಂ. ೭, ಅನ್ಯುಯಲ್ ರಿಪೋರ್ಟ್ ನ್ಯೂ ಆನ್ ಎಫಿಗ್ರಾಫಿ, ೧೯೫೮-೫೯, ಸಂ. ೬೮೩

೨೩. ಕವಿಶಾ, ಸಂ. ೨, ಗಂಗಾವತಿ ಸಂ. ೩೮

೨೪. ಕವಿಶಾ, ಸಂ. ೨, ಗಂಗಾವತಿ ಸಂ. ೨೬

೨೫. ಕವಿಶಾ, ಸಂ. ೨, ಸಂ. ೨೭

❖ ❖

೩೧

ಮಹಾಮಂತ್ರಿ ಬೈಚಯ ದಂಡನಾಯಕ

ಡಾ. ಟಿ.ಎಂ.ಮಂಜುನಾಥಯ್ಯ

ವಿಜಯನಗರ ಸಾಮ್ರಾಜ್ಯವು ಹದಿನಾಲ್ಕನೇ ಶತಮಾನದಲ್ಲಿ ಸ್ಥಾಪಿಸಲ್ಪಟ್ಟಿತು. ದಕ್ಷಿಣ ಭಾರತದಲ್ಲಿ ವಿಜೃಂಭಿಸಿದ ಹಿಂದು ಸಾಮ್ರಾಜ್ಯವು ಇಡೀ ಭಾರತದಲ್ಲಿ ಇದೊಂದು ಮಾತ್ರ. ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ, ವಾಸ್ತುಶಿಲ್ಪ, ವಿದೇಶಿ ನೀತಿಗಳು, ಸಾಗರೋತ್ತರ ವ್ಯಾಪಾರ, ಸೈನಿಕ ವ್ಯವಸ್ಥೆ, ಸುವ್ಯವಸ್ಥಿತ ಆಡಳಿತ ವ್ಯವಸ್ಥೆಗಳು ಮಧ್ಯಕಾಲೀನ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದು ವಿಶ್ವವಿಖ್ಯಾತವಾಗಿದೆ. ವಿಜಯನಗರ ಸ್ಥಾಪನೆಗೆ ಹಾಗೂ ಅದರ ಹಿಂದಿನ ಐತಿಹಾಸಿಕ ಘಟನೆಗಳನ್ನು ಅವಲೋಕನ ಮಾಡಿದಾಗ ಅಂದಿನ ಪರಿಸ್ಥಿತಿಯ ವಿವೇಚನೆಯೂ ಅಗತ್ಯವೆನಿಸುವುದು. ವಿಜಯನಗರ ಸ್ಥಾಪನೆಗಿಂತ ಕೇವಲ ಒಂಬತ್ತು ವರ್ಷಗಳ ಹಿಂದೆ ಅಂದರೆ ಕ್ರಿ.ಶ. ಸುಮಾರು ೧೩೨೭ರ ಮುಂಚೆ ಹಂಪೆಯ ಪರಿಸರವನ್ನು ರಾಜಧಾನಿಯಾಗಿ ಮಾಡಿಕೊಂಡು, ಉತ್ತಮ ಆಡಳಿತ ನಡೆಸಿದ ಕುಮ್ಮಟ ನಾಯಕರೆಂದು ಪ್ರಸಿದ್ಧಿಯಾದ, ಮುಮ್ಮಡಿ ಸಿಂಗೆಯ ನಾಯಕ ಕಂಪಿಲರಾಯ ಹಾಗೂ ಕುಮಾರ ರಾಮನಾಥರು, ಇವರಿಗೆ ದಂಡನಾಯಕನಾಗಿ, ಮಹಾಮಂತ್ರಿಯಾಗಿಯೂ, ಉತ್ತಮ ಸಲಹೆಗಾರನೂ, ನೀತಿವಂತನೂ, ಧರ್ಮನಿಷ್ಠನೂ ಸಕಲ ವಿದ್ಯಾ ಪಾರಂಗತನೂ ಆಗಿದ್ದ ಮಹಾಮಂತ್ರಿ ಬೈಚಯ ದಂಡನಾಯಕನ ಶ್ರಮ ಉನ್ನತವಾಗಿದೆ. ವಿಜಯನಗರ ಸ್ಥಾಪನೆಯಾದ ಮೇಲೆ ಹರಿಹರ ಬುಕ್ಕರಾಯರ ಮಂತ್ರಿಯಾಗಿಯೂ, ರಾಯಬಾರಿಯಾಗಿಯೂ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ದುಡಿದ ಮಹನೀಯನು ಬೈಚಯ ದಂಡನಾಯಕನ ಕುರಿತಾಗಿ ಸಾಹಿತ್ಯಿಕ ಆಕರಗಳು ಜಾನಪದ ಸಾಹಿತ್ಯ ವಿದೇಶಿಯರ ಬರಹಗಳು, ಶಿಲಾಶಾಸನಗಳು ಪುಷ್ಠೀಕರಿಸುತ್ತವೆ. ಸಾಹಿತ್ಯಕ ಆಕರಗಳು ಹಾಗೂ

ಶಿಲಾಶಾಸನಗಳ ಉಲ್ಲೇಖನಗಳೂ ಏಕರೀತಿಯ ಸಾಕ್ಷ್ಯಧಾರಗಳನ್ನು ನೀಡಿರುವುದು ಇವರ ವ್ಯಕ್ತಿತ್ವವನ್ನು ಸಮರ್ಥಿಸಿವೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗಾಗಿ ಶ್ರಮಿಸಿ ಹಿಂದೂ ಸಾಮ್ರಾಜ್ಯವೊಂದನ್ನು ಪ್ರಸಿದ್ಧಿ ಪಡಿಸಿದವನು, ಈತನ ಕುರಿತಾಗಿ ಇಷ್ಟೆಲ್ಲ ಆಕರಗಳು ಸಾಕ್ಷಾಧ್ಯಾರಗಳಿದ್ದರೂ ಇತಿಹಾಸಕಾರರು ಈತನ ಕುರಿತಾಗಿ ಬರೆಯುದೇ ಇರುವುದು ಆಶ್ಚರ್ಯಕರವಾಗಿದೆ. ಈ ಕುರಿತಾಗಿ ಮುಂದೆ ವಿವೇಚಿಸಲಾಗಿದೆ. ಬೈಚಯ ದಂಡನಾಯಕನು ವಿಜಯನಗರ ಪ್ರಾರಂಭ ದಲ್ಲಿ ಹಾಗೂ ಅದಕ್ಕಿಂತ ಪೂರ್ವದಲ್ಲಿದ್ದ ಮುಮ್ಮಡಿ ಸಿಂಗೆಯ ನಾಯಕ. ಕಂಪಿಲರಾಯ ಹಾಗೂ ಕುಮಾರ ರಾಮನಾಥರಲ್ಲಿ ದಂಡನಾಯಕ ಹಾಗೂ ಮಹಾಮಂತ್ರಿಯಾಗಿದ್ದನು. ಈತನು ಒಬ್ಬ ಸಮರ್ಥ ಮಂತ್ರಿಯೆಂದು, ಯುದ್ಧ ಪ್ರಾವೀಣ್ಯತೆಯಲ್ಲಿ ಚತುರನು, ರಾಜಕೀಯ ನಿಪುಣ, ನಿಟಿಲಾಕ್ಷನೆಂದು, ಬಡವರ ಬಂಧುವೆಂದು, ಸಕಲ ವಿದ್ಯಾ ಪಾರಂಗತನು, ಯುದ್ಧ ತಂತ್ರಗಳಲ್ಲಿ ಪರಿಣಿತನು, ರಾಜ್ಯದ ಆಡಳಿತದಲ್ಲಿ ದುರಂದರನು ಬಾಹತ್ತರ ನಿಯೋಗಾಧಿಪತಿಯೂ ಹಾಗೂ ಕುಮಾರ ರಾಮನಾಥ ಮತ್ತು ಆತನ ಅನುಯಾಯಿಗಳಿಗೆ ಕಂಪಿಲನಿಂದ ಒದಗಿದ ತಲೆದಂಡ ಶಿಕ್ಷೆಯನ್ನು ತಪ್ಪಿಸಿದ್ದು ಇಂದ್ರಜಾಲ ಮಹೇಂದ್ರ ಜಾಲ ವಿದ್ಯೆಗಳನ್ನು ಬಲ್ಲವನೆಂದು ಈ ಕುರಿತಾಗಿ ಸಾಹಿತ್ಯಿಕ ಗ್ರಂಥಗಳಾದ ಕುಮಾರ ರಾಮನ ಸಾಂಗತ್ಯಗಳು ಹೊಗಳಿವೆ. ಈ ಕುರಿತು ಬ್ರಹ್ಮಗಿರಿ ಸಿದ್ದಾಪುರದ ತ್ರಿಶಂಕೇಶ್ವರ ದೇವಾಲಯದ ಶಾಸನದಲ್ಲಿ ಉಲ್ಲೇಖವಿದೆ. ಕಲ್ಲೇದೇವರಪುರದ ಶಾಸನ, ಚಿತ್ರದುರ್ಗದ ಶಾಸನಗಳು, ಬೈಚಯ ದಂಡನಾಯಕನ ಬದುಕಿನ ನೈಜ ಚಿತ್ರಣವನ್ನು ದೃಢೀಕರಿಸಿವೆ. ವಿದೇಶಿಯ ಪ್ರವಾಸಿ ಇಬನ್ ಬತೂತನ ಪ್ರಕಾರ ಕುಮ್ಮಟದ ನಿರ್ಣಾಯಕ ಯುದ್ಧದಲ್ಲಿ ಕಂಪಿಲ ಕುಮಾರ ರಾಮನಾಥರು ಸೋಲನ್ನನುಭವಿಸಿದ ಸಮಯದಲ್ಲಿ ಕಂಪಿಲರಾಯನ ಹತ್ತಿರ ಬಂದುಗಳು ಐದು ಜನ ಹಾಗೂ ಒಬ್ಬ ಬುದ್ಧಿವಂತ ಮಂತ್ರಿಯನ್ನು ಸೆರೆಹಿಡಿದು ಸುಲ್ತಾನರ ಸೈನಿಕರು ದೆಹಲಿಗೆ ಕೊಂಡೊಯ್ದುರೆಂದು, ನಂತರ ಈ ಆರು ಜನರು ಸುಲ್ತಾನನ ಪ್ರೀತಿ ವಿಶ್ವಾಸ ಗಳಿಸಿ ಬಿಡುಗಡೆಗೊಂಡು ಹಂಪೆಯ ಪರಿಸರಕ್ಕೆ ಅಧಿಕಾರಿಗಳಾದರು. ಮುಂದೆ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರೆಂದು ಉಲ್ಲೇಖವಿದೆ. ಬೈಚಯ ದಂಡನಾಯಕನ ನೇತೃತ್ವದಲ್ಲಿ ಹರಿಹರ ಕಂಪಣ್ಣ ಬುಕ್ಕಣ್ಣ ಮಾರಪ್ಪ ಮುದ್ದಪ್ಪ ಇವರುಗಳು ವಿಜಯನಗರ ಸ್ಥಾಪನೆ ಮಾಡಿದರೆಂದು ಪ್ರವಾಸಿಗರ ಕಥಾನಕಗಳಲ್ಲಿ ಉಲ್ಲೇಖಗೊಂಡಿದೆ.[೭] ಇದರಿಂದ ವಿಜಯನಗರ ಸ್ಥಾಪನೆಯ ಕಾರ್ಯದಲ್ಲಿ ಬೈಚಯ ದಂಡನಾಯಕನು ಮಾಡಿದ ಕಾರ್ಯ ಮಹತ್ವಪೂರ್ಣ ಹಾಗೂ ತನ್ನ ತಾಯ್ನೆಲವನ್ನು ಕಾಪಾಡುವಲ್ಲಿ ವಹಿಸಿದ ಪಾತ್ರದಲ್ಲಿ ತ್ಯಾಗ, ನಿಷ್ಠೆ, ಬಲಿದಾನ ಗಳನ್ನು ಇಂದಿಗೂ ಮರೆಯುವಂತಿಲ್ಲ. ಹರಿಹರ ಬುಕ್ಕರಾಯರ ಮಹಾಮಂತ್ರಿಯೂ, ಚೀನಾ ದೇಶಕ್ಕೆ ವಿಜಯನಗರದ ರಾಯಭಾರಿಯಾಗಿ ಹೋಗಿದ್ದು ಭಾರತ-ಚೀನಾ ದೇಶದ ಸಾಂಸ್ಕೃತಿಕ, ವ್ಯಾಪಾರ ಸಂಪರ್ಕವನ್ನು ಪುನಃ ಆರಂಭಿಸಿದ ಕೀರ್ತಿ ಈತನಿಗೆ ಸಲ್ಲುವುದು. ಆನೆಗೊಂದಿಯ ಚೈತ್ಯಾಲಯದ ಶಾಸನ, ಕಮಲಾಪುರದ ಗಾಣಗಿತ್ತಿ ಜಿನಾಲಯದ ಮಾನಸ್ತಂಬದ ಮೇಲಿನ

ಶಾಸನಗಳು, ಹಂಪೆಯ ಹೇಮಕೂಟದಲ್ಲಿರುವ ಶಾಸನಗಳು ಹಾಗೂ ಇವೆಲ್ಲಕ್ಕಿಂತ ಹೆಚ್ಚಾಗಿ ಬೈಚಪ್ಪನ ಇತಿಹಾಸವನ್ನು ತಿಳಿಸುವಲ್ಲಿ ಅರುವನಹಳ್ಳಿಯ ಶಾಸನಗಳು ಮುಖ್ಯ ಪಾತ್ರವನ್ನು ವಹಿಸಿವೆ. ಬೈಚಯ ದಂಡನಾಯಕನಿಗೆ ರಾಯ ಕೀರ್ತಿ ದುರಂದರ ರಾಯನೀತಾಂಬುಲ ಮೂಲ (ರಾಯರಿಗೆ ನೀತಿ ಹೇಳುವನು) ಬಡವರ ಬಂದು ಎಂದು ಹೊಗಳಿವೆ. ಈ ರೀತಿಯಾಗಿ ಶಾಸನ ಹಾಗೂ ಸಾಹಿತಿ ಆಕರಗಳು ಮಧ್ಯ ಕಾಲದ ಇತಿಹಾಸದಲ್ಲಿ ಬೈಚಯ ದಂಡನಾಯಕನಿಗೆ ಹೊಗಳಿರುವಷ್ಟು ಬೇರಾವ ಮಂತ್ರಿಗೂ ಹೊಗಳಿಲ್ಲವೆಂದೇ ಹೇಳಬಹುದು.

ರಾಜನೀತಿ

ಹೊಯ್ಸಳರಿಗೂ ಕಂಪಿಲರಾಯನಿಗೂ ಯುದ್ಧ ನಡೆದು ಆಗಬಹುದಾದ ಅನಾಹುತಗಳನ್ನು ತಪ್ಪಿಸಿ ಇಬ್ಬರಿಗೂ ಹೇಳಿದ ರಾಜನೀತಿ ಮಹತ್ತರವಾದದ್ದು. ನಮ್ಮಲ್ಲಿನ ಆಂತರಿಕ ಜಗಳದಿಂದ ದೆಹಲಿ ಸುಲ್ತಾನನು ಪ್ರಬಲವಾಗುತ್ತಿದ್ದಾನೆ. ಇದರಿಂದ ಈ ನೆಲದ ಅರಸರ ಅಂತ್ಯವಾಗುತ್ತದೆ. ಇದರಿಂದ ಇಬ್ಬರಿಗೂ ಉಪಯುಕ್ತವಿಲ್ಲ. ಇಬ್ಬರೂ ಕೂಡಿ ಸುಲ್ತಾನನನ್ನು ಎದುರಿಸುವ ಪ್ರಯತ್ನ ಮಾಡಬೇಕೆಂದು ಹೇಳಿ ದೇಶದ ಹಿತರಕ್ಷಣೆಯ ಭವಿಷ್ಯದ ನುಡಿಗಳು ಇಂದಿಗೂ ಔಚಿತ್ಯಪೂರ್ಣ. ಇಲ್ಲಿ ಹೊಯ್ಸಳರ ದಂಡನಾಯಕ, ಸೋಮೆನಾಯಕನು ಸಹ ಬೈಚಯ ದಂಡನಾಯಕನಷ್ಟೇ ಸಮರ್ಥನೂ ಹೌದು.

ಬಾದುರಖಾನನು ದೆಹಲಿ (ಮಹ್ಮಮದ್ ಬಿನ್ ತುಘಲಕ್) ಸುಲ್ತಾನನ ವಿರುದ್ಧ ದಂಗೆ ಎದ್ದು, ನಂತರ ಸುಲ್ತಾನನ ರಾಜ್ಯದಿಂದ ಪಲಾಯನಗೈದು ಕಂಪಿಲನ ಆಶ್ರಯ ಯಾಚಿಸಿ ಬಂದ ಸಂದರ್ಭದಲ್ಲಿ ಬೈಚಯ ದಂಡನಾಯಕನು ತನ್ನ ಅಭಿಪ್ರಾಯವನ್ನು ಬಾದುರಖಾನನಿಗೆ ಆಶ್ರಯ ನೀಡಿದರೆ, ಸುಲ್ತಾನನ ವಿರೋಧವನ್ನು ಕಟ್ಟಿಕೊಂಡಂತೆ ಇದರಿಂದ ಸುಲ್ತಾನನ ಪ್ರಬಲ ಸೈನ್ಯವನ್ನು ಎದಿರುಸುವುದು ಮಲಗಿದ್ದ ಹುಲಿಯನ್ನು ಎಬ್ಬಿಸಿದ ಹಾಗೆ ಎಂದು ಕಂಪಿಲರಾಯನಿಗೆ ನೀಡಿದ ಸಲಹೆ ಹಾಗೂ ಮುಂದಾಲೋಚನೆ ಈತನ ರಾಜನೀತಿಯನ್ನು ಎತ್ತಿಹಿಡಿಯುತ್ತದೆ.

ಸುಲ್ತಾನನು ತನ್ನ ಮಗಳನ್ನು ಕುಮಾರರಾಮನು ಮದುವೆಯಾಗಬೇಕೆಂದು ರಾಯಸವನ್ನು ಕಳುಹಿಸಿದ ಸಂಬಂಧದಲ್ಲಿ ಕುಮಾರರಾಮನು ಈ ಮದುವೆಗೆ ಒಪ್ಪಿಕೊಳ್ಳುವುದಿಲ್ಲ. ಬೈಚಪ್ಪನು ಸುಲ್ತಾನರ ಮಗಳನ್ನು ಮದುವೆಯಾದರೆ, ವೈರತ್ವವೇ ಇರುವುದಿಲ್ಲ ಹಾಗೂ ಇಡೀ ದಕ್ಷಿಣ ಭಾರತವನ್ನೇ ನಿನ್ನ ಅಧೀನಕ್ಕೆ ಬಿಟ್ಟುಕೊಡುತ್ತಾನೆ ಇದರಿಂದ ನಿನ್ನ ಏಳಿಗೆ ಆಗುತ್ತದೆ ಇಲ್ಲವಾದರೆ ವಿರೋಧವನ್ನು ಎದುರಿಸಬೇಕಾಗುತ್ತದೆ ಎಂದು ಹೇಳುವ ಈತನ ಮುಂದಾಲೋಚನೆಗಳು ಸಾಮಾಜಿಕ, ರಾಜಕೀಯ ಸಾಧನೆಯನ್ನು ಯಾವ ರೀತಿಯಾಗಿ ಬೆಳವಣಿಗೆಯನ್ನು ಹೊಂದಬೇಕೆಂಬ ಅಂಶ ಎದ್ದು ಕಾಣುತ್ತದೆ.

ನಂಜುಂಡ ಕವಿಯ ಕುಮಾರರಾಮ ಚರಿತದಲ್ಲಿ ಬೈಚ ದಂಡನಾಯಕನ ಕುರಿತಾಗಿ ಎರಡು ಅಧ್ಯಾಯಗಳಿವೆ. ಇವುಗಳಲ್ಲಿ ಬೈಚಪ್ಪನ ಸಾಮರ್ಥ್ಯ, ಇಂದ್ರಜಾಲ ವಿದ್ಯೆ ಹಾಗೂ ಕುಮಾರ

ರಾಮನಾಥನನ್ನು ರಕ್ಷಿಸಿದ್ದು, ದೆಹಲಿ ಸುಲ್ತಾನನ ದಂಡನಾಯಕ ನೇಮಿಖಾನನ್ನು ಸೋಲಿಸಿದ ವಿಷಯಗಳನ್ನು ಒಳಗೊಂಡಿವೆ. ಬೈಚಪ್ಪನ ವ್ಯಕ್ತಿತ್ವವನ್ನು ಕುರಿತು ನಂಜುಂಡ ಕವಿ ಹೀಗೆ ಪದ್ಯರೂಪದಲ್ಲಿ ವಿವರಣೆಯನ್ನು ನೀಡುತ್ತಾನೆ.[೨]

ನೀತಿ ನಿಪುಣ ನಿಖಿಲೋಪಾಯ ನಿರತನ
ಭೀತನಮಲ ವಂಶಜನು
ಭೂತಹಿತನು ನಿಜಪತಿ ಕಾಯಶನಿಷ್ಮವಿ
ನೀತನ್ನೆದಿದನು ಬೈಚಪ್ಪನು || ೧ ||

ದಾನಿದಯಾಪರನವದಾತ ಕೀರ್ತಿ ನಿ
ಧಾನನುತ್ತಮಗುಣಯುತನು
ದೀನೋದ್ಧರಣ ಧುರೀಣನೆನಿಪ ಸತ್ತ್ವ
ಧಾನ ಬಂದನು ಬಯಿಚಪ್ಪನು || ೨ ||

ಏಕತಾಯಿ ಪೈರಣೆ ಸುಕ್ಕುಗುಪ್ಪನ ಚಕ
ಚಕಿಪ ಕುಂಡಲ ಗಂಡ ಬೆರಳು
ಸುಕರ ಸುವರ್ಣಮುದ್ರಿಕೆ ರಾಜಿಸೆ ಬಂದ
ನಕಲಂಕಚರಿತ ಬೈಚಪ್ಪ || ೩ ||

ಮಂತ್ರಿ ಚೂಡಾಮಣಿ ನೀತಿರಾಯಂಬುಲ, ರಾಜರಿಗೆ ನೀತಿಯನ್ನು
ಬೋದಿಸಿದವನೂ ಈತನೆ.

ಅರಿಷಡುವರ್ಗ ಪಂಚೇಂದ್ರಿಯದಿಚ್ಚೆಗೆ
ಪರಿಯಲೀಯದೆ ಚಿತ್ತವನು
ಪರಮಯೋಗಿಯ ತೆರದಿಂದರ್ಪುದವನಿಪ
ನರಪತಿಗಳ ನೀತಿಯಿದ್ದು || ೩೫ ||

ಸಾಮವೆಂಬುದು ರಾಜಕಾರ್ಯ ಸಿದ್ದಿಯ ಜನ್ಮ
ಭೂಮಿ ಭೂಮಿಪ ಕೇಳದರ
ಸೀಮೆಯೊಳಿರದನೃಪರ ಕಾರ್ಯಹಾನಿಗೆ
ಸಾಮವಿಲ್ಲೆಂದು ಪೇಳಿದನು || ೩೨ ||

ಸಂಗಾಪುರದ ಶಾಸನದಲ್ಲಿ ಈತನನ್ನು ಕಂಪಿಲರಾಯನ ಬಾಹತ್ತರ ವಿನಿಯೋಗಾಧಿಪತಿ ಪತಿಕಾರ್ಯ ದುರಂದುರನುಮಪ್ಪ ಬೈಚವೆಗಡೆ

ಕ್ರಿ.ಶ. ೧೩೪೨ರ ಆನೆಗೊಂದಿಯ ಚೈತ್ಯಾಲಯದ ಶಾಸನದಲ್ಲಿ ಇರುಗಪ್ಪ ದಂಡನಾಯಕನು, ಕುಲಕ್ರಮಾಗತ ಮಂತ್ರಿ ಬೈಚದಂಡನಾಥನ ಮಗನೆಂದು

ಕರೆದುಕೊಂಡಿದ್ದಾನೆ. ಒಂದನೇ ಹರಿಹರ ರಾಯನಲ್ಲಿಯೂ ಬೈಚಪ್ಪ ಮಂತ್ರಿಯಾಗಿದ್ದನೆಂದು, ಮಹಾಮಹಿಮನು, ಶಕ್ತಿ ತ್ರಯೋಮನ್ವಿತನು, ಹಾಗೂ ಧರ್ಮಭೂಷಣ ಬಟ್ಟಾರರ ಗುರುಗಳ ಶಿಷ್ಯನೆಂದು ಕರೆಯಲಾಗಿದೆ. ಈ ಚೈತ್ಯಾಲಯಕ್ಕೆ ಧಾನಗಳನ್ನು ಬಿಟ್ಟಿರುವನು.

ಕಮಲಾಪುರದ ಗಾಣಗಿತ್ತಿ ಜಿನಾಲಯದ ಮುಂದಿನ ಮಾನಸ್ತಂಬದ ಮೇಲಿರುವ ಶಾಸನದಲ್ಲಿ ಬೈಚದಂಡನಾಯಕನು ಪುರಾತನ ಕಾಲದ ಮಹಾಪತಿಗಳಿಗೆ ಮಂತ್ರಿಯಾಗಿದ್ದನೆಂದು ಶಕ್ತಿತ್ರಯ ಸಮನ್ವಿತನು, ಕುಲಕ್ರಮಾಗತ ಮಂತ್ರಿಯೂ, ಉತ್ತಮ ಅಂತಃಕರಣವುಳ್ಳವನೂ, ರಣರಂಗದಲ್ಲಿ ಬಾಹುಬಲಶಾಲಿಯೂ ಆ ಕಾಲದಲ್ಲಿ ಮಹಾಬೈಚ ದಂಡನಾಥನೆಂದು, ಪ್ರಸಿದ್ಧ ನಾದವನೆಂದು ಹಾಗೂ ಈತನ ಗುರುಗಳು ಧರ್ಮಭೂಷಣ ಬಟ್ಟಾರಕ ಮುನಿಗಳ (ಶಿಷ್ಯ) ಪಾದ ಪದ್ಮಾರಾಧನೆಂದು ಪ್ರಸಿದ್ಧಿಯನ್ನು ಪಡೆದ ಮಹಾನೀಯನ ಮಗ ಇರುಗಪ್ಪ ದಂಡನಾಯಕನೆಂದು ಹೇಳಿಕೊಂಡಿದ್ದಾನೆ. ಈ ಆಧಾರದಿಂದ ಇವನು ಭಟ್ಟರ ಬಾಚಣಯನೆಂದು ಕರೆದುಕೊಂಡಿದ್ದರ ಔಚಿತ್ಯ ಧರ್ಮಭೂಷಣ ಬಟ್ಟಾರಕ ಗುರುಗಳ ಹೆಸರನ್ನು ತನ್ನ ಹೆಸರಿನ ಮೊದಲು ಸೇರಿಸಿಕೊಂಡಿದ್ದಾನೆ. ಬಟ್ಟರ ಬಾಚಣ್ಣ ಬಚ್ಚಣ್ಣ, ಬಾಚಣಯ್ಯ, ಬೂಚಣ್ಣನೆಂದು ಕರೆಯಲಾಗಿದೆ. ಹೇಮಕೂಟದಲ್ಲಿರುವ ಎರಡು ಶಾಸನಗಳು ಭಟ್ಟರ ಬಾಚಣಯ್ಯ ಅಥವಾ ಬೈಚಯ ದಂಡನಾಯಕನ ಹೆಸರನ್ನು ಉಲ್ಲೇಖಿಸುತ್ತವೆ. ಒಂದು ಶಾಸನದಲ್ಲಿ ಬಟ್ಟರ ಬಾಚಣಯ್ಯನು ಮಾಡಿಸಿದ ಸೋಪಾನವೆಂದಿದ ಇದರಿಂದ ಖುದ್ದಾಗಿ ಬೈಚಯ ದಂಡನಾಯಕನೇ ಸೂಪಾನಗಳನ್ನು ಮಾಡಿಸಿದ್ದು. ಇನ್ನೊಂದು ಶಾಸನದಲ್ಲಿ ಬಾಚಣಯ್ಯಗೆ ಹರಿಹರ, ಕಂಪಣ್ಣ, ಬುಕ್ಕಣ್ಣ, ಮಾರಪ್ಪ, ಮುದ್ದಣ ಸಹೋದರರು ಸೋಪಾನಗಳನ್ನು ಮಾಡಿಸಿರುವರು. ಈ ಎರಡನೇ ಶಾಸನದಿಂದ ಈ ಬೈಚಯ ದಂಡನಾಯಕನು ಬೇರಾರು ಅಲ್ಲದೆ ಕಂಪಿಲನ ಮಂತ್ರಿ ಬೈಚಯನೇ ಆಗಿರುವನು. ಹಾಗೂ ಈತನು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾನೆ. ಹೇಮಕೂಟದಲ್ಲಿ ಕಂಪಿಲರಾಯನು ಕಟ್ಟಿಸಿರುವ ದೇವಾಲಯಗಳು ಇರುವುವು. ಇದರಿಂದ ಬೈಚೆಯ ದಂಡನಾಯಕನು ಇಲ್ಲಿ ಸೋಪಾನಗಳನ್ನು ಮಾಡಿರುವ ಔಚಿತ್ಯ, ಕಂಪಿಲರಾಯನ ನೆನಪಿಗಾಗಿ ಎಂದು ಪರಿಗಣಿಸಬಹುದಾಗಿದೆ.

ಹಂಪೆಯ ಕೋಟಿಲಿಂಗ ಸ್ಥಳದಲ್ಲಿರುವ ಎರಡು ಶಾಸನಗಳಲ್ಲಿ ಬಾಚಣಯನ ಗುರುಗಳ ಉಲ್ಲೇಖ ಲಭ್ಯವಾಗಿವೆ. "ಶ್ರೀ ಧರ್ಮಭೂಷಣ ಭಟ್ಟಾರಕ ದೇವರ ಪಾದ" ಹಾಗೂ ಮಹಿಲಾಪುರದ ಹಗರ ದೇವರ ಪಾದವೆಂದು ಇದೆ.

ಧರ್ಮ ಸಮನ್ವಯತೆ

ಬೈಚಯ ದಂಡನಾಯಕನು ಎಲ್ಲಾ ಧರ್ಮಗಳಲ್ಲಿಯೂ ಸಮಾನತೆಯನ್ನು ಕಂಡವನು. ಸರ್ವದ ವಂಶ ಸಹಿಷ್ಣುವೂ ಆಗಿದ್ದನೆಂಬುದಕ್ಕೆ ಮೆಟ್ರಿಯ ಶಾಸನವು ಒಂದು ಉತ್ತಮ ನಿದರ್ಶನವಾಗಿದೆ. ಮಲ್ಲಿಕಾರ್ಜುನ ದೇವಾಲಯದ ಛತ್ರಕ್ಕೆ ಬೂದಾನವನ್ನು ಬೈಚಯ

ದಂಡನಾಯಕನ ಆಜ್ಞೆಯ ಮೇರೆಗೆ ಸಿರಿಯಣ್ಣನೆಂಬ ಅಧಿಕಾರಿ ಭೂಮಿಯನ್ನು ಧಾನವಾಗಿ ಕೊಟ್ಟಿರುವ ಉಲ್ಲೇಖವಿದೆ.

ಕ್ರಿ.ಶ. ೧೩೩೫ರಲ್ಲಿ ಕಂಪಿಲನ ರಾಜ್ಯದ ಅವಸಾನದ ನಂತರ ಈ ಪ್ರದೇಶ ದೆಹಲಿ ಸುಲ್ತಾನರ ಆಳ್ವಿಕೆಯಲ್ಲಿತ್ತು. ಇದಕ್ಕಿಂತ ಸ್ವಲ್ಪ-ಮೊದಲು ಸುಲ್ತಾನರು ಮತ್ತು ಕಂಪಿಲನ ನಡುವೆ ನಡೆದ ಯುದ್ಧದಲ್ಲಿ ಹಾಳಾದ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದನ್ನು ಗಂಗಾವತಿ ತಾಲೂಕಿನ ಹಣವಾಳದ ಶಾಸನ ಉಲ್ಲೇಖಿಸುತ್ತದೆ. ಮಹಂದಮದರಾಯನೆಂದು ಉಲ್ಲೇಖವಿದೆ ಬವಿಷ್ಯ ಮಹ್ಮದ್ ಬಿನ್ ತುಘಲಕ್‌ನ ಆಳ್ವಿಕೆಯನ್ನು ಈ ಶಾಸನ ಪುಷ್ಠೀಕರಿಸುತ್ತದೆ.

ಚಿತ್ರದುರ್ಗದಲ್ಲಿ ಕಟಕಸೇಸೆ (ಸೈನಿಕ ತೆರಿಗೆ) ಯಿಂದ ಜನರಿಗೆ ತೊಂದರೆ ಆಗಿದ್ದು ಹಾಗೂ ಕಟಕರಾಯನ (ಕಂಪಿಲರಾಯನಿಂದ) ಯುದ್ಧದಿಂದ ಅಲ್ಲಿನ ಅಗ್ರಹಾರ ಹಾಳಾಗಿದ್ದುದನ್ನು ಕಂಡು ಪೆರುಮಾಳೆ ದಂಣ್ಣಾಯಕ ಪುರವೆಂಬ ಅಗ್ರಹಾರವನ್ನು ಪುನ: ಪ್ರತಿಷ್ಠಾಪಿಸಿದ್ದನು. ವಿದ್ಯಾಕೇಂದ್ರವನ್ನು ಸ್ಥಾಪಿಸಿದ ಕೀರ್ತಿ ಬೈಚಯ ದಂಡನಾಯಕನಿಗೆ ಸಲ್ಲುವದು. ಇದರ ಬಿರುದನ್ನು ಸವಿತ್ರೇಯಕರ ಎಂದು ಅರುವನಹಳ್ಳಿ ಮತ್ತು ಕಮಲಾಪುರದ ಶಾಸನಗಳು ಉಲ್ಲೇಖಿಸುತ್ತವೆ.

ಬೈಚಯ ದಂಡನಾಯಕನ ಮಗ ಇರುಗಪ್ಪ ದಂಡನಾಯಕನು ಆನೆಗೊಂದಿಯಲ್ಲಿ ಕ್ರಿ.ಶ. ೧೩೪೨ರಲ್ಲಿ ಚೈತ್ಯಾಲಯವನ್ನು ಕಟ್ಟಿಸಿದನು. ಈ ಚೈತ್ಯಾಲಯಕ್ಕೆ ಬೈಚಯ ದಂಡನಾಯಕನು ದತ್ತಿಗಳನ್ನು ಬಿಡುತ್ತಾನೆ.

ಕುಮ್ಮಟ ನಾಯಕರ ಇತಿಹಾಸದಲ್ಲಿ ಸಿಂಗೆಯನಾಯಕ ಕಂಪಿಲದೇವ ಮತ್ತು ಕುಮಾರ ರಾಮನಾಥರ ಪಾತ್ರ ಎಷ್ಟು ಮಹತ್ವದ್ದು ಅಷ್ಟೇ ಸರಿಸಮಾನವಾದ ವ್ಯಕ್ತಿತ್ವವುಳ್ಳವನು ಬೈಚಯ ದಂಡನಾಯಕನು. ಬೈಚಯ ದಂಡನಾಯಕನ ತಂದೆ ಕೀರ್ತಿರಾಜ. ಕೀರ್ತಿರಾಜನು ಮೂಲತ: ದೇವಗಿರಿಯ ಸೇವುಣ ರಾಮಚಂದ್ರನಲ್ಲಿ ದಂಡನಾಯಕನಾಗಿದ್ದನು. ಕಲ್ಲೇದೇವರ ಪುರದ ಶಾಸನ ಕ್ರಿ.ಶ. ೧೨೭೯, ಸೇವುಣ ರಾಮಚಂದ್ರರಾಯನು ಹೊಯ್ಸಳ ವೀರಬಲ್ಲಾಳನು ಆಳುತ್ತಿದ್ದ ಮಾತಂಗ ಭೂಧರವನ್ನು (ಹಂಪೆಯ ಪರಿಸರ) ಜಯಿಸಿದ ಬಗ್ಗೆ ಉಲ್ಲೇಖಿಸುತ್ತದೆ. ಬೈಯಿಚಯ ನಾಯಕನೊಳಗೊಂಡು ಹಲವು ಪ್ರಮುಖರನ್ನು ಮುಂದಿಟ್ಟುಕೊಂಡು ಕೊಟ್ಟೂರು ಸೀಮೆಯನ್ನು ಆಳುತ್ತಿದ್ದನೆಂದಿದೆ. ನಾಡ ಸೇನಬೋವ ಬಯಿಚಣ್ಣ ಪೆರುಮಾಳೆ ದಂಡನಾಯಕನ ಹೆಸರಿನಲ್ಲಿ ಚಿತ್ರದುರ್ಗದಲ್ಲೊಂದು ಅಗ್ರಹಾರವನ್ನು ಕಟ್ಟಿಸುತ್ತಾನೆ. ಸೈನಿಕರಿಂದ ಪ್ರಜೆಗಳಿಗೆ ಉಂಟಾಗಿದ್ದ ತೊಂದರೆಯನ್ನು ಪರಿಹರಿಸುತ್ತಾನೆ. (EC. XI, Chitradurga- ೧೨)

೧೨೭೮ರ ಮೊಳಕಾಲ್ಮೂರು ಶಾಸನ ಬೈಚಯ ಮಂತ್ರಿಯನ್ನು ಕುಮ್ಮಟದ ಬೀಚನೆಂದು ಕರೆದಿದ್ದು ಹಾನೆಯ ಮತ್ತು ನಿಡುಗುಲ್ಲು ಕೋಟೆಗಳನ್ನು ಕಟ್ಟಿಸಿದನೆಂದು ಉಲ್ಲೇಖಿಸಿದೆ.

ಕ್ರಿ.ಶ. ೧೩ನೇ ಶತಮಾನದ ಮೆಟ್ಟಿರೆ ಗೊಲ್ಲರಗುಂಡು ಶಾಸನ (Issp ೭ Be, No. ೪೪೧, P. ೧೪೪) ಮಹಾಪ್ರಧಾನ ಬೈಚಯ ದಂಡನಾಯಕನ ಅಧಿಕಾರಿ ಸಿರಿಯಣ್ಣ ಬೈಚಯ ದಂಡನಾಯಕನು ಮಲ್ಲಿಕಾರ್ಜುನ ದೇವಾಲಯದ ಛತ್ರಕ್ಕೆ ದತ್ತಿಯನ್ನು ಬಿಟ್ಟಿರುವುದು. ಆತನ ಧರ್ಮ ಸಮನ್ವಯತೆಯನ್ನು ಕಾಣಬಹುದು.

ಹೊಯ್ಸಳ ಬಲ್ಲಾಳನು ಹೊಸಮಲೆಯ ದುರ್ಗದ ಮೇಲೆ ಯುದ್ಧಕ್ಕೆ ಬಂದಾಗ ಕಂಪಿಲನೊಡನೆ ಸಮಥರವಾಗಿ ಬಲ್ಲಾಳನನ್ನು ಎದುರಿಸುತ್ತಾನೆ. ಈ ಯುದ್ಧದಲ್ಲಿ ಬೈಯಿ (AQIE ೧೯೪೪-೪೪, No. B. ೭೫) ಬೋವ ಎಂಬಾತನು ಮಡಿಯುತ್ತಾನೆ.

ಬೈಚಯ ದಂಡನಾಯಕನು ಸಿಂಗೆನಾಯಕ ಕಂಪಿಲರೊಡನೆ ಇದ್ದು ಹೊಯ್ಸಳರೊಡನೆ ನಡೆದ ಯುದ್ಧವನ್ನು ಎದುರಿಸಿದುದನ್ನು ಕ್ರಿ.ಶ. ೧೩೨೫ರ ಶಾಸನ ಉಲ್ಲೇಖಿ (EC XII, ತಿಪಟೂರು ೨೪) ಸುತ್ತದೆ.

ಮದ್ದೂರಿನ ಅರುವನಹಳ್ಳಿಯ ಕ್ರಿ.ಶ. ೧೩೫೮ರ ಶಾಸನ, ಬಟ್ಟರ ಬಯಿಚಣನನ್ನು ಬಡವರಬಂದು, ಉಜಯರಾಯ ವಿಗ್ರಹ ವಿನೋದ ಪರರಾಷ್ಟ್ರ ಪಿತಾಮಹ, ಸುದ್ಗುಗುಣ ಕರಂಡ ದಯಾಂಬುರಿ ಸೋಮ ದೈರ್ಯ ಸುರಗಾತ್ರ, ಸವಿತ್ರೆಯ ಕರಚಾರಿತ್ರನು ವಮಲಬಂದು ಜಲದಿಂದ ಬದ್ರೊದಯಂ, ಬೂಪಸ್ಥಾನ ಚಿರಂಜಿತ ಪ್ರಮುಖನು ಶ್ರಿಂಗಾರಹಾರಂಬುದ ವಿಪ್ರಾಖ್ಯಾತೆ ಜಗತಿ ದಿಗಂತರ ಕೀರ್ತಿರಾಯ ಮೊಳವ್ವೆಯರ ಪುತ್ರನೆಂದು ಉತ್ಪ್ರೇಕ್ಷಿಸಿದೆ.

ಉಳಿದ ಕುಮ್ಮಟದ ನಾಯಕರ ಶಾಸನಗಳನ್ನು ತುಲನಾತ್ಮಕ ಅಧ್ಯಯನ ಮಾಡಿನೋಡಿದಲ್ಲಿ ಈ ರೀತಿಯ ಉತ್ಪ್ರೇಕ್ಷೆಗಳು ಉಳಿದ ಕುಮ್ಮಟದ ನಾಯಕರಿಗೂ ಇರಲಿಲ್ಲ. ಮದ್ದೂರು ೯೩, ಅರುವನಹಳ್ಳಿ ಶಾಸನ ಕ್ರಿ.ಶ. ೧೩೫೮, ಬುಕ್ಕರಾಯನ ಆಳ್ವಿಕೆ, ಬುಕ್ಕರಾರ ಹೆಸರಿನಲ್ಲಿ ಕಟ್ಟಿಸಿದ ಕೆರೆ, ಶ್ರೀ ವೀರ ಸಂಗಮೇಶ್ವರ ರಾಯಾಬಾಹತು (ಕಂಪಿಲರಾಯನ ಬಾಹೋತ್ತರನಿಯೋಗಧಿಪತಿ) ಬಟ್ಟರ ಬೈಚಪ್ಪ, ಬಾಚಪ್ಪ, ಇರುವ ಬಿರುವುದಗಳು.

ಪರಬಲ ಭೀಮ, ಪುಣ್ಯಜನಧಾಮ ದಯಾಂಬುದಿ ಸೋಮಸಂತತಂ, ವರಬುಜದಂಡ ಸದ್ಗುಣರೆರಂಡ, ವಿರಾಜಿತ ತುಂಡನುಂನತಂ ಯಾಚ ಜನಾಭಿವೃದ್ಧಿ ಸುರುಚಿರಗಾತ್ರ, ದೈರ್ಯ ಸುರಗಾತ್ರ, ಕುಶೇಶೆಯ ನೇತ್ರನೆಂದು ಮೀರಾ(ಯಿ) ದರಣಿ ಪೊಗಳ್ಳು, ಕೀರ್ತಿ ತನೂಬವ, ಬಾಚಿರಾಜ, ಉಬಯರಾಯ ವಿಗ್ರಹ ವಿನೋದ, ನೀತಿರಾಯಂಬಾಮೂಲ, ಯಾಚಕ ಜನಾಭಿವೃದ್ಧಿ, ಪರಾರಾಷ್ಟ್ರ ಪಿತಾಮಹ, ಕೀರ್ತಿದೇವತನೂಭವ ಬಾಚಪ್ಪ ಸುಖೀಭವ ಎಂದಿದೆ. ಬುಕ್ಕರಾಯನ ಹೆಸರಿನಲ್ಲಿ ಕೆರೆ, ಕೀರ್ತಿ ಸಮುದ್ರ, ಬಾಚಪ್ಪನ ಕೆರೆ, ಚಉಡಪ್ಪನ ಕಾಲುವೆ, ತಾಯಿಯ ಹೆಸರಿನಲ್ಲಿ ಮಾಳವ್ವೆಯಕೆರೆ ಹಾಗೂ ಬಾಚಪಟ್ಟಣವನ್ನು ಕಟ್ಟಿಸಿದನು. ಇದರಿಂದ ಬೈಚಯ ದಂಡನಾಯಕನು ಶತಾಯುಷಿ ಆಗಿರಬೇಕು. ಶಾಸನದಲ್ಲಿ ಉಲ್ಲೇಖಿಸುವಂತೆ "ಬಾಚಪ್ಪ ಸುಖೀಭವ" ಎಂಬ ಅರ್ಥವು ಇದಾಗಿದೆ.

ಕನಕದಂಡಿಗೆ, ಕನಕಚಾಮರ, ಕನಕ ಛತ್ರಂಗಳ ಧರಿಸಿ ನಿಜಕಳುತ್ರ ಸಹಿತವಾಗಿ ತುಂಗಭದ್ರಾ ತೀರದಲ್ಲಿ, ವಿರೂಪಾಕ್ಷದೇವರ ಸಾನ್ನಿಧ್ಯದಲು ಪರಮ ಪದವನೆಯಿದಿದರು ಅಥವಾ ಮುಕ್ತಿಯನ್ನು ಹೊಂದಿದರು. (ಮುಕ್ತಿವನಿತಾಸ್ತನಕಳಶಹಾರರಾದರು) ಬಾಚಪ್ಪನವರ ಹಿರಿಯಮಗ ಬುಕ್ಕಂಣನು ವಿರೂಪಾಕ್ಷದಲ್ಲಿ ಪ್ರಾಯಚಿತ್ತದ ವಿಧಿಯನ್ನು ಪೂರೈಸಿ ಆಸ್ತಿಯನ್ನು ವಾರಣಾಸಿಗೆ ಕಳುಹಿಸಿ ಶಿಲಾಶಾಸನವನ್ನು ಸುಪ್ರತಿಷ್ಠೆಯ ಮಾಡಿದವರು ಬುಕ್ಕಣನವರು ಎಂದಿದೆ. ಆನೆಗೊಂದಿಯ ಬಟ್ಟರ ಬಾಚಣಯನ ನಿಷಿದಿಯ ಶಾಸನ ಇದಕ್ಕೆ ಪೂರಕವಾಗಿದೆ. ಇದರಿಂದ ಮಹಾಮಂತ್ರಿ ಬಯಚಯ ದಂಡನಾಯಕನಿಗೂ ಮತ್ತು ಹಂಪೆ ಹಾಗೂ ವಿರೂಪಾಕ್ಷದೇವರ ಸಾನಿದ್ಯ ಸಾಮರಸ್ಯ ಮತ್ತು ಆತನಿಗೆ ಇದ್ದ ಈ ಪರಿಸರದ ಪ್ರೀತಿಯ ಪ್ರತೀಕವಾಗಿದೆ.

ನಿಷಿದಿ

ಬೈಚದಂಡನಾಥನ ನಿಷಿದಿಯನ್ನು ಉಲ್ಲೇಖಿಸುವ ಶಾಸನವು ಆನೆಗೊಂದಿಯಲ್ಲಿ ಗವಿರಂಗನಾಥ ದೇವಾಲಯ ಬಳಿಯಲ್ಲಿರುವ ಶಾಸನವು ಬಾಚಣಯನ ನಿಸಿದಿಯನ್ನು ತಿಳಿಸುವುದು. ಶ್ರೀ ಧರ್ಮಭೂಷಣ ಭಟ್ಟಾರಕರ ಪ್ರಿಯದ ಗುಡ್ಡುಗಳು ಬೂಚಂಣ್ಣನ ನಿಪಿದಿಗೆ ಮಂಗಳ ಮಹಾ ಎಂದಿರುವುದು. ಈ ಶಾಸನದ ಕಾಲ ಕ್ರಿ.ಶ. ೧೩೭೧, (ಕ.ವಿ.ವಿ.ಶಾ.ಸಂ. ೨, ಗಂಗಾವತಿ ೪೫) ಬಟ್ಟರ ಬಾಚಣಯನು ತುಂಗಭದ್ರಾ ತೀರದ ವಿರೂಪಾಕ್ಷದಲ್ಲಿ ಪರಮ ಪದವಿಯನ್ನೈದನೆಂದು ಅರುವನಹಳ್ಳಿಯ ಶಾಸನದಲ್ಲಿ ಉಲ್ಲೇಖಿಸಿರುವುದನ್ನು ಪುಷ್ಟೀಕರಿಸುತ್ತದೆ.

ಗವಿರಂಗನಾಥ ದೇವಾಲಯದ ಬಳಿಯಲ್ಲಿ ಇರುವ ನಿಸಿದಿಗಳಲ್ಲಿರುವ ಒಂದು ನಿಸಿದಿ ಶಾಸನ ಕ್ರಿ.ಶ. ೧೩೬೬ರ ಕಾಲದ್ದಾಗಿದ್ದು ಹಾನಿಯದ ಲಕ್ಕಿಸೆಟ್ಟಿಯರ ಮಕ್ಕಳು ಹಾನಿಯಾದ ಗೋಪಿ ಸೆಟ್ಟಿಯರ ನಿಸಿದಿಯಾಗಿದೆ. ಗವಿರಂಗನಾಥ ದೇವಲಾಯದ ಭಾಗವು ಜೈನ ಮುನಿಗಳ ಕೇಂದ್ರವಾಗಿರಬಹುದು. ಕಾರಣ ಹನ್ನೆರಡು ಜೈನ ಶಾಸನಗಳು ಗುಹೆಗಳು ಈ ಸ್ಥಳದಲ್ಲಿ ಇರುವುದು ಈ ಭಾಗದಲ್ಲಿ ಜೈನ ಕೇಂದ್ರವಿದ್ದ ಕುರುವುಗಳಾಗಿವೆ. (QJMS : VIII, No. ೩, VPR No. ೧೭೨, ೧೯೮-೮೭, IK. III No. II, ಕ.ವಿ.ವಿ.ಶಾ.ಸಂ. ೨. ಗಂಗಾವತಿ, ನಂ. ೪೯).

ಮುಮ್ಮಡಿಸಿಂಗೆಯ ನಾಯಕನ ಶಾಸನ ಹಾಗೂ ಬೈಚಯ ದಂಡನಾಯಕನ ಶಾಸನಗಳು ಒಂದೇ ಸ್ಥಳದಲ್ಲಿರುವುದು ವಿಶೇಷ. ಒಟ್ಟಾರೆ ಬೈಚಯ ದಂಡನಾಯಕನು ಕುಮ್ಮಟ ನಾಯಕರು ಹಾಗೂ ವಿಜಯನಗರ ಸ್ಥಾಪನೆ ಮತ್ತು ಹರಿಹರ ಬುಕ್ಕರಾಯರಿಗೆ ಬಹು ಪ್ರಿಯನಾದವನು ಆಗಿರುವನು. ದೆಹಲಿ ಸುಲ್ತಾನರ ಸೆರೆಯಳಾಗಿದ್ದ ಸಂಗಮಪುತ್ರರೈವರು ಹಾಗೂ ಬುದ್ಧಿವಂತ ಮಂತ್ರಿ ಜಯಿಚಣ್ಣನು ಸುಲ್ತಾನರರ ಸೆರೆಯನ್ನು ಬಿಡಿಸಿಕೊಂಡು

ಬಂದು ಪುನಃ ಹಾಳಾದ ತನ್ನ ರಾಜಧಾನಿಯಲ್ಲಿ ಪುನಃ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯನ್ನು ಅತ್ಯಂತ ಸಂದಿಗ್ಧ ಪರಿಸ್ಥಿತಿಯಲ್ಲಿ ಸ್ಥಾಪಿಸಿದ ಕೀರ್ತಿ ಈತನದು ಆದ್ದರಿಂದ ವಿಜಯನಗರದ ಅರಸರು ಈತನನ್ನು ಅತಿ ಪೂಜ್ಯನೆಂದು ವಿಜಯನಗರ ಪಟ್ಟಣಕ್ಕೆ ಸಂಬಂಧಿಸಿದಂತೆ ಬುಕ್ಕರಾಯನ ವಿಜಯನಗರ ಪಟ್ಟಣ ಹಾಗೂ ನಿಜಗಲಿ ಕಟಕರಾಯನ ರಾಜಧಾನಿ ಹೊಸಪಟ್ಟಣದಲ್ಲಿ ಎರಡು ಅಂಶಗಳನ್ನು ಉಲ್ಲೇಖಿಸುವ ಶಾಸನಗಳಿಂದ ಈ ಹಂಪೆಯ ವಿಜಯನಗರದಲ್ಲಿ ಬುಕ್ಕರಾಯನು ಆಳುತ್ತಿದ್ದನೆಂಬ ಅಂಶ ವ್ಯಕ್ತವಾಗುವುದು. ಬೈಚಯ ದಂಡನಾಯಕನು ಅತ್ಯಂತ ಪ್ರಮುಖನು ಹಾಗೂ ಸ್ಮರಣೀಯನೂ ಆಗಿರುವನು.

ಒಟ್ಟಾರೆ ಬಯಚೆಯ ದಂಡನಾಯಕನ್ನು ಕುಮ್ಮಟನಾಯಕರು ಹಾಗೂ ವಿಜಯನಗರ ಸಾಮ್ರಾಜ್ಯದ ಇತಿಹಾಸದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದನೆಂದು ತಿಳಿದುಬರುತ್ತದೆ. ಹಾಗೂ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಈತನ ಕೊಡುಗೆ ಮಹತ್ತರವಾದದ್ದು.



ಭೈರವ, ಸಿಂಗೆನಾಯಕನ ಶಾಸನ ಆನೆಗೊಂದಿ

ಕ್ರಿ.ಶ. ೧೩೮೧ರಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ಅರುವನಹಳ್ಳಿಯ ಶಾಸನ ಶಕ ವರ್ಷ ೧೩೦೪ರಲ್ಲಿ ದುರ್ಮತಿ ಸಂವತ್ಸರ ದ್ವಿತೀಯ ವ್ಯಯಿ ಶಾಸನ ಬಹುಳ ೫ ಸೋಮವಾರ ಕೀರ್ತಿರಾಜರ ಮಗ ಭಟ್ಟರ ಬಿಯಚಯನ್ನು ತುಂಗಭದ್ರಾ ತೀರದ ವಿರೂಪಾಕ್ಷದೇವರ ಪಾನ್ನಿದ್ಯಾದಲ್ಲಿ ಪರಮಪದವ ನೈದರರೆಂದಿದೆ. ಆತನ ಹಿರಿಯ ಮಗ ಬುಕ್ಕಣ್ಣನು ಪ್ರಾಯಶ್ಚಿತ್ತರ ವಿಧಿಯನ್ನು ಪೋರೈಸಿ ಆಸ್ತಿಯನ್ನು ವಾರಣಾಸಿಗೆ ಕಳುಹಿಸಿ ಶಾಸನವ ಸುಪ್ರತಿಷ್ಠೆಯನ್ನು ಮಾಡಿಸಿದುದನ್ನು ಉಲ್ಲೇಖಿಸುತ್ತಿದೆ. ಬಯಿಚಪ್ಪನವರ ಗುಣಗಳನ್ನು ಮತ್ತು ಬಿರುದಾವಳಿಗಳನ್ನು ಹೇಳಿ ರಾಜ್ಯದ ಲಾಂಚನ ಮಕರಧ್ವಜವೆಂದು ಹೆಸರಿಸಿದೆ.

ಒಟ್ಟಾರೆ ಕಂಪಿಲರಾಯನ ರಾಜಧಾನಿ ಹಾಗೂ ಮಕರಧ್ವಜ ಮತ್ತು ಬುಕ್ಕರಾಯ ಮತ್ತು ಆತನ ಪೂರ್ವಿಕರ ರಾಜಧಾನಿ ಹೊಸಪಟ್ಟಣ ಇಂದಿನ ಹಂಪೆಯ ಪರಿಸರವೆಂದು ಶಾಸನಗಳು ಉಲ್ಲೇಖಿಸಿವೆ. (VPR. ೧೯೮೩-೮೪, No.-೩)



ಮಹಾಮಂತ್ರಿ ಬೈಚೆಯ ದಂಡನಾಯಕನ ನಿಷಿಧಿ, ಆನೆಗೊಂದಿ

ಅಡಿಟಿಪ್ಪಣಿಗಳು

೧. Indian Atiquary, Vol. XLV, P. ೧೪೦, South Indian Polity, P. ೩೦೮, ಎಸ್.ವೈ.ಸೋಮಶೇಖರ, ವಿ.ಅ.೮, ಪು. ೮೦

೨. ನಂಜುಂಡ ರಾಮನಾಥ ಚರಿತ, ೩ನೇ ಸಂಧಿ, ಮಂತ್ರಿ ತಿಲಕಟ್ಟೈಚಪ್ಪ

೩. ಕ್ರಿ.ಶ. ೧೪೦೭ರ ದೇವರಾಯ, EI, XXIII, P. ೧೮-೧೮೫

೪. SII, xx No. ೨೯೪

೫. EC xi Davanagere No.೧೩

೬. EC xi Jagalur No. ೩೦

೭. EC xi Chitradurga No. ೧೨

೮. EC xi Molakalmuru No. ೨೦

೯. C.S.Patil ೧೯೯೭, Inscriptions of Bellary Dt. No. ೪೪೧

೧೦. ARIE ೧೯೪೩, ೪೪ B.No. ೭೫

೧೧. EC xii Tiptur No. ೨೪

೧೨. EC vii Maddur No. ೯೩೮೭, Aruvanahalli

೧೩. EC xi Chitradurga No. ೨,೩

೧೪. ಟಿ.ಎಂ.ಮಂಜುನಾಥಯ್ಯ ೨೦೦೧, ವಿಜಯನಗರ ಅಧ್ಯಯನ ೬, ಹಂಪೆಯ ಪರಿಸರದಲ್ಲಿ ನವಶೋಧಿತ ಶಾಸನಗಳು ನಂ.೧

೧೫. Vijayanagar Progress of Research ೧೯೯೧, No. ೧೭೨

೧೬. Quarterly journal of Mythic Society, viii No. ೩

೧೭. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨, ಗಂಗಾವತಿ ನಂ. ೪೯

೧೮. C.S.Patil, Inscriptions of Karnataka ೨, Gangavati No. ೪೯

೧೯. Vijayanagara Progress of Research ೧೯೮೩-೮೪, No. ೩

೨೦. Talwar H.T. ೧೯೭೭, Jaina Art and Architecture at Vijayanagara, Directorate of Archaeology and Museums, Mysore.

೨೧. ಮಂಜುನಾಥಯ್ಯ ಟಿ.ಎಂ. ೨೦೦೩, ಕುಮ್ಮಟನಾಯಕರು ಒಂದು ಸಾಂಸ್ಕೃತಿಕ ಅಧ್ಯಯನ, ಪು. ೨೨-೨೪, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ.

೨೨. B.K. ೧೯೨೮-೨೯, No. ೧೭೯, SII xv, vol-ii, No. ೧೬೭

❖ ❖

೩೨

ಹಂಪಿಯ ಶಾಸನಗಳಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳು

ಡಾ. ಕೆ.ಜಿ.ಭಟ್‌ಸೂರಿ

'ಆಡಳಿತ ವಿಭಾಗ' ಚಾರಿತ್ರಿಕ ಭೂಗೋಳದ ಭಾಗವಾಗಿ ಸಮಾಜದ ಏಳಿಗೆಗೆ ಕಾರಣವಾಗಿರುತ್ತದೆ. ಆಡಳಿತದ ಅನುಕೂಲಕ್ಕ ತಕ್ಕಂತೆ ದೇಶ ಅಥವಾ ರಾಜ್ಯವನ್ನು ಹಲವಾರು ವಿಭಾಗಗಳಾಗಿ ವಿಂಗಡಿಸಿ ಆಳುವ ಪದ್ಧತಿ ಇಂದಿಗೂ ಇದೆ. ಅಂದರೆ ರಾಜ್ಯ, ಜಿಲ್ಲೆ, ತಾಲ್ಲೂಕು, ಹೋಬಳಿ ಎಂದು ಇಂದು ವಿಂಗಡಿಸಿದ್ದರೆ. ಅಂದು ನಾಡು ದೇಶ, ಕಂಪಣ, ಮಂಡಲ ಎಂದು ವಿಭಾಗಿಸಲಾಗುತ್ತಿತ್ತು. ಇಂಥ ವಿಭಜನೆ ಆಡಳಿತಕ್ಕೆ ಅನುಕೂಲವಾಗಿರುತ್ತಿತ್ತು. ಇದಕ್ಕೆ ಶಾಸನಗಳು ಪೂರಕ ಮಾಹಿತಿಯನ್ನು ನೀಡುತ್ತವೆ. ಪ್ರಸ್ತುತ ಹಂಪಿ ಮತ್ತು ಇಲ್ಲಿನ ಸುತ್ತಮುತ್ತಲಿನ ಶಾಸನಗಳ ಆಧಾರದಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

'ಹಂಪೆ' ೧೨ನೇ ಶತಮಾನದ ಹೊತ್ತಿಗೆ ಬಲ್ಲಕುಂದೆ ನಾಡಿನ ಉಪವಿಭಾಗವಾದ ದೊರವಾದಿ ನಾಡಿನಲ್ಲಿತ್ತು. (ವಿ.ಶಾ.೯೭) ಆಡಳಿತದ ಅನುಕೂಲಕ್ಕೆ ತಕ್ಕಂತ ವಿಜಯನಗರ ಸಾಮ್ರಾಜ್ಯವನ್ನು ಅನೇಕ ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಹಂಪಿಯಲ್ಲಿ ದೊರೆತ ಶಾಸನಗಳನ್ನು ಆಧರಿಸಿದರೆ ಈ ಪ್ರದೇಶದಲ್ಲಿ ವೆಂಟೆ, ಅಳಿತ, ಸಂಸ್ಥಾನ, ಸೀಮೆ, ಮಾಗಣಿ, ಮಂಡಳ, ನಾಡು, ಸ್ಥಳ ರಾಜ್ಯ ಪದಗಳು ಕಾಣಸಿಗುತ್ತವೆ. ಈ ಪದಗಳು ಯಾವ ಯಾವ ಸ್ಥಳಗಳಿಗೆ ಹೆಸರಿಸಲ್ಪಟ್ಟಿವೆ ಎಂಬುದನ್ನು ತೋರಿಸುವುದೇ ಈ ಲೇಖನದ ಉದ್ದೇಶ.

ಅರಕೆರೆ ವೇಂತೆ 'ವೇಂತೆ ಎಂದರೆ ಆಡಳಿತ ವಿಭಾಗ ಎಂದರ್ಥ. (ಶ್ರೀನಿವಾಸ ರಿತ್ತಿ, ೨೦೦೦ ಪು. ೪)'. ಅರಕೆರೆ ವೇಂತೆ (ವಿ.ಶಾ. ೬೪) ಹಸ್ತಿನಾವತಿ ವಳಿತದಲ್ಲಿತ್ತೆಂದು ಶಾಸನದಲ್ಲಿ ದಾಖಲಿಸಲಾಗಿದೆ. ಅರೆಕೆರೆ ಗ್ರಾಮ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಅರೆಕೆರಾ ಗ್ರಾಮವಿರಬಹುದೆ? ಏಕೆಂದರೆ ಶಾಸನದಲ್ಲಿ ಉಲ್ಲೇಖಿತವಾಗಿರುವ ರಾಚೂರ ಸೀಮೆ ವಿಜಯನಗರ ಆಡಳಿತಕ್ಕೆ ಒಳಪಟ್ಟಿತ್ತು. ಹಸ್ತಿನಾವತಿಯ ವಳಿತ ಎಂದು ಶಾಸನದಲ್ಲಿ ದಾಖಲಿಸಿದೆ. ವಳಿತ ಎಂದರೆ ಹಲವಾರು ನಾಡು ಅಥವಾ ಸೀಮೆಗಳನ್ನು ಒಳಗೊಂಡ ಪ್ರದೇಶ. ಚಿತ್ರದುರ್ಗ ಜಿಲ್ಲೆಯ ಪೂರ್ವಭಾಗದ ಪ್ರದೇಶ ಮತ್ತು ಇದಕ್ಕೆ ಅಂಟಿಕೊಂಡಂತೆ ಅನಂತಪುರ ಜಿಲ್ಲೆಯ ಪಶ್ಚಿಮ ಭಾಗದ ಪ್ರದೇಶಗಳು ಮತ್ತು ಉತ್ತರಕ್ಕೆ ಬಳ್ಳಾರಿ ಜಿಲ್ಲೆಯ ಪ್ರದೇಶಗಳು ಈ ವಳಿತದಲ್ಲಿ ಅಂತರ್ಗತವಾಗಿತ್ತು. (ಕೃಷ್ಣಮೂರ್ತಿ ಪಿ.ವ್ಹಿ. ೧೯೯೯, ಪು. ೨೨೭) 'ಆದವಾನಿ' ವಳಿತ ಎಂಬ ಶಬ್ಧ ಈಗಿನ ಪ್ರಸ್ತುತ ಆದೋನಿ ಪ್ರದೇಶಕ್ಕೆ ಸಂಬಂಧಿಸಿದೆ. ಈಗಿನ ಪ್ರಸ್ತುತ ಆದೋನಿ ತಾಲ್ಲೂಕು ಧರ್ಮವರಂ ಜಿಲ್ಲೆಯ ಆಂಧ್ರಪ್ರದೇಶಕ್ಕೆ ಒಳಪಡುತ್ತದೆ. ವಿಠ್ಠಲ ದೇವಾಲಯದ ರಂಗಮಂಟಪದ ಪೂರ್ವದಿಕ್ಕಿನ ಗೋಡೆಯ ಮೇಲಿನ ಶಾಸನದಲ್ಲಿ ಆದವಾನಿ ವಳಿತ ಒಂದು ಆಡಳಿತ ವಿಭಾಗವಾಗಿತ್ತೆಂದು ದಾಖಲಿಸಿದೆ. (ವಿ.ಶಾ. ೧೭೪)

ಕವಿತಾಳ ಸೀಮೆ (ವಿ.ಶಾ. ೨೨೬) ಊರುಕೊಂಡ ಸೀಮೆ (ವಿ.ಶಾ. ೧೨೪) ಕುಯ್ಯಕುರಿಕೆ ಸೀಮೆ (ವಿ.ಶಾ.೪೩೫) ಗಂಗಾವತಿ ಸೀಮೆ (ವಿ.ಶಾ. ೫೫, ೧೮೦) ಗುಡ್ಡಂ ಗಂಗಾವತಿ ಸೀಮೆ (ವಿ.ಶಾ. ೧೮೦) ಗುತ್ತಿಸೀಮೆ (ವಿ.ಶಾ. ೧೮೪, ೨೨೬) ತೆಕ್ಕಲಕೋಟೆ ಸೀಮೆ (ವಿ.ಶಾ. ೧೯೨) ಎಂದು ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಸೀಮೆ ಎಂಬುದು ಸಂಸ್ಕೃತದಲ್ಲಿ ಸೀಮ ಎಂಬ ಪದದಿಂದ ಬಂದಿದೆ. ವಿಜಯನಗರ ಕಾಲದಲ್ಲಿ ಒಂದು ಆಡಳಿತ ವಿಭಾಗ ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ. ೧೪೦೦ರ ನಂತರದ ಶಾಸನಗಳಲ್ಲಿ ವಿಜಯನಗರ ಕಾಲದಲ್ಲಿ ಹೆಚ್ಚಿನ ಮಟ್ಟಿಗೆ ಹೊಸದಾಗಿ ಸೇರ್ಪಡೆಯಾದ ಹೊಸ ನಾಡುಗಳೆಲ್ಲವೂ ಸೀಮೆ ಎಂಬ ಪ್ರತ್ಯೆಯ ಪಡೆದಿದೆ. (ಕೃಷ್ಣಮೂರ್ತಿ ಪಿ.ವ್ಹಿ. ೧೯೯೯, ಪು. ೨೦೭) ಈ ಅರ್ಥದಲ್ಲಿ ಗ್ರಾಮಗಳನ್ನು ಸೇರಿಸಿ ಸೀಮೆ ಎಂಬ ಪದ ಪ್ರಯೋಗವಾಗಿದೆ.

ಕವತಾಳ ಸೀಮೆ ಇಂದಿನ ಕವತಾಳ ಗ್ರಾಮ ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿಗೆ ಒಳಪಡುತ್ತದೆ. ಆದವಾನಿ ವಳಿತದ ಉಪವಿಭಾಗ (ಪಾಟೀಲ ಸಿ.ಎಸ್. ೧೯೯೬ ಪು. XXI) ಉರುವಕೊಂಡೆ ಸೀಮೆ, ಕುಯ್ಯಕುರಿಕೆ ಸೀಮೆ ಈ ಸ್ಥಳಗಳ ಬಗ್ಗೆ ಅನಿಶ್ಚಿತೆ ಇದೆಯಾದರೂ 'ಸೀಮೆ' ಎಂಬ ಶಬ್ಧದ ಅರ್ಥದ ಹಿನ್ನೆಲೆಯಲ್ಲಿ ಇವು ಪ್ರಾದೇಶಿಕ ವಿಭಾಗವೆಂಬುದಂತೂ ಸ್ಪಷ್ಟ. 'ಗಂಗಾವತಿ ಸೀಮೆ', 'ಗುಡ್ಡಂ ಗಂಗಾವತಿ ಸೀಮೆ' ಪ್ರಸ್ತುತ ಗಂಗಾವತಿ ಪ್ರದೇಶವನ್ನು ಒಳಗೊಳ್ಳುತ್ತದೆ. ರಾಚೂರ ಸೀಮೆ (ವಿ.ಶಾ.೧೮೪) ಈಗಿನ ರಾಯಚೂರು ಪ್ರದೇಶಕ್ಕೆ ಅನ್ವಯಿಸುತ್ತದೆ. ರಾಯದುರ್ಗ

ಸೀಮೆ (ವಿ.ಶಾ. ೨೨೮) ಆಂಧ್ರಪ್ರದೇಶದ ಅನಂತಪುರಕ್ಕೆ ಒಳಪಡುತ್ತದೆ. 'ತೆಕ್ಕಲಕೋಟೆ ಸೀಮೆ' ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಇಂದಿನ ತೆಕ್ಕಲಕೋಟೆ ಗ್ರಾಮವಾಗಿದೆ. ಶಾಸನದಲ್ಲಿ ಬರುವ 'ನಾರಿ ಸೀಮೆ' (ವಿ.ಶಾ. ೩೩೮) ಪ್ರಸ್ತುತದ ಸಂಡೂರು ಪ್ರದೇಶವಾಗಿದೆ. ಇಲ್ಲಿನ ಪಾರ್ವತಿ ದೇವಾಲಯದ ಹೆಸರಿನಿಂದ ನಾರಿ ಸೀಮೆ ನಾರಿ ಹಳ್ಳ ಎಂಬರ್ಥದಲ್ಲಿ ಬಂದಿದೆ.

ಆನೆಗೊಂದಿ ಸಂಸ್ಥಾನ : ಆನೆಗೊಂದಿ ಸಂಸ್ಥಾನ ರಾಜಮನೆತನ ಈಗಿನ ವರಸುದಾರರ ವಶದಲ್ಲಿರುವ ಬೆಳ್ಳಿಪಟ ಶಾಸನದ (ವಿ.ಶಾ. ೫೦) ವೀರರಾಜ ರಾಜನು ಆನೆಗೊಂದಿ ಸಂಸ್ಥಾನದಲ್ಲಿರುವ ತಾಲ್ಲೂಕುಗಳನ್ನು ರಾಜಶ್ರೀ, ತಿರುಕೊಮಲ್, ಗೋಸ್ವಾಮಿಗೆ ದಾನಮಾಡಿದ್ದನ್ನು ತಿಳಿಸುತ್ತದೆ. ತಾಲ್ಲೂಕುಗಳು ಆನೆಗೊಂದಿ ಸಂಸ್ಥಾನಕ್ಕೆ ಒಳಪಟ್ಟಿದ್ದನ್ನು ಈ ಶಾಸನ ದಾಖಲಿಸುತ್ತದೆ. ಪ್ರಸ್ತುತ ಆನೆಗೊಂದಿ ಗಂಗಾವತಿ ತಾಲ್ಲೂಕಿಗೆ ಒಳಪಡುತ್ತದೆ.

ಬಲ್ಲಕುಂದೆ ನಾಡು-ದೊರವದಿ ನಾಡು-ಪಾಂಡ್ಯನಾಡು : ವಿರೂಪಾಕ್ಷ ದೇವಾಲಯದ ಉತ್ತರಕ್ಕೆ ದುರ್ಗಾಗುಡಿಯ ಮುಂದಿನ ಶಾಸನದಲ್ಲಿ (ಎಸ್.ಐ. ಸಂ. IV ನಂ. ೨೬೦) ಪಂಪಾತೀರ್ಥವು ಬಲ್ಲಕುಂದೆ ನಾಡಿಗೆ ಸೇರಿದ ದೊರವದಿ ನಾಡಿನಲ್ಲಿತ್ತೆಂದು ದಾಖಲಿಸಿದೆ. ಇಂದಿನ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಬಲಕುಂದೆ ಗ್ರಾಮ ಅಂದು ಬಲ್ಲಕುಂದೆ ನಾಡಗಿತ್ತು. ಮೂರು ನೂರು ಹಳ್ಳಿಗಳ ಆಡಳಿತ ವಿಭಾಗಗಳಾಗಿ ರೂಪುಗೊಂಡ 'ಬಲ್ಲಕುಂದೆ ನಾಡು' 'ಬಲ್ಲಕುಂದೆ ವಿಷಯ' ಎಂದು ಶಾಸನದಲ್ಲಿ ದಾಖಲಿಸಿದೆ. (ಚನ್ನಬಸವಯ್ಯ ಹಿರೇಮಠ ೧೯೯೯, ಪು. ೨೨೩) ಬಲ್ಲಕುಂದೆ ನಾಡು ೩೦೦ ಹಳ್ಳಿಗಳನ್ನೊಳಗೊಂಡ ಒಂದು ಆಡಳಿತ ವಿಭಾಗ. ಇಂದಿನ ಹೊಸಪೇಟೆ ಗ್ರಾಮವನ್ನು ಒಳಗೊಂಡು ತುಂಗಭದ್ರಾ ನದಿಯ ದಂಡೆಯ ಮೇಲಿರುವ ಹಂಪೆ, ಕಂಪ್ಲಿ, ಸಿರುಗುಪ್ಪ ಮೊದಲಾದವು ಬಲ್ಲಕುಂದೆ ನಾಡಿನಲ್ಲಿ ಸಮಾವೇಶಗೊಂಡಿದ್ದವು. ಬಲ್ಲಕುಂದೆ ನಾಡಿಗೆ ಸೇರಿದ ದೊರವಡಿ ನಾಡು ಬಲ್ಲಕುಂದೆ ನಾಡಿನ ದೊಡ್ಡ ಉಪವಿಭಾಗಗಳಲ್ಲಿ ಒಂದಾಗಿದೆ. ಸಂಡೂರು ತಾಲ್ಲೂಕಿನ ದರೋಜಿ ಗ್ರಾಮವೇ ಪ್ರಾಚೀನ ದೊರವಡಿಯ ಎಪ್ಪತ್ತರ ಮುಖ್ಯ ಪಟ್ಟಣವಾಗಿದೆ. (ಚನ್ನಬಸವಯ್ಯ ಹಿರೇಮಠ ೧೯೯೯, ಪು. ೧೯೯) ಈ ದೊರವಡಿ ನಾಡು ಸಂಡೂರು, ಬಳ್ಳಾರಿ ಮತ್ತು ಹೊಸಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳ ವ್ಯಾಪ್ತಿಯನ್ನು ಪಡೆದಿತ್ತು.

ಹಸ್ತಿನಾವತಿ ವಳಿತದ ಪಾಂಡ್ಯನಾಡು (ವಿ.ಶಾ.೮೧೬) ಎಂದು ಶಾಸನದಲ್ಲಿ ಉಲ್ಲೇಖಿತವಾಗಿದೆ. ಮಹಾಮಂಡ ಲೇಶ್ವರನಾದ ವೀರಪಾಂಡ್ಯ ದೇವನು ಕ್ರಿ.ಶ. ೧೧೫೧-೧೧೪೫ರ ವರೆವಿಗೆ, ಅನಂತರ ವಿಜಯಪಾಂಡೆ ದೇವನು ಕ್ರಿ.ಶ. ೨೦೦೦ರ ವರೆವಿಗೂ ಆಳಿದ ಕಾರಣದಿಂದ ಈ ಪ್ರದೇಶವನ್ನು ಪಾಂಡ್ಯ ದೇಶವೆಂದು ಕರೆದರು. (ಚನ್ನಬಸವಯ್ಯ ಹಿರೇಮಠ ೧೯೯೯ ಪು. ೨೨೧) ಈ ನಾಡಿನಲ್ಲಿ ಬೇಚೂರು ಸೀಮೆ, ಬಗೂರು ಸೀಮೆ ಉಚ್ಚಂಗಿ ವೇಂಟೆಗೆ ಸೇರಿದ ಹರಿಹರ ಕುಂದವಾಡ, ಬೀಳಿಚೇಡ

ಸೀಮೆಗಳು ಸಮಾವೇಶಗೊಂಡಿದ್ದವು. ಹಸ್ತಿನಾವತಿ ವಳಿತದ ಪಾಂಡ್ಯನಾಡು ಹಸ್ತಿನಾವತಿ ವಳಿತಕ್ಕೆ ಒಳಗೊಂಡ ಗ್ರಾಮಗಳನ್ನು ಹೆಸರಿಸಲಾಗಿದೆ. ಹಸ್ತಿನಾವತಿ ಪಾಂಡ್ಯ ನಾಡನ್ನು ಒಳಗೊಂಡಿತ್ತು ಎಂದರೆ ವಳಿತ ಹಲವು ನಾಡುಗಳನ್ನು ಒಳಗೊಂಡಿತ್ತೆಂದು ಹೇಳಬಹುದು.

ಮಾಗಣಿ ಎಂದರೆ ಇದೊಂದು ಆಡಳಿತ ವಿಭಾಗ. 'ಕಂಪಿಲೆ ಮಾಗಣಿ' (ವಿ.ಶಾ. ೨೨೭) 'ಕಳಸಾಪುರ ಮಾಗಣಿ', 'ತಿರುಮಲದೇವಿ ಪಟ್ಟಣ ಮಾಗಣಿ' (ವಿ.ಶಾ. ೨೨೮) 'ಹೊಸೂರ ಮಾಗಣಿ' (ವಿ.ಶಾ. ೩೨೭, ೧೨೫) ಹೀಗೆ ಆಡಳಿತ ವಿಭಾಗವಾಗಿ 'ಮಾಗಣಿ' ಹಲವಾರು ಶಾಸನದಳಲ್ಲಿ ಉಲ್ಲೇಖಿತವಾಗಿದೆ. ಕಂಪಿಲೆ ಮಾಗಣಿ ಎನ್ನುವುದು ಇಂದಿನ ಕಂಪ್ಲಿ ಪ್ರದೇಶಕ್ಕೆ ಅನ್ವಯಿಸುತ್ತದೆ. ಕಳಸಾಪುರ ಮಾಗಣಿ ಪ್ರಸ್ತುತ ಕಮಲಾಪುರದ ಮಾಲ್ಯವಂತ ದೇವಾಲಯದ ಮುಂದೆ ಬರುವ ಇಂದಿನ ಆಡಳಿತ ವಿಭಾಗ. ತಿರುಮಲದೇವಿ ಪಟ್ಟಣ ಮಾಗಣಿ ಎನ್ನುವುದು ಕಮಲಾಪುರದ ತಿರುಮಲದೇವಿಯ ಗುಡಿಯ ಸುತ್ತಲಿನ ಪ್ರದೇಶ. ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಹೊಸೂರ ಮಾಗಣಿ ಇಂದಿನ ಹೊಸಪೇಟೆ ತಾಲ್ಲೂಕಿನ ಹೊಸೂರು ಗ್ರಾಮವಾಗಿದೆ.

ಕಮಲಾಪುರದ ಜೈನ ಬಸದಿಯ ಬಿತ್ತಿಯಲ್ಲಿರುವ ಶಾಸನ ಭಾಗಶಃ ಒಡೆದಿದ್ದು. (ವಿ.ಶಾ.೨೩) ಹರಿಹರನ ಆಜ್ಞೆಯ ಮೇರೆಗೆ ಚೈತ್ಯಾಲಯವನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಆದರೆ ಚೈತ್ಯಾಲಯ ಕಟ್ಟಡದ ಗ್ರಾಮದ ಹೆಸರು ನಾಶವಾಗಿದೆ. ಈ ಊರು ಕರ್ನಾಟ ಮಂಡಳದ ಕುಂತಲ ವಿಷಯದಲ್ಲಿದೆ ಎಂದು ಶಾಸನ ದಾಖಲಿಸಿದೆ. ಮಂಡಳ ಎಂಬುದು ಒಂದು ಆಡಳಿತ ವಿಭಾಗ. ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿದ್ದ ಕರ್ನಾಟಕವನ್ನು ಸಾಮಾನ್ಯವಾಗಿ ಶಾಸನಗಳು ಕುಂತಲ ದೇಶವೆಂದೇ ಕರೆದಿವೆ. (ಕಲಬುರ್ಗಿ ಎಂ.ಎಂ. ೧೯೯೯ ಪು. VII) ಇಲ್ಲಿ ಕುಂತಲ ವಿಷಯವೆಂಬುದು ಕುಂತಲ ನಾಡು ಎಂದರ್ಥ. ಈ ಪ್ರದೇಶ ಕನ್ನಡ ಮಾತನಾಡುವ ಇಡೀ ಪ್ರದೇಶವನ್ನು ಸೂಚಿಸುತ್ತದೆ. ಬಿಲ್ಹಣನು ತನ್ನ ವಿಕ್ರಮಾಂಕದೇವ ಚರಿತದಲ್ಲಿ ೬ನೇ ವಿಕ್ರಮಾದಿತ್ಯನನ್ನು ಕುಂತಲೇಂದ್ರ ಎಂದು ವರ್ಣಿಸಿದ್ದಾನೆ. ಪ್ರಾಚೀನಾಂಧ್ರ ಚಾರಿತ್ರಿಕ ಭೂಗೋಳಮು ವಿಜಯನಗರವನ್ನು ಪ್ರಧಾನವಾಗಿ ಆಳಿದವರು ಕುಂತಲಾ ಧೀಶರೇ (ಕೃಷ್ಣಮೂರ್ತಿ ಪಿ.ವಿ. ೧೯೯೯, ಪು. ೨೧೬) ಒಟ್ಟಿನಲ್ಲಿ ಕರ್ನಾಟಕ ಇಂದಿಗಿಂತ ಹಿಂದೆ ವಿಶಾಲವಾದ ಪ್ರದೇಶವನ್ನು ಒಳಗೊಂಡಿತ್ತು.

ಶಾಸನದಲ್ಲಿ ಪಟ್ಟು ಎಂಬ ಶಬ್ದವೂ ಉಲ್ಲೇಖಿತವಾಗಿದೆ. ವಾಸ್ತು ಸಂಗ್ರಹಾಲಯದಲ್ಲಿನ ಈ ಶಾಸನದಲ್ಲಿ (ವಿ.ಶಾ. ೪೫೯) ನಾರಾಯಣಪುರ ಪಟ್ಟುವಿನಲ್ಲಿನ ಮಡಿಯೂರು ಗ್ರಾಮವನ್ನು ದಾನ ಮಾಡಿದ್ದನ್ನು ದಾಖಲಿಸುತ್ತದೆ. ಪಟ್ಟು ಎಂಬ ಪದ ಒಂದು ಸಣ್ಣ ಪ್ರಾದೇಶಿಕ ವಿಭಾಗ ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ. ಇದೇ ಶಾಸನದಲ್ಲಿ ಚಂದ್ರಗಿರಿ ರಾಜ್ಯದ ನಿನ್ನೆನಾಡೆಂದು ಉಲ್ಲೇಖಿತವಾಗಿದೆ. ಇಲ್ಲಿ 'ರಾಜ್ಯ' ಎಂಬ ಪದವನ್ನು ನಾರಾಯಣಪುರ ಗುಲ್ಬರ್ಗಾ ಜಿಲ್ಲೆಗೆ ಒಳಪಡುತ್ತದೆ. ಬರಕೂರು

ರಾಜ್ಯ, ತುಳು ರಾಜ್ಯ ಎಂಬ ಈ ಅರ್ಥದಲ್ಲಿ ಬಳಸಲಾಗಿದೆ. ಪ್ರಸ್ತುತ ಚಂದ್ರಗಿರಿ ಆಂಧ್ರಪ್ರದೇಶಕ್ಕೆ ಒಳಪಡುತ್ತದೆ. ಸ್ಥಳ ಎಂಬ ಆಡಳಿತ ವಿಭಾಗ ಶಾಸನದಲ್ಲಿ ಉಲ್ಲೇಖಿತಗೊಂಡಿದೆ. ಸ್ಥಳ ಎಂಬ ಆಡಳಿತ ವಿಭಾಗ ಶಾಸನದಲ್ಲಿ ಉಲ್ಲೇಖಿತವಾಗಿದ್ದು ಉದಾ. ಕುಕ್ಕುಟ್ಟಲ ಸ್ಥಳ (ವಿ.ಶಾ.೪೩೫). ಆದರೆ ಈ ಸ್ಥಳದ ಬಗ್ಗೆ ಅನಿಶ್ಚಿತೆ ಇದೆ. ಇದೇ ರೀತಿ ಹೊನ್ನೆನಾಡು ಎಂಬುದಕ್ಕೆ ಅನಿಶ್ಚಿತೆ ತೋರಿದರೂ ನಾಡು, ಸ್ಥಳ ಇವು ಆಡಳಿತ ವಿಭಾಗಗಳು ಎಂಬಂತು ಸ್ಪಷ್ಟವಾಗಿದೆ.

ಒಟ್ಟಾರೆ ಹಂಪಿ ಶಾಸನಗಳ ಆಧಾರದಲ್ಲಿ ಹೇಳುವುದಾದಲ್ಲಿ ಹಂಪಿ ಹಾಗೂ ಈ ಸುತ್ತಮುತ್ತಲಿನ ಪ್ರದೇಶಗಳ ಹೊರತಾಗಿಯೂ ಆಡಳಿತ ವಿಭಾಗಗಳು ಇದರ ವ್ಯಾಪ್ತಿಯನ್ನು ಕರ್ನಾಟಕ ಮತ್ತು ಆಂಧ್ರಪ್ರದೇಶಕ್ಕೆ ಪಸರಿಸಿವೆ ಎಂಬುದನ್ನು ತಿಳಿಸುತ್ತವೆ. ಇಲ್ಲಿನ ಆಡಳಿತ ವಿಭಾಗಗಳು ವೈವಿಧ್ಯಮಯವಾಗಿದ್ದಂತೆ ತೋರುತ್ತದೆ. ನಾಡು ಎಂಬ ಪದದ ಜೊತೆ ಸೀಮೆ ಎಂಬ ಪದವು ಹೆಚ್ಚು ಬೆಳಕಿಗೆ ಬಂದಿತ್ತು. ಹಲವು ಮಿತಿಗಳ ನಡುವೆ ನಡೆಸಿದ ಅಧ್ಯಯನ ಇದಾಗಿರುವುದರಿಂದ ಪ್ರಾದೇಶಿಕ ವಿಭಾಗವನ್ನು ಗುರುತಿಸಲು ಕೆಲವಡೆ ಅನಿಶ್ಚಿತತೆ ಅನಿವಾರ್ಯವಾಗಿದೆ.

ಆಧಾರ ಗ್ರಂಥಗಳು

೧. ಕಲಬುರ್ಗಿ ಎಂ.ಎಂ.(ಸಂ.), ೧೯೯೯, 'ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು', ಕನ್ನಡವಿಶ್ವವಿದ್ಯಾಲಯ, ಹಂಪಿ

೨. ಕೃಷ್ಣಮೂರ್ತಿ ಪಿ.ವಿ, ೧೯೯೯, 'ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು', (ಸಂ. ಎಂ.ಎಂ.ಕಲುಬರ್ಗಿ) ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಚನ್ನಬಸವಯ್ಯ ಹಿರೇಮಠ, ೧೯೯೯, 'ಬಲ್ಲಕುಂದೆ ನಾಡು' (ಸಂ. ಎಂ.ಎಂ.ಕಲಬುರ್ಗಿ) ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಪಾಟೀಲ ಸಿ.ಎಸ್, ೧೯೯೬, 'ವಿಜಯನಗರದ ಹಂಪೆಯ ಶಾಸನಗಳು' (ವಿ.ಶಾ.) ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೫. ಶ್ರೀನಿವಾಸ ರಿತ್ತಿ., (ಸಂ.) ೨೦೦೦, 'ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ', ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೬. ಸೌತ್ ಇಂಡಿಯನ್ ಇನ್‌ಕ್ರಿಪ್ಷನ್ಸ್ ಸಂಪುಟ IV

❖ ❖

೩೩

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಕಮಲಾಪುರ ವಸ್ತುಸಂಗ್ರಹಾಲಯದ ವೀರ ಮತ್ತು ಮಹಾಸತಿಯರ ಶಿಲ್ಪಕಲೆ

ಡಾ. ರು.ಮ.ಷಡಕ್ಷರಯ್ಯ

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಅನೇಕ ಧಾರ್ಮಿಕ ಮತ್ತು ಲೌಕಿಕ ಶಿಲ್ಪಗಳು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರದ ಕೇಂದ್ರಸರ್ಕಾರದ ಪುರಾತತ್ವ ವಿಭಾಗದ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿತವಾಗಿವೆ. ಅವುಗಳಲ್ಲಿ ಲೌಕಿಕ ಗುಂಪಿಗೆ ಸೇರಿದ ವೀರ ಮತ್ತು ಮಹಾಸತಿ ಶಿಲ್ಪಗಳ ಕಲೆಯಲ್ಲಿ ವೈವಿಧ್ಯತೆಯಿದೆ. ಅದೇ ರೀತಿ ಸಾಂಸ್ಕೃತಿಕ ಅಂಶಗಳಲ್ಲೂ ಕಾಣಬಹುದು. ಈಗಾಗಲೇ ಅನೇಕ ವಿದ್ವಾಂಸರು ಇವುಗಳಲ್ಲಿ ಅನೇಕ ಶಿಲ್ಪಗಳನ್ನು ತಮ್ಮ ಅಧ್ಯಯನದಲ್ಲಿ ಬಳಸಿಕೊಂಡಿದ್ದಾರೆ. ಅಂತವರ ಕೃತಿ ಮತ್ತು ಲೇಖನಗಳಲ್ಲಿ ಆರ್.ಶೇಷಾಶಾಸ್ತ್ರಿ ಅವರ ಕರ್ನಾಟಕದ ವೀರಗಲ್ಲುಗಳು, ಬಿ.ಎಸ್.ಶೇಠೆ ಅವರ ಕರ್ನಾಟಕದಲ್ಲಿ ಸತಿಪದ್ಧತಿ, ಬಸವರಾಜ ಕಲ್ಗುಡಿ ಅವರ ಮಹಾಸತಿ ಆಚರಣೆ ಮುಂತಾದವು ಮುಖ್ಯವೆನಿಸಿವೆ. ಅವುಗಳಲ್ಲಿ ಈ ವಸ್ತುಸಂಗ್ರಹಾಲಯದಲ್ಲಿರುವ ಸಮಗ್ರ ವೀರ ಮತ್ತು ಮಹಾಸತಿ ಶಿಲ್ಪಗಳ ಕಲಾಚರಿತ್ರೆಯ ಅಧ್ಯಯನ ಒಂದೆಡೆ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಈ ಕೊರತೆಯನ್ನು ತಕ್ಕಮಟ್ಟಿಗೆ ತುಂಬುವ ಪ್ರಯತ್ನ ಈ ಪ್ರಸ್ತುತ ಪ್ರಬಂಧದಲ್ಲಿ ಕಾಣಬಹುದು.

ವೀರ ಮತ್ತು ಮಹಾಸತಿಕಲ್ಲುಗಳು ಅಲ್ಲಿಯ ವಸ್ತುಸಂಗ್ರಹಾಲಯದಲ್ಲಿ ಎರಡು ಕಡೆಗಳಲ್ಲಿ ಪ್ರದರ್ಶಿಸಲಾಗಿದೆ. ಕೆಲವು ಅದರ ಒಳಗಡೆಯಿದ್ದರೆ ಕೆಲವು ಅದರ ಹೊರಗಡೆ ಇವೆ. ಅಲ್ಲಿಯ ವೀರಗಲ್ಲುಗಳನ್ನು ವಿವಿಧ ರೀತಿಯಲ್ಲಿ ವರ್ಗೀಕರಿಸಲಾಗಿದೆ. ಒಂದು

ವೀರಗಲ್ಲುಗಳು. ಅವು ಬಿಲ್ಲು, ಕತ್ತಿ ಹಿಡಿದು ನಿಂತ ವೀರರ ಶಿಲ್ಪ, ಕುದುರೆ ಸವಾರರ ಶಿಲ್ಪ, ಸಾಲಾಗಿ ನಿಂತ ವೀರರ ಶಿಲ್ಪ, ಬಾಕು-ಕಪಾಲ ಹಿಡಿದು ನಿಂತ ವೀರರ ಶಿಲ್ಪ ಮತ್ತು ಎರಡು ಅಥವಾ ಮೂರು ಫಲಕವುಳ್ಳ ವೀರಗಲ್ಲುಗಳಾಗಿವೆ. ಎರಡನೆಯದು ಮಹಾಸತಿ ಶಿಲ್ಪಗಳು. ಅವು ಸತಿಗೈಸ್ತಂಭವುಳ್ಳ ದಂಪತಿ ಶಿಲ್ಪಗಳು, ಮಾನವರೂಪದ ಮಹಾಸತಿ ಕಲ್ಲುಗಳು, ದಂಪತಿಯರುಳ್ಳ ಮಹಾಸತಿ ಕಲ್ಲುಗಳು (ಎರಡು/ಮೂರು/ನಾಲ್ಕು) ಕುದುರೆಸವಾರ - ಸತಿಶಿಲ್ಪಗಳು ಮತ್ತು ವೀರಮಾಸ್ತಿ ಶಿಲ್ಪಗಳಿವೆ.

ಕತ್ತಿಯನ್ನು ಎಡಕೈ ಮುಂಚಾಚಿ ಹಿಡಿದುನಿಂತ ವೀರ

ಈ ಶಿಲ್ಪದಲ್ಲಿ ಕತ್ತಿಯನ್ನು ಎಡಕೈ ಮುಂದೆ ಚಾಚಿನಿಂತ ವೀರನು ತನ್ನ ಎಡಗೈಯನ್ನು ಎತ್ತಿ ಬೆರಳನ್ನು ಮುಂದಕ್ಕೆ ತೋರಿಸುತ್ತ ನಿಂತಿದ್ದಾನೆ. ತಲೆಗೆ ವಸ್ತ್ರವನ್ನು ಕಟ್ಟಿದ್ದು ಆತನ ತುರುಬನ್ನು ತಲೆಯ ಎಡಕ್ಕೆ ತೋರಿಸಲಾಗಿದೆ. ವಸ್ತ್ರಾಭರಣಗಳಲ್ಲಿ ಕಿವಿಯ ಓಲೆಗಳು ವಿಶೇಷ ಗಮನವನ್ನು ಸೆಳೆಯುತ್ತವೆ. ಇನ್ನೊಂದು ಈ ಮಾದರಿಯ ಶಿಲ್ಪದಲ್ಲಿ ಮಡಚಿದ ಬಲಗೈಯಲ್ಲಿಡಿದ ಕತ್ತಿಯನ್ನು ಎಡಗಡೆ ಮುಖಮಾಡಿ ಹಿಡಿದು ನಿಂತಿದ್ದಾನೆ. ಎಡಗೈಯನ್ನು ಮಡಚಿ ಮೇಲೆತ್ತಿ ಹಿಡಿದಿದ್ದಾನೆ. ಈ ಕೈಯ ಮಧ್ಯದ ಬೆರಳನ್ನು ಮೇಲಕ್ಕೆತ್ತಿ ಹಿಡಿದಿರುವನು. ತನ್ನ ತುರುಬನ್ನು ಇಲ್ಲಿಯೂ ಎಡಕ್ಕೆ ಕಟ್ಟಿದ್ದಾನೆ. ಸೊಂಟಕ್ಕೆ ಡ್ಯಾಗರ್‌ನ್ನು ಕಟ್ಟಿದ್ದಾನೆ. ವಿಶೇಷವೆಂದರೆ ಉದ್ದವಾದ ಮೀಸೆಯನ್ನು ತೋರಿಸಲಾಗಿದೆ. ತಲೆಯ ಬಲಕ್ಕೆ ಶಿವಲಿಂಗವನ್ನು ಮತ್ತು ಮೇಲ್ಗಡೆ ಸೂರ್ಯ - ಚಂದ್ರರ ಚಿತ್ರಗಳಿವೆ.

ಕತ್ತಿಯನ್ನು ಎಡಬದಿಗೆ ಚಾಚಿ ಹಿಡಿದುನಿಂತ ವೀರರ ಶಿಲ್ಪ

ಇಬ್ಬರು ವೀರರು ಕತ್ತಿಯನ್ನು ಮೇಲಕ್ಕೆತ್ತಿ ಹಿಡಿದು ನಿಂತಿದ್ದಾರೆ. ಒಂದೇ ಸಾಲಿನಲ್ಲಿ ವಿಶೇಷವೆಂದರೆ ಬಲಗಡೆ ನಿಂತ ವೀರನ ಎಡಗೈಯಲ್ಲಿ ಪದ್ಮವಿದ್ದ ಹಾಗಿದೆ. ಆತನ ತಲೆಯ ಬಲಕ್ಕೆ ಕತ್ತಿಯ ಹತ್ತಿ ಮತ್ತು ಇನ್ನೊಬ್ಬ ವೀರನ ತಲೆಯ ಮೇಲ್ಭಾಗದಲ್ಲಿ ಎಡಕ್ಕೆ ಕ್ರಮವಾಗಿ ಸೂರ್ಯ ಮತ್ತು ಚಂದ್ರರನ್ನು ತೋರಿಸಲಾಗಿದೆ. ಆಯತಾಕಾರದ ಶಿಷ್ಟ್ ಶಿಲೆಯ ಈ ಶಿಲ್ಪ ಫಲಕ ಇದಾಗಿದೆ. ಈ ರೀತಿ ಅಲ್ಲಿ ಇನ್ನೆರಡು ಶಿಲ್ಪಗಳಿವೆ. ಅದರಲ್ಲಿ ಕೇವಲ ವೀರರಿಬ್ಬರು ಕತ್ತಿ ಹಿಡಿದು ನಿಂತಿದ್ದಾರೆ. ಅವು ಗ್ರಾನೈಟ್ ಶಿಲ್ಪವಾಗಿವೆ.

ಕತ್ತಿಯನ್ನು ಮೇಲಕ್ಕೆತ್ತಿ ಹಿಡಿದು ನಿಂತ ವೀರಶಿಲ್ಪ

ಈ ವೀರಗಲ್ಲು ಆಯತಾಕಾರದಲ್ಲಿದ್ದು ಅದರಲ್ಲಿ ವೀರನು ಬಲಗೈಯಲ್ಲಿ ಕತ್ತಿಯನ್ನು ಮೇಲಕ್ಕೆತ್ತಿ ಹಿಡಿದು ನಿಂತಿದ್ದಾನೆ. ಎಡಗೈಯಲ್ಲಿ ಕನ್ನಡಿ (?)ಯನ್ನು ಮೇಲಕ್ಕೆತ್ತಿ ಹಿಡಿದಿದ್ದಾನೆ. ಆತನು ಉದ್ದವಾದ ಮುಂಚಾಚಿದ ಪೀಠ ಫಲಕದ ಮೇಲೆ ನಿಂತಿರುವುದನ್ನು ಚಿತ್ರಿಸಲಾಗಿದೆ. ಇಲ್ಲಿಯು ವೀರನು ತನ್ನ ತುರುಬನ್ನು ತಲೆಯ ಬಲಗಡೆಗೆ ಕಟ್ಟಿರುವನು. ಅಲ್ಲಿಯ ಇನ್ನೊಂದು ಶಿಲ್ಪದಲ್ಲಿ ವೀರನು ಬಲಗೈಯಲ್ಲಿ ಕತ್ತಿಯನ್ನು ಎತ್ತಿ ಹಿಡಿದಿದ್ದು ಎಡಗೈಯಲ್ಲಿ ಚಾಕುವನ್ನು

ಹಿಡಿದು ಕೆಳಗಡೆ ಇಳಿಬಿಟ್ಟಿದ್ದಾನೆ. ತುರುಬನ್ನು ತಲೆಯ ಬಲಕ್ಕೆ ಧರಿಸಿದ್ದು ತಲೆಯ ಎಡತುದಿಯ ಮೇಲೆ ಕಿರುಬಾಣ ನೆಟ್ಟಂತೆ ಕಾಣುವುದು. ವಸ್ತ್ರ ಅಲಂಕರಣದ ರೇಖೆಗಳು ಕಾಣುತ್ತವೆ. ಈ ಶಿಲ್ಪ ಶಿಷ್ಟ್ ಶಿಲೆಯದ್ದಾಗಿದೆ.

ಬಿಲ್ಲನ್ನು ಎಡಕ್ಕೆ ಹಿಡಿದು ನಿಂತ ವೀರನ ಜೊತೆ ಸತಿ

ಈ ಶಿಲ್ಪ (ಶಿಷ್ಟ್) ದಲ್ಲಿ ದಂಪತಿಗಳಿದ್ದು ಎಡಕ್ಕೆ ಸತಿಯು ನಿಂಬೆಹಣ್ಣು ಮತ್ತು ವಸ್ತು (ಅಸ್ಪಷ್ಟ) ವನ್ನು ಹಿಡಿದು ನಿಂತಿದ್ದಾಳೆ. ಆಕೆಯ ಎಡಗಡೆ ನಿಂತ ತನ್ನ ಪತಿಯು ಬಿಲ್ಲನ್ನು ಎಡ ಪಾರ್ಶ್ವಕ್ಕೆ ಚಾಚಿ ಹಿಡಿದು ನಿಂತಿದ್ದಾನೆ. ಎತ್ತಿದ ತನ್ನ ಬಲಗೈಯಲ್ಲಿ ಬಾಣವಿದೆ. ಇಬ್ಬರೂ ತಮ್ಮ ತುರುಬನ್ನು ತಲೆಯ ಬಲಕ್ಕೆ ಕಟ್ಟಿದ್ದಾರೆ. ಅವರ ತಲೆಯ ಮೇಲ್ಭಾಗದಲ್ಲಿ ಅರ್ಧವೃತ್ತಾಕಾರದ ತೋರಣಪಟ್ಟಿಕೆಯಲ್ಲಿ ಬಳ್ಳಿಗಳ ಅಲಂಕರಣವಿದೆ. ಮಧ್ಯ ಸಿಂಹಮುಖ ಅದರ ಕೆಳಗಡೆ ಸೂರ್ಯ, ಚಂದ್ರ ಚಿತ್ರಗಳಿವೆ. (ಕ್ರಿ.ಶ. ೧೭ನೇ ಶತಮಾನ)

ಬಿಲ್ಲನ್ನು ಎಡಕ್ಕೆ ಚಾಚಿ ಹಿಡಿದುನಿಂತ ವೀರರ ಶಿಲ್ಪ

ಬಿಲ್ಲನ್ನು ಎಡಗೈಯಲ್ಲಿ ಹಿಡಿದು ಅದನ್ನು ಮುಂದಕ್ಕೆ ವೀರಾವೇಷದಿಂದ ಚಾಚಿಹಿಡಿದು ನೆಲದ ಮೇಲೆ ಬಿದ್ದ ವೈರಿಗಳ ಮೇಲೆ ಈ ವೀರ ನಡೆಯುತ್ತಿರುವುದನ್ನು ಚಿತ್ರಿಸಲಾಗಿದೆ. ಆತನು ತನ್ನ ಬಲಗೈಯನ್ನು ಬಗ್ಗಿಸಿ ಸೊಂಟದಲ್ಲಿ ಕಟ್ಟಿದ ಡ್ಯಾಗರನ್ನು ಹಿಡಿದಿರುವನು. ಅವನ ದೇಹ ಮತ್ತು ತಲೆಯ ಸುತ್ತ ಬಾಣಗಳು ನೆಟ್ಟಿರುವುದು ವಿಶೇಷವೆನ್ನಬಹುದು. ವಸ್ತ್ರದಿಂದ ತಲೆಯ ಕೂದಲನ್ನು ಕಟ್ಟಿದ್ದು ಅದರ ತುರುಬನ್ನು ತಲೆಯ ಬಲಗಡೆ ಕಟ್ಟಲಾಗಿದೆ.

ವಸ್ತುಸಂಗ್ರಹಾಲಯದ ಈ ಮಾದರಿಯ ಇನ್ನೊಂದು ಶಿಲ್ಪವು ಗಮನಾರ್ಹವಾದದ್ದು. ಅದರಲ್ಲಿ ವೀರನು ತ್ರಿಭಂಗಿಯಲ್ಲಿ ಎದುರು ಮುಖಮಾಡಿ ನಿಂತಿರುವನು. ಎಡಗೈಯಲ್ಲಿಡಿದ ಬಿಲ್ಲಿನ ದಾರವನ್ನು ತನ್ನ ಶಿರದ ಬಲಭಾಗದವರೆಗೆ ಜಗ್ಗಿ ಹಿಡಿದಿದ್ದಾನೆ. ಎಡಗೈಯಿಂದ ಈ ಬಿಲ್ಲನ್ನು ಎಡಕ್ಕೆ ವೀರಾವೇಶದಿಂದ ಮುಂದೆ ಚಾಚಿ ಹಿಡಿದಿದ್ದಾನೆ. ಅವನ ದೇಹ, ಕಾಲು ಮತ್ತು ತಲೆಯ ಸುತ್ತ ಬಾಣಗಳು ನಿಟ್ಟಿವೆ. ತನ್ನ ತುರುಬು ತಲೆಯ ಎಡಕ್ಕಿದೆ. ಸರಳ ಕಡಗ, ಗೆಜ್ಜೆಕಡಗ, ಬಳೆ, ಪಟ್ಟಿ, ಕುಂಡಲ, ಸರ, ವಸ್ತ್ರ ಇತ್ಯಾದಿ ಆಭರಣಗಳನ್ನು ಧರಿಸಿರುವನು.

ಅಲ್ಲಿಯ ಈ ಮಾದರಿಯ ಒಂದು ಶಿಲ್ಪದಲ್ಲಿ ಖಡ್ಗಾಸನದಲ್ಲಿ ಬಲಗಾಲನ್ನು ಮಡಚಿ ನೆಲಕ್ಕೆ ಮಂಡಿಯನ್ನಿಟ್ಟು ಎಡಗಾಲನ್ನು ಮುಂದಿಟ್ಟು ನಿಂತಿದ್ದಾನೆ. ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಎಡಕ್ಕೆ ಚಾಚಿದ್ದಾನೆ. ಬಲ ಕೈಯನ್ನು ಒಳಭಾಗಕ್ಕೆ ಮಡಚಿರುವನು.

ಕುದುರೆ ಸವಾರರ ಶಿಲ್ಪ

ಈ ಶಿಲ್ಪದಲ್ಲಿ ವೀರನೊಬ್ಬ ಕುದುರೆ ಸವಾರಿ ಮಾಡುತ್ತಿರುವನು. ಎಡಗೈಯಲ್ಲಿ

ಕುದುರೆಯ ಮುಗುದಾಣವನ್ನು ಹಿಡಿದಿದ್ದಾನೆ. ಬಲಗೈಯಲ್ಲಿ ಉದ್ದವಾದ ಈಟಿಯನ್ನು ತನ್ನ ಮುಂದಿನ ಬಲಗಡೆ ತೋರಿಸುತ್ತ ಹೊರಟಿದ್ದಾನೆ. ಓಡುವ ಕುದುರೆಯ ಮುಂದಿನ ಕಾಲುಗಳು ಮೇಲೆ ಎದ್ದಿವೆ. ಕುದುರೆಯ ಮುಂದೆ ಒಬ್ಬ ಸೇವಕ ನಿಂತಿದ್ದಾನೆ. ಆತನ ವೇಷಭೂಷಣ ಧರಿಸಿದ್ದು ತುರುಬು ತನ್ನ ತಲೆಯ ಎಡಕ್ಕಿದೆ.

ಅಲ್ಲಿಯ ಈ ಮಾದರಿಯ ಇನ್ನೊಂದು ಶಿಲ್ಪದಲ್ಲಿ ಬಲಗೈಯಿಂದ ಮೇಲ್ಭಾಗಕ್ಕೆ ಎತ್ತಿಹಿಡಿದ ಈಟಿಯುಳ್ಳ ಕುದುರೆ ಸವಾರನಿಗೆ ಸೇವಕನೊಬ್ಬ ಎತ್ತರದ ಛತ್ರಿಯನ್ನು ಹಿಡಿದು ಇನ್ನೊಬ್ಬನ ಸಂಗಡ ಕುದುರೆಯ ಬಾಲದ ಬದಿಗೆ ನಿಂತಿದ್ದಾನೆ. ಈತನೂ ರಾಜಪರಿವಾರದವನೆನ್ನಬಹುದು. ಅದರ ಮೇಲ್ಭಾಗ ಅರ್ಧವೃತ್ತಾಕಾರದಲ್ಲಿದೆ.

ಒಂದು ಶಿಲ್ಪದಲ್ಲಿ ಕೇವಲ ಕುದುರೆಸವಾರನ ಚಿತ್ರವಿದೆ. ಸವಾರ ಈಟಿಯನ್ನು ಮುಂದೆ ಹಿಡಿದು ಕುದುರೆಯನ್ನು ಓಡಿಸಿಕೊಂಡು ಹೋಗುವ ಭಂಗಿಯಲ್ಲಿದ್ದಾನೆ. ಆತನ ಕೇಶದ ಉದ್ದ ಜಡೆ ಕೆಳಗಡೆ ಇಳಿಬಿದ್ದಿದೆ.

ಇನ್ನೊಂದು ಶಿಲ್ಪದಲ್ಲಿ ಕೆಲವು ಕುತೂಹಲ ವಿಷಯಗಳಿವೆ. ಎರಡೂ ಕೈಗಳನ್ನು ಮೇಲಕ್ಕೆತ್ತಿ ಹಿಡಿದ ಕುದುರೆ ಸವಾರನು ಒಂದು ಕೈಯಲ್ಲಿ ಬಾಣವನ್ನು ಮತ್ತೊಂದು ಕೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ಕುದುರೆ ಓಡುವ ಭಂಗಿಯಲ್ಲಿದೆ. ಆತನ ಬಲಗೈ ಪಕ್ಕದಲ್ಲಿ ಸತಿ ಅವನನ್ನು ನೋಡುತ್ತಾ ತನ್ನ ಬಲಗೈಯನ್ನು ಎತ್ತಿಹಿಡಿದು ನಿಂತಿದ್ದಾಳೆ. ಈ ಶಿಲ್ಪದ ಮೇಲಿನ ಭಾಗದಲ್ಲಿ ಚಂದ್ರ ಶಿವಲಿಂಗ ಮತ್ತು ಸೂರ್ಯರ ಚಿತ್ರಗಳಿವೆ.

ಸಾಲಾಗಿ ನಿಂತ ವೀರರ ಶಿಲ್ಪಗಳು

ಒಂದು ಶಿಲ್ಪದಲ್ಲಿ ಎಡಗೈಯನ್ನು ಎತ್ತಿ ಬಲಗೈಯಲ್ಲಿ ಡ್ಯಾಗರನ್ನು ಮುಂದಕ್ಕೆ ಚಾಚಿ ಹಿಡಿದುನಿಂತಿರುವ ವೀರರು ಒಂದೇ ಸಾಲಿನಲ್ಲಿದ್ದಾರೆ. ಇವರು ನೃತ್ಯ ಮಾಡುತ್ತಾ ನಡೆದಿರಬೇಕು (!) ಏಕೆಂದರೆ ಅವರ ಕೈಗಳು ನೃತ್ಯ ಭಂಗಿಯಲ್ಲಿವೆ.

ಮೂರು ಫಲಕವುಳ್ಳ ವೀರಗಲ್ಲು

ಈ ಶಿಲ್ಪದಲ್ಲಿ ಮೂರು ವಿವಿಧ ಫಲಕಗಳಿವೆ. ಕೆಳಗಿನ ಫಲಕದಲ್ಲಿ ವೀರನು ತನ್ನ ವೈರಿ ಕುದುರೆ ಸವಾರಿ ಮಾಡುವವನು. ಎದುರಿಗೆ ಚಾಟಿಯನ್ನು (?) ಮೇಲೆತ್ತಿ ಹಿಡಿದು ನಿಂತಿದ್ದಾನೆ. ಎಡಗೈಯನ್ನು ಒಳ ಬಗ್ಗಿಸಿ ಹಿಡಿದಿದ್ದಾನೆ. ಕುದುರೆ ಸವಾರನು ತನ್ನ ಎಡಗೈಯಲ್ಲಿ ಈಟಿಯನ್ನು ಹಿಡಿದಿದ್ದಾನೆ. ನೆಲದ ಮೇಲೆ ಬಿದ್ದ ವೀರರ ಮೇಲೆ ಕುದುರೆ ರಭಸದಲ್ಲಿ ಓಡುತ್ತಿರುವಂತೆ ಚಿತ್ರಿಸಲಾಗಿದೆ. ಎರಡನೇ ಫಲಕದಲ್ಲಿ ವೀರನು ಅಪ್ಸರೆಯರಿಬ್ಬರ ಕೈಗಳನ್ನು ಹಿಡಿದು ಆಕಾಶಕ್ಕೆ ಹಾರುವ ಭಂಗಿಯಲ್ಲಿರುವನು. ಮೂರನೇ ಫಲಕದಲ್ಲಿ ಶಿವಲಿಂಗದ ಎಡಕ್ಕೆ ಇಬ್ಬರು ಮತ್ತು ಬಲಕ್ಕೆ ಇಬ್ಬರು ಕೈಮುಗಿದು ನಿಂತಿದ್ದಾರೆ. ಬಲಗಡೆಯವನ ಮುಂದೆ ಯತಿ ನಿಂತು ಶಿವಲಿಂಗವನ್ನು ಆರಾಧಿಸುತ್ತಿರುವನು. ಅದರ ಮೇಲ್ಭಾಗ ತ್ರಿಕೋನಾಕಾರ ದಲ್ಲಿದ್ದು ಅದರಲ್ಲಿ ಸೂರ್ಯ, ಚಂದ್ರರ ಚಿತ್ರಗಳಿವೆ.

ಬಾಕು, ಕಪಾಲ ಹಿಡಿದು ಖಡ್ಗಾಸನದಲ್ಲಿ ಕುಳಿತಿರುವ ವೀರರು

ಖಡ್ಗಾಸನದಲ್ಲಿ ಬಲಗಾಲನ್ನು ಮಡಚಿ ಮಂಡೆಯನ್ನು ನೆಲಕ್ಕೆ ಹಚ್ಚಿ ಎಡಗಾಲನ್ನು ಮುಂದಿಟ್ಟು ಬಲಗೈಯಲ್ಲಿ ಬಾಕು (?) ವನ್ನು ಮತ್ತು ಎಡಗೈಯಲ್ಲಿ ಕಪಾಲ (?) ವನ್ನು ನೃತ್ಯದ ರೀತಿಯಲ್ಲಿ ಮೇಲಕ್ಕೆತ್ತಿ ಹಿಡಿದಿರುವುದನ್ನು ಈ ವೀರಗಲ್ಲಿನಲ್ಲಿ ತೋರಿಸಲಾಗಿದೆ. ತಲೆಯ ಮೇಲೆ ತುರುಬನ್ನು ಸಮಾಂತರ ಎರಡು ಪಟ್ಟಿಕೆಗಳಲ್ಲಿ ಚಿತ್ರಿಸಿರುವುದು ಗಮನೀಯ. ಈತನ ಕಿವಿಯ ಓಲೆಗಳು ಈ ಸ್ಥಳದ ಈ ಕಾಲದ ಕೆಲವು ವೀರಗಲ್ಲಿನಲ್ಲಿ ತೋರಿಸಿದಂತಿವೆ. ಈ ವೀರಗಲ್ಲು ಆಯಾತಾಕಾರದಲ್ಲಿದೆ. ಈ ಮಾದರಿಯ ಇನ್ನೊಂದು ಶಿಲ್ಪದಲ್ಲಿ ವೀರನು ಬಾಕು ಬಲಗೈಯಲ್ಲಿ ಎತ್ತಿಹಿಡಿದು ನಿಂತಿದ್ದರೆ ಎಡಗೈಯಲ್ಲಿ ಕಪಾಲ ಹಿಡಿದು ಮೇಲಕ್ಕೆ ಎತ್ತಿ ಹಿಡಿದಿದ್ದಾನೆ. ಕೊರಳಲ್ಲಿ ಸರ ಧರಸಿರುವನು.

ಕತ್ತಿ - ಗುರಾಣಿ ಹಿಡಿದುನಿಂತ ವೀರ

ಈ ಶಿಲ್ಪದಲ್ಲಿ ವೀರನು ಕತ್ತಿ ಗುರಾಣಿ ಹಿಡಿದು ನಿಂತಿದ್ದಾನೆ.

ಹಾವನ್ನು ಹಿಡಿದುನಿಂತ ವೀರಗಲ್ಲು

ಈ ಶಿಲ್ಪದಲ್ಲಿ ವೀರನು ತನ್ನ ಬಲಗೈಯನ್ನು ಮಡಚಿ ಸೊಂಟಕ್ಕೆ ಕಟ್ಟಿದ ಬಾಕುವನ್ನು ಹಿಡಿದಿದ್ದಾನೆ. ಮುಂದಕ್ಕೆ ಚಾಚಿದ ಎಡಗೈಯಲ್ಲಿ ಒಂದು ಹಾವನ್ನು ಹಿಡಿದು ನಿಂತಿದ್ದಾನೆ. ನೆಲದ ಮೇಲೆ ಬಿದ್ದ ವೀರರ ಮೇಲೆ ಆತ ನಿಂತಿದ್ದಾನೆ. ತುರುಬನ್ನು ತಲೆಯ ಎಡಕ್ಕೆ ಕಟ್ಟಿರುವನು.

ಆನೆ - ಕುದುರೆ ಕಾಳಗ

ಕುದುರೆ ಸವಾರಿ ಮಾಡುವ ದಂಪತಿಗಳ ವಿರುದ್ಧವಾಗಿ ಹೋರಾಡಲು ಆನೆಯೊಂದು ನಿಂತಿದೆ. ಈ ಎರಡು ಪ್ರಾಣಿಗಳ ಮಧ್ಯ ಒಬ್ಬಳು ಕೈ ಮುಗಿದು ನಿಂತಿದ್ದರೆ ಒಬ್ಬನು ಆನೆಯ ಜೊತೆ ಹೋರಾಡುತ್ತಿದ್ದಾನೆ. ತನ್ನ ಎಡಕಾಲನ್ನು ಎತ್ತಿ ಅದರಿಂದ ಆನೆಗೆ ಒದೆಯುತ್ತಿರುವನು. ಬಲಗೈಯಲ್ಲಿ ಹಿಡಿದ ಗುರಾಣಿಯಿಂದ ಆನೆಗೆ ತಿವಿದಿದ್ದಾನೆ. ಎಡಗೈಯಲ್ಲಿ ಆನೆಯ ಕೋರೆಹಲ್ಲನ್ನು ಬಿಗಿಯಾಗಿ ಹಿಡಿದು ಎಳೆಯುತ್ತಿರುವನು. ಆನೆ ತನ್ನ ಸೊಂಡಿಲನ್ನು ಮೇಲಕ್ಕೆ ಎತ್ತಿದೆ. ಈ ಪ್ರಾಣಿಗಳಿಗೆ ವಸ್ತ್ರಾಭರಣಗಳನ್ನು ಧರಿಸಲಾಗಿದೆ. ಕುದುರೆಯ ತಲೆಯ ಮೇಲ್ಭಾಗದಲ್ಲಿ ಶಿವಲಿಂಗವಿದೆ. ಬದಿಗಳಲ್ಲಿ ಸೂರ್ಯ, ಚಂದ್ರರ ಚಿತ್ರಗಳಿವೆ.

ಎರಡು ಫಲಕವುಳ್ಳ ವೀರಗಲ್ಲುಗಳು

ಈ ಶಿಲ್ಪದಲ್ಲಿ ವಿಸ್ತಾರವಾದ ಎರಡು ಫಲಕಗಳಿವೆ. ಕೆಳಗಿನ ಫಲಕದಲ್ಲಿ ವೀರ ಮತ್ತು ವೈರಿಯ ನಡುವೆ ಬಾಕ - ಕತ್ತಿಯಿಂದ ಹೋರಾಡುವ ದೃಶ್ಯವಿದೆ. ಇಬ್ಬರೂ ತಮ್ಮ ಎರಡೂ

ಕೈಗಳಲ್ಲಿ ಬಾಕು - ಕತ್ತಿಗಳನ್ನು ಹಿಡಿದು ಹೋರಾಡುತ್ತಿರುವರು. ಕಿರಿದಾದ ಒಬ್ಬ ವೀರನ ಚಿತ್ರವು ಅವರ ಬಲಭಾಗದ ತುದಿಯಲ್ಲಿ ಚಿತ್ರಿಸಲಾಗಿದೆ. ಆ ವೀರನು ಕತ್ತಿ, ಗುರಾಣಿ ಹಿಡಿದು ನಿಂತಿದ್ದಾನೆ. ಎರಡನೆಯ ಫಲಕದಲ್ಲಿ ಸೇವಕನ ಸಂಗಡ ದಂಪತಿಗಳು ನಿಂತಿದ್ದಾರೆ. ಸೇವಕ ಕೈಮುಗಿದು ನಿಂತ ವೀರನಿಗೆ ಛತ್ರಿಯನ್ನು ಹಿಡಿದಿದ್ದಾನೆ. ಸತಿಯು ಬಲಗೈಯನ್ನು ಮೇಲೆತ್ತಿ ಎಡಕೈಯನ್ನು ಕೆಳಗಡೆ ಇಳಿಬಿಟ್ಟು ನಿಂತಿದ್ದಾಳೆ. ಅದರ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರಿದ್ದಾರೆ.

ಕತ್ತರಿಸಿದ ತಲೆಯುಳ್ಳ ವೀರಗಲ್ಲು

ಈ ಶಿಲ್ಪದಲ್ಲಿ ನಿಂತ ವೀರನ ತಲೆಯನ್ನು ಕತ್ತರಿಸಲಾಗಿದೆ. ಆತನ ತಲೆಯ ಕೂದಲನ್ನು ಇಳಿಬಿಟ್ಟ ಎಡಗೈಗೆ ಕಟ್ಟಿ ತೂಗಿಬಿಡಲಾಗಿದೆ. ಬದಿಗೆ ಕತ್ತಿಯ ಚಿತ್ರವಿದೆ. ಆತನ ಬಲಗೈಯನ್ನು ಕೆಳಗಡೆ ಇಳಿಬಿಡಲಾಗಿದೆ. ಈ ಮಾದರಿಯಲ್ಲಿ ಅಲ್ಲಿ ಮತ್ತೊಂದು ಶಿಲ್ಪವಿದೆ.

ಮಹಾಸತಿ ಗೈಸ್ಥಂಭವುಳ್ಳ ದಂಪತಿ ಶಿಲ್ಪಗಳು

ತುಂಬಾ ವಿಶೇಷ ಗಮನವನ್ನು ಸೆಳೆಯುವ ಈ ಬೃಹತ್ ಒಂದು ಶಿಲ್ಪದಲ್ಲಿ ಮೂರು ಭಾಗಗಳಿವೆ. ಕೆಳಗಿನ ಭಾಗದಲ್ಲಿ ಕೇವಲ ಸಿಂಹಾಸನವುಳ್ಳ ನಿಂತ ಕುದುರೆ ಮತ್ತು ಅದಕ್ಕೆ ಮುಖಮಾಡಿನಿಂತ ಸೇವಕ (?) ರ ಚಿತ್ರಗಳಿವೆ. ಎರಡನೇ ಫಲಕವು ತುಂಬಾ ವಿಸ್ತಾರವಾಗಿದೆ. ಅದರಲ್ಲಿ ದಂಪತಿಗಳ ಸುಂದರ ಚಿತ್ರಗಳಿವೆ. ಸತಿಯು ಬಲಗೈಯಲ್ಲಿ ಕಮಂಡಲವನ್ನು ಹಿಡಿದು ಅದರಿಂದ ನೀರನ್ನು ಆಕೆಯ ಎದುರಿಗೆ ಪೀಠದ ಮೇಲೆ ಎಡಗೈಯನ್ನು ದಿಂಬಿಗೆ ಹಾನಿಸಿಕೊಂಡು ಕುಳಿತ ಪತಿಗೆ ಹಾಕುತ್ತಾ ನಿಂತಿದ್ದಾಳೆ. ಆಕೆಯು ತನ್ನ ಎಡಗೈಯನ್ನು ಅವನ ಕಡೆಗೆ ಬಗ್ಗಿಸಿ ತಲೆಗೆ ಹಾನಿಸಿ ದಿಂಬಿನ ಮೇಲಿಟ್ಟಿರುವನು. ಅವನ ಎಡಬದಿಗೆ ಅಂಚಿನಲ್ಲಿ ಉದ್ದವಾದ ಪಟ್ಟಿಕೆಯುಳ್ಳ ಕಂಬದ ಬಲತುದಿಗೆ ಬಲಗೈ ಎತ್ತಿರುವುದನ್ನು ಜೋಡಿಸಲಾಗಿದೆ. ಕಂಬದ ತುದಿಯ ಮೇಲೆ ಕಳಸವಿದೆ. ಅದರ ಮೇಲಿನ ಭಾಗದಲ್ಲಿ ಚಂದ್ರ ಮತ್ತು ಸೂರ್ಯರ ಚಿತ್ರಗಳಿವೆ.

ಮಾನವ ರೂಪದ ಮಹಾಸತಿ ಕಲ್ಲುಗಳು

ಆಳೆತ್ತರದ ಮಾವನ ರೂಪದ ಮಹಾಸತಿಯು ತನ್ನ ಬಲಗೈಯನ್ನು ಮೇಲೆತ್ತಿಕೊಂಡು ನಿಂತ ಶಿಲ್ಪವಿದೆ. ಅದರಲ್ಲಿ ತನ್ನ ಎಡಗೈಯಲ್ಲಿ ನಿಂಬೆಹಣ್ಣು ಹಿಡಿದು ಕೆಳಗಡೆ ಇಳಿಬಿಟ್ಟು ನಿಂತಿದ್ದಾಳೆ. ತಲೆಯ ಮೇಲೆ ಛತ್ರಿಯನ್ನು ತೋರಿಸಿರುವುದರಿಂದ ಈಕೆಯು ಒಬ್ಬ ಅಧಿಕಾರಿ ವರ್ಗದವಳೆಂದು ತರ್ಕಿಸಬಹುದು. ಧರಿಸಿದ ಸೀರೆಗೆ ಸೊಂಟದ ಕೆಲವು ಅಗಲ ಮಡಿಕೆಗಳನ್ನು ತೋರಿಸಲಾಗಿದೆ. ಸೀರೆ, ಬಳೆ, ದುಂಡಾದ ಓಲೆಗಳು, ಸರ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿದ್ದಾಳೆ. ತುರುಬನ್ನು ತಲೆ ಎಡಕ್ಕೆ ಕಟ್ಟಿದ್ದಾಳೆ.

ನಾಲ್ವರು ಸತಿಯರು

ಈ ಶಿಲ್ಪದಲ್ಲಿ ಮೂವರು ಸತಿಯರ ಮಧ್ಯ ವೀರನು ಒಂದೇ ಸಾಲಿನಲ್ಲಿ ನಿಂತಿರುವುದನ್ನು ಚಿತ್ರಿಸಲಾಗಿದೆ. ವೀರನ ಎಡಬಲಗಡೆಯಿರುವ ಸ್ತ್ರೀಯರಿಬ್ಬರು ಸೇರಿ ಕೈಮುಗಿದು ನಿಂತಿದ್ದರೆ ಅವರ ಎಡಬದಿಗೆ ನಿಂತ ಇನ್ನೊಬ್ಬಳು ಮಾತ್ರ ತನ್ನ ಬಲಗೈಯನ್ನು ಮೇಲಕ್ಕೆತ್ತಿ ಹಿಡಿದು ನಿಂತಿರುವುದು ವಿಶೇಷವಾಗಿದೆ. ಆಕೆಯು ತನ್ನ ಬಲಗೈಯನ್ನು ಕೆಳಗಡೆ ಇಳಿಬಿಟ್ಟಿದ್ದಾಳೆ. ಮೇಲಿನ ಭಾಗದಲ್ಲಿ ಕುಳಿತ ನಂದಿ ಮತ್ತು ಆರಾಧಿಸುವ ಯತಿ ಮಧ್ಯ ಶಿವಲಿಂಗವಿದೆ.

ಇಬ್ಬರು ಸತಿಯರು

ಈ ಶಿಲ್ಪದಲ್ಲಿ ಇಬ್ಬರು ಬಲಗೈ ಎತ್ತಿಹಿಡಿದು ನಿಂತ ಸತಿಯರ ಮಧ್ಯ ಕೈಮುಗಿದು ನಿಂತ ವೀರನಿದ್ದಾನೆ. ಸತಿಯರು ತಮ್ಮ ತುರುಬುಗಳನ್ನು ತಲೆಯ ಬಲಕ್ಕೆ ಕಟ್ಟಿದ್ದರೆ ವೀರ ತನ್ನ ತಲೆಯ ಎಡಕ್ಕೆ ಕಟ್ಟಿದ್ದಾನೆ. ಈ ಶಿಲ್ಪದ ಮೇಲಿನ ಭಾಗದಲ್ಲಿ ಸೂರ್ಯ ಚಂದ್ರರ ರೇಖಾಚಿತ್ರಗಳಿವೆ.

ಮೂವರು ಸತಿಯರ ಶಿಲ್ಪ

ಅಲ್ಲಿಯ ಎರಡು ಫಲಕವುಳ್ಳ ಈ ಮಾದರಿಯ ಶಿಲ್ಪದಲ್ಲಿ ಮೂವರು ಸತಿಯರ ಸಂಗಡ ವೀರ ನಿಂತಿದ್ದಾನೆ. ಒಂದೇ ಸಾಲಿನಲ್ಲಿ ತೋರಿಸಿದ ಇವರಲ್ಲಿ ಇಬ್ಬರು ಸತಿಯರು ವೀರನ ಬಲಬದಿಗೆ ಮತ್ತು ಒಬ್ಬಳು ತನ್ನ ಎಡಬದಿಗೆ ತಮ್ಮ ಬಲಗೈಗಳನ್ನು ಮೇಲಕ್ಕೆತ್ತಿ ನಿಂತಿದ್ದಾರೆ. ವೀರ ಮಾತ್ರ ಕೈಮುಗಿದು ನಿಂತಿದ್ದಾನೆ. ಅದರ ಎರಡನೇ ಫಲಕದಲ್ಲಿ ಶಿವಲಿಂಗ ಆರಾಧಿಸುವ ಯತಿಯ ಮುಂದೆ ದಂಪತಿಗಳ ಕಿರು ಚಿತ್ರಗಳಿವೆ. ಶಿವಲಿಂಗ ಎಡಕ್ಕೆ ಕುಳಿತ ನಂದಿಯಿದೆ.

ದಂಪತಿಯರುಳ್ಳ ಮಹಾಸತಿ ಶಿಲ್ಪಗಳು

ಈ ಶಿಲ್ಪದಲ್ಲಿ ದಂಪತಿಗಳುಳ್ಳ ಸತಿ ಶಿಲ್ಪವಾಗಿದೆ. ಈ ದಂಪತಿಗಳ ಚಿತ್ರಗಳು ಗಾತ್ರದಲ್ಲಿ ದೊಡ್ಡದಿವೆ. ಆದರೆ ಪತಿಯು ಎತ್ತರದ ಪೀಠದ ಮೇಲೆ ಸವ್ಯಲಲಿತಾಸನದಲ್ಲಿ ಕುಳಿತಿದ್ದು ಆತನ ಬಲಗೈಯನ್ನು ಬಲಗಾಲಿನ ತೊಡೆಯ ಮೇಲೆ ಇಳಿಬಿಟ್ಟಿದ್ದಾನೆ. ಎಡಗೈಯನ್ನು ಬಗ್ಗಿಸಿಕೊಂಡು ದಿಂಬಿನ ಮೇಲಿಟ್ಟಿರುನು. ಹೆಚ್ಚು ಆಭರಣಗಳನ್ನು ಧರಿಸಿದ್ದಾನೆ. ತುರುಬನ್ನು ತಲೆಯ ಎಡಕ್ಕೆ ಕಟ್ಟಿದ್ದಾನೆ. ಆತನ ಎಡಗಡೆ ಸತಿಯು ತನ್ನ ಬಲಗೈಯನ್ನು ಎತ್ತಿಹಿಡಿದು ನಿಂತಿರುವಳು. ಎಡಗೈಯನ್ನು ಕೆಳಗಡೆ ಇಳಿಬಿಟ್ಟಿದ್ದಾಳೆ. ತಲೆಯ ಬಲಕ್ಕೆ ತುರುಬನ್ನು, ಕಿವಿಗಳಲ್ಲಿ ದೊಡ್ಡದಾದ ದುಂಡಾದ ಓಲೆಗಳನ್ನು ಕೊರಳಲ್ಲಿ, ಭುಜದ ಮೇಲೆ ಸರಗಳನ್ನು, ಕೈಯಲ್ಲಿ ಮತ್ತು ತೋಳಲ್ಲಿ ಬಳೆಗಳನ್ನು ಧರಿಸಿದ್ದಾಳೆ. ಉಟ್ಟಸೀರೆಯು ಸೊಂಟದಿಂದ ಪಾದದ ಮೇಲಿನವರೆಗಿದೆ. ಅದಕ್ಕೆ ಅನೇಕ ಮಡಿಕೆಗಳಿವೆ. ಅದರ ಮೇಲೆ ಹಾರವನ್ನು

ಧರಿಸಿದ್ದಾಳೆ. ಎಡಗಾಲನ್ನು ಸ್ವಲ್ಪ ಎಡಕ್ಕೆ ಇಟ್ಟಿದ್ದಾಳೆ. ಅವಳು ಸಹ ಪೀಠದ ಮೇಲೆ ನಿಂತಿದ್ದಾಳೆ. ಈ ಶಿಲ್ಪದ ಮೇಲಿನ ಪಟ್ಟಿಕೆಯ ಎಡಭಾಗದಲ್ಲಿ ತ್ರಿಶೂಲದ ಚಿತ್ರವಿರುವುದು ವಿಶೇಷವಾಗಿದೆ. ಅದರ ಮೇಲ್ಭಾಗದಲ್ಲಿ ಒಂದೇ ಸಾಲಿನಲ್ಲಿ ಕುಳಿತ ನಂದಿ ಶಿವಲಿಂಗದ ಕಡೆ ಮುಖಮಾಡಿದೆ. ತನ್ನ ಎಡಗಾಲನ್ನು ಮುಂದೆ ಚಾಚಿದೆ. ಈ ಶಿವಲಿಂಗವನ್ನು ನಂದಿಯ ಮುಂದೆ ನಿಂತ ಯತಿ ಪೂಜಿಸುತ್ತಿರುವನು. ಈ ಮಾದರಿಯ ಮತ್ತೊಂದು ಶಿಲ್ಪ ಅಲ್ಲಿದೆ.

ಇನ್ನೊಂದು ಈ ಮಾದರಿಯ ಶಿಲ್ಪದಲ್ಲಿ ಏಕಗಾತ್ರದಲ್ಲಿ ತೋರಿಸಿದ ದಂಪತಿಗಳು ನಿಂತಿದ್ದಾರೆ. ಬಲಗಡೆ ಸತಿ ಎಡಗಡೆ ಪತಿಯರಿದ್ದಾರೆ. ಸತಿಯು ತನ್ನ ಬಲಗೈಯನ್ನು ಎತ್ತಿ ಹಿಡಿದಿದ್ದು ಎಡಗೈಯಲ್ಲಿ ನಿಂಬೆಹಣ್ಣನ್ನು ಹಿಡಿದು ಅದನ್ನು ಇಳಿಬಿಟ್ಟಿದ್ದಾಳೆ. ಅನೇಕ ವಸ್ತ್ರಾಭರಣಗಳನ್ನು ಧರಿಸಿರುವಳು. ಪತಿಯು ಕೈಮುಗಿದು ನಿಂತಿರುವನು. ಸತಿಯ ತುರುಬು ಆಕೆಯ ತಲೆಯ ಬಲಕ್ಕಿದ್ದರೆ ಪತಿಯ ತುರುಬು ಆತನ ತಲೆಯ ಎಡಕ್ಕೆ ತೋರಿಸಿರುವುದು ವಿಶೇಷವಾಗಿದೆ. ಪತಿಯು ಸಹ ಅನೇಕ ವಸ್ತ್ರಾಭರಣಗಳನ್ನು ಧರಿಸಿರುವನು. ಅವರ ತಲೆಯ ಮೇಲ್ಭಾಗದ ಪಟ್ಟಿಕೆಯ ಮೇಲೆ ಒಂದೇ ಸಾಲಿನಲ್ಲಿ ಕೈಮುಗಿದು ವೀರ ನಿಂತಿದ್ದಾನೆ. ಬದಿಗೆ ಶಿವಲಿಂಗ ಮತ್ತು ಕುಳಿತ ನಂದಿಯಿದೆ. ಅದರ ಮೇಲ್ಭಾಗದಲ್ಲಿ ಚಂದ್ರ, ಸೂರ್ಯರ ಚಿತ್ರಗಳಿವೆ.

ಅಲ್ಲಿಯ ಏಳು ಶಿಲ್ಪಗಳು ಒಂದೇ ಮಾದರಿಯದ್ದಾಗಿದೆ. ದಂಪತಿಗಳಲ್ಲಿ ಸತಿ ಬಲಕ್ಕೆ ಅಥವಾ ಎಡಕ್ಕೆ ಮತ್ತು ಪತಿ ಬಲಕ್ಕೆ ಅಥವಾ ಎಡಕ್ಕೆ ನಿಂತಿರುವುದನ್ನು ಕಾಣಬಹುದು. ಅವುಗಳಲ್ಲಿ ಒಂದು ಎರಡು ಫಲಕಗಳಿವೆ. ಅದರಲ್ಲಿ ಸತಿಯ ಜೊತೆ ಪತಿಯು ನಿಂತಿರುವ ಚಿತ್ರಗಳಿವೆ. ಈ ಮಾದರಿಯ ಒಂದು ಶಿಲ್ಪದಲ್ಲಿ ಎರಡನೇ ಫಲಕದಲ್ಲಿ ಶಿವಲಿಂಗದ ಮುಂದೆ ದಂಪತಿಗಳಿಬ್ಬರು ಕುಳಿತಿರುವುದನ್ನೂ ತೋರಿಸಲಾಗಿದೆ. ಪತಿಯು ಕೈಮುಗಿದು ನಿಂತಿದ್ದರೆ ಸತಿಯು ತನ್ನ ಬಲಗೈಯನ್ನು ಮೇಲೆತ್ತಿ ಎಡಗೈಯಲ್ಲಿ ಕಮಂಡಲ ಹಿಡಿದು ನಿಂತಿದ್ದಾಳೆ. ಅದರ ಮೇಲಿನ ಫಲಕದಲ್ಲಿ ನಂದಿ ಮತ್ತು ಆರಾಧಿಸುವ ಯತಿಯ ಮಧ್ಯ ಶಿವಲಿಂಗವಿದೆ. ಅದರ ಮೇಲೆ ಸೂರ್ಯ, ಚಂದ್ರರ ಚಿತ್ರಗಳಿವೆ. ಇದೇ ಮಾದರಿಯಲ್ಲಿ ಇನ್ನೊಂದು ಶಿಲ್ಪವಿದೆ. ಆದರೆ ಅದಕ್ಕೆ ಈ ಮೇಲೆ ಹೇಳಿದ ಮೇಲಿನ ಫಲಕವಿರುವುದಿಲ್ಲ. ಸತಿ ಕೈ ಎತ್ತಿ ನಿಂತ ಭಂಗಿ ನೋಡಿದರೆ ಆಕೆಯು ನೃತ್ಯ ಮಾಡುತ್ತಿರುವಂತೆ ಕಾಣುತ್ತದೆ. ಮೇಲ್ಗಡೆ ಸೂರ್ಯ, ಚಂದ್ರರ ಚಿತ್ರಗಳಿವೆ. ಈ ಮಾದರಿಯಲ್ಲಿ ಮತ್ತೊಂದು ಶಿಲ್ಪವಿದೆ. ಅಲ್ಲಿ ಸೂರ್ಯ - ಚಂದ್ರರ ಚಿತ್ರಗಳಿಲ್ಲ. ಅಲ್ಲಿ ಈ ಮಾದರಿಯ ಮತ್ತೊಂದು ಶಿಲ್ಪವಿದ್ದು ಪತಿಯು ಸತಿಯ ಎಡಗಡೆ ನಿಂತಿರುವುದನ್ನು ತೋರಿಸಲಾಗಿದೆ. ಅದಕ್ಕೂ ಮೇಲ್ಗಡೆ ಮತ್ತೊಂದು ಫಲಕದಲ್ಲಿ ಶಿವಲಿಂಗ ಮತ್ತು ಕುಳಿತ ನಂದಿ ಚಿತ್ರಗಳಿವೆ. ಈ ಮಾದರಿಯ ಶಿಲ್ಪದಲ್ಲಿ ಪತಿಯು ಬಲಗೈಯಲ್ಲಿಡಿದ ಕತ್ತಿಯನ್ನು ಮೇಲೆತ್ತಿ ಹಿಡಿದು ಎಡಗೈಯಲ್ಲಿ ವೃತ್ತಾಕಾರದ ಗುರಾಣಿ ಹಿಡಿದಿದ್ದಾನೆ. ಆತನ ಬಲಗಡೆ ಬಲಗೈ ಎತ್ತಿಹಿಡಿದು ಸತಿ ನಿಂತಿದ್ದಾಳೆ. ಅದಕ್ಕೂ ಮೇಲೆ ಎರಡನೇ ಫಲಕವಿದ್ದು ಅಲ್ಲಿ ಸೂರ್ಯ, ಶಿವಲಿಂಗ, ಕುಳಿತ ನಂದಿ ಮತ್ತು ಚಂದ್ರರ

ಚಿತ್ರಗಳಿವೆ. ಈ ಮಾದರಿಯ ಒಂದು ಶಿಲ್ಪದಲ್ಲಿ ಎಡಗೈ ಎತ್ತಿಹಿಡಿದ ಸತಿಯ ಬಲಕ್ಕೆ ನಿಂತ ಪತಿಯ ಎಡಕೈಯಲ್ಲಿ ಬಿಲ್ಲಿದೆ. ಬಲಗೈಯಲ್ಲಿಡಿದ ಬಾಣ (?) ಭಾಗ ಒಡೆದಿದೆ. ಇನ್ನೊಂದರಲ್ಲಿ ನಿಂತ ದಂಪತಿಗಳಲ್ಲಿ ಸತಿಯ ಎಡಗಡೆಯ ಪತಿಯ ಬಲಗೈಯಲ್ಲಿ ಕುಡಗೋಲನ್ನು ಎತ್ತಿಹಿಡಿದು ನಿಂತಿದ್ದಾನೆ. ಎಡಭುಜದಲ್ಲಿ ಬಿಲ್ಲನ್ನು ತೂಗುಬಿಟ್ಟಿರುವನು.

ಅಲ್ಲಿಯ ಒಂದು ಶಿಲ್ಪದಲ್ಲಿ ಸತಿಯ ಎಡಕ್ಕೆ ನಿಂತ ವೀರನು ತನ್ನ ಬಲಗೈಯಲ್ಲಿ ಕತ್ತಿ ಹಿಡಿದು ಮೇಲಕ್ಕೆತ್ತಿದ ಎಡಗೈ ಹತ್ತಿರ ಹಿಡಿದಿದ್ದಾನೆ. ಎಡಗೈಯಲ್ಲಿ ಬಾಕನ್ನು ಹಿಡಿದಿದ್ದಾನೆ. ಸತಿ ಬಲಗೈಯನ್ನು ಎತ್ತಿ ಹಿಡಿದಿದ್ದಾಳೆ. ಮೇಲ್ಭಾಗದ ಪಟ್ಟಿಯಲ್ಲಿ ಕುಳಿತ ದಂಪತಿಗಳು, ಜೋಡುಪಾದ ಇವರ ಬದಿಗಳಲ್ಲಿ ಸೂರ್ಯ - ಚಂದ್ರರ ಚಿತ್ರಗಳಿವೆ. ಇಲ್ಲಿ ತೋರಿಸಿದ ವೀರನ ಬಲಗಾಲಿಗೆ ಗೆಜ್ಜೆಯ ಕಡಗೋಲನ್ನೂ ಧರಿಸಲಾಗಿದೆ. ಹೀಗಾಗಿ ಈ ಶಿಲ್ಪ ಮಹತ್ವದೆನಿಸಿದೆ.

ಅಲ್ಲಿಯ ಒಂದು ಶಿಲ್ಪದಲ್ಲಿ ತೋರಿಸಿದ ದಂಪತಿಗಳಲ್ಲಿ ವೀರ ತನ್ನ ಬಲಗೈಯನ್ನು ಸೊಂಟಕ್ಕೆ ಕಟ್ಟಿದ ಬಾಕು ಹಿಡಿದಿದ್ದರೆ ಎಡಗೈಯನ್ನು ಕೆಳಗಡೆ ಇಳಿಬಿಟ್ಟಿರುವನು. ಬದಿಗೆ ನಿಂತ ಸತಿ ತನ್ನ ಬಲಗೈಯನ್ನು ಮೇಲಕ್ಕೆತ್ತಿ ಹಿಡಿದಿದ್ದಾಳೆ. ಇಳಿಬಿಟ್ಟ ಎಡಗೈಯಲ್ಲಿ ಕಮಂಡಲವಿದೆ. ಮೇಲ್ಭಾಗದಲ್ಲಿ ಸೂರ್ಯ - ಚಂದ್ರರ ಚಿತ್ರಗಳಿವೆ.

ನಾಲ್ಕು ಸತಿಯರ ಜೊತೆ ನಿಂತ ವೀರನ ಶಿಲ್ಪ

ಆಯತಾಕಾರ ಶಿಲ್ಪದಲ್ಲಿ ಒಂದೇ ಸಾಲಿನಲ್ಲಿ ನಾಲ್ಕು ಸತಿಯರ ಸಂಗಡ ವೀರನು ನಿಂತಿರುವುದನ್ನು ತೋರಿಸಲಾಗಿದೆ. ವೀರನು ಅವರ ಮಧ್ಯದಲ್ಲಿ ನಿಂತಿದ್ದಾನೆ. ಬಲಗೈಯಲ್ಲಿ ನೆಲಕ್ಕೆ ಚುಚ್ಚಿದ ಕತ್ತಿಯನ್ನು ಹಿಡಿದುಕೊಂಡು ನಿಂತಿದ್ದಾನೆ. ಎಡಗೈಯಲ್ಲಿ ಡ್ಯಾಗರ ತುದಿಯನ್ನು ಮೇಲಕ್ಕೆತ್ತಿ ಹಿಡಿದಿರುವನು. ಆತನ ತಲಾ ಒಂದು ಬದಿಯಲ್ಲಿಬ್ಬರು ಸತಿಯರು ಕೈಗಳನ್ನು ಕೆಳಗೆ ಇಳಿಬಿಟ್ಟು ಹಿಡಿದು ನಿಂತಿರುವರು. ಉಳಿದ ಇನ್ನೊಂದು ಕೈಯಲ್ಲಿ ಆ ಸತಿಯರ ನಿಂಬೆಹಣ್ಣನ್ನು ಹಿಡಿದಿರುವುದು ವಿಶೇಷವೆನ್ನಬಹುದು.

ಕುದುರೆ ಸವಾರ - ಸತಿ ಶಿಲ್ಪ

ಕುದುರೆ ಸವಾರನ ಎದುರಿಗೆ ಸತಿ ನಿಂತ ಈ ಶಿಲ್ಪದಲ್ಲಿ ಸತಿಯು ತನ್ನ ಬಲಗೈಯನ್ನು ಎತ್ತಿ ಹಿಡಿದಿದ್ದು ಎಡಗೈಯಲ್ಲಿ ಕುಂಡಲವಿಡಿದು ಕೆಳಗಡೆ ಇಳಿಬಿಟ್ಟಿದ್ದಾಳೆ. ಈ ಶಿಲ್ಪದ ಮೇಲ್ಗಡೆ ಸೂರ್ಯ ಮತ್ತು ಚಂದ್ರರ ಮಧ್ಯ ಶಿವಲಿಂಗವಿದೆ.

ವೀರ - ಮಾಸ್ತಿ ಶಿಲ್ಪ

ಈ ಮಾದರಿಯಲ್ಲಿ ಅಲ್ಲಿಯ ಒಂದು ಶಿಲ್ಪದಲ್ಲಿ ಮೂರು ಫಲಕಗಳಿವೆ. ಕೆಳಗಿನ

ಫಲಕದಲ್ಲಿ ಎದುರು ಬದುರಾಗಿ ನಿಂತ ಕುದುರೆ ಸವಾರರು ಕೈಗಳಲ್ಲಿ ಕತ್ತಿಯನ್ನು ಹಿಡಿದಿರುವರು. ಅವರ ಕುದುರೆಗಳ ಮುಂದಿನ ಕಾಲುಗಳು ಮೇಲೆತ್ತಿ ಒಂದಕ್ಕೊಂದು ಡಿಕ್ಕಿಯನ್ನು ಒಡೆಯುವುದನ್ನು ಗಮನಿಸಿದರೆ ಅವುಗಳು ಹೋರಾಡುವುದನ್ನು ತೋರಿಸಿಕೊಡುತ್ತದೆ. ಎರಡನೇ ಫಲಕದಲ್ಲಿ ನಾಲ್ವರು ಸತಿಯರ ಮಧ್ಯ ಕೈಮುಗಿದು ವೀರ ನಿಂತಿದ್ದಾನೆ. ಸತಿಯರು ಮಾತ್ರ ತಮ್ಮ ಬಲಗೈಯನ್ನು ಮೇಲೆತ್ತಿದ್ದಾರೆ. ಎಡಗೈಯನ್ನು ಕೆಳಗಡೆ ಇಳಿಬಿಟ್ಟಿದ್ದಾರೆ. ಮೂರನೇ ಫಲಕದಲ್ಲಿ ಯತಿ ಶಿವಲಿಂಗವನ್ನು ಆರಾಧಿಸುತ್ತಿದ್ದು ಬದಿಗೆ ಕುಳಿತ ನಂದಿ ತನ್ನ ಎಡಗಾಲನ್ನು ಸ್ವಲ್ಪ ಮುಂದೆ ಇಟ್ಟಿದೆ. ಅದರ ಮೇಲ್ಭಾಗದಲ್ಲಿ ಸೂರ್ಯ - ಚಂದ್ರರ ಚಿತ್ರಗಳಿವೆ.

ಈ ನಮೂನೆಯ ಇನ್ನೊಂದು ಬೃಹದಾಕಾರದ ಶಿಲ್ಪದಲ್ಲಿ ವೀರನ ಕುದುರೆಯ ಕಾಲುಗಳು ಮಾತ್ರ ಮೇಲಕ್ಕೆತ್ತಿವೆ ಮತ್ತು ಅವು ವೈರಿಯ ಕುದುರೆಯನ್ನು ಒದ್ದಿವೆ. ಹಾಗೂ ವೀರನು ಉದ್ದವಾಗಿ ಚಾಚಿ ಹಿಡಿದ ಈಟಿಗೆ ವೈರಿಯು (ಎಡಗಡೆ) ತನ್ನ ಕತ್ತಿಯಿಂದ ಅದಕ್ಕೆ ತಾಗಿಸಿದ್ದಾನೆ. ಇದಲ್ಲದೆ ಎರಡನೆಯ ಫಲಕದಲ್ಲಿ ಎರಡು ದೃಶ್ಯಗಳಿರುವುದು ಗಮನೀಯ. ಬಲಗಡೆಯ ದೃಶ್ಯದಲ್ಲಿ ಉದ್ದವಾದ ಕಂಬಕ್ಕೆ ಮೇಲೆ ಎತ್ತಿದ ಬಲಗೈಯನ್ನು ಜೋಡಿಸಲಾಗಿದೆ. ಅದರ ಬದಿಗೆ ಪೀಠದ ಮೇಲೆ ದಂಪತಿಗಳು ಕೈಮುಗಿದು ಕುಳಿತಿರುವರು. ಬದಿಗಿನ ದೃಶ್ಯದಲ್ಲಿ ಸ್ತಂಭ ತೋರಣದ ಮಧ್ಯ ಶಿವಲಿಂಗವಿದೆ. ಈ ತೋರಣರ ಮಧ್ಯ ಮೇಲ್ಗಡೆ ಸಿಂಹಮುಖವಿದೆ. ದಂಪತಿಗಳ ಮೇಲ್ಭಾಗದಲ್ಲಿ ಸೂರ್ಯ - ಚಂದ್ರರ ಚಿತ್ರಗಳಿವೆ.

ಉಪಸಂಹಾರ

ಒಟ್ಟಾರೆ ಈ ಶಿಲ್ಪಗಳಲ್ಲಿ ಕೆಲವು ವಿಶಿಷ್ಟ ಕಲಾ ಅಂಶಗಳನ್ನು ಇಲ್ಲಿ ಕಾಣಬಹುದು. ಕತ್ತಿ ಹಿಡಿದು ನಿಂತ ವೀರರ ಶಿಲ್ಪಗಳಲ್ಲಿ ಕತ್ತಿಯನ್ನು ಮುಖ್ಯವಾಗಿ ಮೂರು ರೀತಿ ಹಿಡಿದು ನಿಂತಿರುವುದನ್ನು ಕಾಣಬಹುದು. ಒಂದು ಕತ್ತಿಯನ್ನು ಕೆಳಗಡೆ ಇಟ್ಟಿರುವುದನ್ನು ಎರಡು ಪಾರ್ಶ್ವದಲ್ಲಿ ಚಾಚಿರುವುದು ಮತ್ತು ಮೂರು ಮೇಲಕ್ಕೆ ಬಲಗೈಯಲ್ಲಿ ಹಿಡಿದುನಿಂತಿರುವುದನ್ನು ಕಾಣಬಹುದು. ಒಂದು ಶಿಷ್ಟ ಶಿಲೆಯಲ್ಲಿ ಕಾಣುವ ಈ ಮಾದರಿಯ ಶಿಲ್ಪದಲ್ಲಿ ಒಬ್ಬ ವೀರನು ತನ್ನ ಕೆಳಗಡೆ ಇಳಿಬಿಟ್ಟು ಎಡಗೈಯಲ್ಲಿ ಏಕೆ ಪದ್ಮ (?) ವನ್ನು ಹಿಡಿದಿರುವನು ಅದು ಏಕೆ ಎಂಬುದನ್ನು ತಿಳಿಯಬೇಕಾಗಿವೆ. ಶಿಷ್ಟ ಶಿಲೆಯ ಇನ್ನೊಂದು ಶಿಲ್ಪದಲ್ಲಿ ತಲೆಗೆ ಬಾಣನೆಟ್ಟಿದೆಯೋ ಅಥವಾ ಅದು ಬೇರೆ ಇನ್ನಾವ ವಸ್ತು ಆಗಿರಬೇಕು ಎಂಬುದನ್ನು ಗುರುತಿಸಬೇಕಾಗಿದೆ. ಕೆಲವು ವೀರರು ತಮ್ಮ ಕೈಗಳಲ್ಲಿ ಎಡಪಾರ್ಶ್ವಕ್ಕೆ ಚಾಚಿ ಹಿಡಿದ ಬಿಲ್ಲು, ದೇಹ, ತಲೆ, ಕಾಲುಗಳಿಗೆ ನಾಟಿದ ಬಾಣಗಳ ವಿಶೇಷ ಗಮನವನ್ನು ಸೆಳೆಯುತ್ತವೆ. ಇನ್ನೊಂದು ಮಾದರಿಯಲ್ಲಿ ವೀರನು ಕತ್ತಿಯನ್ನು ಒಂದು ಕೈಯಲ್ಲಿ ಬದಿಗೆ ಚಾಚಿ ಹಿಡಿದರೆ ಎಡಕೈಯನ್ನು ಮೇಲಕ್ಕೆ ಎತ್ತಿಹಿಡಿದು ಆ ಕೈಯಿಂದ ಮಧ್ಯದ ತೋರುಬೆರಳನ್ನು ಮೇಲಕ್ಕೆತ್ತಿ ತೋರಿಸಿರುವುದು ವಿಶೇಷವೆನಿಸುತ್ತದೆ. ಏಕೆ ಕೈ ಬೆರಳನ್ನು

ತೋರಿಸಿರುವರು ಅದನ್ನು ತಿಳಿಯಬೇಕಾಗಿದೆ. ಇನ್ನೊಂದರಲ್ಲಿ ವೀರನು ಬಾಕು ಮತ್ತು ಕಪಾಲ (?) ಗಳನ್ನು ಕೈಯಲ್ಲಿ ಹಿಡಿದಿದ್ದಾನೆ. ಒಂದರ ಶಿಲ್ಪದಲ್ಲಿ ಬಾಕನ್ನು ಅಗ್ನಿಯ ರೀತಿಯಲ್ಲಿ ಚಿತ್ರಿಸಿದಂತೆ ಕಾಣುವುದು. ಕುದುರೆ ಸವಾರರ ಶಿಲ್ಪಗಳಲ್ಲಿ ಒಬ್ಬ ಸವಾರನ ಶಿಲ್ಪ, ಕುದುರೆ ಬದಿ ಸೇವಕ, ಛತ್ರಿ ಹಿಡಿದ ಸೇವಕರನ್ನು ಕಾಣಬಹುದು. ಕುದುರೆಗಳು ಓಡುವುದನ್ನೂ ಅವುಗಳ ಮುಂದಿನ ಕಾಲು ಮೇಲಕ್ಕೆತ್ತಿರುವುದರಿಂದ ತಿಳಿದುಬರುತ್ತದೆ. ಅಧಿಕಾರಿವರ್ಗದವರಿದ್ದರೆ ಅಂತಹ ವ್ಯಕ್ತಿಗಳಿಗೆ ಹೆಚ್ಚು ಆಭರಣಗಳನ್ನು ಧರಿಸಿರುವುದು ಮತ್ತು ಅಂಥವರಿಗೆ ಕೊಡೆಯನ್ನು ಹಿಡಿದಿರುವುದನ್ನು ಕಾಣಬಹುದು. ಈ ಲಕ್ಷಣ ಇನ್ನಿತರ ಶಾಸನವುಳ್ಳ ಶಿಲ್ಪದಲ್ಲೂ ಗೋಚರಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಕೆಲವು ಶಿಲ್ಪಗಳನ್ನು ವೀರರು ಸಾಲಾಗಿ ಆಯುಧ ಹಿಡಿದು ಓಡುವ/ನೃತ್ಯಮಾಡುವ ವಿವರಗಳು ಗೋಚರಿಸುತ್ತವೆ. ಇನ್ನೂ ಕೆಲವು ಶಿಲ್ಪಗಳಲ್ಲಿ ವೀರರು ಕೈಗಳಲ್ಲಿ ಕತ್ತಿ ಮತ್ತು ಗುರಾಣಿ ಹಿಡಿದಿರುವುದನ್ನು, ಹಾವನ್ನು ಹಿಡಿದು ನಿಂತಿರುವುದನ್ನು, ಆನೆ ಮತ್ತು ಕುದುರೆ ಸವಾರ ನಡುವೆ ನಡೆಯುವ ಹೋರಾಟದ ದೃಶ್ಯ ತುಂಬಾ ಕುತೂಹಲ ಮೂಡಿಸುತ್ತವೆ. ಇಲ್ಲಿ ಆನೆಯ ವಿರುದ್ಧ ವೀರನು ಯಾವ ರೀತಿಯಲ್ಲಿ ನಿಂತು ಅದನ್ನು ಸೆದೆಬಡಿಯಲು ಹವಣಿಸುತ್ತಿರುವನೆಂಬುದು ಕಾಣಿಸುತ್ತದೆ. ವೀರರ ಶಿಲ್ಪಗಳಲ್ಲಿ ಎರಡು ಅಥವಾ ಮೂರು ಫಲಕಗಳಿರುವುದು ಕಾಣುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವಿಜಯನಗರ, ವಿಜಯನಗರ ಪೂರ್ವ ಕಾಲದ ಈ ಮಾದರಿಯ ಪರಂಪರೆಯಲ್ಲಿ ಪ್ರತಿಯೊಂದು ಫಲಕಕ್ಕೂ ಅಂಚಿನಲ್ಲಿ (ಅಗಲ ಮತ್ತು ಉದ್ದಗಲ್ಲಿ) ಪಟ್ಟಿಕೆಗಳಿರುತ್ತವೆ. ಆದರೆ ಇಲ್ಲಿಯ ಈ ನಮೂನೆಯಲ್ಲಿ ಅಂಚಿನ ಪಟ್ಟಿಕೆಗಳು ವಿರಳವೆನಿಸಿವೆ. ಕೇವಲ ಪಟ್ಟಿಕೆಗಳನ್ನು ವಿಂಗಡಿಸಲು ಅವುಗಳ ಮಧ್ಯ ಕಿರು ಅಗಲ ಪಟ್ಟಿಕೆಗಳಿವೆ. ಹಾಗೂ ಬಾದಾಮಿ ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಾಲದ ವೀರಗಲ್ಲುಗಳ ಕಲಾ ಪರಂಪರೆಯಲ್ಲಿ ಎರಡನೇ ಫಲಕದಲ್ಲಿವ ವೀರರು ಅಪ್ಸರೆಯರ ಸಂಗಡ ಹಾರುವ ಮಾದರಿ ಸಾಮಾನ್ಯ. ಅಲ್ಲಿಂದ ಸೇವುಣ/ಹೊಯ್ಸಳರ ಕಾಲದಲ್ಲಿ ವಿರಳ. ಈ ಲಕ್ಷಣವೂ ಇಲ್ಲಿಯ ಕೆಲವು ವೀರಗಲ್ಲುಗಳಲ್ಲಿವೆ. ಹಾಗೂ ವೀರ ಮಹಾಸತಿಯರ/ಸತಿಯರ ಶಿಲ್ಪಗಳಲ್ಲಿ ಈ ಭಾಗವನ್ನು ಚಿತ್ರಿಸುವಾಗ ಸತಿಯರ ಜೊತೆ ಮಡಿದ ವೀರ ಆಕಾಶಕ್ಕೆ ಹಾರುವುದನ್ನು ತೋರಿಸಲಾಗಿದೆ.

ಕತ್ತರಿಸಿದ ತಲೆ ಭಾಗವುಳ್ಳ ಸ್ಮಾರಕ ಶಿಲ್ಪಗಳು ಅಲ್ಲಿ ಎರಡಿವೆ. ಅಂಥಹವೇ ಸು.ಕ್ರಿ.ಶ. ೧೩ನೇ ಶತಮಾನದ ಶಿಲ್ಪವೊಂದು ಹೂವಿನಹಡಗಲಿ ತಾಲೂಕಿನ ಹೊಳಗುಂದಿಯಲ್ಲಿದೆ. ಅದು ಈಗ ಹಂಪಿ ಕನ್ನಡ ವಿಶ್ವವಿದ್ಯಾಲಯದ ಮ್ಯೂಸಿಯಂನಲ್ಲಿ ಪ್ರದರ್ಶಿಸಲಾಗಿದೆ. ಹಾಗೂ ಈ ಮಾದರಿಯ ವಿಜಯನಗರ ಕಾಲದ ಶಿಲ್ಪಗಳು ಉತ್ತರ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಕಾಣಿಸಿಕೊಂಡಿರುವುದು ಗಮನೀಯ. ಅದು ಯಾವುದೋ ಒಂದು ಕಾರಣಕ್ಕಾಗಿ ಆ ವ್ಯಕ್ತಿಗಳು ತಮ್ಮ ತಲೆಗಳನ್ನು ಕತ್ತರಿಸಿಕೊಂಡಿರುವ ಸಾಧ್ಯತೆಯಿದೆ. ಹಾಗೂ ಯುದ್ಧದಲ್ಲೂ ಕೆಲವರು ವೈರಿಗಳ/ಸತಿಯರ ರುಂಡಗಳನ್ನು ಕತ್ತರಿಸಿರುವ ಉದಾಹರಣೆಗಳಿವೆ.

ಮಹಾಸತಿ ಶಿಲ್ಪಗಳು ವೈವಿಧ್ಯಮಯ ಕಲಾ ಅಂಶಗಳನ್ನು ವ್ಯಕ್ತಪಡಿಸುತ್ತವೆ. ದಂಪತಿಗಳ ಸತಿ ಶಿಲ್ಪದಲ್ಲಿ ಏಕಎತ್ತರದಲ್ಲಿ ದಂಪತಿಗಳ ಏಳುಶಿಲ್ಪಗಳು ಅಲ್ಲಿವೆ. ಅದರಲ್ಲಿ ಸತಿಯ ತನ್ನ ಬಲ ಕೈಯನ್ನು ಮೇಲಕ್ಕೆತ್ತಿ ತನ್ನ ಪತಿಯ ಎಡಕ್ಕೋ ಅಥವಾ ಬಲಕ್ಕೋ ಪೀಠದ ಮೇಲೆಯೊ ನಿಂತುಕೊಂಡಿರುವಳು. ಪತಿಯು ಸಾಮಾನ್ಯವಾಗಿ ಕೈಮುಗಿದು ನಿಂತಿರುವನು. ಕೆಲವು ಈ ಮಾದರಿ ಶಿಲ್ಪಗಳಲ್ಲಿ ಎರಡು ಫಲಕಗಳು ಇರುತ್ತವೆ. ಮೇಲಿನ ಫಲಕದಲ್ಲಿ ಶಿವಲಿಂಗ, ಕುಳಿತ ನಂದಿ, ಶಿವಲಿಂಗ ಆರಾಧಿಸುವ ಯತಿ, ದಂಪತಿಗಳು ಕೆಲವೊಮ್ಮೆ ಕೆಲವೇ ಚಿತ್ರಗಳು ಇವೆ. ಈ ಮಾದರಿಯಲ್ಲಿ ವಿಜಯನಗರೋತ್ತರದ ಒಂದೆರೆಡು ಶಿಲ್ಪಗಳು ಅಲ್ಲಿವೆ. ಅವು ಶಿಷ್ಟ್ ಶಿಲೆಯದ್ದಾಗಿವೆ. ಕೇವಲ ಮಹಾಸತಿಯರ ಶಿಲ್ಪಗಳಲ್ಲಿ ಸತಿಯ ಬಲಗೈಯಲ್ಲಿ ನಿಂಬೆಯಹಣ್ಣು ಅಥವಾ ಕಮಂಡಲವಿರುತ್ತದೆ. ಆದರೆ ಒಂದು ಶಿಲ್ಪದಲ್ಲಿ ಸತಿಯ ಬಲಗೈಯಲ್ಲಿ ಹಿಡಿದ ಕಮಂಡಲಿನಿಂದ ಕುಳಿತ ಪತಿಯ ಒಂದು ಕೈಯಲ್ಲಿ ನೀರನ್ನು ಹಾಕಿದಂತೆ ಮತ್ತೊಂದು ಅವಳ ಕೈ (ಎಡ) ವಿಸ್ಮಯ ರೀತಿಯಲ್ಲಿದೆ. ಇನ್ನೊಂದು ಮಾದರಿಯ ಸತಿಶಿಲ್ಪದಲ್ಲಿ ಪಾದಗಳು, ಲಿಂಗ ಇತ್ಯಾದಿ ಚಿತ್ರಗಳನ್ನು ತೋರಿಸಲಾಗಿದೆ. ಕೆಲವು ಸತಿಯರ ತಲೆಯ ಮೇಲೆ ಛತ್ರಿಯನ್ನು ಹಿಡಿಯಲಾಗಿದೆ. ಕುದುರೆ ಸವಾರ - ಸತಿಯರುಳ್ಳ ಶಿಲ್ಪಗಳೂ ಕುತೂಹಲ ಅಂಶಗಳನ್ನು ತೋರಿಸಿವೆ. ಒಟ್ಟಾರೆ ಈ ಶಿಲ್ಪಗಳನ್ನು ಹೆಚ್ಚಾಗಿ ಗ್ರಾನೈಟ್ ಶಿಲೆಯಿಂದ ತಯಾರಿಸಲಾಗಿದೆ. ಕೆಲವುಗಳನ್ನು ಶಿಷ್ಟ್ ಶಿಲೆಯಿಂದ ತಯಾರಿಸಿದರೆ ಗ್ರಾನೈಟ್ ಶಿಲೆಯ ಶಿಲ್ಪಗಳ ಕಾಲ ಸು.ಕ್ರಿ.ಶ. ೧೪ ರಿಂದ ೧೬ನೇ ಶತಮಾನ. ಶಿಷ್ಟ್‌ನ ಕೆಲವೇ ಶಿಲ್ಪಗಳು ಕಾಲ ಸು.ಕ್ರಿ.ಶ. ೧೭ನೇ ಶತಮಾನವೆಂದು ತರ್ಕಿಸಬಹುದು.

ಈ ಶಿಲ್ಪಗಳಲ್ಲಿ ಕಾಣುವ ವಸ್ತ್ರಾಭರಣ ಮತ್ತು ಆಯುಧ ಉಪಕರಣ, ಪ್ರಾಣಿಗಳ ಚಿತ್ರಗಳು ಆ ಕಾಲದ ಕೆಲವು ಸಾಮಾಜಿಕ ಅಂಶಗಳನ್ನು ಒದಗಿಸುತ್ತವೆ. ಅವುಗಳನ್ನೆಲ್ಲ ಪ್ರತ್ಯೇಕವಾಗಿ ಚಿತ್ರದ ಮೂಲಕ ಪ್ರತ್ಯೇಕಿಸಿ ಅಧ್ಯಯನಕ್ಕೆ ಒಳಪಡಿಸುವುದು ಸೂಕ್ತವೆನಿಸಿದೆ.


ಕೃತಜ್ಞತೆಗಳು

೧. ಈ ಶಿಲ್ಪಗಳ ಅಧ್ಯಯನ ಮತ್ತು ಲೇಖನವನ್ನು ಬರೆಯಲು ನವದೆಹಲಿಯ ಐಸಿಎಹೆಚ್‌ಆರ್‌ನವರು ಆರ್ಥಿಕ ನೆರವನ್ನು ನೀಡಿದ ಕಾರಣ

೨. ಕಮಲಾಪುರದ ವಸ್ತುಸಂಗ್ರಹಾಲಯದ ಈ ಶಿಲ್ಪಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಿದ ಅದರ ಅಧಿಕಾರಿಗಳಾದ ಡಾ. ಎಸ್.ವಿ.ಪಿ.ಹೆಚ್.ಹಳಕಟ್ಟಿ, ಶ್ರೀ ಸಿ.ಬಿ.ಪಾಟೀಲ, ಶ್ರೀ ಕೇಶವ ಇವರೆಲ್ಲರಿಗೂ ನನ್ನ ಅನಂತ ಕೃತಜ್ಞತೆಗಳು.

❖ ❖


ಎ.ಎಸ್.ಐ.ಕಮಲಾಪುರ ವಸ್ತುಸಂಗ್ರಹಾಲಯದ ಛಾಯಾಚಿತ್ರಗಳು




ವೀರ - ಮಾಸ್ತಿ ಶಿಲ್ಪ



ಸತಿಜೊತೆ ನಿಂತ ವೀರ (ದಂಪತಿಗಳು)



ಮಾಸ್ತಿ ಶಿಲ್ಪದಲ್ಲಿ ಮೇಲ್ಗಡೆ ಜೋಡುಪಾದಗಳು, ದಂಪತಿ ಇತ್ಯಾದಿ



ರುಂಡ ಕತ್ತರಿಸಿಕೊಂಡು ಅದನ್ನು
ಕೈಯಲ್ಲಿ ಹಿಡಿದು ನಿಂತಿರುವ ವೀರ (?)




ಮೂವರು ಸತಿ, ಪತ್ನಿಯರ ಜೊತೆ
ವೀರ ನಿಂತಿರುವುದು



ವೀರ - ಸತಿ ಕುದುರೆ ಸವಾರರ ಹೋರಾಟ



ಪತಿಯ ಜೊತೆ ವೀರ (ದಂಪತಿಗಳು)




ನಾಲ್ವರು ಪತ್ನಿಯರ ಸಂಗಡ ಪತಿ ನಿಂತಿರುವುದು



ಸತಿಯ ಜೊತೆ ವೀರ (ದಂಪತಿಗಳು)



ಕುಳಿತ ಪತಿ ಸಂಗಡ ನಿಂತ ಸತಿ



ಕತ್ತಿ ಹಿಡಿದು ನಿಂತ ಇಬ್ಬರು ವೀರರು



ಇಬ್ಬರು ಸತಿಯರ ಸಂಗಡ ವೀರ




ನಿಂತ ಸತಿಗೆ ಕೊಡೆ ಹಿಡಿದಿರುವುದು



ಸತಿ ಕಮಂಡಲದಿಂದ ಕುಳಿತ ಪತಿಗೆ ನೀರು ಹಾಕುತ್ತ ವಿಸ್ಮಯ ರೀತಿಯಲ್ಲಿ ನಿಂತಿರುವುದು




ಬಿಲ್ಲು ಹೊಡೆಯುತ್ತ ನಿಂತ ವೀರ



ವೀರ - ಮಾಸ್ತಿ ಶಿಲ್ಪ



ಸತಿ - ವೀರ ನಿಂತಿರುವುದು (ದಂಪತಿಗಳು)



ವೀರಗಲ್ಲು

ಸಂಕ್ಷೇಪಗಳು

ಅರಿಇಂಎ	:	ಅನುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಪಿ
ಇಂಎಂ	:	ಇಂಡಿಯನ್ ಎಟಿಕ್ವೇರಿ
ಎಕ	:	ಎಪಿಗ್ರಾಫಿಯ ಕರ್ನಾಟಕ
ಜಓರಿ	:	ಜರ್ನಲ್ ಆಫ್ ಓರಿಯಂಟಲ್ ರೀಸರ್ಚ್
ಸೌಇಂಇ	:	ಸೌತ್ ಇಂಡಿಯನ್ ಇನ್ಸ್ಕ್ರಿಪ್ಶನ್ಸ್
ARIE	:	Annual Report on Indian Epigraphy
ARSIE	:	Annual Report on South Indian Epigraphy
EC	:	Epigraphia Carnatica
Ep. Car.	:	Epigraphia Carnatica
EI	:	Epigraphia Indica
MAR	:	Annual Report of the Mysore Archaeological Department
QJMS	:	Quarterly Journal of the Mythic Society
SII	:	South Indian Inscriptions
VI	:	Vijayanagara Inscriptions

ಪ್ರಬಂಧ ಮಂಡಿಸಿದವರು

ಕೆಳದಿ ಗುಂಡಾ ಜೋಯಿಸ್
ಕೆಳದಿ ವಸ್ತುಸಂಗ್ರಹಾಲಯ ಮತ್ತು
ಸಂಶೋಧನಾ ಕೇಂದ್ರ, ಕೆಳದಿ - ೫೭೭ ೪೦೧
ಸಾಗರ ತಾ, ಶಿವಮೊಗ್ಗ ಜಿಲ್ಲೆ.

ಡಾ. ಎಫ್.ಟಿ.ಹಳ್ಳಿಕೇರಿ
ಪ್ರವಾಚಕರು, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಎಸ್.ವೈ.ಸೋಮಶೇಖರ್
ಯೋಜನಾ ಸಹಾಯಕರು
ವಸ್ತುಸಂಗ್ರಹಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಎಂ.ಕೊಟ್ರೇಶ್
ಯೋಜನಾ ಸಹಾಯಕರು
ವಸ್ತುಸಂಗ್ರಹಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಆರ್.ಗೋಪಾಲ್
ಟಿ.ಎಸ್.ಗಂಗಾಧರ
ಪ್ರಾಚ್ಯವಸ್ತು ಮತ್ತು ಸಂಗ್ರಹಾಯಲಗಳ
ನಿರ್ದೇಶನಾಲಯ, ಹೊಸಪೇಟೆ

ಡಾ. ಕೆ.ಎಂ.ಸುರೇಶ್
ನಿರ್ದೇಶಕರು
ವಸ್ತುಸಂಗ್ರಹಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಜಾಜಿ ದೇವೇಂದ್ರಪ್ಪ
ಯೋಜನಾ ಸಹಾಯಕ, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ವೆಂಕಟೇಶ್ ಜೋಯಿಸ್
ಕೆಳದಿ ವಸ್ತುಸಂಗ್ರಹಾಲಯ ಮತ್ತು
ಸಂಶೋಧನಾ ಕೇಂದ್ರ, ಕೆಳದಿ - ೫೭೭ ೪೦೧
ಸಾಗರ ತಾ, ಶಿವಮೊಗ್ಗ ಜಿಲ್ಲೆ.

ಡಾ. ಜಗದೀಶ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರಾಸಕೈಅನಿನಿ, ಯಾದವಗಿರಿ
ಮೈಸೂರು - ೫೭೦ ೦೨೦

ಜಯದೇವಪ್ಪ ಜೈನ ಕೇರಿ
೮೭ ಶಾಂತಲಾ, ಕುವೆಂಪು ರಸ್ತೆ,
ಶಿವಮೊಗ್ಗ - ೫೭೭ ೨೦೧

ವಿನೋದ ಪಾಟೀಲ
ಕುಮಾರ ನಗರ, ಅಕ್ಕಿ ಆಲೂರು
ಹಾನಗಲ್ಲು ತಾ, ಹಾವೇರಿ ಜಿಲ್ಲೆ

ಡಾ. ಸ.ಚಿ.ರಮೇಶ್
ಮುಖ್ಯಸ್ಥರು, ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಆರ್.ಎಂ.ಷಡಕ್ಷರಯ್ಯ
ಪ್ರಾಧ್ಯಾಪಕ ಮತ್ತು ನಿರ್ದೇಶಕ
ಕನ್ನಡ ಸಂಶೋಧನ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಿ.ಎನ್.ಕೋಳಿಗುಡ್ಡ
ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನ ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬಿ.ಜಯಮ್ಮ
ಸಂಶೋಧನಾ ವಿದ್ಯಾರ್ಥಿನಿ
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನ ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬಿ. ಅಬ್ದುಲ್ ಮನ್ನಾನ್
ಶಿರಸ್ತೇದಾರರು, ತಾಲೂಕು ಕಚೇರಿ
ಸಂಡೂರು - ೫೮೩ ೧೧೯

ಡಾ. ಎನ್.ಹವಳಯ್ಯ
ಹಿರಿಯ ಅಧ್ಯಾಪಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಮಾನಸ ಗಂಗೋತ್ರಿ, ಮೈಸೂರು-೬

ಕು. ವನಜಾಕ್ಷಿ ಎನ್. ಭರಮಗೌಡರ
ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನ ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಕೆ.ಮಹೇಶ್
೨೦ನೇ ವಾರ್ಡ್, ಎಸ್.ಬಿ.ನಗರ
ಸಿರುಗುಪ್ಪ - ೫೮೩೧೨೧

ಡಾ. ಕೆ.ರವೀಂದ್ರನಾಥ
ಹಿರಿಯಶ್ರೇಣಿ ಅಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಸಂತೆಬೆನ್ನೂರು ಸುಮತೀಂದ್ರ ನಾಡಿಗ
ಪ್ರಜಾವಾಣಿ ವರದಿಗಾರರು
ಸಂತೆಬೆನ್ನೂರು - ೫೭೭ ೫೫೨

ಚಂದ್ರಶೇಖರ ವಿ. ಡಾವಣಗೇರಿ
ಕಾರ್ಯನಿರ್ವಹಣಾಧಿಕಾರಿ
ಶ್ರೀ ವಿರೂಪಾಕ್ಷ ದೇವಾಲಯ, ಹಂಪಿ

ಎಂ.ಜಿ.ನಾಗರಾಜ್
'ಅನರ್ಘ್ಯ ಶ್ರೀ ಜಚನಿ ಕೃಪ'
೨೨೧, ೬೮ನೇ ಕ್ರಾಸ್, ೫ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು - ೫೬೦ ೦೧೦

ಡಾ. ಎಸ್.ಸಿ.ಪಾಟೀಲ್
ಮುಖ್ಯಸ್ಥರು
ವಾಸ್ತುಶಿಲ್ಪ ಮತ್ತು ಪ್ರತಿಮಾಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯದ ಕಚೇರಿ
ಬನಶಂಕರಿ - ಬಾದಾಮಿ

ಡಾ. ಆರ್.ಎಚ್.ಕುಲಕರ್ಣಿ
ಕಲಾ ಇತಿಹಾಸಕಾರ,
೧೦೧೪-೧, ೩ನೇ ಅಡ್ಡರಸ್ತೆ
ಆಶ್ರಮ ರಸ್ತೆ, ಹಿನಕಲ್
ಮೈಸೂರು - ೫೭೦ ೦೧೭

ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಅಧ್ಯಾಪಕರು, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಎಸ್.ಜಿ.ಸಾಮಕ್
'ಸುಮಿತ್ರ', ಪ್ರಿಯದರ್ಶಿನಿ ಬಡಾವಣೆ
ವಿನೋಬಾ ನಗರ
ಶಿವಮೊಗ್ಗ - ೫೭೭ ೨೦೪

ಡಾ. ಡಿ.ವಿ.ಪರಮಶಿವಮೂರ್ತಿ
ಹಿರಿಯಶ್ರೇಣಿ ಅಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಬಾಲಸುಬ್ರಮಣ್ಯ
ಪ್ರವಾಚಕರು, ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ.. ಬಿ.ರಾಜಶೇಖರಪ್ಪ
ಕನ್ನಡ ಪ್ರಾಧ್ಯಾಪಕರು,
೨ನೇ ಅಡ್ಡರಸ್ತೆ (ಪಶ್ಚಿಮ)
ಜೆ.ಸಿ.ಆರ್. ಬಡಾವಣೆ, ಚಿತ್ರದುರ್ಗ

ಡಾ. ಸಿ.ಎಸ್.ವಾಸುದೇವನ್
ಹಿರಿಯಶ್ರೇಣಿ ಅಧ್ಯಾಪಕರು
ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಟಿ.ಎಂ.ಮಂಜುನಾಥಯ್ಯ
ಪುರಾತತ್ವ ಸಹಾಯಕರು
ಉಪನಿರ್ದೇಶಕರ ಕಛೇರಿ
ಪ್ರಾಚ್ಯವಸ್ತು ಮತ್ತು ಸಂಗ್ರಹಾಯಲಗಳ
ನಿರ್ದೇಶನಾಲಯ, ಕಮಲಾಪುರ

ಡಾ. ಕೆ.ಜಿ.ಭಟ್‌ಸೂರಿ
ಮುಖ್ಯಸ್ಥರು, ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪ್ರೊ. ಲಕ್ಷ್ಮಣ್ ತೆಲಗಾವಿ
ಪ್ರಾಧ್ಯಾಪಕರು, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬



ವಿಜಯನಗರದ ನವರಾತ್ರಿ ಮಹೋತ್ಸವವು ದೇಶ ವಿದೇಶಿಯರನ್ನು ಆಕರ್ಷಿಸುತ್ತಿತ್ತು. ಈ ಉನ್ನತ ಪರಂಪರೆಯನ್ನು ನಾಡಿನ ಜನತೆಯ ನೆನನಪಿಗೆ ತರಲು ಕರ್ನಾಟಕ ಸರ್ಕಾರವು ಪ್ರತಿ ವರ್ಷ ನವೆಂಬರ್ ಮಾಹೆಯಲ್ಲಿ ಹಂಪಿ ಉತ್ಸವವನ್ನು ಆಚರಿಸಿಕೊಂಡು ಬರುತ್ತಿದೆ. ಈ ಉತ್ಸವದ ಸಂದರ್ಭದಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯವು 'ವಿಜಯನಗರ ಇತಿಹಾಸ ಮತ್ತು ಸಂಸ್ಕೃತಿ' ಕುರಿತ ವಿಚಾರ ಸಂಕಿರಣವನ್ನು ಏರ್ಪಡಿಸುತ್ತಿದ್ದು, ಮಂಡಿಸಲಾದ ಪ್ರಬಂಧಗಳನ್ನು 'ವಿಜಯನಗರ ಅಧ್ಯಯನ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟವು ಇತಿಹಾಸಕಾರರಿಗೆ ಮತ್ತು ಸಂಶೋಧಕರಿಗೆ ಮಾತ್ರವಲ್ಲದೆ ಜನಸಾಮಾನ್ಯರಿಗೂ ಸಹ ಉಪಯುಕ್ತವಾಗುತ್ತಿದೆ.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ : ಹೊಸಪೇಟೆ

